THE BOOK WAS DRENCHED

UNIVERSAL
LIBRARY
OU_200833
UNIVERSAL
LIBRARY

OSMANIA UNIVERSITY LIBRARY

Call No K294.111/V46R Accession No K.524

Author ಪಂಕಟಾಚಾರ್ಯ, H.P

Title ವಿಜಯದ ಪಂಕಾಗ 1954

This book should be returned on or before the date last stamped below



ಋಗ್ವೇದಸಂಹಿತಾ

ಭಾಗ-೨೨

ಐದನೆಯ ಅಷ್ಟಕದ ೩-೫ ಅಧ್ಯಾಯಗಳು

ಏಳನೆಯ ಮಂಡಲದ ಸೂಕ್ತಗಳು—೨೦-೮೦

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೨೨

RIG-VEDA

ಸಾಯಣಭಾಷ್ಯಸಮೇತಾ


ಋಗ್ವೇದ ಸಂಹಿತಾ

(ಕರ್ನಾಟಕ ಭಾಷಾರ್ಥಾನುವಾದವಿವರಣೆಗಳೊಡನೆ)

ಭಾಗ—೨೨

ಐದನೆಯ ಅಷ್ಟಕದ ೩—೫ ಅಧ್ಯಾಯಗಳು.

ಏಳನೆಯ ಮಂಡಲದ ಸೂಕ್ತಗಳು ೨೦—೬೦



Translated with Exhaustive Critical Notes and Explanations

by

Asthana Mahavidwan

H. P VENKATA RAO

Editor

——

Printed at

SRI SHAKTHI ELECTRIC PRESS,

MYSORE

1954

Published by the gracious permission of

His Highness

Sri Jayachamarajendra Wadiyar Bahadur,

GCB, GCSI, Maharaja of Mysore



ಯದುವಂಶಪಯಃಪಾರಾವಾರಸುಧಾಕರರೂ ಸತ್ಸಂಪ್ರದಾಯ ವೈದಿಕವಿದ್ಯಾವರ್ಧಕರೂ
ಮೈಸೂರು ದೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ
ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್
ಜಿ ಸಿ ಬಿ , ಜಿ.ಸಿ ಎಸ್.ಐ ರವರು

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತ ತಂತ್ರಾಧಿಕಾರವ

ವೇದವಿಮರ್ಶನವಿದ್ವನ್ಮಂಡಲಿ

Translator & Editor

ಆಸ್ಥಾನ ಮಹಾವಿದ್ವಾನ್ H P ವೆಂಕಟರಾವ್

ಸಹಾಯಕ ವಿದ್ವನ್ಮಂಡಲಿ

1 **ಬ್ರ।। ಶ್ರೀ।। G N ಚಕ್ರವರ್ತಿ,** M A
Professor of Sanskrit St Philomina's College, Mysore

2 **ಬ್ರ।। ಶ್ರೀ।। ಜಿ. ವಿಷ್ಣುಮೂರ್ತಿಭಟ್ಟರು,** ಸಾಹಿತ್ಯ ವ್ಯಾಕರಣವಿದ್ವಾನ್,
ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ, ಮೈಸೂರು

3 **ಆಸ್ಥಾನ ವಿದ್ವಾನ್ ಬ್ರ।। ಶ್ರೀ।। H ಗಂಗಾಧರಶಾಸ್ತ್ರಿಗಳು,** ಸಂಗೀತಜ್ಞ ವಿದ್ವಾನ್
ಮತ್ತು ಕರ್ನಾಟಕ ಘನಪಾಠಿಗಳವರು

4 **ಬ್ರ।। ಶ್ರೀ।। ಶ್ರೀನಿವಾಸಶಾಸ್ತ್ರಿಗಳು,** ಋಗ್ವೇದ ಘನಪಾಠಿಗಳು

5 **ಬ್ರ।। ಶ್ರೀ।। ಹಿಟ್ಟುವಳ್ಳಿ ಬಳಿಗಿರಿರಂಗಾಜೋಯಿಸರು,** ಶ್ರೌತವಿದ್ವಾನ್

6 **ಬ್ರ।। ಶ್ರೀ।। ಹಿಟ್ಟುವಳ್ಳಿ ದೇವರಭಟ್ಟರು,** ಪ್ರಾಮಾಣಸಾದರ್ಶನಸಂವಿತರು

7 **ಬ್ರ।। ಶ್ರೀ।। ವೆಂಕಟರಮಣಾಚಾರ್,** M A , B L , ಸಾಹಿತ್ಯವಿದ್ವಾನ್

8. **ಬ್ರ।। ಶ್ರೀ।। S ರಂಗನಾಥನ್,** ಸಾಹಿತ್ಯ ವಿದ್ವಾನ್, ಅರಮನೆ ಸರಸ್ವತೀ ಭಂಡಾರ

9 **ಬ್ರ।। ಶ್ರೀ।। ಪುತ್ತೂರು ಅನಂತಕೃಷ್ಣಾಚಾರ್,** ಸಾಹಿತ್ಯವಿದ್ವಾನ್
Govt Oriental Research Institute, Mysore

10 **ಬ್ರ।। ಶ್ರೀ।। S ಸೀತಾರಾಮಶಾಸ್ತ್ರಿಗಳು,** ರಿಪೈರ್ಡ್ ಪಂಡಿತರು,
Govt Oriental Research Institute, Mysore

ಪೀಠಿಕೆ.

ಏಳನೆಯ ಮಂಡಲದ ೨೦ನೇ ಸೂಕ್ತದಿಂದ ೨೦ನೇ ಸೂಕ್ತದವರೆಗಿರುವ ಈ ಮೂರು ಅಧ್ಯಾಯಗಳಲ್ಲಿ (೫ನೇ ಅಷ್ಟಕದ ೩ನೇ ಅಧ್ಯಾಯದಿಂದ ೫ನೇ ಅಧ್ಯಾಯದವರೆಗೆ) ಅನೇಕ ಮುಖ್ಯ ವಿಷಯಗಳು ಪ್ರತಿಪಾದಿತವಾಗಿವೆ ಅವುಗಳಲ್ಲಿ ಕೆಲವು ಅಂಶಗಳು ಈ ಭಾಗದಲ್ಲಿ ಮಾತ್ರ ವೈಶಿಷ್ಟ್ಯವನ್ನು ಹೊಂದಿವೆ ತತ್ತ್ರಯಯದ ಪೂರ್ಣವಾದ ಜ್ಞಾನವನ್ನು ಹೊಂದಿದ ವಸಿಷ್ಠಪುತ್ರರ ಸ್ತುತಿ, ತ್ರ್ಯಂಬಕಸಂಜ್ಞಕನಾದ ರುದ್ರದೇವನ ಸ್ತುತಿ ಇವೆಲ್ಲವೂ ಇಲ್ಲಿ ಪ್ರತಿಪಾದಿತವಾಗಿರುವ ಮುಖ್ಯಾಂಶಗಳು ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪರಿಶೀಲಿಸಲಾಗುತ್ತದೆ

೧) ರುದ್ರ ಮತ್ತು ತ್ರ್ಯಂಬಕರ ತಾದಾತ್ಮ್ಯ ಮತ್ತು ತ್ರ್ಯಂಬಕನ ವಿಶೇಷಸ್ವರೂಪ
೨) ಸಾರಮೇಯಸಂಜ್ಞಕವಾದ ವರುಣನ ಶ್ವಾನ
೩) ದಧಿಕ್ರಾದೇವತೆಯ ಸ್ವರೂಪ
೪) ನಿರ್ಋತಿಯ ನೈಯಕ್ತಿಕರೂಪ
೫) ವಸಿಷ್ಠಪುತ್ರರ ತತ್ತ್ವಜ್ಞಾನ ಮತ್ತು ಅವರ ಮಾಹಾತ್ಮ್ಯ
೬) ಅಹಿರ್ಬುಧ್ನ್ಯ ಮತ್ತು ಅಜಏಕಪಾದ್ದೇವತೆಗಳ ನಿಜರೂಪ ಇತ್ಯಾದಿ

೧) ತ್ರ್ಯಂಬಕಸಂಜ್ಞಕವಾದ ರುದ್ರದೇವತೆಯ ಮಂಗಳಸ್ವರೂಪ

ಈ ಭಾಗದಲ್ಲಿ ಏಳನೆಯ ಮಂಡಲದ ೫೯ನೆತ್ತೊಂಭತ್ತನೇ ಸೂಕ್ತದ ಕೊನೆಯ ಮಂತ್ರವು **ರುದ್ರ**ದೇವತಾಕವೆಂದು ಪ್ರಕೀರ್ತಿತವಾಗಿದೆ. ಆದರೆ ಆ ಮಂತ್ರವು **ತ್ರ್ಯಂಬಕನ** ಮಾಹಾತ್ಮ್ಯವನ್ನು ಪ್ರರಂಸಿಸುತ್ತದೆ **ರುದ್ರ** ಮೂರ್ತಿಯು ಭಯಂಕರವಾದ ರೂಪವನ್ನು ಹೊಂದಿರುವುದೆಂದೂ, ಸಾಧಾರಣವಾದ ಮಾನವನ ದೃಷ್ಟಿಗೆ ಅಸ್ಪಷ್ಟವಾಗಿಲ್ಲವೆಂದೂ ಪುರಾಣಾದಿಗಳಲ್ಲಿ ಪ್ರಸಿದ್ಧವಾಗಿದೆ ಬ್ರಾಹ್ಮಣಾದಿಗಳಲ್ಲಿಯೂ ಸಹ ಈ ಅರ್ಥವು ಅನೇಕಕಡೆಗಳಲ್ಲಿ ವಿವೃತವಾಗಿದೆ ಋಕ್ಸಂಹಿತೆಯಲ್ಲಿಯೂ ಈ ಸ್ವರೂಪವು ಅನೇಕಕಡೆಗಳಲ್ಲಿ ವರ್ಣಿತವಾಗಿದೆ ಉದಾಹರಣೆಗೆ

ಸ್ತುಹಿ ಶ್ರುತಂ ಗರ್ತಸದಂ ಯುವಾನಂ ಮೃಗಂ ನ ಭೀಮಮುಪಹತ್ನುಮುಗ್ರಂ ।
ಮೃಳಾ ಜರಿತ್ರೇರುದ್ರ ಸ್ತವಾನೋಽನ್ಯಂ ತೇ ಅಸ್ಮನ್ನಿ ವಪಂತು ಸೇನಾಃ ॥

(ಋ ಸಂ ೨.೩೩.೧)

ರಥದಲ್ಲಿ ಕುಳಿತಿರುವವನೂ, ತರುಣನೂ, ಪ್ರಸಿದ್ಧನೂ, ಭಯಂಕರನೂ, ವನದಲ್ಲಿರುವ ದುಷ್ಟಮೃಗವು ಕುಲ್ಲುವಂತೆ ಪ್ರಾಣಿಗಳನ್ನು ನಾಶಮಾಡುವವನನೂ, ಆದ ರುದ್ರನನ್ನು ಪ್ರಶಂಸಿಸಿರಿ ಎಂದು ರುದ್ರನ ಭಯಂಕರರೂಪವು ವರ್ಣಿತವಾಗಿದೆ. ಈ ಉಗ್ರರೂಪವಿರುವುದರಿಂದಲೇ, ಇವನ ಸ್ವರೂಪಕ್ಕೆ ಬೆದರಿದ ಮಾನವವರ್ಗವು ಇವನ ರಕ್ಷಣೆಯನ್ನು ಕೋರುತ್ತವೆ

ಮಾ ನಸ್ತೋಕೇ ತನಯೇ ಮಾ ನ ಆಯೌ ಮಾ ನೋ ಗೋಷು ಮಾ ನೋ ಅಶ್ವೇಷು ರೀರಿಷಃ।
ವೀರಾನ್ ಮಾ ನೋ ರುದ್ರ ಭಾಮಿತೋ ವಧೀರ್ಹವಿಷ್ಮಂತಃ ಸದಮಿತ್ತ್ವಾ ಹವಾಮಹೇ॥

(ಋ. ಸಂ. ೧-೧೧೪-೮)

ಎಲೈ ಉಗ್ರರೂಪನಾದ ರುದ್ರನೇ, ನಮ್ಮ ಪುತ್ರಾದಿಗಳನ್ನಾಗಲಿ, ಪೌತ್ರಾದಿಗಳನ್ನಾಗಲಿ ಆಥವಾ ನಮ್ಮ ಜೀವನನ್ನಾಗ ಹಿಂಸಿಸಬೇಡ ನಮ್ಮ ವೀರವುರುನರನ್ನು ಹಿಂಸಿಸಬೇಡ ನಿನಗೆ ಸರ್ವದಾ ಹವಿಸ್ಸುಗಳನ್ನರ್ಪಿಸುತ್ತ ನಿನಗೆ ತೃಪ್ತಿಯನ್ನು ಉಂಟುಮಾಡುತ್ತೇನೆ ನಮ್ಮ ಮೇಲೆ ಕೋಪವನ್ನು ತೋರಿಸಿ ನಮಗೆ ಹಿಂಸೆಯನ್ನಾಗಲಿ ಅಥವಾ ಭಯವನ್ನಾಗಲಿ ಉಂಟುಮಾಡಬೇಡ ಎಂದು ದೈನ್ಯದಿಂದ ಭಯಂಕರನಾದ ರುದ್ರನು ಪ್ರಾರ್ಥಿತನಾಗಿದ್ದಾನೆ-

ಈ ರೀತಿಯಲ್ಲಿ ವರ್ಣಿತನಾಗಿರುವ ಲೋಕನಾಶಕನೆಂದು ಪ್ರಸಿದ್ಧನಾಗಿರುವ **ರುದ್ರನು** ಋ-೫೯-೧೦ರಲ್ಲಿ ತ್ರೋಕಕ್ಕೆ ಪುಷ್ಟಿದಾಯಕನೆಂದೂ ಮಂಗಳಕರನೆಂದೂ ಪ್ರಶಂಸಿತನಾಗಿದ್ದಾನೆ ಮತ್ತು **ತ್ರ್ಯಂಬಕ**ನೆಂದು ಪ್ರಕೃತದಲ್ಲಿ ನಿರ್ದಿಷ್ಟನಾಗಿದ್ದಾನೆ **ತ್ರ್ಯಂಬಕ**ನೆಂದರೆ ಮೂರುಕಣ್ಣುಳ್ಳನೆಂದು ಲೋಕಪ್ರಸಿದ್ಧವಾದ ಅರ್ಥವಿರುತ್ತದೆ ಎರಡು ಭೌತಿಕವಾದ ಕಣ್ಣುಗಳು ಇನ್ನೊಂದು ಅಲೌಕಿಕವಾದ ದಿವ್ಯಚಕ್ಷುಸ್ಸು ಆದರೆ, ಸಾಯಣರು ಇಲ್ಲಿ ಈ ಪದಕ್ಕ ಆಧ್ಯಾತ್ಮಿಕ ತತ್ತ್ವವನ್ನು ವಿವರಿಸುವ ಅರ್ಥವನ್ನು ಹೇಳಿದ್ದಾರೆ.

ತ್ರಯಾಣಾಂ ಬ್ರಹ್ಮವಿಷ್ಣುರುದ್ರಾಣಾಮಂಬಕಂ ಪಿತರಂ ತ್ರ್ಯಂಬಕಂ।

ಬ್ರಹ್ಮ, ವಿಷ್ಣು ಮತ್ತು ರುದ್ರ ಈ ಮೂವರಿಗೂ ಪಿತೃವಾದುದರಿಂದ **ತ್ರ್ಯಂಬಕ**ನೆಂಬ ಹೆಸರು ಪ್ರಸಿದ್ಧವಾಗಿದೆ ಯೆಂದು ಸಾಯಣರು ತಿಳಿಸಿದ್ದಾರೆ. ಆದುದರಿಂದಲೇ, ಸೃಷ್ಟಿಸ್ಥಿತಿಲಯಕ್ಕೆಲ್ಲ ಈ ಪ್ರಧಾನತತ್ತ್ವವೇ ಮೂಲಸಂಬುಮೂ ಪ್ರಶಂಸಿತವಾಗಿದೆ

ಏಕೋ ಹಿ ರುದ್ರೋ ನ ದ್ವಿತೀಯಾಯು ತಸ್ಥುರ್ಯ ಇಮಾಲೊಕಾನೀಶತ ಈಶನೀಭಿಃ।
ಪ್ರತ್ಯಙ್ಜನಾಸ್ತಿಷ್ಠತಿ ಸಂಚುಕೋಚಾಂತಕಾಲೇ ಸಂಸೃಜ್ಯ ವಿಶ್ವಾ ಭುವನಾನಿ ಗೋಪಾಃ॥
(ಶ್ವೇ ೦ ೩-೨)

ಯಾವ ರುದ್ರನು ಈ ಲೋಕವನ್ನೆಲ್ಲ ಉತ್ಪನ್ನವಾಗಿ ರಕ್ಷಿಸುವನೋ ಅವನನ್ನು ಬಿಟ್ಟರೆ ಎರಡನೆಯ ಮಹಾತತ್ತ್ವ ವಾವುದೂ ಇಲ್ಲ. ಲೋಕಕ್ಕೆಲ್ಲ ಅವನೊಬ್ಬನೇ ಪ್ರಭುವು. ಸಕಲಭೂತಗಳ ಹೃದಯದಲ್ಲೆಲ್ಲೂ ಅವನೊಬ್ಬನೇ ಅಂತರ್ಯಾಮಿಯಾಗಿದ್ದಾನೆ. ಲೋಕಗಳನ್ನೆಲ್ಲ ವಿಸ್ತರಿಸಿ ಪ್ರಕಟಿಸಿದನಂತರ ಪುನಃ ಅವುಗಳ ಲಯಕ್ಕೆಲ್ಲ ಅವನೊಬ್ಬನೇ ಕಾರಣನಾಗುತ್ತಾನೆ ಎಂದು ಅವನ ಸಕಲ ಶಕ್ತಿಗಳನ್ನೂ ವರ್ಣಿಸಿದೆ. ಸೃಷ್ಟಿಯಾದನಂತರ ಲೋಕರಕ್ಷಣೆಗೆ ಯಾವ ಶಕ್ತಿಯು ಅವಶ್ಯವಾಗಿರುವುದೋ ಆ ಶಕ್ತಿಯು ಮಾತ್ರ ಸ್ವಕೃತಭಾಗದಲ್ಲಿ ವರ್ಣಿತವಾಗಿದೆ. **ಸುಗಂಧಿಂ ಪುಷ್ಟಿ-ವರ್ಧನಂ** ಎಂಬ ವಿಶೇಷಣಗಳು ಈ ಅಂಶವನ್ನು ತಿಳಿಸುತ್ತವೆ ಲೋಕಪುಷ್ಟಿಕಾರಕನಾದುದರಿಂದಲೇ, ರುದ್ರನ ಈ ಶಕ್ತಿಯನ್ನು ಬೆಳೆಸಲು **ತ್ರ್ಯಂಬಕಯಾಗ**ವನ್ನಾಚರಿಸಿ ಅವನಿಗೆ ತುಷ್ಟಿಯನ್ನುಂಟುಮಾಡಿ ಅವನ ಅನುಗ್ರಹವನ್ನು ಸುಖಾದಿಸಬೇಕೆಂದು ಅನೇಕ ಕಡೆಗಳಲ್ಲಿ ತಿಳಿಸಿದೆ

ತಾನ್ವೈವೃಹಂತ। ಯತ್ತ್ರ್ಯಂಬಕೈರಯಜಂತ । ಆದ ಪುನರೇತ್ಯ ಜಸಂತಿ । ಆವ
ರುತ್ರಮುದೀಮಹ್ಯವ ದೇವಂ ತ್ರ್ಯಂಬಕಂ। ಯಥಾ ನೋ ವಸ್ಯಸಸ್ಕರದ್ಯಥಾ ನಃ ಶ್ರೇಯ-

ಸಸ್ಕರದ್ಯಥಾ ನೋ ವ್ಯವಸಾಯಯಾತ್ । ಭೇಷಜಮಸಿ ಭೇಷಜಂಗವೇ೭ಶ್ವಾಯ ಪುರುಷಾಯ ಭೇಷಜಗ್ಂಸುಖಂ ॥

(ಶ. ಬ್ರಾ ೨೬.೨೧)

ದಿನ್ಯರೂಪನೂ, ತ್ರ್ಯಂಬಕಸಂಜ್ಞಕನೂ ಆದ ರುದ್ರದೇವನಿಗೆ ಹವಿಸ್ಸನ್ನರ್ಪಿಸಿರಿ ಅವನಿಗ ತೃಪ್ತಿಯನ್ನುಂಟುಮಾಡುವುದರಿಂದ ನಮಗೆಲ್ಲ ಧನಸಂಪತ್ತುಗಳ ಪುಷ್ಟಿಯು ಲಭಿಸುತ್ತದೆ. ಎಲ್ಲ ಸಿಧನಾದ ಕ್ಷೇಮವೂ ಲಭಿಸುವುದು ಸರು ಪುತ್ರಾದಿಗಳಿಗೆ ಸಂಭವಿಸುವ ಸಕಲ ರೋಗಗಳಿಗೂ ಅವನೊಬ್ಬನೇ ವೈದ್ಯನು ಎಂದು ಪ್ರಸಂಸಿ, ಈ ರುದ್ರನಿಗ **ತ್ರ್ಯಂಬಕನೆಂಬ** ಹೆಸರು ಹೇಗೆ ಪ್ರಸಿದ್ಧವಾಯಿತು ಎಂಬುದಕ್ಕೆ ಹಿಂದೆ ಹೇಳಿದುದಕ್ಕಿಂತಲೂ ಬೇರೆ ಸಿಧನಾದ ನಿರ್ವಚನವನು ಈರೀತಿ ತಿಳಿಸಿದ

ಸ ಜುಹೋತಿ । ಏಷ ತೇ ರುದ್ರ ಭಾಗಃ ಸಹ ಸ್ವಸ್ರಾಂಬಿಕಯಾ ತಂ ಜುಷಸ್ವ ಸ್ವಾಹೇತ್ಯಂಬಿಕಾ ಹ ವೈ ನಾಮಾಸ್ಯ ಸ್ವಸಾ ತಯಾಸ್ಯೈಷ ಸಹ ಭಾಗಸ್ತದ್ಯದಸ್ಯೈಷ ಸ್ತ್ರಿಯಾ ಸಹ ಭಾಗಸ್ತಸ್ಮಾತ್ತ್ರ್ಯಂಬಕಾ ನಾಮ ॥

ತ್ರಂಬಕಾಸಂಜ್ಞಕವಾದ ಹವಿಸ್ಸನ್ನು ಸ್ವೀಕರಿಸುವುದರಿಂದ ರುದ್ರನಿಗೆ ಈ ಹಸರು ರುದ್ರನ ತಂಗಿಯೂ ಅಂಬಿಕಾ ಎಂಬುವಳು. ಸ್ತ್ರೀರೂಪಿನಾದ ಅಂಬಿಕೆಯೊಂದಿಗೆ ರುದ್ರನು ಈ ಹವಿಸ್ಸನ್ನು ಸ್ವೀಕರಿಸುವುದರಿಂದ ತ್ರ್ಯಂಬಿಕಾ ಎಂಬ ಹಸರು ಎಂಬ ನಿರ್ವಚನವನ್ನು ತಿಳಿಸಿದೆ ರುದ್ರನಿಗ ಈ ಹವಿಸ್ಸನ್ನರ್ಪಿಸುವುದರಿಂದ ಲೋಕಪ್ರಸ್ಥಿಯೆಂದು ಪ್ರಸಂಸಿಸಿದೆ

ಯಾವ ತ್ರ್ಯಂಬಕಸಂಜ್ಞಕನಾದ ರುದ್ರನು ಸೃಷ್ಟಿಗೂ, ಸ್ಥಿತಿಗೂ ಲಯಕ್ಕೂ ಕಾರಣನೋ ಅವನೇ ಮೋಕ್ಷ ಮಾರ್ಗಕ್ಕ ದರ್ಶಕನು ಎಂದೂ ಸಹ ವರ್ಣಿತವಾಗಿದ ಮತ್ತ ಮುಕ್ತಿಯನ ಒದಗಿಸಲಿ ಎಂದೂ ಪ್ರಾರ್ಥಿಸಿದೆ **ವಿನಾಸೇಯಂ ರುದ್ರಸ್ಯ ಸುಮ್ನಂ** (ಋ ಸಂ ೭-೫೯-೬) ಇತ್ಯಾದಿ ಸಂಹಿತಾವಾಕ್ಯಗಳು ರುದ್ರನ ಈ ಮಹತ್ತ್ವವನ್ನು ತಿಳಿಸುತ್ತವೆ ಬೇರೆಯಾವ ರುದ್ರನು ಭಯಂಕರನಂದು ಲೋಕಪ್ರಸಿದ್ಧನಾಗಿರುವನೋ, ಇದೇ ರುದ್ರನು ತ್ರ್ಯಂಬಕಸಂಜ್ಞಕನಾಗಿ ಲೋಕರಕ್ಷಕನಂದೂ, ಮುಕ್ತಿದಾಯಕನೆಂದೂ ಈ ಭಾಗದ್ದು ಪ್ರಸಂಸಿತನಾಗಿದ್ದಾನೆ

೨) ಸಾರಮೇಯಸಂಜ್ಞಕವಾದ ವರುಣನ ಶ್ವಾನ

ವಸಿಷ್ಠಋಷಿಯು ವರುಣನಗೃಹಕ್ಕ ಹೋದಾಗ ಅವನನ್ನು ಸಾರಮೇಯನಂಬ ಶ್ವಾನವು ಅಟ್ಟಿಸಿಕೊಂಡು ಬಂದಿತು ಎಂಬ ಒಂದು ಪ್ರಕರಣವು ಈ ಭಾಗದಲ್ಲ ವಿವೃತವಾಗಿದೆ ಈ ಸಂದರ್ಭದಲ್ಲಿ ವಸಿಷ್ಠನು ವರುಣನ ಮನೆಗ ಹೋದ ನಿಮಿತ್ತವೇನು? ಈ ಸಾರಮೇಯವು ಅವನನ್ನು ಏತಕ್ಕ ಅಟ್ಟಿಸಿಕೊಂಡುಬಂದಿತು? ಆಗ ವಸಿಷ್ಠನು ಮಾಡಿದ ಉಪಾಯವೇನು ಎಂಬುದರ ವಿಷಯದಲ್ಲಿ ಸಿಷ್ಟ್ಯಪೃಷ್ಟವಾದ ಸ್ಥಿತಿಯು ತಿಳಿಯುವುದು ಶ್ರಮವಾಗಿದೆ. ಈ ಕಥಾಸಂದರ್ಭವು ಪ್ರಕೃತದಲ್ಲ ಎರಡು ವಿಧವಾಗಿ ತಿಳಿಸಲ್ಪಟ್ಟಿದೆ ವಸಿಷ್ಠನು ವರುಣನ ಮನಗ ಮಲಿಗುವುದಕ್ಕಾಗಿ ಹೋದನೆಂದು ಒಂದು ಕಡೆಯೂ, ಹವಿರ್ವಿಸಿಂದ ಒಳಲಿದ ವರುಣನು ವರುಣನ ಮನೆಯಲ್ಲಿ ಅನ್ನವನ್ನು ಕದಿಯಲು ಹೋದನಂದು ಇನ್ನೊಂದು ಕಡೆಯೂ ತಿಳಿಸಿದ ಪ್ರಕೃತವಸ್ತುವಿನಲ್ಲಿ ಈ ವಿವರಣವು ಅಷ್ಟು ಆವಶ್ಯಕವಿಲ್ಲ ಇದನ್ನು ಕುರಿತು ಚರ್ಚಿಸಿಕೊಂಡು ಬಂದ ನಾಯಿಗೆ **ಸಾರಮೇಯ** ಎಂಬ ಹೆಸರು ಬರಲು ಕಾರಣವೇನು. ಈ ನಾಯಿಯ ಸ್ವರೂಪವೇನು ಎಂಬುದನ್ನು ಪರಿಶೀಲಿಸುವುದ ಪ್ರಕೃತದಲ್ಲ ಅವಶ್ಯವಾಗಿರುತ್ತದೆ.

ವಿಷಯನು ಈ ಸಾರಮೇಯವನ್ನು ನಿರ್ದೇಶಿಸಿ ಸಂಭಾಷಣವನ್ನು ಮಾಡುವ ಕ್ರಮವನ್ನು ಪರಿಶೀಲಿಸಿದರೆ, ಈ ಸಾರಮೇಯಕ್ಕೂ ಸಹ ವಿವೇಚನಸಾಮರ್ಥ್ಯವನ್ನುಂಟುಮಾಡುವ ಪ್ರಯತ್ನವು ಸ್ಪಷ್ಟವಾಗಿದೆ ಮತ್ತು ತಾನು ತಸ್ಕರನೂ ಕಳ್ಳ ಮತ್ತು ಚೋರನೂ ಕಿಲ್ಲ ಎಂಬ ತಂಶನನ್ನು ಸ್ಪಷ್ಟಪಡಿಸಿದ್ದಾನೆ ಇಂದ್ರಭಕ್ತನಾದ ತನ್ನನ್ನು ಆಟ್ಟಿಸಿಕೊಂಡು ಬರುವುದು ಅನುಚಿತನೆಂದು ಆ ಸಾರಮೇಯಕ್ಕೆ ತಿಳಿಸುತ್ತಾನೆ

ಈ ಸಾರಮೇಯವು ಸರಮೆಯ ಕುಲದಲ್ಲಿ ಉತ್ಪನ್ನವಾದುದೆಂದು ತಿಳಿಸಿದೆ ಮುಂದೆ ೧೦-೧೪-೧೦, ೧೧ನೇ ಮಂತ್ರಗಳಲ್ಲಿ ಇವೇ ಸರಮೆಯ ಪುತ್ರರಾದ ಸಾರಮೇಯಗಳು ಯಮನ ಹೆತ್ತಿರವಿರುವ ನಾಯಿಗಳೆಂದೂ ಅವು ವಿಕಾರ ರೂಪವನ್ನು ಹೊಂದಿರತಕ್ಕವೆಂದೂ ಪ್ರಸಿದ್ಧವಾಗಿವೆ ಇಲ್ಲಿ ಏಕವಚನವಿದೆ ಒಂದೇ ಸಾರಮೇಯವೆಂದರ್ಥ ಈ ಸಾರಮೇಯವು ಮುಂದೆ ವರ್ಣಿತವಾಗುವ ಸಾರಮೇಯಗಳಿಗಿಂತಲೂ ಭಿನ್ನವೇ ಅಥವಾ ಅವೆರಡರಲ್ಲೊಂದೇ ಎಂಬುದನ್ನು ಪ್ರಕೃತದಲ್ಲಿ ತಿಳಿಯಬೇಕು ಅದಕ್ಕಿಂತಲೂ ಪೂರ್ವಭಾವಿಯಾಗಿ **ಸರಮಾ** ಎಂಬ ದೇವಶುನಿಯ ಸ್ವರೂಪವೇನೆಂದು ತಿಳಿದು ಅನಂತರ ಸಾರಮೇಯಗಳ ರೂಪವನ್ನರಿಯಬೇಕಾಗಿರುವುದರಿಂದ, **ಸರಮಾ** ಎಂಬುವಳ ವಿಷಯವು ಯಾವ ಯಾವ ಕಡೆ ಹೇಗೆ ವರ್ಣಿತವಾಗಿದೆ ಎಂಬುದನ್ನು ತಿಳಿಯಬೇಕಾಗಿದೆ

ದೇವಶುನಿಯೆಂದು ಸರಮೆಯ ವಿವರಣೆಯಿದ್ದರೂ ಸಹ **ಸರಮೆಯು** ಕೇವಲ ನಾಯಿಯ ಜಾತಿಗೆ ಸೇರಿದ ಪ್ರಾಣಿಯೆಂದು ಸುಕ್ಷಂತಿಯಲ್ಲಿ ಎಲ್ಲೂ ವರ್ಣಿತವಾಗಿಲ್ಲ ಈ ವಿಷಯದಲ್ಲಿ ಆಂಗ್ಲಪಂಡಿತರ ಅಭಿಪ್ರಾಯಗಳನ್ನು ಕಲೆಸನ್ನು ಮಾತ್ರ ಇಲ್ಲಿ ತಿಳಿಸಲಾಗುವುದು

This indicatas, though it does not conclusively prove, that Sarama, who figures as the messenger of Indra, in the myth of the Panis, was treated as a dog and this tradition, which is not expressly set out in the Rig-Veda, is the account of the later texts and of Yaska, who calls her the bitch of the dogs

(Religion and Philosophy of the Vedas, Keith p. 192)

ಇಂದ್ರನು ಪಣಿಗಳಿಂದ ಅಪಹೃತವಾದ ಗೋವ್ರಜಗಳನ್ನು ಕಂಡುಹಿಡಿಯಲು ಹೋದಾಗ **ಸರಮೆಯು** ಇಂದ್ರನ ದೂತವಾಗಿದ್ದಳು ಎಂಬ ವಿವರಣೆಯಲ್ಲಿ ಸರಮೆಯನ್ನು ಶ್ವನಜಾತಿಗೆ ಸೇರಿದವಳೆಂದು ಎಲ್ಲೂ ಸುಕ್ಷಂತಿಭಾಷಗಳಾವುದೂ ಸ್ಪಷ್ಟವಾಗಿ ತಿಳಿಸಿಲ್ಲ. ಆದರೆ ನಾಯಿಯ ಜಾತಿಗೆ ಸೇರಿದವಳೆಂದು ಯಾಸ್ಕರೂ ಮತ್ತು ಉಳಿದ ನಿರ್ವಚನಕಾರರೂ ತಿಳಿಸಿದ್ದಾರೆ ಇದಕ್ಕೆ ಸಂಹಿತಾವಾಕ್ಯಗಳಲ್ಲಿ ಸರಿಯಾದ ಆಧಾರವಿಲ್ಲ ಎಂದು A B Keith ಎಂಬುವರು ತಿಳಿಸಿದ್ದಾರೆ. ಅಲ್ಲದೇ—

There is nothing in Rig-Veda directly showing that Sarama was there conceived as a bitch, though in the later Vedic literature she is regarded as such etc

(Vedic Mythology by Macdonnel P 151).

ಎಂದು ಮಾಕ್‌ಡೊನೆಲ್ ಎಂಬ ಆಂಗ್ಲ ಪಂಡಿತರೂ ಸಹ ಮೇಲೆ ಕೀತ್ ಹೇಳಿರುವ ಅಭಿಪ್ರಾಯವನ್ನೇ ತಿಳಿಸಿದ್ದಾರೆ. ಋ ಸಂ. ೧೦ ೧೦೮ ರಲ್ಲಿ ತಿಳಿಸಿರುವ ಇಂದ್ರ ಸರಮೆ ಸಂವಾದ ಸಂತೋಷಕರವಾಗಿದೆ. ಇದರಲ್ಲಿ, ಪ್ರಾಸ್ತೋತ್ರಮಂತ್ರ

ಹೇಳಿರುವ ಕಥೆಯಲ್ಲಿ ಸರಮೆಯ ಸ್ವಭಾವವು ಅತ್ಯುತ್ಕೃಷ್ಟವಾದುದಲ್ಲವೆಂದು ತಿಳಿಯುತ್ತದೆ ಇಂದ್ರನ ಕಲಸಕ್ಕಾಗಿ ಕಳುಹಲ್ಪಟ್ಟವಳು ಪಣಿಗಳ ಆಕರ್ಷಣೆಗೆ ಒಳಗಾಗಿ ಇಂದ್ರನಿಗೇ ದ್ರೋಹಮಾಡಲು ಬಯಸುತ್ತಾಳೆ ಜೈಮಿನೀಯ ಬ್ರಾಹ್ಮಣದಲ್ಲಿ ಉಕ್ತವಾಗಿರುವ ಕಥೆಯು ಇದಕ್ಕೆ ಕೊಂಚ ವ್ಯತ್ಯಸ್ತವಾಗಿದೆ ಇದರಲ್ಲಿ ಹೇಳಿರುವಂತೆ ಇಂದ್ರನು ಸುವರ್ಣನನ್ನು ಆ ಕಾರ್ಯಕ್ಕಾಗಿ ಕಳುಹಿಸಿ ಅವನು ನಂಬಿಕೆಗರ್ಹನಲ್ಲನೆಂದು ತಿಳಿದನೋಲೆ ಸರಮೆಯನ್ನು ಕಳುಹುತ್ತಾನೆ ಇವಳು ನಂಬಿಕೆಗೆ ಪಾತ್ರಳಾಗುತ್ತಾಳೆ ಮತ್ತು ತನ್ನ ಸೇನೆಯ ಫಲವಾಗಿ ಇಂದ್ರನಿಂದ ತನ್ನ ಮಕ್ಕಳಿಗೆ ಆಹಾರವನ್ನು ಸದಯಿಸುತ್ತಾಳೆ ಈ ಒಂದೇರವು ಎಲ್ಲ ಕಡಗಳಲ್ಲಿಯೂ ಒಂದೇ ರೀತಿ ಹೇಳಲ್ಪಟ್ಟಿಲ್ಲ. ಇನ್ನು ಮಕ್ಕಳಾರು? ಆ ಅನ್ನವು ಹೇಗೆ ಹಂಚಲ್ಪಟ್ಟಿತು ಎಂಬುದಕ್ಕೆ ಋಕ್ಸಂಹಿತೆಯಲ್ಲಿಯೇ ಕಲವೆಡೆಗಳಲ್ಲಿ ವಿವರಣೆಯಿರುತ್ತದೆ. ಉದಾಹರಣೆಗೆ—

ಸ್ವಾಧ್ಯೋ ದಿವ ಆ ಸಪ್ತ ಯಹ್ವೀ ರಾಯೋ ದುರೋ ವ್ಯೃತಜ್ಞಾ ಅಜಾನನ್ ।
ವಿದದ್ಗವ್ಯಂ ಸರಮಾ ದೃಳ್ಹಮೂರ್ವಂ ಯೇನಾ ನು ಕಂ ಮಾನುಷೀ ಭೋಜತೇ ವಿಟ್ ॥

(೪ ಸಂ ೧೬೮ ೪)

ನಮಸ್ಸ್ವರೂಪವುಳ್ಳವು ಜಗತ್ತಿಗೆ ಉಪಕಾರಕಗಳೂ ಆದ ಸಪ್ತನದಿಗಳೂ ದ್ಯುಲೋಕದಿಂದ ಭೂಲೋಕಕ್ಕೆ ಹರಿಯುತ್ತವೆ ಇವುಗಳಲ್ಲಿ ಮಹರ್ಷಿಗಳು ಸಂಪತ್ತಿನ ಮೂಲವನ್ನು ಕಂಡರಿತರು. ಸರಮೆಯೂ ಸಪ್ತ ಸಂಪತ್ತನರಿತು ಆ ಸಂಪತ್ತನ್ನು ಜಗತ್ತಿಗೆ ಒದಗಿಸಿದಳು. ಮಾನವ ಸಮೂಹವು ಹಿಂದೆ ಅನ್ನಸಂಪತ್ತನ್ನು ಈಗ ಆನಂಭಿಸುತ್ತಿದ ಎಂದ ನೋಲನ ಮಂತ್ರವು ತಿಳಿಸುತ್ತದೆ ಈ ಸಂದರ್ಭವು ಸರಮೆಯನ್ನು ದೇವಸೂನಿಯೆಂದು ನಿರ್ದೇಶಿಸಿಲ್ಲ. ಬೇರೆಯೇ ಒಂದೆರಡುದಾಹರಣೆಗಳನ್ನು ಮಾತ್ರ ಪರಿಶೀಲಿಸಬಹುದು.

ವಿದದ್ಯದೀ ಸರಮಾ ರುಗ್ಣಮದ್ರೇರ್ಮಹಿ ಪಾಥಃ ಪೂರ್ವ್ಯಂ ಸಧ್ರ್ಯಕ್ ।
ಅಗ್ರಂ ನಯತ್ಸುಪದ್ಯಕ್ಷರಾಣಾ ಮಚ್ಛಾ ರವಂ ಪ್ರಥಮಾ ಜಾನತೀ ಗಾತ್ ॥

(೪ ಸಂ ೬ ೫೫-೬)

ಎಂಬಲ್ಲಿ, ಸರಮೆಯು ಗುಹೆಗಳಿಂದ ಕೂಡಿದ ಪರ್ವತದ ಸ್ವರೂಪದ್ವಾರವನ್ನು ಕಂಡುಹಿಡಿದ ತತ್ಪಲವಾಗಿ ಇಂದ್ರನಿಂದ ಅನೇಕವಿಧವಾದ ಸಹಾಯವನ್ನು ಪಡೆದಳೆಂದು ತೀರಿಸಿದ ಅಪೇಕ್ಷಿತವಾದ ಪಶುಗಳನ್ನು ಕಂಡುಹಿಡಿದು ಆ ಎನ್ನ ಪಶುಗಳ ಕ್ಷೀರವನ್ನು ತಾನು ಇಂದ್ರನಿಂದ ಪಡದು ತನ್ನ ಮಕ್ಕಳಿಗೆ ಹಂಚಿದಳು ಎಂದಿರುವ ಈ ರೂಢಿಯನ್ನೇ ಅವಲಂಬಿಸಿ ಮಾನವಲೋಕಕ್ಕೆ ಸಾಧಿಸಿದ ಉಪಕಾರವು ತಿಳಿಯುತ್ತದೆ. ಹೀಗೆಯೇ, ಇನ್ನೊಂದುದಾಹರಣೆಯನ್ನು ಮಾತ್ರ ನೋಡಿದರೆ,

ಅನೂನೋದತ್ರ ಹಸ್ತಯತೋ ಅದ್ರಿರಾರ್ಚನ್ಯೇನ ದಶ ಮಾಸೋ ನವಗ್ವಾಃ ।
ಋತಂ ಯತೀ ಸರಮಾ ಗಾ ಅವಿಂದದ್ವಿಶ್ವಾನಿ ಸತ್ಯಾಂಗಿರಾಶ್ಚಕಾರ ॥

(೪ ಸಂ ೫೧ ೧೦)

ಈ ಯಾಗಕಾಲದಲ್ಲಿ ಋತ್ವಿಕ್ಕುಗಳಿಂದ ಚಾಲಿತವಾದ ಅದ್ರಿಯು ಶಬ್ದಮಾಡತೊಡಗಿತು ಆಗ ನವಗ್ವರು ದಶಮಾಸ ಸಂಜ್ಞಕವಾದ ಯಾಗವನ್ನಾಚರಿಸಿದರು (ಪತ್ತು ತಿಂಗಳಕಾಲ ಯಜ್ಞವನ್ನಾಚರಿಸಿದರು) ಆಗ ಸರಮೆಯು ಸತ್ಯ

ಮಾರ್ಗವನ್ನು ಅನುಸರಿಸಿ ಅಲ್ಲಿ ಸಂಚರಿಸುತ್ತ ಗೋವುಗಳನ್ನು ಕಂಡುಹಿಡಿದಳು. ಇದು ಅಂಗಿರಸ್ಸುಗಳ ಯಾಗಕ್ಕೆ ಸಹಾಯಮಾಡಿ ಲೋಕೋಪಕಾರವಾಯಿತು ಎಂದಿರುತ್ತದೆ. ಈ ಸಂದರ್ಭಗಳಲ್ಲಿ **ಸರಮಾಸ್ವರೂಪವನ್ನು** ಹೇಗೆ ವಿವರಿಸಿದೆ ಎಂಬುದನ್ನು ಗಮನಿಸಬೇಕು.

ಋತಂ ಸತ್ಯಂ ಯಜ್ಞಂ ವಾ ಯತೀ ಪ್ರಾಪ್ನುವತೀ ಸರಮಾ ಸರಣಶೀಲಾ ಸ್ತುತಿರೂಪಾ ವಾಕ್ ।

(ಸಾ. ಭಾ.)

ಸತ್ಯಮಾರ್ಗವನ್ನನುಸರಿಸಿದವಳೂ, ಸ್ತುತಿರೂಪಳೂ, ಸಂಚಾರಶಾಲಿನಿಯೂ ಆದ **ವಾಗ್ದೇವಿಯೆಂದು** ಸಾಯಣರು ಅರ್ಥಮಾಡಿದ್ದಾರೆ ಹೀಗೆಯೇ, ಇವರ ಮುಂದಿನ ಮಂತ್ರದಲ್ಲೂ ಸಹ

ಉತ್ಸ ಆಸಾಂ ಪರಮೇ ಸದಸ್ಯೃತಸ್ಯ ಪಥಾ ಸರಮಾ ವಿದದ್ಗಾಃ ।

(ಋ. ಸಂ ೫-೪೫-೮)

ಋತಸ್ಯ ಸತ್ಯಸ್ಯ ಪಥಾ ನಮಾಗೇಣ ಸರಮಾ ವಾಕ್ ದೇವಶುನೀ ವಾ ನಿಗೂಢಾ ।

(ಸಾ ಭಾ)

ಸತ್ಯಮಾರ್ಗದಲ್ಲಿ ಸಂಚರಿಸುವ ವಾಗ್ದೇವಿ ಅಥವಾ ದೇವಶುನೀ ಎಂಬ ವೈಕಲ್ಪಿಕವಾದ ಅರ್ಥವನ್ನು ತಿಳಿಸಿದ್ದಾರೆ. ಇನ್ನೆಲ್ಲಕ್ಕಿಂತಲೂ ಅಧಿಕವಾಗಿ ಮುಂದೆ ೧೦ನೇ ಮಂಡಲದ ೧೦೮ನೇ ಸೂಕ್ತವು ಸರಮೆಯ ಸ್ವರೂಪವನ್ನು ಇನ್ನೂ ವಿಶದವಾಗಿ ತಿಳಿಸುತ್ತದೆ ಆ ಸಂದರ್ಭದಲ್ಲಿ ಈ ವಿಷಯವನ್ನು ಇನ್ನೂ ವಿಶದವಾಗಿ ಪರಿಶೀಲಿಸಬಹುದು ಪ್ರಕೃತದಲ್ಲಿ, ಆ ಸೂಕ್ತದ ಸಾರಾಂಶವನ್ನು ಮಾತ್ರ ಗಮನಿಸಲಾಗುತ್ತದೆ.

ಇಲ್ಲಿ ಸರಮೆಗೂ ಪಣಿಗಳಿಗೂ ನಡೆಯುವ ಸಂಭಾಷಣೆಯು ವರ್ಣಿತವಾಗಿದೆ ಪಣಿಗಳು ಸರಮೆಯನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾರೆ. ಆದರೆ ಸರಮೆಯು ಇಂದ್ರನ ಮತ್ತು ಅಂಗಿರಸ್ಸುಗಳ ಪ್ರಭಾವವನ್ನು ವರ್ಣಿಸಿ ಪಣಿಗಳನ್ನು ಎಚ್ಚರಿಸುತ್ತಾಳೆ ಇಲ್ಲಿ ಸರಮೆಯ ವ್ಯವಹಾರವು ತುಂಬಾ ಶ್ಲಾಘ್ಯವಾಗಿರುತ್ತದೆ. ತನ್ನ ದೌತ್ಯಕೃತ್ಯವನ್ನರಿತು ತನ್ನ ಘನತೆಗೆ ತಕ್ಕಂತೆ ವ್ಯವಹರಿಸುತ್ತಾಳೆ ಕರ್ತವ್ಯಜ್ಞಾನವು ಪೂರ್ಣವಾಗಿರುತ್ತದೆ ಪಣಿಗಳನ್ನು ಚೋರರು ಎಂದು ಧೈರ್ಯವಾಗಿ ಹೇಳಿದಾಗ ಅವರಿಗೇ ಆಶ್ಚರ್ಯವಾಗುತ್ತದೆ. ಅವರು ಅವಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ರಸಾ ನದಿಯೂ ಸಹ ತನಗೆ ಸಹಾಯಮಾಡಿತು ಎಂದು ಹೇಳಿಕೊಡನೆಯೇ ಅವರ ಗೌರವವು ಅವಳಲ್ಲಿ ಅಧಿಕವಾಗುತ್ತದೆ. ತನ್ನ ಧಣಿಯಾದ ಇಂದ್ರನು ಅವರನ್ನೆಲ್ಲ ನಾಶಮಾಡಬಲ್ಲವನೆಂದು ಧೈರ್ಯವಾಗಿ ಹೇಳುತ್ತಾಳೆ. ಅವರ ಆಕರ್ಷಣೆಗೆ ಕೊಂಚವೂ ಮರುಳಾಗದೆ ಧೈರ್ಯವಾಗಿ ಆದನ್ನು ತಿರಸ್ಕರಿಸುತ್ತಾಳೆ. ರಾಜದೂತನಿಗೆ ಯೋಗ್ಯವಾದ ಪ್ರಭಾವವನ್ನು ತೋರಿಸುತ್ತಾಳೆ. , ಈ ಸಂಭಾಷಣೆಯಲ್ಲಿ ಉತ್ತಮವಾದ ಕವಿಯಿರುತ್ತಾನೆ

ಹೀಗೆ ಅನೇಕ ಸಂದರ್ಭಗಳಲ್ಲಿ ವರ್ಣಿತವಾಗಿರುವ **ಸರಮಾ** ಎಂಬ ವ್ಯಕ್ತಿಯ ಸ್ವರೂಪವನ್ನು ಗಮನಿಸಿದರೆ ಸಂಹಿತಾವಾಕ್ಯಗಳಲ್ಲೆಲ್ಲೂ ಅವಳನ್ನು ದೇವರುಸಿಯೆಂದು ನಿರ್ದೇಶಿಸಿಲ್ಲವೆಂಬುದು ಸ್ಪಷ್ಟವಾಗಿದೆ ತೈತ್ತಿರೀಯ ಬ್ರಾಹ್ಮಣದಲ್ಲಿ ಇದೇ ಪ್ರಕರಣವನ್ನು ವಿವರಿಸುತ್ತ ಸರಮೆಯ ವಿಷಯವನ್ನು ಹೇಳುವಾಗ ಕಥಾಸಂದರ್ಭವು ಕೊಂಚ ವ್ಯತ್ಯಸ್ತವಾಗಿರುತ್ತದೆ.

ವಿದದ್ಧತೀ ಸರಮಾ ರುಗ್ಣಮದ್ರೇಃ । ಮಹಿ ಪಾಥಃ ಪೂರ್ವ್ಯಗ್ಂ ಸಧ್ರ್ಯಙ್ಕ್ಃ ॥

(ತೈ ಬ್ರಾ. ೨.೫.೪ ೧೦)

ಎಂಬ ಋಕ್ಸಂಪುಟಾವಾಕ್ಯವನ್ನೇ ವಿವರಿಸಿ ಈ ಸಂದರ್ಭವನ್ನು ತಿಳಿಸುವಾಗಲೂ ಸಹ ಮೂಲದಲ್ಲಿ ದೇವಶುನಿಯೆಂಬ ನಿರ್ದೇಶವಿಲ್ಲ. ಭಾಷ್ಯದಲ್ಲಿ ಮಾತ್ರ **ಸರಮಾ ಕಾಚಿತ್ ಶುನೀ ಶ್ವಮೂರ್ತಿರ್ಧಾರಿಣೀ ದೇವತಾ**। ನಾಯಿಯ ರೂಪವನ್ನು ಧರಿಸಿದ ಒಬ್ಬ ದೇವತಾಸ್ತ್ರೀ ಎಂದು ವಿವರಿಸಿದೆ. ಮಾನವರಿಗೆ ಹಿತಕಾರಿಯಾದ ದಿವ್ಯವ್ಯಕ್ತಿಯೆಂದು ಮಾತ್ರ ಸದ್ಯಕ್ಕೆ ನಿಷ್ಕರ್ಷಿಸಬಹುದು

ಇಂತಹ ದಿವ್ಯಸ್ತ್ರೀಯ ಹೊಟ್ಟೆಯಲ್ಲಾಗಲಿ ಅಥವಾ ಅವಳ ವಂಶದಲ್ಲಾಗಲಿ ಜನಿಸಿದ ವ್ಯಕ್ತಿಯೂ ಸಹ ದಿವ್ಯತ್ವವನ್ನು ಹೊಂದಿರಬೇಕೆಂಬುದು ಸ್ಪಷ್ಟವಾಗಿದೆ ಆದರೆ, **ಸಾರಮೇಯ** ಎಂಬ ಪದವು ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಅರ್ಥವನ್ನು ಕೊಡಬಲ್ಲದು ಎಂಬುದೇ ಪ್ರಕೃತ ವಿಮರ್ಶೆಯ ಗುರಿಯಾಗಿರುತ್ತದ ಇಲ್ಲಿ ಮುಖ್ಯವಾಗಿ ಕಲವು ವಾಕ್ಯಗಳನ್ನು ಆಧಾರವಾಗಿಟ್ಟುಕೊಂಡ. ಈ ವಿಷಯವನ್ನು ಸೂಕ್ಷ್ಮವಾಗಿ ವಿಮರ್ಶಿಸಲಾಗುತ್ತದೆ ಅವುಗಳಾವುವೆಂದರೆ—

ಋ ಸಂ. ೧೦-೧೪-೧೦, ೧೧,೧೨, ಅ ವೇ. ೧೮-೨-೧೧, ೧೨, ೧೩ ತೈ. ಆ. ೬-೩ ೧, ೨.

ಈ ವಾಕ್ಯಗಳಲ್ಲಿ ಸಾರಮೇಯಗಳನ್ನು ಕ್ರೂರವಾದ ಪ್ರಾಣಿಗಳೆಂದು ನಿರ್ದೇಶಿಸಿದೆ ಅಲ್ಲದೇ—ಋ ಸಂ ೧೦-೬೮-೩, ೭-೫೫-೩, ೩, ೪ ಇತ್ಯಾದಿ ಸ್ಥಳಗಳಲ್ಲೂ ಅವುಗಳ ಕ್ರೌರ್ಯವು ಸ್ಪಷ್ಟವಾಗಿದೆ

ಯಮನ ನಾಯಿಗಳಂದು ಪ್ರಸಿದ್ಧವಾದ ಈ ಪ್ರಾಣಿಗಳು ನಾರಕಾರಕವಾದ ದಂಷ್ಟ್ರಗಳನ್ನು ಹೊಂದಿ ಭಯಂಕರವಾಗಿರುವುದಂದು ಇಲ್ಲಿ ವರ್ಣಿತವಾಗಿದೆ ಆದರೆ, ಇಲ್ಲ ಕೇವಲ ವ್ಯಾಖ್ಯಾರ್ಥನೇ ಅಥವಾ ಲಕ್ಷಣಾರ್ಥನೇ ಎಂಬುದನ್ನು ಗವೇಷಿಸಬೇಕು. ಋ ಸಂ. ೧೦-೧೪-೧೦,೧೧, ೧೮ ನೇ ಮಂತ್ರಗಳಲ್ಲ ವಿವೃತವಾಗಿರುವ ಸಾರಮೇಯಗಳ ನಿಜವಾದ ರೂಪವೇನು ಎಂದು ತಿಳಿಯಲು ಇದಕ್ಕ ಸಹಕಾರಿಯಾದ ಇತರ ಮಂತ್ರಗಳನ್ನೂ ಆಧಾರವಾಗಿ ತೆಗೆದುಕೊಳ್ಳಬೇಕಾಗುತ್ತದ **ರಕ್ಷಿತಾರೌ ಚತುರಕ್ಷೌ** ಈ ವಿಶೇಷಣಗಳ ಅರ್ಥವೇನು ಎಂಬುದನ್ನೂ ವಿಮರ್ಶಿಸಬೇಕಾಗಿರುತ್ತದೆ ಈ ಯಮಶ್ವಾನಗಳಾವುವು ಎಂಬುದರ ವಿಷಯದಲ್ಲಿ ಈ ರೀತಿ ಕಥಾಸಂದರ್ಭವಿರುತ್ತದ

> **ಕಾಲಕಂಜಾ ವೈ ನಾಮಾಸುರಾ ಆಸನ್ । ತೇ ಸುವರ್ಗಾಯ ಲೋಕಾಯಾಗ್ನಿಮಚಿನ್ವತ । ಪುರುಷ ಇಷ್ಟಕಾಮುಪಾದಧಾತ್ಪುರುಷ ಇಷ್ಟಕಾಂ । ಸ ಇಂದ್ರೋ ಬ್ರಾಹ್ಮಣೋ ಬ್ರುವಾಣ ಇಷ್ಟಕಾಮುಪಾಧತ್ತ । ಏಷಾ ಮೇ ಚಿತ್ರಾ ನಾಮೇತಿ । ತೇ ಸುವರ್ಗಂ ಲೋಕಮಾಸ್ಕಾರೋಹನ್ । ಸ ಇಂದ್ರ ಇಷ್ಟಕಾಮಾವೃಹತ್ । ತೇಽವಾಕೀರ್ಯಂತ । ಯೇಽವಾಕೀರ್ಯಂತ । ತ ಊರ್ಣಾವಭಯೋಽಭವನ್ । ಬ್ಲಾವುದಪತತಾಂ । ತೌ ದಿವ್ಯೌ ಶ್ವಾನಾವಭವತಾಂ ॥**
>
> (ತೈ ಬ್ರಾ ೧-೧-೨-೦,೧)

ಕಾಲಕಂಜರೆಂಬ ಅಸುರರಿದ್ದರು ಅವರು ಸ್ವರ್ಗಲೋಕವನ್ನು ಸಂಪಾದಿಸಲು ಅಗ್ನಿವೇದಿಕೆಯನ್ನು ರಚಿಸಿದರು ಆ ವೇದಿಕೆಗೆ ಮಾನವರೇ ಇಟ್ಟಿಗೆಗಳಾದರು ಆಗ ಇಂದ್ರನು ಬ್ರಾಹ್ಮಣರೂಪದಲ್ಲಿ ಬಂದು ತಾನೂ ಒಂದು ಇಟ್ಟಿಗೆಯ ರೂಪದಲ್ಲಿ ಕುಳಿತನು ನಂತರ " ಚಿತ್ರಾನಾಮಕವಾದ ಈ ಇಟ್ಟಿಗೆಯು ನನ್ನನ್ನುದ್ದೇಶಿಸಿದೆ" ಯೆಂದನು ಆಗ ಆ ಅವರು ಸ್ವರ್ಗವನ್ನು ಹೆತ್ತಲು ಆರಂಭಿಸಿದರು ಒಡನೆಯೇ ಇಂದ್ರನು ತನ್ನ ಇಟ್ಟಿಗೆಯನ್ನು ಎಳೆದನು ಕೂಡಲೇ ಅವರು ಕಳಕ್ಕೆ ಬಿದ್ದರು ಕಳಕ್ಕೆ ಬಿದ್ದೊಡನೆಯೇ ಅವರು ಜೇಡರ ಹುಳುಗಳಾದರು ಅವುಗಳೆಲ್ಲ ಎಡು

ಮಾತ್ರ ಮೇಲಕ್ಕೆ ಹಾರಿದವು. ಅವೇ ದೇವಲೋಕದ ಶ್ವಾನಗಳೆಂದು ಪ್ರಸಿದ್ಧವಾದವು ಎಂದು ಕಥೆಯಿರುತ್ತದೆ. ಈ ಕಥೆಯನ್ನೇ ತಿಳಿಸುತ್ತ,

ಯಾ ಉತ್ತಮಾ ಅಸ್ತಾಂ ತಾ ಯಮಶ್ವಾ ಅಭವತಾಂ ।

(ಮೈ ಸಂ ೧-೬-೯)

ಯಾವ ಹುಳುಗಳು ಉತ್ತಮವಾದ ಸ್ಥಿತಿಯನ್ನು ಹೊಂದಿದ್ದಪೋ ಅವೇ **ಯಮಶ್ವಾನ**ಗಳೆಂದು ಪ್ರಸಿದ್ಧವಾದವು ಎಂದು ಸ್ಪಷ್ಟವಾಗಿ ಮೈತ್ರಾವಣೀಯ ಸಂಹಿತೆಯಲ್ಲಿ ತಿಳಿಸಿದೆ ಈ ಕಥೆಗೂ ಅಥರ್ವವೇದದ ವಾಕ್ಯಕ್ಕೂ ಸಾಮಂಜಸ್ಯವಿದೆಯೇ ಎಂಬುದೂ ಒಂದು ಸಂಶಯಾಸ್ಪದವಾದ ವಿಷಯವಾಗಿದೆ

ಅಪ್ಸು ತೇ ಜನ್ಮ ದಿವಿ ತೇ ಸಧಸ್ಥಂ ಸಮುದ್ರೇ ಅಂತರ್ಮಹಿಮಾ ತೇ ಪೃಥಿವ್ಯಾಂ ।
ಶುನೋ ದಿವ್ಯಸ್ಯ ಯನ್ಮಹಸ್ತೇನಾ ತೇ ಹವಿಷಾ ವಿಧೇಮ ॥

(೫ ವೇ ೬-೪೦-೧)

ಎಲೈ ದಿವ್ಯಶ್ವಾನನೇ, ಉದಕವೇ ನಿನ್ನ ಉತ್ಪತ್ತಿಸ್ಥಾನವು ಸ್ವರ್ಗವೇ ನಿನ್ನ ವಾಸಸ್ಥಾನವು ಸಮುದ್ರಮಧ್ಯದಲ್ಲೂ, ಪೃಥ್ವಿಯಲ್ಲೂ ನಿನ್ನ ಮಹತ್ತ್ವವಿರುತ್ತದೆ ಇಂತಹ ಪ್ರಭಾವವುಳ್ಳ ನಿನ್ನನ್ನುದ್ದೇಶಿಸಿ ಈ ಹವಿಸ್ಸನ್ನರ್ಪಿಸುತ್ತೇನೆ ಸ್ವೀಕರಿಸು ಎಂದು ದಿವ್ಯಶ್ವಾನದ ಮಹಿಮೆಯನ್ನು ಪ್ರಶಂಸಿಸಿದೆ

ಋಕ್ಸಂಹಿತೆಯಲ್ಲಿ ಯಾವ **ಚತುರಕ್ಷೌ** ಎಂಬ ವಿಶೇಷಣವಿರುವುದೋ ಅದೇ ವಿಶೇಷಣವುಳ್ಳ ವರ್ಣನೆಯು ಮೇಲಿನ ಅಂಶವನ್ನು ಇನ್ನೂ ಅಧಿಕವಾಗಿ ಪುಷ್ಟೀಕರಿಸುತ್ತದೆ ಉದಾಹರಣೆಗೆ ತೈತ್ತಿರೀಯಬ್ರಾಹ್ಮಣದಲ್ಲಿ ಅಶ್ವಮೇಧ ಯಾಗ ಪ್ರಕರಣದಲ್ಲಿ ವರ್ಣಿತವಾಗಿರುವ **ಶ್ವನ್ ಚತುರಕ್ಷ** । ಎಂಬ ವಿಶೇಷಣವೂ **ಈ** ಅಂಶವನ್ನು ಸ್ಪಷ್ಟಪಡಿಸುತ್ತದೆ. (ತೈ ಬ್ರಾ ೩-೮-೪-೨)

ಈ ಶ್ವಾನವು ದುಷ್ಟವಾದುದರಿಂದ ಇದರ ಹನನವು ಎಂದು ಈ ಪ್ರಕರಣವು ತಿಳಿಸುತ್ತದೆ ದಿವ್ಯಸ್ವರೂಪವನ್ನು ಹೊಂದಿದ ಅಶ್ವವು ತನ್ನ ವಿರೋಧಿಯಾದ ಈ ದುಷ್ಟಶ್ವಾನವನ್ನು ಹನನಮಾಡುತ್ತದೆಯೆಂದು ಈ ಪ್ರಕರಣದ ಸಾರಾಂಶ.

ಹೀಗೆ, ನಾನಾ ವಿಧವಾಗಿರತಕ್ಕ ವಿವರಣಗಳಲ್ಲಿ ಒಂದು ಸಾಮಂಜಸ್ಯವು ಸಾಧ್ಯವೇ ? ಯಮನ ಎರಡು ಶ್ವಾನಗಳ ಉತ್ಪನ್ನವು ಯಜ್ಞಮೂಲವಾಗಿದೆಯೆಂಬುದರ ಅರ್ಥವೇನು ? ಇವುಗಳ ಹನನವು ಹೇಗೆ, ಇತ್ಯಾದಿ ವಿಷಯಗಳನ್ನು ನಿಷ್ಕೃಷ್ಟವಾಗಿ ತಿಳಿಸುವುದು ಬಹಳ ಕ್ಲಿಷ್ಟವಾದ ಪ್ರಯತ್ನವಾಗುತ್ತದೆ ಆದರೂ ಸಹ ವೈದಿಕವಾಕ್ಯಗಳ ಆಧಾರದ ಮೇಲೆ, ಈ ದಿವ್ಯಶ್ವಾನಗಳು ಯಾವ ತತ್ತ್ವಗಳನ್ನು ಪ್ರತಿಬಿಂಬಿಸುತ್ತವೆ ಎಂದು ಮಾತ್ರ ಸೂಕ್ಷ್ಮವಾಗಿ ಇಲ್ಲಿ ತಿಳಿಸಲಾಗುತ್ತದೆ

ಶ್ಯಾಮ ಮತ್ತು **ಶಬಲಾ** ಎಂದು ಪ್ರಸಿದ್ಧವಾದ ಎರಡು ಶ್ವಾನಗಳ ಸ್ವರೂಪವೇನು ? ಇವಕ್ಕೂ ಯಜ್ಞಕ್ಕೂ ಏನು ಸಂಬಂಧ? ಇಲ್ಲಿರುವ ಯಾಜ್ಞಿಕಪ್ರಕ್ರಿಯೆಯೇನು ಎಂಬುದನ್ನು ತಿಳಿಸುತ್ತ ಕೌಷೀತಕೀಬ್ರಾಹ್ಮಣದಲ್ಲಿ ಈ ವಿವರಣೆಯಿರುತ್ತದೆ

ಸಾಯಮುಸ್ತಮಿತೇ ಪುರಾ ತಮಸಸ್ತಸ್ಮಿನ್ ಕಾಲೇ ಜಹುಯಾತ್ಸ ದೇವಯಾನಃ ಕೇತುಃ । ಪ್ರಾತಃ ಪುರೋಽದಯಾತ್ ಅಪಹತೇ ತಮಸಿ ತಸ್ಮಿನ್ ಕಾಲೇ ಜುಹುಯಾತ್ ಸ ದೇವಯಾನಃ ಕೇತುಃ । ಅಥೋ ಯೋಽತೋ ಅನ್ಯಥಾಗ್ನಿಹೋತ್ರಂ ಜುಹೋತಿ ಶ್ಯಾಮಶಬಲೌ ಹಾಸ್ಯಾಗ್ನಿ

ಹೋತ್ರಂ ವಿಖಿದತೋ೬ಹರ್ವೈ ಶಬಲೋ ರಾತ್ರಿಃ ಶ್ಯಾಮಸ್ಯ ಯೋ ಮಹಾರಾತ್ರೇ ಜುಹೋತಿ ಶ್ಯಾಮೋ ಹಾಸ್ಯಾಗ್ನಿಹೋತ್ರಂ ವಿಖಿದತ್ಯಥ ಯೋ ಮಹಾಹ್ನೇ ಜುಹೋತಿ ಶಬಲೋ ಹಾಸ್ಯಾಗ್ನಿಹೋತ್ರಂ ವಿಖಿದತಿ ॥

(ಕೌ ಬ್ರಾ ೨೯)

ಸಾಯಂಕಾಲದಲ್ಲಿ ಸೂರ್ಯಾಸ್ತಮಯವಾದಸಂತರ ಕತ್ತಲು ಆನಿರ್ಭವಿಸುವುದಕ್ಕೆ ಪೂರ್ವದೇ ಅಗ್ನಿಹೋತ್ರಕರ್ಮವನ್ನಾಚರಿಸಬೇಕು. ಅದೇ ದೇವತೆಗಳ ಆಗಮನಕಾಲವು ಪ್ರಾತ ಕಾಲದಲ್ಲಿಯೂ ಸಹ ಸೂರ್ಯೋದಯಕ್ಕೆ ಪೂರ್ವಭಾವಿಯಾಗಿ ಕತ್ತಲು ನಾಶವಾಗುವಷ್ಟರೊಳಗೇ ಹವಿಸ್ಸನ್ನರ್ಪಿಸತಕ್ಕದ್ದು ಅದೂ ಸಹ ದೇವಯಾಗಕಾಲವು ಇದಲ್ಲದೇ, ಕಾಲಾತಿಕ್ರಮವಾದಾಗ ಈ ಕರ್ಮವನ್ನಾಚರಿಸಿದಾಗ ಈ ಕರ್ಮವನ್ನಾಚರಿಸಿದರೆ, ಆಗ **ಶ್ಯಾಮ** ಮತ್ತು **ಶಬಲ** ಎಂಬೆರಡೂ ಸಹ ಇವನ ಕರ್ಮವನ್ನು ಫಲಭೀವನವನ್ನಾಗಿ ಮಾಡುತ್ತವೆ ಅಹಸ್ಸಿಗೆ **ಶಬಲ**ನೆಂದೂ, ರಾತ್ರಿಗೆ **ಶ್ಯಾಮ**ನೆಂದೂ ಹೆಸರು ಸುಳ್ಳರಾತ್ರಿಯಲ್ಲಿ ಕರ್ಮವನ್ನಾಚರಿಸಿದರೆ **ಶ್ಯಾಮ** ಸಂಜ್ಞಕನಾದ ರಾತ್ರಿಯೂ ಸುಧ್ಯಾಹ್ನದಲ್ಲಿ ಆಚರಿಸಿದರ **ಶಬಲ** ಸಂಜ್ಞಕನಾದ ಅಹಸ್ಸೂ ಸಹ ಇವನ ಕರ್ಮವನ್ನು ನಾಶಮಾಡುತ್ತ ನೆ ಎಂದಿರುತ್ತದೆ ಅಶ್ರುತೋಧಯಾಗದಲ್ಲಿ ತರ್ಪಿತ ನಾದ ಅಶ್ವದ ಭಾಗವನ್ನು ಆಯಾ ದೇವತೆಗಳನ್ನುದ್ದೇಶಿಸಿ ತರ್ಪಿಸುವಾಗ ತೈತ್ತಿರೀಯಸಂಹಿತೆಯಲ್ಲಿ **ಶ್ಯಾಮ** ಮತ್ತು **ಶಬಲ** ಎಂಬ ಸಂಜ್ಞೆಯುಳ್ಳ ದೇವತೆಗಳಿಗೂ ತರ್ಪಿತವಾಗುವಾಗ ಈ ರೀತಿ ತಿಳಿಸಿರುತ್ತದೆ

ಸೂರ್ಯಚಂದ್ರಾಮಸೌ ವೈಕ್ಯಾಭ್ಯಾಗ್ಂ ಶ್ಯಾಮಶಬಲೌ ಮತಸ್ನಾಭ್ಯಾಂ ವ್ಯುಷ್ಟಿಗ್ಂ ರೂಪೇಣ ನಿಮ್ರುಕ್ತಿಮರೂಪೇಣ ॥

(ತೈ ಸಂ ೫-೨-೨೦)

ಸಾಂಗಕಾರ್ಯದ ಆಕಾರದಲ್ಲಿರುವ ಮಾಂಸವು **ಶ್ಯಾಮ** ಮತ್ತು **ಶಬಲ** ಸಂಜ್ಞಕರಾದ **ಸೂರ್ಯ** ಮತ್ತು **ಚಂದ್ರರಿಗೆ** ತರ್ಪಿತನಾಗತಕ್ಕದ್ದು ಎಂದು ವಿಧಿಯಿದೆ **ಶ್ಯಾಮ** ಮತ್ತು **ಶಬಲ**ಗಳು ಸರಮೆಯ ಪುತ್ರರೆಂದು ಬೇರ ಕಡೆಗಳಲ್ಲಿ ತಿಳಿಸಿದೆ

ತತ್ಸತ್ಯಂ ಯತ್ತೇ ಸರಮಾ ಮಾತಾ ಸೀಸರಃ ಪಿತಾ ಶ್ಯಾಮಶಬಲೌ ಭ್ರಾತರೌ ॥

(ಪಾರಸ್ಕರಗೃಹ್ಯಸೂತ್ರ ೧೧೬-೨೪)

ಇತ್ಯಾದಿ ವಾಕ್ಯಗಳು ಯಮನ ಶ್ವಾನಗಳಾದ ಶ್ಯಾಮ ಮತ್ತು ಶಬಲಗಳನ್ನು ನಿರ್ದೇಶಿಸಿವೆ

ಆದರೆ, ತೈತ್ತಿರೀಯ ಸಂಹಿತೆಯಲ್ಲಿ ಉಕ್ತವಾಗಿರುವ **ಶ್ಯಾಮ, ಶಬಲ** ಎಂಬ ರಾತ್ರಿ ಮತ್ತು ಅಹಸ್ಸುಗಳ ಸರ್ವಾಯ ಪದಗಳು ಸೂಚಿಸುವ ತತ್ತ್ವಗಳು, ಮುಂದೆ ಸೂತ್ರಾದಿಗಳಲ್ಲಿ ಇದೇ **ಶ್ಯಾಮ** ಮತ್ತು **ಶಬಲ** ಪದಗಳು ಸೂಚಿಸುವ ತತ್ತ್ವಗಳೂ ಬೇರೆಬೇರೆಯಾದ ಪದಾರ್ಥವಿಶೇಷಗಳು ಎಂದು ಹೇಳುವ ಹಾಗಿಲ್ಲ ಇನೆರಡಕ್ಕೂ ತಾದಾತ್ಮ್ಯವನ್ನು ತೋರಿಸತಕ್ಕ ವೈದಿಕವಾಕ್ಯಗಳೂ ಇರುತ್ತವೆ ತೈತ್ತಿರೀಯ ಸಂಹಿತೆಯಲ್ಲಿ ಅಶ್ವಮೇಧ ಪ್ರಕರಣದಲ್ಲಿ ಯಾವ **ಚಂದ್ರನನ್ನು ಶ್ಯಾಮ**ನೆಂದು ನಿರ್ದೇಶಿಸಿದರೋ ಅದೇ ಚಂದ್ರನನ್ನು ರತಪಥಬ್ರಾಹ್ಮಣದಲ್ಲಿ **ದಿವ್ಯಶ್ವಾ**-ದೇವಲೋಕದ ಶ್ವಾನವೆಂದು ನಿರ್ದೇಶಿಸಿದೆ

ಅಥೈಷ ಸಶ್ವಾದ್ದದೃಶೇ ಸ ಹೈಷ ದಿವ್ಯಃ ಶ್ವಾ ಸ ಯಜಮಾನಸ್ಯ ಪಶೂನಭ್ಯವೇಕ್ಷತೇ ॥

(ಶ ಬ್ರಾ ೧೩-೨-೬-೧)

ಮುಂದೆ ಗೋಚರವಾಗತಕ್ಕ ಚಂದ್ರನೇ ಯಮನ ಶ್ವಾನಗಳಲ್ಲಿ ಒಂದಾದ ದಿವ್ಯಶ್ವಾನವು ಎಂದು ಪ್ರತಿಪಾದಿಸಿದೆ ಇನ್ನೊಂದು ಸೂರ್ಯನೆಂದು ನಿಶ್ಚಯವಾದ ವಿಷಯವೇ ಆಗಿರುತ್ತದೆ

ಶ್ಯಾಮಾಚ್ಛಬಲಂ ಪ್ರಪದ್ಯೇ ಶಬಲಾಚ್ಛ್ಯಾಮಂ ಪ್ರಪದ್ಯೇ ॥

(ಛಾ ಉ ಅ. ೧೩.)

ಇತ್ಯಾದಿ ಸ್ಥಳಗಳಲ್ಲಿಯೂ ಸಹ ಸೂರ್ಯಾಚಂದ್ರಮಸ್ಸುಗಳನ್ನೇ ನಿರ್ದೇಶಿಸಿದೆಯೆಂದು ಕಲವರ ಮತವಾಗಿದೆ ಈ ಸೂರ್ಯಾಚಂದ್ರಮಸ್ಸುಗಳೇ, ಜಗತ್ತನ್ನು ಕಾಯುವ ದಿವ್ಯಶ್ವಾನಗಳೆಂದರೆ ತಪ್ಪಾಗಲಾರದು

"The conclusion derived from all these statements is that in the Samhitas and Brahmanas the two dogs of Yama are familiarly identified with the Sun and the Moon."

(Bloomfield, Journal of American Oriental Society Vol 15 P, 171)

ಮೇಲಿನ ಸಂಹಿತಾ ಮತ್ತು ಬ್ರಾಹ್ಮಣ ಸಾಕ್ಷ್ಯಗಳ ಆಧಾರದಿಂದ ನೋಡಿ, ಇಲ್ಲಿ ವರ್ಣಿತವಾಗಿರುವ ಯಮನ ಶ್ವಾನಗಳು **ಸೂರ್ಯ** ಮತ್ತು **ಚಂದ್ರ**ರನ್ನು ನಿರ್ದೇಶಿಸಿದೆಯೆಂದು ನಿಶ್ಚಿತವಾಗಿ ಹೇಳಬಹುದು ಎಂದು Bloomfield ಎಂಬ ಆಂಗ್ಲಸಂಶೋಧಕರು ಸಹ ತಮ್ಮಭಿಪ್ರಾಯವನ್ನು ತಿಳಿಸಿದ್ದಾರೆ

೨. ದಧಿಕ್ರಾದೇವತಾ

ಈ ಭಾಗದಲ್ಲಿ ಏನಿಲ್ಲವೆಂದು ಸಂಶೋಧಿಸಿದ ಮೇಲೆ ಸೂಕ್ತದಲ್ಲಿ ಪ್ರತಿಪಾದಿತವಾಗಿರುವ **ದಧಿಕ್ರಾ** ದೇವತೆಯ ಸ್ವರೂಪ ಏನೆಂಬುದನ್ನು ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ ಇಂದ್ರನ ಇಪ್ಪತ್ತಾರು ಹೆಸರುಗಳಲ್ಲಿ ಇದೊಂದು ಎಂಬುದಾಗಿ ಬೃಹದ್ದೇವತಾಕಾರನಿಂದ ತಿಳಿಯುತ್ತದೆ ಇಂದ್ರನಿಗೆ ಈ ಹೆಸರು ಏತಕ್ಕೆ ಪ್ರಸಿದ್ಧವಾಯಿತು ಎಂಬುದನ್ನು ತಿಳಿಸುತ್ತಾ ಈ ಪದದ ನಿರ್ವಚನವನ್ನು ಬೃಹದ್ದೇವತೆಯಲ್ಲಿ ಈ ರೀತಿ ತಿಳಿಸಿದೆ

ಆಸಾಮುಂಬರಗರ್ಭಾರ್ಹಂ ಆದಧತ್ಪೋಷ್ಯಪ್ಪಮಾಸಿಕಂ ।
ಯತ್ಕ್ರಂದತ್ಯಸಕೃನ್ಮಧ್ಯೇ ದಧಿಕ್ರಾಸ್ತೇನ ಕಥ್ಯತೇ ॥

(ಬೃ ದೇ ೩ ೫೬)

ಆಂತರಿಕ್ಷನಾದ ಜಲಗರ್ಭನನ್ನು ಧರಿಸಲುವುದರಿಂದಲೂ ಎವುಗಳ ನಡುವೆ ಎಂಬ ತಿಂಗಳು ಗರ್ಜನೆಯನ್ನುಮಾಡುವುದರಿಂದಲೂ ಇಂದ್ರನಿಗೆ ದಧಿಕ್ರಾ ಎಂಬ ಹೆಸರು ಎಂದು ತಾತ್ಪರ್ಯ ಈ ನಿರ್ವಚನವು ನಿರುಕ್ತಕಾರರು ಹೇಳಿರುವ ಮೂರು ವಿವರಣೆಗಳಲ್ಲಿ ಒಂದು ಮಾತ್ರ ಇದೇ ಪದದ ತಾತ್ಪರ್ಯವನ್ನು ನಿರುಕ್ತಕಾರರೂ,

ದಧತ್ಕ್ರಮೀತಿ ವಾ ದಧತ್ಕ್ರಂದತಿ ವಾ ದಧದಾಕಾರೀ ಭವತೀತಿ ವಾ ॥

(ನಿ. ೨ ೨೭)

ಉದಕಗರ್ಭನನ್ನು ಧರಿಸಿ ಸಂಚರಿಸುವುದರಿಂದಾಗಲಿ, ಉದಕವನ್ನು ಧರಿಸಿ ಗರ್ಜನೆಮಾಡುವುದರಿಂದಾಗಲಿ ಉದಕವಾ ಆದರ ರೂಪವನ್ನೇ ಹೊಂದಿವುದರಿಂದಾಗಲಿ **ದಧಿಕ್ರಾ** ಎಂಬ ಹೆಸರು ಎಂದು ತಿಳಿಸಿದ್ದಾರೆ (ಈ ದಧತ್ಕರ್ಮನಿರುವುದರಿಂದಲೇ ಇಂದ್ರನಿಗೆ **ಧಾತೃ**ವೆಂಬ ಹೆಸರೂ ಉಂಟು ಎಂದು ಬೃಹದ್ದೇವತೆಯು ಪಿವರಿಸುತ್ತದೆ ಆದರೆ ಸಾಯಣರು ಬ್ರಾಹ್ಮಣವಾಕ್ಯವನ್ನುದಾಹರಿಸಿ ಇದು **ಅಗ್ನಿಯ** ಪರ್ಯಾಯನಾಮವೆಂದು ತಿಳಿಸಿದ್ದಾರೆ

ಸತ **ವಾಜಿನಂ** (ಋ. ಸಂ. ೪.೩೮.೭) ಎಂಬ ಸೂಕ್ತಕ್ಕೆ ಭಾಷ್ಯಕಾರನು ಬರೆದಿರುವಾಗ ಈ ರೀತಿ ವಿವರಿಸಿದ್ದಾನೆ

ವಾಜಿನಂ ಗಮನವಂತಂ । ಅಶ್ವರೂಪಂ ವಾ ದೇವಂ ಅಗ್ನೇರಶ್ವರೂಪಸ್ಯೈವ ದಧಿಕ್ರಾಖ್ಯತ್ವಾತ್ ಅಗ್ನೇಸ್ತದ್ರೂಪತ್ವಂ ಬ್ರಾಹ್ಮಣೇ ಸಮಾಮ್ನಾತಂ । ತಾನಗ್ನಿರಶ್ವೋ ಭೂತ್ವಾವಹದ್ದೇವಾನ್ । ಇತಿ ॥

ವಾಜಿ ಶಬ್ದಕ್ಕೆ ಗಮನವುಳ್ಳದ್ದೆಂಬರ್ಥ ಪ್ರಾಭಾಕರಮತಾನುಸಾರಿಗಳಾದ ಈ ಭಾಷ್ಯಕಾರರು ಅಗ್ನಿಯೇ ಕುದುರೆಯ ರೂಪವನ್ನು ತಾಳಿದನು ಎಂಬ ವ್ಯಾಖ್ಯಾನಾನುಸಾರವಾಗಿ ಸೂಕ್ತವೆಲ್ಲವೂ ಅಗ್ನಿಪರವಾಗಿರುವುದೆಂದು ಸೂಕ್ತಕರ್ತೃವಾದ ಸೂಕ್ತದೃಷ್ಟಾರನಾದ ಗೃತ್ಸಮದನ ಮಾತನ್ನು ತಿರಸ್ಕರಿಸಿದ್ದಾರೆ. ಏಕೆಂದರೆ, ಎಲ್ಲವು ಸೂಕ್ತವೂ ಒಂದೇ ದೇವತೆಯ ಪರವಾಗಿರಬೇಕೆಂಬ ನಿಯಮವಿಲ್ಲವಾದ್ದರಿಂದ ಅಗ್ನಿಯ ಕುದುರೆಯ ರೂಪವನ್ನು ತಿಳಿಸುವ ಬ್ರಾಹ್ಮಣವಾಕ್ಯವು ಅಗ್ನಿಪರವಾಗಿರಬೇಕೆಂಬುದನ್ನು ತೋರಿಸಿದ್ದಾರೆ.

ಇಂದ್ರಮಿನೇದುಭಯೇ ಏ ಹ್ವಯಂತ ಉದೀರಾಣಾ ಯಜ್ಞಮುಪಪ್ರಯಂತಃ ।

(ಋ. ಸಂ. ೪.೩೮.೨)

ಇತ್ಯಾದಿ ಸೂಕ್ತಗಳಲ್ಲಿ ಇಂದ್ರನನ್ನು ಕರೆಯುವಂತೆ ಈ **ದಧಿಕ್ರಾ**ದೇವತೆಯನ್ನು ಮುನ್ನೆಲೆಗೆ ಪ್ರಮುಖವಾಗಿ ತರಬೇಕಾದರೆ ಇಂದ್ರನಿಗೂ ಈ ದೇವತೆಗೂ ಭಿನ್ನತೆಯನ್ನು ತೋರಿಸಿ ಇವನಿಗೆ ಪ್ರತ್ಯೇಕವಾದ ಮಹತ್ವವನ್ನು ಕಲ್ಪಿಸಿಕೊಡಬೇಕಾಗಿರುವುದೆಂಬ ಉದ್ದೇಶಕ್ಕೆ ಇರಬಹುದಾದ ಲಕ್ಷಣಗಳನ್ನೆಲ್ಲವನ್ನು ಈ ದೇವತೆಯಲ್ಲಿಯೂ ತೋರಿಸಿ ಇವರ ಮಹತ್ವವನ್ನು ಸಾರಿದ್ದಾರೆ. ಉದಾಹರಣೆಗೆ—

ದಧಿಕ್ರಾವಾ ಪೃಥಿನೋ ವಾಜ್ಯರ್ವಾಗ್ರೇ ರಥಾನಾಂ ಭವತಿ ಪ್ರಜಾನನ್ ।
ಸಂವಿದಾನ ಉಷಸಾ ಸೂರ್ಯೇಣಾದಿತ್ಯೇಭಿರ್ವಸುಭಿರಂಗಿರೋಭಿ ।

(ಋ. ಸಂ. ೪.೩೯.೪)

ಎಲ್ಲಕ್ಕಿಂತ ಮುಂದೆ ಸಾಗುವವನೂ, ವೇಗವಾಗಿ ಓಡುವ ಎಷ್ಟು **ದಧಿಕ್ರಾ**ಸಂಜ್ಞೆಯ ಕುದುರೆಗಳಿವೆಯೋ ಅವುಗಳಿಗಿಂತಲೂ ಮುಂದೆ ಸಾಗುವವನು, ಸಾರಥಿಯು, ರಥಿಕರು, ಸೈನಿಕರು ಇವರೆಲ್ಲರಿಗಿಂತ ಮುಂದೆ ಸಾಗುವವನು, ಉಷಸ್ಸು, ಸೂರ್ಯ, ಆದಿತ್ಯರು, ವಸುಗಳು ಮತ್ತು ಅಂಗಿರಸ್ಸುಗಳಿಗೆ ಸಮಾನವಾದ ಶಕ್ತಿಯನ್ನು ಹೊಂದಿರುವವನು (**ಐಕಮತ್ಯಂ ಪ್ರಾಪ್ತಃ ಇತ್ಯರ್ಥಃ**) ಎಂಬ ಪಾರ್ಥನೆಯು ಲೌಕಿಕರಾದ ಎಷ್ಟೋ ವಿದ್ವಾಂಸರಿಗೆ ಭಿನ್ನವಾದ ರೀತಿಯಲ್ಲಿ ಸೂರ್ಯಾದಿದೇವತೆಗಳೊಡನೆ ತಾದಾತ್ಮ್ಯಸಂಬಂಧವನ್ನು ಹೊಂದಿರುವ ಮತ್ತೊಬ್ಬ ದೇವತೆಯೆಂಬ ಭಾವನೆಯನ್ನುಂಟುಮಾಡಿದೆ. ಸಾಧಾರಣವಾಗಿ ಋಗ್ವೇದದಲ್ಲಿ ಜೊತೆಜೊತೆಯಲ್ಲಿ, ಈ ದೇವತೆಗಳಿಗೆ ವಿಶೇಷವಾದ ಇರತ್ತೆ ಸ್ತುತಿಯೂ ಇರುತ್ತದೆ

ದಧಿಕ್ರಾವ್ಣ ಇದು ನು ಚರ್ಕಿರಾಮ ವಿಶ್ವಾ ಇನ್ಮಾಮುಷಸ ಸೂದಯಂತು ।
ಅಪಾಮಗ್ನೇರುಷಸಃ ಸೂರ್ಯಸ್ಯ ಬೃಹಸ್ಪತೇರಾಂಗಿರಸಸ್ಯ ಜಿಷ್ಣೋಃ ॥

(ಋ. ಸಂ. ೪.೪೦.೫)

ಇತ್ಯಾದಿ ಸೂಕ್ತಗಳಲ್ಲಿ **ದಧಿಕ್ರಾ**ದೇವತೆಯನ್ನು ಅಗ್ನಿ, ಉಷಸ್ಸು, ಆದಿತ್ಯ ಇತ್ಯಾದಿ ದೇವತೆಗಳ ಜೊತೆಯಲ್ಲಿಯೇ ಸ್ತುತಿಸಿದೆ. ಉಷಸ್ಸಿಗೂ, ಸೂರ್ಯನಿಗೂ ಅತ್ಯಂತ ಸಾಮೀಪ್ಯವಿರುವುದರಿಂದ, ಎಲ್ಲೇ ಸಾಮೀಪ್ಯವಿದ್ದರೂ ಈ ದೇವತೆಗೂ ಉಷಸ್ಸಿಗೂ ನೂಡನೆ ಇರುತ್ತದೆಯೆಂಬುದಕ್ಕೆ ಎಷ್ಟೋ ಕಡೆಗಳಲ್ಲಿರುವ ಸ್ತುತಿಗಳು ಆಧಾರವಾಗುತ್ತವೆ. ಉಷಸ್ಸಿನೊಡನೆ ನಿಕಟವಾದ ಸಂಬಂಧವನ್ನಿಟ್ಟಿರುವ ಸೂರ್ಯನೂ ಸಹ ತನ್ನದೇ ಆದ ಕೆಲವು ವಿಶೇಷಗಳಲ್ಲಿ ಸ್ತುತಿಸಲ್ಪಟ್ಟಿದ್ದಾನೆ. ಉದಾಹರಣೆಗೆ—

ದೇವಾನಾಂ ಚಕ್ಷುಃ ಸುಭಗಾ ವಹಂತೀ ಶ್ವೇತಂ ನಯಂತೀ ಸುದೃಶೀಕಮಶ್ವಂ ।
ಉಷಾ ಅದರ್ಶಿ ರಶ್ಮಿಭಿರ್ವ್ಯಕ್ತಾ ಚಿತ್ರಮುಷಾ ವಿಶ್ವಮನುಪ್ರಭೂತಾ ॥

(ಋ ಸಂ ೬.೬೫.೩)

ಲೋಕಕ್ಕೆ ಮಂಗಳಕಾರಿಯಾದ, ಪ್ರಪಂಚಕ್ಕೆ ಚಕ್ಷುಸ್ಸನ್ನು ಕೊಡಿಸುವವಳೂ, ತಕ್ಷಣಕಾರಿಯಾದ ತನ್ನ ಕಿರಣವನ್ನು ಸುಂದಿಬ್ಬಿಕಾಂಡು ಬಂಚಿಂಪಸುವವಳೂ ಆದ ಉಷೋದೇವಿಯು ತನ್ನ ರಶ್ಮಿಗಳಿಂದ ಸ್ಪಷ್ಟವಾಗಿದ್ದಾಳೆಂದು ಸರ್ಣನ ನಾಗಿರುವಾಗ ಇಲ್ಲಿ ಕಿರಣರೂಪವಾದ ಉಷೋದೇವಿಯ ಸೂರ್ಯನಿಗೆ **ದಧಿಕ್ರಾ** ಎಂಬ ನಾಮವೂ ಸ್ವಾಭಾವಿಕವಾಗಿರುವುದು ಎಂದು ಕೆಲವರು ಅಭಿಪ್ರಾಯಪಡುತ್ತಾರೆ **ದಧಿಕ್ರಾ —ದಧತ್ಕ್ರಂದತಿ** ಎಂ ನಿರ್ವಚನದ ಸೂರ್ಯನ ಕರ ರಸ್ಮಿ ಸ್ವರೂಪವಾಗಿ ತಿಳಿಸುತ್ತಾರೆ ಈ ಅಭಿಪ್ರಾಯಕ್ಕೆ ಸಾಧಕವಾಗಿರುವ ಕೆಲವು ಮಂತ್ರಗಳು ಹೀಗಿವೆ

ಯೋ ಅಶ್ವಸ್ಯ ದಧಿಕ್ರಾವ್ಣೋ ಅಕಾರೀತ್ಸಮಿದ್ಧೇ ಅಗ್ನಾ ಉಷಸೋ ವ್ಯುಷ್ಟೌ ।
ಅನಾಗಸಂ ತಮದಿತಿ ಕೃಣೋತು ಸ ಮಿತ್ರೇಣ ವರುಣೇನಾ ಸಜೋಷಾಃ ॥

(ಋ ಸಂ ೪.೩೯.೪)

ಉಷಃ ಕಾಲದಲ್ಲಿ ಯಜ್ಞಕಾರ್ಯವು ಸಮ್ಯಕ್ಪ್ರತಿಷ್ಠಾಪನೆಯಾದಾಗ ಯಾವ ಅತ್ವರ್ಯುವು **ದಧಿಕ್ರಾವಾ** ದೇವತೆಯು ಸ್ವರೂಪವಾಗಿರುವನೋ, ಅಂತಹ ಸೂರ್ಯನಾರಾಯಣನಿಗೆ ಮಿತ್ರಾವರುಣರೊಂದಿಗೆ ಕೂಡಿ ಯಜಮಾನನನ್ನು ಪಾಪರಹಿತನನ್ನಾಗಿ ಮಾಡಿದಳು ಎಂದು ಪ್ರಾರ್ಥಿತರಾಗಿದ್ದಾನೆ ಅತ್ವರ್ಯುವಿನಿಂದ ಸಂಸ್ಕರ್ತನು ಮಿತ್ರಾವರುಣರ ಚಕ್ಷುಸ್ಸು ಎಂದು ಅನೇಕರು ಪ್ರಕಾಶಿತನಾಗುವನು ಆದುದರಿಂದ ಅತ್ವರ್ಯುವಿನ ಸಂಸ್ಕರ್ತನು **ದಧಿಕ್ರಾವಾ** ದೇವತೆಯೆಂದು ಸ್ಪಷ್ಟವಾಗಿರುವನು ಎಂದು ಇಂತಹ ತಿರ್ಧಾರಕ್ಕೆ ಸೇರಿ ನಿಷ್ಕರ್ಷಿಸಬಹುದೆಂದು ಎನಿಸಿ ಪ್ರತಿಕಾಗದೆ ತಪ್ಪದೇ ಸಾಧ್ಯವೇ ಸಂದರ್ಭವು ಳಿನೇ ಸೂಕ್ತವೆ **ದಧಿಕ್ರಾ** ದೇವತಾಕವಾಗಿದೆ ಆದರೆ ಪ್ರಸಕ್ತವಿರುವ ಕೊಂಪ್ಪವು ಸೂರ್ಯದೇವತಾಕವೆಂದು ಭಾವಿಸಿ ಮಂತ್ರವನ್ನು ವಿವರಿಸುತ್ತಿರುವ ದಧಿಕ್ರಾರೂಪವಿರುವ ಸೂರ್ಯನೇ (ಅಥವಾ ಕಿರಣವು) ಈ ಅರ್ಥವಾಗಿ ಸ್ವರಂಜಿತನಾಗಿದ್ದಾನೆ ಎಂದು ಮಾಡಬಹುದು **ಹಂಸಃ ಶುಚಿಷತ್** (೪.೪೦.೫) ಇತ್ಯಾದಿ ಮಂತ್ರದಲ್ಲಿನ **ದಧಿಕ್ರಾ** ದೇವತೆಯೆ ನಿರ್ವಚನಾಂತ ಗಳನ್ನು ತಿಳಿಸಿರುವುದರಿಂದ **ದಧಿಕ್ರಾವ**ನ್ನು ಕರಾದ ದೇವತೆಯು ಅತ್ವರ್ಯುವಿನಿಂದ ಸಂಸ್ಕರ್ತನೇ ಎಂದು ಹೇ ದವ ತಾಗಲಾರದು

೪. ನಿರ್ಋತಿಯ ಸ್ವರೂಪ

ನಿರ್ಋತಿಯು ಸ್ತ್ರೀಸ್ವರೂಪಳಾದ ರಕ್ತದೇವತೆಯೆಂದು ಪ್ರಸಿದ್ಧವಾಗಿದೆ **ಪರಾತರಂ ಸು ನಿರ್ಋತಿ-ರ್ಜಿಹೀತಾಂ** (೧೦.೫೯.೬) ಇತ್ಯಾದಿಯಲ್ಲಿ ನಿರ್ಋತಿರೂಪನಾದ ರಕ್ತೆ ದೂರವಿರಲಿ ಎಂದು ಪ್ರಾರ್ಥಿಸಿದ ಆರೋಗ್ಯಕ್ಕೆ, ಐಶ್ವರ್ಯಕ್ಕೆ ಅಸ್ಥಿರವಿಲ್ಲದಂತೆ ಸ್ಥಿರವಾಗಿರುವ ರಕ್ತೆಯೆಂದು ನಿರ್ಋತಿದೇವತೆಯನ್ನು ವರ್ಣಿಸಿದ ದುಷ್ಟರನ್ನೂ, ಅಂಹಸ, ಎನಿಸಿರುವ ಪಾಪಾದಿ ದುಸ್ಸಂಗಗಳನ್ನೂ ಸಂಬಂಧವನ್ನು ತಿಳಿಸಿದ ತದುದೆಂದಲೇ ಈ ದುಷ್ಟರಕ್ತೆಯನ್ನು ನಿವಾರಿಸಿದರೆ, ತದರ್ಥವಾದ ಕರ್ಮವು ಸಿದ್ಧಿತವಾಗುವೆ ಈ ಕರ್ಮದ ವಿವರಣೆಯನ್ನು ಈ ರಕ್ತೆಯ ಸ್ವರೂಪವರ್ಣನೆಯೂ ಇರುತ್ತದೆ ಎಂದರೆ ಸಾರಾಂಶವನ್ನು ಮಾತ್ರ ಇಲ್ಲಿ ತಿಳಿಸಲಾಗುತ್ತದೆ

अथातोऽनिर्ऋतीरहरन्ति । पाशान्वै निर्ऋतिस्तद्यदेषां ताभिः पाशान्तं निर्ऋत्यमपाघ्नत ॥

(ಕೃ ಯಜು ೬ ೨ ೭-೧)

कृष्णा भवन्ति कृष्णगंहि तत्तमु आसीदथो कृष्णा वै निर्ऋतिः ॥

(ಕೃ ಯಜು ೬ ೨ ೭-೬)

ಇತ್ಯಾದಿ ಬ್ರಾಹ್ಮಣವಾಕ್ಯಗಳು ನಿರ್ಋತಿಯೆನ್ನುವ ಪಾರಿಭಾಷಿಕಶಬ್ದವನ್ನು ಮುಂದಿಟ್ಟು ತನುಸ್ಪರ್ಶದಿಂದ ಸೂರ್ಯಕಾಂತಿಯಂತೆ ದೇವತಾಶಕ್ತಿಯೊಂದು ನಮ್ಮಲ್ಲಿ ತಿಳಿವಳಿಕೆಯ ಶ್ರದ್ಧಾವನ್ನು ಅರಳಿಸುವಲ್ಲಿ ಕರ್ಮಾಚರಣೆಯೆನ್ನು ನಿಧಿಸಿನೆ

ಕಲ್ಪಿಸಿದಲ್ಲಿ ನಿರ್ಋತಿಪದವನ್ನು ಶ್ರದ್ಧಾದೇವತೆಯ ಅರ್ಥಪ್ರಯೋಗವನ್ನಾಗಿ ಶ್ರಯಿಸಿದರೆ ಅದಾಗಿರಲಿ

इयं वै निर्ऋतिरियं वै तं निरहार्यति ॥

(ಕೃ ಯಜು ೬ ೨ ೭-೧೧)

ಇತ್ಯಾದಿ ಸ್ಥಳಗಳಲ್ಲಿ ಶ್ರದ್ಧೆಯೇ ನಿರ್ಋತಿಯೆಂದಿರುವುದರಿಂದ ನಿರ್ದಿಷ್ಟವಾಗಿ ಶ್ರದ್ಧಾದೇವತೆಯನ್ನು ಸಮರ್ಥಿಸುವ ಮಂತ್ರಗಳು ಸಹ ಉದಾಹರಣೆಗೆ—

तिसृणां देवपत्नीनां निर्ऋतीरुपासते दीर्घश्रुतो वि हिंसानंति वह्नयः ।
तासां नि चिक्युः कवयो निदानं परेषु या गुह्येषु व्रतेषु ॥

(ಋ ಸಂ ೧೦೧೮೫-೩)

ಎಂಬ ನಿರ್ಋತಿ ಶಬ್ದಕ್ಕೆ ಶ್ರದ್ಧಿಯೆಂದರ್ಥವಾಗಿದೆ ಸಿಳುಂಬಿವಿನಲ್ಲಿಯೂ ಈ ಪದವನ್ನು ಶ್ರದ್ಧಿನಾಮಗಳಲ್ಲಿ ಎಣಿಸಿದೆ ಸಂಸಾರದಲ್ಲಿ ಮನಸ್ಸಾರಗಳು ಸರ್ವದಾ ಚಲಿಸುತ್ತಿರುವುದರಿಂದ ಅಂತಹ ವ್ಯವಹಾರಕರ್ಮವನ್ನು ನಿರ್ವಹಿಸುವ ಲೋಕಗಳೆಲ್ಲ ನಿರ್ಋತಿಯೆಂದು ಹೆಸರು ಎಂದು ಭಾಷ್ಯವು ತಿಳಿಸುತ್ತದೆ

೫ ವಸಿಷ್ಠಪುತ್ರರ ಸುಪತ್ನ್ಯ

ಋ ಸಂ ೭-೩೩ ಸೂಕ್ತದಲ್ಲಿ ವಸಿಷ್ಠಪುತ್ರರನ್ನು **शुशुक्वांसः** ಎಂಬ ವಿಶೇಷಣದಿಂದ ಗುರ್ತಿಸಿ ಸರ್ವಜ್ಞರೆಂದರ್ಥವು. ಈ ಸರ್ವಜ್ಞತ್ವದಲ್ಲಿ ಒಂದು ವಿಶೇಷವಿರುತ್ತದೆ ಅದು ಯಾವ ವಿಧವಾದ ವಿಶೇಷವೆಂದರೆ, ಲೋಕ ನಿರ್ವಹಣಕ್ಕೆ ಲೋಕದಲ್ಲಿ ಅನ್ಯಾಯಾದಿ ದುಷ್ಟವರ್ತನಗಳನ್ನು ತಪ್ಪಿಸಿ ಧರ್ಮರಾಜ್ಯವನ್ನಾಗಿ ಸುವರ್ತಿಸಲು ರಾಜನಿರಬೇಕು. ಈ ರಾಜನಿಗೆ ಸದುಪದೇಶಮಾಡಲು ಶ್ರೇಷ್ಠನಾದ ಪುರೋಹಿತನಿರಬೇಕು ರಾಜನು ಧರ್ಮನಿಯಾಮಕನಾಗಬೇಕು ಯಾವ ಧರ್ಮನೆಂದರೆ, ಋತದ ಮಾರ್ಗಾನುಸಾರಿಯಾದ ವಿಶ್ವಧರ್ಮ. ಈ ವಿಶ್ವಧರ್ಮವನ್ನು ಪಾಲಿಸಲು ಜಗತ್ತಿಗೆ ಈಶ್ವರನಾದ ಆದಿತ್ಯನು ಯಾವರೀತಿ **ऋतपाः, ऋतस्य गोपाः** ಇತ್ಯಾದಿ ವಿಶೇಷಣಗಳಿಂದ ವರ್ಣಿತನಾಗಿ ಋತದ ರಕ್ಷಕನಾಗಿಯೂ ಜಗತ್ತಿಗೆ ಋತದ ಮಾರ್ಗವನ್ನು ತೋರಿಸುತ್ತಿರುವನೋ, ಅದರಂತೆ ಪೃಥ್ವಿಯ ರಾಜನೂ ಸಹ ಅದೇ ನೀತಿಯನ್ನನುಸರಿಸಬೇಕು.

ಆದಿತ್ಯನು ಸರ್ವಲೋಕಕ್ಕೂ ಪ್ರಭುವಾಗಿ, ಪೃಥಿವ್ಯಾದಿ ಮೂರು ಲೋಕಗಳಲ್ಲೂ ಸಹ **ಅಗ್ನಿ**, ಇಂದ್ರ, ಮತ್ತು **ಆದಿತ್ಯ**ರೂಪದಲ್ಲಿ ಮೂರು ಲೋಕಗಳಲ್ಲಿಯೂ ವೈಯಕ್ತಿಕವಾದ ಪ್ರಭಾವವನ್ನು ಬೀರಿ ಮೂರು ಲೋಕಗಳಿಗೂ ಮಾರ್ಗದರ್ಶಕನಾಗಿರುತ್ತಾನೆ ಪಾರ್ಥಿವವಾದ ರಾಜನು ಈ ದಿವ್ಯತತ್ತ್ವಗಳನ್ನರಿಯಬೇಕಾದರೆ, ಈ ತತ್ತ್ವ ಜ್ಞಾನವುಳ್ಳ ಪುರೋಹಿತನಿದ್ದೇ ಇರಬೇಕು ಈ ದಿವ್ಯಜ್ಞಾನವು ವಸಿಷ್ಠಪುತ್ರರಿಗಿದ್ದಿತು ಎಂದು ಈ ಸ್ಮರಣವು ತಿಳಿಸುತ್ತದೆ ಅದು ಹೇಗೆಂದರೆ —

त्रयः कृण्वन्ति भुवनेषु रेतस्तिस्रः प्रजा आर्या ज्योतिरग्राः ।
त्रयोः घर्मास उषसं सचन्ते सर्वां इत्ताँ अनु विदुर्वसिष्ठाः ॥

(ಋ ಸಂ ೭ ೫೫ ೭)

भूर्भुवस्स्वः ಎಂಬ ಮೂರು ಲೋಕಗಳಿಗೂ ಅಧಿಪತಿಗಳಾದ ಇಂದ್ರಾಗ್ನಿ ಮತ್ತು ಆದಿತ್ಯರ ದಿವ್ಯಸ್ವರೂಪವನ್ನು ವಸಿಷ್ಠಪುತ್ರರು ಅರಿತಿದ್ದಾರೆ ಎಂದು ಇವರ ಸ್ತುತಿಸಲಾಗಿದೆ ಇಂತಹ ದಿವ್ಯಜ್ಞಾನವುಳ್ಳ ಪುರೋಹಿತನಿರುವ ರಾಜನು ತನ್ನ ರಾಜ್ಯವನ್ನು ಋತದ ಸಾರ್ಗಕ್ಕೆ ಅನುಸಾರನಾಗಿ ನಿರ್ವಹಿಸಿ ಲೋಕಕ್ಷೇಮಕ್ಕೆ ಸಾಧನನಾಗುತ್ತಾನೆ ಎಂದು ಪ್ರತಿಪಾದಿಸಿದೆ

೬ ಅಜ ಏಕಪಾತ್

ಅಜ ಏಕಪಾತ್ ಎಂಬ ದೇವತೆಯ ಸ್ವರೂಪವನ್ನು ಅನೇಕ ವಿಧಗಳಲ್ಲಿ ವಿವರಿಸಿದೆ ಕೆಲವರು, ಜನ್ಮ ರಹಿತನಾದ ಈಶ್ವರನೆಂದೂ, ಇನ್ನು ಕೆಲವರು ಒಂದೇ ಕಾಲುಳ್ಳ ಆಡೆಂದೂ (ಇದು ಆಂಗ್ಲಪಂಡಿತರಲ್ಲಿ ಒಬ್ಬರು ಹೇಳುವುದು ಅನೇಕ ಆಂಗ್ಲಪಂಡಿತರೇ ಈ ಅರ್ಥವನ್ನು ಒಪ್ಪುವುದಿಲ್ಲ) ಮತ್ತು ಏಕಪಾದವುಳ್ಳ ಆದಿತ್ಯನೆಂದು ಕೆಲವರೂ ತಿಳಿಸುತ್ತಾರೆ ಸೂರ್ಯನಂದರ್ಭವಾಡುವುದೇ ವೈದಿಕವಾಕ್ಯಗಳಿಗೆ ಅನುಸಾರವಾಗಿರುತ್ತದೆ

अज एकपादुदगात्पुरस्तात् । विश्वा भूतानि प्रति मोदमानः । तस्य देवाः प्रसवं यन्ति सर्वे ।

(ತೈ ಬ್ರಾ ೩-೧-೨೮)

ಅಜ ಏಕಪಾದ್ದೇವತೆಯು ಪೂರ್ವದಿಕ್ಕಿನಲ್ಲಿ ಆವಿರ್ಭೂತನಾಗಿದ್ದಾನೆ ಇವನು ಲೋಕಕ್ಕೆಲ್ಲ ಹರ್ಷವನ್ನುಂಟು ಮಾಡುತ್ತಾನೆ ಇವನ ನಿರ್ದೇಶವನ್ನನುಸರಿಸಿ ಸಕಲ ದೇವತೆಗಳೂ ವ್ಯವಹರಿಸುವರು ಎಂಬ ವರ್ಣನವು ಸೂರ್ಯನನ್ನು ದ್ಯೋತಿಸಿರುತ್ತದೆ. ನಿರುಕ್ತವಾಕ್ಯಕ್ಕೆ ವ್ಯಾಖ್ಯೆಯನ್ನು ಬರೆಯುವಾಗ ದುರ್ಗಾಚಾರ್ಯರು ಈ ಪದವು ಅಗ್ನಿಯನ್ನಾಗಲಿ ಅಥವಾ ಸೂರ್ಯನನ್ನಾಗಲಿ ನಿರ್ದೇಶಿಸುತ್ತವೆ ಎಂದು ತಿಳಿಸಿದ್ದಾರೆ (ನಿ ಟೀ ೧೨-೩೬)

ಋಕ್ಸಂಹಿತೆಯಲ್ಲಿ **ಅಹಿರ್ಬುಧ್ನ್ಯ** ಮತ್ತು **ಅಜಏಕಪಾತ್** ಎಂಬ ಎರಡು ದೇವತೆಗಳನ್ನು ಒಟ್ಟಿಗೆ ಪ್ರಸ್ತಾಪಿಸುವ ಭಾಗಗಳು ಅನೇಕವಿವೆ

ಅತಿ ಪ್ರಾಚೀನವೂ, ಅತಿಗಹನವೂ, ಅತಿ ವಿಸ್ತಾರವೂ, ಸರ್ವಶಾಸ್ತ್ರಗಳಿಗೂ, ಸೂಲಭೂತವೂ ಆದ ಜಂಬೆ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ. ಆದರೂ ಇಂತಹ ಮಹತ್ಕಾರ್ಯದಿಂದ ನಂಡಿತವಾನುರಾವಿಯವಾದ ಸಕಲ ಜನರಿಗೂ ಚಾರಿತ್ರಿಕ ಪ್ರಜ್ಞೆಯನ್ನು ಸಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಬೇಕೆಂಬ ಘನವಾದ ಉದ್ದೇಶದಿಂದ ಕರ್ನಾಟಕಸಿಂಹಾಸನಾಧೀಶ್ವರರೂ ವೇದವಿದ್ಯಾಭಿವಾನಿಗಳೂ, ಸ್ವಯಂಪಂಡಿತರೂ, ಶ್ರುತಾನುರಾಗಿಗಳೂ, ದೈವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ ಸಿ ಎಸ್,ಐ.** ಮಹಾಸ್ವಾಮಿಗಳವರೂ ಆದರೆ ಸರ್ಕಾರದವರೂ ಒಪ್ಪಿದ್ದಕ್ಕಾಗಿದ್ದಾದ ಈ ಗ್ರಂಥಪ್ರಕಟಿಸಲೆಂದು ತಮ್ಮ ಉದಾರಾಶ್ರಯದಿಂದ ಸ್ವಾತ್ಮಾಪೆಸಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾತ್ತ ಗುಣವಾದ ನಮ್ಮ ಸ್ವಾಮಿಗಳವರಿಗೂ ಅವರ ಕುಟುಂಬಕ್ಕೂ ರಾಜಕುಮಾರಿಯರಿಗೂ, **ಶ್ರೀಕಂಠದತ್ತ ನರಸಿಂಹರಾಜ ಒಡೆಯರ್**, ಎಂಬ ಶುಭಾನಾಮಾಂಕಿತರಾದ ರಾಜಕುಮಾರರಿಗೂ, ನಮ್ಮ ಸ್ವಾಮಿಕಾರ್ಯಗಳಿಗೆ ಸದಾ ನೆರವಾಗುತ್ತಿರುವ ಸರ್ವೇಶ್ವರನು ಐಹಿಕಫಲಗಳಾದ ಆಯುರಾರೋಗ್ಯೈಶ್ವರ್ಯಾದಿಸಕಲಸಂಪತ್ತುಗಳನ್ನೂ ಪಾರಮಾರ್ಥಿಕವಾದ ಬ್ರಹ್ಮಾತ್ಮವಿಜ್ಞಾನವನ್ನೂ ಶತಸಂವತ್ಸರಪರ್ಯಂತವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಸ್ಥಳ
ಶ್ರೀಜಯಸಾಮ ಸಂ॥ ಜ್ಯೇಷ್ಠ ಶುದ್ಧ ದ್ವಿತೀಯಾ ಗುರುವಾರ
ತಾ॥ 3 6-1954

ಆಜ್ಞಾಪಕ
ಹೆಚ್. ಪಿ. ವೆಂಕಟರಾವ್,
ಆಸ್ಥಾನ ವಿದ್ವಾನ್ಸ್

॥ ಶ್ರೀಃ ॥

ವಿಷಯಾನುಕ್ರಮಣಿಕೆ

ಐದನೆಯ ಅಷ್ಟಕದಲ್ಲಿ ಮೂರನೆಯ ಅಧ್ಯಾಯ

ಏಳನೆಯ ಮಂಡಲ

—೦—

		ಪುಟಸಂಖ್ಯೆ
೨೦	**ಉಗ್ರೋ ಜಜ್ಞೇ** ಎಂಬ ಇಪ್ಪತ್ತನೆಯ ಸೂಕ್ತವು—	1
	ಸೂಕ್ತದ ಪೀಠಿಕೆ	1
	ವಿನಿಯೋಗ, ಋಷಿದೇವತಾಛಂದಸ್ಸುಗಳು ಇತ್ಯಾದಿ	2
೨೧	**ಅಸಾವಿ ದೇವಂ** ಎಂಬ ಇಪ್ಪತ್ತೊಂದನೆಯ ಸೂಕ್ತ	14
	ನ ಯಾತವ ಇಂದ್ರ ಎಂಬ ಋಕ್ಕಿನ ನಿರುಕ್ತ	19
೨೨	**ಪಿಬಾ ಸೋಮಮಿಂದ್ರ** ಎಂಬ ಇಪ್ಪತ್ತೆರಡನೆಯ ಸೂಕ್ತ	26
೨೩	**ಉದು ಬ್ರಹ್ಮಾಣಿ** ಎಂಬ ಇಪ್ಪತ್ತಮೂರನೆಯ ಸೂಕ್ತ	35
೨೪	**ಯೋನಿಷ್ಟ ಇಂದ್ರ ಸದನೇ** ಎಂಬ ಇಪ್ಪತ್ತನಾಲ್ಕನೆಯ ಸೂಕ್ತ	43
೨೫	**ಆ ತೇ ಮಹಃ** ಎಂಬ ಇಪ್ಪತ್ತೈದನೆಯ ಸೂಕ್ತ	50
೨೬	**ನ ಸೋಮ ಇಂದ್ರ** ಎಂಬ ಇಪ್ಪತ್ತಾರನೆಯ ಸೂಕ್ತ	57
೨೭	**ಇಂದ್ರಂ ನರೋ ನೇಮಧಿತಾ** ಎಂಬ ಇಪ್ಪತ್ತೇಳನೆಯ ಸೂಕ್ತ	63
೨೮	**ಬ್ರಹ್ಮಾಣ ಇಂದ್ರ** ಎಂಬ ಇಪ್ಪತ್ತೆಂಟನೆಯ ಸೂಕ್ತ	69
೨೯	**ಅಯಂ ಸೋಮ ಇಂದ್ರ** ಎಂಬ ಇಪ್ಪತ್ತೊಂಭತ್ತನೆಯ ಸೂಕ್ತ	74
೩೦	**ಆ ನೋ ದೇವ** ಎಂಬ ಮೂವತ್ತನೆಯ ಸೂಕ್ತ	80
೩೧	**ಪ್ರ ವ ಇಂದ್ರಾಯ** ಎಂಬ ಮೂವತ್ತೊಂದನೆಯ ಸೂಕ್ತ	86
೩೨	**ನೋ ಷು ತ್ವಾ** ಎಂಬ ಮೂವತ್ತೆರಡನೆಯ ಸೂಕ್ತ	97
೩೩	**ಶ್ವಿತ್ಯಂಚೋ ಮಾ** ಎಂಬ ಮೂವತ್ತಮೂರನೆಯ ಸೂಕ್ತ	126
	ವಸಿಷ್ಠಋಷಿಯ ಜನ್ಮವೃತ್ತಾಂತ	138
	ಉತಾಪಿ ಮೈತ್ರಾವರುಣ ಎಂಬ ಋಕ್ಕಿನ ನಿರುಕ್ತ	140
	ಉರ್ವಶೀ ಶಬ್ದದ ನಿರ್ವಚನ ಮತ್ತು ಅರ್ಥವಿವರಣೆ	140

		ಪುಟಸಂಖ್ಯೆ
	ಅಪ್ಸರಾ ಶಬ್ದದ ನಿರ್ವಚನ	141
	ಋಗ್ವೇದದಲ್ಲಿ ಹೇಳಿರುವ **ವಸಿಷ್ಠೋತ್ಪತ್ತಿ ಕ್ರಮ**	142
	ಬೃಹದ್ದೇವತಾಗ್ರಂಥದಲ್ಲಿ ಹೇಳಿರುವ ವಸಿಷ್ಠೋತ್ಪತ್ತಿ ಕ್ರಮ	143
೩೪	**ಪ್ರ ಶುಕ್ರೈತು** ಎಂಬ ಮೂವತ್ತನಾಲ್ಕನೆಯ ಸೂಕ್ತ	148
	ಬುಧ್ನ ಶಬ್ದದ ನಿರ್ವಚನ ಮತ್ತು ಅರ್ಥವಿವರಣೆ	158
೩೫	**ಕಂ ನ ಇಂದ್ರಾಗ್ನೀ** ಎಂಬ ಮೂವತ್ತೈದನೆಯ ಸೂಕ್ತ	167

ಐದನೆಯ ಅಷ್ಟಕದಲ್ಲಿ ಮೂರನೆಯ ಅಧ್ಯಾಯವು ಸಮಾಪ್ತವು.

———

ನಾಲ್ಕನೆಯ ಅಧ್ಯಾಯ

೩೬	**ಪ್ರ ಬ್ರಹ್ಮೈತು** ಎಂಬ ಮೂವತ್ತಾರನೆಯ ಸೂಕ್ತ	185
	ಆದಿತ್ಯನು ವೃಷ್ಟಿಗೆ ಕಾರಣನೆಂಬ ವಿಷಯ	187
	ಪದವೀ ಶಬ್ದದ ಅರ್ಥವಿವರಣೆ	189
೩೭	**ಆ ವೋ ವಾಹಿಷ್ಠಃ** ಎಂಬ ಮೂವತ್ತೇಳನೆಯ ಸೂಕ್ತ	197
೩೮	**ಉದು ಷ್ಯ ದೇವಃ** ಎಂಬ ಮೂವತ್ತೆಂಟನೆಯ ಸೂಕ್ತ	205
	ವಾಜಿನಃ, ಮಿತ್ರದ್ರುವಃ, ಸ್ವರ್ಕಾಃ ಎಂಬ ಶಬ್ದಗಳ ಅರ್ಥವಿವರಣೆ	214
೩೯	**ಊರ್ಧ್ವೋ ಅಗ್ನಿಃ** ಎಂಬ ಮೂವತ್ತೊಂಭತ್ತನೆಯ ಸೂಕ್ತ	215
	ಬೀರಿಟೇ ಎಂಬ ಶಬ್ದದ ಅರ್ಥವಿವರಣೆ	218
	ಪ್ರ ವಾವೃಜೇ ಎಂಬ ಋಕ್ಕಿನ ನಿರುಕ್ತ	219
	ವಸು ಶಬ್ದದ ರೂಪನಿಷ್ಪತ್ತಿ ಇತ್ಯಾದಿ	221
	ಜ್ಮಯಾ ಅತ್ರ ಎಂಬ ಋಕ್ಕಿನ ನಿರುಕ್ತ	221
೪೦	**ಓ ಶ್ರುಷ್ಟಿಃ** ಎಂಬ ನಲವತ್ತನೆಯ ಸೂಕ್ತ	226
೪೧	**ಪ್ರಾತರಗ್ನಿಂ** ಎಂಬ ನಲವತ್ತೊಂದನೆಯ ಸೂಕ್ತ	234
	ಭಗದೇವತೆಯ ವಿಷಯ	235
	ಪ್ರಾತರ್ಜಿತಂ ಎಂಬ ಋಕ್ಕಿನ ನಿರುಕ್ತ	237
೪೨	**ಪ್ರ ಬ್ರಹ್ಮಾಣಃ** ಎಂಬ ನಲವತ್ತೆರಡನೆಯ ಸೂಕ್ತ	242
೪೩	**ಪ್ರ ವೋ ಯಜ್ಞೇಷು** ಎಂಬ ನಲವತ್ತಮೂರನೆಯ ಸೂಕ್ತ	249

		ಪುಟಸಂಖ್ಯೆ
೪೪	**ದಧಿಕ್ರಾಂ ವಃ** ಎಂಬ ನಲವತ್ತನಾಲ್ಕನೆಯ ಸೂಕ್ತ	255
	ದಧಿಕ್ರಾ ಎಂಬ ದೇವತೆಯ ವಿಷಯ	256
೪೫	**ಆ ದೇವೋ ಯಾತು** ಎಂಬ ನಲವತ್ತೈದನೆಯ ಸೂಕ್ತ	262
೪೬	**ಇಮಾ ರುದ್ರಾಯ** ಎಂಬ ಫಲವತ್ತಾರನೆಯ ಸೂಕ್ತ	267
	ಸೂಕ್ತದ ಪೀಠಿಕೆ–**ರುದ್ರದೇವತೆಯ** ವಿಷಯ	267
	ರುದ್ರ ಶಬ್ದದ ನಿರ್ವಚನ	272
	ಯಾ ತೇ ದಿದ್ಯುತ್ ಎಂಬ ಋಕ್ಕಿನ ನಿರುಕ್ತ	275
೪೭	**ಆಪೋ ಯಂ ವಃ** ಎಂಬ ನಲವತ್ತೇಳನೆಯ ಸೂಕ್ತ	277
	ಅಸಾಂ ನಪಾತ್ ದೇವತೆಯ ವಿಷಯ	280
	ಪವಿತ್ರ ಶಬ್ದದ ಅರ್ಥವಿವರಣೆ ಮತ್ತು ನಿರ್ವಚನ ಇತ್ಯಾದಿ	282
೪೮	**ಋಭುಕ್ಷಣೋ ವಾಜಾ** ಎಂಬ ನಲವತ್ತೆಂಟನೆಯ ಸೂಕ್ತ	284
೪೯	**ಸಮುದ್ರಜ್ಯೇಷ್ಠಾಃ** ಎಂಬ ನಲವತ್ತೊಂಭತ್ತನೆಯ ಸೂಕ್ತ	920
	ಸಮುದ್ರಜ್ಯೇಷ್ಠಾಃ ಎಂಬ ಶಬ್ದದ ಅರ್ಥವಿವರಣೆ	291
	ಅಗ್ನಿಯು ನೀರಿನಲ್ಲಿ ಅಡಗಿಕೊಂಡಿದ್ದ ವಿಚಾರ	296
೫೦	**ಆ ಮಾಂ ಮಿತ್ರಾವರುಣಾ** ಎಂಬ ಐವತ್ತನೆಯ ಸೂಕ್ತ	298
೫೧	**ಆದಿತ್ಯಾನಾಮವಸಾ** ಎಂಬ ಐವತ್ತೊಂದನೆಯ ಸೂಕ್ತ	303
	ಸೂಕ್ತದ ಪೀಠಿಕೆ-ಆದಿತ್ಯರ ವಿಷಯ	303
	ಆದಿತ್ಯ ಶಬ್ದದ ನಿರ್ವಚನ ಮತ್ತು ಅರ್ಥವಿವರಣೆ	303
	ಆದಿತ್ಯರು ಯಾರು ಅವರ ಸಂಖ್ಯಾಪರಿಮಿತಿಯೆಷ್ಟು ?	305
೫೨	**ಆದಿತ್ಯಾಸೋ ಅದಿತಯಃ** ಎಂಬ ಐವತ್ತೆರಡನೆಯ ಸೂಕ್ತ	311
೫೩	**ಪ್ರ ದ್ಯಾವಾ ಯಜ್ಞೈಃ** ಎಂಬ ಐವತ್ತಮೂರನೆಯ ಸೂಕ್ತ	315
೫೪	**ವಾಸ್ತೋಷ್ಪತೇ** ಎಂಬ ಐವತ್ತನಾಲ್ಕನೆಯ ಸೂಕ್ತ	319
೫೫	**ಅಮಿವಹಾ** ಎಂಬ ಐವತ್ತೈದನೆಯ ಸೂಕ್ತ	323
	ವಾಸ್ತೋಷ್ಪತಿ ಶಬ್ದದ ನಿರ್ವಚನ ಮತ್ತು **ಅಮಿವಹಾ** ಎಂಬ ಋಕ್ಕಿನ ನಿರುಕ್ತ	326
	ಸಾರಮೇಯ ಎಂಬ ನಾಯಿಯ ವಿಷಯ	327
೫೬	**ಕ ಈಂ ವ್ಯಕ್ತಾ ನರಃ** ಎಂಬ ಐವತ್ತಾರನೆಯ ಸೂಕ್ತ	333
	ಸೂಕ್ತದ ಪೀಠಿಕೆ–**ಮರುದ್ದೇವತೆಗಳ** ವಿಷಯ	333
	ಇಂದ್ರನಿಗೂ ಮರುತ್ತುಗಳಿಗೂ ಇರುವ ಸಾಹಚ	335
	ಮರುದ್ದೇವತೆಗಳ ವಿಶೇಷ ವಿವರಣೆ	336

		ಪುಟಸಂಖ್ಯೆ
	ಮರುತ್ ಶಬ್ದದ ನಿರ್ವಚನ	337
	ಸೂಕ್ತಗಳಲ್ಲಿಯೂ, ಋಕ್ಕುಗಳಲ್ಲಿಯೂ ಕಂಡುಬರುವ ಮರುದ್ದೇವತೆಗಳ ವಿವರಣೆ	337
೫೭	**ಮಧ್ವೋ ವಃ** ಎಂಬ ಐವತ್ತೇಳನೆಯ ಸೂಕ್ತ	367
೫೮	**ಪ್ರ ಸಾಕಮುಕ್ಷೇ** ಎಂಬ ಐವತ್ತೆಂಟನೆಯ ಸೂಕ್ತ	375
೫೯	**ಯಂ ತ್ರಾಯಧ್ವೇ** ಎಂಬ ಐವತ್ತೊಂಭತ್ತನೆಯ ಸೂಕ್ತ	382
	ತ್ರ್ಯಂಬಕಂ ಯಜಾಮಹೇ ಎಂಬ ಋಕ್ಕಿನ ವಿಶೇಷಾರ್ಥ ಮತ್ತು ಅದರ ವಿನಿಯೋಗ, ಜಪಕ್ರಮ ಇತ್ಯಾದಿ	395

ಐದನೆಯ ಅಷ್ಟಕದಲ್ಲಿ ನಾಲ್ಕನೆಯ **ಅಧ್ಯಾಯವು** ಸಮಾಪ್ತವು.

———

ಐದನೆಯ ಅಧ್ಯಾಯವು

೬೦	**ಯದದ್ಯ ಸೂರ್ಯ** ಎಂಬ ಅರವತ್ತನೆಯ ಸೂಕ್ತ	397
	ಸೂಕ್ತದ ಪೀಠಿಕೆ-**ಸೂರ್ಯದೇವತೆಯ** ವಿಷಯ	397
	ಋಗ್ವೇದದಲ್ಲಿ ಸೂರ್ಯನ ವಿಷಯವಾಗಿ ಋಕ್ಕುಗಳಲ್ಲಿರುವ ವಿವರಣೆ ಇತ್ಯಾದಿ	400
	ಮಿತ್ರಾವರುಣರ ವಿಮರ್ಶೆ	402
೬೧	**ಉದ್ವಾಂ ಚಕ್ಷುರ್ವರುಣ** ಎಂಬ ಅರವತ್ತೊಂದನೆಯ ಸೂಕ್ತ	425
೬೨	**ಉತ್ಸೂರ್ಯೋ ಬೃಹತ್** ಎಂಬ ಅರವತ್ತೆರಡನೆಯ ಸೂಕ್ತ	434
೬೩	**ಉದ್ವೇತಿ ಸುಭಗಃ** ಎಂಬ ಅರವತ್ತಮೂರನೆಯ ಸೂಕ್ತ	441
	ಸಾಧಃ ಎಂಬ ಶಬ್ದದ ನಿರ್ವಚನ	447
೬೪	**ದಿವಿ ಕ್ಷಯಂತಾ** ಎಂಬ ಅರವತ್ತನಾಲ್ಕನೆಯ ಸೂಕ್ತ	448
೬೫	**ಪ್ರತಿ ವಾಂ ಸೂರೇ** ಎಂಬ ಅರವತ್ತೈದನೆಯ ಸೂಕ್ತ	455
೬೬	**ಪ್ರ ಮಿತ್ರಯೋಃ** ಎಂಬ ಅರವತ್ತಾರನೆಯ ಸೂಕ್ತ	461
	ತುವಿಜಾತ ಶಬ್ದದ ಅರ್ಥವಿವರಣೆ ಇತ್ಯಾದಿ	463
೬೭	**ಪ್ರತಿ ವಾಂ ರಥಂ** ಎಂಬ ಅರವತ್ತೇಳನೆಯ ಸೂಕ್ತ	482
	ಸೂಕ್ತದ ಪೀಠಿಕೆ-**ಅಶ್ವಿನೀದೇವತೆಗಳ ಉತ್ಪತ್ತಿ**	482
	ಅಶ್ವಿನೀದೇವತೆಗಳ **ರಥವರ್ಣನೆ** ಇತ್ಯಾದಿ	484
	ಅಶ್ವಿನೀದೇವತೆಗಳು ಮಾಡಿದ **ಸಹಾಯಗಳು**	486

ಪುಟಸಂಖ್ಯೆ

ಅಶ್ವಿನೀದೇವತೆಗಳು— **ಚ್ಯವಾನ, ಕಲಿ, ವಿಮದ, ಕೃಷ್ಣ, ಭುಜ್ಯು, ವಿಶ್ವಲಾ, ಊಜ್ರಾಶ್ವ, ಸಾರಾನ್ವಜ, ರೇಭ, ವಂದನ, ಕಕ್ಷೀವಾನ್, ಅತ್ರಿ, ವಧ್ರಿಮತೀ, ಘೋಷಾ, ಶಚಿ, ಪೌಲು** ಮೊದಲಾದವರಿಗೆ ಮಾಡಿದ ಸಹಾಯಗಳ ವಿವರಣೆ 486

೬೮ **ಆ ಶುಭ್ರಾ ಯಾತಂ** ಎಂಬ ಅರವತ್ತೆಂಟನೆಯ ಸೂಕ್ತ 502

೬೯ **ಆ ವಾಂ ರಥಃ** ಎಂಬ ಅರವತ್ತೊಂಭತ್ತನೆಯ ಸೂಕ್ತ 512

೭೦ **ಆ ವಿಶ್ವವಾರಾ** ಎಂಬ ಎಪ್ಪತ್ತನೆಯ ಸೂಕ್ತ 522

೭೧ **ಆಪ ಸ್ವಸುರುಷಸಃ** ಎಂಬ ಎಪ್ಪತ್ತೊಂದನೆಯ ಸೂಕ್ತ 530

೭೨ **ಆ ಗೋಮತಾ** ಎಂಬ ಎಪ್ಪತ್ತೆರಡನೆಯ ಸೂಕ್ತ 536

ನವಿಷ್ಯಋಷಿಗೂ, ಅಶ್ವಿನೀದೇವತೆಗಳಿಗೂ ಇರುವ ಬಂಧುತ್ವದ ವಿಮರ್ಶೆ 539

೭೩ **ಆತಾರಿಷ್ಮ** ಎಂಬ ಎಪ್ಪತ್ತಮೂರನೆಯ ಸೂಕ್ತ 544

೭೪ **ಇಮಾ ಉ ವಾಂ** ಎಂಬ ಎಪ್ಪತ್ತನಾಲ್ಕನೆಯ ಸೂಕ್ತ 551

೭೫ **ವ್ಯುಷಾ ಆವೋ ದಿವಿಜಾ** ಎಂಬ ಎಪ್ಪತ್ತೈದನೆಯ ಸೂಕ್ತ 558

೭೬ **ಉದು ಜ್ಯೋತಿರಮೃತಂ** ಎಂಬ ಎಪ್ಪತ್ತಾರನೆಯ ಸೂಕ್ತ 567

೭೭ **ಉಷೋ ರುರುಚೇ** ಎಂಬ ಎಪ್ಪತ್ತೇಳನೆಯ ಸೂಕ್ತ 576

೭೮ **ಪ್ರತಿ ಕೇತವಃ** ಎಂಬ ಎಪ್ಪತ್ತೆಂಟನೆಯ ಸೂಕ್ತ 584

೭೯ **ವ್ಯುಷಾ ಆವಃ ಪಥ್ಯಾ** ಎಂಬ ಎಪ್ಪತ್ತೊಂಭತ್ತನೆಯ ಸೂಕ್ತ 590

೮೦ **ಪ್ರತಿ ಸ್ತೋಮೇಭಿಃ** ಎಂಬ ಎಂಭತ್ತನೆಯ ಸೂಕ್ತ 596

ಐದನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು ಸಮಾಪ್ತವು.


———

ವಿಷಯಾನುಕ್ರಮಣಿಕೆ ಸಮಾಪ್ತವು

ಸಂಕೇತಾಕ್ಷರಗಳ ವಿವರಣೆಯು



ಅಥ. ಸಂ.— ಅಥರ್ವವೇದಸಂಹಿತಾ
ಆಪ ಸೂ —ಆಪಸ್ತಂಬಶ್ರೌತಸೂತ್ರ
ಆಪ. ಧ. ಸೂ.—ಆಪಸ್ತಂಬಧರ್ಮಸೂತ್ರ
ಆಪ. ಪ. ಸೂ.—ಆಪಸ್ತಂಬಪರಿಭಾಷಾಸೂತ್ರ
ಆ. ಸೂ. ಅಥವಾ ಆ—ಆಶ್ವಲಾಯನಶ್ರೌತಸೂತ್ರ
ಉ. ಸೂ.—ಉಣಾದಿ ಸೂತ್ರ
ಋ ಸಂ.—ಋಗ್ವೇದಸಂಹಿತಾ
ಐ. ಆ.—ಐತರೇಯಾರಣ್ಯಕ
ಐ. ಉ —ಐತರೇಯೋಪನಿಷತ್
ಐ. ಬ್ರಾ —ಐತರೇಯಬ್ರಾಹ್ಮಣ
ಛಾ. ಉ —ಛಾಂದೋಗ್ಯೋಪನಿಷತ್
ಜೈ. ಪೂ ಸೂ.— ಜೈಮಿನೀಯ ಪೂರ್ವಮೀಮಾಂಸಾಸೂತ್ರ
ಜೈ. ನ್ಯಾ ವಿ.— ಜೈಮಿನೀಯ ನ್ಯಾಯಮಾಲಾವಿಸ್ತರ
ತಾ. ಬ್ರಾ —ತಾಂಡ್ಯಮಹಾಬ್ರಾಹ್ಮಣ
ತೈ ಆ —ತೈತ್ತಿರೀಯ ಆರಣ್ಯಕ
ತೈ. ಬ್ರಾ.—ತೈತ್ತಿರೀಯಬ್ರಾಹ್ಮಣ
ತೈ ಸಂ.— ತೈತ್ತಿರೀಯ ಸಂಹಿತಾ
ನಿ.—ನಿರುಕ್ತ, ನಿಘಂಟು
ಪಾ ಸೂ —ಪಾಣಿನೀಯ ಸೂತ್ರ
ಪಾ. ಶಿ.— ಪಾಣಿನೀಯ ಶಿಕ್ಷಾ
ಫಿ. ಅಥವಾ ಫಿ ಸೂ —ಫಿಟ್ ಸೂತ್ರ
ಬ್ರ ಸೂ —ಬ್ರಹ್ಮಸೂತ್ರ
ಮ. ಭಾ —ಮಹಾಭಾರತ
ಮ. ಸ್ಮೃ —ಮನುಸ್ಮೃತಿ
ಮೈ. ಸಂ —ಮೈತ್ರಾಯಣೀಯಸಂಹಿತಾ
ಯಾ. ಸ್ಮೃ.—ಯಾಜ್ಞವಲ್ಕ್ಯಸ್ಮೃತಿ
ವಾ. ಸಂ —ವಾಜಸನೇಯಸಂಹಿತಾ
ವಾ. ಪು —ವಾಯುಪುರಾಣ
ವಿ. ಪು.—ವಿಷ್ಣುಪುರಾಣ
ವೇ. ಸೂ.—ವೇದಾಂತಸೂತ್ರ
ಶ. ಬ್ರಾ.—ಶತಪಥಬ್ರಾಹ್ಮಣ
ಸಾ. ಸಂ —ಸಾಮವೇದಸಂಹಿತಾ ಇತ್ಯಾದಿ
ಬೃ. ದೇ —ಬೃಹದ್ದೇವತಾ



॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾತ್ಮಾತ್ಮಾ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಸಾಯಣಭಾಷ್ಯಸಹಿತಾ

ಋಗ್ವೇದ ಸಂಹಿತಾ

(ಕರ್ನಾಟಕ ಭಾಷಾರ್ಥಾನುವಾದ ವಿವರಣೆ ಸಹಿತವಾಗಿ)

ಭಾಗ ೨೨

॥ ಪಂಚಮಾಷ್ಟಕೇ ತೃತೀಯೋಧ್ಯಾಯಃ ॥

ಐದನೆಯ ಅಷ್ಟಕದಲ್ಲಿ ಮೂರನೆಯ ಅಧ್ಯಾಯವು

ಏಳನೆಯ ಮಂಡಲದ ಸೂಕ್ತಗಳು, ೨೦-೩೫

ಪೀಠಿಕೆ.

ಏಳನೆಯ ಮಂಡಲದಲ್ಲಿ ೧೮ನೆಯ ಸೂಕ್ತದಿಂದ ೩೩ನೆಯ ಸೂಕ್ತದವರೆಗೆ ಇರುವ ಒಟ್ಟು ೧೪ ಸೂಕ್ತಗಳು ಇಂದ್ರದೇವತಾಕವು ಆವುಗಳಲ್ಲಿ ೧೮-೨೯ನೆಯ ಸೂಕ್ತಗಳು ಎಂದರೆ ೪ನೆಯ ಸಂಪುಟ ಭಾಗ ೨೧ರಲ್ಲಿ ಸೇರಿವೆ ಆದ್ದರಿಂದ ಈ ಭಾಗದಲ್ಲಿ ೩೦ರಿಂದ ೩೫ರವರೆಗೆ ಇರುವ ೬ ಸೂಕ್ತಗಳು ಇಂದ್ರನ ಪರವಾಗಿವೆ ಇಂದ್ರನ ವಿಷಯವಾಗಿ ನಾವು ೪ನೆಯ ಸಂಪುಟ ಭಾಗ—೨೧ ಪುಟ 569 582 ಮತ್ತು ಭಾಗ—೨೬ ಪುಟ 631 683 ಗಳಲ್ಲಿಯೂ ಮತ್ತು ಇತರಕಡೆಗಳಲ್ಲಿಯೂ ವಿಸ್ತಾರವಾಗಿ ಪೀಠಿಕೆಯಲ್ಲಿ ಬರೆದಿರುವುದರಿಂದ ಇಲ್ಲಿಂದ ಮುಂದಕ್ಕೆ ಅವಶ್ಯಕತೆ ತೋರಿಬಂದ ಕಡೆಯಲ್ಲಿ ಮಾತ್ರ ವಿಶೇಷ ಸಂಗತಿಗಳನ್ನು ವಿವರಿಸಲಾಗುವುದು

ಇಪ್ಪತ್ತನೆಯ ಸೂಕ್ತವು

ಸಾಯಣಭಾಷ್ಯಂ

ಅಥ ತೃತೀಯೋಽಧ್ಯಾಯ ಆರಭ್ಯತೇ ॥ ಉಗ್ರೋ ಜಜ್ಞ ಇತಿ ದಶರ್ಚಂ ತೃತೀಯಂ ಸೂಕ್ತಂ-ವಸಿಷ್ಠಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ತಥಾ ಚಾನುಕ್ರಮ್ಯತೇ । ಉಗ್ರೋ ದಶೇತಿ ॥ ಆಧಿಷ್ಣವಿಕೇ ಚ-

ತುರ್ಥೇ೭ಹನಿ ನಿಷ್ಕೇವಲ್ಯ ಏತತ್ಸೂಕ್ತಂ ನಿವಿದ್ಧಾನಂ । ಸೂತ್ರಿತಂ ಚ । ಚತುರ್ಥಸ್ಯೋಗ್ರೋ ಜಜ್ಞ ಇತಿ ನಿಷ್ಕೇವಲ್ಯಂ । ಆ ೭-೭ । ಇತಿ ॥ ಮಹಾವ್ರತೇ೭ಪಿ ನಿಷ್ಕೇವಲ್ಯ ಏತತ್ಸೂಕ್ತಂ । ತಥೈವ ಪಂಚಮಾರಣ್ಯಕೇ ಸೂತ್ರಿತಂ । ಉಗ್ರೋ ಜಜ್ಞೇ ವೀರ್ಯಾಯ ಸ್ವಧಾವಾನುದು ಬ್ರಹ್ಮಾಣ್ಯೈರತ ಶ್ರವಸ್ಯಾ । ಐ. ಆ ೫-೨-೨ । ಇತಿ ॥ ಸೌಮಿಕಚಾತುರ್ಮಾಸ್ಯೇಷು ವೈಶ್ವದೇವಸ್ಯ ಸ್ಥಾನೇ ಪ್ರಥಮಂ ಪೃಷ್ಠ್ಯಮಹಃ । ತತ್ರಾಪಿ ನಿಷ್ಕೇವಲ್ಯ ಏತತ್ಸೂಕ್ತಂ ನಿವಿದ್ಧಾನಂ । ಸೂತ್ರಿತಂ ಚ । ಜನಿಷ್ಠಾ ಉಗ್ರ ಉಗ್ರೋ ಜಜ್ಞ ಇತಿ ಮಧ್ಯಂದಿನಃ । ಆ ೯-೨ । ಇತಿ ॥

ಅನುವಾದವು—ಹಿಂದಿನ ಭಾಗದಲ್ಲಿ ಐದನೆಯ ಅಷ್ಟಕದ ಎರಡನೆಯ ಅಧ್ಯಾಯದ ವಿವರಣೆಯು ಮುಗಿದಿರುವುದರಿಂದ ಈಗ ಮೂರನೆಯ ಅಧ್ಯಾಯದ ವಿವರಣೆಯನ್ನು ಪ್ರಾರಂಭಿಸಲಾಗುವುದು. **ಉಗ್ರೋ ಜಜ್ಞೇ** ಎಂಬ ಈ ಸೂಕ್ತವು ಏಳನೆಯ ಮಂಡಲದ ಎರಡನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಸಿಷ್ಠನು ಋಷಿಯು; ಇಂದ್ರನು ದೇವತೆಯು, ತ್ರಿಷ್ಟುಪ್‌ಛಂದಸ್ಸು ಅನುಕ್ರಮಣಿಕೆಯಲ್ಲಿ **ಉಗ್ರೋ ದಶ** ಎಂದು ಹೇಳಿರುವುದು ಅಭಿಷ್ಟವಸಂಬಂಧವಾದ ಯಾಗಗಳಲ್ಲಿ ನಾಲ್ಕನೆಯ ದಿವಸ ನಿಷ್ಕೇವಲ್ಯಶಸ್ತ್ರಮಂತ್ರಗಳನ್ನು ಪಠಿಸುವಾಗ ಈ ಸೂಕ್ತವನ್ನು ನಿವಿದ್ಧಾನಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದ **ಚತುರ್ಥಸ್ಯೋಗ್ರೇ ಜಜ್ಞ ಇತಿ ನಿಷ್ಕೇವಲ್ಯಂ** ಎಂಬ ಸೂತ್ರದಿಂದ (ಆ ೭-೭) ವಿವೃತವಾಗಿರುವುದು. ಮಹಾವ್ರತೇಷ್ಟಿಯಲ್ಲಿಯೂ ಸಹ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ ಈ ಸೂಕ್ತವನ್ನು ಪಠಿಸಬೇಕೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ **ಉಗ್ರೋ ಜಜ್ಞೇ ವೀರ್ಯಾಯ ಸ್ವಧಾವಾನುದು ಬ್ರಹ್ಮಾಣ್ಯೈರತ ಶ್ರವಸ್ಯಾ** ಎಂಬ ವಾಕ್ಯದಿಂದ (ಐ ಆ ೫-೨-೨) ನಿರ್ದಿಷ್ಟವಾಗಿರುವುದು ಮತ್ತು ಸೋಮಸಂಬಂಧವಾದ ಚಾತುರ್ಮಾಸ್ಯವೆಂಬ ಯಾಗಗಳಲ್ಲಿ ವೈಶ್ವದೇವಸ್ಥಾನದಲ್ಲಿ ಮೊದಲು ಪೃಷ್ಠ್ಯವೆಂಬ ಯಾಗದ ಮೊದಲನೆಯ ದಿನದ ಕರ್ಮವನ್ನು ಆಚರಿಸುವಾಗ ನಿಷ್ಕೇವಲ್ಯಶಸ್ತ್ರಮಂತ್ರಗಳ ಮಧ್ಯದಲ್ಲಿ ಈ ಸೂಕ್ತವನ್ನು ನಿವಿದ್ಧಾನಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಕೌತ್ರಸೂತ್ರದ **ಜನಿಷ್ಠಾ ಉಗ್ರ ಉಗ್ರೋ ಜಜ್ಞ ಇತಿ ಮಧ್ಯಂದಿನಃ** ಎಂಬ ಸೂತ್ರದಿಂದ (ಆ ೯ ೨) ವಿವೃತವಾಗಿರುವುದು

ಸೂಕ್ತ—೨೦

ಮಂಡಲ—೭ ॥ ಅನುವಾಕ—೨ ॥ ಸೂಕ್ತ—೨೦ ॥
ಅಷ್ಟಕ—೫ ॥ ಅಧ್ಯಾಯ—೩ ॥ ವರ್ಗ ೧, ೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
ಋಷಿಃ—ವಸಿಷ್ಠಃ ॥
ದೇವತಾ—ಇಂದ್ರಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಉಗ್ರೋ ಜಜ್ಞೇ ವೀರ್ಯಾಯ ಸ್ವಧಾವಾಞ್ಛಕ್ತ್ರಿರಪ್ರೋ ನರ್ಯೋ ಯತ್ಕರಿಷ್ಯನ್ ।

ಜಗ್ಮಿರ್ಯುವಾ ನೃಷದನಮವೋಭಿಸ್ತ್ರಾತಾ ನ ಇಂದ್ರ ಏನಸೋ ಮಹಶ್ಚಿತ್ ॥

ಪದಪಾಠಃ

ಉಗ್ರಃ । ಜಜ್ಞೀ । ವೀರ್ಯಾಯ । ಸ್ವಧಾವಾನ್ । ಚಕ್ರಿಃ । ಅಪಃ । ನರ್ಯಃ । ಯತ್ । ಕರಿಷ್ಯನ್ । ಜಗ್ಮಿಃ । ಯುವಾ । ನೃಷದನಂ । ಅವಃಭಿಃ । ತ್ರಾತಾ । ನಃ । ಇಂದ್ರಃ । ಏನಸಃ । ಮಹಃ । ಚಿತ್ ॥

ಸಾಯಣಭಾಷ್ಯಂ

ಸ್ವಧಾವಾನ್ ಬಲವಾನುಗ್ರ ಓಜಸ್ವ್ಯದ್ಭುತೋ ವೀರ್ಯಾಯ ವೀರ್ಯಂ ಕರ್ತುಂ ಜಜ್ಞೀ । ಬಭೂವ । ನರ್ಯೋ ನರಹಿತಃ ಸನ್ ಯತ್ಕರ್ಮ ಕರಿಷ್ಯನ್ ಭವತಿ ತದಪಃ ಕರ್ಮ ಚಕ್ರಿಃ ಕರ್ತ್ಯೇವ ॥ ಚಕ್ರಿರಿತಿ ಕಿನ್ಪ್ರತ್ಯಯಸ್ಯ ಲಿಡ್ವದ್ಭಾವಾನ್ನ ಲೋಕಾವ್ಯಯನಿಷ್ಠಾಖಲರ್ಥತೃನಾಮಿತಿ ಷಷ್ಠೀಪ್ರತಿಷೇಧಃ ॥ ಅಪಿ ಚ ನೃಷದನಂ ಯಜ್ಞಗೃಹಂ ಯುವಾ ನಿತ್ಯತರುಣಃ ಸನ್ ಅವೋಭೀ ರಕ್ಷಣೈಃ ಸಾರ್ಧಂ ಜಗ್ಮಿರ್ಗಂತಾ ಮಹಶ್ಚಿನ್ಮಹತೋಽಪ್ಯೇನಸಃ ಪಾಪಾನ್ನೋಽಸ್ಮಾಕಂ ತ್ರಾತಾ ರಕ್ಷಿತಾ ಚ ಭವೇತಿ ॥

ಪ್ರತಿಪದಾರ್ಥ

ಸ್ವಧಾವಾನ್—ಶಕ್ತಿಯುತನೂ । **ಉಗ್ರಃ**—ಅತ್ಯದ್ಭುತವಾದ ಪರಾಕ್ರಮವುಳ್ಳವನೂ ಆದ । **ಇಂದ್ರಃ**—ಇಂದ್ರನು । **ವೀರ್ಯಾಯ**—ವೀರ್ಯಕರ್ಮಗಳನ್ನಾಚರಿಸಲು । **ಜಜ್ಞೀ**—ಉತ್ಪನ್ನನಾಗಿದ್ದಾನೆ । **ನರ್ಯಃ**—ಮಾನವರಿಗೆ ಹಿತಕಾರಿಯಾಗಿ । **ಯತ್**—ಯಾವ ಕರ್ಮವನ್ನು । **ಕರಿಷ್ಯನ್**—ಮಾಡಲು ಸಂಕಲ್ಪಿಸುವನೋ । **ಅಪಃ**—ಆ ಕರ್ಮವನ್ನು । **ಚಕ್ರಿಃ**—ಖಂಡಿತವಾಗಿಯೂ ನಿರ್ವಹಿಸುತ್ತಾನೆ । **ಯುವಾ**— ನಿತ್ಯತರುಣನಾದ **ಇಂದ್ರನು** । **ಅವೋಭಿಃ** — ತನ್ನ ರಕ್ಷಣೆಗಳೊಡನೆ । **ನೃಷದನಂ** — ಯಜ್ಞಗೃಹವನ್ನು । **ಜಗ್ಮಿಃ** — ಪ್ರವೇಶಿಸಿ । **ಮಹಶ್ಚಿತ್** — ಅತ್ಯಧಿಕವಾದ । **ಏನಸಃ** — ಪಾಪದಿಂದಲೂ (ಬಿಡಿಸಿ) । **ನಃ** — ನಮಗೆ । **ತ್ರಾತಾ** — ರಕ್ಷಕನಾಗಿರುತ್ತಾನೆ

ಭಾವಾರ್ಥ

ಶಕ್ತಿಯುತನೂ ಅತ್ಯದ್ಭುತವಾದ ಪರಾಕ್ರಮವುಳ್ಳವನೂ ಆದ ಇಂದ್ರನು ವೀರ್ಯಕರ್ಮಗಳನ್ನಾಚರಿಸಲು ಉತ್ಪನ್ನನಾಗಿದ್ದಾನೆ. ಮಾನವರಿಗೆ ಹಿತಕಾರಿಯಾಗಿ ಯಾವ ಕರ್ಮವನ್ನು ಮಾಡಲು ಸಂಕಲ್ಪಿಸುವನೋ ಆ ಕರ್ಮವನ್ನು ಖಂಡಿತವಾಗಿಯೂ ನಿರ್ವಹಿಸುತ್ತಾನೆ ನಿತ್ಯತರುಣನಾದ ಇಂದ್ರನು ತನ್ನ ರಕ್ಷಣೆಗಳೊಡನೆ ಯಜ್ಞಗೃಹವನ್ನು ಪ್ರವೇಶಿಸಿ ಅತ್ಯಧಿಕವಾದ ಪಾಪದಿಂದ ಬಿಡಿಸಿ ನಮ್ಮನ್ನು ರಕ್ಷಿಸುತ್ತಾನೆ

English Translation

The fierce and powerful (Indra) has been born for heroic (deeds); friendly to man he is the accomplisher of whatever act he undertakes to perform, ever youthful, he invests the (Sacrificial) hall with defences (against interruption), be our preserver, Indra, from heinous sin

ಸಂಹಿತಾಪಾಠಃ

ಹಂತಾ ವೃತ್ರಮಿಂದ್ರಃ ಶೂಶುವಾನಃ ಪ್ರಾವೀನ್ನು ವೀರೋ ಜರಿತಾರಮೂತೀ ।
ಕರ್ತಾ ಸುದಾಸೇ ಅಹ ವಾ ಉ ಲೋಕಂ ದಾತಾ ವಸು ಮುಹುರಾ ದಾ-
ಶುಷೇ ಭೂತ್ ॥ ೧ ॥

ಪದಪಾಠಃ

ಹಂತಾ । ವೃತ್ರಂ । ಇಂದ್ರಃ । ಶೂಶುವಾನಃ । ಪ್ರ । ಅವೀತ್ । ನು । ವೀರಃ । ಜರಿತಾರಂ । ಊತೀ ।
ಕರ್ತಾ । ಸುದಾಸೇ । ಅಹ । ವೈ । ಊಂ ಇತಿ । ಲೋಕಂ । ದಾತಾ । ವಸು । ಮುಹುಃ । ಆ । ದಾ-
ಶುಷೇ । ಭೂತ್ ॥ ೨ ॥

ಸಾಯಣಭಾಷ್ಯಂ

ಇಂದ್ರಃ ಶೂಶುವಾನೋ ವರ್ಧಮಾನಃ ಸನ್ ವೃತ್ರಮಸುರಂ ಹಂತಾ ಭವತಿ ॥ ತೃನಂತತ್ವಾ-
ದತ್ರ ಸಪ್ಯಭಾವಃ ॥ ವೀರೋ ವೀರಃ ಸನ್ ಜರಿತಾರಂ ಸ್ತೋತಾರಂ ನು ಕ್ಷಿಪ್ರಮೂತೀ ಊತ್ಯಾ ರಕ್ಷ-
ಯಾ ಪ್ರಾವೀತ್ । ಪ್ರಾರಕ್ಷಚ್ಚ । ಸುದಾಸೇ ರಾಜ್ಞೇ ಲೋಕಂ ಜನಪದಂ ಕರ್ತಾ ಚ । ಯದ್ವಾ । ಸುದಾ-
ಸೇ ಕಲ್ಯಾಣದಾನಾಯ ಯಜಮಾನಾಯ ಲೋಕಂ ಕರ್ತಾ ಚ ಭವತಿ ॥ ಇಹಾಪ್ಯುತ್ತರತ್ರಾಪಿ ತೃನಂತ-
ತ್ವಾತ್ಸಪ್ಯಭಾವಃ । ಅಹ ವಾ ಉ ಇತಿ ತ್ರಯಃ ಪೂರಣಾಃ ॥ ದಾಶುಷೇ ಯಜಮಾನಾಯ ವಸು ಧನಂ
ಮುಹುರ್ಭೂಯೋ ಭೂಯೋ ದಾತಾ ಚ ಭೂತ್ । ಅಭೂತ್ । ಆ ಇತಿ ಚಾರ್ಥೇ ॥

ಪ್ರತಿಪದಾರ್ಥ

ಇಂದ್ರಃ—ಇಂದ್ರನು । ಶೂಶುವಾನಃ—ವೃದ್ಧಿಯನ್ನು ಹೊಂದುತ್ತಾ। ವೃತ್ರಂ—ಅಸುರನನ್ನು । ಹಂತಾ
—ಕೊಲ್ಲುವವನಾಗುತ್ತಾನೆ । ವೀರಃ — ಪರಾಕ್ರಮಿಯಾದ ಇಂದ್ರನು । ಜರಿತಾರಂ — ಸ್ತೋತೃವನ್ನು । ನು—
ಶೀಘ್ರವಾಗಿ । ಊತೀ—ರಕ್ಷಣೆಗಳಿಂದ । ಪ್ರಾವೀತ್—ರಕ್ಷಿಸಿದ್ದಾನೆ. । ಸುದಾಸೇ—ಸುದಾಸನಂಬ ರಾಜನಿಗೆ ।
ಲೋಕಂ—ರಾಜ್ಯವನ್ನು । ಕರ್ತಾ—ಒದಗಿಸಿಕೊಡುವವನಾಗುತ್ತಾನೆ । ಅಹ ವಾ ಉ—ಅಲ್ಲದೆ । ದಾಶುಷೇ—
ಹವಿಸ್ಸನ್ನು ಅರ್ಪಿಸುವ ಯಜಮಾನನಿಗೆ । ವಸು—ಧನವನ್ನು । ಮುಹುಃ—ಅನೇಕವೇಳೆ । ದಾತಾ ಭೂತ್—
ಒದಗಿಸಿಕೊಡುತ್ತಾನೆ.

ಭಾವಾರ್ಥ

ವೃದ್ಧಿಯನ್ನು ಹೊಂದತಕ್ಕ ಇಂದ್ರನು ವೃತ್ರಹಂತಕನಾಗುತ್ತಾನೆ. ಪರಾಕ್ರಮಿಯಾದ ಇಂದ್ರನು ಸ್ತೋತೃ
ವನ್ನು ರಕ್ಷಣೆಗಳಿಂದ ರಕ್ಷಿಸಿದ್ದಾನೆ. ಸುದಾಸನೆಂಬ ರಾಜನಿಗೆ ರಾಜ್ಯವನ್ನು ಒದಗಿಸಿಕೊಡುತ್ತಾನೆ. ಹವಿಸ್ಸನ್ನರ್ಪಿ
ಸುವ ಯಜಮಾನನಿಗೆ ಅಪಾರವಾದ ಧನದಾನವನ್ನು ಅನೇಕವೇಳೆ ಮಾಡುತ್ತಾನೆ.

English Translation

Indra, dilating in bulk, is the slayer of Vritra : the hero defends his worshipper promptly with his protection, whether he be the giver of dominion to Sudas, or the donor repeatedly of wealth to the offerer (of oblation)

ಸಂಹಿತಾಪಾಠಃ

ಯುಧ್ಮೋ ಅನರ್ವಾ ಖಜಕೃತ್ಸಮದ್ವಾ ಶೂರಃ ಸತ್ರಾಷಾಟ್ ಜನುಷೇಮುಷಾಳ್ಳಃ ।
ವ್ಯಾಸ ಇಂದ್ರಃ ಪೃತನಾಃ ಸ್ವೋಜಾ ಅಧಾ ವಿಶ್ವಂ ಶತ್ರ್ಯಯಂತಂ ಜಘಾನ ॥

ಪದಪಾಠಃ

ಯುಧ್ಮಃ । ಅನರ್ವಾ । ಖಜಕೃತ್ । ಸಮತ್ಸ್ವಾ । ಶೂರಃ । ಸತ್ರಾಷಾಟ್ । ಜನುಷಾ । ಈಂ । ಅಷಾಳ್ಳಃ ।
ವಿ । ಆಸೇ । ಇಂದ್ರಃ । ಪೃತನಾಃ । ಸ್ವಓಜಾಃ । ಅಧ । ವಿಶ್ವಂ । ಶತ್ರ್ಯಯಂತಂ । ಜಘಾನ ॥ ೩ ॥

ಸಾಯಣಭಾಷ್ಯಂ

ಯುಧ್ಮೋ ಯೋದ್ಧಾನರ್ವಾಭಿಗಂತೃರಹಿತೋ ಯುದ್ಧೇಷ್ವಪರಾಜ್ಮುಖೋ ವಾ ಖಜಕೃದ್ಯುದ್ಧಕೃತ್ । ಖಲೇ ಖಜ ಇತಿ ಯುದ್ಧನಾಮಸು ಪಾಠಾತ್ । ಸಮದ್ವಾ । ಸಮತ್ ಕಲಹಃ । ತದ್ವಾನ್ ಶೂರಃ ಶೌರ್ಯೋಪೇತೋ ಜನುಷಾ ಜನ್ಮನಾ ಸ್ವಭಾವತ ಏವ ಸತ್ರಾಷಾಟ್ ಬಹೂನಾಮಭಿಭವಿತಾಷಾಳ್ಳಃ ಸ್ವಯಂ ಚ ಕೇನಾಪ್ಯನಭಿಭೂತಃ ಸ್ವೋಜಾಃ ಸುಬಲ ಈಮಯಮಿಂದ್ರಃ ಪೃತನಾಃ ಶತ್ರೂಣಾಂ ಸೇನಾ ವ್ಯಾಸೇ । ವಿಕ್ಷಿಪತಿ । ಅಧಾಪಿ ಚ ಶತ್ರ್ಯಯಂತಂ ಶಾತ್ರವಮಾಚರಂತಂ ವಿಶ್ವಂ ಸರ್ವಂ ಜಘಾನ ಹಂತಿ ॥

ಪ್ರತಿಪದಾರ್ಥ

ಯುಧ್ಮಃ—ಶ್ರೇಷ್ಠವಾದ ಯೋಧನೂ, | **ಅನರ್ವಾ**—ಪರಾಙ್ಮುಖನಾಗದಿರುವವನೂ, | **ಖಜಕೃತ್**—ಯುದ್ಧಕುಶಲನೂ | **ಸಮದ್ವಾ**—ಯುದ್ಧದಲ್ಲೀ ಆಸಕ್ತಿಯುಳ್ಳವನೂ | **ಶೂರಃ**—ಶೂರನೂ | **ಜನುಷಾ**—ಜನ್ಮದಿಂದಲೇ | **ಸತ್ರಾಷಾಟ್**—ಅನೇಕರನ್ನು ಸೋಲಿಸುವವನೂ | **ಅಷಾಳ್ಳಃ**—ಅಪ್ರತಿಹತನೂ | **ಸ್ವೋಜಾಃ**—ಉತ್ತಮವಾದ ಶಕ್ತಿಯುಳ್ಳವನೂ ಆದ | **ಈಂ ಇಂದ್ರಃ**—ಇದೇ ಇಂದ್ರನು | **ಪೃತನಾಃ**—ಶತ್ರುಸೇನೆಗಳನ್ನು | **ವಿ ಆಸೇ**—ಚದುರಿಸುತ್ತಾನೆ. | **ಅಧ**—ಮತ್ತು | **ಶತ್ರ್ಯಯಂತಂ**—ತನಗೆ ವಿರುದ್ಧವಾಗಿರುವ | **ವಿಶ್ವಂ**—ಸಕಲರನ್ನೂ | **ಜಘಾನ**—ನಾಶಮಾಡುತ್ತಾನೆ.

ಭಾವಾರ್ಥ

ಶ್ರೇಷ್ಠವಾದ ಯೋಧನೂ, ಪರಾಙ್ಮುಖನಾಗದಿರುವವನೂ, ಯುದ್ಧಕುಶಲನೂ, ಯುದ್ಧದಲ್ಲೇ ಆಸಕ್ತಿಯುಳ್ಳವನೂ, ಶೂರನೂ, ಜನ್ಮದಿಂದಲೇ ಅನೇಕರನ್ನು ಸೋಲಿಸುವವನೂ, ಅಪ್ರತಿಹತನೂ, ಉತ್ತಮವಾದ ಶಕ್ತಿಯುಳ್ಳವನೂ ಆದ ಇದೇ ಇಂದ್ರನು ಶತ್ರುಸೇನೆಗಳನ್ನು ಚದರಿಸುತ್ತಾನೆ. ಮತ್ತು ತನಗೆ ವಿರುದ್ಧವಾಗಿ ವ್ಯವಹರಿಸುವ ಸಕಲ ಶತ್ರುಗಳನ್ನೂ ನಾಶಮಾಡುತ್ತಾನೆ.

English Translation

A warrior who turns not back in battle, a combatant, one engaged in tumults, a hero, victorious over (his) foes from birth, invincible, of great vigor this Indra, scatters (hostile) hosts and slays all (his) adversaries.

ಸಂಹಿತಾಪಾಠಃ

ಉಭೇ ಚಿದಿಂದ್ರ ರೋದಸೀ ಮಹಿತ್ವಾ ಪಪ್ರಾಥ ತವಿಷೀಭಿಸ್ತವಿಷ್ಮಃ ।
ನಿ ವಜ್ರಮಿಂದ್ರೋ ಹರಿವಾನ್ಮಿಮಿಕ್ಷನ್ತ್ಸಮಂಧಸಾ ಮದೇಷು ವಾ ಉವೋಚ॥

ಪದಪಾಠಃ

ಉಭೇ ಇತಿ । ಚಿತ್ । ಇಂದ್ರ । ರೋದಸೀ ಇತಿ । ಮಹಿತ್ವಾ । ಆ । ಪಪ್ರಾಥ । ತವಿಷೀಭಿಃ । ತವಿಷ್ಮಃ ।
ನಿ । ವಜ್ರಂ । ಇಂದ್ರಃ । ಹರಿವಾನ್ । ಮಿಮಿಕ್ಷನ್ । ಸಂ । ಅಂಧಸಾ । ಮದೇಷು । ವೈ । ಉವೋಚ॥೪॥

ಸಾಯಣಭಾಷ್ಯಂ

ಹೇ ತವಿಷೋ ಬಹುಧನೇಂದ್ರ ಮಹಿತ್ವಾ ಮಹತ್ತ್ವೇನ ತವಿಷೀಭಿರ್ಬಲೈಶ್ಚೋಭೇ ಚಿದುಭೇ ಅಪಿ ರೋದಸೀ ದ್ಯಾವಾಪೃಥಿವ್ಯಾವಾ ಪಪ್ರಾಥ । ಆಪೂರಿತವಾನಸಿ । ಅಥ ಪರೋಕ್ಷಸ್ತುತಿಃ । ಹರಿವಾನಶ್ವವಾನಿಂದ್ರೋ ವಜ್ರಂ ನಿ ಮಿಮಿಕ್ಷನ್ ಶತ್ರುಷು ಪ್ರಾಸಯನ್ ಮದೇಷು ಯಜ್ಞೇಷು ನಿಪೂರ್ವಸ್ಯ ವಾಂಧಸಾ ಸೋಮೇನ ಸಮುವೋಚ । ಸಂಸೇವ್ಯತೇ ಸಂಗಚ್ಛತೇ ವಾ ॥ ಉಚ ಸಮವಾಯ ಇತಿ ಧಾತುಃ । ವಾ ಇತಿ ಪೂರಣಃ ॥

ಪ್ರತಿಪದಾರ್ಥ

ತವಿಷ್ಮಃ—ಅತ್ಯಧಿಕವಾದ ಧನವುಳ್ಳ । **ಇಂದ್ರ**—ಎಲೈ ಇಂದ್ರನೇ, । **ಮಹಿತ್ವಾ**—ಮಾಹಾತ್ಮ್ಯವುಳ್ಳ । **ತವಿಷೀಭಿಃ**—ನಿನ್ನ ಶಕ್ತಿಗಳಿಂದ । **ಉಭೇ ಚಿತ್ ರೋದಸೀ**—ದ್ಯಾವಾಪೃಥಿವಿಗಳೆರಡನ್ನೂ ಸಹ । **ಆ ಪಪ್ರಾಥ**—ವ್ಯಾಪಿಸಿದ್ದೀಯೆ. । **ಹರಿವಾನ್**—ಅಶ್ವಯುಕ್ತನಾದ । **ಇಂದ್ರಃ**—ಇಂದ್ರನು । **ವಜ್ರಂ**—ವಜ್ರಾಯುಧವನ್ನು । **ನಿ-ಮಿಮಿಕ್ಷನ್** — ಶತ್ರುಗಳಮೇಲೆ ಪ್ರಯೋಗಿಸುತ್ತಾ । **ಮದೇಷು** — ಹರ್ಷಜನಕವಾದ ಯಜ್ಞಗಳಲ್ಲಿರುವ । **ಅಂಧಸಾ**—ಸೋಮರೂಪವಾದ ಅನ್ನದೊಂದಿಗೆ । **ಸಂ ಉವೋಚ ವೈ**— ಕೂಡಿಕೊಳ್ಳುತ್ತಾನೆ

ಭಾವಾರ್ಥ

ಅತ್ಯಧಿಕವಾದ ಧನವುಳ್ಳ ಎಲೈ ಇಂದ್ರನೇ, ಮಾಹಾತ್ಮ್ಯದಿಂದ ಯುಕ್ತವಾದ ನಿನ್ನ ಶಕ್ತಿಗಳಿಂದ ದ್ಯಾವಾ ಪೃಥಿವಿಗಳೆರಡನ್ನೂ ಸಹ ವ್ಯಾಪಿಸಿದ್ದೀಯೆ ಅಶ್ವಯುಕ್ತನಾದ ಇಂದ್ರನು ವಜ್ರಾಯುಧವನ್ನು ಶತ್ರುಗಳ ಮೇಲೆ ಪ್ರಯೋಗಿಸುತ್ತಾ ಹರ್ಷಜನಕವಾದ ಯಜ್ಞಗಳಲ್ಲಿರುವ ಸೋಮರೂಪವಾದ ಅನ್ನದೊಂದಿಗೆ ಕೂಡಿಕೊಳ್ಳುತ್ತಾನೆ.

English Translation

Opulent Indra, you have filled both heaven and earth with your magnitude, your energies Indra, the lord of horses, brandishing the thunderbolt is gratified at sacrifices by the (sacrificial) food

ಸಂಹಿತಾಪಾಠಃ

ವೃಷಾ ಜಜಾನ ವೃಷಣಂ ರಣಾಯ ತಮು ಚಿನ್ನಾರೀ ನರ್ಯಂ ಸಸೂವ ।
ಪ್ರ ಯಃ ಸೇನಾನೀರಧೃಷ್ಟ ಋಭ್ವೋ ಅಸ್ತೀನಃ ಸತ್ವಾ ಗವೇಷಣಃ ಸ ಧೃಷ್ಣುಃ

ಪದಪಾಠಃ

ವೃಷಾ । ಜಜಾನ । ವೃಷಣಂ । ರಣಾಯ । ತಂ । ಊಂ ಇತಿ । ಚಿತ್ । ನಾರೀ । ನರ್ಯಂ । ಸಸೂವ ।
ಪ್ರ । ಯಃ । ಸೇನಾನೀಃ । ಅಧೃಷ್ಟ । ಋಭ್ವಃ । ಅಸ್ತಿ । ಇನಃ । ಸತ್ವಾ । ಗವೇಷಣಃ । ಸಃ । ಧೃಷ್ಣುಃ

ಸಾಯಣಭಾಷ್ಯಂ

ವೃಷಾ ಸೇಕ್ತಾ ಪಿತಾ ಕಶ್ಯಪೋ ವೃಷಣಂ ಕಾಮಾನಾಂ ವರ್ಷಿತಾರಮಿಂದ್ರಂ ರಣಾಯ ಯುದ್ಧಾರ್ಥಂ ಜಜಾನ ॥ ಜನ ಜನನ ಇತಿ ಧಾತುಃ ॥ ನರ್ಯಂ ನರಹಿತಂ ತಮು ತಮೇವೇಂದ್ರಂ ನಾರೀ ಚಿತಿರಪಿ ಸಸೂವ । ಷುಷುವೇ । ಅಧಾಪಿ ಚ ಯ ಇಂದ್ರೋ ನೃಭ್ಯೋ ನೃಣಾಂ ಸೇನಾನೀಃ ಸೇನಾನೇತಾ ಸನ್ ಪ್ರಾಸ್ತಿ ಪ್ರಭವತಿ ಸ ಇಂದ್ರ ಇನಃ ಸರ್ವಸ್ಯ ಜಗತ ಈಶ್ವರೋ ಭವತಿ । ನಿಯುತ್ವಾನಿನ ಇತಿ ಶ್ವರನಾಮಸು ಪಾಠಾತ್ । ಸತ್ವಾ ಶತ್ರೂಣಾಂ ಸಾದಕಶ್ಚ ಗವೇಷಣೋ ಗವಾಮನ್ವೇಷ್ಟಾ ಚ ಧೃಷ್ಣುಃ ಶತ್ರೂಣಾಂ ಧರ್ಷಕಶ್ಚ ಭವತೀತಿ ಶೇಷಃ ॥

ಪ್ರತಿಪದಾರ್ಥ

ವೃಷಾ—ಪಿತೃವಾದ ಕಶ್ಯಪನು । **ವೃಷಣಂ**—ಕಾಮನರ್ಷಕನಾದ ಇಂದ್ರನನ್ನು । **ರಣಾಯ**—ಯುದ್ಧಾರ್ಥವಾಗಿಯೇ । **ಜಜಾನ**—ಉತ್ಪನ್ನಮಾಡಿದನು । **ನರ್ಯಂ**—ಮಾನವರಿಗೆ ಹಿತಕಾರಿಯಾದ । **ತಮು**—ಆ ಇಂದ್ರನನ್ನು । **ನಾರೀ ಚಿತ್**—ಮಾತೆಯಾದ ಅದಿತಿಯೂ ಸಹ । **ಸಸೂವ**—ಹಡೆದಳು । **ಅಧ**—ಅನಂತರ **ಯಃ**— ಯಾವ ಇಂದ್ರನು । **ಋಭ್ವಃ ಸೇನಾನೀಃ** — ಮಾನವರಿಗೆಲ್ಲಾ ನೇತೃವಾಗಿ । **ಪ್ರ ಅಸ್ತಿ**—ನಾಯಕ

प्रभावವನ್ನು ಬೀರುವನೋ। **सः**—ಅದೇ ಇಂದ್ರನು। **इनः**—ಸಕಲ ಜಗತ್ತಿಗೂ ಈಶ್ವರನಾಗಿರುತ್ತಾನೆ। **सत्वा**—ಜಯಶಾಲಿಯೂ। **गवेषणः**—ಗೋವುಗಳನ್ನು ಹುಡುಕಿ ತರುವವನೂ। **धृष्णुः**—ಶತ್ರುಧರ್ಷಕನೂ ಆಗಿರುತ್ತಾನೆ.

ಭಾವಾರ್ಥ

ಪಿತೃವಾದ ಕಶ್ಯಪನು ಕಾಮವರ್ಷಕನಾದ ಇಂದ್ರನನ್ನು ಯುದ್ಧಾರ್ಥವಾಗಿಯೇ ಉತ್ಪನ್ನಮಾಡಿದನು. ಮಾನವರಿಗೆ ಹಿತಕಾರಿಯಾದ ಅದೇ ಇಂದ್ರನನ್ನು ಮಾತೆಯಾದ ಅದಿತಿಯೂ ಸಹ ಹಡೆದಳು ಅನಂತರ, ಯಾವ ಇಂದ್ರನು ಮಾನವರ ಸೇನೆಗೆಲ್ಲಾ ನಾಯಕನಾಗಿ ತನ್ನ ಪ್ರಭಾವವನ್ನು ಬೀರುವನೋ ಆದೇ ಇಂದ್ರನು ಸಕಲ ಜಗತ್ತಿಗೂ ಈಶ್ವರನಾಗಿರುತ್ತಾನೆ ಜಯಶಾಲಿಯೂ, ಗೋವುಗಳನ್ನು ಹುಡುಕಿ ತರುವವನೂ ಶತ್ರುಧರ್ಷಕನೂ ಆಗಿರುತ್ತಾನೆ.

English Translation

(His) progenitor begot Indra, the showerer (of benefits) for (the purpose of) war his mother brought him forth the benefactor of man the leader of armies who is chief over men, he is the lord, the conqueror, the recoverer of the cows, the subduer of foes

ಸಂಹಿತಾಪಾಠಃ

नू चित्स भ्रेषते जनो न रेषन्मनो यो अस्य घोरमाविवासात् ।
युज्ञैर्युज्ञ इन्द्रे दधते दुवांसि क्षयत्स राय ऋतसाता ऋतेजाः ॥ ६ ॥

ಪದಪಾಠಃ

नु । चित् । सः । भ्रेषते । जनः । न । रेषत् । मनः । यः । अस्य । घोरं । आविवासात् ।
युज्ञैः । युज्ञः । इन्द्रे । दधते । दुवांसि । क्षयत् । सः । रायः । ऋतसाताः । ऋतेजाः ॥ ६ ॥

ಸಾಯಣಭಾಷ್ಯಂ

यो जनोऽस्येन्द्रस्य घोरं शत्रूणां बाधकं मनो यज्ञैरावीवासात् परिचरति स जनः । नु इति प्रतिषेधे वर्तते । चिदित्येवकारार्थे । नू चित् स्यैव भ्रेषते । स्थानात् न भ्रश्यति । न रेषत् । नैव क्षीयेत । अपि च यो जनो दुवांसि परिचरणसाधनानि स्तोत्रशस्त्राणीन्द्रे दधतः निधत्ते तस्मै जनायं ऋतसाता यज्ञसाता ऋतेजा यज्ञे जातश्च स इन्द्रो रायः धनाय क्षयत् । निवसति । भवेदित्यर्थः ॥

ಪ್ರತಿಪದಾರ್ಥ

ಯಃ—ಯಾವ ಮಾನವನು। **ಅಸ್ಯ**—ಈ ಇಂದ್ರನ। **ಘೋರಂ**—ಕ್ರೂರಿಗಳಿಗೆ ಭಯಂಕರವಾದ। **ಮನಃ**—ಮನಸ್ಸನ್ನು। **ಯುಜ್ಜೈಃ**—ಯಜ್ಞಕರ್ಮಗಳಿಂದ। **ಆವಿವಾಸಾತ್**—ಒಲಿಸಿಕೊಳ್ಳುತ್ತಾನೋ। **ಸಃ ಜನಃ**—ಅದೇ ಮಾನವನು। **ನೂ ಚಿತ್ ಭ್ರೇಷತೇ**—ಖಿನ್ನಿತವಾಗುವುದಿಲ್ಲ ತನ್ನ ಸದವಸ್ಥಿತಿಯನ್ನು ಹೊಂದುವುದಿಲ್ಲ। **ನ ರೇಷತ್**—ಯಾವ ನಷ್ಟವನ್ನೂ ಹೊಂದುವುದಿಲ್ಲ। **ಯಃ**—ಯಾವ ಮಾನವನು। **ಮಘವಾನಂ** ಉಗ್ರಚಾರನಾಗಿರುವ ಸ್ಥಿರಸ್ವಾಮಿಗನ್ನು। **ಇಂದ್ರೇ**—ಇಂದ್ರನ। **ದಧತೇ**—ಇಟ್ಟಿರುವನೋ ಅಂತಹ। **ಋತಸಾಃ**—ಯಜ್ಞಪಾಲಕನೂ। **ಋತೇಜಾಃ**—ಯಜ್ಞಾರ್ಥ ಉತ್ಪನ್ನನಾದವನೂ ಆಗಿ। **ಸಃ**—ಅದೇ ಇಂದ್ರನು। **ರಾಯೇ**—ಧನಾರ್ಥವಾಗಿ (ಧನವನ್ನು ಕೊಡಲು)। **ಕ್ಷಯತ್**—ಆಳ್ವಿಕೆಯನ್ನು ನಡೆಸುತ್ತಾನೆ।

ಭಾವಾರ್ಥ

ಯಾವ ಮಾನವನು ಕ್ರೂರಿಗಳಿಗೆ ಭಯಂಕರವಾದ ಇಂದ್ರನ ಮನಸ್ಸನ್ನು ಯಜ್ಞಕರ್ಮಗಳಿಂದ ಒಲಿಸಿಕೊಳ್ಳುತ್ತಾನೋ ಅದೇ ಮಾನವನು ಖಿನ್ನತೆಯನ್ನು ತನ್ನ ಸದವಸ್ಥಿತಿಯನ್ನು [illegible] ಯಾವ ಮಾನವನೂ ಉಗ್ರಚಾರಸಾಧನವಾದ ಸ್ಥಿರಸ್ವಾಮಿಸಂತೃಗನ್ನು ಇಂದ್ರನ ಅಂತರಾತ್ಮದಲ್ಲಿ ಯಾವ ಮಾನವನಿಗೆ ಯಜ್ಞ-ಯಜ್ಞಾದ್ಯಲ್ಲಿ ಉತ್ಪನ್ನನಾಗಿರುವ ಅದೇ ಇಂದ್ರನು ಧನವನ್ನು ಕೊಡಲು ಆಳ್ವಿಕೆಯಲ್ಲಿರುತ್ತಾನೆ

English Translation

He who devotes his mind to the terrible Indra never falls (from his condition), nor will he perish the protector of sacred rites, the progeny of sacrifice bestows riches on him who offers to Indra praises and prayers with sacrifices

ಸಂಹಿತಾಪಾಠಃ

ಯದಿಂದ್ರ ಪೂರ್ವೋ ಅಪರಾಯ ಶಿಕ್ಷನ್ನಯಜ್ಯಾಯಾನ್ಕನೀಯಸೋ ದೇಷ್ಣಂ।

ಅಮೃತ ಇತ್ಪರ್ಯಾಸೀತ ದೂರಮಾ ಚಿತ್ರ ಚಿತ್ರೋ ಭರಾ ರಯಿಂ ನಃ ।೭॥

ಪದಪಾಠಃ

ಯತ್ । ಇಂದ್ರ । ಪೂರ್ವಃ । ಅಪರಾಯ । ಶಿಕ್ಷನ್ । ಅಯತ್ । ಜ್ಯಾಯಾನ್ । ಕನೀಯಸಃ । ದೇಷ್ಣಂ।
ಅಮೃತಃ । ಇತ್ । ಪರಿ । ಆಸೀತ । ದೂರಂ । ಆ । ಚಿತ್ರ । ಚಿತ್ರಃ । ಭರ । ರಯಿಂ । ನಃ ॥ ೭ ॥

ಸಾಯಣಭಾಷ್ಯಂ

ಹೇ ಚಿತ್ರ ಚಾಯನೀಯೇಂದ್ರ ಯದ್ಧನಂ ಪೂರ್ವಃ ಪಿತಾ ಜ್ಯೇಷ್ಠೋ ಭ್ರಾತಾ ವಾಪರಾಯ ಪುತ್ರಾಯ ಕನೀಯಸೇ ವಾ ಶಿಕ್ಷನ್ ಪ್ರಯಚ್ಛನ್ । ಶಿಕ್ಷತಿರ್ದಾನಕರ್ಮಾ ಪ್ರೀಣಾತಿ ಶಿಕ್ಷತೀತಿ ದಾನಕರ್ಮ-

सु सारात् । भवतीति शेषः । यच्छ देष्णं देयं धनं ज्यायान् ज्येष्ठः कनीयसोऽयत् प्राप्नुयात् । यच्चापि धनं पितृतो लब्ध्वा पुत्रोऽमृत इत् अमृत एव सन् पितृगृहं विहाय दूरं पर्यावसीत आस्ते तत् त्रिविधं चित्र्यं चायनीयं रयिं धनं नोऽस्मभ्यमा भर । आहर ॥

प्रतिपदार्थ

चित्र—आकर्षकवाद रूपवुळ्ळ । **इन्द्र**—एळै इन्द्रनेयें । **यत्**—यावा धनवन्नु । **पूर्वः**—प्रथमनाद्दिन्दवन तंदे । **अपरायय**—तन्न हुट्टियल्लि हुट्टिद पुत्रनिगे । **शिक्षन्**—कोडुवनेयें । **देष्णं**—न्यायवागि कोडबेकाद यावा धनवन्नु । **ज्यायान्**—मूत्तनादवनु । **कनीयसः**—चिक्कनिगे । **आयत्**—हॊंदिसुवनेयें । (**यत्**—यावा धनवन्नु हुडिदनंतह) । **अमृत इत्**—जीवंतनागिरुवागलें पुत्रनु । **दूरं**—पितृविनिंद बेरेयागि । **पर्यावसीत**—स्वतंत्रवागि वासमाडुवनेयें । **चित्र्य**—आकर्षकवाद । **रयिं**—आ एल्ला धनवन्नु । **नः**—नमगे । **आ भर**—तंबॊदगिसु

भावार्थ

आकर्षकवाद रूपवुळ्ळ एळै इन्द्रनेयें, यावा धनवन्नु प्रथमनेनिस्सुत्तिरुव पितृवु तन्न हॊट्टियल्लि हुट्टिद पुत्रनिगे कॊडुवनेयें, न्यायवागि कॊडबेकाद यावा धनवन्नु हुडुकुवनादवनु चिक्कवनिगे हॊंदिसुवनेयें, मत्तु यावा धनवन्नु हुंदिदनंतर जीवंतनागिरुवागलें पुत्रनु पितृविनिंद बेरेयागि स्वतंत्रवागि वासमाडुवनेयें, आकर्षकवाद आ एल्ला धनवन्नू नमगे तंदु कॊडगिसु

Engilsh Translation

ಪದಪಾಠಃ

ನ॑ಕಿಃ । ಸು॒ऽದಾಸಃ॑ । ರಥ॑ಂ । ಪರಿ॑ । ಆ॒ಸ॒ । ನ । ರೀ॒ರ॒ಮ॒ತ್ ।

ಇಂ॒ದ್ರಃ॑ । ಯಸ್ಯ॑ । ಆ॒ವಿ॒ತಾ । ಯಸ್ಯ॑ । ಮ॒ರುತ॑ಃ । ಗಮ॑ತ್ । ಸಃ । ಗೋ॒ऽಮ॑ತಿ । ವ್ರ॒ಜೇ ॥ ೧೦ ॥

ಸಾಯಣಭಾಷ್ಯಂ

ಸುದಾಸಃ ಶೋಭನದಾನಸ್ಯ ಯಜಮಾನಸ್ಯ ರಥಂ ನಕಿಃ ಪರ್ಯಾಸ । ಕಶ್ಚಿನ್ನ ಪರ್ಯಸ್ಯತಿ । ನ ರೀರಮತ್ । ನ ರಮಯತಿ ಚ । ಆತ್ಮಾರ್ಥಂ ನ ಕಶ್ಚಿದೇನಂ ಗೃಹ್ಣಾತೀತ್ಯರ್ಥಃ । ಅಪಿ ಚ ಯಸ್ಯೇಂದ್ರೋಽವಿತಾ ರಕ್ಷಿತಾ ಯಸ್ಯ ಚ ಮರುತೋಽವಿತಾರಃ ಸ ಗೋಮತಿ ಗೋಯುಕ್ತೇ ವ್ರಜೇ ಗೋಷ್ಠೇ ಗಮತ್ । ಗಚ್ಛೇತ್ ।

ಪ್ರತಿಪದಾರ್ಥ

ಸುದಾಸಃ—ಉತ್ತಮವಾದ ದಾನಿಯಾದ ಯಜಮಾನನ । **ರಥಂ**—ರಥವನ್ನು । **ನಕಿಃ**—ಯಾರೂ ಕೂಡ। **ಪರ್ಯಾಸ**—ಎದುರಿಸಿ ಹಿಂತಿರುಗಿಸಲಾರರು । **ನ ರೀರಿಮತ್**—ಯಾರೂ ಪ್ರತಿಬಂಧಿಸಲಾರರು । **ಯಸ್ಯ**—ಯಾವ

ಯಜಮಾನಸ್ಯ | **ಇಂದ್ರಃ**—ಇಂದ್ರನು | **ಅವಿತಾ**—ರಕ್ಷಕನಾಗಿಯೂ | **ಯಸ್ಯ**—ಯಾರಿಗೆ | **ಮರುತಃ**—ಮರುತ್ತುಗಳು (ರಕ್ಷಕರಾಗಿರುವರೋ) | **ಸಃ**—ಆ ಯಜಮಾನನು | **ಗೋಮತಿ**—ಗೋಯುಕ್ತವಾದ | **ವ್ರಜೇ**—ಕೊಟ್ಟಿಗೆಯನ್ನು | **ಗಮತ್**—ಹೊಂದುವನು.

ಭಾವಾರ್ಥ

ಉತ್ತಮವಾದ ದಾನಿಯಾದ ಯಜಮಾನನ ರಥವನ್ನು ಯಾರೂ ಕೂಡ ಎದುರಿಸಿ ಬಿಂತಿರುಗಿಸಲಾರರು. ಯಾರೂ ಪ್ರತಿಬಂಧಿಸಲಾರರು. ಯಾವ ಯಜಮಾನನಿಗೆ ಇಂದ್ರನು ರಕ್ಷಕನಾಗಿಯೂ, ಯಾರಿಗೆ ಮರುತ್ತುಗಳು ರಕ್ಷಕರಾಗಿಯೂ ಇರುವರೋ ಆ ಯಜಮಾನನು ಗೋಯುಕ್ತವಾದ ಕೊಟ್ಟಿಗೆಯನ್ನು ಹೊಂದುವನು

English Translation

No one overturns, no one arrests, the chariot of the liberal sacrificer, he, of whom Indra is the protector, of whom the Maruts (are the defenders). will walk in pastures filled with cattle

ಸಂಹಿತಾಪಾಠಃ

ಗಮದ್ವಾಜಂ ವಾಜಯನ್ನಿಂದ್ರ ಮರ್ತ್ಯೋ ಯಸ್ಯ ತ್ವಮವಿತಾ ಭುವಃ ।
ಅಸ್ಮಾಕಂ ಬೋಧ್ಯವಿತಾ ರಥಾನಾಮಸ್ಮಾಕಂ ಶೂರ ನೃಣಾಂ ॥ ೧೧ ॥

ಪದಪಾಠಃ

ಗಮತ್ । **ವಾಜಂ** । **ವಾಜಯನ್** । **ಇಂದ್ರ** । **ಮರ್ತ್ಯಃ** । **ಯಸ್ಯ** । **ತ್ವಂ** । **ಅವಿತಾ** । **ಭುವಃ** ।
ಅಸ್ಮಾಕಂ । **ಬೋಧಿ** । **ಅವಿತಾ** । **ರಥಾನಾಂ** । **ಅಸ್ಮಾಕಂ** । **ಶೂರ** । **ನೃಣಾಂ** ॥ ೧೧ ॥

ಸಾಯಣಭಾಷ್ಯಂ

ಹೇ ಇಂದ್ರ ತ್ವಂ ಯಸ್ಯ ಮರ್ತ್ಯಸ್ಯಾವಿತಾ ರಕ್ಷಿತಾ ಭುವಃ ಭವೇಃ ಸ ಮರ್ತ್ಯೋ ವಾಜಯನ್ ಸ್ತೋತ್ರೇಣ ತ್ವಾಂ ಬಲಿನಂ ಕುರ್ವನ್ ವಾಜಮನ್ನಂ ಗಮತ್ । ಗಚ್ಛೇತ್ । ಅಪಿ ಚ ಹೇ ಶೂರ ಅಸ್ಮಾಕಂ ವಾಸಿಷ್ಠಾನಾಂ ರಥಾನಾಮವಿತಾ ರಕ್ಷಿತಾ ಬೋಧಿ । ಭವ ॥ ಭವತೇರ್ಲೋಟಿ ರೂಪಂ । ಭಕಾರಸ್ಯ ಬಕಾರಶ್ಛಾಂದಸಃ ॥ ಅಸ್ಮಾಕಂ ನೃಣಾಂ ಪುತ್ರಾದೀನಾಂ ಚಾವಿತಾ ಭವ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ | **ತ್ವಂ**—ನೀನು | **ಯಸ್ಯ**—ಯಾವ ಮಾನವನಿಗೆ | **ಅವಿತಾ**—ರಕ್ಷಕನಾಗಿ | **ಭುವಃ**—ಆಗಿರುವೆಯೋ | **ಮರ್ತ್ಯಃ**—ಅವೇ ಮಾನವನು | **ವಾಜಯನ್**—ಸ್ತುತಿಯಿಂದ ನಿನ್ನನ್ನು ಶಕ್ತಿಯುತನನ್ನಾಗಿ ಮಾಡುತ್ತಾ | **ವಾಜಂ**—ಅನ್ನವನ್ನು | **ಗಮತ್**—ಹೊಂದಲಿ | **ಶೂರ**—ಎಲೈ ಶೂರನಾದ ಇಂದ್ರನೇ | **ಅಸ್ಮಾಕಂ**—ವಸಿಷ್ಠವಂಶೋತ್ಪನ್ನರಾದ ನಮ್ಮ | **ರಥಾನಾಂ**—ರಥಗಳಿಗೆ | **ಅವಿತಾ**—ರಕ್ಷಕನಾಗಿರಬೇಕೆಂದು | **ಬೋಧಿ**—ತಿಳಿ | **ಅಸ್ಮಾಕಂ**—ನಮ್ಮ | **ನೃಣಾಂ**—ಪುತ್ರಾದಿಗಳಿಗೂ ರಕ್ಷಕನಾಗಿರು.

ಭಾವಾರ್ಥ

ಎಲೈ ಇಂದ್ರನೇ, ನೀನು ಯಾವ ಮಾನವನಿಗೆ ರಕ್ಷಕನಾಗಿರುವೆಯೋ, ಅದೇ ಮಾನವನು ಸ್ತುತಿಯಿಂದ ನಿನ್ನನ್ನು ರಕ್ಷೆಯ ತನಸ್ಸಾಗಿ ಮಾಡುತ್ತಾ ಅನ್ನವನ್ನು ಕೊಂಡಲಿ. ಎಲೈ ಶೂರನಾದ ಇಂದ್ರನೇ, ಮಿಗಿಲಾದಂಥೋ ಕ್ಷಿಪ್ರವಾದ ನಮ್ಮ ರಥಗಳಿಗೆ ನೀನು ರಕ್ಷಕನಾಗಿರಬೇಕೆಂದು ತಿಳಿ. ನಮ್ಮ ಪುತ್ರಾದಿಗಳಿಗೂ ರಕ್ಷಕನಾಗಿರು

English Translation

Let the man of whom you, Indra, are the protector, invigorating (you with praise), enjoy (abundant) food be the preserver, hero, of our chariots, (the preserver) of our people

ಸಂಹಿತಾಪಾಠಃ

ಉದಿನ್ನ್ವಸ್ಯ ರಿಚ್ಯತೇಂಶೋ ಧನಂ ನ ಜಿಗ್ಯುಷಃ ।
ಯ ಇಂದ್ರೋ ಹರಿವಾನ್ನ ದಭಂತಿ ತಂ ರಿಪೋ ದಕ್ಷಂ ದಧಾತಿ ಸೋಮಿನಿ ॥

ಪದಪಾಠಃ

ಉತ್ । ಇತ್ । ನು । ಅಸ್ಯ । ರಿಚ್ಯತೇ । ಅಂಶಃ । ಧನಂ । ನ । ಜಿಗ್ಯುಷಃ ।
ಯಃ । ಇಂದ್ರಃ । ಹರಿವಾನ್ । ನ । ದಭಂತಿ । ತಂ । ರಿಪಃ । ದಕ್ಷಂ । ದಧಾತಿ । ಸೋಮಿನಿ ॥

ಸಾಯಣಭಾಷ್ಯಂ

ಅಸ್ಯೇಂದ್ರಸ್ಯಾಂಶೋ ಯಜ್ಞೇ ಸೋಮಸ್ಯ ಭಾಗೋಽತಿರಿಚ್ಯತೇಽನ್ಯೇಭ್ಯೋಽಪಿ ದೇವೇಭ್ಯಃ। ಇಂದ್ರಸ್ಯ ತ್ರಿಷ್ವಪಿ ಸವನೇಷು ಸೋಮಪಾನಮಸ್ತಿ ಮಾಧ್ಯಂದಿನಂ ಹಿ ಸರ್ವಮೈಂದ್ರಮಿತಿ । ಜಿಗ್ಯುಷೋ ಜಿತವತೋ ಧನಂ ನ ಧನಮಿವ । ಉದಿನ್ನ್ವಿತಿ ತ್ರಯಃ ಪೂರಣಾಃ । ಆಪಿ ಚ ಯೋ ಹರಿವಾನಿಂದ್ರಃ ಸೋಮಿನಿ ಯಜಮಾನೇ ದಕ್ಷಂ ಬಲಂ ದಧಾತಿ ಸಂದಧಾತಿ ತಂ ರಿಪೋ ರಿಪವೋ ನ ದಭಂತಿ । ನ ಹಿಂಸಂತಿ ॥

ಪ್ರತಿಪದಾರ್ಥ

ಜಿಗ್ಯುಷಃ—ಜಯಶಾಲಿಯಾದ ಪುರುಷನ । **ಧನಂ ನ**—ಧನದಂತೆ । **ಅಸ್ಯ**—ಈ ಇಂದ್ರನ । **ಅಂಶಃ**—ಯಜ್ಞಾದಲ್ಲಿನ ಸೋಮದ ಭಾಗವು । **ಉದಿನ್ನು ರಿಚ್ಯತೇ**—ಖಂಡಿತವಾಗಿಯೂ ಇತರ ದೇವತೆಗಳ ಭಾಗಗಳಿಗಿಂತಲೂ ಅಧಿಕವಾಗಿರುತ್ತದೆ । **ಹರಿವಾನ್**—ಹರಿಸಂಜ್ಞಕವಾದ ಅಶ್ವವುಳ್ಳ । **ಯಃ ಇಂದ್ರಃ**—ಯಾವ ಇಂದ್ರನು । **ಸೋಮಿನಿ**—ಯಜಮಾನನಲ್ಲಿ । **ದಕ್ಷಂ**—ಬಲವನ್ನು । **ದಧಾತಿ**—ತುಂಬಿಕೊಡುವನೋ । **ತಂ**—ಅಂತಹ ಇಂದ್ರನನ್ನು । **ರಿಪಃ**—ಶತ್ರುಗಳು । **ನ ದಭಂತಿ**—ಹಿಂಸಿಸುವುದಿಲ್ಲ.

ಭಾವಾರ್ಥ

ಜಯಶಾಲಿಯಾದ ಪುರುಷನ ಧನವು ವೃದ್ಧಿಯನ್ನು ಹೊಂದುವಂತೆ, ಯಜ್ಞದಲ್ಲಿ ಇಂದ್ರನಿಗೆ ಸೇರಬೇಕಾದ ಸೋಮದ ಭಾಗವು ಇತರ ದೇವತೆಗಳ ಭಾಗಗಳಿಗಿಂತಲೂ ಅಧಿಕವಾಗಿರುತ್ತದೆ, ಹರಿಸಂಜ್ಞಕವಾದ ಅಶ್ವವುಳ್ಳ ಯಾನ ಇಂದ್ರನು ಯಜಮಾನನಲ್ಲಿ ಬಲವನ್ನು ತುಂಬಿಕೊಡುವನೋ ಅಂತಹ ಇಂದ್ರನನ್ನು ಶತ್ರುಗಳು ಹಿಂಸಿಸುವುದಿಲ್ಲ

English Translation

Verily (Indra's) share (of the Soma) exceeds (that of other deities) like the wealth of the victorious enemies overcome not him, who is the lord of bay steeds, who gives strength to the offerer of the libation.

ಸಂಹಿತಾಪಾಠಃ

ಮಂತ್ರಮಖರ್ವಂ ಸುಧಿತಂ ಸುಪೇಶಸಂ ದಧಾತ ಯಜ್ಞಿಯೇಷ್ವಾ ।
ಪೂರ್ವೀಶ್ಚನ ಪ್ರಸಿತಯಸ್ತರಂತಿ ತಂ ಯ ಇಂದ್ರೋ ಕರ್ಮಣಾ ಭುವತ್ ॥

ಪದಪಾಠಃ

ಮಂತ್ರಂ । ಅಖರ್ವಂ । ಸುಽಧಿತಂ । ಸುಽಪೇಶಸಂ । ದಧಾತ । ಯಜ್ಞಿಯೇಷು । ಆ ।
ಪೂರ್ವೀಃ । ಚನ । ಪ್ರಽಸಿತಯಃ । ತರಂತಿ । ತಂ । ಯಃ । ಇಂದ್ರೇ । ಕರ್ಮಣಾ । ಭುವತ್ ॥ ೧೩ ॥

ಸಾಯಣಭಾಷ್ಯಂ

ಹೇ ಜನಾಃ ಅಖರ್ವಮನಲ್ಪಂ ಸುಧಿತಂ ಸುವಿಹಿತಂ ಸುಪೇಶಸಂ ಶೋಭನರೂಪಂ ಮಂತ್ರಂ ಸ್ತೋತ್ರಂ ಯಜ್ಞಿಯೇಷು ಯಜನೀಯೇಷು ದೇವೇಷು ಮಧ್ಯ ಇಂದ್ರಾಯ ದಧಾತ । ವಿಧತ್ತ । ಯೋ ಜನಃ ಕರ್ಮಣಾ ಸ್ತುತ್ಯಾದಿರೂಪೇಣೇಂದ್ರ ಇಂದ್ರಸ್ಯ ಚಿತ್ತೇ ಭುವತ್ ಭವೇತ್ ತಂ ಜನಂ ಪೂರ್ವೀರ್ಬಹ್ವ್ಯಃ ಪ್ರಸಿತಯಃ ಪಾಶಾದೀನಿ ಬಂಧನಾನಿ । ಚನೇತಿ ಸಮುದಾಯೋ ನೇತ್ಯರ್ಥೇ ವರ್ತತೇ । ನ ತರಂತಿ । ನ ವ್ಯಾಪ್ನುವಂತೀತ್ಯರ್ಥಃ ॥

ಪ್ರತಿಪದಾರ್ಥ

(ಎಲೈ ಯಜಮಾನಾದಿಗಳೇ), **ಅಖರ್ವಂ**—ಅಧಿಕವಾದ ಮಾಹಾತ್ಮ್ಯವುಳ್ಳದ್ದೂ । **ಸುಧಿತಂ**—ಉತ್ತಮವಾಗಿ ಪರಿತವಾದುದೂ । **ಸುಪೇಶಸಂ**—ಶ್ರೇಷ್ಠವಾದ ಸ್ವರೂಪವುಳ್ಳದ್ದೂ ಆದ । **ಮಂತ್ರಂ**—ಸ್ತೋತ್ರವನ್ನು । **ಯಜ್ಞಿಯೇಷು**—ಯಜ್ಞಾರ್ಹರಾದ ದೇವತೆಗಳ ನಡುವೆ ಇಂದ್ರನನ್ನು ಉದ್ದೇಶಿಸಿ । **ಆ ದಧಾತ**—ಅರ್ಪಿಸಿರಿ । **ಯಃ**—ಯಾವ ಯಜಮಾನನು । **ಕರ್ಮಣಾ**—ಸ್ತುತ್ಯಾದಿಕರ್ಮಗಳಿಂದ । **ಇಂದ್ರೇ**—ಇಂದ್ರನಲ್ಲರ್ಪಿಸಿದ ಮನಸ್ಸುಳ್ಳವನಾಗಿ । **ಭುವತ್**—ಭಕ್ತಿಯುತನಾಗಿರುವನೋ । **ತಂ**—ಆ ಯಜಮಾನನನ್ನು । **ಪೂರ್ವೀಃ**—ಅನೇಕವಿಧವಾದ । **ಪ್ರಸಿತಯಃ ಚನ**—ಬಂಧನಗಳೂ ಕೂಡ । **ತರಂತಿ**—ಅಂಟದೇ ಕಳಚಿಹೋಗುವುವು

ಭಾವಾರ್ಥ

ಎಲೈ ಯಜಮಾನಾದಿಗಳೇ, ಅಧಿಕವಾದ ಮಾಹಾತ್ಮ್ಯವುಳ್ಳದ್ದೂ ಉತ್ತಮವಾಗಿ ಪರಿತವಾದುದೂ, ಶ್ರೇಷ್ಠವಾದ ಸ್ವರೂಪವುಳ್ಳದ್ದೂ ಆದ ಸ್ತೋತ್ರವನ್ನು ಯಜ್ಞಾರ್ಹರಾದ ದೇವತೆಗಳ ನಡುವೆ ಇಂದ್ರನನ್ನು ಉದ್ದೇಶಿಸಿ ಅರ್ಪಿಸಿರಿ ಯಾವ ಯಜಮಾನನು ಸ್ತುತ್ಯಾದಿಕರ್ಮಗಳಿಂದ ಇಂದ್ರನಲ್ಲರ್ಪಿಸಿದ ಮನಸ್ಸುಳ್ಳವನಾಗಿ ಭಕ್ತಿಯುತನಾಗಿರುವನೋ ಆ ಯಜಮಾನನನ್ನು ಅನೇಕವಿಧವಾದ ಬಂಧನಗಳೂ ಕೂಡ ಅಂಟದೇ ಕಳಚಿಹೋಗುವುವು

English Translation

Address (to Indra) amongst the gods, the ample, well-uttered, and graceful prayer many bonds entangle not him who, by his devotion, abides in Indra.

ಸಂಹಿತಾಪಾಠಃ

ಕಸ್ತ್ವೀಂದ್ರ ತ್ವಾವಸುಮಾ ಮರ್ತ್ಯೋ ದಧರ್ಷತಿ ।
ಶ್ರದ್ಧಾ ಇತ್ತೇ ಮಘವನ್ಪಾರ್ಯೇ ದಿವಿ ವಾಜೀ ವಾಜಂ ಸಿಷಾಸತಿ ॥

ಪದಪಾಠಃ

ಕಃ । ತಂ । ಇಂದ್ರ । ತ್ವಾವಸುಂ । ಆ । ಮರ್ತ್ಯಃ । ದಧರ್ಷತಿ ।
ಶ್ರದ್ಧಾ । ಇತ್ । ತೇ । ಮಘವನ್ । ಪಾರ್ಯೇ । ದಿವಿ । ವಾಜೀ । ವಾಜಂ । ಸಿಷಾಸತಿ ॥ ೧೪ ॥

ಸಾಯಣಭಾಷ್ಯಂ

ಹೇ ಇಂದ್ರ ತವ ಚಿತ್ತೇ ಯೋ ಭವೇತ್ ತ್ವಾವಸುಂ । ತ್ವಂ ವಸುರ್ವ್ಯಾಪಕೋ ಯಸ್ಯೇತಿ ಬಹುವ್ರೀಹಿಃ । ತಂ ಜನಂ ಕೋ ಮರ್ತ್ಯ ಆ ದಧರ್ಷತಿ । ಆಧರ್ಷೇತ್ । ಹೇ ಮಘವನ್ ತೇ ತ್ವದರ್ಥಂ ಯಃ ಶ್ರದ್ಧಾ ಶ್ರದ್ಧಯಾ ಯುಕ್ತಃ ಸನ್ ವಾಜೀ ಹವಿಷ್ಮಾನ್ ಭವೇತ್ ಪಾರ್ಯೇ ದಿವಿ ಸೋಮ್ಯೇಽಹನಿ ಸ ವಾಜಮನ್ನಂ ಬಲಂ ವಾ ಸಿಷಾಸತಿ । ಸೇವತೇ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । ತ್ವಾವಸುಂ—ನಿನ್ನನ್ನೇ ರಕ್ಷಕನನ್ನಾಗಿ ಹೊಂದಿರುವ । ತಂ—ಯಜಮಾನನನ್ನು । ಕಃ ಮರ್ತ್ಯಃ—ಯಾವ ಮಾನವನು ತಾನೇ । ಆ ದಧರ್ಷತಿ—ಹಿಂಸಿಸಬಲ್ಲನು ? । ಮಘವನ್—ಧನವಂತನಾದ ಎಲೈ ಇಂದ್ರನೇ । ತೇ—ನಿನ್ನನ್ನುದ್ದೇಶಿಸಿ । (ಯಃ—ಯಾರು) ಶ್ರದ್ಧಾ—ಶ್ರದ್ಧೆಯಿಂದ ಕೂಡಿದವನಾಗಿ । ವಾಜೀ—ಹವಿಷ್ಮಂತನಾಗುವನೋ । (ಜನನು) ಪಾರ್ಯೇ ಇತ್ ದಿವಿ—ಸೋಮಾರ್ಪಣದ ದಿನವೇ । ವಾಜಂ—ಅನ್ನವನ್ನು । ಸಿಷಾಸತಿ—ಸೇವಿಸುತ್ತಾನೆ

ಭಾವಾರ್ಥ

ಎಲೈ ಇಂದ್ರನೇ, ನಿನ್ನನ್ನೇ ರಕ್ಷಕನನ್ನಾಗಿ ಹೊಂದಿರುವ ಯಜಮಾನನನ್ನು ಯಾವ ಮಾನವನು ತಾನೇ ಹಿಂಸಿಸಬಲ್ಲನು ? ಧನವಂತನಾದ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ಶ್ರದ್ಧೆಯಿಂದ ಕೂಡಿದವನಾಗಿ ಯಾರು ಹವಿಷ್ಮಂತನಾಗಿ ಹವಿಸ್ಸನ್ನು ನಿನಗರ್ಪಿಸುವನೋ ಅವನು ಸೋಮಾರ್ಪಣದ ದಿನವೇ ಅನ್ನವನ್ನು ಸೇವಿಸುತ್ತಾನೆ (ಪಡೆಯುತ್ತಾನೆ).

English Translation

What mortal, Indra, injures him who has you for his support? He who offers you (sacrificial) food, Maghavan, with faith, he obtains food on the day of the libation.

ಸಂಹಿತಾಪಾಠಃ

ಮಘೋನಃ ಸ್ಮ ವೃತ್ರಹತ್ಯೇಷು ಚೋದಯ ಯೇ ದದತಿ ಪ್ರಿಯಾ ವಸು ।
ತವ ಪ್ರಣೀತೀ ಹರ್ಯಶ್ವ ಸೂರಿಭಿರ್ವಿಶ್ವಾ ತರೇಮ ದುರಿತಾ ॥

ಪದಪಾಠಃ

ಮಘೋನಃ । ಸ್ಮ । ವೃತ್ರಹಽತ್ಯೇಷು । ಚೋದಯ । ಯೇ । ದದತಿ । ಪ್ರಿಯಾ । ವಸು ।
ತವ । ಪ್ರಽನೀತೀ । ಹರ್ಯಽಶ್ವ । ಸೂರಿಽಭಿಃ । ವಿಶ್ವಾ । ತರೇಮ । ದುಃಽಇತಾ ॥ ೧೫ ॥

ಸಾಯಣಭಾಷ್ಯಂ

ಹೇ ಇಂದ್ರ ಮಘೋನೋ ಧನವತಸ್ತೇ । ತ್ವದರ್ಥಮಿತ್ಯರ್ಥಃ । ಪ್ರಿಯಾ ಪ್ರಿಯಾಣಿ ವಸು ವಸೂನಿ ಧನಾನಿ ಯೇ ಜನಾ ದದತಿ ಪ್ರಯಚ್ಛಂತಿ ತಾಞ್ಜನಾನ್ ವೃತ್ರಹತ್ಯೇಷು ಸಂಗ್ರಾಮೇಷು ಚೋದಯ । ಪ್ರೇರಯ । ಹೇ ಹರ್ಯಶ್ವ ತವ ಪ್ರಣೀತೀ ಪ್ರಣೀತ್ಯಾ ಪ್ರಣಯನೇನ ಸೂರಿಭಿಃ ಸ್ತೋತೃಭಿಃ ಪುತ್ರಾದಿಭಿಃ ಸಾರ್ಧಂ ವಿಶ್ವಾ ವಿಶ್ವಾನಿ ದುರಿತಾ ದುರಿತಾನಿ ತರೇಮ ॥

ಪ್ರತಿಪದಾರ್ಥ

(ಎಲೈ ಇಂದ್ರನೇ) **ಯೇ**—ಯಾವ ಯಜಮಾನರು । **ಮಘೋನಃ**—ಧನವಂತನಾದ ನಿನಗೆ । **ಪ್ರಿಯಾ**—ಹಿತಕರಗಳಾದ । **ವಸು**—ಧನಾದಿಗಳನ್ನು । **ದದತಿ ಸ್ಮ**—ಅರ್ಪಿಸುವರೋ । (ಅವರನ್ನು) **ವೃತ್ರಹತ್ಯೇಷು**—ಸಂಗ್ರಾಮಗಳಲ್ಲಿ । **ಚೋದಯ**—ಶಕ್ತಿಯುತರಾಗುವಂತೆ ಪ್ರೇರಿಸು । **ಹರ್ಯಶ್ವ**—ಪಿಂಸಂಜ್ಞಕವಾದ ಅಶ್ವಗಳುಳ್ಳ ಎಲೈ ಇಂದ್ರನೇ । **ತವ**—ನಿನ್ನ । **ಪ್ರಣೀತೀ**—ಪ್ರೀತಿಯುತವಾದ ನೇತೃತ್ವದಿಂದ । **ಸೂರಿಭಿಃ**—ಸ್ತೋತೃಗಳಾದ ಪುತ್ರಾದಿಗಳೊಡಗೂಡಿದ ನಾವು । **ವಿಶ್ವಾ**—ಸಮಸ್ತವಾದ । **ದುರಿತಾ**—ದುಃಖಗಳನ್ನು । **ತರೇಮ**—ದಾಟುವಂತಾಗಲಿ.

ಭಾವಾರ್ಥ

ಎಲೈ ಇಂದ್ರನೇ, ಯಾವ ಯಜಮಾನರು ಧನವಂತನಾದ ನಿನಗೆ ಹಿತಕರಗಳಾದ ಧನಾದಿಗಳನ್ನು ಅರ್ಪಿಸುವರೋ ಅವರನ್ನು ಸಂಗ್ರಾಮಗಳಲ್ಲಿ ಶಕ್ತಿಯುತರಾಗುವಂತೆ ಪ್ರೇರಿಸು. ಹರಿಸಂಜ್ಞಕವಾದ ಅಶ್ವಗಳುಳ್ಳ ಎಲೈ ಇಂದ್ರನೇ, ನಿನ್ನ ಪ್ರೀತಿಯುತವಾದ ನೇತೃತ್ವದಿಂದ ಸ್ತೋತೃಗಳಾದ ಪುತ್ರಾದಿಗಳೊಡಗೂಡಿದ ನಾವು ಸಮಸ್ತವಾದ ದುಃಖಗಳನ್ನೂ ದಾಟುವಂತಾಗಲಿ.

English Translation

Animate (those men) for the destruction of their foes, who offer treasures which are dear to you, the abounder in wealth: may we, lord of bay

steeds, along with (your) worshippers, pass over all difficulties by your guidance.

ಸಂಹಿತಾಪಾಠಃ

ತವೇದಿಂದ್ರಾವಮಂ ವಸು ತ್ವಂ ಪುಷ್ಯಸಿ ಮಧ್ಯಮಂ ।
ಸತ್ರಾ ವಿಶ್ವಸ್ಯ ಪರಮಸ್ಯ ರಾಜಸಿ ನಕಿಷ್ಟ್ವಾ ಗೋಷು ವೃಣ್ವತೇ ।।

ಪದಪಾಠಃ

ತವ । ಇತ್ । ಇಂದ್ರ । ಅವಮಂ । ವಸು । ತ್ವಂ । ಪುಷ್ಯಸಿ । ಮಧ್ಯಮಂ ।
ಸತ್ರಾ । ವಿಶ್ವಸ್ಯ । ಪರಮಸ್ಯ । ರಾಜಸಿ । ನಕಿಃ । ತ್ವಾ । ಗೋಷು । ವೃಣ್ವತೇ ॥ ೧೬ ॥

ಸಾಯಣಭಾಷ್ಯಂ

ಹೇ ಇಂದ್ರ ಅವಮಮಧಮಂ ತ್ರಪುಸೀಸಾದಿಕಂ ವಸು ಧನಂ । ಯದ್ವಾ । ಭೌಮಂ ವಸ್ವವಮಂ। ತವೇತ್ತವೈವ । ತ್ವಂ ತ್ವಮೇವ ಮಧ್ಯಮಂ ವಸು ರಜತಹಿರಣ್ಯಾದಿಕಮಾಂತರಿಕ್ಷಂ ವಾ ಪುಷ್ಯಸಿ । ವಿಶ್ವಸ್ಯ ಸರ್ವಸ್ಯ ಪರಮಸ್ಯೋತ್ತಮಸ್ಯಾಪಿ ರತ್ನಾದೇರ್ದಿವ್ಯಸ್ಯ ವಾ ವಸುನೋ ರಾಜಸಿ । ಈಶಿಷೇ । ಸತ್ರಾ ಸತ್ಯಮೇವ । ಅಪಿ ಚ ತ್ವಾ ತ್ವಾಂ ಗೋಷು ನಿಮಿತ್ತೇಷು ನಕಿರ್ವೃಣ್ವತೇ । ಕೇಽಪಿ ನ ವಾರಯಂತಿ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ, । **ಅವಮಂ**—ಅತ್ಯತ್ತಮವಲ್ಲದ ಸೀಸಾದಿ ಯಾವ । **ವಸು**—ಧನಗಳೆಯೋ ಅವೆಲ್ಲವೂ । **ತವೇತ್**—ನಿನ್ನದೇ ಆಗಿವೆ । **ತ್ವಂ**—ನೀನೇ । **ಮಧ್ಯಮಂ**—ಮಧ್ಯಸ್ಥವಾಗಿರುವ ರಜತಾದಿಗಳನ್ನು । **ಪುಷ್ಯಸಿ**—ವೃದ್ಧಿಗೊಳಿಸುತ್ತೀಯೆ । **ವಿಶ್ವಸ್ಯ**—ಸಮಸ್ತವಾದ । **ಪರಮಸ್ಯ**—ಉತ್ಕೃಷ್ಟವಾದ ರತ್ನಾದಿಗಳಿಗೂ । **ರಾಜಸಿ**—ನೀನೇ ಈಶ್ವರನಾಗಿದ್ದೀಯೆ । **ಸತ್ರಾ**—ಸತ್ಯವಾಗಿಯೂ । **ತ್ವಾ**—ನಿನ್ನನ್ನು । **ಗೋಷು**—ಗೋನಿಮಿತ್ತವಾಗಿ ಪ್ರಯತ್ನಿಸುವಾಗ । **ನಕಿಃ ವೃಣ್ವತೇ**—ಯಾರೂ ತಡೆಯಲಾರರು.

ಭಾವಾರ್ಥ

ಎಲೈ ಇಂದ್ರನೇ, ಅತ್ಯುತ್ತಮವಲ್ಲದ ಸೀಸಾದಿ ಯಾವ ಧನಗಳೆಯೋ ಅವೆಲ್ಲವೂ ನಿನ್ನದೇ ಆಗಿದೆ. ನೀನೇ ಮಧ್ಯಸ್ಥವಾಗಿರುವ ರಜತಾದಿಗಳನ್ನೂ ವೃದ್ಧಿಗೊಳಿಸುತ್ತೀಯೆ ಉತ್ಕೃಷ್ಟವಾದ ಸಮಸ್ತ ರತ್ನಾದಿಗಳಿಗೂ ನೀನೇ ಈಶ್ವರನಾಗಿದ್ದೀಯೆ. ಗೋನಿಮಿತ್ತವಾಗಿ ಪ್ರಯತ್ನಿಸುವಾಗ ಸತ್ಯವಾಗಿಯೂ ನಿನ್ನನ್ನು ಯಾರೂ ತಡೆಗಟ್ಟಲಾರರು.

English Translation

Yours Indra, is the vast valuable wealth: you cherish the middling: you rule over all that which is the most precious: no one opposes you in (the recovering of the) cattle.

ವಿಶೇಷವಿಷಯಗಳು

ಈ ಋಕ್ಕಿನಲ್ಲಿ, **ಅವಮ; ಮಧ್ಯಮ** ಮತ್ತು **ಪರಮ** ಎಂಬ ಪದಗಳಿಗೆ ಪೃಥ್ವೀ, ಅಂತರಿಕ್ಷ ಮತ್ತು ಉತ್ಕೃಷ್ಟವಾದ ದ್ಯುಲೋಕ ಎಂಬ ಅರ್ಥಗಳೂ ಸಾಧ್ಯ. ಇಂದ್ರನು ಪೃಥಿವ್ಯಾದಿ ಸಕಲ ಲೋಕಗಳಿಗೂ ಒಬ್ಬನೇ ಪ್ರಭುವು ಎಂಬ ತಾತ್ಪರ್ಯವನ್ನೂ ಹೇಳಬಹುದು.

ಸಂಹಿತಾಪಾಠಃ

ತ್ವಂ ವಿಶ್ವಸ್ಯ ಧನದಾ ಅಸಿ ಶ್ರುತೋ ಯ ಈಂ ಭವಂತ್ಯಾಜಯಃ ।
ತವಾಯಂ ವಿಶ್ವಃ ಪುರುಹೂತ ಪಾರ್ಥಿವೋ ವಸ್ಯುರ್ನಾಮ ಭಿಕ್ಷತೇ ॥

ಪದಪಾಠಃ

ತ್ವಂ । ವಿಶ್ವಸ್ಯ । ಧನ್ಯದಾಃ । ಅಸಿ । ಶ್ರುತಃ । ಯೇ । ಈಂ । ಭವಂತಿ । ಆಜಯಃ ।
ತವ । ಅಯಂ । ವಿಶ್ವಃ । ಪುರುಹೂತ । ಪಾರ್ಥಿವಃ । ವಸ್ಯುಃ । ನಾಮ । ಭಿಕ್ಷತೇ ॥ ೧೭ ॥

ಸಾಯಣಭಾಷ್ಯಂ

ಹೇ ಇಂದ್ರ ತ್ವಂ ವಿಶ್ವಸ್ಯ ಸರ್ವಸ್ಯ ಸ್ತೋತುರ್ಯಜಮಾನಸ್ಯ ವಾ ಧನದಾ ಧನಸ್ಯ ದಾತಾ ಸಞ್ಶ್ರುತಃ ಪ್ರಸಿದ್ಧೋಽಸಿ । ಯ ಈಂ ಯ ಏತ ಆಜಯೋ ಯುದ್ಧಾನಿ ಭವಂತಿ ತೇಷ್ವಪಿ ಧನದಾಃ ಶ್ರುತೋಽಸಿ । ಹೇ ಪುರುಹೂತ ವಿಶ್ವಃ ಸರ್ವೋಽಯಯಂ ಪಾರ್ಥಿವೋ ಜನಸ್ತವ । ತ್ವತ್ತ ಇತ್ಯರ್ಥಃ । ಅವಸ್ಯೂ ರಕ್ಷಾಮಿಚ್ಛನ್ನಾಮಾನ್ನಮುದಕಂ ವಾ । ಬರ್ಹಿರ್ನಾಮೇತ್ಯುದಕನಾಮಸು ಪಾಠಾತ್ । ಭಿಕ್ಷತೇ। ಯಾಚತೇ । ತ್ವಾಮೇವೇತಿ ಶೇಷಃ ॥

ಪ್ರತಿಪದಾರ್ಥ

(ಎಲೈ ಇಂದ್ರನೇ), **ತ್ವಂ**—ನೀನು । **ವಿಶ್ವಸ್ಯ**—ಸಮಸ್ತವಾದ ಯಜಮಾನರಿಗೂ । **ಧನದಾಃ**—ಧನಪ್ರದನಾಗಿದ್ದೀಯೆಂದು । **ಶ್ರುತಃ**—ಪ್ರಸಿದ್ಧನಾಗಿ । **ಅಸಿ**—ಆಗಿದ್ದೀಯೆ. । **ಯ ಈಂ**—ಯಾವ ಪ್ರಸಿದ್ಧವಾದ । **ಆಜಯಃ**—ಯುದ್ಧಗಳು । **ಭವಂತಿ**—ಸಂಭವಿಸುವುವೋ ಅವುಗಳಲ್ಲೂ ಧನಪ್ರದನಾಗಿದ್ದೀಯೆ । **ಪುರುಹೂತ**—ಅನೇಕರ ಆಹ್ವಾನಕ್ಕೆ ಪಾತ್ರನಾದ ಎಲೈ ಇಂದ್ರನೇ । **ಪಾರ್ಥಿವಃ**—ಪೃಥ್ವಿಗೆ ಸೇರಿದ । **ವಿಶ್ವಃ ಅಯಂ**—ಸಕಲ ಮಾನವರೂ ಸಹ । **ತವ ಅವಸ್ಯುಃ**—ನಿನ್ನ ರಕ್ಷಣೆಯನ್ನಪೇಕ್ಷಿಸಿ । **ನಾಮ**—ಅನ್ನಾದಿಗಳನ್ನು । **ಭಿಕ್ಷತೇ**—ಯಾಚಿಸುತ್ತಾರೆ.

ಭಾವಾರ್ಥ

ಎಲೈ ಇಂದ್ರನೇ, ನೀನು ಸಕಲ ಯಜಮಾನರಿಗೂ ಧನಪ್ರದನಾಗಿದ್ದೀಯೆಂದು ಪ್ರಸಿದ್ಧನಾಗಿದ್ದೀಯೆ. ಯಾವ ಯುದ್ಧಗಳು ಪ್ರಸಿದ್ಧವಾಗಿ ಸಂಭವಿಸುವುವೋ ಅವುಗಳಲ್ಲೂ ಧನಪ್ರದನಾಗಿದ್ದೀಯೆ. ಅನೇಕರ ಆಹ್ವಾನಕ್ಕೆ ಪಾತ್ರನಾದ ಎಲೈ ಇಂದ್ರನೇ, ಪೃಥ್ವಿಗೆ ಸೇರಿದ ಸಕಲ ಮಾನವರೂ ಸಹ ನಿನ್ನ ರಕ್ಷಣೆಯನ್ನಪೇಕ್ಷಿಸಿ ಅನ್ನಾದಿಗಳನ್ನು ಯಾಚಿಸುತ್ತಾರೆ.

English Translation

You are celebrated as the giver of wealth to all, even where batt occur all the people of the earth, desirous of protection, solicit you, i invoked of many

ಸಂಹಿತಾಪಾಠಃ

ಯದಿಂದ್ರ ಯಾವತಸ್ತ್ವಮೇತಾವದಹಮೀಶೀಯ ।

ಸ್ತೋತಾರಮಿದ್ದಿಧಿಷೇಯ ರದಾವಸೋ ನ ಪಾಪತ್ವಾಯ ರಾಸೀಯ ॥

ಪದಪಾಠಃ

ಯತ್ । ಇಂದ್ರ । ಯಾವತಃ । ತ್ವಂ । ಏತಾವತ್ । ಅಹಂ । ಈಶೀಯ ।

ಸ್ತೋತಾರಂ । ಇತ್ । ದಿಧಿಷೇಯ । ರದವಸೋ ಇತಿ ರದವಸೋ । ನ । ಪಾಪತ್ವಾಯ । ರಾಸೀಯ

ಸಾಯಣಭಾಷ್ಯಂ

ಹೇ ಇಂದ್ರ ಯದ್ಯಸ್ಮಾಕೋ ಯಾವತೋ ಧನಸ್ಯ ತ್ವಮೀಶಿಷೇ ಏತಾವತ್ ॥ ಷಷ್ಠ್ಯಾ ಲುಕ್ ಏತಾವತೋ ಧನಸ್ಯಾಹಮೀಶೀಯೇ ಈಶ್ವರೋ ಭವೇಯಂ ಹೇ ರದವಸೋ । ರದತಿ ದದಾತಿ ವಸೂನಿ ರದವಸುಃ । ತತ್ಸೋಽಹಮಸ್ಮದೀಯಂ ಸ್ತೋತಾರಮಿದ್ದಿಧಿಷೇಯ । ಧನಪ್ರದಾನೇನ ಧಾರಯೇಯಮೇವ । ಪಾಪತ್ವಾಯ ನ ರಾಸೀಯ । ನ ದದ್ಯಾಂ ॥

ಪ್ರತಿಪದಾರ್ಥ

ರದವಸೋ—ಧನವಂತನಾದ । **ಇಂದ್ರ**—ಎಲೈ ಇಂದ್ರನೇ । **ಯತ್**—ಯಾವ ರೀತಿ । **ಯಾವತ** ಯಾವ ಯಾವ ಧನಕ್ಕೆಲ್ಲಾ । **ತ್ವಂ**—ನೀನು ಒಡೆಯನಾಗಿರುವೆಯೋ । **ಏತಾವತ್**—ಅದೇರೀತಿ ಅದೇ ಧನಕ್ಕೆ **ಅಹಂ**—ನಾನು । **ಈಶೀಯೆ**—ಒಡೆಯನಾಗಿದ್ದಿದ್ದೇ ಆದರೆ । **ಸ್ತೋತಾರಮಿತ್**—ಸ್ತೋತೃಗಳಿಗೆ ಮಾತ್ರ **ದಿಧಿಷೇಯ**—ಧನಸ್ಸ್ರದಾನದಿಂದ ಧಾರಕನಾಗಿರುತ್ತಿದ್ದೆನು। **ಪಾಪತ್ವಾಯ**—ಪಾಪಕರ್ಮಗಳಿಗಾಗಿ। **ನ ರಾಸೀಯ** ಖಂಡಿತ ಕೊಡುತ್ತಿರಲಿಲ್ಲ

ಭಾವಾರ್ಥ

ಧನವಂತನಾದ ಎಲೈ ಇಂದ್ರನೇ, ಯಾವ ರೀತಿ ಯಾವಯಾವ ಧನಕ್ಕೆಲ್ಲಾ ನೀನು ಒಡೆಯನಾಗಿರುವೆ ಅದೇ ರೀತಿ ಅದೇ ಧನಕ್ಕೆಲ್ಲಾ ನಾನೂ ಒಡೆಯನಾಗಿದ್ದಿದ್ದೇ ಆದರೆ ಸ್ತೋತೃಗಳಿಗೆ ಮಾತ್ರವೇ ನಾನು ಧನಪ್ರದಿಂದ ಧಾರಕನಾಗಿರುತ್ತಿದ್ದೆನು ಪಾಪಕರ್ಮಗಳಿಗಾಗಿ ಖಂಡಿತ ಕೊಡುತ್ತಿರಲಿಲ್ಲ

English Translation

If I were lord of as much (affluence) as you are, Indra, then mi I support (your) worshippers, dispenser of wealth, and not squander it u wickedness.

ಸಂಹಿತಾಪಾಠಃ

ಶಿಕ್ಷೇಯಮಿನ್ಮಹಯತೇ ದಿವೇದಿವೇ ರಾಯ ಆ ಕುಹಚಿದ್ವಿದೇ ।
ನಹಿ ತ್ವದನ್ಯನ್ಮಘವನ್ನ ಆಪ್ಯಂ ವಸ್ಯೋ ಅಸ್ತಿ ಪಿತಾ ಚನ ॥ ೧೯ ॥

ಪದಪಾಠಃ

ಶಿಕ್ಷೇಯಂ । ಇತ್ । ಮಹಯತೇ । ದಿವೇದಿವೇ । ರಾಯಃ । ಆ । ಕುಹಚಿತ್ । ವಿದೇ ।
ನಹಿ । ತ್ವತ್ । ಅನ್ಯತ್ । ಮಘವನ್ । ನಃ । ಆಪ್ಯಂ । ವಸ್ಯಃ । ಅಸ್ತಿ । ಪಿತಾ । ಚನ ॥ ೧೯ ॥

ಸಾಯಣಭಾಷ್ಯಂ

ಕುಹಚಿದ್ವಿದೇ । ಕುತ್ರಚಿದ್ವಿದ್ಯಮಾನಃ ಕುಹಚಿದ್ವಿತ್ । ತಸ್ಮೈ । ಯತ್ರ ಕ್ವಾಪಿ ವಿದ್ಯಮಾನಾಯೇತ್ಯರ್ಥಃ । ಮಹಯತೇ ಪೂಜಯತೇ ಜನಾಯ ದಿವೇ ದಿವೇ ಪ್ರತಿದಿನಂ ರಾಯೋ ಧನಾನಿ ಶಿಕ್ಷೇಯಮಿತ್ । ದದ್ಯಾಮೇವ । ಆಕಾರಃ ಪೂರಣಃ । ಏವಮಿಂದ್ರಸ್ಯ ವಾಕ್ಯಂ ಶ್ರುತ್ವಾ ಸಂತುಷ್ಟ ಋಷಿರ್ವದತಿ । ಹೇ ಮಘವನ್ ತ್ವತ್ತ್ವತ್ತೋಽನ್ಯದಸ್ಮಾಕಮಾಪ್ಯಂ ಜ್ಞಾತೇಯಂ ನ ಹ್ಯಸ್ತಿ । ವಸ್ಯಃ ಪ್ರಶಸ್ಯಃ ಪಿತಾ ಚನ ಪಾಲಯಿತಾ ಚ ತ್ವದನ್ಯೋ ನಾಸ್ತೀತ್ಯರ್ಥಃ ॥

ಪ್ರತಿಪದಾರ್ಥ

ಕುಹಚಿದ್ವಿದೇ—ಯಾವ ಯಾವ ಸ್ಥಳದಲ್ಲಿದ್ದರೂ ಸಹ । **ಮಹಯತೇ**—ಪೂಜಕನಾದ ಯಜಮಾನನಿಗೆ । **ದಿವೇ ದಿವೇ**—ಪ್ರತಿದಿನವೂ । **ರಾಯಃ**—ಧನಗಳನ್ನು । **ಆ ಶಿಕ್ಷೇಯಮಿತ್**—ನಾನು ಖಂಡಿತ ಕೊಡುವೆನು (ಎಂದು ಇಂದ್ರನು ಪ್ರಕಟಿಸುವನು) । **ಮಘವನ್**—ಧನವಂತನಾದ ಎಲೈ ಇಂದ್ರನೇ । **ತ್ವತ್**—ನಿನಗಿಂತಲೂ। **ಅನ್ಯತ್**—ಬೇರೆಯವರಾದ । **ಆಪ್ಯಂ**—ಹಿತಕಾರಿಗಳು । **ನಹಿ ಅಸ್ತಿ**—ಯಾರೂ ಇಲ್ಲವು । **ನಃ**—ನಮಗೆ । **ವಸ್ಯಃ**—ಶ್ರೇಷ್ಠನಾದ । **ಪಿತಾ ಚನ**—ಪಾಲಕನೂ ಯಾರೂ ಇಲ್ಲ.

ಭಾವಾರ್ಥ

ಯಾವ ಯಾವ ಪ್ರದೇಶಗಳಲ್ಲಿದ್ದರೂ ಪೂಜಕನಾದ ಯಜಮಾನನಿಗೆ ನಾನು ಪ್ರತಿದಿನವೂ ಧನಗಳನ್ನು ಖಂಡಿತವಾಗಿ ಕೊಡುತ್ತೇನೆ ಎಂಬ ಇಂದ್ರನ ವಾಕ್ಯವನ್ನು ಕೇಳಿದ ಯಜಮಾನನು ಈ ರೀತಿ ತಿಳಿಸುತ್ತಾನೆ —"ಧನವಂತನಾದ ಎಲೈ ಇಂದ್ರನೇ, ನಿನಗಿಂತಲೂ ಬೇರೆ ಹಿತಕಾರಿಗಳು ನಮಗೆ ಯಾರೂ ಇಲ್ಲವು. ನಿನ್ನಂತಹ ಶ್ರೇಷ್ಠನಾದ ಪಾಲಕನೂ ಯಾರೂ ಇಲ್ಲವು."

English Translation

May I daily distribute wealth to the venerable wherever abiding : no other, Maghavan, than you is to be sought by us. (no other is to us) a most excellent protector.

ಸಂಹಿತಾಪಾಠಃ

ತ್ತರಣಿರಿತ್ಸಿಷಾಸತಿ ವಾಜಂ ಪುರಂಧ್ಯಾ ಯುಜಾ ।
ಆ ವ ಇಂದ್ರಂ ಪುರುಹೂತಂ ನಮೋ ಗಿರಾ ನೇಮಿಂ ತಷ್ಟೇವ ಸುದ್ರ್ವಂ ॥

ಪದಪಾಠಃ

ತರಣಿಃ । ಇತ್ । ಸಿಸಾಸತಿ । ವಾಜಂ । ಪುರಂ॒ಧ್ಯಾ । ಯುಜಾ ।
ಆ । ವಃ । ಇಂದ್ರಂ । ಪುರು॒ಹೂತಂ । ನಮೋ॑ । ಗಿರಾ । ನೇಮಿಂ । ತಷ್ಟಾ॑ಇವ । ಸು॒ದ್ರ್ವಂ ॥ ೨೦ ॥

ಸಾಯಣಭಾಷ್ಯಂ

ತರಣಿರಿತ್ ಸ್ತುತ್ಯಾದೌ ಕರ್ಮಣಿ ತ್ವರಿತ ಏವ ಪುಮಾನ್ ಪುರಂಧ್ಯಾ ಮಹತ್ಯಾ ಧಿಯಾ ಯುಜಾ ಸಹಾಯಭೂತಯಾ ವಾಜಮನ್ನಂ ಸಿಷಾಸತಿ । ಸಂಭಜತೇ । ಪುರುಹೂತಂ ಬಹುಭಿರಾಹೂತಮಿಂದ್ರಂ ವಸ್ತ್ವಾಂ ಗಿರಾ ಸ್ತುತ್ಯಾಹವಾ ನಮೋ ನೇಮಿಂ ಚಕ್ರಸ್ಯ ವಲಯಂ ಸುದ್ರ್ವಂ ಶೋಭನದಾರುಂ ತಷ್ಟೇವ । ಯಥಾ ವರ್ಧಕಿರ್ದಾರುನೇಮಿಮಾನಮಯತೇ ತದ್ವದಿತ್ಯರ್ಥಃ ॥

ಪ್ರತಿಪದಾರ್ಥ

ತರಣಿರಿತ್—ಸ್ತುತ್ಯಾದಿಕರ್ಮಗಳಲ್ಲಿ ನಿರತನಾದವನು ಮಾತ್ರ । **ಪುರಂಧ್ಯಾ**—ಮಹತ್ತಾದ ಪ್ರಜ್ಞೆಯೊಡನೆ । **ಯುಜಾ**—ಕೂಡಿದವನಾಗಿ । **ವಾಜಂ**—ಅನ್ನವನ್ನು । **ಸಿಷಾಸತಿ**—ಹೊಂದುತ್ತಾನೆ । **ತಷ್ಟಾಇವ**—ಮರಗೆಲಸದವನು । **ನೇಮಿಂ**—ಚಕ್ರಕ್ಕೆ ವಲಯರೂಪವಾಗಿ । **ಸುದ್ರ್ವಂ**—ಉತ್ತಮವಾದ ಮರವನ್ನು ಬಗ್ಗಿಸುವಂತೆ । **ಪುರುಹೂತಂ**—ಅನೇಕರ ಆಹ್ವಾನಕ್ಕೆ ಪಾತ್ರನೂ । **ಇಂದ್ರಂ**—ಸರ್ವೇಶ್ವರನೂ ಆದ । **ವಃ**—ನಿನ್ನ ಮುಂದೆ । **ಗಿರಾ**—ಸ್ತುತಿಯುಕ್ತನಾಗಿ । **ಆ ನಮೋ**—ಬಗ್ಗಿ ನಮಸ್ಕರಿಸುತ್ತೇನೆ.

ಭಾವಾರ್ಥ

ಸ್ತುತ್ಯಾದಿಕರ್ಮಗಳಲ್ಲಿ ನಿರತನಾದವನು ಮಾತ್ರ ಮಹತ್ತಾದ ಪ್ರಜ್ಞೆಯೊಡನೆ ಕೂಡಿದವನಾಗಿ ಅನ್ನವನ್ನು ಹೊಂದುತ್ತಾನೆ ಮರಗೆಲಸದವನು ಚಕ್ರಕ್ಕೆ ವಲಯರೂಪವಾಗಿ ಉತ್ತಮವಾದ ಮರವನ್ನು ಬಗ್ಗಿಸುವಂತೆ ಅನೇಕರ ಆಹ್ವಾನಕ್ಕೆ ಪಾತ್ರನೂ ಸರ್ವೇಶ್ವರನೂ ಆದ ನಿನ್ನ ಮುಂದೆ ಸ್ತುತಿಯುಕ್ತನಾಗಿ ಬಗ್ಗಿ ನಮಸ್ಕರಿಸುತ್ತೇನೆ.

English Translation

The prompt offerer (of praise), with solemn rites combined, acquires food : I bend down with adoration to you, Indra, the invoked of many, as a carpenter bends the wooden circumference of the wheel.

संहितापाठः

न दुष्टुतीर्मर्त्यो विन्दते वसु न स्रेधन्तं रयिर्नशत् ।
सुशक्तिरिन्मघवन्तुभ्यं मावते देष्णं यत्पार्ये दिवि ॥

पदपाठः

न । दुःस्तुतीः । मर्त्यः । विन्दते । वसु । न । स्रेधन्तं । रयिः । नशत् ।
सुऽशक्तिः । इत् । मघऽवन् । तुभ्यं । माऽवते । देष्णं । यत् । पार्ये । दिवि ॥

सायणभाष्यं

मर्त्यो मनुष्यो दुष्टुतीर्दुष्टुत्या वसु धनं न विन्दते । इन्द्रं स्तुवन्नेव वसु लभत इत्यर्थः । स्रेधन्तं हिंसन्तं इन्द्रविषयेस्तुत्याधिक्यमकुर्वन्तमित्यर्थः । रयिर्धनं न नशत् । न व्याप्नोति । हे मघवन् त्वयो पार्ये दिवि सौत्ये दिवसे मावते मत्सदृशाय देष्णं दातव्यं यद्धनमस्ति तत्तुभ्यं त्वत्तः सुशक्तिरित् सुकर्म्यव । विन्दत इति व्यवहितमस्यनुषजत्येकेऽध्याहारस्यान्तिकत्वात् ॥

प्रतिपदार्थ

मर्त्यः—मानवनु । **दुष्टुतीः**—दुर्भाषेयिंद कूडिद स्तुतियिंद । **वसु**—धनवन्नु । **न विन्दते**—ओंदुवुदिल्ल । **स्रेधन्तं**—हिंसाकारकनाद पुरुषनन्नु । **रयिः**—धनवु । **न नशत्**—योग सेरुवुदिल्ल । **मघवन्**—धनवंतनाद ऐश्वर्य इंद्रनें । **पार्ये दिवि**—सोमार्पणद दिनवें । **मावते**—नन्नंतह यजमाननिगे । **देष्णं**—कोडलु योग्यवागि । **यत्**—यावव धनविदेयो अदन्नु । **तुभ्यं**—निन्निंद । **सुशक्तिरित्**—उत्तमवाद कर्मवुळ्ळवनु मात्र पडेयबल्लनु

भावार्थ

धनवंतनाद ऐश्वर्य इंद्रनें, मानवनु दुर्भाषेयिंद कूडिद स्तुतियिंद धनवन्नु कोंडुवुदिल्ल. हिंसाकारकनाद पुरुषनन्नु धनवु होगि सेरुवुदिल्ल धनवंतनाद ऐश्वर्य इंद्रनें, सोमार्पणद दिनवें, नन्नंतह यजमाननिगे कोडलु योग्यवागि यावव धनविदेयो अदन्नु निन्निंद उत्तमवाद कर्मवुळ्ळवनु मात्र पडेयबल्लनु

English Translation

A man acquires not wealth by unbecoming praise. affluence devolves not upon one obstructing (sacrifice). in you, Maghavan, is the power whereby bounty (may be shown) to such as I am on the day of the libation.

ಸಂಹಿತಾಪಾಠಃ

ಅಭಿ ತ್ವಾ ಶೂರ ನೋನುಮೋऽದುಗ್ಧಾ ಇವ ಧೇನವಃ ।
ಈಶಾನಮಸ್ಯ ಜಗತಃ ಸ್ವರ್ದೃಶಮೀಶಾನಮಿಂದ್ರ ತಸ್ಥುಷಃ ॥ ೨೨ ॥

ಪದಪಾಠಃ

ಅಭಿ । ತ್ವಾ । ಶೂರ । ನೋನುಮಃ । ಅದುಗ್ಧಾಃ । ಇವ । ಧೇನವಃ ।
ಈಶಾನಂ । ಅಸ್ಯ । ಜಗತಃ । ಸ್ವಃ । ದೃಶಂ । ಈಶಾನಂ । ಇಂದ್ರ । ತಸ್ಥುಷಃ ॥ ೨೨ ॥

ಸಾಯಣಭಾಷ್ಯಂ

ಹೇ ಶೂರೇಂದ್ರ ಅಸ್ಯ ಜಗತೋ ಜಂಗಮಸ್ಯೇಶಾನಮೀಶ್ವರಂ ತಸ್ಥುಷಃ ಸ್ಥಾವರಸ್ಯ ಚೇಶಾನಂ। ಈಶಾನಮಿತಿ ಪದಸ್ಯಾವೃತ್ತಿರಾದರಾರ್ಥಾ । ಸ್ವರ್ದೃಶಂ ಸರ್ವದೃಶಂ ತ್ವಾ ತ್ವಾಮದುಗ್ಧಾ ಇವ ಧೇನವೋ ಯಥಾದುಗ್ಧಾ ಧೇನವಃ ಕ್ಷೀರಪೂರ್ಣೋಧಸ್ತ್ವೇನ ವರ್ತಂತೇ ತದ್ವತ್ತ್ವೋಮಪೂರ್ಣಚಮಸತ್ವೇನ ವರ್ತಮಾನಾ ವಯಮಭಿ ನೋನುಮಃ । ಭೃಶಮಭಿಷ್ಟುಮಃ ॥

ಪ್ರತಿಪದಾರ್ಥ

ಶೂರ—ಪರಾಕ್ರಮಿಯಾದ । ಇಂದ್ರ—ಎಲೈ ಇಂದ್ರನೇ । ಅಸ್ಯ ಜಗತಃ—ಜಂಗಮಾತ್ಮಕವಾದ ಈ ಜಗತ್ತಿಗೆ । ಈಶಾನಂ—ಒಡೆಯನಾದವನೂ । ತಸ್ಥುಷಃ—ಸ್ಥಾವರಾತ್ಮಕವಾದ ವಸ್ತುಗಳಿಗೂ । ಈಶಾನಂ—ಒಡೆಯನಾದವನೂ । ಸ್ವರ್ದೃಶಂ—ಜಗತ್ತನ್ನೆಲ್ಲಾ ನೋಡಬಲ್ಲವನೂ ಆದ । ತ್ವಾ—ನಿನ್ನನ್ನು । ಅದುಗ್ಧಾ ಇವ—ಹಾಲನ್ನು ಕರೆಯದಿರುವ । ಧೇನವಃ—ಗೋವ್ರುಗಳು ಹಾಲಿನಿಂದ ತುಂಬಿದ ಕೆಚ್ಚಲುಗಳನ್ನು ಹೊಂದಿರುವಂತೆ (ನಾವೂ ಸಹ ಸೋಮದಿಂದ ಪೂರ್ಣವಾದ ಚಮಸಪಾತ್ರೆಯನ್ನು ಹಿಡಿದವರಾಗಿ) । ಅಭಿನೋನುಮಃ—ಸ್ತುತಿಸುತ್ತೇವೆ

ಭಾವಾರ್ಥ

ಪರಾಕ್ರಮಿಯಾದ ಎಲೈ ಇಂದ್ರನೇ, ಜಂಗಮಾತ್ಮಕವಾದ ಈ ಜಗತ್ತಿಗೆ ಒಡೆಯನಾದವನೂ, ಸ್ಥಾವರಾತ್ಮಕವಾದ ವಸ್ತುಗಳಿಗೂ ಒಡೆಯನಾದವನೂ, ಜಗತ್ತನ್ನೆಲ್ಲಾ ನೋಡಬಲ್ಲವನೂ ಆದ ನಿನ್ನನ್ನು ಹಾಲನ್ನು ಕರೆಯುವುದಕ್ಕೆ ಮುಂಚೆ ಗೋವ್ರುಗಳು ಹಾಲಿನಿಂದ ತುಂಬಿದ ಕೆಚ್ಚಲುಗಳನ್ನು ಹೊಂದಿರುವಂತೆ ನಾವೂ ಸಹ ಸೋಮದಿಂದ ಪೂರ್ಣವಾದ ಚಮಸಪಾತ್ರೆಯನ್ನು ಹಿಡಿದವರಾಗಿ ಸ್ತುತಿಸುತ್ತೇವೆ

English Translation

We glorify you, hero, (Indra) the lord of all moveable and tationary things, the beholder of the universe, (with ladles filled with Soma), like (the udders of) unmilked cows.

ಸಂಹಿತಾಪಾಠಃ

ನ ತ್ವಾವಾ ಅನ್ಯೋ ದಿವ್ಯೋ ನ ಪಾರ್ಥಿವೋ ನ ಜಾತೋ ನ ಜನಿಷ್ಯತೇ ।

ಅಶ್ವಾಯಂತೋ ಮಘವನ್ನಿಂದ್ರ ವಾಜಿನೋ ಗವ್ಯಂತಸ್ತ್ವಾ ಹವಾಮಹೇ ॥

ಪದಪಾಠಃ

ನ । ತ್ವಾವಾನ್ । ಅನ್ಯಃ । ದಿವ್ಯಃ । ನ । ಪಾರ್ಥಿವಃ । ನ । ಜಾತಃ । ನ । ಜನಿಷ್ಯತೇ ।

ಅಶ್ವಯಂತಃ । ಮಘವನ್ । ಇಂದ್ರ । ವಾಜಿನಃ । ಗವ್ಯಂತಃ । ತ್ವಾ । ಹವಾಮಹೇ ॥ ೨೩ ॥

ಸಾಯಣಭಾಷ್ಯಂ

ಹೇ ಮಘವನ್ನಿಂದ್ರ ದಿವ್ಯೋ ದಿವಿ ಭವಸ್ತ್ವಾವಾನ್ ತ್ವತ್ಸದೃಶೋಽನ್ಯೋ ನ ಜಾಯತೇ । ಪಾರ್ಥಿವಃ ಪೃಥಿವ್ಯಾಂ ಭವೋಽಪಿ ತ್ವಾವಾನನ್ಯೋ ನ ಜಾಯತೇ । ದಿವ್ಯಃ ಪಾರ್ಥಿವೋ ವಾ ತ್ವಾವಾನನ್ಯೋ ನ ಜಾತಃ । ನ ಚ ಜನಿಷ್ಯತೇ । ಪೃಥಿವ್ಯಾಂ ದಿವಿ ಚ ತ್ರಿಷ್ವಪಿ ಲೋಕೇಷು ತ್ವತ್ಸದೃಶಃ ಕಶ್ಚಿನ್ನಾಸ್ತೀತ್ಯರ್ಥಃ । ಅಶ್ವಾಯಂತೋಽಶ್ವಾನಿಚ್ಛಂತೋ ವಾಜಿನೋ ವಾಜಮಿಚ್ಛಂತಃ ॥ ಇಚ್ಛಾರ್ಥಯಾಮಿನಿಪ್ರತ್ಯಯಃ ॥ ಹವಿಷ್ಮಂತೋ ವಾ ಗವ್ಯಂತೋ ಗಾ ಇಚ್ಛಂತಶ್ಚ ವಯಂ ತ್ವಾ ತ್ವಾಂ ಹವಾಮಹೇ । ಹ್ವಯಾಮಃ ॥

ಪ್ರತಿಪದಾರ್ಥ

ಮಘವನ್—ಧನವಂತನಾದ । **ಇಂದ್ರ**—ಎಲೈ ಇಂದ್ರನೇ । **ದಿವ್ಯಃ**—ದೇವಲೋಕೋತ್ಪನ್ನನಾದವನು । **ಅನ್ಯಃ**—ಬೇರೊಬ್ಬನೂ । **ತ್ವಾವಾನ್**—ನಿನಗೆ ಸದೃಶನಾಗಿ । **ನ ಜಾತಃ**—ಉತ್ಪನ್ನನಾಗಿಲ್ಲ । **ಪಾರ್ಥಿವಃ**—ಪೃಥ್ವಿಯಲ್ಲಿ ಹುಟ್ಟಿದವನೊಬ್ಬನೂ । **ನ**—ನಿನಗೆ ಸದೃಶನಾಗಿ ಹುಟ್ಟಲ್ಲ । **ನ ಜನಿಷ್ಯತೇ**—ಉತ್ಪನ್ನನಾಗುವುದೂ ಇಲ್ಲ । **ಅಶ್ವಾಯಂತಃ**—ಅಶ್ವಗಳನ್ನು ಅಪೇಕ್ಷಿಸುವವರೂ । **ವಾಜಿನಃ**—ಅನ್ನಾಪೇಕ್ಷಿಗಳೂ । **ಗವ್ಯಂತಃ**—ಗೋವುಗಳನ್ನು ಇಚ್ಛಿಸುವವರೂ ಆದ ನಾವು । **ತ್ವಾ**—ನಿನ್ನನ್ನು । **ಹವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ

ಭಾವಾರ್ಥ

ಧನವಂತನಾದ ಎಲೈ ಇಂದ್ರನೇ, ನಿನಗೆ ಸದೃಶನಾದವನು ದೇವಲೋಕೋತ್ಪನ್ನರಾದ ದೇವತೆಗಳಲ್ಲಿ ಯಾರೂ ಇಲ್ಲ ಮಾನವರಲ್ಲೂ ಯಾರೂ ಹುಟ್ಟಿಲ್ಲ. ಇನ್ನು ಮುಂದೆಯೂ ಯಾರೂ ಹುಟ್ಟಲಾರರು. ಅಶ್ವಗಳನ್ನು ಅಪೇಕ್ಷಿಸುವವರೂ, ಅನ್ನಾಪೇಕ್ಷಿಗಳೂ, ಗೋವುಗಳನ್ನು ಇಚ್ಛಿಸುವವರೂ ಆದ ನಾವು ನಿನ್ನನ್ನು ಪ್ರಾರ್ಥಿಸಿ ಕರೆಯುತ್ತೇವೆ

English Translation

No other such as you are, celestial or terrestrial, has been or will be born, desirous of horses, of food, of cattle, affluent Indra, we invoke you.

ಸಂಹಿತಾಪಾಠಃ

ಅಭೀ ಷತಸ್ತದಾ ಭರೇಂದ್ರ ಜ್ಯಾಯಃ ಕನೀಯಸಃ ।

ಪುರೂವಸುರ್ಹಿ ಮಘವನ್ನ್ಸನಾದಸಿ ಭರೇಭರೇ ಚ ಹವ್ಯಃ ॥ ೨೪ ॥

ಪದಪಾಠಃ

ಆಭಿ । ಸತಃ । ತತ್ । ಆ । ಭರ । ಇಂದ್ರ । ಜ್ಯಾಯಃ । ಕನೀಯಸಃ ।

ಪುರುವಸುಃ । ಹಿ । ಮಘವನ್ । ಸನಾತ್ । ಅಸಿ । ಭರೇಭರೇ । ಚ । ಹವ್ಯಃ ॥ ೨೪ ॥

ಸಾಯಣಭಾಷ್ಯಂ

ಹೇ ಜ್ಯಾಯೋ ಜ್ಯಾಯಸ್ವಿನ್ನಿಂದ್ರ ॥ ಆಮಂತ್ರಿತಂ ಪೂರ್ವಮವಿದ್ಯಮಾನವದಿತೀಂದ್ರಪದಸ್ಯಾವಿದ್ಯಮಾನವದ್ಭಾವಾತ್ ಜ್ಯಾಯ ಇತ್ಯಸ್ಯ ಸರ್ವಾನುದಾತ್ತತ್ವಾಭಾವಃ । ನಕಾರಸ್ಯ ರುತ್ವಂ ವ್ಯತ್ಯಯಾನ್ನಮಭಾವೋ ವಾ ॥ ಕನೀಯಸಃ ಸತೋ ಮಮ ತತ್ಪ್ರಸಿದ್ಧಂ ಧನಮಭ್ಯಾ ಭರ । ಹೇ ಮಘವನ್ ತ್ವಂ ಸನಾಚ್ಚಿರಾದೇವಾರಭ್ಯ ಪುರೂವಸುರ್ಹಿ ಬಹುಧನೋ ಽಸಿ । ಭರೇಭರೇ ಸಂಗ್ರಾಮೇ ಯಜ್ಞೇ ವಾ ಹವ್ಯೋ ಹವಿಷ್ಕಾರ್ಹಶ್ಚಾಸಿ ॥

ಪ್ರತಿಪದಾರ್ಥ

ಜ್ಯಾಯಃ—ಎಲ್ಲರಿಗಿಂತಲೂ ದೊಡ್ಡವನಾದ । ಇಂದ್ರ—ಎಲೈ ಇಂದ್ರನೇ । ಕನೀಯಸಃ—ನಿನಗಿಂತಲೂ ಅಲ್ಪತರನಾದ । ಮಮ—ನನಗೆ । ತತ್—ಪ್ರಸಿದ್ಧವಾದ ಧನವನ್ನು । ಅಭ್ಯಾಭರ—ಒದಗಿಸಿಕೊಡು । ಮಘವನ್—ಧನವಂತನಾದ ಎಲೈ ಇಂದ್ರನೇ । ಸನಾತ್—ಅತ್ಯಂತ ಪ್ರಾಚೀನಕಾಲದಿಂದಲೂ । ಪುರೂವಸುರ್ಹಿ—ಅಧಿಕವಾದ ಧನವುಳ್ಳವನೇ । ಅಸಿ—ಆಗಿದ್ದೀಯೆ । ಭರೇಭರೇ—ಪ್ರತಿಯೊಂದು ಸಂಗ್ರಾಮದಲ್ಲಿಯೂ । ಹವ್ಯಃ ಚ—ಪೂಜ್ಯನಾಗಿಯೂ ಆಗಿದ್ದೀಯೆ.

ಭಾವಾರ್ಥ

ಎಲ್ಲರಿಗಿಂತಲೂ ದೊಡ್ಡವನಾದ ಎಲೈ ಇಂದ್ರನೇ, ನಿನಗಿಂತಲೂ ಅಲ್ಪತರನಾದ ನನಗೆ ಪ್ರಸಿದ್ಧವಾದ ಧನವನ್ನು ಒದಗಿಸಿಕೊಡು ಧನವಂತನಾದ ಎಲೈ ಇಂದ್ರನೇ, ನೀನು ಅತ್ಯಂತ ಪ್ರಾಚೀನಕಾಲದಿಂದಲೂ ಅಧಿಕವಾದ ಧನವುಳ್ಳವನೇ ಆಗಿದ್ದೀಯೆ. ಪ್ರತಿಯೊಂದು ಸಂಗ್ರಾಮದಲ್ಲಿಯೂ ಪೂಜ್ಯನಾಗಿಯೂ ಆಗಿದ್ದೀಯೆ

English Translation

Elder Indra, bring that (wealth to me), being the junior, for, Maghavan, you have from the beginning been possessed of infinate treasure, and are to be adored at repeated sacrifices

ಸಂಹಿತಾಪಾಠಃ

ಪರಾ ಣುದಸ್ವ ಮಘವನ್ನಮಿತ್ರಾನ್ತ್ಸುನ್ವೇದಾ ನೋ ವಸೂ ಕೃಧಿ ।

ಅಸ್ಮಾಕಂ ಬೋಧ್ಯವಿತಾ ಮಹಾಧನೇ ಭವಾ ವೃಧಃ ಸಖೀನಾಂ ॥ ೨೫ ॥

ಪದಪಾಠಃ

ಪರಾ । ನುದಸ್ವ । ಮಘವನ್ । ಅಮಿತ್ರಾನ್ । ಸುವೇದಾ । ನಃ । ವಸು । ಕೃಧಿ ।
ಅಸ್ಮಾಕಂ । ಬೋಧಿ । ಅವಿತಾ । ಮಹಾಧನೇ । ಭವ । ವೃಧಃ । ಸಖೀನಾಂ ॥ ೨೫ ॥

ಸಾಯಣಭಾಷ್ಯಂ

ಹೇ ಮಘವನ್ ಪರಾ ಪರಾಚೀನಾನಮಿತ್ರಾಞ್ಛತ್ರೂನ್ನುದಸ್ವ । ಪ್ರೇರಯ । ನೋಽಸ್ಮಭ್ಯಂ ವಸು ವಸೂನಿ ಸುವೇದಾ ಸುಲಭಾನಿ ಕೃಧಿ । ಕುರು । ಮಹಾಧನೇ ಸಂಗ್ರಾಮೇ । ವಾಜಸಾತೌ ಮಹಾಧನ ಇತಿ ಸಂಗ್ರಾಮನಾಮಸು ಪಾಠಾತ್ । ಸಖೀನಾಂ ಸ್ತೋತೄಣಾಮಸ್ಮಾಕಂ ವಸಿಷ್ಠಾನಾಮವಿತಾ ರಕ್ಷಿತಾ ಬೋಧಿ । ಭವ । ವೃಧೋ ವರ್ಧಯಿತಾ ಚ ಭವ ॥

ಪ್ರತಿಪದಾರ್ಥ

ಮಘವನ್—ಧನವಂತನಾದ ಎಲೈ ಇಂದ್ರನೇ। ಅಮಿತ್ರಾನ್—ನಮ್ಮ ಶತ್ರುಗಳನ್ನು। ಪರಾ ನುದಸ್ವ—ದೂರಕ್ಕೆ ಓಡಿಸು । ನಃ—ನಮಗೆ । ವಸು—ಧನಗಳು । ಸುವೇದಾ—ಸುಲಭವಾಗಿ ಸಿಕ್ಕುವಂತೆ । ಕೃಧಿ—ಮಾಡು । ಮಹಾಧನೇ—ಅಧಿಕವಾದ ಧನಾರ್ಥವಾಗಿ ಮಾಡುವ ಸಂಗ್ರಾಮಗಳಲ್ಲಿ । ಸಖೀನಾಂ—ಸ್ತೋತೃಗಳಾದ । ಅಸ್ಮಾಕಂ—ನಮಗೆ । ಅವಿತಾ—ರಕ್ಷಕನಾಗಿರಬೇಕೆಂದು । ಬೋಧಿ—ತಿಳಿ । ವೃಧಃ—ನಮಗೆ ವೃದ್ಧಿಕಾರಕನಾಗಿಯೂ । ಭವ—ಆಗಿರು

ಭಾವಾರ್ಥ

ಧನವಂತನಾದ ಎಲೈ ಇಂದ್ರನೇ, ನಮ್ಮ ಶತ್ರುಗಳನ್ನು ದೂರಕ್ಕೆ ಓಡಿಸು. ನಮಗೆ ಸುಲಭವಾಗಿ ಧನಗಳು ಸಿಕ್ಕುವಂತೆ ಮಾಡು ಅಧಿಕವಾಗಿ ಧನಗಳನ್ನು ಪಡೆಯಬೇಕಾದ ಸಂಗ್ರಾಮಗಳಲ್ಲಿ ಸ್ತೋತೃಗಳಾದ ನಮಗೆ ರಕ್ಷಕನಾಗಿರಬೇಕೆಂದು ತಿಳಿ. ನಮಗೆ ವೃದ್ಧಿಕಾರಕನಾಗಿಯೂ ಆಗಿರು.

English Translation

Drive away, Maghavan, our enemies . render riches easy of acquisition be our preserver in war . be the augmenter of (the prosperity) of (your) friends.

ಸಂಹಿತಾಪಾಠಃ

ಇಂದ್ರ ಕ್ರತುಂ ನ ಆ ಭರ ಪಿತಾ ಪುತ್ರೇಭ್ಯೋ ಯಥಾ ।
ಶಿಕ್ಷಾ ಣೋ ಅಸ್ಮಿನ್ಪುರುಹೂತ ಯಾಮನಿ ಜೀವಾ ಜ್ಯೋತಿರಶೀಮಹಿ ॥೨೬॥

ಪದಪಾಠಃ

ಇಂದ್ರ । ಕ್ರತುಂ । ನಃ । ಆ । ಭರ । ಪಿತಾ । ಪುತ್ರೇಭ್ಯಃ । ಯಥಾ ।
ಶಿಕ್ಷ । ನಃ । ಅಸ್ಮಿನ್ । ಪುರುಹೂತ । ಯಾಮನಿ । ಜೀವಾಃ । ಜ್ಯೋತಿಃ । ಅಶೀಮಹಿ ॥ ೨೬ ॥

ಸಾಯಣಭಾಷ್ಯಂ

ಹೇ ಇಂದ್ರ ನೋಽಸ್ಮಭ್ಯಂ ಕ್ರತುಂ ಕರ್ಮ ಪ್ರಜ್ಞಾನಂ ವಾ ಭರ । ಆಹರ । ಅಪಿ ಚ ಯಥಾ ಪಿತಾ ಪುತ್ರೇಭ್ಯೋ ಧನಂ ಪ್ರಯಚ್ಛತಿ ತಥಾ ನೋಽಸ್ಮಭ್ಯಂ ಶಿಕ್ಷ । ಧನಂ ದೇಹಿ । ಹೇ ಪುರುಹೂತ ಬಹುಭಿರಾಹೂತ ಯಾಮನಿ ಯಜ್ಞೇ ಜೀವಾ ವಯಂ ಜ್ಯೋತಿಃ ಸೂರ್ಯಮಶೀಮಹಿ । ಪ್ರತಿದಿನಂ ಪ್ರಾಪ್ನುಯಾಮ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । **ನಃ**—ನಮಗೆ । **ಕ್ರತುಂ**—ಕರ್ಮವಿಷಯಕವಾದ ಜ್ಞಾನವನ್ನು । **ಆ ಭರ**—ಒದಗಿಸು । **ಯಥಾ**—ಯಾವ ರೀತಿಯಲ್ಲಿ । **ಪಿತಾ**—ತಂದೆಯಾದವನು । **ಪುತ್ರೇಭ್ಯಃ**—ತನ್ನ ಪುತ್ರರಿಗೆ ಧನವನ್ನು ಕೊಡುವನೋ ಹಾಗೆ । **ನಃ**—ನಮಗೆ । **ಶಿಕ್ಷ**—ಧನವನ್ನು ಕೊಡು । **ಪುರುಹೂತ**—ಅನೇಕರ ಆಹ್ವಾನಕ್ಕೆ ಪಾತ್ರನಾದ ಎಲೈ ಇಂದ್ರನೇ । **ಅಸ್ಮಿನ್ ಯಾಮನಿ**—ಈ ಯಜ್ಞದಲ್ಲಿ । **ಜೀವಾಃ**—ಸಿತರಾದ ನಾವು । **ಜ್ಯೋತಿಃ**—ಸೂರ್ಯನ ಜ್ಯೋತಿಯನ್ನು । **ಅಶೀಮಹಿ**—ಪ್ರತಿದಿನವೂ ಹೊಂದುವಂತಾಗಲಿ

ಭಾವಾರ್ಥ

ಎಲೈ ಇಂದ್ರನೇ, ನಮಗೆ ಕರ್ಮವಿಷಯಕವಾದ ಜ್ಞಾನವನ್ನು ಒದಗಿಸು ತಂದೆಯಾದವನು ತನ್ನ ಪುತ್ರರಿಗೆ ಧನವನ್ನು ಕೊಡುವಂತೆ ನಮಗೆ ಧನವನ್ನು ಕೊಡು ಅನೇಕರ ಆಹ್ವಾನಕ್ಕೆ ಪಾತ್ರನಾದ ಎಲೈ ಇಂದ್ರನೇ, ಈ ಯಜ್ಞದಲ್ಲಿ ಸಿತರಾದ ನಾವು ಪ್ರತಿದಿನವೂ ಸೂರ್ಯನ ಜ್ಯೋತಿಯನ್ನು ಹೊಂದುವಂತಾಗಲಿ.

English Translation

Bring to us, Indra, wisdom, as a father (gives knowledge) to his sons; bestow wealth upon us on this occasion, you the invoked of many, so that we, living at the solemnity, may (long) enjoy the light (of existence)

ಸಂಹಿತಾಪಾಠಃ

ಮಾ ನೋ ಅಜ್ಞಾತಾ ವೃಜನಾ ದುರಾಧ್ಯೋಽಶಿವಾಸೋ ಅವ ಕ್ರಮುಃ ।
ತ್ವಯಾ ವಯಂ ಪ್ರವತಃ ಶಶ್ವತೀರಪೋಽತಿ ಶೂರ ತರಾಮಸಿ ॥ ೨೭ ॥

ಪದಪಾಠಃ

ಮಾ । ನಃ । ಅಜ್ಞಾತಾಃ । ವೃಜನಾಃ । ದುಃಽಆಧ್ಯಃ । ಮಾ । ಅಶಿವಾಸಃ । ಅವ । ಕ್ರಮುಃ ।
ತ್ವಯಾ । ವಯಂ । ಪ್ರಽವತಃ । ಶಶ್ವತೀಃ । ಅಪಃ । ಅತಿ । ಶೂರ । ತರಾಮಸಿ ॥ ೨೭ ॥

ಸಾಯಣಭಾಷ್ಯಂ

ಹೇ ಇಂದ್ರ ಅಜ್ಞಾತಾ ಅಜ್ಞಾತಗಮನಾ ವೃಜನಾ ಹಿಂಸಕಾ ದುರಾಧ್ಯೋ ನೋಽಸ್ಮಾನ್ಮಾವ ಕ್ರಮುಃ । ಮಾವಚಿಕ್ರಮುಃ । ಹೇ ಶೂರ ತ್ವಯಾ ವಯಂ ವಸಿಷ್ಠಾಃ ಪ್ರವತಃ ಪ್ರವಣಕಾಃ ಸಂತಃ ಶಶ್ವತೀರ್ಬಹ್ವೀರಪೋಽತಿ ತರಾಮಸಿ । ಅತಿತರಾಮ ॥

ಪ್ರತಿಪದಾರ್ಥ

(ಎಲೈ ಇಂದ್ರನೇ) **ಅಜ್ಞಾತಾಃ**—ನಮಗೆ ತಿಳಿಯದಂತೆ ಸಂಚರಿಸುವವರೂ, | **ವೃಜನಾಃ**—ನಮ್ಮ ಹಿಂಸಕರೂ | **ದುರಾಧ್ಯಃ**—ಕೇಡನ್ನು ಬಯಸುವವರೂ ಆದ ನಮ್ಮ ಶತ್ರುಗಳು| **ನಃ**—ನಮ್ಮನ್ನು| **ಮಾ ಅವ ಕ್ರಮುಃ**—ಆಕ್ರಮಿಸದಿರಲಿ | **ಅಶಿವಾಸಃ**—ನಮಗೆ ಅಮಂಗಳವನ್ನುಂಟುಮಾಡುವವರೂ | **ಮಾ**—ನಮ್ಮನ್ನು ಆಕ್ರಮಿಸದಿರಲಿ | **ತೂರ**—ಪರಾಕ್ರಮಿಯಾದ ಎಲೈ ಇಂದ್ರನೇ | **ತ್ವಯಾ**—ನಿನ್ನಿಂದ ರಕ್ಷಿತವಾದ | **ವಯಂ**—ವಸಿಷ್ಠಗೋತ್ರೋತ್ಪನ್ನರಾದ ನಾವು | **ಪ್ರವತಃ**—ತರಣಸಾಧನವುಳ್ಳವರಾಗಿ | **ಶಶ್ವತೀಃ**—ಪ್ರಭೂತವಾದ | **ಅಪಃ**—ಉದಕಗಳನ್ನು | **ಅತಿ ತರಾಮಸಿ**—ದಾಟುವಂತಾಗಲಿ

ಭಾವಾರ್ಥ

ಎಲೈ ಇಂದ್ರನೇ, ನಮಗೆ ತಿಳಿಯದಂತೆ ರಹಸ್ಯವಾಗಿ ಸಂಚರಿಸುವವರೂ, ನಮ್ಮ ಹಿಂಸಕರೂ, ನಮಗೆ ಕೇಡನ್ನು ಒಯಸುವವರೂ ಆದ ನಮ್ಮ ಶತ್ರುಗಳು ನಮ್ಮನ್ನು ಆಕ್ರಮಿಸದಿರಲಿ ನಮಗೆ ಅಮಂಗಳವನ್ನುಂಟುಮಾಡುವವರೂ ನಮ್ಮನ್ನು ಆಕ್ರಮಿಸದಿರಲಿ ಪರಾಕ್ರಮಿಯಾದ ಎಲೈ ಇಂದ್ರನೇ, ನಿನ್ನಿಂದ ರಕ್ಷಿತರೂ, ವಸಿಷ್ಠಗೋತ್ರೋತ್ಪನ್ನರೂ ಆದ ನಾವು ತರಣಸಾಧನವುಳ್ಳವರಾಗಿ ಪ್ರಭೂತವಾದ ಉದಕಗಳನ್ನು ದಾಟುವಂತಾಗಲಿ

English Translation

Let no unknown, wicked, malevolent, malignant (enemies) overpower us may we, protected by you, cross over many waters.

ಮೂವತ್ತಮೂರನೆಯ ಸೂಕ್ತವು

ಸಾಯಣಭಾಷ್ಯಂ

ತ್ವಿತ್ಯಂಚ ಇತಿ ಚತುರ್ದಶರ್ಚಂ ಷೋಡಶಂ ಸೂಕ್ತಂ । ಆತ್ರೇಯಮನುಕ್ರಮಣಿಕಾ । ತ್ವಿತ್ಯಂಚಃ ಷಳೂನಾ ಸಂಸ್ತವೋ ವಸಿಷ್ಠಸ್ಯ ಸಪುತ್ರಸ್ಯೇಂದ್ರೇಣ ವಾ ಸಂವಾದ ಇತಿ । ಆದಿತೋ ನವಾನಾಂ ವಸಿಷ್ಠ ಋಷಿಃ । ವಸಿಷ್ಠಪುತ್ರಾಣಾಂ ಸ್ತೂಯಮಾನತ್ವಾತ್ತ ಏವ ದೇವತಾ । ವಿದ್ಯುತೋ ಜ್ಯೋತಿರಿತ್ಯಾದಿಭಿರ್ದಶಭ್ಯಾದಿಭಿಃ ಸ್ವಪುತ್ರೈರ್ವಸಿಷ್ಠಃ ಸ್ತೂಯತೇ । ಅತೋ ವಸಿಷ್ಠೋ ದೇವತಾ । ತ ಏವ ಋಷಯಃ । ಯಾ ತೇನೋಚ್ಯತ ಇತಿ ನ್ಯಾಯಾತ್ । ಅನುಕ್ತತ್ವಾತ್ತ್ರಿಷ್ಟುಪ್ ॥

ಅನುವಾದವು—**ತ್ವಿತ್ಯಂಚ** ಎಂಬ ಈ ಸೂಕ್ತವು ಎತಡನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ **ತ್ವಿತ್ಯಂಚಃ ಷಳೂನಾ ಸಂಸ್ತವೋ ವಸಿಷ್ಠಸ್ಯ ಸಪುತ್ರಸ್ಯೇಂದ್ರೇಣ ವಾ ಸಂವಾದಃ** ಎಂದು ಹೇಳಿರುವುದು ಈ ಸೂಕ್ತದ ಮೊದಲಿನ ಒಂಭತ್ತು ಋಕ್ಕುಗಳಿಗೆ ವಸಿಷ್ಠನು ಋಷಿಯು. ಈ ಒಂಭತ್ತು ಋಕ್ಕುಗಳಲ್ಲಿ ವಸಿಷ್ಠಪುತ್ರರ ವಿಷಯವು ಉಕ್ತವಾಗಿರುವುದರಿಂದ ವಸಿಷ್ಠಪುತ್ರರ ಸ್ತುತಿಯೇ ಈ ಋಕ್ಕುಗಳಿಗೆ ದೇವತೆಯು. **ವಿದ್ಯುತೋ ಜ್ಯೋತಿಃ** ಎಂದು ಮೊದಲಾಗುವ ಈ ಸೂಕ್ತದ ಮುಂದಿನ ಏಮ ಋಕ್ಕುಗಳಲ್ಲಿ ವಸಿಷ್ಠಋಷಿಯ ಪ್ರಸ್ತಾವವಿರುವುದರಿಂದ ಆ ಋಕ್ಕುಗಳಿಗೆ ವಸಿಷ್ಠನ ಸ್ತುತಿಯೇ ದೇವತೆಯು. **ವಸಿಷ್ಠಪುತ್ರರೇ ಋಷಿಗಳು. ತ್ರಿಷ್ಟುಪ್** ಛಂದಸ್ಸು.

ಸೂಕ್ತ—೩೩

ಮಂಡಲ—೭ ॥ ಅನುವಾಕ—೨ ॥ ಸೂಕ್ತ—೩೩ ॥
ಅಷ್ಟಕ—೫ ॥ ಅಧ್ಯಾಯ—೩ ॥ ವರ್ಗ—೨೨, ೨೩, ೨೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ॥

ಸಂಸ್ತ್ಯೋ ವಸಿಷ್ಠಸ್ಯ ಸಪುತ್ರಸ್ಯೇಂದ್ರೇಣ ವಾ ಸಂವಾದಃ
ಋಷಿಃ—೧-೯ವಸಿಷ್ಠಃ । ೧೦-೧೪ ವಸಿಷ್ಠಪುತ್ರಾಃ ॥
ದೇವತಾ—೧-೯ ವಸಿಷ್ಠಪುತ್ರಾಃ । ೧೦-೧೪ ವಸಿಷ್ಠಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಶ್ವಿತ್ಯ್ಂಚೋ ಮಾ ದಕ್ಷಿಣತಸ್ಕಪರ್ದಾ ಧಿಯಂಜಿನ್ವಾಸೋ ಅಭಿ ಹಿ ಪ್ರಮಂದುಃ
ಉತ್ತಿಷ್ಠನ್ವೋಚೇ ಪರಿ ಬರ್ಹಿಷೋ ನ್ಯನ್ನ ಮೇ ದೂರಾದವಿತವೇ ವಸಿಷ್ಠಾಃ॥

ಪದಪಾಠಃ

ಶ್ವಿತ್ಯ್ಂಚಃ । ಮಾ । ದಕ್ಷಿಣತಃ । ಕಪರ್ದಾಃ । ಧಿಯಂಜಿನ್ವಾಸಃ । ಅಭಿ । ಹಿ । ಪ್ರಮಂದುಃ ।
ಉತ್ತಿಷ್ಠನ್ । ವೋಚೇ । ಪರಿ । ಬರ್ಹಿಷಃ । ನ್ಯನ್ । ನ । ಮೇ । ದೂರಾತ್ । ಅವಿತವೇ । ವಸಿಷ್ಠಾಃ ॥ ೧ ॥

ಸಾಯಣಭಾಷ್ಯಂ

ಶ್ವಿತ್ಯ್ಂಚಃ । ಶ್ವಿತ್ಯಂ ಶ್ವೇತವರ್ಣಮಂಚಂತೀತಿ ಶ್ವಿತ್ಯ್ಂಚಃ । ಶ್ವೇತವರ್ಣಾ ಇತ್ಯರ್ಥಃ । ಧಿಯಂಜಿನ್ವಾಸಃ ಕರ್ಮಣಾಂ ಪೂರಯಿತಾರೋ ದಕ್ಷಿಣತಸ್ಕಪರ್ದಾಃ । ದಕ್ಷಿಣೇ ಶಿರಸೋ ಭಾಗೇ ಕಪರ್ದಾಶ್ಚೂಡಾ ಯೇಷಾಂ ತೇ ದಕ್ಷಿಣತಸ್ಕಪರ್ದಾಃ । ಚೂಡಾಕರ್ಮಣಿ ದಕ್ಷಿಣತೋ ವಸಿಷ್ಠಾನಾಮಿತಿ ಸ್ಮರ್ಯತೇ । ಮಾ ಮಾಮಭಿ ಪ್ರಮಂದುಃ । ವಿದ್ಯಾಬಲೇನಾಭಿಪ್ರಾಹರ್ಷಯನ್ । ಯತೋ ಮಾಮಭಿ ಪ್ರಮಂದುರತೋ ಬರ್ಹಿಷೋ ಯಜ್ಞಾತ್ । ಪರೀತಿ ಪಂಚಮ್ಯರ್ಥಾನುವಾದಃ । ಉತ್ತಿಷ್ಠನ್ನಹಂ ನ್ಯನ್ಯಜ್ಞಸ್ಯ ನೇತ್ಯನ್ವೋಚೇ । ಬ್ರವೀಮಿ । ಮೇ ಮತ್ತೋ ದೂರಾದ್ವಸಿಷ್ಠಾ ವಸಿಷ್ಠಸ್ಯ ಮಮ ಪುತ್ರಾ ಅವಿತವೇ ಗಂತುಂ ನಾರ್ಹಂತೀತಿ ಶೇಷಃ ॥

ಪ್ರತಿಪದಾರ್ಥ

ಶ್ವಿತ್ಯ್ಂಚಃ—ಶ್ವೇತವರ್ಣವುಳ್ಳವರೂ । ಧಿಯಂಜಿನ್ವಾಸಃ—ಪೂರ್ಣವಾಗಿ ಕರ್ಮಗಳನ್ನು ನಿರ್ವಹಿಸುವವರೂ । ದಕ್ಷಿಣತಸ್ಕಪರ್ದಾಃ—ತಲೆಯ ದಕ್ಷಿಣ (ಬಲ) ಭಾಗದಲ್ಲಿ ಶಿಖೆಯುಳ್ಳವರೂ ಆದ (ನನ್ನ ಪುತ್ರರು)। ಮಾ—ನನ್ನನ್ನು । ಅಭಿಪ್ರಮಂದುಃ—ತಮ್ಮ ವಿದ್ಯೆಯಿಂದ ಸಂತೋಷಗೊಳಿಸಿದ್ದಾರೆ ಬರ್ಹಿಷಃ ಪರಿ—ಯಜ್ಞಸ್ಥಾನದಿಂದ । ಉತ್ತಿಷ್ಠನ್—ಏಳುತ್ತಾ । ನ್ಯನ್—ಯಜ್ಞನೇತೃಗಳಾದ ಅವರನ್ನು । ವೋಚೇ—ಕರೆಯುತ್ತೇನೆ. । ಮೇ—ನನಗಿಂತಲೂ । ದೂರಾತ್—ದೂರಪ್ರದೇಶದಲ್ಲಿ । ವಸಿಷ್ಠಾಃ—ವಸಿಷ್ಠಪುತ್ರರು । ಅವಿತವೇ—ಹೊರಟು ಹೋಗಲು । ನ ಹಿ—ಬಿಡುವುದಿಲ್ಲ.

ಭಾವಾರ್ಥ

ಶ್ವೇತವರ್ಣವುಳ್ಳವರೂ, ಪೂರ್ಣವಾಗಿ ಕರ್ಮಗಳನ್ನು ನಿರ್ವಹಿಸುವವರೂ, ತಲೆಯ ಬಲಭಾಗದಲ್ಲಿ ಶಿಖೆಯುಳ್ಳವರೂ ಆದ ವಾಸಿಷ್ಠರು ತಮ್ಮ ವಿದ್ಯೆಯಿಂದ ನನ್ನನ್ನು ಸಂತೋಷಗೊಳಿಸಿದ್ದಾರೆ ಯಜ್ಞಸ್ಥಾನದಿಂದ ಎದ್ದ ಮೇಲೆ ಯಜ್ಞನೇತೃಗಳಾದ ಅವರನ್ನು ಕರೆಯುತ್ತೇನೆ. ನನಗಿಂತಲೂ ದೂರಪ್ರದೇಶದಲ್ಲಿ ಈ ವಸಿಷ್ಠಪುತ್ರರಿರಲು ಅಥವಾ ಇಲ್ಲಿಂದ ದೂರಕ್ಕೆ ಹೋಗಲು ನಾನು ಬಿಡುವುದಿಲ್ಲ.

English Translation

The white-complexioned accomplishers of holy ceremonies, wearing the lock of hair on the right side, have afforded me delight, when, rising up, I call the leaders (of rites) to the sacred grass · the Vasishthas, (my sons) should never be far from me.

ವಿಶೇಷವಿಷಯಗಳು

ಈ ಸೂಕ್ತದಲ್ಲಿ ವಸಿಷ್ಠಋಷಿಗೂ ಆವರ ಪುತ್ರರಿಗೂ ಅಥವಾ ಇಂದ್ರನಿಗೂ ನಡೆದ ಸಂವಾದರೂಪವಾದ ವಿಷಯವು ಉಕ್ತವಾಗಿದೆ ೧-೯ ಋಕ್ಕುಗಳಲ್ಲಿ ವಸಿಷ್ಠಋಷಿಯು ತನ್ನ ಪುತ್ರರ ವಿಷಯವನ್ನು ೧೦-೧೪ ಋಕ್ಕುಗಳಲ್ಲಿ ವಸಿಷ್ಠಪುತ್ರರು ತಮ್ಮ ತಂದೆಯಾದ ವಸಿಷ್ಠಋಷಿಯ ವಿಷಯವನ್ನೂ ಹೇಳಿರುವರು

ಸಂಹಿತಾಪಾಠಃ

ದೂರಾದಿಂದ್ರಮನಯನ್ನಾ ಸುತೇನ ತಿರೋ ವೈಶಂತಮತಿ ಪಾಂತಮುಗ್ರಂ ।
ಪಾಶದ್ಯುಮ್ನಸ್ಯ ವಾಯತಸ್ಯ ಸೋಮಾತ್ಸುತಾದಿಂದ್ರೋವೃಣೀತಾ ವಸಿಷ್ಠಾನ್ ॥ ೨ ॥

ಪದಪಾಠಃ

ದೂರಾತ್ । ಇಂದ್ರಂ । ಅನಯನ್ । ಆ । ಸುತೇನ । ತಿರಃ । ವೈಶಂತಂ । ಅತಿ । ಪಾಂತಂ । ಉಗ್ರಂ ।
ಪಾಶದ್ಯುಮ್ನಸ್ಯ । ವಾಯತಸ್ಯ । ಸೋಮಾತ್ । ಸುತಾತ್ । ಇಂದ್ರಃ । ಅವೃಣೀತ । ವಸಿಷ್ಠಾನ್ ॥

ಸಾಯಣಭಾಷ್ಯಂ

ಯದಾ ವಸಿಷ್ಠಸ್ಯ ಪುತ್ರಾಃ ಸುದಾಸಂ ರಾಜಾನಮಯಾಜಯನ್ ತದೈವ ಪಾಶದ್ಯುಮ್ನೋಽಪ್ಯೇಷ ರಾಜಾ ಸೋಮಾನ್ಯಪ್ಪಮುದ್ಯಮಂ ಚಕಾರ । ತದಾ ತೇ ವಸಿಷ್ಠಪುತ್ರಾಃ ಪಾಶದ್ಯುಮ್ನಂ ತಿರಸ್ಕೃತ್ಯ ತದೀಯೇ ಯಾಗೇ ಸೋಮಂ ಪಿಬಂತಮಿಂದ್ರಂ ಮಂತ್ರಬಲೇನ ತಸ್ಮಾದಾಚ್ಛಿದ್ಯ ಸುದಾಸೋ ಯಜ್ಞೇ ಸ್ಥಾಪಯಾಮಾಸುಃ । ತದೇತದ್ವೃತ್ತಾಂತಂ ಕೀರ್ತಯನ್ ವಸಿಷ್ಠಃ ಸ್ವಸುತಾನನೇನ ಮಂತ್ರೇಣ ಸ್ತೌತಿ ॥ ವೈಶಂತಂ । ವೇಶಂತಃ ಹೆಲ್ವಲಂ । ಅತ್ರ ವೇಶಂತಶಬ್ದೇನ ಸೋಮಾಧಾರಕ್ಷಮುಸೋ ಲಕ್ಷ್ಯತೇ । ತತ್ಸ್ಥಂ ಸೋಮಂ ಪಾಂತಂ ಪಿಬಂತಮುಗ್ರಮುದ್ಗೂರ್ಣಮಿಂದ್ರಂ ಸುತೇನ ಸುದಾಸೋ ಯಜ್ಞೇಽಭಿಷುತೇನ ಸೋಮೇನ ಹೇತುನಾ ತಿರಃ ಪಾಶದ್ಯುಮ್ನಂ ತಿರಸ್ಕೃತ್ಯ ದೂರಾದಾನಯೆನ್ । ವಸಿಷ್ಠಾ ಮಂತ್ರಬಲೇ-

ನಾನೀತವಂತಃ । ಇಂದ್ರೋಽಪಿ ವಾಯತಸ್ಯ ವಯತಃ ಪುತ್ರಸ್ಯ ಪಾಶದ್ಯುಮ್ನಸ್ಯ । ದ್ವಿತೀಯಾರ್ಥೇ ಷಷ್ಠೀ । ವಾಯತಂ ಪಾಶದ್ಯುಮ್ನಮತ್ಯತಿಹಾಯ ಸುದಾಸೋ ಯಜ್ಞೇಽಭಿಸುತಾತ್ಸೋಮಾದ್ದೇತೋರ್ವಸಿಷ್ಠಾನ್ವಸಿಷ್ಠಸ್ಯ ಪುತ್ರಾನವೃಣೀತ । ಪಾಶದ್ಯುಮ್ನಸ್ಯ ಸೋಮಯಾಗೇ ಚಮಸಸ್ಥಂ ಸೋಮಂ ಪಿಬನ್ನಪೀಂದ್ರಸ್ತಂ ಪಾಶದ್ಯುಮ್ನಂ ತಿರಸ್ಕೃತ್ಯ ಮಂತ್ರಸಾಮರ್ಥ್ಯಬಲೇನ ಸುದಾಸೋ ಯಜ್ಞ ಆಹವನಕಾಲೇ ವಸಿಷ್ಠಾನಾಜಗಾಮೇತ್ಯರ್ಥಃ ॥

ಪ್ರತಿಪದಾರ್ಥ

ವೈಶಂತಂ—ಕೊಳದಂತೆ ಆಳವಾದ ಚಮಸಪಾತ್ರೆಯಲ್ಲಿದ್ದ ಸೋಮವನ್ನು । **ಪಾಂತಂ**—ಪಾನಮಾಡುತ್ತಿದ್ದವನೂ । **ಉಗ್ರಂ**—ಭಯಂಕರನೂ ಆದ । **ಇಂದ್ರಂ**—ಇಂದ್ರನನ್ನು । **ಸುತೇನ**—ಸುದಾಸನ ಯಜ್ಞದಲ್ಲಿ ಹಿಂಡಲ್ಪಟ್ಟ ಸೋಮದನಿಮಿತ್ತವಾಗಿ । **ತಿರಃ**—ಪಾಶದ್ಯುಮ್ನನನ್ನು ತಿರಸ್ಕರಿಸಿ । **ದೂರಾತ್**—ಅತಿ ದೂರದಿಂದಲೇ । **ಆ ಅನಯನ್**—ಕರೆತಂದರು. **ಇಂದ್ರಃ**—ಇಂದ್ರನಾದರೋ । **ವಾಯತಃ**—ವಯತಪುತ್ರನಾದ । **ಪಾಶದ್ಯುಮ್ನಸ್ಯ**—ಪಾಶದ್ಯುಮ್ನನನ್ನು । **ಅತಿ**—ಪರಿತ್ಯಜಿಸಿ । **ಸೋಮಾತ್**—ಸುದಾಸನ ಸೋಮಕ್ಕಾಗಿ । **ವಸಿಷ್ಠಾನ್**—ಅವನ ಪುರೋಹಿತರಾದ ವಸಿಷ್ಠಪುತ್ರರನ್ನೇ । **ಅವೃಣೀತ**—ಆರಿಸಿ ಹಿಂಬಾಲಿಸಿದನು.

ಭಾವಾರ್ಥ

ಕೊಳದಂತೆ ಆಳವಾದ ಚಮಸಪಾತ್ರೆಯಲ್ಲಿದ್ದ ಸೋಮವನ್ನು ಪಾನಮಾಡುತ್ತಿದ್ದವನೂ, ಭಯಂಕರನೂ ಆದ ಇಂದ್ರನನ್ನು ಸುದಾಸನ ಯಜ್ಞದಲ್ಲಿ ಹಿಂಡಲ್ಪಟ್ಟ ಸೋಮದ ನಿಮಿತ್ತವಾಗಿ ಪಾಶದ್ಯುಮ್ನನನ್ನು ತಿರಸ್ಕರಿಸಿ ಅತಿ ದೂರದಿಂದಲೇ ಪಾಶದ್ಯುಮ್ನನನ್ನು ಪರಿತ್ಯಜಿಸಿ ಸುದಾಸನ ಸೋಮಕ್ಕಾಗಿ ಅವನ ಪುರೋಹಿತರಾದ ವಸಿಷ್ಠಪುತ್ರರನ್ನೇ ಆರಿಸಿ ಹಿಂಬಾಲಿಸಿದನು.

English Translation

Disgracing (Pashadyumna), they brought from afar the fierce Indra, when drinking the ladle of Soma at his sacrifice, to (receive) the libation (of Sudas). Indra, hastened from the effused Soma of Pashadyumna, the son of Vayata to the Vashisthas

ಸಂಹಿತಾಪಾಠಃ

ಏವೇನ್ನು ಕಂ ಸಿಂಧುಮೇಭಿಸ್ತತಾರೈವೇನ್ನು ಕಂ ಭೇದಮೇಭಿರ್ಜಘಾನ ।
ಏವೇನ್ನು ಕಂ ದಾಶರಾಜ್ಞೇ ಸುದಾಸಂ ಪ್ರಾವದಿಂದ್ರೋ ಬ್ರಹ್ಮಣಾ ವೋ ವಸಿಷ್ಠಾಃ ॥ ೩ ॥

ಪದಪಾಠಃ

ಏವ । ಇತ್ । ನು । ಕಂ । ಸಿಂಧುಂ । ಏಭಿಃ । ತಕ್ಷಾರ । ಏವ । ಇತ್ । ನು । ಕಂ । ಭೇದಂ । ಏಭಿಃ । ಜಘಾನ ।
ಏವ । ಇತ್ । ನು । ಕಂ । ದಾಶರಾಜ್ಞೇ । ಸುದಾಸಂ । ಪ್ರ । ಆವತ್ । ಇಂದ್ರಃ । ಬ್ರಹ್ಮಣಾ । ವಃ ।
ವಸಿಷ್ಠಾಃ ॥ ೩ ॥

ಸಾಯಣಭಾಷ್ಯಂ

ಏವೇತ್ ಯಥಾ ಪಾಶದ್ಯುಮ್ನಸ್ಯ ಸವಾಹ್ನೇ ಸೋಮಯಾಗೇ ಚಮಸಸ್ಥಂ ಸೋಮಂ ಪಿಬಂತಮಪೀಂದ್ರಂ ವಸಿಷ್ಠೈಃ ಸುದಾಃ ಪ್ರಾಪ್ತವಾನ್ ಏವಮೇವ ಸಿಂಧುಂ ನದೀಮೇಭಿರ್ವಸಿಷ್ಠೈಃ ಕಂ ಸುಖೇನ ತಕ್ಷಾರ । ತೀರ್ಣ ಆಸೀತ್ । ಸ್ನಿತಿ ಪೂರಣಃ । ತಥಾ ಚ ನಿಗಮಾಂತರಂ । ಅರ್ಣಾಂಸಿ ಚಿತ್ಪ್ರಪ್ರಥಾನಾ ಸುದಾಸೇ । ಋ. ೭-೧೮-೫ । ಇತಿ । ಏವೇದೇವಮೇವ ಭೇದಂ ಭೇದನಾಮಕಂ ಶತ್ರುಮಪ್ಯೇಭಿರ್ವಸಿಷ್ಠೈರೇವ ಜಘಾನ । ಅಥ ಪ್ರತ್ಯಕ್ಷಸ್ತುತಿಃ । ಏವೇದೇವನಮೇವ ಹೇ ವಸಿಷ್ಠಾಃ ವೋ ಯುಷ್ಮದೀಯೇನ ಬ್ರಹ್ಮಣಾ ಸ್ತೋತ್ರೇಣ ದಾಶರಾಜ್ಞೇ ದಶಭಿಃ ರಾಜಭಿಃ ಸಹ ಯುದ್ಧೇ ಪ್ರವೃತ್ತೇ ಸತಿ ಸುದಾಸಂ ರಾಜಾನಮಿಂದ್ರಃ ಪ್ರಾವತ್ । ಪ್ರಾರಕ್ಷತ್ । ತಥಾ ಚ ನಿಗಮಾಂತರಂ । ದಶ ರಾಜಾನಃ ಸಮಿತಾ ಅಯಜ್ಯವಃ ಸುದಾಸಮಿಂದ್ರಾವರುಣಾ ನ ಯುಯುಧುಃ । ಋ ೭-೮೩-೭ । ಇತಿ । ದಾಶರಾಜ್ಞೇ ಪರಿಯತ್ತಾಯ ವಿಶ್ವತಃ । ಋ ೭-೮೩-೮ । ಇತಿ ಚ ॥

ಪ್ರತಿಪದಾರ್ಥ

ಏವೇತ್—ಇದೇ ಪ್ರಕಾರವಾಗಿ । **ಏಭಿಃ**—ಈ ವಸಿಷ್ಠರೊಂದಿಗೆ । **ಸಿಂಧುಂ**—ಸಿಂಧೂನದಿಯನ್ನು । **ಕಂ**—ಸುಖವಾಗಿ । **ತಕ್ಷಾರ ನು**—(ಸುದಾಸನು) ದಾಟಿದನು **ಏವೇತ್**—ಇದೇ ರೀತಿಯಲ್ಲಿ । **ಏಭಿಃ**—ಈ ವಸಿಷ್ಠರ ಸಹಾಯದಿಂದಲೇ । **ಭೇದಂ**—ಭೇದನೆಂಬ ಶತ್ರುವನ್ನೂ । **ಜಘಾನ**—ಕೊಂದನು । **ಏವೇತ್**—ಇದರಂತೆಯೇ । **ವಸಿಷ್ಠಾಃ**—ಎಲೈ ವಸಿಷ್ಠಗೋತ್ರೋತ್ಪನ್ನರಾದ ಋಷಿಗಳೇ । **ವಃ**—ನಿಮ್ಮಿಂದ ರಚಿತವಾದ । **ಬ್ರಹ್ಮಣಾ**—ಸ್ತುತಿಯಿಂದ ತೃಪ್ತನಾಗಿ । **ಇಂದ್ರಃ**—ಇಂದ್ರನು । **ದಾಶರಾಜ್ಞೇ**—ಹತ್ತು ಮಂದಿ ರಾಜರೊಡನೆ ನಡೆದ ಯುದ್ಧದಲ್ಲಿ । **ಸುದಾಸಂ**—ಸುದಾಸನನ್ನು । **ಪ್ರಾವತ್**—ರಕ್ಷಿಸಿದನು

ಭಾವಾರ್ಥ

ಎಲೈ ವಸಿಷ್ಠರೇ, ಯಾವ ರೀತಿ ನಿಮ್ಮ ಪ್ರಭಾವದಿಂದ ಇಂದ್ರನು ಬೇರೆ ಕಡೆಯಲ್ಲಿ ಸೋಮಪಾನ ಮಾಡುತ್ತಿದ್ದರೂ, ಸುದಾಸನಿಗಾಗಿ ಆ ಜಾಗವನ್ನು ಬಿಟ್ಟು ಸುದಾಸನಲ್ಲಿಗೆ ಬಂದನೋ, ಅದೇರೀತಿ, ನಿಮ್ಮೊಂದಿಗೆ ಈ ಸುದಾಸನು ನದಿಯನ್ನೂ ಸುಖವಾಗಿ ದಾಟಿದನು ಈ ನಿಮ್ಮ ಸಹಾಯದಿಂದಲೇ ಭೇದನೆಂಬ ಶತ್ರುವನ್ನು ಕೊಂದನು. ಹಾಗೆಯೇ, ನಿಮ್ಮಿಂದ ರಚಿತವಾದ ಸ್ತುತಿಯಿಂದ ತೃಪ್ತನಾಗಿ, ಹತ್ತುಮಂದಿ ರಾಜರೊಡನೆ ಒಟ್ಟಿಗೆ ನಡೆಸಿದ ಯುದ್ಧದಲ್ಲೂ ಸಹ ಇಂದ್ರನು ಈ ಸುದಾಸನನ್ನು ರಕ್ಷಿಸಿದನು

English Translation

In the same manner was he, (Sudas), enabled by them easily to cross the Sindhu river: in the same manner, through them he easily slew his foe:

so in like manner, Vasishthas, through your prayers, did Indra defend Sudas in the war with the ten kings

ಸಂಹಿತಾಪಾಠಃ

ಜುಷ್ಟೀ ನರೋ ಬ್ರಹ್ಮಣಾ ವಃ ಪಿತ್ರ್ಯಾಣಾಮಕ್ಷಮವ್ಯಯಂ ನ ಕಿಲಾ ರಿಷಾಥ ।
ಯಚ್ಛಕ್ವರೀಷು ಬೃಹತಾ ರವೇಣೇಂದ್ರೇ ಶುಷ್ಮಮದಧಾತಾ ವಸಿಷ್ಠಾಃ ॥ ೪ ॥

ಪದಪಾಠಃ

ಜುಷ್ಟೀ । ನರಃ । ಬ್ರಹ್ಮಣಾ । ವಃ । ಪಿತ್ರ್ಯಾಣಾಂ । ಅಕ್ಷಂ । ಅವ್ಯಯಂ । ನ । ಕಿಲ । ರಿಷಾಥ ।
ಯತ್ । ಶಕ್ವರೀಷು । ಬೃಹತಾ । ರವೇಣ । ಇಂದ್ರೇ । ಶುಷ್ಮಂ । ಅದಧಾತ । ವಸಿಷ್ಠಾಃ ॥ ೪ ॥

ಸಾಯಣಭಾಷ್ಯಂ

ಹೇ ನರಃ ವೋ ಯುಷ್ಮದೀಯೇನ ಬ್ರಹ್ಮಣಾ ಸ್ತೋತ್ರೇಣ ಪಿತ್ರ್ಯಾಣಾಂ ಜುಷ್ಟೀ ಪ್ರೀತಿರ್ಭವತಿ । ಪಿತ್ರ್ಯಾಣಾಮಿತ್ಯನೇನ ಪಾರೋಕ್ಷ್ಯೇಣ ವಸಿಷ್ಠಸ್ಯೈವ ಕೀರ್ತನಂ । ಅಹಂ ಪ್ರೀತೋ ಭವಾಮೀತ್ಯರ್ಥಃ । ಅಥೀದಾನೀಂ ಸ್ವಮಾಶ್ರಮಂ ಗಂತುಮುದ್ಯತೋಽಹಮಕ್ಷಂ ರಥಸ್ಯಾಕ್ಷಮವ್ಯಯಂ । ವ್ಯಯೋಮಿ ॥ ಲಡರ್ಥೇ ಲಙ್ ॥ ಚಾಲಯಾಮೀತ್ಯರ್ಥಃ । ಯೂಯಂ ನ ಕಿಲ ರಿಷಾಥ ನ ಚ ಕ್ಷೀಣಾ ಭವಥ ಹೇ ವಸಿಷ್ಠಾಃ ಯದ್ಯಸ್ಮಾಚ್ಛಕ್ವರೀಷ್ವೃಕ್ಷು ಬೃಹತಾ ಶ್ರೇಷ್ಠೇನ ರವೇಣ ಸಾಮ್ನೇಂದ್ರೇ ಶುಷ್ಮಂ ಬಲಮದಧಾತ ಆಧಾರಯತ ॥

ಪ್ರತಿಪದಾರ್ಥ

ನರಃ—ನೇತೃಗಳಾದ ಎಲೈ ವಸಿಷ್ಠರೇ । **ವಃ**—ನಿಮ್ಮ । **ಬ್ರಹ್ಮಣಾ**—ಸ್ತುತಿಯಿಂದಲೇ । **ಪಿತ್ರ್ಯಾಣಾಂ**—ಪಿತೃಗಳಿಗೆ । **ಜುಷ್ಟೀ**—ತೃಪ್ತಿಯುಂಟಾಗುತ್ತದೆ । **ಅಕ್ಷಂ**—ರಥದ ಅಚ್ಚನ್ನು । **ಅವ್ಯಯಂ**—ನಾನು ಚಲಿಸುವಂತೆ ಮಾಡಿದ್ದೇನೆ । **ವಸಿಷ್ಠಾಃ**—ಎಲೈ ವಸಿಷ್ಠವಂಶೋತ್ಪನ್ನರಾದ ಋಷಿಗಳೇ । **ಯತ್**—ಯಾವ ನಿಮ್ಮ ಮಹಿಮೆಯಿಂದ **ಶಕ್ವರೀಷು**—ಶಕ್ವರೀ ಎಂಬ ಉತ್ತಮವಾದ ಛಂದಸ್ಸುಗಳಿಂದ ಅರ್ಪಿತವಾದುದೂ । **ಬೃಹತಾ**—ಶ್ರೇಷ್ಠವಾದುದೂ ಆದ । **ರವೇಣ**—ನಿಮ್ಮ ಸಾಮಗಾನದಿಂದ । **ಇಂದ್ರೇ**—ಇಂದ್ರನಲ್ಲಿ । **ಶುಷ್ಮಂ**—ಒಲವನ್ನು । **ಅದಧಾತ**—ತುಂಬಿದಿರೋ (ಆದುದರಿಂದಲೇ) **ನ ಕಿಲ ರಿಷಾಥ**—ನೀವು ಕೊಂಚವೂ ಕಾಲಹರಣಮಾಡಬೇಡಿರಿ.

ಭಾವಾರ್ಥ

ನೇತೃಗಳಾದ ಎಲೈ ವಸಿಷ್ಠರೇ, ನಿಮ್ಮ ಸ್ತುತಿಯಿಂದಲೇ ಪಿತೃಗಳಿಗೆ ತೃಪ್ತಿಯುಂಟಾಗುತ್ತದೆ. ರಥದ ಅಚ್ಚನ್ನು ನಾನು ಚಲಿಸುವಂತೆ ಮಾಡಿದ್ದೇನೆ. ಎಲೈ ವಸಿಷ್ಠವಂಶೋತ್ಪನ್ನರಾದ ಋಷಿಗಳೇ, ಯಾವ ನಿಮ್ಮ ಮಹಿಮೆಯಿಂದ ಶಕ್ವರೀ ಎಂಬ ಉತ್ತಮವಾದ ಛಂದಸ್ಸುಗಳ ಪಠನದಿಂದ ಆರ್ಪಿತವಾದುದೂ, ಶ್ರೇಷ್ಠವಾದುದೂ ಆದ ನಿಮ್ಮ ಸಾಮಗಾನದಿಂದ ಇಂದ್ರನಲ್ಲಿ ಬಲವನ್ನು ತುಂಬಿದಿರೋ ಆದುದರಿಂದಲೇ ನೀವು ಕೊಂಚವೂ ಕಾಲಹರಣವನ್ನು ಮಾಡಬೇಡಿರಿ.

English Translation

By your prayers, leaders (of rites), is effected the gratification of your progenitors I have set in motion the axle (of the chariot) be not you inert, for by your sacred metres, Vasishthas, (chaunted) with a loud voice, you sustain vigour in Indra.

ಸಂಹಿತಾಪಾಠಃ

ಉದ್ವ್ಯಮಿವೇತ್ತೃಷ್ಣಜೋ ನಾಥಿತಾಸೋಽದೀಧಯುರ್ದಾಶರಾಜ್ಞೇ ವೃತಾಸಃ।
ವಸಿಷ್ಠಸ್ಯ ಸ್ತುವತ ಇಂದ್ರೋ ಅಶ್ರೋದುರುಂ ತೃತ್ಸುಭ್ಯೋ ಅಕೃಣೋದು ಲೋಕಂ ॥ ೫ ॥

ಪದಪಾಠಃ

ಉತ್ । ದ್ಯಾಂಽಇವ । ಇತ್ । ತೃಷ್ಣಽಜಃ । ನಾಥಿತಾಸಃ । ಅದೀಧಯುಃ । ದಾಶಽರಾಜ್ಞೇ । ವೃತಾಸಃ।
ವಸಿಷ್ಠಸ್ಯ । ಸ್ತುವತಃ । ಇಂದ್ರಃ । ಅಶ್ರೋತ್ । ಉರುಂ । ತೃತ್ಸುಽಭ್ಯಃ । ಅಕೃಣೋತ್ । ಊಂ ಇತಿ ಲೋಕಂ ॥ ೫ ॥

ಸಾಯಣಭಾಷ್ಯಂ

ತೃಷ್ಣಜೋ ಜಾತತೃಷ್ಣಾ ವೃತಾಸಸ್ತೃತ್ಸುಭೀ ರಾಜಭಿರ್ವೃತಾ ನಾಥಿತಾಸೋ ವೃಷ್ಟಿಂ ಯಾಚಮಾನಾ ವಸಿಷ್ಠಾ ದ್ಯಾಮಿವಾದಿತ್ಯಮಿವೇಂದ್ರಂ ದಾಶರಾಜ್ಞೇ ದಶಾನಾಂ ರಾಜ್ಞಾಂ ಸಂಗ್ರಾಮ ಉದದೀಧಯುಃ । ಉದದೀಧಯನ್ । ಸ್ತುವತೋ ವಸಿಷ್ಠಸ್ಯ ಸ್ತೋತ್ರಮಿಂದ್ರೋಽಶ್ರೋತ್ । ಅಶೃಣೋಚ್ಚೆ । ಉರುಂ ವಿಸ್ತೀರ್ಣಂ ಲೋಕಂ ತೃತ್ಸುಭ್ಯೋ ರಾಜಭ್ಯೋಽಕೃಣೋತ್ । ಅಕರೋಚ್ಚೆ । ಅದದಾಚ್ಚೇತ್ಯರ್ಥಃ ॥

ಪ್ರತಿಪದಾರ್ಥ

ತೃಷ್ಣಜಃ—ಬಾಯಾರಿಕೆಯಿಂದ ಕೂಡಿದವರೂ । ವೃತಾಸಃ—ತೃತ್ಸುಸಂಜ್ಞಕರಾದ ರಾಜರಿಂದ ಪರಿವೃತರಾದವರೂ । ನಾಥಿತಾಸಃ—ವೃಷ್ಟಿಯನ್ನು ಯಾಚಿಸುತ್ತಿದ್ದವರೂ ಆದ ವಸಿಷ್ಠರು । ದಾಶರಾಜ್ಞೇ—ಹತ್ತು ಮಂದಿ ರಾಜರೊಡನೆ ನಡೆದ ಯುದ್ಧದಲ್ಲಿ । (ಇಂದ್ರಂ—ಇಂದ್ರನನ್ನು) ದ್ಯಾಂ ಇವ—ಆದಿತ್ಯನಂತೆ । ಉದದೀಧಯುಃ—ಪ್ರಕಾಶಿಸುವಂತೆ ಮಾಡಿದರು । ಸ್ತುವತಃ—ಸ್ತುತಿಸುತ್ತಿದ್ದ । ವಸಿಷ್ಠಸ್ಯ—ವಸಿಷ್ಠನ ಸ್ತುತಿಯನ್ನು । ಇಂದ್ರಃ—ಇಂದ್ರನು । ಅಶ್ರೋತ್—ಕೇಳಿದನು । ತೃತ್ಸುಭ್ಯಃ—ತೃತ್ಸುಸಂಜ್ಞಕರಾದ ರಾಜರಿಗೆ । ಉರುಂ—ಅತಿವಿಸ್ತೃತವಾದ । ಲೋಕಂ—ರಾಜ್ಯವನ್ನು । ಅಕೃಣೋತ್—ನಿರ್ಮಿಸಿಕೊಟ್ಟನು.

ಭಾವಾರ್ಥ

ಬಾಯಾರಿಕೆಯಿಂದ ಕೂಡಿದವರೂ, ತೃತ್ಸುಸಂಜ್ಞಕರಾದ ರಾಜರಿಂದ ಪರಿವೃತರಾದವರೂ ವೃಷ್ಟಿಯನ್ನು ಯಾಚಿಸುತ್ತಿದ್ದವರೂ ಆದ ವಸಿಷ್ಠರು ಹತ್ತು ಮಂದಿ ರಾಜರೊಡನೆ ನಡೆದ ಯುದ್ಧದಲ್ಲಿ ಇಂದ್ರನನ್ನು ಆದಿತ್ಯನಂತೆ ಪ್ರಕಾಶಿಸುವಂತೆ ಮಾಡಿದರು. ಇಂದ್ರನು ವಸಿಷ್ಠನ ಸ್ತುತಿಯನ್ನು ಕೇಳಿದನು. ತೃತ್ಸುಸಂಜ್ಞಕರಾದ ರಾಜರಿಗೆ ಅತಿವಿಸ್ತೃತವಾದ ರಾಜ್ಯವನ್ನು ನಿರ್ಮಿಸಿಕೊಟ್ಟನು.

English Translation

Suffering from thirst, soliciting (rain), supported (by the Tritsus in the war with the ten Rajas, (the Vasishthas) made Indra radiant as the sun: Indra heard (the praises) of Vasishtha glorifying him, and bestowed a spacious region on the Tritsus.

ಸಂಹಿತಾಪಾಠಃ

ದಂಡಾ ಇವೇದ್ಗೋಅಜನಾಸ ಆಸನ್ಪರಿಚ್ಛಿನ್ನಾ ಭರತಾ ಅರ್ಭಕಾಸಃ ।
ಅಭವಚ್ಚ ಪುರಏತಾ ವಸಿಷ್ಠ ಆದಿತ್ತೃತ್ಸೂನಾಂ ವಿಶೋ ಅಪ್ರಥಂತ ॥ ೬ ॥

ಪದಪಾಠಃ

ದಂಡಾಃ ಇವ । ಇತ್ । ಗೋಅಜನಾಸಃ । ಆಸನ್ । ಪರಿಚ್ಛಿನ್ನಾಃ । ಭರತಾಃ । ಅರ್ಭಕಾಸಃ ।
ಅಭವತ್ । ಚ । ಪುರಃಏತಾ । ವಸಿಷ್ಠಃ । ಅತ್ । ಇತ್ । ತೃತ್ಸೂನಾಂ । ವಿಶಃ । ಅಪ್ರಥಂತ ॥ ೬ ॥

ಸಾಯಣಭಾಷ್ಯಂ

ಗೋಅಜನಾಸೋ ಗವಾಂ ಪ್ರೇರಕಾ ದಂಡಾ ಇವ ಯಥಾ ದಂಡಾಃ ಪರಿಚ್ಛಿನ್ನಸತ್ಕೋಸಶಾಖಾ ಭವಂತಿ ತದ್ವತ್ಪರಿತಾಃ । ತೃತ್ಸೂನಾಮೇವ ರಾಜ್ಞಾಂ ಭರತಾ ಇತಿ ನಾಮಾಂತರೇಣೋಪಾದಾನಂ । ಶತ್ರುಭಿಃ ಪರಿಚ್ಛಿನ್ನಾ ಏವಾಸನ್ । ಆರ್ಭಕಾಸೋಽರ್ಭಕಾ ಅಲ್ಪಾಶ್ಚಾಸನ್ । ಆದಿತ್ಪರಿಚ್ಛಿನ್ನತ್ವಾದನಂತರಮೇವ ತೇಷಾಂ ತೃತ್ಸೂನಾಂ ವಸಿಷ್ಠಃ ಪುರಏತಾ ಪುರೋಹಿತೋಽಭವಚ್ಚ । ತತ್ಪೌರೋಹಿತ್ಯಸಾಮರ್ಥ್ಯಾತ್ತೃತ್ಸೂನಾಂ ವಿಶಃ ಪ್ರಜಾಃ ಅಪ್ರಥಂತ । ಅವರ್ಧಂತ ॥

ಪ್ರತಿಪದಾರ್ಥ

ಗೋಅಜನಾಸಃ—ಗೋವುಗಳನ್ನು ಹೊಡೆಯಲು ಸಿದ್ಧಪಡಿಸುವ । **ದಂಡಾ ಇವ** — ಕೋಲುಗಳಿಗೆ। ಯಾವ ರೀತಿ ಪತ್ರಾದಿಗಳೆಲ್ಲವೂ ಬಿಡಿಸಿ ಅವು ನುಣ್ಣಗಿರುವವೋ ಹಾಗೆ । **ಭರತಾಃ**—ಈ ಭರತರು (ತೃತ್ಸುಗಳು) । **ಪರಿಚ್ಛಿನ್ನಾ ಇತ್**—ಶತ್ರುಗಳಿಂದ ಪೂರ್ಣವಾಗಿ ಅಪಹರಿಸಲ್ಪಟ್ಟ ಧನವುಳ್ಳವರಾಗಿಯೇ । **ಆಸನ್**—ಆದರು. । **ಆರ್ಭಕಾಸಃ**—ಅತ್ಯಲ್ಪರೂ ಆದರು. । **ಆದಿತ್**—ಆ ಒಡನೆಯೇ । **ತೃತ್ಸೂನಾಂ**—ಈ ತೃತ್ಸುಗಳಿಗೆ । **ವಸಿಷ್ಠಃ**—ವಸಿಷ್ಠನು । **ಪುರಏತಾ**—ಪುರೋಹಿತನಾಗಿ । **ಅಭವಚ್ಚ**—ಆದನು. । **ವಿಶಃ**—(ತತ್ಫಲವಾಗಿ) ಅವರ ಪ್ರಜೆಗಳೆಲ್ಲ **ಅಪ್ರಥಂತ**—ವೃದ್ಧಿಯನ್ನು ಪಡೆದರು.

ಭಾವಾರ್ಥ

ಗೋವುಗಳನ್ನು ಹೊಡೆಯಲು ಸಿದ್ಧಪಡಿಸುವ ಕೋಲುಗಳಿಗೆ ಪರ್ಣಾದಿಗಳೆಲ್ಲವನ್ನೂ ಬಿಡಿಸಿ ಅವನ್ನು ನುಣ್ಣಗೆ ಮಾಡುವಂತೆ ತೃತ್ಸುಗಳು ಶತ್ರುಗಳಿಂದ ಪೂರ್ಣವಾಗಿ ಅಪಹರಿಸಲ್ಪಟ್ಟ ಧನವುಳ್ಳವರಾಗಿ ರಿಕ್ತರಾದರು. ಅತ್ಯಲ್ಪರೂ ಆದರು. ಆ ಒಡನೆಯೇ, ಈ ತೃತ್ಸುಗಳಿಗೆ ವಸಿಷ್ಠನು ಪುರೋಹಿತನಾಗಿ ಆದನು ತತ್ಫಲವಾಗಿ ಅವರ ಪ್ರಜೆಗಳೆಲ್ಲರೂ ವೃದ್ಧಿಯನ್ನು ಪಡೆದರು

English Translation

The Bharatas, inferior (to their foes), were shorn (of their positions), like the staves for driving cattle, (stripped of their leaves and branches): but Vashistha became their family priest, and the people of the Tritsus prospered,

ಸಂಹಿತಾಪಾಠಃ

त्रयऽइः कृण्वन्ति भुवनेषु रेतऽस्तिस्रः प्रजा आर्या ज्योतिरग्राः
त्रयोः घुर्मासऽ उषसं सचन्तेः सर्वा इत्ता अनु विदुर्वसिष्ठाः ॥ ६ ॥

ಪದಪಾಠಃ

त्रयऽइः । कृण्वन्ति । भुवनेषु । रेतऽइः । तिस्रः । प्रऽजाः । आर्याः । ज्योतिःऽअग्राः ।
त्रयऽइः । घुर्मासः । उषसं । सचन्तेः । सर्वान् । इत् । ताम् । अनु । विदुः । वसिष्ठाः ॥

ಸಾಯಣಭಾಷ್ಯಂ

भुवनेषु पृथिव्यन्तरिक्षद्युषु त्रयोऽग्निवायुसूर्या यथाक्रमेण रेतोऽविश्वस्य धारकमुदकं कृण्वन्ति । कुर्वन्ति । तेषां त्रयाणां ज्योतिरग्रा आदित्यप्रमुखा आर्याः श्रेष्ठास्तिस्रः प्रजा भवन्ति । के च त्रयोऽग्निवायुसूर्या घुर्मासोदीप्यमाना उषसं सचन्तेः । समवयन्ति । ये ज्ञानेनात्सर्वानिच्छसर्वानेव तानत्सर्वसिष्ठा अनु विदुः । अभिजानन्ति । तेषां रहस्यविज्ञानादियमपि वसिष्ठानामेव स्तुतिः । तथा च शाट्यायनकं । त्रयः कृण्वन्ति भुवनेषु रेत इत्यग्निः पृथिव्यां रेतः कृणोतीति वायुरन्तरिक्षे आदित्योः दिवि तिस्रः प्रजा आर्या ज्योतिरग्रा इति वसवो रुद्रा आदित्यास्तासां ज्योतिर्यदसावादित्यस्त्रयो घुर्मास उषसं सचन्त इत्यग्निरुषसं सचतेः वायुरुषसं सचत आदित्य उषसं सचत इति ॥

ಪ್ರತಿಪದಾರ್ಥ

ಭುವನೇಷು—ಪೃಥಿವ್ಯಾದಿ ಮೂರು ಲೋಕಗಳಲ್ಲೂ । **ತ್ರಯಃ**—ಅಗ್ನಿ, ವಾಯು, ಆದಿತ್ಯ ಎಂಬ ಮೂವರೂ । **ರೇತಃ**—ಉದಕವನ್ನು । **ಕೃಣ್ವಂತಿ**—ಉತ್ಪನ್ನಮಾಡುತ್ತಾರೆ. (ಈ ಮೂವರಲ್ಲಿಯೂ) । **ಜ್ಯೋತಿ**-

ರಗ್ರಾಃ—ಆದಿತ್ಯಪ್ರಮುಖರಾದವರೂ | **ಆರ್ಯಾಃ**—ಶ್ರೇಷ್ಠರೂ ಆದ | **ತಿಸ್ರಃ ಪ್ರಜಾಃ**—ವಸುರುದ್ರಾದಿತ್ಯರೆಂಬ ಮೂವರೂ ಆವಿರ್ಭೂತರಾಗುತ್ತಾರೆ | **ತ್ರಯಃ**-ಈ ಮೂವರೂ | **ಘರ್ಮಾಸಃ**—ಪ್ರಕಾಶಮಾನರಾಗಿ | **ಉಷಸಂ**—ಉಷೋದೇವಿಯನ್ನು | **ಸಚಂತೇ**—ಸೇವಿಸುತ್ತಾರೆ. | **ತಾನ್ ಸರ್ವಾನ್ ಇತ್**—ಆ ಎಲ್ಲರನ್ನೂ | ವಸಿಷ್ಠಾಃ—ವಸಿಷ್ಠವಂಶದವರು | **ಅನು ವಿದುಃ**—ಯಥಾವತ್ತಾಗಿ ತಿಳಿದಿದ್ದಾರೆ.

ಭಾವಾರ್ಥ

ಪೃಥಿವ್ಯಾದಿ ಮೂರು ಲೋಕಗಳಲ್ಲಿಯೂ ಅಗ್ನಿ, ವಾಯು ಮತ್ತು ಆದಿತ್ಯ ಎಂಬ ಮೂವರೂ ಉದಕವನ್ನು ಉತ್ಪನ್ನಮಾಡುತ್ತಾರೆ ಈ ಮೂವರಲ್ಲಿಯೂ ಆದಿತ್ಯಪ್ರಮುಖರಾದವರೂ, ಶ್ರೇಷ್ಠರೂ ಆದ ವಸುರುದ್ರಾದಿತ್ಯರೆಂಬ ಮೂವರು ಪ್ರಜೆಗಳು ಆವಿರ್ಭೂತರಾಗುತ್ತಾರೆ ಈ ಮೂವರೂ ಪ್ರಕಾಶಮಾನರಾಗಿ ಉಷೋದೇವಿಯನ್ನು ಸೇವಿಸುತ್ತಾರೆ ಆ ಎಲ್ಲರನ್ನೂ ವಸಿಷ್ಠರು ಯಥಾವತ್ತಾಗಿ ತಿಳಿದಿದ್ದಾರೆ

English Translation

Three shed moisture upon the regions, three are their glorious progeny, of which the chief is night three communicators of warmth accompany the dawn verily the Vashisthas understand all these

ಸಂಹಿತಾಪಾಠಃ

सूर्यस्येव वक्षथो ज्योतिरेषां समुद्रस्येव महिमा गभीरः ।
वातस्येव प्रजवो नान्येन स्तोमो वसिष्ठा अन्येतवे वः ॥

ಪದಪಾಠಃ

सूर्यस्यऽइव । वक्षथः । ज्योतिः । एषाम् । समुद्रस्यऽइव । महिमा । गभीरः ।
वातस्यऽइव । प्रऽजवः । न । अन्येन । स्तोमः । वसिष्ठाः । अनुऽएतवे । वः ॥ ९ ॥

ಸಾಯಣಭಾಷ್ಯಂ

हे वसिष्ठाः एषां वो युष्माकं स्तोमो महिमापि वा सूर्यस्य ज्योतिरिव वक्षथः प्रकाशोऽस्ति । हे वसिष्ठाः वो युष्माकं महिमा स्तोमोऽपि वा समुद्रस्येव गभीरो गंभीरोऽस्ति । तथा हे वसिष्ठाः एषां वो युष्माकं स्तोममृक्सामरूपो महिमापि वा वातस्येव प्रजवो यथा वातस्य प्रजवेगोऽन्येनास्येतुं न शक्यस्तद्वदन्येनास्येतवेऽस्येतुं न शक्यः ॥

ಪ್ರತಿಪದಾರ್ಥ

ವಸಿಷ್ಠಾಃ—ಎಲೈ ವಸಿಷ್ಠರೇ, | **ಏಷಾಂ ವಃ**—ಪ್ರಸಿದ್ಧರಾದ ಈ ನಿಮ್ಮ | **ಮಹಿಮಾ**—ಮಾಹಾತ್ಮ್ಯವು **ಸೂರ್ಯಸ್ಯ**—ಸೂರ್ಯನ | **ಜ್ಯೋತಿಃಇವ**—ಪ್ರಭೆಯಂತೆ | **ವಕ್ಷಥಃ**—ಕಂಗೊಳಿಸುತ್ತದೆ. | **ಸಮುದ್ರಸ್ಯೇವ**—ಸಮುದ್ರದಂತೆ | **ಗಭೀರಃ**—ಗಂಭೀರಾತ್ಮಕವಾಗಿರುತ್ತದೆ. | **ಸ್ತೋಮಃ**—ನಿಮ್ಮ ಸ್ತುತಿಯು | **ವಾತಸ್ಯೇವ**—

ವಾಯುವಿನಂತೆ | **ಪ್ರಜವಃ**—ವೇಗಗಾಮಿಯಾಗಿರುತ್ತದೆ. | **ಅನ್ಯೇನ**—ಇತರರಾರಿಂದಲೂ (ಇತರ ಸ್ತುತಿಗಳಿಂದ) | **ಅಸ್ವೇತವೇ**—ಅದನ್ನು ಮೀರಿಸಲು | **ನ**—ಸಾಧ್ಯವಿಲ್ಲ.

ಭಾವಾರ್ಥ

ಎಲೈ ವಸಿಷ್ಠರೇ, ಪ್ರಸಿದ್ಧರಾದ ಈ ನಿಮ್ಮ ಮಾಹಾತ್ಮ್ಯವು ಸೂರ್ಯನ ಪ್ರಭೆಯಂತೆ ಕಂಗೊಳಿಸುತ್ತದೆ. ಸಮುದ್ರದಂತೆ ಗಂಭೀರಾತ್ಮಕವಾಗಿರುತ್ತದೆ ನಿಮ್ಮ ಸ್ತುತಿಯು ವಾಯುವಿನಂತೆ ವೇಗಗಾಮಿಯಾಗಿರುತ್ತದೆ. ಇತರರ ಸ್ತುತಿಗಳಿಂದ ಅದನ್ನು ಮೀರಿಸಲು ಸಾಧ್ಯವಿಲ್ಲ.

English Translation

The glory of these Vashisthas is like the splendour of the sun their greatness as profound as (the depth of) the ocean your praise, Vashisthas has the velocity of the wind . by no other can it be surpassed.

ವಿಶೇಷವಿಷಯಗಳು

ಋಗ್ವೇದಮಂತ್ರಗಳಲ್ಲಿ ದೇವತೆಗಳೇ ಅಲ್ಲದೆ, ಪಿತೃಗಳೂ, ಋಷಿಗಳೂ ಸ್ತುತಿಸಲ್ಪಡುತ್ತಾರೆಂದು ಯಾಸ್ಕರು ಹೇಳಿ ಋಷಿಗಳ ಪ್ರಶಂಸೆಯನ್ನು ವರ್ಣಿಸುವ ಈ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿದಾರೆ (ನಿ ೧೧-೨೦). ಈ ಋಕ್ಕಿನಲ್ಲಿ ವಸಿಷ್ಠಋಷಿಯ ಮತ್ತು ವಸಿಷ್ಠಪುತ್ರರೇ ಮೊದಲಾದ ವಸಿಷ್ಠವಂಶದವರ ಮಾಹಾತ್ಮ್ಯದ ವರ್ಣನೆ ಇದೆ.

ಸಂಹಿತಾಪಾಠಃ

ತ ಇನ್ನಿಣ್ಯಂ ಹೃದಯಸ್ಯ ಪ್ರಕೇತೈಃ ಸಹಸ್ರವಲ್ಶಮಭಿ ಸಂ ಚರಂತಿ ।
ಯಮೇನ ತತಂ ಪರಿಧಿಂ ವಯಂತೋಽಪ್ಸರಸ ಉಪ ಸೇದುರ್ವಸಿಷ್ಠಾಃ ॥

ಪದಪಾಠಃ

ತೇ । ಇತ್ । ನಿಣ್ಯಂ । ಹೃದಯಸ್ಯ । ಪ್ರಕೇತೈಃ । ಸಹಸ್ರವಲ್ಶಂ । ಅಭಿ । ಸಂ । ಚರಂತಿ ।
ಯಮೇನ । ತತಂ । ಪರಿಧಿಂ । ವಯಂತಃ । ಅಪ್ಸರಸಃ । ಉಪ । ಸೇದುಃ । ವಸಿಷ್ಠಾಃ ॥ ೯ ॥

ಸಾಯಣಭಾಷ್ಯಂ

ತ ಇತ್ತ ಏವ ವಸಿಷ್ಠಾ ನಿಣ್ಯಂ ತಿರೋಹಿತಂ ದುರ್ಜ್ಞಾನಂ । ನಿಣ್ಯಂ ಸಸ್ಪರಿತ್ಯಂತರ್ಹಿತನಾಮಸು ಪಾಠಾತ್ । ಸಹಸ್ರವಲ್ಶಂ ಸಹಸ್ರಶಾಖಂ ಸಂಸಾರಂ ಹೃದಯಸ್ಯ ಪ್ರಕೇತೈಃ ಪ್ರಜ್ಞಾಸೈರಭಿ ಸಂ ಚರಂತಿ । ಏವಂ ಸ್ವಾಭ್ಯುದ್ಯೇನಾಭಿಸಂಚರಂತಸ್ತೇ ವಸಿಷ್ಠಾ ಯಮೇನ ಕಾರಣಾತ್ಮನಾ ಸರ್ವನಿಯಂತ್ರಾ ತತಂ ವಿಸ್ತೃತಂ ಪರಿಧಿಂ ವಸ್ತ್ರಂ । ಪರಿಧಿರಿತ್ಯನೇನ ಜನ್ಮಾದಿಪ್ರವಾಹೋ ವಿವಕ್ಷಿತಃ । ತಂ ವಯಂತೋಽಪ್ಸರಸೋ ಜನನೀಶ್ಚೇನೋಪ ಸೇದುಃ । ಅತ್ರ ವಸಿಷ್ಠಾ ಇತಿ ಬಹುವಚನಂ ಪೂಜಾಯಾಂ । ವಸಿಷ್ಠಃ ಪೂರ್ವಂ ಪ್ರಜಾಪತೇರುತ್ಪನ್ನಂ ದೇಹಮುತ್ಸೃಜ್ಯಾಪ್ಸರಸಿಷು ಜಾಯೇಯೇತಿ ಬುದ್ಧಿಮಕರೋದಿತಿ ಭಾವಃ ॥

प्रतिपदार्थ

त इत् **वसिष्ठाः**—ಆದೇ ವಸಿಷ್ಠರು । **निण्यं**—ಇತರರ ಜ್ಞಾನಕ್ಕೆ ಸಿಲುಕದ ರಹಸ್ಯದಿಂದ ಕೂಡಿದುದೂ । **सहस्रवल्शं**—ಸಹಸ್ರಾರು ಶಾಖೆಗಳಿಂದ ಕೂಡಿದುದೂ ಆದ ಸಂಸಾರವನ್ನು । **हृदयस्य**— ತಮ್ಮ ಹೃದಯದ । **प्रकेतैः**—ಪ್ರಜ್ಞಾನಗಳಿಂದ । **अभि सं चरन्ति**—ಪ್ರವೇಶಿಸಿ ಎಲ್ಲೆಲ್ಲೂ ಸಂಚರಿಸುತ್ತಾರೆ. । **यमेन**—ಜಗನ್ನಿಯಾಮಕನಾದ ಯಮನಿಂದ । **ततं**—ವಿಸ್ತೃತವಾಗಿ ಹರಡಿದ । **परिधिं**—ವಸ್ತ್ರವನ್ನು (ಜನ್ಯಾದಿ ಪ್ರವಾಹವನ್ನು) । **वयन्तः**—ಧರಿಸಿಕೊಂಡು । **अप्सरसः**—ಅಪ್ಸರಸ್ಸಿನ ಉದರದಲ್ಲಿ । **उप-सेदुः**—ಜನಿಸಿದ್ದಾರೆ.

ಭಾವಾರ್ಥ

ಮಹಾನುಭಿಮರಾದ ಆದೇ ವಸಿಷ್ಠರು ಇತರರ ಜ್ಞಾನಕ್ಕೆ ಸಿಲುಕದ ರಹಸ್ಯದಿಂದ ಕೂಡಿದುದೂ, ಸಹಸ್ರಾರು ಶಾಖಾತ್ಮಕವಾದುದೂ ಆದ ಸಂಸಾರವನ್ನು ತಮ್ಮ ಹೃದಯದ ಪ್ರಜ್ಞಾನಗಳಿಂದ ಪ್ರವೇಶಿಸಿ ಎಲ್ಲೆಲ್ಲೂ ಸಂಚರಿಸುತ್ತಾರೆ ಜಗನ್ನಿಯಾಮಕನಾದ ಯಮನಿಂದ ವಿಸ್ತೃತವಾಗಿ ಹರಡಿದ ಜನ್ಯಾದಿಪ್ರವಾಹದಲ್ಲಿ ಪ್ರವೇಶಿಸಿ ಅಪ್ಸರಸ್ಸಿನ ಉದರದಲ್ಲಿ ಜನಿಸಿದ್ದಾರೆ

English Translation

By the wisdom seated in the heart the Vashisthas traverse the hidden thonsand-branched world, and the Apsaras sit down, wearing the vesture spread out by Yama

ಸಂಹಿತಾಪಾಠಃ

विद्युतो॑ ज्योतिषः परि संजिहा॒नं मित्रा॑वरुणा॒ यदप॑श्यतां त्वा ।
तत्ते॑ जन्मो॒तैकं वसिष्ठा॒गस्त्यो॑ यत्त्वा॒विश॑ आज॒भार॑ ॥ ७० ॥

ಪದಪಾಠಃ

विऽद्युतः॑ । ज्योति॑षः । परि॑ । सं॒ऽजिहा॑नं । मित्रा॑वरुणा । यत् । अप॑श्यतां । त्वा ।
तत् । ते॒ । ज॒न्म॒ । उ॒त । एक॑म् । व॒सि॒ष्ठ॒ । अ॒गस्त्यः॑ । यत् । त्वा॒ । विशः॑ । आ॒ऽज॒भार॑ ॥ ७० ॥

ಸಾಯಣಭಾಷ್ಯಂ

एतास्वृक्षु वसिष्ठस्यैव दोषपरिग्रहः प्रतिषाद्यते । एतांश्चेन्द्रस्य वाक्यमित्येके वर्णयंत्यपरे वसिष्ठपुत्राणामिति । हे वसिष्ठ यद्यदा विद्युतो विद्युत इव स्वीयं ज्योतिर्देहांतरपरिग्रहार्थं परि संजिहानं परित्यजंतं त्वा त्वां ॥ छांदसमात्मने-पदं ॥ यदा । जिघृक्षितदेहार्थं स्वीयं ज्योतिः परि संजिहानं । परिजिघृक्षंत-मित्यर्थः ॥ अस्मिन्पक्षे जहातेर्गत्यर्थत्वादात्मनेपदं छांदसं न भवति ॥ मित्रावरुणा मित्रावरुणावपश्यतां । आवामयमयं जायेतेति समकल्पतामित्यर्थः । तत्तदा ते

ತವೈಕಂ ಜನ್ಮ । ಉತಾಸಿ ಚ ಯದ್ಯದಾಗಸ್ತ್ಯೋ ವಿಶೋ ನಿವೇಶನಾನ್ಮಿತ್ರಾವರುಣಾವಾವಾಂ ಜನಯಿಷ್ಯಾವ ಇತ್ಯೇತಸ್ಮಾತ್ಪೂರ್ವಾವಸ್ಥಾನಾತ್ತ್ವಮಾಜಭಾರ ಆಜಹಾರ ॥

ಪ್ರತಿಪದಾರ್ಥ

ವಸಿಷ್ಠ—ಎಲೈ ವಸಿಷ್ಠನೇ । **ಯತ್**—ಯಾವಾಗ । **ವಿದ್ಯುತಃ**—ನಿನ್ನ ಸ್ವಪ್ರಭೆಯ । **ಜ್ಯೋತಿಃ**—ಕಾಂತಿಯನ್ನು । **ಪರಿ ಸಂಜಿಹಾನಂ**—ಪರಿತ್ಯಜಿಸಿದ । **ತ್ವಾ**—ನಿನ್ನನ್ನು । **ಮಿತ್ರಾವರುಣಾ**—ಮಿತ್ರಾವರುಣರು । **ಅಪಶ್ಯತಾಂ**—ನೋಡಿದರೋ । **ಉತ**—ಮತ್ತು । **ಯತ್**—ಯಾವಾಗ । **ಅಗಸ್ತ್ಯಃ**—ಅಗಸ್ತ್ಯನು । **ವಿಶಃ**—ನಿನ್ನ ಹಿಂದಿನ ವಸತಿಯಿಂದ । **ತ್ವಾ**—ನಿನ್ನನ್ನು । **ಅ ಜಭಾರ**—ಕರೆತಂದನೋ । **ತತ್**—ಆಗ । **ತೇ**—ನಿನ್ನ । **ಏಕಂ ಜನ್ಮ**—ಒಂದು ಜನ್ಮವು ಸಂಭವಿಸಿತು.

ಭಾವಾರ್ಥ

ಎಲೈ ವಸಿಷ್ಠನೇ, ಯಾವಾಗ ನೀನು ಜನ್ಮಾಂತರಕ್ಕಾಗಿ ಹಿಂದಿನ ಸ್ವಪ್ರಭೆಯನ್ನು ಪರಿತ್ಯಜಿಸಿದಾಗ ನಿನ್ನನ್ನು ಮಿತ್ರಾವರುಣರು ನೋಡಿದರೋ, ಯಾವಾಗ ಅಗಸ್ತ್ಯನು ನಿನ್ನ ಹಿಂದಿನ ವಾಸಸ್ಥಾನದಿಂದ ತನ್ನೊಡನೆ ಮಿತ್ರಾವರುಣರಿಂದ ಉತ್ಪನ್ನನಾಗಲು ಕರೆತಂದರೋ ಆಗ ನಿನ್ನ ಒಂದು ಜನ್ಮವು ಸಂಭವಿಸಿತು.

English Translation

When Mitra and Varuna beheld you, Vasistha, quitting the lustre of the lightning (for the different form), then one of your births (took place), in as much as Agastya bore you from your (former) abode.

ವಿಶೇಷವಿಷಯಗಳು

ಈ ಋಕ್ಕಿನಲ್ಲಿಯೂ ಮುಂದಿನ ಕೆಲವು ಋಕ್ಕುಗಳಲ್ಲಿಯೂ ವಸಿಷ್ಠಋಷಿಯ ಜನ್ಮವೃತ್ತಾಂತವು ಉಕ್ತವಾಗಿದೆ ಈ ಋಕ್ಕಿನಲ್ಲಿ ವಸಿಷ್ಠ ಮತ್ತು ಅಗಸ್ತ್ಯಋಷಿಗಳ ಜನ್ಮವಿಚಾರದ ಪ್ರಸ್ತಾಪವಿದೆ. ಈ ಋಕ್ಕುಗಳಲ್ಲಿರುವ ವಾಕ್ಯಗಳನ್ನು ಇಂದ್ರನೇ ಹೇಳಿರುವನೆಂದು ಕೆಲವರೂ, ವಸಿಷ್ಠಪುತ್ರರು ಹೇಳಿರುವರೆಂದು ಮತ್ತೆ ಕೆಲವರೂ ಪ್ರತಿವಾದಿಸುವರು ವಸಿಷ್ಠಋಷಿಯ ಜನನದ ವಿವರಗಳನ್ನು ನಾವು ಮುಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ವಿಸ್ತಾರವಾಗಿ ವಿವರಿಸಿದ್ದೇವೆ

ಸಂಹಿತಾಪಾಠಃ

ಉತಾಸಿ ಮೈತ್ರಾವರುಣೋ ವಸಿಷ್ಠೋರ್ವಶ್ಯಾ ಬ್ರಹ್ಮನ್ಮನಸೋಽಧಿ ಜಾತಃ
ದ್ರಪ್ಸಂ ಸ್ಕನ್ನಂ ಬ್ರಹ್ಮಣಾ ದೈವ್ಯೇನ ವಿಶ್ವೇ ದೇವಾಃ ಪುಷ್ಕರೇ ತ್ವಾದದಂತ ॥

ಪದಪಾಠಃ

ಉತ । ಅಸಿ । ಮೈತ್ರಾವರುಣಃ । ವಸಿಷ್ಠ । ಊರ್ವಶ್ಯಾಃ । ಬ್ರಹ್ಮನ್ । ಮನಸಃ । ಅಧಿ । ಜಾತಃ ।
ದ್ರಪ್ಸಂ । ಸ್ಕನ್ನಂ । ಬ್ರಹ್ಮಣಾ । ದೈವ್ಯೇನ । ವಿಶ್ವೇ । ದೇವಾಃ । ಪುಷ್ಕರೇ । ತ್ವಾ । ಅದದಂತ ॥ ೧೦ ॥

ಸಾಯಣಭಾಷ್ಯಂ

ಉತಾಸಿ ಚ ಹೇ ವಸಿಷ್ಠ ಮೈತ್ರಾವರುಣೋ ಮಿತ್ರಾವರುಣಯೋಃ ಪುತ್ರೋಽಸಿ । ಹೇ ಬ್ರಹ್ಮನ್ ವಸಿಷ್ಠ ಉರ್ವಶ್ಯಾ ಅಪ್ಸರಸೋ ಮನಸೋ ಮಮಾಯಂ ಪುತ್ರಃ ಸ್ಯಾದಿತೀದೃಶಾತ್ಸಂಕಲ್ಪಾದ್ರೂಪಂ ರೇತೋ ಮಿತ್ರಾವರುಣಯೋರುರ್ವಶೀದರ್ಶನಾತ್ಸ್ಕನ್ನಮಾಸೀತ್ । ತಸ್ಮಾದಧಿ ಜಾತೋಽಸಿ । ತಥಾ ಚ ವಕ್ಷ್ಯತೇ ಸತ್ರೇ ಹ ಜಾತಾವಿಷ್ಟಯೇ । ಏವಂ ಜಾತಂ ತ್ವಾ ತ್ವಾಂ ದೈವ್ಯೇನ ದೇವಸಂಬಂಧಿನಾ ಬ್ರಹ್ಮಣಾ ವೇದರಾಶಿನಾಹಂಭುವಾ ಯುಕ್ತಂ ಪುಷ್ಕರೇ ವಿಶ್ವೇ ದೇವಾ ಅದದಂತ । ಅಧಾರಯಂತ ॥ ಶಥಾ ಚಾದಿತೇರ್ಮಿತ್ರಾವರುಣೌ ಜಜ್ಞಾತೇ ಇತಿ ಪ್ರಕೃತ್ಯ ಪರ್ಯತೇ । ತಯೋರಾದಿತ್ಯಯೋಃ ಸತ್ರೇ ದೃಷ್ಟ್ವಾಪ್ಸರಸಮುರ್ವಶೀಂ । ರೇತಶ್ಚಸ್ಕಂದ ತತ್ಕುಂಭೇ ನ್ಯಪತದ್ವಸಿಷ್ಠೇವರೇ ॥ ತೇನೈವ ತು ಮುಹೂರ್ತೇನ ವೀರ್ಯವಂತೌ ತಪಸ್ವಿನೌ । ಅಗಸ್ತ್ಯಶ್ಚ ವಸಿಷ್ಠಶ್ಚ ತತ್ರರ್ಷೀ ಸಂಬಭೂವತುಃ ॥ ಬಹುಧಾ ಪತಿತಂ ರೇತಃ ಕಲಶೇ ಚ ಜಲೇ ಸ್ಥಲೇ । ಸ್ಥಲೇ ವಸಿಷ್ಠಸ್ತು ಮುನಿಃ ಸಂಭೂತ ಋಷಿಸತ್ತಮಃ । ಕುಂಭೇ ತ್ವಗಸ್ತ್ಯಃ ಸಂಭೂತೋ ಜಲೇ ಮತ್ಸ್ಯೇ ಮಹಾದ್ಯುತಿಃ । ಉದಿಯಾಯ ತತೋಽಗಸ್ತ್ಯಃ ಶಮ್ಯಾಮಾತ್ರೋ ಮಹಾತಪಾಃ ॥ ಮಾನೇನ ಸಂಮಿತೋ ಯಸ್ಮಾತ್ತಸ್ಮಾನ್ಮಾನ್ಯ ಇಹೋಚ್ಯತೇ । ಯದ್ವಾ ಕುಂಭಾದೃಷಿರ್ಜಾತಃ ಕುಂಭೇನಾಪಿ ಹಿ ಮಾಯತೇ । ಕುಂಭ ಇತ್ಯಭಧಾನಂ ಚ ಪರಿಮಾಣಸ್ಯ ಲಕ್ಷ್ಯತೇ । ತತೋಽಪ್ಸು ಗೃಹ್ಯಮಾಣಾಸು ವಸಿಷ್ಠಃ ಪುಷ್ಕರೇ ಸ್ಥಿತಃ ॥ ಸರ್ವತಃ ಪುಷ್ಕರೇ ತಂ ಹಿ ವಿಶ್ವೇದೇವಾ ಅಧಾರಯನ್ ॥ ಬೃ ಹ-ಪತಿರಿಂದ ಋ ॥ ಇತಿ ॥

ಪ್ರತಿಪದಾರ್ಥ

ಉತ—ಮತ್ತು । **ವಸಿಷ್ಠ**—ವಸಿಷ್ಠನೇ, । **ಮೈತ್ರಾವರುಣಃ**—ನೀನು ಮಿತ್ರಾವರುಣರಿಗೆ ಪುತ್ರನಾಗಿ । **ಆಸಿ**—ಆಗಿದ್ದೀಯೆ । **ಬ್ರಹ್ಮನ್**—ಬ್ರಹ್ಮಜ್ಞಾನವುಳ್ಳ ಎಲೈ ವಸಿಷ್ಠನೇ, । **ಉರ್ವಶ್ಯಾಃ**—ಅಪ್ಸರಸ್ತ್ರೀಯಾದ ಊರ್ವಶಿಯ । **ಮನಸಃ**—ಮನಸ್ಸಂಕಲ್ಪದಿಂದ । **ದ್ರಪ್ಸಂ**—ಮಿತ್ರಾವರುಣರ ರೇತಸ್ಸು । **ಸ್ಕನ್ನಂ**—ಸ್ಖಲಿತವಾಯಿತು। **ಅಧಿ ಜಾತಃ**—ನೀನು ಆದರಿಂದ ಉತ್ಪನ್ನನಾದೆ. । **ತ್ವಾ**—ಹೀಗೆ ಉತ್ಪನ್ನನಾದ ನಿನ್ನನ್ನು । **ದೈವ್ಯೇನ**—ದೇವ ಸಂಬಂಧಿಯಾದ । **ಬ್ರಹ್ಮಣಾ**—ವೇದರಾಶಿಯಿಂದ ಕೂಡಿರುವುದನ್ನು ಕಂಡು । **ವಿಶ್ವೇ ದೇವಾಃ**—ಸಕಲ ದೇವತೆಗಳೂ । **ಪುಷ್ಕರೇ**—ಪುಷ್ಕರಪರ್ಣದ ಮೇಲೆ । **ಅದದಂತ**—ಸ್ಥಾಪಿಸಿದರು

ಭಾವಾರ್ಥ

ಎಲೈ ವಸಿಷ್ಠನೇ, ನೀನು ಮಿತ್ರಾವರುಣರ ಪುತ್ರನಾಗಿ ಆಗಿದ್ದೀಯೆ ಬ್ರಹ್ಮಜ್ಞಾನವುಳ್ಳ ಎಲೈ ವಸಿಷ್ಠನೇ, ಅಪ್ಸರಸ್ತ್ರೀಯಾದ ಊರ್ವಶಿಯ ಮನಸ್ಸಂಕಲ್ಪದಿಂದ ಮಿತ್ರಾವರುಣರ ರೇತಸ್ಸು ಸ್ಖಲಿತವಾಯಿತು ನೀನು ಆದರಿಂದ ಉತ್ಪನ್ನನಾದೆ. ಹೀಗೆ ಉತ್ಪನ್ನನಾದ ನಿನ್ನನ್ನು ದೇವಸಂಬಂಧಿಯಾದ ವೇದರಾಶಿಯಿಂದ ಕೂಡಿರುವುದನ್ನು ಕಂಡು ಸಕಲ ದೇವತೆಗಳೂ ಪುಷ್ಕರಪರ್ಣದ ಮೇಲೆ ಸ್ಥಾಪಿಸಿದರು

English Translation

Verily, Vasishtha, you are the son of Mitra and Varuna, born, Brahman, of the will of Urvashi, after the seminal effusion : all the gods have sustained you, (endowed) with celestial and Vaidic vigour in the lake.

ವಿಶೇಷವಿಷಯಗಳು

ದೇವನಮಾತೆಯಾದ ಅದಿತಿಯಿಂದ ಮಿತ್ರಾವರುಣರು ಉತ್ಪನ್ನರಾದರು ಎಂಬ ವಿಷಯವು ಅನೇಕ ಕಡೆಗಳಲ್ಲಿ ಉಕ್ತವಾಗಿದೆ. ಇದನ್ನು ನಾವು ಋ. ಸಂ. ಭಾಗ ಪುಟಗಳಲ್ಲಿ ವಿವರಿಸಿದ್ದೇನೆ. ಈ ಮಿತ್ರಾವರುಣರಿಂದ ವಸಿಷ್ಠ ಮತ್ತು ಅಗಸ್ತ್ಯಋಷಿಗಳ ಉತ್ಪತ್ತಿಯು ಹೇಗೆ ಆಯಿತು ಎಂಬ ವಿಷಯದಲ್ಲಿ ಯಾಸ್ಕರು ನಿರುಕ್ತದಲ್ಲಿ ದೇಳಿರುವುದನ್ನು ಬೃಪದ್ದೇವತಾಗ್ರಂಥದಲ್ಲಿ ಶೌನಕರು ಹೇಳಿರುವುದನ್ನೂ ಇಲ್ಲಿ ಕ್ರಮವಾಗಿ ಬರೆದಿದ್ದೇನೆ. ಈ ಋಷಿಗಳ ಜನ್ಮವೃತ್ತಾಂತವು ಉರ್ವಶೀ ಎಂಬ ಅಪ್ಸರಾಂಗನೆಯೊಡನೆ ಸಂಬಂಧಪಟ್ಟದ್ದಾಗಿರುವುದರಿಂದಲೂ ಈ ಋಕ್ಕಿನಲ್ಲಿ ಉರ್ವಶೀಶಬ್ದವು ಪಠಿತವಾಗಿರುವುದರಿಂದಲೂ ಮೊದಲು **ಉರ್ವಶೀ** ಶಬ್ದದ ನಿಷ್ಪತ್ತಿವಿಚಾರದಲ್ಲಿ ಯಾಸ್ಕರು ಹೇಳಿರುವ ನಿರ್ವಚನವನ್ನೂ ಉದಾಹರಿಸಲಾಗಿದೆ —

ಉರ್ವಶೀ। ಉರ್ವಶ್ಯಪ್ಸರಾ ಉರ್ವಭ್ಯಶ್ನುತ ಉರುಭ್ಯಾಮಶ್ನುತ ಉರುರ್ವಾ ವಶೋಽಸ್ಯಾಃ। ಅಪ್ಸರಾ ಅಪ್ಸಾರಿಣ್ಯಪಿ ವಾಪ್ಸ ಇತಿ ರೂಪನಾಮಾಪ್ಸಾತೀರಪ್ಸಾನೀಯಂ ಭವತ್ಯಾದರ್ಶನೀಯಂ ವ್ಯಾಪನೀಯಂ ವಾ ಸ್ಪಷ್ಟಂ ದರ್ಶನಾಯೇತಿ ಶಾಕಪೂಣಿಃ। ಯದಪ್ಸ ಇತ್ಯಭಕ್ಷಸ್ಯ। ಆಪ್ನೋ ನಾಮೇತಿ ವ್ಯಾಪಿನಃ। ತದ್ಯಾ ಭವತಿ ರೂಪವತೀ ತದನಯಾತ್ತವಿತಿ ವಾ ತದಸ್ಯೈ ದತ್ತವಿತಿ ವಾ। ತಸ್ಯಾ ದರ್ಶನಾನ್ಮಿತ್ರಾವರುಣಯೋ ರೇತಶ್ಚಸ್ಕಂದ ತದಭಿವಾದಿನ್ಯೇಷಗ್ರ್ಭವತಿ॥

(ನಿ. ೫-೧೩)

ಉರ್ವಶೀ ಎಂಬುವಳು ಓರ್ವ ಅಪ್ಸರಾಂಗನೆಯು ಉರ್ವಶೀ ಎಂಬ ಹೆಸರು ಈ ಸ್ತ್ರೀಗೆ ಬರಲು ಕಾರಣವೇನೆಂದರೆ—

(೧) ಉರ್ವಭ್ಯಶ್ನುತೇ। ಉರು ಮಹತ್ ಯಶೋಽಭಿವ್ಯಾಪ್ನೋತೀತಿ।

ಉರು ಎಂದರೆ ಬಹಳವಾದ ಯಶಸ್ಸನ್ನು ಅಥವಾ ಕೀರ್ತಿಯನ್ನು (ಪ್ರಸಿದ್ಧಿಯನ್ನು) ಅಭ್ಯಶ್ನುತೇ ಹೊಂದಿರುತ್ತಾಳೆ. ಈ ಸ್ತ್ರೀಯು ತನ್ನ ಮಹತ್ತಾದ ಯಶಸ್ಸಿನಿಂದ (ಯಶಸ್ಸೆಂದರೆ ಇಲ್ಲಿ ರೂಪಲಾವಣ್ಯಾದಿಗಳು) ಬಹಳವಾಗಿ ಪ್ರಸಿದ್ಧಳಾಗಿರುವಳು ಆದ್ದರಿಂದ ಇವಳಿಗೆ **ಉರ್ವಶೀ** ಎಂಬ ಹೆಸರು ಒದಲು ಕಾರಣವು

(೨) ಊರೂಭ್ಯಾಂ ನೈಥುನೇ ಧರ್ಮೇ ಪುರುಷಂ ಅಶ್ನುತೇ ವ್ಯಾಪ್ನೋತೀತಿ ಉರ್ವಾಶಿನೀ ಸತೀ ಉರ್ವಶೀತ್ಯುಚ್ಯತೇ। ಊರು ಎಂದರೆ ತೊಡೆಗಳು. ಈ ಸ್ತ್ರೀಯು ಆಕರ್ಷಕವಾದ ತನ್ನ ತೊಡೆಗಳನ್ನುಳಕ ಸಂಭೋಗಕ್ರಿಯೆಯಲ್ಲಿ ಪುರುಷನನ್ನು ಆಲಿಂಗನಾದಿಗಳಿಂದ ವ್ಯಾಪಿಸಿ ಸಂತೋಷಪಡಿಸುವಳು. ಆದ್ದರಿಂದ ಈ ಸ್ತ್ರೀಗೆ **ಉರ್ವಾಶಿನೀ** ಅಥವಾ **ಉರ್ವಶೀ** ಎಂಬ ಹೆಸರು ಬಂದಿದೆ.

(೩) ಅಥವಾ ಉರುಃ ಮಹಾನ್ ಅಸ್ಯಾಃ ವಶಃ ಕಾಮುಃ ಸೇಯಮುರುವಶಿನೀ ಸತೀ ಉರ್ವಶೀತ್ಯುಚ್ಯತೇ। ಉರುಃ ಎಂದರೆ ಬಹಳವಾದ, ದೊಡ್ಡದಾದ ಎಂದರ್ಥವು. **ವಶಃ** ಎಂದರೆ ಕಾಮಾಭಿಲಾಷೆಯು. ಈ ಸ್ತ್ರೀಗೆ ಅತಿಹೆಚ್ಚಾದ ಕಾಮಾಭಿಲಾಷೆ ಇರುವುದರಿಂದ ಇವಳಿಗೆ **ಉರುವಶಿನೀ ಅಥವಾ ಉರ್ವಶೀ** ಎಂಬ ಹೆಸರು ಬಂದಿದೆ ಎಂದು ಉರ್ವಶೀಶಬ್ದಕ್ಕೆ ಮೂರು ವಿಧವಾದ ನಿರ್ವಚನವನ್ನು ಹೇಳಿದ್ದಾರೆ.

ಈಗ ಅಪ್ಸರಾಃ ಎಂಬ ಶಬ್ದಾರ್ಥವನ್ನು ವಿವರಿಸುವುದಕ್ಕಾಗಿ ಇದರ ನಿರ್ವಚನವನ್ನು ಹೇಳುವರು. ಈ ಶಬ್ದವು ಈ ಋಕ್ಕಿನಲ್ಲಿ ಪಠಿತವಾಗಿಲ್ಲದಿದ್ದರೂ ಉರ್ವಶೀಶಬ್ದಕ್ಕೆ ಅರ್ಥವಿವರಣೆ ಮಾಡುವ ಸಂದರ್ಭದಲ್ಲಿ ಪ್ರಸಂಗವಶದಿಂದ ಹೇಳಬೇಕಾಗಿ ಬಂದಿದೆ. ಆದ್ದರಿಂದ ಈ ಶಬ್ದದ ನಿರ್ವಚನವನ್ನು ಈಲ್ಲಿ ಹೇಳಿದಾರೆ.

(೧) ಅಪ್ಸರಾಃ। ಸಾ ಹಿ ಅಪ್ಸಾರಿಣೀ ಭವತಿ। ಅಪಃ ಪತತಿ ನಿತ್ಯಮೇವ ಪತತಿ। ತಕ್ಕ್ರಭವ-

ಇಮಾಃ ಗಿರಃ—ನಮ್ಮ ಈ ಸ್ತುತಿಗಳು । **ಪೂರ್ಣಗಭಸ್ತಿಂ**—ಸಂಪೂರ್ಣವಾದ ಧನದಿಂದ ತುಂಬಿದ ಹಸ್ತವುಳ್ಳವನೂ । **ಸುಜಿಹ್ವಂ**—ಉತ್ತಮವಾದ ವಾಕ್ಕುಳ್ಳವನೂ, । **ಸುಪಾಣಿಂ**—ಉತ್ತಮವಾದ ಪಾಣಿಯುಳ್ಳವನೂ । **ಸವಿತಾರಂ**—ಸರ್ವಪ್ರೇರಕನೂ ಆದ ಸವಿತೃವನ್ನು । **ಈಳತೇ**—ಸ್ತುತಿಸುತ್ತವೆ. । **ಚಿತ್ರಂ**—ಆಕರ್ಷಕವಾದುದೂ, । **ಬೃಹತ್**—ಮಹತ್ತಾದುದೂ ಆದ । **ವಯಃ**—ಅನ್ನವನ್ನು । **ಅಸ್ಮೇ**—ನಮಗೆ । (ಈ ಸವಿತೃವು) **ದಧಾತು**—ಒದಗಿಸಿಕೊಡಲಿ । (ಎಲೈ ದೇವತೆಗಳೇ) **ಯೂಯಂ**—ನೀವು । **ನಃ**—ನಮ್ಮನ್ನು । **ಸದಾ**—ಯಾವಾಗಲೂ । **ಸ್ವಸ್ತಿಭಿಃ**—ಕಲ್ಯಾಣಗಳಿಂದ । **ಪಾತ**—ರಕ್ಷಿಸಿರಿ.

ಭಾವಾರ್ಥ

ನಮ್ಮ ಈ ಸ್ತುತಿಗಳು ಸಂಪೂರ್ಣವಾದ ಧನದಿಂದ ತುಂಬಿದ ಹಸ್ತವುಳ್ಳವನೂ, ಉತ್ತಮವಾದ ವಾಕ್ಕುಳ್ಳವನೂ, ಸರ್ವಪ್ರೇರಕನೂ ಆದ ಸವಿತೃವನ್ನು ಸ್ತುತಿಸುತ್ತವೆ ಆಕರ್ಷಕವಾದುದೂ, ಮಹತ್ತಾದುದೂ ಆದ ಅನ್ನವನ್ನು ನಮಗೆ ಈ ಸವಿತೃವು ಒದಗಿಸಿಕೊಡಲಿ. ಎಲೈ ದೇವತೆಗಳೇ, ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ.

English Translation

These praises glorify the eloquent-tongued, dextrous handed, whose hands are full (of wealth) may he bestow upon us manifold and abundant food and do you, (gods), ever cherish us with blessings

---

ನಲವತ್ತಾರನೆಯ ಸೂಕ್ತವು

ಪೀಠಿಕೆ

ಈ ಸೂಕ್ತವು ರುದ್ರದೇವತಾಕವಾದುದು. ಋಗ್ವೇದದಲ್ಲಿ ರುದ್ರನ ಸ್ಥಾನವು ಅಷ್ಟೇನೂ ಪ್ರಾಮುಖ್ಯತೆಯದಲ್ಲ ಯಜುರ್ವೇದದಲ್ಲಿ ಮಾತ್ರ ರುದ್ರನಿಗೆ ಪ್ರಾಮುಖ್ಯವಾದ ಸ್ಥಾನವಿದೆ ಋಗ್ವೇದದಲ್ಲಿ ಹೆಚ್ಚು ಸೂಕ್ತಗಳು, ಒಂದು ಸೂಕ್ತದ ಭಾಗ, ಒಂದು ಸೂಕ್ತದಲ್ಲಿ ಸೋಮದೇವತೆಯೊಡನೆ, ಇಷ್ಟೇ ಈ ದೇವತೆಯನ್ನು ಸ್ತುತಿಸುವರು. ರುದ್ರನ ಹೆಸರು ಎಸ್ಪತ್ತೈದು ಸಲ ಮಾತ್ರ ಪರಿತವಾಗಿದೆ

ಅವನ ಅಂಗಾಂಗಗಳ ವರ್ಣನೆಯು ಈರೀತಿ ಇದೆ ಅವನಿಗೆ ಒಂದು ಕೈ (೨-೩೩-೭) ಬಾಹುಗಳು (೨-೩೩-೩, ವಾ ಸಂ ೧೬-೧) ಮತ್ತು ದೃಢವಾದ ಅಂಗಗಳು (೨-೩೩ ೧೧) ಇವೆ ಅವನ ತುಟಿಗಳು ಸುಂದರವಾಗಿವೆ ಅವನ ಶರೀರವು ಕಂದುಬಣ್ಣದ್ದು (೨-೩೩-೫) ಅವನ ರೂಪವು ಕಣ್ಣುಕೋರೈಸುವಷ್ಟು ಪ್ರಕಾಶವುಳ್ಳದ್ದು (೧-೧೧೪-೫) ಮತ್ತು ಅವನು ಅನೇಕ ರೂಪವುಳ್ಳವನು (೨-೩೩ ೯) ಜ್ವಲಿಸುವ ಸೂರ್ಯನಂತೆಯೂ ಸುವರ್ಣದಂತೆಯೂ ಪ್ರಕಾಶಿಸುತ್ತಾನೆ (೧-೪೩-೫) ಸುವರ್ಣಾಭರಣಗಳನ್ನೂ (೨-೩೩ ೯) ಮತ್ತು ನಾನಾವರ್ಣದ ಕಾಂತಿಯ ಕಂಠಹಾರವನ್ನೂ ಧರಿಸಿದಾನೆ (೨-೩೩-೧೦) ರಥದ ಆಸನದಲ್ಲಿ ಕುಳಿತಿದಾನೆ (೨-೩೩ ೪) ವಾಜಸನೇಯ ಮೊದಲಾದ ಇತರ ಸಂಹಿತೆಗಳಲ್ಲಿ ಇನ್ನೂ ಅನೇಕ ಲಕ್ಷಣಗಳು ಉಕ್ತವಾಗಿವೆ ಅವನು ಸಹಸ್ರಾಕ್ಷ (ಅ ವೇ ೧೧-೨-೫ ಮತ್ತು ೭; ವಾ. ಸಂ ೧೬-೭) ಅವನಿಗೆ ಉದರ, ಬಾಯಿ, ನಾಲಿಗೆ ಮತ್ತು ಹಲ್ಲುಗಳು ಇವೆ (ಅ ೦ ೧೧-೨-೬) ಅವನ ಹೊಟ್ಟೆಯು ಕಪ್ಪು ಮತ್ತು ಅವನ ಬೆನ್ನು ಕೆಂಪು (ಅ ವೇ ೧೫-೧-೭, ೮). ಅವನ ಕಂಠವು ನೀಲಿ (ವಾ ಸಂ. ೧೬-೭) ಮತ್ತು ಕೇಶವೂ ನೀಲಿ (ಅ ವೇ ೨-೭೭-೬) ಅವನದು ತಾಮ್ರವರ್ಣ, ಕೆಂಪುಬಣ್ಣ (ವಾ. ಸಂ. ೧೬-೭) ಚರ್ಮವನ್ನು ಧರಿಸಿದಾನೆ (ವಾ ಸಂ ೩೦೧, ೧೬-೫೧) ಮತ್ತು ಪರ್ವತದಲ್ಲಿ ವಾಸಿಸುತ್ತಾನೆ. (ವಾ ಸಂ ೧೬-೨, ೩, ೪)

ಅವನ ಬಳಿ ಆಕ್ರಮಣಸಾಧನವಾದ ಅನೇಕ ಆಯುಧಗಳಿವೆ ವಜ್ರಾಯುಧವನ್ನು ಹಿಡಿದಿದಾನೆ (೨-೩೩-೩) ಅವನ ಬಾಣವು ಆಕಾಶದಿಂದ ವಿಸೃಷ್ಟವಾಗಿ ಭೂಮಿಯನ್ನು ಹಾದು ಹೋಗುತ್ತದೆ (೭ ೪೬-೩) ಅವನು ಸಾಧಾರಣವಾಗಿ ಧನುರ್ಬಾಣಗಳನ್ನು ಧರಿಸಿರುತ್ತಾನೆ (೨-೩೩-೧೦, ೧೧, ೫-೪೭ ೧೧, ೧೦-೧೭೫-೬) ಆ ಬಾಣಗಳು ಒಳ್ಳೆವಾದವು ಮತ್ತು ವೇಗವುಳ್ಳವು (೭-೪೬-೧) ಅವನು ಕೃಶನು ಮತ್ತು ಇತರ ಧನುರ್ಧಾರಿಗಳೊಡನೆ ಸ್ತುತನಾಗಿದಾನೆ (೧೦-೬೪-೮) ಅಥರ್ವವೇದದಲ್ಲಿಯೂ ಅವನಿಗೆ ಧನುರ್ಧಾರಿಯೆಂತಲೇ ಸಂಜ್ಞೆ (ಅ ವೇ ೧-೨೮ ೧; ೬-೯೩-೧; ೧೫-೫-೧ ರಿಂದ ೭) ಅಥರ್ವವೇದ ಮತ್ತು ಇತರ ವೇದಭಾಗಗಳಲ್ಲಿ ಅವನ ಧನುಸ್ಸು ಬಾಣ, ಆಯುಧ, ವಜ್ರಾಯುಧ, ಗದೆ ಇವುಗಳು ಪದೇಪದೇ ಪ್ರಸಕ್ತವಾಗಿವೆ. (ಅ. ವೇ ೧-೨೮-೫, ಶ ಬ್ರಾ ೯-೧-೧-೬ ಇತ್ಯಾದಿ).

ರುದ್ರನ ವಿಷಯದಲ್ಲಿ ಪದೇಪದೇ ಪ್ರಸಕ್ತವಾಗುವ ಅಂಶವೆಂದರೆ, ಅವನಿಗೂ ಮರುತ್ತುಗಳಿಗೂ ಇರುವ ಸಂಬಂಧ. ರುದ್ರನು ಮರುತ್ತುಗಳಿಗೆ ತಂದೆಯು (೧೧೪೪ ೬, ೯, ೨ ೫೩-೧) ಅಥವಾ ಮರುತ್ತುಗಳು ರುದ್ರನ ಪುತ್ರರೆಂದು ಹೇಳಲ್ಪಟ್ಟಿದಾರೆ ಮತ್ತು ಅವರಿಗೆ ರುದ್ರರು, ರುದ್ರಿಯರು ಎಂದೂ ಹೆಸರು ಕೃಶ್ನಿಯಿಂದ ಗೋವಿನ ಕ್ರಿಯಾಶಕ್ತಿಯ ಮಾನವಾದ ಕೆಚ್ಚಲಿನಿಂದ ರುದ್ರನು ಮರುತ್ತುಗಳನ್ನು ಸೃಜಿಸಿದನು (೨-೫೪ ೨) ಆದರೆ ಇಂದ್ರ ಮಿತ್ರ ಮರುತ್ತುಗಳು ಸ್ನೇಹಭಾವನದಿಂದ ಯುದ್ಧಾದಿಗಳಲ್ಲಿ ಭಾಗಿಯಾಗುವಂತೆ ರುದ್ರ ಮತ್ತು ಮರುತ್ತುಗಳು ಎಲ್ಲೆಯೂ ಕಾಣಲ್ಲಿಲ್ಲ ಏಕೆಂದರೆ, ರುದ್ರನು ರಾಕ್ಷಸರೊಂದಿಗೆ ಯುದ್ಧದಲ್ಲಿ ಎಲ್ಲಾವಾಗಲೂ ತೊಡಗಿಲ್ಲ ಪುರಾಣಾದಿಗಳಲ್ಲಿ ಅನೇಕವೇಳೆ ರುದ್ರಗೆ ತ್ರ್ಯಂಬಕ ವಾದ ತ್ರ್ಯಂಬಕನೆಂಬ ಹೆಸರು ವೇದಗಳಲ್ಲಿಯೂ ಕಂಡುಬರುತ್ತದೆ (ವಾ. ಸಂ ೩೫೮, ಶ ಬ್ರಾ. ೨-೬-೨-೯) ಋಗ್ವೇದದಲ್ಲಿಯೂ ಒಂದುಕಡೆಮಾತ್ರ (೭ ೫೯ ೧೨) ಅವನಿಗೆ ಈ ಹೆಸರಿದೆ ಈ ಪದಕ್ಕೆ ಮೂರುಮಂದಿ ಜನಕರನ್ನು ಹೊಂದಿರುವ ಎಂದರ್ಥ ಇಲ್ಲಿ ಮೂರುಜನ ಮಾತೃಗಳೆಂದರೆ ಮೂರು ಲೋಕಗಳು ಅಥವಾ ವಿಶ್ವದ ಮೂರು ಭಾಗಗಳೆಂದಬಹುದು ಪುರಾಣಾದಿಗಳಲ್ಲಿ ಅಂಬಿಕಾ ಎಂಬುವಳು ರುದ್ರನ ಪತ್ನಿಯು ಆದರೆ ವೇದಗಳಲ್ಲಿ ಅವಳು ಅವನ ಸೋದರಿ (ವಾ ಸಂ ೩೫) ರುದ್ರನ ಪತ್ನಿಯ ನಾಮಗಳಾದ ಉಮಾ ಮತ್ತು ಪಾರ್ವತೀ ಎಂಬ ಹೆಸರುಗಳ ಪ್ರಯೋಗವು ತೈತ್ತಿರೀಯ ಆರಣ್ಯಕ ಮತ್ತು ಕೇನೋಪನಿಷತ್ತುಗಳಲ್ಲಿದೆ.

ಅಗ್ನಿಗೆ ಸಮಾನರೆಂದು ಹೇಳಿರುವ ಅನೇಕ ದೇವತೆಗಳಲ್ಲಿ ರುದ್ರನೂ ಒಬ್ಬನು (೨-೧-೬) ಇತರ ಕಡೆಗಳಲ್ಲಿಯೂ ಅವನೂ ಅಗ್ನಿಯೂ ಒಂದು (೫ ವೇ ಲ-೪೭-೧, ತೈ ಸಂ. ೫ ೪-೩ ೧, ೫-೫ ೭-೪; ೨. ಬ್ರಾ ೬-೧-೩-೧೦, ೯ ೧-೧-೧) ರುದ್ರ ಎಂಬುದು ಅನೇಕವೇಳೆ ವಿಶೇಷಣವಾಗಿ ಪ್ರಯುಕ್ತವಾಗಿದೆ ಅನೇಕ ಸಲ ಈ ಶಬ್ದವು ಅಗ್ನಿಗೂ, ಅಶ್ವಿನೀದೇವತೆಗಳಿಗೂ ವಿಶೇಷಣಪದವಾಗಿ ಪ್ರಯುಕ್ತವಾಗಿದ ರುದ್ರನಿಗೆ ಶರ್ವ ಮತ್ತು ಭವ ಎಂಬ ಎರಡು ಹೆಸರುಗಳು (ವಾ. ಸಂ. ೧೬-೧೮) ಈ ಎರಡು ಹೆಸರುಗಳೂ ಅವನ ನಾಶಕಾರಕವಾದ ಬಾಣಗಳಿಗೆ ಆದರ್ವ ವೇದದಲ್ಲಿಯೂ ಪ್ರಸಕ್ತವಾಗಿವೆ (ಅ. ವೇ. ೨-೨೭ ೬, ೬-೯೩-೧, ೧೦-೧-೨೩, ೧೧-೨-೧, ೧೨) ಅಂತು ಇಲ್ಲಿ ಶರ್ವ, ಭವ, ರುದ್ರ ಎಂಬುವರು ಬೇರೆಬೇರೆ ದೇವತೆಗಳೆಂಬ ಭಾವನೆ ಇರುವಂತಿದ ಶರ್ವ ಮತ್ತು ಭವರು ರುದ್ರ ಪುತ್ರರು. ಮತ್ತು ಬೇಟೆಯಲ್ಲಿ ಬಹಳ ಆಸಕ್ತರು (ಸಾಂ ಶ್ರೌ. ಸೂ ೪ ೨೦-೧) ಅಗ್ನಿ, ಅಶನಿ, ಪಶುಪತಿ, ಭವ, ಶರ್ವ, ಈಶಾನ, ಮಹಾದೇವ, ಉಗ್ರದೇವ ಇವರೆಲ್ಲರೂ ಒಂದೇ ದೇವತೆಯ ನಾನಾರೂಪಗಳು (ವಾ. ಸಂ ೩೯ ೮)- ರುದ್ರ, ಶರ್ವ, ಪಶುಪತಿ, ಉಗ್ರ, ಅಶನಿ, ಭವ ಈಶಾನ, ಮತ್ತು ಮಹಾದೇವ ಇವುಗಳು ಅಗ್ನಿಯ ಎಂಟು ರೂಪಗಳು. (ಶ. ಬ್ರಾ. ೬-೧-೩-೭, ಸಾಂಖ್ಯಾ ಬ್ರಾ. ೬-೧); ಶರ್ವ, ಭವ, ಪಶುಪತಿ ಮತ್ತು ರುದ್ರ ಇವುಗಳಲ್ಲಾ ಅಗ್ನಿಯ ನಾಮಗಳು (ಶ. ಬ್ರಾ. ೧-೭-೩ ೮) ಈ ಮೇಲಿನ ನಾಮಗಳಲ್ಲಿ ಒಂದಾದ ಅಶನಿ ಎಂಬುದು ವಿದ್ಯುತ್ ಅಥವಾ ಅಗ್ನಿಕುಮಾರನ ಹೆಸರು (ಶ ಬ್ರಾ ೬ ೧-೩-೧೦) ಆದರೆ ಸಾಂಖ್ಯಾಯನ ಬ್ರಾಹ್ಮಣದಲ್ಲಿ ಅದು ಇಂದ್ರನ ನಾಮವೆಂದು ಉಕ್ತವಾಗಿದೆ. ಮನೆಯಿಂದ ಓಡಿಸಲ್ಪಟ್ಟ ಗೋವುಗಳು ರುದ್ರನ ಆಘಾತಕ್ಕೆ ಒಳಪಡುವುದು ಹೆಚ್ಚು, ಆದ್ದರಿಂದಲೇ ಅವುಗಳು ಅವನ ರಕ್ಷಣೆಗೆ ಒಳಪಟ್ಟವೆ ಈ ಕಾರಣದಿಂದ ರುದ್ರನಿಗೆ ಪಶುಪತಿ ಎಂಬ ಹೆಸರು ಒಂದಿದೆ,

ರುದ್ರನು ಘೋರರೂಪಿ (೨ ೩೩-೬,೧೧; ೧೦-೧೩೬ ೫) ಮತ್ತು ಕ್ರೂರವ್ಯಗದಂತೆ ನಾಶಕಾರಕನು (೨-೩೩-೧೧). ಅವನು ಆಕಾಶದ ಕೆಂಪುಛಾಯೆಯ ವರಾಹ (೧-೧೧೪-೫), ವೃಷಭ (೨-೩೩ ೬, ೮, ೧೫) ಉದಾತ್ತಸ್ವಭಾವವುಳ್ಳವನು (೬-೧೦-೪) ಬಲಾಢ್ಯನು (೧-೪೩-೧, ೧-೧೧೪-೧) ಬಲಾಢ್ಯರಲ್ಲಿಲ್ಲಾ ಬಲಿಷ್ಠನು. (೨-೩೩-೩) ಅಪ್ರತಿಹತನು (೭-೪೬-೧) ಪರಾಕ್ರಮದಲ್ಲಿ ಇವನನ್ನು ಮೀರಿಸಿದವರಿಲ್ಲ (೨-೩೩-೧೦) ವೇಗಶಾಲಿಯು (೧೦-೯೨-೫), ಚುರುಕುಬುದ್ಧಿಯುಳ್ಳವನು (೧-೧೧೪-೪) ತರುಣನು (೫-೬೦-೫) ಮತ್ತು ಇವನು ವೃದ್ಧನಾಗುವುದಿಲ್ಲ (೬-೪೯-೧೦)

ಅಸುರನಾಮಧೇಯನು (೫ ೪೩-೧೧) ಸ್ವರ್ಗಲೋಕದ ಮಹಾ ಅಸುರನು (೨ ೧೩) ಅತ್ಯವಿಖ್ಯಾತನು (೧ ೧೫೯-೫ ; ೧೦ ೯೩-೯) ವೀರರನ್ನು ಆಳುತ್ತಾನೆ (೧ ೧೩೪ ೧, ೨) ಇವನು ಈ ಪ್ರಪಂಚಕ್ಕೆ ಅಧಿಪತಿಯು (೨ ೫೩ ೯) ಮತ್ತು ಜನಕನು (೬-೪೯ ೧೦), ಅವನು ಗಿಯನುಗಳನ್ನು ವಿಧಿಸುವವನು (೬-೪೬ ೧) ಮತ್ತು ತನ್ನ ವಿಧಿಗಳಿಂದ ಮತ್ತು ಜಗದಾಧಿಪತ್ಯದಿಂದ ದೇವಮಾನವರ ಎಲ್ಲಾ ಕಾರ್ಯಗಳನ್ನು ತಿರ್ಮಾನಿಸುತ್ತಾನೆ (೫-೪೬-೨), ಅವನ ಆಜ್ಞೆಯಿಂದಲೇ ನದಿಗಳು ಹರಿದು ಭೂಮಿಯೆಲ್ಲವನ್ನೂ ಆರ್ದ್ರವನ್ನಾಗಿ ಮಾಡುತ್ತವೆ (೧೦-೯೨ ೫); ಅವನು ಬುದ್ಧಿಶಾಲಿಯು (೧-೪೬ ೧) ಜ್ಞಾನಿ (೧ ೧೧೪-೪) ಮತ್ತು ಉದಾರಿಯು (೨-೩೬ ೬, ೬ ೪೯ ೧೦), ಆದ್ದರಿಂದಲೇ ಅನೇಕ ಸಲ ಅವನನ್ನು ಮಿತ್ರ (ಉದಾರಿ) ಎಂಬ ಹೆಸರಿನಿಂದ ಕರೆಯಲಾಗಿದೆ (೧ ೧೫೪ ೩) ಮತ್ತು ಇತರ ವೇದಗಳಲ್ಲಿ ಮಿತ್ರಶಬ್ದಪ್ರಯೋಗವು ರುದ್ರನಿಗೆ ಏಕಾತ್ರ ಅನ್ವಯಿಸುವುದು. ಅವನು ಪಲಭವಾಗಿ ಸ್ತುತ್ಯನು (೨ ೩೩-೬) ಮತ್ತು ಮಂಗಳಕರನು (೨ವ ೧೦ ೪೭).

ಕಡಿಮೆಯಾಗಿರುವುದು ಇವನ ವಿರೋಸಸ್ವಭಾವಕ್ಕೆ ಕಾರಣವಾಗಿದೆ ಅವನನ್ನು ಸ್ತುತಿಸುವ ಸೂಕ್ತಗಳಲ್ಲೆಲ್ಲಾ ಅವನ ಬಾಣದ ಭಯ, ಅವನ ಕೋಪದ ಅನಿಷ್ಟಪರಿಣಾಮಗಳು ಎಂತಹ ಗುಣಗಳೇ ಉಕ್ತವಾಗಿವೆ ಸ್ತೋತ್ರ ಮಾಡುವಾಗ, ಮಾತಾ ಪಿತೃಗಳು, ಮಕ್ಕಳು, ಅನುಯಾಯಿಗಳು, ದನಕರುಗಳು, ಆಸ್ತಿಗಳು ಮುಂತಾದುವುಗಳನ್ನು ಕೋಪದಿಂದ ಕೊಲ್ಲಬಾರದೆಂದೂ, ಹಿಂಸಿಬಾರದೆಂದೂ ಪ್ರಾರ್ಥಿತನಾಗಿದ್ದಾನೆ (೧ ೧೧೪ ೫,೮) ಮತ್ತು ಸ್ತೋತೃಗಳು ತಮ್ಮ ಆಸ್ತಿಗಳನ್ನು ಳಿಸಿಕೊಡಬೇಕು (೨ ೩೩ ೧) ಬಾಣಗಳನ್ನು ಬೀರಿ ಕಡಿಗೆ ತಿರುಗಿಸಿ ಇತರರನ್ನು ಆದರಿಂದ ದ್ವಂಸ ಮಾಡಬೇಕು (೨ ೩೩ ೧೦,೧೪) ಕೋಪಿಂದಾಗಿ ತನ್ನ ಆಯುಧವನ್ನು ವಿಮುಖವನ್ನಾಗಿ ಕಾರ್ಯಗತಗೊಳಿಸಿ, ತನ್ನ ಸ್ತುತಿಕರ್ತರನ್ನು ತೊಂದರೆಪಡಿಸಬಾರದು (೬-೭೮-೭, ೬ ೪೬-೭,೫,೪) ಗೋವ್ರಗಳನ್ನೂ, ಮನುಷ್ಯರನ್ನೂ, ಮನುಷ್ಯರನ್ನೂ ವಧಿಸುವ ಇವನ ಆಯುಧವನ್ನು ತವಿಂದ ದೂರ ಇಡಬೇಕೆಂದು ಪ್ರಾರ್ಥಿಸಿದಾರೆ (೨ ೩೩-೧) ಗಣತಿಗಳನ್ನು ಹಕ್ತಪಡಿಸಬಾರದೆಂದೂ (೨ ೩೩-೪,೫,೬,೧೫) ಆಹಾರದ ವಿಷಯದಲ್ಲಿ ಕೈಪೆ ಇಡಬೇಕೆಂದೂ ಸ್ತೋತೃಗಳು ಮೊರೆಯಿಟ್ಟಿದ್ದಾರೆ (೧೦ ೧೬೯-೧) ಮನುಷ್ಯರನ್ನು ವಧಿಸುವವನೆಂಬ (ನೃಹನ್) ಎಂಬ ವಿಶೇಷಣದಿಂದ (೪-೩-೬) ಒಂದಿರಿ ಸ್ತುತಿಕರ್ತರ ಶತ್ರುಗಳಾದ ಮನುಷ್ಯರಂದು ಭಾವನೆ ಮನುಷ್ಯರನ್ನು ವಧಿಸಲೇ ಆಯ್ದಿಸಿಕೊಳ್ಳುತ್ತಾನೆ (೪ ೩೪-೪-೫೫) ಇವನ ಕೋಪದ ವಿಷಯವು ಇತರ ವೇದಗಳಲ್ಲಿ ಇನ್ನೂ ವಿಪದವಾಗಿ ಹೇಳಲ್ಪಟ್ಟಿದೆ ಪದೇಪದೇ ಈ ವಿಷಯದಲ್ಲಿ ಸ್ತುತಿಕರ್ತರು ಅವಸಿಗೆ ಮೊರೆಯಿಟ್ಟಿದಾರೆ (ವಾ. ಸಂ ೩೬ ; ಅ ವೇ ೧-೨೮-೩ ಇತ್ಯಾದಿ) ಸ್ವರ್ಗೀಯಾಗ್ನಿಯನ್ನು (ವಿದ್ಯುತ್) ತಮ್ಮ ಮೇಲೆ ಪ್ರಯೋಗಿಸಬಾರದೆಂದೂ, ಸಿಡಿಲು ಬೇರೆ ಸ್ಥಳದಲ್ಲಿ ಬೀಳುವಂತೆ ಮಾಡಬೇಕೆಂದೂ ಬೇಡಿದಾರೆ (ಅ ವೇ. ೧೧-೭-೨೬, ೧೦-೧-೨೩), ಜ್ವರ, ಕೆಮ್ಮು ವಿಷ ಇವುಗಳ ಮೂಲಕವೂ ಇವನು ಮನುಷ್ಯರನ್ನು ಹಿಂಸಿಸುತ್ತಾನೆ (ಅ ವೇ ೧೧-೭-೨೭, ೨೬) ಬೇಟೆಯಾಡಿ ಕೊಂದ ಮೃಗಗಳನ್ನು ಆಗಾಯದೆ ನುಂಗುವ ಆಗಲವಾದ ಬಾಯುಳ್ಳ, ಸದಾ ಬೊಗಳುವ ನಾಯಿಗಳೂ ಅವನ ಹತ್ತಿರ ಇವೆ (ಅ ವೇ. ೧೦-೧-೩೦, ವಾ ಸಂ. ೧೬-೨೮) ಹೆದೆಯೇರಿಸಿದ ಅವನ ಬಿಲ್ಲು ಬಾಣಗಳನ್ನು ಕಂಡರೆ ತಮ್ಮನ್ನು ಎಲ್ಲಿ ನಾಶಮಾಡುವನೋ ಎಂದು ದೇವತೆಗಳಿಗೂ ಬಹಳ ಭಯ (ಶ. ಬ್ರಾ ೯-೧-೧-೧,೬) ಮಹಾದೇವನೆಂಬ ಹೆಸರಿನಿಂದ ಇವನು ಗೋವ್ರಗಳನ್ನು ವಧಿಸುತ್ತಾನೆ. (ತಾಂಡ್ಯ ಮಹಾ. ಬ್ರಾ. ೬-೯-೬) ಸಮಸ್ತ ಭಯಂಕರ ವಸ್ತುಗಳಿಂದ ಸೃಷ್ಟನಾದವನು. (ಐ ಬ್ರಾ ೩-೩೩-೧) ಇವನ ಭಯಂಕರ ಗುಣಗಳಿಂದಲೇ ಇವನು ಇತರ ದೇವತೆಗಳಿಂದ ಪ್ರತ್ಯೇಕವಾಗಿರುತ್ತಾನೆಂದು ಬ್ರಾಹ್ಮಣ ಮತ್ತು ಸೂತ್ರಗ್ರಂಥಗಳಲ್ಲಿ ಹೇಳಿದೆ. ದೇವತೆಗಳೆಲ್ಲಾ ಸ್ವರ್ಗವನ್ನು ಸೇರಿದಾಗ ರುದ್ರನು ಹಿಂದುಳಿದನು (ಶ. ಬ್ರಾ. ೧-೭-೩-೧). ವೈದಿಕ ಕರ್ಮಗಳಲ್ಲಿ ಪ್ರಾಯಶಃ ಇತರ ದೇವತೆಗಳಿಗೆ ಆಹುತಿಗಳನ್ನು ಅರ್ಪಿಸಿದಮೇಲೆ ಉಳಿದ ಶೇಷವು ರುದ್ರ

ನಿಗೆ ಅರ್ಪಿತವಾಗುತ್ತದೆ. (ಆಪ್ತ ಧರ್ಮ. ಸೂ. ೨-೪-೨೩). ಇತರ ದೇವತೆಗಳ ವಾಸಸ್ಥಾನವು ಪೂರ್ವದಿಕ್ಕಿನಲ್ಲಿದೆ ಆದರೆ ರುದ್ರನು ಉತ್ತರದಿಕ್ಕಿನಲ್ಲಿ ವಾಸಿಸುತ್ತಾನೆ (ತೈ ಸಂ ೬-೧-೧-೧) ಇವನು ರೌದ್ರಸ್ವಭಾವನಾದುದರಿಂದಲೇ ಇತರ ದೇವತೆಗಳೊಡನೆ ವಿಶೇಷವಾಗಿ ಸೇರುವುದಿಲ್ಲ, ಮತ್ತು ದ್ವಂದ್ವದೇವತೆಯಾಗಿ ಸೋಮನೊಡನೆ ಒಂದು ಸೂಕ್ತದಲ್ಲಿ ಮಾತ್ರ ಸ್ತುತನಾಗಿದಾನೆ. (೬-೭೪)

ಇವುಗಳಲ್ಲದೆ ಪುರಾಣಾದಿಗ್ರಂಥಗಳಲ್ಲಿ ಉಕ್ತವಾಗಿರುವ ರುದ್ರನ ಭೀಕರವಾದ ಮತ್ತು ಕೆಡಕನ್ನುಂಟುಮಾಡುವ ಅನೇಕ ಗುಣಗಳಿಗೆ ವಾಜಸನೇಯ ಸಂಹಿತೆ ಮೊದಲಾದ ವೈದಿಕಗ್ರಂಥಗಳಲ್ಲಿ ಸಮರ್ಥನೆ ಇದೆ ಆದರೆ ರುದ್ರನು ಪಿಶಾಚಾದಿಗಳಂತೆ ಸಂಪೂರ್ಣವಾಗಿ ಅನಿಷ್ಟಕಾರಕನಲ್ಲ ಇತರ ದೇವತೆಗಳಿಂದ ಆಗಬಹುದಾದ ತೊಂದರೆಯನ್ನು ಪರಿಹರಿಸಬೇಕೆಂದು ಪ್ರಾರ್ಥಿತನಾಗಿದಾನೆ (೧-೧೧೪-೧, ೨, ೨-೩೩-೬) ಮತ್ತು ಮನುಷ್ಯರಿಗೂ ಪ್ರಾಣಿಗಳಿಗೂ ಕ್ಷೇಮವನ್ನುಂಟುಮಾಡುತ್ತಾನೆ (೧-೪೩-೬) ರೋಗಗಳನ್ನು ಗುಣಪಡಿಸುವ ಶಕ್ತಿಯು ಇವನಿಗುಂಟೆಂದು ಪದೇಪದೇ ಉಕ್ತವಾಗಿದೆ ಇವನು ಮನುಷ್ಯರಿಗೆ ಔಷಧಗಳನ್ನು ಅನುಗ್ರಹಿಸುತ್ತಾನೆ (೭-೪೬ ೩) ಅವನ ಕೈಯಲ್ಲಿ ಉತ್ತಮವಾದ ಔಷಧಗಳಿವೆ. (೧-೧೧೪ ೫) ಎಲ್ಲಾ ಔಷಧಿಗಳೂ ಇವನಿಗಧೀನವಾಗಿವೆ (೫ ೪೩ ೧೧) ಮತ್ತು ಇವನ ಹತ್ತಿರ ಸಹಸ್ರಾರು ಔಷಧಗಳಿವೆ (೭-೪೬-೩) ಅವನ ಹಸ್ತವೇ ರೋಗಗಳನ್ನು ಗುಣಪಡಿಸುವ ಶಕ್ತಿಯುಳ್ಳದ್ದು (೨ ೩೩-೭). ತನ್ನ ಚಿಕಿತ್ಸೆಯಿಂದ ವೀರರನ್ನು ಜೀವಿಸುತ್ತಾನೆ ಅವನು ವೈದ್ಯರಲ್ಲೆಲ್ಲಾ ಉತ್ತಮ ವೈದ್ಯನು (೨-೩೩-೪) ಮತ್ತು ಅವನ ಔಷಧಗಳ ಸಹಾಯದಿಂದ ಆರಾಧಕನು ನೂರುವರ್ಷ ಜೀವಿಸಲು ಆಶಿಸುತ್ತಾನೆ. (೨-೩೩ ೨) ಪೂಜೆಮಾಡುವವರ ಸಂತಾನಕ್ಕೆ ಶುಭಕರ್ತನಾಗುವಂತೆಯೂ (೭-೪೬-೨) ಗ್ರಾಮವಾಸಿಗಳೆಲ್ಲರೂ ರೋಗರುಜಿನಗಳಿಲ್ಲದೆ ಆರೋಗ್ಯವಾಗಿರುವಂತೆಯೂ, ಪಶುಪ್ರಾಣಿಗಳಿಗೂ ಮನುಷ್ಯರಿಗೂ ಅನುಕೂಲನಾಗಿರುವಂತೆಯೂ (೧-೧೧೪-೧) ಪ್ರಾರ್ಥಿತನಾಗಿದಾನೆ. ಈ ಸಂದರ್ಭದಲ್ಲಿ ಅವನಿಗೆ ಜಲಾಷ, ಜಲಾಷಭೇಷಜ ಎಂಬ ಎರಡು ವಿಶೇಷಣಗಳಿವೆ (೧-೪೩ ೪, ಅ. ವೇ ೨ ೨೭ ೬ ಇಲ್ಲಿ ಔಷಧಿಗಳೆಂದರೆ ವೃಷ್ಟಿಜಲವಿರಬಹುದು ರುದ್ರನ ವಿದ್ಯುತ್ತು ಮತ್ತು ಅವನ ಚಿಕಿತ್ಸಾಶಕ್ತಿಗಳೂ ಒಟ್ಟಾಗಿ ಹೇಳಲ್ಪಟ್ಟವೆ (೭-೪೬-೩) ವೈದ್ಯಸ್ವಭಾವದ ಈ ರುದ್ರನು ಇತರ ರುದ್ರರೊಡನೆ ಪ್ರಸನ್ನನಾಗಬೇಕೆಂದು ಪ್ರಾರ್ಥಿತನಾಗಿದಾನೆ (೭-೪೫-೬) ರುದ್ರನ ಜತೆಯಲ್ಲಿ ಅವನ ಪುತ್ರರಾದ ಮರುತ್ತುಗಳಿಗೂ ಚಿಕಿತ್ಸಾಶಕ್ತಿಗಳು ಉಕ್ತವಾಗಿವೆ (೨-೩೩ ೧೩) ರುದ್ರನ ಈ ಶಕ್ತಿಯ ವರ್ಣನೆಯು ಇತರ ವೇದಗಳಲ್ಲಿಯೂ ಉಕ್ತವಾಗಿದೆ (ವಾ ಸಂ ೩-೫೯, ಅ ವೇ ೨-೨೭-೬) ಆದರೆ ಅವನ ವಿನಾಶಕಾರಕಶಕ್ತಿಯನ್ನು ಹೇಳಿರುವಷ್ಟು ಸಲ್ಲ ಈ ಚಿಕಿತ್ಸಾಶಕ್ತಿಯು ಹೇಳಲ್ಪಟ್ಟಿಲ್ಲ. ರೋಗ ಪರಿಹಾರ ಮತ್ತು ಅದರ ನಿವಾರಣೆಗಾಗಿ ರುದ್ರನನ್ನುದ್ದೇಶಿಸಿ ಮಾಡಬೇಕಾದ ಅನೇಕ ಯಾಗಗಳು ಉಕ್ತವಾಗಿವೆ (ಆ. ಗೃ ೪-೮-೪೦, ಕೌ. ಸೂ. ೫೧ ೭)

ಸಾಯಣಭಾಷ್ಯಂ

ಇಮಾ ರುದ್ರಾಯೇತಿ ಚತುರ್ಯರ್ಚಂ ತೃಯೋದಶಂ ಸೂಕ್ತಂ ವಸಿಷ್ಠಸ್ಯಾರ್ಷಂ ರುದ್ರದೇವತಾಕಂ। ಅಂತ್ಯಾ ತ್ರಿಷ್ಟುಪ್ ಶಿಷ್ಟಾ ಜಗತ್ಯಃ। ತಥಾ ಚಾನುಕ್ರಮಣಿಕಾ। ಇಮಾ ರೌದ್ರಂ ತ್ರಿಷ್ಟುಬಂತಮಿತಿ॥ ಶೂಲಗವಾದಿಷು ರೌದ್ರಯಜ್ಞೇಷ್ವನೇನ ಸೂಕ್ತೇನೋದೀಚೀ ದಿಗುಪಸ್ಥೇಯಾ। ಸೂತ್ರಕೃತೇ ಹಿ। ಇಮಾ ರುದ್ರಾಯ ಸ್ಥಿರಧನ್ವನ ಇತಿ ಸರ್ವರುದ್ರಯಜ್ಞೇಷು ದಿಶಾಮುಪಸ್ಥಾನಂ। ಆ ಗೃ. ೪-೮-೨೧। ಇತಿ॥

ಅನುವಾದವು—**ಇಮಾ ರುದ್ರಾಯ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವುವು. ಈ ಸೂಕ್ತಕ್ಕೆ ವಸಿಷ್ಠನು ಋಷಿಯು, ರುದ್ರನು ದೇವತೆಯು;

ಈ ಸೂಕ್ತದ ಕೊನೆಯ ಋಕ್ಕು ತ್ರಿಷ್ಟುಪ್‌ಛಂದಸ್ಸುವು, ಉಳಿದ ಋಕ್ಕುಗಳು ಜಗತೀಛಂದಸ್ಸುವು ಅನುಕ್ರಮಣಿಕೆಯಲ್ಲಿ **ಇಮಾ ರೌದ್ರಂ ತ್ರಿಷ್ಟುಬಂತಂ** ಎಂದು ಹೇಳಿರುವುದು ಶೂಲಗವನೇ ಮೊದಲಾದ ರುದ್ರಯಜ್ಞಗಳಲ್ಲಿ ಈ ಸೂಕ್ತದಿಂದ ಉತ್ತರದಿಕ್ಕನ್ನು ಉದ್ದೇಶಿಸಿ ಉಪಸ್ಥಾನಮಾಡಬೇಕೆಂದು ಆಶ್ವಲಾಯನ ಗೃಹ್ಯಸೂತ್ರದ **ಇಮಾ ರುದ್ರಾಯ ಸ್ಥಿರಧನ್ವನ ಇತಿ ಸರ್ವರುದ್ರಯಜ್ಞೇಷು ದಿಶಾಮುಪಸ್ಥಾನಂ** ಎಂಬ ಸೂತ್ರದಿಂದ (ಆ ಗೃ ೪-೮) ವಿನಿಯುಕ್ತವಾಗಿರುವುದು

ಸೂಕ್ತ—೪೬

ಮಂಡಲ—೭ ॥ ಅನುವಾಕ—೩ ॥ ಸೂಕ್ತ—೪೬ ॥
ಅಷ್ಟಕ—೫ ॥ ಅಧ್ಯಾಯ - -೪ ॥ ವರ್ಗ—೧೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
ಋಷಿಃ—ವಸಿಷ್ಠಃ ॥
ದೇವತಾ—ರುದ್ರಃ ॥
ಛಂದಃ—೧-೩ ಜಗತೀ । ೪ ತ್ರಿಷ್ಟುಪ್ ॥

ಸಂಹಿತಾಪಾಠಃ

ಇಮಾ ರುದ್ರಾಯ ಸ್ಥಿರಧನ್ವನೇ ಗಿರಃ ಕ್ಷಿಪ್ರೇಷವೇ ದೇವಾಯ ಸ್ವಧಾವ್ನೇ ।
ಅಷಾಳ್ಹಾಯ ಸಹಮಾನಾಯ ವೇಧಸೇ ತಿಗ್ಮಾಯುಧಾಯ ಭರತಾ ಶೃಣೋತು ನಃ ॥ ೧ ॥

ಪದಪಾಠಃ

ಇಮಾಃ । ರುದ್ರಾಯ । ಸ್ಥಿರಽಧನ್ವನೇ । ಗಿರಃ । ಕ್ಷಿಪ್ರೇಽಇಷವೇ । ದೇವಾಯ । ಸ್ವಧಾಽವ್ನೇ ।
ಅಷಾಳ್ಹಾಯ । ಸಹಮಾನಾಯ । ವೇಧಸೇ । ತಿಗ್ಮಽಆಯುಧಾಯ । ಭರತ । ಶೃಣೋತು । ನಃ ॥ ೧ ॥

ಸಾಯಣಭಾಷ್ಯಂ

ಹೇ ಅಸ್ಮದೀಯಾಃ ಸ್ತೋತಾರಃ ಯೂಯಮಿಮಾ ಗಿರಃ ಸ್ತುತೀ ರುದ್ರಾಯೈತನ್ನಾಮಕಾಯ ದೇವಾಯ ಭರತ । ಧಾರಯತ । ಕೀದೃಶಾಯ । ಸ್ಥಿರಧನ್ವನೇ ದೃಢಧನುಷ್ಮತೇ ಕ್ಷಿಪ್ರೇಷವೇ ಶೀಘ್ರಂ ಗಾಮಿಬಾಣಾಯ ಸ್ವಧಾವ್ನೇಽನ್ನವತೇಽಷಾಳ್ಹಾಯ ಕೇನಾಪ್ಯನಭಿಭೂತಾಯ ಸಹಮಾನಾಯ ಶತ್ರೂಣಾಮಭಿಭವಿತ್ರೇ ವೇಧಸೇ ವಿಧಾತ್ರೇ ತಿಗ್ಮಾಯುಧಾಯ ತೀಕ್ಷ್ಣಾಸ್ತ್ರಾಯ । ಏವಂಭೂತಾಯ ರುದ್ರಾಯ ಸ್ತುತೀರ್ಭರತ । ಸ ಚ ರುದ್ರೋ ನೋಽಸ್ಮದೀಯಾಃ ಸ್ತುತೀಃ ಶೃಣೋತು ॥

ಪ್ರತಿಪದಾರ್ಥ

(ಎಲೈ ಸ್ತೋತೃಗಳೇ,) **ಇಮಾಃ ಗಿರಃ**—ಈ ಸ್ತುತಿಗಳನ್ನು । **ಸ್ಥಿರಧನ್ವನೇ**—ದೃಢವಾದ ಧನುಸ್ಸುಳ್ಳವನೂ, । **ಕ್ಷಿಪ್ರೇಷವೇ**—ವೇಗವಾಗಿ ಹೋಗುವ ಬಾಣವುಳ್ಳವನೂ, । **ಸ್ವಧಾವ್ನೇ**—ಅನ್ನವಂತನೂ, । **ಅಷಾಳ್ಹಾಯ**—ಅಪ್ರತಿಹತನೂ, । **ಸಹಮಾನಾಯ**—ಶತ್ರುಗಳನ್ನು ಸೋಲಿಸುವ ಶಕ್ತಿಯುಳ್ಳವನೂ । **ವೇಧಸೇ**—ಜಗ

ನ್ನಿರ್ಮಾಪಕನೂ । **ತಿಗ್ಮಾಯುಧಾಯ**—ತೀಕ್ಷ್ಣವಾದ ಆಯುಧವುಳ್ಳವನೂ । **ದೇವಾಯ**—ದೇವತಾತ್ಮನೂ ಆದ **ರುದ್ರಾಯ** — ರುದ್ರನಿಗೆ ಅರ್ಪಿಸಲು । **ಭರತ** — ಧರಿಸಿರಿ. । (ಆದೇ ರುದ್ರನು) **ನಃ** — ನಮ್ಮ ಸ್ತುತಿಗಳನ್ನು । **ಶೃಣೋತು**—ಕೇಳಲಿ.

ಭಾವಾರ್ಥ

ಎಲೈ ಸ್ತೋತೃಗಳೇ, ಈ ಸ್ತುತಿಗಳನ್ನು ದೃಢವಾದ ಧನುಸ್ಸುಳ್ಳವನೂ, ವೇಗವಾಗಿ ಹೋಗುವ ಬಾಣವುಳ್ಳವನೂ, ಅನ್ನವಂತನೂ, ಅಪ್ರತಿಹತನೂ, ಶತ್ರುಗಳನ್ನು ಸೋಲಿಸುವ ಶಕ್ತಿಯುಳ್ಳವನೂ, ಜಗನ್ನಿರ್ಮಾಪಕನೂ, ತೀಕ್ಷ್ಣವಾದ ಆಯುಧಗಳುಳ್ಳವನೂ, ದೇವತಾತ್ಮನೂ ಆದ ರುದ್ರನಿಗೆ ನಿರ್ಮಿಸಿ ಅರ್ಪಿಸಿರಿ ಆದೇ ರುದ್ರನು ನಮ್ಮ ಸ್ತುತಿಗಳನ್ನು ಕೇಳಲಿ.

English Translation

Offer these praises to the divine Rudra, armed with the strong bow and fast-flying arrows, the bestower of food, the invincible, the conqueror, the creator, the wielder of sharp weapons . may he hear our (praises).

ವಿಶೇಷವಿಷಯಗಳು

ರುದ್ರಶಬ್ದನಿರ್ವಚನವನ್ನು ಯಾಸ್ಕರು ಈ ರೀತಿ ವಿವರಿಸಿದಾರೆ—

ರುದ್ರೋ ರೌತೀತಿ ಸತಃ । ರೋರೂಯಮಾಣೋ ದ್ರವತೀತಿ ವಾ ರೋದಯತೇರ್ವಾ । ಯದರುದತ್ತದ್ರುದ್ರಸ್ಯ ರುದ್ರತ್ವಂ ಇತಿ ಕಾರಕಂ । ಯದರೋದೀತ್ತದ್ರುದ್ರಸ್ಯ ರುದ್ರತ್ವಂ ಇತಿ ಹಾರಿದ್ರವಿಕಂ । ತಸ್ಯೈಷಾ ಭವತಿ ॥

(ನಿ ೧೦-೬)

ರುದ್ರಶಬ್ದವು ಫಟ್ಟೆಯಾಗಿ ಕಿರಿಚು, ಕೂಗು ಎಂಬರ್ಥವುಳ್ಳ **ರೌತಿ** ಎಂಬ ಧಾತುವಿನಿಂದಾಗಲಿ ಕಿರಿಚುತ್ತಾ ಓಡು ಎಂಬ ಅರ್ಥವುಳ್ಳ **ರು** ಪೂರ್ವಕವಾದ **ದ್ರವತಿ** ಧಾತುವಿನಿಂದಾಗಲಿ ಅಥವಾ ಘರ್ಜಿಸು ಎಂಬರ್ಥವುಳ್ಳ **ರುದ್** ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು ಈ ವಿಷಯದಲ್ಲಿ **ಯದರುದತ್ತದ್ರುದ್ರಸ್ಯ ರುದ್ರತ್ವಂ**-ಈ ದೇವನು ಫಟ್ಟೆಯಾಗಿ ಗರ್ಜನೆಮಾಡಿದ್ದರಿಂದ ಇವನಿಗೆ ರುದ್ರನೆಂಬ ಹೆಸರು ಒಂದಿತು ಎಂಬರ್ಥವುಳ್ಳ ಕಾರಕಶ್ರುತಿಯು ಉದಾಹರಣೆಯಾಗಿದೆ. **ಮತ್ತು** ಇವನು ಗರ್ಜನೆಮಾಡಿದ್ದರಿಂದ ಈ ದೇವನಿಗೆ ರುದ್ರನೆಂಬ ಹೆಸರು ಬಂದಿತು ಗರ್ಜನೆಮಾಡುವುದು ಇವನ ಸ್ವಭಾವಗುಣವು ಎಂಬರ್ಥವುಳ್ಳ **ಯದರೋದೀತ್ತದ್ರುದ್ರಸ್ಯ ರುದ್ರತ್ವಂ** ಎಂಬ ಹಾರಿದ್ರವೀ ಶ್ರುತಿವಾಕ್ಯವೂ ಈ ವಿಷಯದಲ್ಲಿ ಪ್ರಮಾಣವನ್ನಾಗಿ ಉದಾಹರಿಸಬಹುದಾಗಿದೆ ಋಗ್ವೇದದಲ್ಲಿ ಈ ರುದ್ರದೇವನ ವಿಷಯವನ್ನು ತಿಳಿಸುವ ಋಕ್ಕನ್ನು ಇಲ್ಲಿ ಉದಾಹರಣೆಗಾಗಿ ಕೊಡಲಾಗಿದೆ—

ಇಮಾ ರುದ್ರಾಯ ಸ್ಥಿರಧನ್ವನೇ ಗಿರಃ ಕ್ಷಿಪ್ರೇಷವೇ ದೇವಾಯ ಸ್ವಧಾವ್ನೇ ।
ಅಷಾಳ್ಹಾಯ ಸಹಮಾನಾಯ ವೇಧಸೇ ತಿಗ್ಮಾಯುಧಾಯ ಭರತಾ ಶೃಣೋತು ನಃ ॥

(ಮಾ. ಸಂ. ೭ ೪೬-೧)

ಇಮಾ ರುದ್ರಾಯ ದೃಢಧನ್ವನೇ ಗಿರಃ ಕ್ಷಿಪ್ರೇಷವೇ ದೇವಾಯಾನ್ನವತೇಽಷಾಢಾಯಾನ್ನೈಃ ।
ಸಹಮಾನಾಯ ವಿಧಾಕ್ರೇ ತಿಗ್ಮಾಯುಧಾಯ ಭರತ ಶೃಣೋತು ನಃ ।

ತಿಗ್ಮಂ ತೇಜಸ್ತೇರುತ್ತಾಪಹರ್ಮಣಃ ।
ಆಯುಧಮಾಯೋಧನಾತ್ । ತಸ್ಯೈಷಾ ಪರಾಭವತಿ ॥

(೫. ೧೦—೬)

ಈ ಸ್ತುತಿವಾಕ್ಯಗಳನ್ನು ರುದ್ರದೇವನಿಗೆ ಅರ್ಪಿಸಿದಿ ಈ ದೇವನ ಧನುಸ್ಸು ದೃಢವಾಗಿರುವದು. ಇವನ ಧನುಸ್ಸಿನಿಂದ ಹೊರಹೊರಡುವ ಬಾಣಗಳು ಬಹಳ ವೇಗವುಳ್ಳವು ಈ ದೇವನು ಬಹಳ ಅನ್ನಯುಕ್ತನಾಗಿರುವನು ಎಂದರೆ ತನ್ನನ್ನು ಸ್ತುತಿಸುವವರಿಗೆ ಕೊಡುವುದಕ್ಕಾಗಿ ಈ ದೇವನ ಬಳಿ ಬಹಳ ಅನ್ನದ್ರವ್ಯಗಳಿರುವವು ಈ ದೇವನು ತನ್ನ ಶತ್ರುಗಳನ್ನು ಹಿಂಸಿಸುವನು ಆದರೆ ಇವನು ಮಾತ್ರ ಅಪ್ರತಿಹತನು ಜನಗಳು ಮಾಡುವ ಕರ್ಮಗಳಿಗೆ ಸಿಯಾಮಕನು ಇವನ ಆಯುಧವು ಅತಿ ತೀಕ್ಷ್ಣ (ಹರಿತ)ವಾಗಿರುವುದು ಇಂತಹ ಈ ದೇವನು ನನ್ನ ಸ್ತುತಿವಾಕ್ಯಗಳನ್ನು ಆಲಿಸಿ ಕೇಳಲಿ ಎಂದು ನಿರ್ವಜನಾಭಿಪ್ರಾಯವು

ತಿಗ್ಮಶಬ್ದವು **ತಿಜ್**-ಹರಿತಮಾಡು ಎಂಬ ಧಾತುವಿನಿಂದ ನಿಷ್ಪನ್ನವಾಗಿ ಬರಲು ಹರಿತವಾದ ಎಂಬರ್ಥವನ್ನುಳ್ಳ ದ್ದಾಗಿರುವುದು **ಆಯುಧ**ವೆಂದರೆ ಯುದ್ಧವಾಡಿ ಶತ್ರುಗಳನ್ನು ಕೊಲ್ಲುವ ಸಾಧನವು ಎಂದರ್ಥವು ಈ ರುದ್ರ ದೇವನ ವಿಷಯದಲ್ಲಿ ಇನ್ನೊಂದು ಉದಾಹರಣೆಯನ್ನು ಕೂಡಲಾಗುವುದು (ಈ ಸೂಕ್ತದ ಪೂರ್ವನಯ ಐಕ್ಯನ ವಿಶೇಷವಿಷಯಗಳನ್ನು ನೋಡಿ)

ಸಂಹಿತಾಪಾಠಃ

ಸ ಹಿ ಕ್ಷಯೇಣ ಕ್ಷಮ್ಯಸ್ಯ ಜನ್ಮನಃ ಸಾಮ್ರಾಜ್ಯೇನ ದಿವ್ಯಸ್ಯ ಚೇತತಿ ।
ಅವನ್ನವಂತೀರುಪ ನೋ ದುರಶ್ಚರಾನಮೀವೋ ರುದ್ರ ಜಾಸು ನೋ ಭವ ॥

ಪದಪಾಠಃ

ಸಃ । ಹಿ । ಕ್ಷಯೇಣ । ಕ್ಷಮ್ಯಸ್ಯ । ಜನ್ಮನಃ । ಸಾಂಽರಾಜ್ಯೇನ । ದಿವ್ಯಸ್ಯ । ಚೇತತಿ ।
ಅವನ್ । ಅವಂತೀಃ । ಉಪ । ನಃ । ದುರಃ । ಚರ । ಅನಮೀವಃ । ರುದ್ರ । ಜಾಸು । ನಃ । ಭವ ॥ ೨ ।

ಸಾಯಣಭಾಷ್ಯಂ

ಸ ಹಿ ಸ ಖಲು ರುದ್ರೋ ದೇವಃ ಕ್ಷಮ್ಯಸ್ಯ । ಕ್ಷಮಾಯಾಂ ಪೃಥಿವ್ಯಾಂ ಭವಃ । ತಸ್ಯ ಜನ್ಮನೋ ಜನಸ್ಯ ಕ್ಷಯೇಣೈಶ್ವರ್ಯೇಣ ಚೇತತಿ । ಪ್ರಜಾನಾತಿ । ದಿವ್ಯಸ್ಯ ಚ ಸಾಮ್ರಾಜ್ಯೇನೈಶ್ವರ್ಯೇಣ ಪ್ರಜಾನಾತಿ । ಶೇಷಃ ಪ್ರತ್ಯಕ್ಷಕೃತಃ । ರೋ ರುದ್ರ ದೇವ ತ್ವಂ ಚಾವಂತೀಸ್ತ್ವಂ ಸ್ತೋತ್ರೈಸ್ತುರ್ವ-ಯಂತೀರ್ನೋಽಸ್ಮದೀಯಾಃ ಪ್ರಜಾ ಅವನ್ ಪಾಲಯನ್ ದುರೋ ದುರ್ಯಾಣ್ಯಸ್ಮದೀಯಾನಿ ಗೃಹಾ-ಣ್ಯುಪ ಚರ । ಉಪಗಚ್ಛ । ಕಿಂಚ ತ್ವಂ ನೋಽಸ್ಮದೀಯಾಸು ಪ್ರಜಾಸ್ವನಮೀವಃ । ಅಮೀವಾ ರೋಗಃ । ತಾಮಕುರ್ವನ್ ಭವ ॥

ಪ್ರತಿಪದಾರ್ಥ

ಸ ಹಿ—ಆದೇ ರುದ್ರನು । **ಕ್ಷಮ್ಯಸ್ಯ**—ಪೃಥ್ವಿಯಲ್ಲಿ ಉತ್ಪನ್ನರಾದ । **ಜನ್ಮನಃ**—ಜನರಿಗೆ । **ಕ್ಷಯೇಣ**—ತನ್ನ ಐಶ್ವರ್ಯದ ಮೂಲಕ । **ಚೇತತಿ**—ಗೋಚರನಾಗುತ್ತಾನೆ. । **ದಿವ್ಯಸ್ಯ**—ದೇವಲೋಕದ ಜನರಿಗೆ । **ಸಾಮ್ರಾ-**

ज्येन—ತನ್ನ ಪ್ರಭುತ್ವದಿಂದ ಆರಿಯಲ್ಪಡುತ್ತಾನೆ । **रुद्र**—ಎಲೈ ರುದ್ರದೇವನೇ, । **अवंतीः**—ನಿನ್ನನ್ನು ಸ್ತುತಿಗಳಿಂದ ತೃಪ್ತಿಪಡಿಸುವ । **नः**—ನಮ್ಮನ್ನು । **अवन्**—ರಕ್ಷಿಸುತ್ತ । **दुरः**—ನಮ್ಮ ಗೃಹಗಳಿಗೆ । **उप चर**—ಬಂದುಸೇರು । **नः जासु**—ನಮಗೆ ಸೇರಿದ ಪ್ರಜೆಗಳಲ್ಲಿ । **अनमीवः**—ರೋಗಪ್ರತಿಬಂಧಕನಾಗಿ । **भव**—ಆಗಿರು.

भावार्थ

ರುದ್ರನು ಪೃಥ್ವಿಯಲ್ಲಿ ಉತ್ಪನ್ನರಾದ ಜನರಿಂದ ತನ್ನ ಸಂಪತ್ತಿನ ರೂಪದಿಂದಲೂ, ದ್ಯುಲೋಕೋತ್ಪನ್ನರಾದ ಜನರಿಗೆ ತನ್ನ ಪ್ರಭುತ್ವದಿಂದಲೂ ಆರಿಯಲ್ಪಡುತ್ತಾನೆ ಎಲೈ ರುದ್ರದೇವನೇ, ನಿನ್ನನ್ನು ಸ್ತುತಿಗಳಿಂದ ತೃಪ್ತಿಪಡಿಸುವ ನಮ್ಮನ್ನು ರಕ್ಷಿಸುತ್ತ ನಮ್ಮ ಗೃಹಗಳಿಗೆ ಬಂದು ಸೇರು. ನಮಗೆ ಸೇರಿದ ಪ್ರಜೆಗಳಲ್ಲಿ ರೋಗಪ್ರತಿಬಂಧಕನಾಗಿ ಆಗಿರು.

English Translation

He is known by his rule over those of terrestrial birth, by his sovereignty over those of celestial (origin) . protecting our progeny, Rudra, propitiating you (by praise), come to our dwellings, and be to them a guardian against disease

संहितापाठः

यॉ॒ ते॑ दि॒द्युदव॑सृष्टा॒ दिव॒स्परि॑ क्ष्म॒या च॑र॒ति॒ परि॒ सा व्र॑णक्तु नः।
स॒हस्रं॑ ते स्वपिवात भेषजा॒ मा न॑स्तो॒केषु॒ तन॑येषु रीरिषः ॥

पदपाठः

यॉ॒ । ते॒ । दि॒द्युत् । अव॑ऽसृष्टा । दि॒वः । परि॑ । क्ष्म॒या । च॒र॒ति॒ । परि॑ । सा । व्र॒ण॒क्तु॒ । नः॒ ।
स॒हस्र॑म् । ते॒ । सु॒ऽअ॒पि॒वा॒त॒ । भे॒ष॒जा॒ । मा । नः॒ । तो॒केषु॑ । तन॑येषु । रि॒रि॒षः॒ ॥ ६ ॥

सायणभाष्यं

हे रुद्र ते वैद्युतात्मनस्तव संबंधिनी दिवस्पर्यंतरिक्षसकाशादवसृष्टा विमुक्ता यॉ॒ दिद्युदशनिरूपा हेतिः क्ष्म॒या क्षित्या क्षितौ वा चरति वर्तते सा दिद्युन्नोऽस्मान्परि व्रणक्तु । परित्यजतु । अपि च हे स्वपिवात ते तव सहस्रं बहूनि भेषजा भेषजानि यान्यौषधानि संति तान्यस्मभ्यं प्रयच्छेति शेषः । नोऽस्माकं तोकेषु पुत्रेषु तनयेषु च मा रिरिषः । हिंसां मा कृथाः ॥

प्रतिपदार्थ

(ಎಲೈ ರುದ್ರದೇವನೇ,) **ते**—ನಿನಗೆ ಸೇರಿದುದೂ । **दिवस्परि**—ಅಂತರಿಕ್ಷದಿಂದ । **अवसृष्टा**—ಬಿಡಲ್ಪಟ್ಟುದೂ ಆದ । **यॉ॒ विद्युत्**—ಯಾವ ವಿದ್ಯುದ್ರೂಪವಾದ ಆಯುಧವು । **क्ष्म॒या**—ಪೃಥ್ವಿಯಮೇಲೆ । **चरति**

—ಸಂಚರಿಸುವುದೋ । **ಸಾ**—ಅದೇ ಶಕ್ತಿರೂಪವಾದ ಆಯುಧವು । **ನಃ**—ನಮ್ಮನ್ನು । **ಪರಿ ವೃಣಕ್ತು**—ಬಿಟ್ಟು ಬಿಡಲಿ । **ಸ್ಪಿವಾತ**—**ಕಲ್ಯಾಣಕಾರಕವಾದ** ವ್ಯವಹಾರವುಳ್ಳ ಎಲೈ ರುದ್ರನೇ, । **ತೇ**—ನಿನ್ನಲ್ಲಿ । **ಸಹಸ್ರಂ**—ಅತ್ಯಧಿಕವಾಗಿ । **ಭೇಷಜಾ**—ಔಷಧಿಗಳು ಇರುತ್ತವೆ । **ನಃ**—ನಮ್ಮ । **ತೋಕೇಷು**—ಪುತ್ರರಲ್ಲಿಯೂ । **ತನಯೇಷು**—ತತ್ಪುತ್ರರಲ್ಲಿಯೂ (ಮೊಮ್ಮಕ್ಕಳಲ್ಲಿಯೂ) । **ಮಾ ರೀರಿಷಃ**—ಹಿಂಸೆಯನ್ನುಂಟುಮಾಡಬೇಡ

ಭಾವಾರ್ಥ

ಎಲೈ ರುದ್ರದೇವನೇ, ನಿನಗೆ ಸೇರಿದುದೂ, ಅಂತರಿಕ್ಷದಿಂದ ಬಿಡಲ್ಪಟ್ಟಿದೂ ಆದ ಯಾವ ವಿದ್ಯುದ್ರೂಪವಾದ ಆಯುಧವು ಪೃಥ್ವಿಯ ಮೇಲೆ ಸಂಚರಿಸುವುದೋ ಅದೇ ಶಕ್ತಿರೂಪವಾದ ಆಯುಧವು ನಮ್ಮನ್ನು ಬಿಟ್ಟುಬಿಡಲಿ. ಕಲ್ಯಾಣಕಾರಕವಾದ ವ್ಯವಹಾರವುಳ್ಳ ಎಲೈ ರುದ್ರನೇ, ನಿನ್ನಲ್ಲಿ ಅನೇಕವಿಧವಾದ ಔಷಧಿಗಳು ಇರುತ್ತವೆ. ನಮ್ಮ ಪುತ್ರರಿಗೂ, ತತ್ಪುತ್ರರಿಗೂ ಹಿಂಸೆಯನ್ನುಂಟುಮಾಡಬೇಡ

English Translation

May your blazing (weapon), which, discharged from heaven traverses the earth, avoid us yours, appeaser of the wind, are a thousand medicaments inflict not evil upon our sons and grandsons

ವಿಶೇಷವಿಷಯಗಳು

ರುದ್ರಶಬ್ದದ ನಿಷ್ಪತ್ತಿಯನ್ನೂ ಅರ್ಥವನ್ನೂ ವಿವರಿಸುವಾಗ ಯಾಸ್ಕರು ಈ ಋಕ್ಕನ್ನು ಉದಾಹರಣೆಯಾಗಿ ತೆಗೆದುಕೊಂಡು ಇದಕ್ಕೂ ಸಿರುಕ್ತವನ್ನು ಹೇಳಿದ್ದಾರೆ—

ಯಾ ತೇ ದಿದ್ಯುದವಸೃಷ್ಟಾ ದಿವಸ್ಪರಿ ದಿವೋಽಧಿ । ದಿದ್ಯುತ್ ದ್ಯತೇರ್ವಾ, ದ್ಯುತೇರ್ವಾ, ದ್ಯೋತತೇರ್ವಾ । ಕ್ಷ್ಮಯಾ ಚರತಿ ಕ್ಷ್ಮಾ ಪೃಥಿವೀ ತಸ್ಯಾಂ ಚರತಿ ತಯಾ ಚರತಿ ವಿಕ್ಷ್ಮಾ-ಪಯಂತೀ ಚರತೀತಿ ವಾ, । ಪರಿವೃಣಕ್ತು ನಃ ಸಾ ಸಹಸ್ರಂ ತೇ ಸ್ವಾಪ್ತವಚನಭೈಷಜ್ಯಾನಿ ಮಾ ನಸ್ತ್ವಂ ಪುತ್ರೇಷು ಚ ಪೌತ್ರೇಷು ಚ ರೀರಿಷಃ ।

ತೋಕಂ ತುದ್ಯತೇಃ । ತನಯಂ ತನೋತೇಃ ॥

ಅಗ್ನಿರಪಿ ರುದ್ರ ಉಚ್ಯತೇ । ತಸ್ಯೈಷಾ ಭವತಿ ।

ಜರಾಬೋಧ ತದ್ವಿವಿಡ್ಢಿ ವಿಶೇವಿಶೇ ಯಜ್ಞಿಯಾಯ ।

ಸ್ತೋಮಂ ರುದ್ರಾಯ ದೃಶೀಕಂ ॥ ಜರಾ ಸ್ತುತಿ. ....ದರ್ಶನೀಯಂ ॥

(ನಿ ೧೦.೭)

ಎಲೈ ರುದ್ರದೇವನೇ, ಸ್ವರ್ಗಲೋಕದ ಮೇಲಿನಿಂದ ಎಸೆಯಲ್ಪಡುವ ಪ್ರಕಾಶಮಾನವಾದ ನಿನ್ನ ಆಯುಧವು ನಮ್ಮನ್ನು ತಾಕದಿರಲಿ **ದಿದ್ಯುತ್** ಎಂಬ ಶಬ್ದವು ಕತ್ತರಿಸು ಎಂಬರ್ಥವುಳ್ಳ ದೃತಿಧಾತುವಿನಿಂದಾಗಲಿ, ಪ್ರಯೋಗಿಸ, ಹಿಂಸಿಸು ಎಂಬರ್ಥವುಳ್ಳ **ದ್ಯುತಿ** ಧಾತುವಿನಿಂದಾಗಲಿ, ಅಥವಾ ಪ್ರಕಾಶಿಸು ಎಂಬರ್ಥವುಳ್ಳ **ದ್ಯುತ್** (ದ್ಯೋತತಿ) ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. ಈ ಶಬ್ದಕ್ಕೆ ಪ್ರಕಾಶಿಸುವ ಎಂಬರ್ಥವಿರುವುದು **ಕ್ಷ್ಮಯಾ ಚರತಿ** । **ಕ್ಷ್ಮಾ** ಎಂದರೆ ಪೃಥಿವಿಯು **ಕ್ಷ್ಮಯಾ ಚರತಿ** ಎಂದರೆ ಪೃಥಿವಿಯಮೇಲೆ ಅಥವಾ ಪೃಥಿವಿಯೊಡನೆ ಚಲಿಸುವುದು ಎಂದರ್ಥವು ಅಥವಾ ಚಲಿಸುತ್ತಾ ನಾಶವನ್ನುಂಟುಮಾಡುವುದು ಎಂದೂ ಅರ್ಥವು. ಇಂತಹ ರುದ್ರದೇವನ ವಿನಾಶಕರವಾದ ಆಯುಧವು ನಮಗೆ ಹಿಂಸೆಯನ್ನುಂಟುಮಾಡದೆ, ನಮಗೆ ತಾಕದೆ ನಮ್ಮಮೇಲೆ ಹಾದುಹೋಗಲಿ (ಸ್ಪಿವಾತ =

ಸ್ವಾಪ್ತವಚನ) ಹಿತಕರವಾದ ವಾಕ್ಯಗಳುಳ್ಳ ಎಲೈ ರುದ್ರನೇ, ನಿನ್ನಬಳಿ ಸಾವಿರಾರು ಔಷಧಗಳಿವೆ ನೀನು ನಮ್ಮ ಪುತ್ರರನ್ನೂ, ಪೌತ್ರರನ್ನೂ ಹಿಂಸಿಸಬೇಡ. **ಹೋಕಂ** ಎಂಬ ಶಬ್ದವು ಇದನ್ನು ಮಾಡು, ಪ್ರೇರಿಸು, ಎಂಬರ್ಥವುಳ್ಳ **ತುದ್** (ನೂಕು, ತಳ್ಳು, ಪ್ರೇರಿಸು) ಎಂಬ ಧಾತುವಿನಿಂದ ನಿಷ್ಪನ್ನವಾಗಿ ಪುತ್ರನು ಎಂಬರ್ಥವುಳ್ಳದ್ದಾಗಿದೆ ತಂದೆಯಿಂದ ಇಂತಹ ಕೆಲಸವನ್ನು ಮಾಡು ಎಂದು ಪ್ರೇರಿತನಾಗುವ ಪುತ್ರನು ಎಂದರ್ಥವು **ತನಯ** ಶಬ್ದವು **ತನು** ವಿಸ್ತಾರೇ— ವೃದ್ಧಿಸಡಿಸು ಎಂಬರ್ಥವುಳ್ಳ ಧಾತುವಿನಿಂದ ನಿಷ್ಪನ್ನವಾಗಿ ಪೌತ್ರನು ಅಥವಾ ಮೊಮ್ಮಗನು ಎಂದರ್ಥವುಳ್ಳದ್ದಾಗಿರುವುದು ಕಲವನ್ನು ವಿಸ್ತಾರಮಾಡಿ ಅಭಿವೃದ್ಧಿಪಡಿಸುವವನು ಎಂಬಭಿಪ್ರಾಯವು.

ಅಗ್ನಿಯೂ ಕಲವು ಸಂದರ್ಭಗಳಲ್ಲಿ ರುದ್ರನೆಂದು ಕರೆಯಲ್ಪಡುವನು. ಈ ವಿಷಯದಲ್ಲಿ—**ಜರಾಬೋಧ ತದ್ವಿವಿಡ್ಢಿ ವಿಶೇವಿಶೇ ಯಜ್ಞಿಯಾಯ । ಸ್ತೋಮಂ ರುದ್ರಾಯ ದೃಶೀಕಂ** ಎಂಬ ಋಕ್ಕೇ ಉದಾಹರಣೆಯಾಗಿರುವುದು ಎಂದು ನಿರುಕ್ತದ ಮುಖ್ಯಾಭಿಪ್ರಾಯವು.

ಸಂಹಿತಾಪಾಠಃ

ಮಾ ನೋ ವಧೀ ರುದ್ರ ಮಾ ಪರಾ ದಾ ಮಾ ತೇ ಭೂಮ ಪ್ರಸಿತೌ ಹೀಳಿತಸ್ಯ ।
ಆ ನೋ ಭಜ ಬರ್ಹಿಷಿ ಜೀವಶಂಸೇ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥

ಪದಪಾಠಃ

ಮಾ । ನಃ । ವಧೀಃ । ರುದ್ರ । ಮಾ । ಪರಾ । ದಾಃ । ಮಾ । ತೇ । ಭೂಮ । ಪ್ರಸಿತೌ । ಹೀಳಿತಸ್ಯ ।
ಆ । ನಃ । ಭಜ । ಬರ್ಹಿಷಿ । ಜೀವಶಂಸೇ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥ ೪ ॥

ಸಾಯಣಭಾಷ್ಯಂ

ಹೇ ರುದ್ರ ತ್ವಂ ನೋಽಸ್ಮಾನ್ಮಾ ವಧೀಃ । ಮಾ ಹಿಂಸೀಃ । ತಥಾ ಮಾ ಪರಾ ದಾಃ । ಮಾ ಚ ತ್ಯಾಕ್ಷೀಃ । ಅಪಿ ಚ ಹೀಳಿತಸ್ಯ ಕ್ರುದ್ಧಸ್ಯ ತೇ ತವ ಪ್ರಸಿತೌ ಪ್ರಕರ್ಷೇಣ ಬಂಧನೇ ವಯಂ ಚ ಮಾ ಭೂಮ । ಕಿಂಚ ಜೀವಶಂಸೇ ಜೀವೈರಾಶಂಸನೀಯೇ ಬರ್ಹಿಷಿ ಯಜ್ಞೇ ನೋಽಸ್ಮಾನಾ ಭಜ । ಭಾಗಿನಃ ಕುರು । ಹೇ ರುದ್ರಪ್ರಮುಖಾ ದೇವಾಃ ಯೂಯಂ ನೋಽಸ್ಮಾನ್ಕಲ್ಯಾಣೈಃ ಸರ್ವದಾ ಪಾಲಯತ ॥

ಪ್ರತಿಪದಾರ್ಥ

ರುದ್ರ—ಎಲೈ ರುದ್ರನೇ । **ನಃ**—ನಮ್ಮನ್ನು । **ಮಾ ವಧೀಃ**—ಹಿಂಸಿಸಬೇಡ. । **ಮಾ ಪರಾ ದಾಃ**—ಶತ್ರುಗಳಿಗೆ ಬಿಟ್ಟುಕೊಡಬೇಡ, । **ಹೀಳಿತಸ್ಯ**—ಕ್ರುದ್ಧನಾದ । **ತೇ**—ನಿನ್ನ । **ಪ್ರಸಿತೌ**—ಬಂಧನದಲ್ಲಿ । **ಮಾ ಭೂಮ**—ನಾವು ಸಿಕ್ಕದಿರುವಂತಾಗಲಿ. । **ಜೀವಶಂಸೇ**—ಬದುಕಿಗೆ ಅಪೇಕ್ಷಿತವಾದ । **ಬರ್ಹಿಷಿ**—ಯಾಗದಲ್ಲಿ । **ನಃ**—ನಮ್ಮನ್ನು । **ಆ ಭಜ**—ಭಾಗಿಗಳಾಗುವಂತೆ ಮಾಡು. (ಎಲೈ ದೇವತೆಗಳೇ) **ಯೂಯಂ**—ನೀವು । **ನಃ**—ನಮ್ಮನ್ನು **ಸದಾ**—ಯಾವಾಗಲೂ । **ಸ್ವಸ್ತಿಭಿಃ**—ಕಲ್ಯಾಣಗಳಿಂದ । **ಪಾತ**—ರಕ್ಷಿಸಿರಿ. ।

ಭಾವಾರ್ಥ

ಎಲೈ ರುದ್ರನೇ, ನಮ್ಮನ್ನು ಹಿಂಸಿಸಬೇಡ　ನಮ್ಮನ್ನು ಶತ್ರುಗಳಿಗೆ ಬಿಟ್ಟುಕೊಡಬೇಡ. ಕ್ರುದ್ಧನಾದ ನಿನ್ನ ಬಂಧನದಲ್ಲಿ ನಾವು ಸಿಕ್ಕದಿರುವಂತಾಗಲಿ　ಒದಗಿಕೆಗೆ ಅಪೇಕ್ಷಿತವೂ, ಮಾನವರಿಂದ ಆಶಂಸಿತವೂ ಆದ ಯಜ್ಞದಲ್ಲಿ ನಾವೂ ಭಾಗಿಗಳಾಗುವಂತೆ ಮಾಡು. ಎಲೈ ದೇವತೆಗಳೇ, ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ.

English Translation

Harm us not, Rudra　abandon us not　let us not fall under the bondage of you when displeased　make us partakers of the life-promoting sacrifice : and do you, (gods), ever cherish us with blessings.

ನಲವತ್ತೇಳನೆಯ ಸೂಕ್ತವು

ಸಾಯಣಭಾಷ್ಯಂ

ಆಪೋ ಯಂ ವ ಇತಿ ಚತುರ್ಯಚಂ ಚತುರ್ದಶಕಂ ಸೂಕ್ತಂ ವಸಿಷ್ಠಸ್ಯಾರ್ಷಂ　ತ್ರೈಷ್ಟುಭಮ್-ಬ್ದೇವತಾಕಂ । ಆಪೋ ಯಮಾಪಸ್ತಿತ್ಯನುಕ್ರಾಂತಂ ಚ ॥ ಗತೋ ವಿನಿಯೋಗಃ ॥

ಅನುವಾದವು—**ಆಪೋ ಯಂ ವಃ**—ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು ಇದರಲ್ಲಿ ನಾಲ್ಕು ಋಕ್ಕುಗಳಿರುವವು　ಈ ಸೂಕ್ತಕ್ಕೆ ವಸಿಷ್ಠನು ಋಷಿಯು; ಆಪಃ (ಉದಕಗಳು) ದೇವತೆಗಳು, ತ್ರಿಷ್ಟುಪ್ಛಂದಸ್ಸು　ಅನುಕ್ರಮಣಿಕೆಯಲ್ಲಿ—**ಆಪೋ ಯಮಾಪಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೪೭

ಮಂಡಲ—೭ ॥ ಅನುವಾಕ—೩ ॥ ಸೂಕ್ತ—೪೭ ॥
ಅಷ್ಟಕ—೫ ॥ ಅಧ್ಯಾಯ—೪ ॥ ವರ್ಗ—೧೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
ಋಷಿಃ—ವಸಿಷ್ಠಃ ॥
ದೇವತಾ—ಆಪಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಆಪೋ ಯಂ ವಃ ಪ್ರಥಮಂ ದೇವಯಂತ ಇಂದ್ರಪಾನಮೂರ್ಮಿಕೃಣ್ವ-
ತೇಳಃ ।
ತಂ ವೋ ವಯಂ ಶುಚಿಮರಿಪ್ರಮದ್ಯ ಘೃತಪ್ರುಷಂ ಸುಧುಮಂತಂ ವನೇಮ

ಪದಪಾಠಃ

ಆಪ॑ಃ । ಯಂ । ವ॒ಃ । ಪ್ರ॒ಥ॒ಮಂ । ದೇ॒ವ॒ಯಂ॑ತಃ । ಇಂದ್ರ॑ಪಾನಂ । ಊರ್ಮಿಂ । ಅಕೃ॑ಣ್ವತ । ಇಳಃ ।

ತಂ । ವ॒ಃ । ವ॒ಯಂ । ಶು॒ಚಿಂ । ಅ॒ರಿ॒ಪ್ರಂ । ಆದ್ಯ । ಘೃ॒ತ॒ಪ್ರು॒ಷಂ । ಮ॒ಧು॒ಮ॒ಂತಂ । ವ॒ನೇ॒ಮ ॥೧॥

ಸಾಯಣಭಾಷ್ಯಂ

ದೇವಯಂತೋ ದೇವಾನಿಚ್ಛಂತೋಽಧ್ವರ್ಯವೋ ಹೇ ಆಪೋ ಹೇ ಅಬ್ದೇವತಾಃ ವೋ ಯುಷ್ಮಾಕಂ ಕಾರ್ಯಭೂತಮಿಂದ್ರಪಾನಮಿಂದ್ರೇಣ ಪಾತವ್ಯಮಿಳ ಇಳಾಯಾ ಭೂಮ್ಯಾಃ ಸಂಭೂತಂ ಯಮೂರ್ಮಿಂ ಸೋಮಾಖ್ಯಂ ಯಂ ರಸಂ ಪ್ರಥಮಂ ಪುರಾಕೃಣ್ವತ ಅಭಿಷವಣವಚನಾದಿಭಿಃ ಸಮಸ್ಕುರ್ವತ ಅದ್ಯೇದಾನೀಂ ವಯಮಪಿ ವೋ ಯುಷ್ಮದೀಯಂ ತಮೂರ್ಮಿಂ ವನೇಮ । ಸಂಭಜೇಮಹಿ । ಕೀದೃಶಂ । ಶುಚಿಂ ಶುದ್ಧಮರಿಪ್ರಂ ಪಾಪರಹಿತಂ ಘೃತಪ್ರುಷಂ ವೃಷ್ಟಿಲಕ್ಷಣಮುದಕಂ ಸಿಂಚಂತಂ ಮಧುಮಂತಂ ಮಧುರರಸೋಪೇತಂ । ಏವಂಭೂತಂ ತಂ ವನೇಮೇತಿ ಸಂಬಂಧಃ ॥

ಪ್ರತಿಪದಾರ್ಥ

ಆಪಃ—ಎಲೈ ಅಬ್ದೇವತೆಗಳೇ, । **ವಃ**—ನಿಮಗೆ ಸೇರಿದುದೂ । **ಇಂದ್ರಪಾನಂ**—ಇಂದ್ರನಪಾನಕ್ಕೆ ಯೋಗ್ಯವಾದುದೂ । **ಇಳಃ**—ಪೃಥ್ವಿಯಿಂದ ಉತ್ಪನ್ನವಾದುದೂ ಆದ । **ಯಂ ಊರ್ಮಿಂ**—ಯಾವ ಸೋಮರೂಪದ ರಸವನ್ನು । **ಪ್ರಥಮಂ**—ಮೊದಲು । **ದೇವಯಂತಃ**—ದೇವಪೂಜಾಕಾಂಕ್ಷಿಗಳಾದ ಅಧ್ವರ್ಯುಗಳು । **ಅಕೃಣ್ವತ**—ಅಭಿಷವಾದಿಗಳಿಂದ ಉತ್ಪನ್ನಮಾಡಿದರೋ, । **ತಂ**—ಅಂತಹುದೂ । **ವಃ**—ನಿಮಗೆ ಸಂಬಂಧಿಸಿದುದೂ । **ಶುಚಿಂ**—ಪರಿಶುದ್ಧವಾದುದೂ । **ಅರಿಪ್ರಂ**—ಪಾಪರಹಿತವಾದುದೂ । **ಘೃತಪ್ರುಷಂ**—ವೃಷ್ಟಿಯನ್ನು ಸುರಿಸತಕ್ಕದ್ದೂ । **ಮಧುಮಂತಂ**—ಮಧುರರಸೋಪೇತವಾದುದೂ ಆದ ಸೋಮವನ್ನು । **ಅದ್ಯ**—ಈ ಯಾಗಕಾಲದಲ್ಲಿ । **ವಯಂ**—ನಾವೂ ಸಹ । **ವನೇಮ**—ಆರಾಧಿಸುವಂತಾಗಲಿ. (ಹೊಂದುವಂತಾಗಲಿ)

ಭಾವಾರ್ಥ

ಎಲೈ **ಅಬ್ದೇವತೆಗಳೇ,** ನಿಮಗೆ ಸೇರಿದುದೂ, ಇಂದ್ರಪಾನಕ್ಕೆ ಯೋಗ್ಯವಾದುದೂ, ಪೃಥ್ವಿಯಿಂದ ಉತ್ಪನ್ನವಾದುದೂ ಆದ ಯಾವ ಸೋಮರೂಪದ ರಸವನ್ನು ಮೊದಲು ದೇವಪೂಜಾಕಾಂಕ್ಷಿಗಳಾದ ಅಧ್ವರ್ಯುಗಳು ಅಭಿಷವಾದಿಗಳಿಂದ ಉತ್ಪನ್ನಮಾಡಿದರೋ ಅಂತಹುದೂ, ನಿಮಗೆ ಸಂಬಂಧಿಸಿದುದೂ ಪರಿಶುದ್ಧವಾದುದೂ, ಪಾಪರಹಿತವಾದುದೂ ವೃಷ್ಟಿಯನ್ನು ಸುರಿಸತಕ್ಕದ್ದೂ, ಮಧುರರಸೋಪೇತವಾದುದೂ ಆದ ಸೋಮವನ್ನು ಈ ಯಾಗಕಾಲದಲ್ಲಿ ನಾವೂ ಆರಾಧಿಸುವಂತಾಗಲಿ. (ಪಾನಮಾಡುವಂತಾಗಲಿ)

English Translation

We solicit from you, waters, to-day, that pure, faultless, rain-shedding, sweet essence of the earth, which the devout have first consecreated as the beverage of Indra.

ಸಂಹಿತಾಪಾಠಃ

ತಮೂರ್ಮಿಮಾಪ॑ೋ ಮಧು॑ಮತ್ತಮಂ ವ॒ೋಽಪಾಂ ನಪಾ॑ದವತ್ವಾಶು॒ಹೇ ಮಾ ।

ಯಸ್ಮಿನ್ನಿಂದ್ರೋ ವಸುಭಿರ್ಮಾದಯಾತೇ ತಮಶ್ಯಾಮ ದೇವಯಂತೋ ವೋ ಅದ್ಯ ॥ ೨ ॥

ಪದಪಾಠಃ

ತಂ । ಊರ್ಮಿಂ । ಆಪಃ । ಮಧುಮತ್ತಮಂ । ವಃ । ಅಪಾಂ । ನಪಾತ್ । ಅವತು । ಅಶುಹೇಮಾ ॥

ಯಸ್ಮಿನ್ । ಇಂದ್ರಃ । ವಸುಭಿಃ । ಮಾದಯಾತೇ । ತಂ । ಅಶ್ಯಾಮ । ದೇವಯಂತಃ । ವಃ । ಅದ್ಯ ॥

ಸಾಯಣಭಾಷ್ಯಂ

ಹೇ ಆಪ ಏತತ್ಸಂಜ್ಞಕಾ ದೇವಾಃ ವೋ ಯುಷ್ಮದೀಯಂ ಮಧುಮತ್ತಮಂ ರಸವತ್ತಮಂ ತಮೂರ್ಮಿಂ ಪ್ರಸಿದ್ಧಂ ಸೋಮಾಖ್ಯಂ ರಸಮಾಶುಹೇಮಾ ಶೀಘ್ರಗತಿರಪಾಂ ನಪಾದೇತದಾಖ್ಯೋ ದೇವೋಽವತು । ಪಾಲಯತು । ಇಂದ್ರೋ ಯಸ್ಮಿನ್ನೂರ್ಮೌ ವಸುಭಿರ್ವಾಸಕೈರ್ದೇವೈಃ ಸಹ ಮಾದಯಾತೇ ಮಾದ್ಯೇತ್ ಅದ್ಯಾಸ್ಮಿನ್ನಿನೇ ದೇವಯಂತೋ ದೇವಕಾಮಾ ವಯಂ ವೋ ಯುಷ್ಮದೀಯಂ ತಮೂರ್ಮಿಮಶ್ಯಾಮ । ಪ್ರಾಪ್ನುಯಾಮ ॥

ಪ್ರತಿಪದಾರ್ಥ

ಆಪಃ—ಎಲೈ ಅಬ್ಬೀನತೆಗಳೇ, । **ವಃ**—ನಿಮ್ಮ ಸಂಬಂಧಿಯಾದುದೂ, । **ತಂ**—ಪ್ರಸಿದ್ಧವಾದುದೂ । **ಮಧುಮತ್ತಮಂ**—ಅತ್ಯಂತ ರುಚಿಕರವಾದುದೂ ಆದ । **ಊರ್ಮಿಂ**—ಸೋಮನು ರಸವನ್ನು । **ಅಶು-ಹೇಮಾ**—ಶೀಘ್ರಗಾಮಿಯಾದವನೂ । **ಅಪಾಂ ನಪಾತ್**—ಅಪಾಂನಪಾತ್ಸಂಜ್ಞಕನೂ ಆದ ದೇವನು । **ಅವತು**—ರಕ್ಷಿಸಲಿ. । **ಯಸ್ಮಿನ್**—ಯಾವ ಈ ಸೋಮರಸದಲ್ಲಿ । **ಇಂದ್ರಃ**—ಇಂದ್ರನು । **ವಸುಭಿಃ**—ವಸುಸಂಜ್ಞಕರಾದ ದೇವತೆಗಳೊಡನೆ ಕೂಡಿಕೊಂಡು । **ಮಾದಯಾತೇ**—ಹರ್ಷವನ್ನುತ್ಪಾದಿಸುವನೋ ಅಂತಹುದೂ । **ವಃ**—ನಿಮ್ಮ ಸಂಬಂಧಿಯಾದುದೂ ಆದ । **ತಂ**—ಅದೇ ರಸವನ್ನು । **ಅದ್ಯ**—ಈ ಯಾಗದಿನದಲ್ಲಿ । **ದೇವಯಂತಃ**—ದೇವಪೂಜಾಕಾಂಕ್ಷಿಗಳಾದ ನಾವು ಸಹ । **ಅಶ್ಯಾಮ**—ಹೊಂದುವಂತಾಗಲಿ

ಭಾವಾರ್ಥ

ಎಲೈ ಅಬ್ಬೀನತೆಗಳೇ, ನಿಮ್ಮ ಸಂಬಂಧಿಯಾದುದೂ, ಪ್ರಸಿದ್ಧವಾದುದೂ, ಅತ್ಯಂತ ರುಚಿಕರವಾದುದೂ ಆದ ಸೋಮರೂಪದ ರಸವನ್ನು ಶೀಘ್ರಗಾಮಿಯೂ, ಅಪಾಂನಪಾತ್ಸಂಜ್ಞಕನೂ ಆದ ದೇವನು ರಕ್ಷಿಸಲಿ ಯಾವ ಈ ಸೋಮರಸದಲ್ಲಿ ಇಂದ್ರನು ವಸುಸಂಜ್ಞಕರಾದ ದೇವತೆಗಳೊಡನೆ ಕೂಡಿಕೊಂಡು ಹರ್ಷವನ್ನು ಹೊಂದುವನೋ ಅಂತಹುದೂ ನಿಮ್ಮ ಸಂಬಂಧಿಯಾದುದೂ ಆದ ಅದೇ ರಸವನ್ನು ಈ ಯಾಗದಿನದಲ್ಲಿ ದೇವಪೂಜಾಕಾಂಕ್ಷಿಗಳಾದ ನಾವೂಸಹ ಹೊಂದುವಂತಾಗಲಿ.

English Translation

May the swift-moving grandson of the waters protect, waters, your most sweet essence wherewith may Indra and the Vasus be delighted : and may we, devoted to the gods, partake (of it).

ವಿಶೇಷವಿಷಯಗಳು

ಅಪಾಂ ನಪಾತ್— ಈ ಶಬ್ದಕ್ಕೆ ಯಾಸ್ಕರು— **ಅಪಾಂ ನಪಾತ್ತನೂನಪ್ತ್ರಾ ವ್ಯಾಖ್ಯಾತಃ** (ನಿ ೧೦-೧೪) **ನಪಾದಿತ್ಯನಂತರಾಯಾಃ ಪ್ರಜಾಯಾ ನಾಮಧೇಯಂ ನಿರ್ಣತತಮಾ ಭವತಿ** (ನಿ ೮-೬) **ಅಪಾಂ ನಪಾತ್** ಎಂಬ ಶಬ್ದದ ನಿಷ್ಪತ್ತಿಯನ್ನು **ತನೂನಪಾತ್** ಎಂಬ ಶಬ್ದವನ್ನು ವ್ಯಾಖ್ಯಾನಮಾಡುವ ಸಂದರ್ಭದಲ್ಲಿ ವಿವರಿಸಲಾಗಿದೆ ಇಲ್ಲಿ ಅಪಾಂ ನಪಾತ್ ಎಂಬ ಎರಡು ಪ್ರತ್ಯೇಕಪದಗಳು ಸೇರಿ ಅಪಾಂನಪಾತ್ ಎಂಬ ರೂಢವಾಗಿದೆ **ಅಪಾಂ** ಎಂದರೆ ಉದಕಗಳ ಎಂದರ್ಥವು. ನಪಾತ್ ಎಂದರೆ ಪುತ್ರನ ಅನಂತರ ಹುಟ್ಟುವ ಸಂತತಿಗೆ ಎಂದರೆ ಪೌತ್ರ **ಅಥವಾ** ಮೊಮ್ಮಗನಿಗೆ ಹೆಸರು ಉದಕಗಳ ಮೊಮ್ಮಗನು ಎಂದು ಅಭಿಪ್ರಾಯವು. ಈ ಶಬ್ದವು ಸಾಧಾರಣವಾಗಿ ಅಗ್ನಿಯನ್ನು ಉದ್ದೇಶಿಸಿ ಹೇಳಲ್ಪಡುವುದು ಹೇಗೆಂದರೆ—

ಆಪೋಽತ್ರ ತನ್ವ ಉಚ್ಯಂತೇ । ತತಾ ಅಂತರಿಕ್ಷೇ ತಾಭ್ಯ ಓಷಧಿವನಸ್ಪತಯೋ ಜಾಯಂತ ಓಷಧಿವನಸ್ಪತಿಭ್ಯ ಏನ ಜಾಯತೇ ॥

(ನಿ ೮-೬)

ಉದಕಗಳಿಂದ ಓಷಧಿವನಸ್ಪತಿಗಳು (ವೃಕ್ಷಾದಿಗಳು) ಉತ್ಪತ್ತಿಯಾಗುತ್ತದೆ ಓಷಧಿವನಸ್ಪತಿಗಳಿಂದ (ಕೃಷ್ಣ, ಮರ, ಅರಣಿ) ಅಗ್ನಿಯು ಉತ್ಪತ್ತಿಯಾಗುತ್ತದೆ ಇಲ್ಲಿ ವನಸ್ಪತಿಸಂಬಂಧವಾದ ಎಂದರೆ ಮರದ ಅರಣಿಗಳಲ್ಲಿ ಕಡೆದು ಅಗ್ನಿಯನ್ನು ಉತ್ಪತ್ತಿಮಾಡುವುದು ಯಜ್ಞಾದಿಗಳಲ್ಲಿ ರೂಢಿಯು. ಆದ್ದರಿಂದ ಅಗ್ನಿಯು ಓಷಧಿವನಸ್ಪತಿಗಳಲ್ಲಿ ಉತ್ಪನ್ನನಾಗುವನೆಂದು ಹೇಳಿದೆ ಈರೀತಿ ಉದಕಗಳಿಂದ ವನಸ್ಪತಿ (ವೃಕ್ಷ)ಯೂ ವನಸ್ಪತಿಯಿಂದ ಅಗ್ನಿಯೂ ಉತ್ಪನ್ನವಾಗುವುದರಿಂದ ಅಗ್ನಿಯು ಉದಕಗಳಿಗೆ ಪೌತ್ರ ಅಥವಾ ಮೊಮ್ಮಗನೆಂದಾಯಿತು ಋಗ್ವೇದದಲ್ಲಿ ಆಪಾಂನಪಾತ್ ಎಂಬುದು ಅಗ್ನಿಯ ರೂಪನಿಶೇಷವೆಂದು ಹೇಳಲ್ಪಡುವ ಒಂದು ಪ್ರತ್ಯೇಕದೇವತೆಯೆಂದೇ ಪರಿಗಣಿಸಲ್ಪಟ್ಟಿರುವುದು

ಈ ದೇವತೆಯ ವಿಷಯವಾದ ಒಂದು ಪ್ರತ್ಯೇಕಸೂಕ್ತವೂ (೨-೩೫) ಪ್ರತ್ಯೇಕ ಎರಡು ಋಕ್ಕುಗಳೂ (ಋ. ಸಂ. ೧೦-೩೦-೩, ೪) ಋಗ್ವೇದದಲ್ಲಿವೆ. ಸುಮಾರು ಮೂವತ್ತುಸಲ ಈ ದೇವತೆಯ ಹೆಸರು ಪಠಿತವಾಗಿದೆ

ಈ ದೇವತೆಯ ವಿಷಯವಾಗಿ ಕೆಲವು ವಿಷಯಗಳನ್ನು ತಿಳಿಸುವುದು ಅವಶ್ಯಕವಾಗಿದೆ ತೇಜಸ್ವಿಯಾದ ಆಪಾಂನಪಾದ್ದೇವತೆಯ ಸುತ್ತಲೂ ನೀರು ನಿಂತಿತ್ತು ಯುವಕನಾದ ಇವನನ್ನು ನೀರು ಸುತ್ತಗಟ್ಟಿರುತ್ತದೆ ಕ್ರೀಡ್ಯನಾದ ಇವನಿಗೆ ಮೂವರು ದೇವತಾಸ್ತ್ರೀಯರು ಆಹಾರವನ್ನು ಕೊಡಲೆಬ್ಬಿಸುತ್ತಾರೆ ಆ ಮಾತೃಗಳ ಸ್ತನ್ಯವನ್ನು ಅವನು ಪಾನಮಾಡುತ್ತಾನೆ. (೨-೩೫-೩, ೫) ವೃಷಭರೂಪನಾದ ಅವನು ಅವರಲ್ಲಿ ಗರ್ಭವನ್ನು ಸ್ಥಾಪಿಸಿದನು ಶಿಶುರೂಪನಾದ ಅವನು ಅವರ ಸ್ತನ್ಯಪಾನಮಾಡುತ್ತಾನೆ ಅವರು ಅವನನ್ನು ಚುಂಬಿಸುತ್ತಾರೆ ಇವನು ನೀರಿನಲ್ಲಿಯೇ ಕ್ರಮವರ್ಧಮಾನನಾಗಿ ಪ್ರಕಾಶಿಸುತ್ತಾನೆ ಕಾಷ್ಠಾದಿ(ಸೌದೆ)ಗಳ ಸಹಾಯವಿಲ್ಲದೆ ನೀರಿನಲ್ಲಿ ಪ್ರಜ್ವಲಿಸುತ್ತಾನೆ (೧೦-೩೦-೪) ಮಿಂಚಿನ್ನೇ ತನ್ನ ವಸ್ತ್ರವನ್ನಾಗಿ ಧರಿಸುತ್ತಾನೆ. ವೇಗವಾಗಿ ಪ್ರವಹಿಸುವ ಸುವರ್ಣವರ್ಣದ ನೀರು ಅವನನ್ನು ವಹಿಸಿ ಚಕ್ರಾಕಾರವಾಗಿ ತಿರುಗತ್ತದೆ. (೧-೯೫-೪, ೫) ಇವನ ಶರೀರವು ಸ್ವರ್ಣದಕಾಂತಿಯಿಂದ ಬೆಳಗುತ್ತದೆ ಸ್ವರ್ಣಗರ್ಭದಿಂದ ಜನಿಸಿ ಇವನು ತನ್ನನ್ನು ಪೂಜಿಸುವವರಿಗೆ ಆಹಾರವನ್ನನುಗ್ರಹಿಸುತ್ತಾನೆ ಅತ್ಯುನ್ನತಪ್ರದೇಶದಲ್ಲಿದ್ದು ಕಳೆಗುಂದದಂತೆ ಪ್ರಕಾಶಿಸುತ್ತಾನೆ. ವೇಗವಾಗಿ ಹರಿಯುವ ಉದಕಗಳು ತಮ್ಮ ಪುತ್ರನ ಆಹಾರಕ್ಕಾಗಿ ಘೃತವನ್ನು ತೆಗೆದುಕೊಂಡುಬಂದು ವಸ್ತ್ರಗಳನ್ನು ಧರಿಸಿ ಸುತ್ತಲೂ ಹರಿಯುತ್ತವೆ. ಇವನ ಮುಖವು ಬಂಗಾರದ ವರ್ಣದ್ದು ಇದನ್ನು ಕನ್ಯೆಯರು ಬೆಳಗುವಂತೆ ಮಾಡುತ್ತಾರೆ. ಇವನಿಗೆ ತುಪ್ಪವೇ ಆಹಾರ. ಯಾರ ಗಮನಕ್ಕೂ ಬಾರದ ರೀತಿಯಲ್ಲಿ ಅಭಿವೃದ್ಧಿಹೊಂದುತ್ತಾನೆ. ಅವನ ಮನೆಯಲ್ಲಿ ಒಳ್ಳೆಯಹಾಲನ್ನು ಕರೆಯುವ ಗೋವು ಒಂದಿದೆ. ಮನೋವೇಗವುಳ್ಳ

ಅಶ್ವಗಳು ಇವನನ್ನು ವಹಿಸುತ್ತವೆ. ಇವನಿಗೂ ನದಿಗಳಿಗೂ ಸಂಬಂಧವಿದೆ. ಇವನೇ ಎಲ್ಲಾ ಪ್ರಾಣಿಗಳನ್ನೂ ಜನಿಸುವಂತೆ ಮಾಡಿದವನು. ಆ ಪ್ರಾಣಿಗಳೆಲ್ಲವೂ ಅವನ ಅಂಶಗಳು. ಈ ದೇವತಾತತ್ವವಾದ ಸೂಕ್ತದ ಕೊನೆಯ ಋಕ್ಕಿನಲ್ಲಿ ಇವನೇ ಅಗ್ನಿಯೆಂದು ಹೇಳಿದೆ ಅನೇಕ ಅಗ್ನಿದೇವತಾತತ್ವವಾದ ಸೂಕ್ತಗಳಲ್ಲಿಯೂ ಅಗ್ನಿಯನ್ನು ಅಪಾಂನಪಾತ್ ಎಂದು ಕರೆದಿದೆ (ವಾ ಸಂ. ೮-೨೪)

ಅಪಾಂನಪಾದ್ದೇವತೆಯ ಹೆಸರು ಅನೇಕ ದೇವತೆಗಳ ಜತೆಯಲ್ಲಿ ಪರಿತವಾಗಿದೆ ಆಳವಿಷ್ಟಾತ್ (೭-೫೧-೬, ೭-೫೫-೧೨) ಅಹಿರ್ಬುಧ್ನ್ಯ (೧-೧೮೬-೫, ೨-೩೧-೬, ೭-೫೫-೧೩) ಸವಿತೃ (೨ ೫೧ ೬, ೬-೫೦ ೧೩) ಎಂಬ ದೇವತೆಗಳೊಡನೆ ಸ್ತುತನಾಗಿದಾನೆ. ಸವಿತೃವೂ ಅಗ್ನಿಯ ಒಂದು ರೂಪವೀಕವಾದ್ದರಿಂದ ಆ ಸವಿತೃವನ್ನೂ ಒಂದುಕಡೆ (೧ ೨೨-೬) ಅಪಾಂನಪಾತ್ ಶಬ್ದದಿಂದ ಕರೆಯಲಾಗಿದೆ ಒಂಗಾಲು ಒನ್ನದವನೂ, ಹಿಂಜನ ಉಟ್ಟವನೂ ಳೆಯವನೂ, ತತ್ಕ್ಷಣ ಪ್ರದೇಶದಲ್ಲಿ ವಾಸಿಸುವವನೂ, ಗುಹ್ಯಪ್ರದೇಶದಲ್ಲಿ ಜಳೆಯ ವರ್ಧನ, ರಚ್ಚಾ ಸ್ತ್ರಕಾರವನೂ ಸೀ ನ ಗುರ್ಗ, ಭೂಮಿಗ ಇಳಿದುಬರುವವನೂ, ಅಗ್ನಿಗ ಸನುಸಂದ ಎಗಲಿ-ಪ್ಪಿಟ್ಟ ನವರ ಅಪಾಂನಪಾದ್ದೇವತೆಯು ಮೇಘಗಳಲ್ಲಿ ಅದಗಿರುವ ಮಿಂಚಿನರೂಪನಾದ ಅಗ್ನಿಯೇ ಇ ಒಹುದು ಅಗ್ನಿಯು ಅಪಾಂನಪಾತ್ ಎಂದೂ ನೀರಿನ ಗರ್ಭವೆಂದೂ (ಅಪಾಂ ಗರ್ಭಃ) ಕರೆಯಲ್ಪಟ್ಟಿದಾನೆ (೬ ೯-೩, ೧೦ ೬೦ ೩) ಆ ರೂಪದಲ್ಲಿಯೇ ಮನುಷ್ಯರ ಗೃಹಗಳಲ್ಲಿ ಸ್ಥಾಪಿತನಾಗಿದಾನೆ (೩-೫-೩) ನೀರಿನಲ್ಲಿಯೇ ಅವನ ವಾಸ (೬-೪೯-೯) ಸಸ್ಯಗಳಲ್ಲಿ ನೀರಿನ ಗರ್ಭರೂಪನಾದ ಅಗ್ನಿಯು ಆಣಿಗಳಿಂದ ಉತ್ಪನ್ನನಾಗುತ್ತಾನೆ (೩ ೯-೧೩) ಆಗ ಅಗ್ನಿಃ ಸೂನುಂ ಸರ್ಸತಪುತ್ರನೆಂದು (೧೦ ೨೦-೭) ಹೇಳಿರುವುದರಿಂದ ಸರ್ಸತಿಯಿಂದ ಪೇಳಲ್ಪಟ್ಟಿರುವ ವಿದ್ಯುತ್ತೇ ಸರ್ಸತಪುತ್ರನಿರಬೇಕು ಅಗ್ನಿಯ ತೃತೀಯರೂಪವು, ನೀರಿನಲ್ಲಿ, ಸಾಗರದಲ್ಲಿ, ಅಕಾಶದ ಸ್ತನದಲ್ಲಿ, ಅಥವಾ ನೀರಿನ ಮಡಲಿನಲ್ಲಿ ಪ್ರಜ್ವಲಿತವಾಗುತ್ತದೆ (೧೦-೪೫-೧, ೨, ೩) ಎಂಬ ವರ್ಣನೆಗಳಿಂದ ಇಲ್ಲಿಲ್ಲಾ ಅಪಾಂನಪಾತ್ ದೇವತೆಯೇ ಸಿದ್ಧಿಸ್ಪವಾಗಿರಬೇಕು. ಈ ದೇವತೆಯು ನೀರಿನ ದೇವತೆ, ನೀರಿನಲ್ಲಿ ಹುಟ್ಟಿದ ಅಗ್ನಿ, ಸೂರ್ಯ, ವಿದ್ಯುತ್ ಇವೇ ಮೊದಲಾಗಿ ನಾನಾರೀತಿಯ ಅಭಿಪ್ರಾಯಕ್ಕೆ ಎಡೆಗೊಟ್ಟಿವೆ.

ಸಂಹಿತಾಪಾಠಃ

ಶತಪವಿತ್ರಾಃ ಸ್ವಧಯಾ ಮದಂತೀರ್ದೇವೀರ್ದೇವಾನಾಮಪಿ ಯಂತಿ ಪಾಥಃ।
ತಾ ಇಂದ್ರಸ್ಯ ನ ಮಿನಂತಿ ವ್ರತಾನಿ ಸಿಂಧುಭ್ಯೋ ಹವ್ಯಂ ಘೃತವಜ್ಜುಹೋತ ॥ ೪ ॥

ಪದಪಾಠಃ

ಶತಪವಿತ್ರಾಃ । ಸ್ವಧಯಾ । ಮದಂತೀಃ । ದೇವೀಃ । ದೇವಾನಾಂ । ಅಪಿ । ಯಂತಿ । ಪಾಥಃ ।
ತಾಃ । ಇಂದ್ರಸ್ಯ । ನ । ಮಿನಂತಿ । ವ್ರತಾನಿ । ಸಿಂಧುಭ್ಯಃ । ಹವ್ಯಂ । ಘೃತವತ್ । ಜುಹೋತ ॥ ೪ ॥

ಸಾಯಣಭಾಷ್ಯಂ

ಶತಪವಿತ್ರಾಃ ಶತಂ ಬಹೂನಿ ಪವಿತ್ರಾಣಿ ಪಾವನಾನಿ ರೂಪಾಣಿ ಯಾಸಾಂ ತಾಃ ಸ್ವಧಯಾ ಸ್ವ-ಕಾರ್ಯಭೂತೇನಾನ್ನೇನ ಮದಂತೀರ್ಜನಾನ್ಮಾದಯಂತ್ಯೋ ದೇವೀರ್ದೇವ್ಯೋ ದ್ಯೋತಮಾನಾ

ಆಪೋ ದೇವಾನಾಮಿಂದ್ರಾದೀನಾಂ ಪಾಥಃ ಸ್ಥಾನಮಪಿ ಯಂತಿ । ಪ್ರವಿಶಂತಿ । ತಾಸ್ತಾದೃಶ್ಯ ಆಪ ಇಂದ್ರಸ್ಯ ಪ್ರೀಣನಾನಿ ವೃತಾನಿ ಯಜ್ಞಾದೀನಿ ಕರ್ಮಾಣಿ ನ ಮಿನಂತಿ । ನ ಹಿಂಸಂತಿ ಉತ್ಪಾದಯಂತೀತ್ಯರ್ಥಃ । ಹೇ ಅಧ್ವರ್ಯವಃ ಯೂಯಂ ಸಿಂಧುಭ್ಯಸ್ತಾಭ್ಯೋಽದ್ಭ್ಯೋ ಹೃತವದುಪಸ್ತರಣಾಭಿಘಾರಣಲಕ್ಷಣಾಜ್ಯಯುಕ್ತಂ ಹವ್ಯಂ ಪುರೋಡಾಶಾದಿಕಂ ಹವಿರ್ಜುಹೋತ । ಜುಹುತ ॥

ಪ್ರತಿಪದಾರ್ಥ

ಶತಪವಿತ್ರಾಃ - ಅನೇಕ ವಿಧವಾದ ಶುದ್ಧಿಕಾರಕವಾದ ರೂಪವುಳ್ಳವೂ, । **ಸ್ವಧಯಾ** — ತಮ್ಮಿಂದಲೇ ಉತ್ಪನ್ನವಾದ ಅನ್ನದಿಂದ । **ಮದಂತೀಃ** — ಹರ್ಷವನ್ನು ಹೊಂದುವವೂ । **ದೇವೀಃ** — ಪ್ರಕಾಶಯುಕ್ತವೂ ಆದ ಉದಕಗಳು । **ದೇವಾನಾಂ** — ಇಂದ್ರಾದಿ ದೇವತೆಗಳ । **ಪಾಥಃ** — ಸ್ಥಾನವನ್ನು । **ಅಪಿ ಯಂತಿ** — ಪ್ರವೇಶಿಸುತ್ತವೆ । **ತಾಃ** — ಆದೇ ಉದಕಗಳು । **ಇಂದ್ರಸ್ಯ** — ಇಂದ್ರನಿಗೆ ತೃಪ್ತಿಕರವಾದ । **ವ್ರತಾನಿ** — ಯಜ್ಞಾದಿ ಕರ್ಮಗಳನ್ನು । **ನ ಮಿನಂತಿ** - ಹಿಂಸಿಸುವುದಿಲ್ಲ । (ಎಲೈ ಅಧ್ವರ್ಯುಗಳೇ) **ಸಿಂಧುಭ್ಯಃ** — ಪ್ರವಾಹಾತ್ಮಕಗಳಾದ ಆದೇ ಉದಕಗಳಿಗೆ । **ಘೃತವತ್** — ಆಜ್ಯಪೂರಿತವಾದ । **ಹವ್ಯಂ** — ಹವಿಸ್ಸನ್ನು । **ಜುಹೋತ** — ಆಹುತಿರೂಪದಲ್ಲಿ ಅರ್ಪಿಸಿರಿ.

ಭಾವಾರ್ಥ

ಶುದ್ಧಿಕಾರಕವಾದ ಅನೇಕರೂಪವುಳ್ಳವೂ, ತಮ್ಮಿಂದಲೇ ಉತ್ಪನ್ನವಾದ ಅನ್ನದಿಂದ ಹರ್ಷನನ್ನು ಹೊಂದುವವೂ, ಪ್ರಕಾಶಯುತವೂ ಆದ ಉದಕಗಳು ಇಂದ್ರಾದಿದೇವತೆಗಳ ಸ್ಥಾನವನ್ನು ಪ್ರವೇಶಿಸುತ್ತವೆ ಆದೇ ಉದಕಗಳು ಇಂದ್ರನಿಗೆ ತೃಪ್ತಿಕರವಾದ ಯಜ್ಞಾದಿಕರ್ಮಗಳನ್ನು ಹಿಂಸಿಸುವುದಿಲ್ಲ ಎಲೈ ಅಧ್ವರ್ಯುಗಳೇ, ಪ್ರವಾಹಾತ್ಮಕಗಳಾದ ಆದೇ ಉದಕಗಳಿಗೆ ಆಜ್ಯಪೂರಿತವಾದ ಹವಿಸ್ಸನ್ನು ಆಹುತಿರೂಪದಲ್ಲಿ ಅರ್ಪಿಸಿರಿ

English Translation

The divine Waters, the purifiers of many, gratifying men with food, pursue the paths of the gods they impede not the sacred rites of Indra: offer, (priests), the butter-charged oblation to the rivers.

ವಿಶೇಷವಿಷಯಗಳು

ಶತಪವಿತ್ರಾಃ — ಶತಂ ಬಹೂನಿ ಪವಿತ್ರಾಣಿ ಪಾವನಾನಿ ರೂಪಾಣಿ ಯಾಸಾಂ ತಾಃ ಬಹುವಿಧವಾದವೂ ಶುದ್ಧಿಕಾರಕವೂ ಆದ ರೂಪಗಳುಳ್ಳ ಉದಕಗಳು ಎಂದು ಭಾಷ್ಯಕಾರರ ವಿವರಣೆಯು. ಪವಿತ್ರಶಬ್ದಕ್ಕೆ ಅನೇಕಾರ್ಥಗಳಿರುವವು. ಅವುಗಳನ್ನು ಯಾಸ್ಕರು ಈರೀತಿ ವಿವರಿಸಿದಾರೆ—

ಪವಿತ್ರಂ । ಪವಿತ್ರಂ ಪುನಾತೇಃ । ಮಂತ್ರಃ ಪವಿತ್ರಮುಚ್ಯತೇ । ಯೇನ ದೇವಾಃ ಪವಿತ್ರೇಣಾತ್ಮಾನಂ ಪುನತೇ ಸದಾ ಇತ್ಯಪಿ ನಿಗಮೋ ಭವತಿ ॥

(ನಿ ೫-೬)

ಪವಿತ್ರಶಬ್ದವು ಶುದ್ಧಿಗೊಳಿಸು ಎಂಬರ್ಥವುಳ್ಳ ಪುನಾತಿಧಾತುವಿನಿಂದ ನಿಷ್ಪನ್ನವಾಗಿದೆ. ಮಂತ್ರವು ಪಠನಮಾಡುವವರನ್ನು ಶುದ್ಧಿಗೊಳಿಸುವುದರಿಂದ ಪವಿತ್ರವೆಂದರೆ ಮಂತ್ರವು ಎಂದರ್ಥವಾಗುವುದು. ಈ ವಿಷಯದಲ್ಲಿ—ಯೇನ ದೇವಾಃ ಪವಿತ್ರೇಣಾತ್ಮಾನಂ ಪುನತೇ ಸದಾ ಎಂಬ ಶ್ರುತಿವಾಕ್ಯವು ಉದಾಹರಣೆಯಾಗಿರುವುದು ಈ ವಾಕ್ಯದಲ್ಲಿ ಪವಿತ್ರೇಣ ಎಂದರೆ ಮಂತ್ರದಿಂದ ಎಂದರ್ಥವು. ಯಾವ ಮಂತ್ರಪಠನಸಾಮರ್ಥ್ಯದಿಂದ ದೇವತೆಗಳು ತಮ್ಮನ್ನು ಶುದ್ಧರನ್ನಾಗಿ ಮಾಡಿಕೊಳ್ಳುವರೋ ಅಂತಹ ಮಂತ್ರವು ಎಂದು ಈ ವಾಕ್ಯದ ಅಭಿಪ್ರಾಯವು.

ರಶ್ಮಯಃ ಪವಿತ್ರಮುಚ್ಯಂತೇ । ಗಭಸ್ತಿಪೂತೋ ನೃಭರದ್ರಿಭಿಃ ಸುತಃ । ಇತ್ಯಪಿ ನಿಗಮೌ ಭವತಃ ॥

ರಶ್ಮಿಗಳಿಗೂ ಪವಿತ್ರವೆಂದು ಹೆಸರು. ಈ ವಿಷಯದಲ್ಲಿ ಗಭಸ್ತಿಪೂತಃ ಇತ್ಯಾದಿ ಮೇಲೆ ಉಕ್ತವಾಗಿರುವ ಎರಡು ಶ್ರುತಿ ವಾಕ್ಯಗಳೂ ಉದಾಹರಣೆಯಾಗಿವೆ.

ಆಪಃ ಪವಿತ್ರಮುಚ್ಯಂತೇ । ಶತಪವಿತ್ರಾಃ ಸ್ವಧಯಾ ಮದಂತೀಃ । ಬಹೂದಕಾಃ
(ನಿ ೫-೬)

ಪವಿತ್ರಶಬ್ದಸ್ಯ ಉದಕಗಳು ಎಂದೂ ಅರ್ಥವಾಗುವುದು. ಶತಪವಿತ್ರಾಃ ಎಂಬ ಪ್ರಕೃತಋಕ್ಕಿನ ವಾಕ್ಯವೇ ಈ ವಿಷಯದಲ್ಲಿ ಶ್ರುತ್ಯುದಾಹರಣೆಯು. ಇಲ್ಲಿ ಶತಪವಿತ್ರಾಃ ಎಂದರೆ ಬಹಳವಾದ ಉದಕಗಳು ಎಂದರ್ಥವು.

ಅಗ್ನಿಃ ಪವಿತ್ರಮುಚ್ಯತೇ । ವಾಯುಃ ಪವಿತ್ರಮುಚ್ಯತೇ । ಸೋಮಃ ಪವಿತ್ರಮುಚ್ಯತೇ । ಸೂರ್ಯಃ ಪವಿತ್ರಮುಚ್ಯತೇ । ಇಂದ್ರಃ ಪವಿತ್ರಮುಚ್ಯತೇ । ಅಗ್ನಿಃ ಪವಿತ್ರಂ ಸ ಮಾ ಪುನಾತು ವಾಯುಃ ಸೋಮಃ ಸೂರ್ಯ ಇಂದ್ರಃ ಪವಿತ್ರಂ ತೇ ಮಾ ಪುನಂತು ಇತ್ಯಪಿ ನಿಗಮೌ ಭವತಿ ॥

ಶುದ್ಧಿಕಾರಕವಾದ ಯಾವ ವಸ್ತುವನ್ನಾಗಲಿ, ದೇವತೆಯನ್ನಾಗಲಿ ಪವಿತ್ರಶಬ್ದದಿಂದ ಕರೆಯುವುದು ರೂಢಿಯು. ಈ ಅರ್ಥದಲ್ಲಿ ಅಗ್ನಿ, ವಾಯು, ಸೋಮ, ಸೂರ್ಯ, ಇಂದ್ರ ಈ ದೇವತೆಗಳೂ ಪವಿತ್ರಶಬ್ದವಾಚ್ಯರು. ಈ ವಿಷಯದಲ್ಲಿ ಮೇಲೆ ಉದಾಹರಿಸಿದ ಶ್ರುತಿವಾಕ್ಯವೇ ಉದಾಹರಣೆಯಾಗಿದೆ.

ದೇವಾನಾಮಪಿ ಯಂತಿ ಪಾಥಃ— ಈ ಉದಕಗಳು ದೇವತೆಗಳ ಸಂಚಾರಮಾರ್ಗವನ್ನೂ ಎಂದರೆ ಅಂತರಿಕ್ಷವನ್ನು ಪ್ರವೇಶಿಸುತ್ತವೆ. ಉದಕಗಳು ಅಂತರಿಕ್ಷಕ್ಕೆ ಪ್ರವೇಶಿಸುವುದಂದರೇನು ಎಂಬ ವಿಷಯದಲ್ಲಿ ವಿವರಣೆಯು ಆವಶ್ಯಕವು. ಸೂರ್ಯನ ಪ್ರಚಂಡರಶ್ಮಿಗಳಿಂದ ತಪ್ತವಾದ ಸಮುದ್ರಾದಿಜಲಾಶಯಗಳು ಆವಿಯಾಗುವಿಕೆಯಿಂದ ವಾಯುಗಳಾಗಿ ಪರಿಣತವಾಗುತ್ತವೆ. ಈ ವೇಳೆಗಳಿಗೆ ಸ್ಥಾನವು ಅಂತರಿಕ್ಷವೇ ಆದಿದೆ. ಆದ್ದರಿಂದ ಉದಕಗಳು ಅಂತರಿಕ್ಷವನ್ನು ಪ್ರವೇಶಿಸಿದವು ಎಂದರೆ ಮೇಘರೂಪದಿಂದಿರುವ ಉದಕಗಳು ಅಂತರಿಕ್ಷವನ್ನು ವ್ಯಾಪಿಸಿರುತ್ತವೆ ಎಂದರ್ಥಪ್ರಾಯವು. ಇದೇ ವಿಷಯವು ಮುಂದಿನ ಋಕ್ಕಿನ **ಯಾಃ ಸೂರ್ಯಃ ರಶ್ಮಿಭಿಃ ತತಾನ** ಎಂಬ ವಾಕ್ಯದಿಂದ ಸಮರ್ಥಿಸಲ್ಪಟ್ಟಿರುವುದು.

ಸಂಹಿತಾಪಾಠಃ

ಯಾಃ ಸೂರ್ಯೋ ರಶ್ಮಿಭಿರಾತತಾನ ಯಾಭ್ಯ ಇಂದ್ರೋ ಅರದದ್ಗಾತು-ಮೂರ್ಮಿಂ ।
ತೇ ಸಿಂಧವೋ ವರಿವೋ ಧಾತನಾ ನೋ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥ ೪ ॥

ಪದಪಾಠಃ

ಯಾಃ । ಸೂರ್ಯಃ । ರಶ್ಮಿಭಿಃ । ಆತತಾನ । ಯಾಭ್ಯಃ । ಇಂದ್ರಃ । ಅರದತ್ । ಗಾತುಂ । ಊರ್ಮಿಂ ।
ತೇ । ಸಿಂಧವಃ । ವರಿವಃ । ಧಾತನ । ನಃ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥ ೪ ॥

ಸಾಯಣಭಾಷ್ಯಂ

ಸೂರ್ಯೋ ದೇವೋ ಯಾ ಆಪೋ ರಶ್ಮಿಭಿಃ ಸ್ವಕೀಯೈಃ ಕಿರಣೈರಾತತಾನ ವಿಸ್ತಾರಯತಿ । ಸೂರ್ಯೋ ಹಿ ರಶ್ಮಿಭಿರುದಕಸಾರಮಾದಾಯ ವರ್ಷತೀತ್ಯರ್ಥಃ । ಯಾಭ್ಯೋಽದ್ಭ್ಯಶ್ಚೋರ್ಮಿಂ ॥ ಅರ್ತೇರಿದಂ ರೂಪಂ ॥ ಗಮನಯೋಗ್ಯಂ ಗಾತುಂ ಮೇಘೇಭ್ಯೋ ನಿರ್ಗಮನಸಾಧನಂ ಮಾರ್ಗಮಿಂದ್ರೋ ಹ್ಯರದತ್ ವಜ್ರೇಣ ಮೇಘಾಂಸ್ತಾಡಯನ್ಪ್ರಯಚ್ಛತಿ ಹೇ ಸಿಂಧವ ಆಪಃ ತೇ ಯೂಯಂ ನೋ ಸ್ಮಭ್ಯಂ ವರಿವೋ ಧನಂ ಧಾತನ ಧತ್ತ । ಪ್ರಯಚ್ಛತ ॥ ತ ಇತಿ ಸಿಂಧುಶಬ್ದೇನ ಸಮಾನಾಧಿಕರಣತ್ವಾತ್ತಲ್ಲಿಂಗತ್ವಂ ॥ ಹೇ ಆಪ್ಯೇವತಾಃ ಯೂಯಂ ಸರ್ವದಾ ನೋಽಸ್ಮಾನ್ಕಲ್ಯಾಣೈಃ ಪಾಲಯತ ॥

ಪ್ರತಿಪದಾರ್ಥ

ಸಿಂಧವಃ—ಪ್ರವಾಹಾತ್ಮಕಗಳಾದ । **ಯಾಃ**—ಯಾವ ನಿಮ್ಮನ್ನು । **ಸೂರ್ಯಃ**—ಸೂರ್ಯನು । **ರಶ್ಮಿಭಿಃ**—ತನ್ನ ಕಿರಣಗಳಂದ । **ಆತತಾನ**—ವಿಸ್ತರಿಸುವಂತೆ ಮಾಡಿದನೋ । **ಯಾಭ್ಯಃ**—ಯಾವ ನಿಮ್ಮ ಮೂಲಕ । **ಇಂದ್ರಃ**—ಇಂದ್ರನು । **ಊರ್ಮಿಂ**—ಗಮನಸಾಧನವಾದುದೂ, । **ಗಾತುಂ**—ಮೇಘಗಳಿಗೆ ಸಂಚಾರಯೋಗ್ಯವಾದ ವಾದುದೂ ಆದ ಮಾರ್ಗವನ್ನು । **ಅರದತ್**—(ವಜ್ರದ ಸಹಾಯದಿಂದ) ನಿರ್ಮಿಸಿದನೋ । **ತೇ**—ಅಂತಹ ನೀವು । **ನಃ**—ನನಗೆ । **ವರಿವಃ**—ಧನವನ್ನು । **ಧಾತನ**—ಕೂಡಿರಿ । (ಎಲೈ ದೇವತೆಗಳೇ) **ಯೂಯಂ**—ನೀವು । **ನಃ**—ನಮ್ಮನ್ನು । **ಸದಾ**—ಯಾವಾಗಲೂ । **ಸ್ವಸ್ತಿಭಿಃ**—ಕಲ್ಯಾಣಗಳಂದ । **ಪಾತ**—ರಕ್ಷಿಸಿರಿ

ಭಾವಾರ್ಥ

ಪ್ರವಾಹಾತ್ಮಕಗಳಾದ ಎಲೈ ಉದಕಗಳೇ, ಯಾವ ನಿಮ್ಮನ್ನು ಸೂರ್ಯನು ತನ್ನ ಕಿರಣಗಳಂದ ವಿಸ್ತರಿಸುವಂತೆ ಮಾಡಿದನೋ, ಯಾವ ನಿಮ್ಮ ಮೂಲಕ ಇಂದ್ರನು ಗಮನಸಾಧನವಾದುದೂ, ಮೇಘಗಳಿಗೆ ಸಂಚಾರಯೋಗ್ಯವಾದುದೂ ಆದ ಮಾರ್ಗವನ್ನು ವಜ್ರದ ಸಹಾಯದಿಂದ ನಿರ್ಮಿಸಿದನೋ ಅಂತಹ ನೀವು ನನಗೆ ಧನವನ್ನು ಕೂಡಿರಿ. ಎಲೈ ದೇವತೆಗಳೇ, ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ.

English Translation

Waters, whom the sun has evaporized by his rays, for whom Indra has opened a path by which to issue, bestow upon us wealth, and do you (also) ever cherish us with blessings.

———

ನಲವತ್ತೆಂಟನೆಯ ಸೂಕ್ತವು

ಸಾಯಣಭಾಷ್ಯಂ

ಋಭುಕ್ಷಣ ಇತಿ ಚತುರ್ಯರ್ಚಂ ಪಂಚದಶಂ ಸೂಕ್ತಂ ವಸಿಷ್ಠಸ್ಯಾರ್ಷಂ ತ್ರೈಷ್ಟುಭಮೃಭುದೇವತಾಕಂ । ಆಂತ್ಯಯಾ ವಿಕಲ್ಪೇನ ವಿಶ್ವೇ ದೇವಾ ದೇವತಾ । ತಥಾ ಚಾನುಕ್ರಾಂತಂ । ಋಭುಕ್ಷಣ ಆರ್ಭವಮಂತ್ಯಾ ವೈಶ್ವದೇವೀ ವೇತಿ ॥ ದಶಮೇಽಹನಿ ವೈಶ್ವದೇವಶಸ್ತ್ರ ಆರ್ಭವನಿವಿದ್ಧಾನಂ । ಸೂತ್ರ್ಯತೇ ಹಿ । ಋಭುಕ್ಷಣ ಇತ್ಯಾರ್ಭವಂ । ಆ. ೪ ೧೨ ॥ ಇತಿ ॥

ಅನುವಾದವು—**ಋಭುಕ್ಷಣಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹದಿನೈದನಯ ಸೂಕ್ತವು ಇದರಲ್ಲಿ ನಾಲ್ಕು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಸಿಷ್ಠನು ಋಷಿಯು; ಋಭವರು ದೇವತೆಯು, ಕೊನೆಯ ಋಕ್ಕಿಗ ಋಭುಗಳು ಆದವಾ ವಿಶ್ವೇದೇವತೆಗಳು ಛಂದಸ್ಸಾಗಿ ಗಾಯತ್ರಿಯಲ್ಲಿ **ಋಭುಕ್ಷಣ ಆರ್ಭವ ಮಂತ್ಯಾ ವೈಶ್ವದೇವೀ ವಾ** ಎಂದು ನಿರೂಪಿಸಿರುವದು ಅರಾಗದ ದೇವತೆಯ ದಿನ ಸೌರ್ಯೇಷ್ಟಿಪ್ರಯೋಗಕರನ ಮಾಡುವಾಗ ಈ ಸೂಕ್ತವನ್ನು ಋಗ್ವಿದೇವತಾಕವಾಗಿ ವಿನಿಯೋಗಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಋಭುಕ್ಷಣ ಇತ್ಯಾರ್ಭವಂ** (ಆ ೪-೧೫) ವಿವೃತವಾಗಿರುವುದು

ಸೂಕ್ತ—೪೮

ಮಂಡಲ—೭ ॥ ಅನುವಾಕ—೩ ॥ ಸೂಕ್ತ—೪೮ ॥
ಆರ್ಷೇಯ—ವಸಿಷ್ಠಃ ॥ ದೇವತಾ—ಋಭವಃ ॥
ಸೂಕ್ತವಲ್ಲಿನವ ಋಕ್ಸಂಖ್ಯೆ—೪ ॥
ಋಷಿಃ—ವಸಿಷ್ಠಃ ॥
ದೇವತಾ—೧-೩ ಋಭವಃ । ೪ ಋಭವೋ ವಿಶ್ವೇದೇವಾಶ್ಚ ॥
ಛಂದಃ—೧ ಸ್ವರಾಟ್ ॥

ಸಂಹಿತಾಪಾಠಃ

ಋಭುಕ್ಷಣೋ ವಾಜಾ ಮಾದಯಧ್ವಮಸ್ಮೇ ನರೋ ಮಘವಾನಃ ಸುತಸ್ಯ ।
ಆ ವೋಽರ್ವಾಚಃ ಕ್ರತವೋ ನ ಯಾತಾಂ ವಿಭ್ವೋ ರಥಂ ನರ್ಯಂ ವರ್ತಯಂತು ॥ ೧ ॥

ಪದಪಾಠಃ

ಋಭುಕ್ಷಣಃ । ವಾಜಾಃ । ಮಾದಯಧ್ವಂ । ಅಸ್ಮೇ ಇತಿ । ನರಃ । ಮಘವಾನಃ । ಸುತಸ್ಯ ।
ಆ । ವಃ । ಅರ್ವಾಚಃ । ಕ್ರತವಃ । ನ । ಯಾತಾಂ । ವಿಭ್ವಃ । ರಥಂ । ನರ್ಯಂ । ವರ್ತಯಂತು ॥ ೧ ॥

ಸಾಯಣಭಾಷ್ಯಂ

ಋಭುಕ್ಷೇತ್ಯೃಭೂಣಾಂ ಜ್ಯೇಷ್ಠಸ್ಯಾಖ್ಯಾ ವಾಜ ಇತಿ ತು ಕನಿಷ್ಠಸ್ಯ । ಅತ್ರರ್ಭುಕ್ಷಣೋ ವಾಜಾ ಇತಿ ಬಹುವಚನೇನರ್ಭವಸ್ತ್ರಯೋ ಗೃಹ್ಯಂತೇ । ಹೇ ಋಭುಕ್ಷಣೋ ವಾಜಾ ನರೋ ನೇತಾರೋ ಮಘವಾನೋ ಧನವಂತ ಏವಂಭೂತಾ ಹೇ ಋಭವಃ ಯೂಯಮಸ್ಮೇ ಅಸ್ಮಾಸು ಸ್ಥಿತೇನ ಸುತಸ್ಯಾಭಿಷುತೇನ ಸೋಮೇನ ಮಾದಯಧ್ವಂ । ತೃಪ್ತಾ ಭವತ । ನೇತಿ ಸಂಪ್ರತ್ಯರ್ಥೇ ಇದಾನೀಂ ಯಾತಾಂ ಗಚ್ಛತಾಂ ವೋ ಯುಷ್ಮದೀಯಾಃ ಕ್ರತವಃ ಕರ್ಮಣಾಂ ಕರ್ತಾರೋ ವಿಭ್ವೋ ವಿಭವಃ ಸಮರ್ಥಾ ಅಶ್ವಾ ಆರ್ವಾಚೋಽರ್ವಾಂಚೋಽಸ್ಮದಭಿಮುಖಾ ನರ್ಯಂ ಮನುಷ್ಯಹಿತಂ ರಥಂ ಯುಷ್ಮದೀಯಮಾ ವರ್ತಯಂತು । ಆಗಮಯಂತು ॥

ಪ್ರತಿಪದಾರ್ಥ

ವಾಜಾಃ—ಅನ್ನವಂತರಾದ । **ಋಭುಕ್ಷಣಃ**—ಎಲೈ ಋಭುಗಳೇ, । **ನರಃ**—ಕರ್ಮನೇತೃಗಳೂ । **ಮಘವಾನಃ**—ಧನವಂತರೂ ಆದ ನೀವು । **ಅಸ್ಮೇ**—ನಮ್ಮಲ್ಲಿರುವುದೂ । **ಸುತಸ್ಯ**—ಹಿಂಡಿರುವುದೂ ಆದ ಸೋಮಪಾನ

ದಿಂದ । **ಮಾದಯಧ್ವಂ**—ತೃಪ್ತಿಯನ್ನು ಹೊಂದಿರಿ । **ನ**—ಈಗ । **ಯಾತಾಂ**—ಸಂಚರಿಸತಕ್ಕ । **ವಃ**—ನಿಮ್ಮ । **ಋತವಃ**—ಕರ್ಮಸಾಧಕಗಳೂ । **ವಿಭ್ವಃ**—ಸಾಮರ್ಥ್ಯವುಳ್ಳವೂ ಆದ ಅಶ್ವಗಳು । **ಆರ್ವಾಚಃ**—ನಮಗಭಿಮುಖವಾಗಿದ್ದು । **ನರ್ಯಂ**—ಮಾನವರಿಗೆ ಹಿತಕರವಾದ । **ರಥಂ**—ನಿಮ್ಮ ರಥವನ್ನು । **ಆ ವರ್ತಯಂತು**—ನಮ್ಮ ಕಡೆಗೆ ಬರುವಂತೆ ಮಾಡಲಿ.

ಭಾವಾರ್ಥ

ಅನ್ನವಂತರಾದ ಎಲೈ ಋಭುಗಳೇ, ಕರ್ಮನೇತೃಗಳೂ, ಧನವಂತರೂ ಆದ ನೀವು ನಮ್ಮಲ್ಲಿರುವುದೂ, ಹಿಂಡಿರುವುದೂ ಆದ ಸೋಮಪಾನದಿಂದ ತೃಪ್ತಿಯನ್ನು ಹೊಂದಿರಿ. ಈಗ ಸಂಚರಿಸತಕ್ಕ ನಿಮ್ಮ ಕರ್ಮಸಾಧಕಗಳೂ, ಸಾಮರ್ಥ್ಯವುಳ್ಳವೂ ಆದ ಅಶ್ವಗಳು ನಮಗಭಿಮುಖವಾಗಿದ್ದು ಮಾನವರಿಗೆ ಹಿತಕರವಾದ ನಿಮ್ಮ ರಥವನ್ನು ನಮ್ಮ ಕಡೆಗೆ ಬರುವಂತೆ ಮಾಡಲಿ

English Translation

Ribhu, (Vibhu), and Vaja, leaders of rites, possessors of opulence, be exhilarated by our effused (libation) may your active and powerful (horses) bring to our presence your chariot, beneficial to mankind

ವಿಶೇಷವಿಷಯಗಳು

ಈ ಸೂಕ್ತದಲ್ಲಿ ಋಭುಗಳೆಂಬ ದೇವತೆಗಳನ್ನು ಸ್ತುತಿಸಲಾಗಿದೆ. ಈ ಋಭುಗಳ ವಿಷಯವನ್ನು ನಾವು ಹಿಂದೆ ಅನೇಕಾವರ್ತಿ ವಿವರಿಸಿದೇವೆ. ಸುಧನ್ವಾ ಎಂಬ ಋಷಿಯ ಪುತ್ರರಾದ ಋಭು, ವಿಭು, ವಾಜ ಎಂಬ ಮೂರುಮಂದಿಯು ತಮ್ಮ ಸತ್ಕರ್ಮಾಚರಣೆಯಿಂದ, ದೇವತೆಗಳಿಗೆ ಸಹಾಯ ಮಾಡಿದುದರಿಂದಲೂ ದೇವತ್ವವನ್ನು ಪಡೆದರೆಂದು ಪ್ರಸಿದ್ಧಿಯಾಗಿದೆ. ಇವರು ತ್ವಷ್ಟೃವಿಗೆ ಶಿಷ್ಯರು ಮತ್ತು ಕುಶಲಕಲಾಕರ್ಮಗಳಲ್ಲಿ ಪ್ರವೀಣರು ಇಂದ್ರನಿಗೆ ವಜ್ರಾಯುಧವನ್ನೂ ಅಶ್ವಿನೀದೇವತೆಗಳಿಗೆ ರಥವನ್ನು ಮಾಡಿಕೊಟ್ಟರೆಂದು ಅಲ್ಲಲ್ಲಿ ಹೇಳಿದೆ. ಒಂದಾಗಿದ್ದ ಚಮಸಪಾತ್ರೆಯನ್ನು ನಾಲ್ಕಾಗುವಂತೆ ಮಾಡಿದರೆಂದೂ, ವೃದ್ಧರಾಗಿದ್ದ ತಮ್ಮ ತಂದೆತಾಯಿಗಳನ್ನು ಯುವಕರನ್ನಾಗಿ ಮಾಡಿದರೆಂದೂ ಇವರ ಕಲಾನೈಪುಣ್ಯದ ವಿವರಣೆ ಇದೆ ಇವರ ವಿಷಯವಾದ ವಿವರಣೆಗಳಿಗಾಗಿ ಋ ಭಾಗ 3 ಪುಟ 4 ಮತ್ತು 3-16; 5-658, 8-666, 8-671, 8-693, 8-699, 8-704 ಈ ಪುಟಗಳನ್ನು ನೋಡಿ.

ಸಂಹಿತಾಪಾಠಃ

ಋಭುರ್ಭುಭಿರಭಿ ವಃ ಸ್ಯಾಮ ವಿಭ್ವೋ ವಿಭುಭಿಃ ಶವಸಾ ಶವಾಂಸಿ ।
ವಾಜೋ ಅಸ್ಮಾ ಅವತು ವಾಜಸಾತಾವಿಂದ್ರೇಣ ಯುಜಾ ತರುಷೇಮ ವೃತ್ರಂ ॥ ೨ ॥

ಪದಪಾಠಃ

ಋಭುಃ । ಋಭುಭಿಃ । ಅಭಿ । ವಃ । ಸ್ಯಾಮ । ವಿಭ್ವಃ । ವಿಭುಭಿಃ । ಶವಸಾ । ಶವಾಂಸಿ ।
ವಾಜಃ । ಅಸ್ಮಾನ್ । ಅವತು । ವಾಜಸಾತೌ । ಇಂದ್ರೇಣ । ಯುಜಾ । ತರುಷೇಮ । ವೃತ್ರಂ ॥ ೨ ॥

ಸಾಯಣಭಾಷ್ಯಂ

ಹೇ ಋಭವಃ ಋಭುಭಿರ್ಯುಷ್ಮಾಭಿರ್ವಯಮ್ಯುಜಃ । ಯುಕ್ತಾನ್ಕರೋತೀತ್ಯೃಭವಃ । ಸಂತೋ ವಿಭುಭಿರ್ಯುಷ್ಮಾಭಿರ್ವಿಭ್ವೋ ವಿಭವಶ್ಚ ಸಂತಃ ಶವಂಸಿ ಶತ್ರೂಣಾಂ ಬಲಾನಿ ಶವಸಾ ಯುಷ್ಮದೀಯೇನ ಬಲೇನಾಭಿ ಷ್ಯಾಮ । ಅಭಿಭವೇಮ । ತಥಾ ವಾಜಸಾತೌ ಸಂಗ್ರಾಮೇ ವಾಜ ಏತತ್ಸಂಜ್ಞಕ ಋಭುರಸ್ಮಾನವತು । ಪಾಲಯತು । ಅಪಿ ಚ ಯುಜಾ ಸಹಾಯಭೂತೇನೇಂದ್ರೇಣ ವೃತ್ರಂ ಶತ್ರುಂ ವಯಂ ತರುಷೇಮ । ಹನಾಮ । ಪ್ರಾಯೇಣಭರ್ಗೋಽಸೀಂದ್ರೇಣ ಸಹ ಸ್ತೂಯಂತ ಇತಿ ॥

ಪ್ರತಿಪದಾರ್ಥ

(ಎಲ್ಲೆ ಋಭುಗಳೇ) **ವಃ ಋಭುಭಿಃ**—ಪ್ರಕಾಶಮಾನರಾದ ನಿಮ್ಮೊಡನೆ ಸೇರಿ । **ಋಭುಃ**—ವಿಸ್ತೃತವಾದ ಪ್ರಕಾಶವುಳ್ಳವನಾಗಿಯೂ । **ವಿಭುಭಿಃ**—ಸಂಪದ್ಯುಕ್ತರಾದ ನಿಮ್ಮೊಡನೆ ಸೇರಿ । **ವಿಭ್ವಃ**—ಸಂಪದ್ಭರಿತವಾಗಿಯೂ ಕೂಡಿದವನಾಗಿಯೂ । **ಶವಾಂಸಿ**—ಶತ್ರುಗಳ ಬಲಗಳನ್ನು । **ಶವಸಾ**—ನಮ್ಮ ಬಲದಿಂದ । **ಅಭಿ ಷ್ಯಾಮ**—(ನಾವು) ಗೆಲ್ಲುವಂತಾಗಲಿ । **ವಾಜಸಾತೌ**—ಯುದ್ಧದಲ್ಲಿ । **ವಾಜಃ**—ನಿಮ್ಮನಾಮಕವಾದ ವಾಜವು । **ಅಸ್ಮಾನ್**—ನಮ್ಮನ್ನು । **ಅವತು**—ರಕ್ಷಿಸಲಿ । **ಯುಜಾ**—ಸಂಗಡ ಸಹಾಯಭೂತನಾದ । **ಇಂದ್ರೇಣ**—ಇಂದ್ರನೊಡಗೂಡಿ । **ವೃತ್ರಂ**—ಸಿರೋಧಕನಾದ ಶತ್ರುವನ್ನು । **ತರುಷೇಮ**—ನಾವು ಗೆಲ್ಲುವಂತಾಗಲಿ

ಸಾರಾರ್ಥ

ಎಲ್ಲೆ ಋಭುಗಳೇ, ಪ್ರಕಾಶಮಾನರಾದ ನಿಮ್ಮೊಡನೆ ಸೇರಿ ವಿಸ್ತೃತವಾದ ಪ್ರಕಾಶವುಳ್ಳವನಾಗಿಯೂ, ಸಂಪದ್ಯುಕ್ತರಾದ ನಿಮ್ಮೊಡನೆ ಸೇರಿ ಸಂಪದ್ಭರಿತವಾಗಿಯೂ ಕೂಡಿದವನಾಗಿಯೂ ಶತ್ರುಗಳ ಬಲಗಳನ್ನು ನಮ್ಮ ಬಲದಿಂದ ನಾವು ಗೆಲ್ಲುವಂತಾಗಲಿ. ನಿಮ್ಮಲ್ಲಿ ಪ್ರಭಾವಶಾಲಿಯಾದ ವಾಜನು ನಮ್ಮನ್ನು ರಕ್ಷಿಸಲಿ. ನಮಗೆ ಸಹಾಯಕನಾಗಿರುವ ಇಂದ್ರನೊಡಗೂಡಿ ಸಿರೋಧಕನಾದ ಶತ್ರುವನ್ನು ನಾವು ನಾಶಪಡಿಸುವಂತಾಗಲಿ

English Translation

Mighty with the Ribhus, opulent with the Vibhus, may we overcome by strength the strength (of our foes) may Vaja defend us in battle with Indra, our ally, may we destroy the enemy.

ಸಂಹಿತಾಪಾಠಃ

ತೇ ಚಿದ್ಧಿ ಪೂರ್ವೀರಭಿ ಸಂತಿ ಶಾಸಾ ವಿಶ್ವಾ ಅರ್ಯ ಉಪರತಾತಿ ವನ್ವನ್ ।
ಇಂದ್ರೋ ವಿಭ್ವಾ ಋಭುಕ್ಷಾ ವಾಜೋ ಅರ್ಯಃ ಶತ್ರೋರ್ವಿಷ್ಠತ್ಯಾ ಕೃಣವನ್ವಿ ನೃಮ್ಣಂ ॥ ೫ ॥

ಪದಪಾಠಃ

ತೇ । ಚಿತ್ । ಹಿ । ಪೂರ್ವೀಃ । ಆಭಿ । ಸಂತಿ । ಶಾಸಾ । ವಿಶ್ವಾನ್ । ಅರ್ಯಃ । ಉಪರತಾತಿ । ವನ್ವನ್ । ಇಂದ್ರಃ । ವಿಭ್ವಾ । ಋಭುಕ್ಷಾಃ । ವಾಜಃ । ಅರ್ಯಃ । ಶತ್ರೋಃ । ಮಿಥತ್ಯಾ । ಕೃಣವನ್ । ವಿ । ನೃಮ್ಣಂ ॥ ೩ ॥

ಸಾಯಣಭಾಷ್ಯಂ

ತೇ ತಾದೃಶಾ ಇಂದ್ರ ಋಭವಶ್ಚ ಪೂರ್ವೀರ್ಬಹ್ವೀರಸ್ಮಚ್ಛತ್ರುಸೇನಾಃ ಶಾಸಾ ಶಾಸನೇನ ಸ್ವಕೀಯಯಾಜ್ಞಯಾ । ಯದ್ವಾ । ವಿಶಸ್ಯತೇ ಹಿಂಸ್ಯತೇಽನೇನೇತಿ ಶಾಸಶಬ್ದ ಆಯುಧವಾಚೀ । ತೇನ । ಆಭಿ ಸಂತಿ । ಅಭಿಭವಂತಿ । ಚಿದ್ಗತೌ ಸ್ಮರಣೌ । ಕಿಂಚೋಪರತಾತಿ ॥ ಸಪ್ತಮ್ಯಾ ಲುಕ್ ॥ ಉಪರೈರುಪಲೈಃ ಪಾಷಾಣಸದೃಶೈರಾಯುಧೈಸ್ತಾಯತೇ ವಿಸ್ತಾರ್ಯತ ಇತ್ಯುಪರತಾತಿ ಯುದ್ಧಂ । ತಸ್ಮಿನ್ವಿಶ್ವಾನ್ ಸಮಸಾತ್ಯನರ್ಯೋಽರೀಞ್ಛತ್ರೂನ್ವನ್ವನ್ । ಹಿಂಸಂತಿ । ವಿಭ್ವಾ ಋಭುಕ್ಷಾ ವಾಜ ಏತತ್ಸಂಜ್ಞಕಾ ಋಭವಶ್ಚೇಂದ್ರಶ್ಚಾರ್ಯಃ ಶತ್ರೂಣಾಮಭಿಗಂತಾರಃ ಸಂತಃ ಶತ್ರೋಃ ಸಂಬಂಧಿ ನೃಮ್ಣಂ ಬಲಂ ಮಿಥತ್ಯಾ ॥ ಮೇಥತೇರಿದಂ ರೂಪಂ ॥ ಮಿಥತಿರ್ಹಿಂಸಾ । ತಯಾ ವಿ ಕೃಣವನ್ । ವಿಕುರ್ವಂತು । ವಿನಾಶಯಂತ್ವಿತ್ಯರ್ಥಃ ॥

ಪ್ರತಿಪದಾರ್ಥ

ತೇ—ಪೂರ್ವೋಕ್ತಗುಣಗಳುಳ್ಳ ಇಂದ್ರ ಮತ್ತು ಋಭುಗಳು । **ಪೂರ್ವೀಃ**—ಅನೇಕಸಂಖ್ಯೆಯುಳ್ಳ ಶತ್ರುಸೇನೆಗಳನ್ನು । **ಶಾಸಾ**—ತಮ್ಮ ಆಜ್ಞೆಯಿಂದ । **ಅಭಿ ಸಂತಿ ಹಿ**—ತಿರಸ್ಕರಿಸಿ ಸೋಲಿಸುತ್ತಾರೆ । **ಉಪರತಾತಿ**—ಯುದ್ಧದಲ್ಲಿ । **ವಿಶ್ವಾನ್**—ಸಮಸ್ತರಾದ । **ಅರ್ಯಃ**—ಶತ್ರುಗಳನ್ನೂ । **ವನ್ವನ್**—ಹಿಂಸಿಸುತ್ತಾರೆ । **ವಿಭ್ವಾ**—ವಿಭ್ವನೂ, । **ಋಭುಕ್ಷಾಃ**—ಋಭುಕ್ಷನೂ । **ವಾಜಃ**—ವಾಜನೂ । **ಇಂದ್ರಃ**—ಇಂದ್ರನೂ । **ಅರ್ಯಃ**—ಶತ್ರುಗಳನ್ನು ಸುತ್ತುವರಿದವರಾಗಿ । **ಶತ್ರೋಃ**—ಶತ್ರುವಿನ । **ನೃಮ್ಣಂ**—ಬಲವನ್ನು । **ಮಿಥತ್ಯಾ**—ಹಿಂಸಾರೂಪದಿಂದ । **ವಿ ಕೃಣವನ್**—ನಾಶಪಡಿಸಲಿ.

ಪದಪಾಠಃ

ಪೂರ್ವೋಕ್ತ ಗುಣಗಳುಳ್ಳ ಇಂದ್ರ ಮತ್ತು ಋಭುಗಳು ಅನೇಕಸಂಖ್ಯೆಯುಳ್ಳ ಶತ್ರುಸೇನೆಗಳನ್ನು ತಮ್ಮ ನಿಯಮನದಿಂದ ತಿರಸ್ಕರಿಸಿ ಸೋಲಿಸುತ್ತಾರೆ. ಯುದ್ಧದಲ್ಲಿ ಸಮಸ್ತ ಶತ್ರುಗಳನ್ನೂ ನಾಶಪಡಿಸುತ್ತಾರೆ . ವಿಭ್ವನೂ, ಋಭುಕ್ಷನೂ, ವಾಜನೂ, ಇಂದ್ರನೂ ಶತ್ರುಗಳನ್ನು ಸುತ್ತುವರಿದವರಾಗಿ ಶತ್ರುವಿನ ಬಲವನ್ನು ಹಿಂಸಾರೂಪದಿಂದ ನಾಶಪಡಿಸಲಿ.

English Translation

They verily, (Indra and the Ribhus), overcome multitudes by their prowess : they overcome all enemies in the missile conflict . may Indra, Vibwan Ribhukshin and Vaja, the subduers of foes, annihilate by their wrath the strength of the enemy

ಸಂಹಿತಾಪಾಠಃ

ನೂ ದೇವಾಸೋ ವರಿವಃ ಕರ್ತನಾ ನೋ ಭೂತ ನೋ ವಿಶ್ವೇ ವಸೇ ಸ-
ಜೋಷಾಃ ।
ಸಮಸ್ಮೇ ಇಷಂ ವಸವೋ ದದೀರನ್ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥೪॥

ಪದಪಾಠಃ

ನು । ದೇವಾಸಃ । ವರಿವಃ । ಕರ್ತನ । ನಃ । ಭೂತ । ನಃ । ವಿಶ್ವೇ । ಅವಸೇ । ಸಜೋಷಾಃ ।
ಸಂ । ಅಸ್ಮೇ ಇತಿ । ಇಷಂ । ವಸವಃ । ದದೀರನ್ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥೪॥

ಸಾಯಣಭಾಷ್ಯಂ

ಹೇ ದೇವಾಸೋ ದೇವಾ ದ್ಯೋತಮಾನಾ ಋಭವಃ ಯೂಯಂ ನ್ವದ್ಯ ನೋಽಸ್ಮಭ್ಯಂ ವರಿವೋ ಧನಂ ಕರ್ತನ । ಕುರುತ । ಪ್ರಯಚ್ಛತ । ತಥಾ ವಿಶ್ವೇ ಸರ್ವ ಋಭವೋ ಯೂಯಂ ಸಜೋಷಾಃ ಸಹ ಪ್ರೀಯಮಾಣಾಃ ಸಂತೋ ನೋಽಸ್ಮಾಕಮವಸೇ ರಕ್ಷಣಾಯ ಭೂತ । ಭವತ । ಅಪಿ ಚ ವಸವಃ ಪ್ರಶಸ್ಯಾ ಋಭವ ಇಷಮನ್ನಮಸ್ಮೇ ಅಸ್ಮಭ್ಯಂ ಸಂ ದದೀರನ್ । ಸಂ ಪ್ರಯಚ್ಛೇಯುಃ । ಹೇ ಋಭವಃ ಯೂಯಮಸ್ಮಾನ್ ಸರ್ವದಾ ಕಲ್ಯಾಣೈ ರಕ್ಷತ ॥

ಪ್ರತಿಪದಾರ್ಥ

ದೇವಾಸಃ—ದೇವತಾತ್ಮಕರಾದ ಎಲೈ ಋಭುಗಳೇ, । ನು—ಈಗ । ನಃ—ನಮಗೆ । ವರಿವಃ—ಧನವನ್ನು । ಕರ್ತನ—ಒದಗಿಸಿರಿ । ವಿಶ್ವೇ—ನೀವೆಲ್ಲರೂ । ಸಜೋಷಾಃ—ಒಟ್ಟಿಗ ಹರ್ಷವನ್ನು ಹೊಂದಿದವರಾಗಿ । ನಃ—ನಮ್ಮ । ಅವಸೇ—ರಕ್ಷಣಾರ್ಥವಾಗಿ । ಭೂತ—ಸಂಕಲ್ಪಿಸಿರಿ । ವಸವಃ—ಪ್ರಶಸ್ಯರಾದ ಋಭುಗಳು । ಇಷಂ—ಅನ್ನವನ್ನು । ಅಸ್ಮೇ—ನಮಗೆ । ಸಂ ದದೀರನ್—ಒದಗಿಸಿಯಾಡಲಿ. (ಎಲೈ ದೇವತೆಗಳೇ) ಯೂಯಂ—ನೀವು । ನಃ—ನಮ್ಮನ್ನು । ಸದಾ—ಯಾವಾಗಲೂ । ಸ್ವಸ್ತಿಭಿಃ—ಕಲ್ಯಾಣಗಳಿಂದ । ಪಾತ—ರಕ್ಷಿಸಿರಿ.

ಭಾವಾರ್ಥ

ದೇವತಾತ್ಮರಾದ ಎಲೈ ಋಭುಗಳೇ, ನಮಗೆ ಧನವನ್ನು ಒದಗಿಸಿರಿ. ನೀವೆಲ್ಲರೂ ಒಟ್ಟಿಗೆ ಹರ್ಷವನ್ನು ಹೊಂದಿದವರಾಗಿರಿ ನಮ್ಮ ರಕ್ಷಕರಾಗಿರಿ. ಪ್ರಶಸ್ಯರಾದ ಋಭುಗಳು ನಮಗೆ ಅನ್ನವನ್ನು ಒದಗಿಸಲಿ. ಎಲೈ ದೇವತೆಗಳೇ. ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ

English Translation

Grant us, deities, this day opulence . may you all, well pleased alike, be (ready) for our protection . may the exalted (Ribhus) bestow upon us food . and do you (all) ever cherish us with blessings.

———

ನಲವತ್ತೊಂಭತ್ತನೆಯ ಸೂಕ್ತವು

ಸಾಯಣಭಾಷ್ಯಂ

ಸಮುದ್ರಜ್ಯೇಷ್ಠಾ ಇತಿ ಚತುರ್ಋಚಂ ಸೋಡಶಂ ಸೂಕ್ತಂ ವಸಿಷ್ಠಸ್ಯಾರ್ಷಂ ತ್ರೈಷ್ಟುಭಮಬ್ದೇವತಾಕಂ । ತಥಾ ಚಾನುಕ್ರಾಂತಂ । ಸಮುದ್ರಜ್ಯೇಷ್ಠಾ ಆಪಸ್ತಿತಿ ॥ ಗತೋ ವಿನಿಯೋಗಃ ॥

ಅನುವಾದವು—**ಸಮುದ್ರಜ್ಯೇಷ್ಠಾಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಸಿಷ್ಠನು ಋಷಿಯು, ಆಪಃ (ಉದಕಗಳು) ದೇವತೆಯು; ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ-**ಸಮುದ್ರಜ್ಯೇಷ್ಠಾ ಆಪಂ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

ಸೂಕ್ತ—೪೯

ಮಂಡಲ—೭ ॥ ಅನುವಾಕ—೩ ॥ ಸೂಕ್ತ—೪೯ ॥
ಆಸ್ಟಕ—೫ ॥ ಅಧ್ಯಾಯ—೪ ॥ ವರ್ಗ—೧೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
ಋಷಿಃ—ವಸಿಷ್ಠಃ ॥
ದೇವತಾ—ಆಪಃ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಸಮುದ್ರಜ್ಯೇಷ್ಠಾಃ ಸಲಿಲಸ್ಯ ಮಧ್ಯಾತ್ಪುನಾನಾ ಯಂತ್ಯನಿವಿಶಮಾನಾಃ ।
ಇಂದ್ರೋ ಯಾ ವಜ್ರೀ ವೃಷಭೋ ರರಾದ ತಾ ಆಪೋ ದೇವೀ ರಿಹ ಮಾಮವಂತು ॥ ೧ ॥

ಪದಪಾಠಃ

ಸಮುದ್ರಜ್ಯೇಷ್ಠಾಃ । ಸಲಿಲಸ್ಯ । ಮಧ್ಯಾತ್ । ಪುನಾನಾಃ । ಯಂತಿ । ಅನಿವಿಶಮಾನಾಃ ।
ಇಂದ್ರಃ । ಯಾಃ । ವಜ್ರೀ । ವೃಷಭಃ । ರರಾದ । ತಾಃ । ಆಪಃ । ದೇವೀಃ । ಇಹ । ಮಾಂ । ಅವಂತು ॥

ಸಾಯಣಭಾಷ್ಯಂ

ಸಮುದ್ರಜ್ಯೇಷ್ಠಾಃ ಸಮುದ್ರೋತ್ಕರ್ಣಾಪೋ ಜ್ಯೇಷ್ಠಃ ಪ್ರಶಸ್ಯತಮೋ ಯಾಸಾಮಪಾಂ ತಾಃ । ಸಲಿಲಸ್ಯ । ಅಂತರಿಕ್ಷನಾಮೈತತ್ । ಅಂತರಿಕ್ಷಸ್ಯ ಮಧ್ಯಾನ್ಮಧ್ಯಮಿಕಾತ್ಸ್ಥಾನಾದ್ಯಂತಿ । ಗಚ್ಛಂತಿ । ಕೀದೃಶ್ಯಃ । ಪುನಾನಾ ವಿಶ್ವಂ ಶೋಧಯಂತ್ಯೋನಿವಿಶಮಾನಾಃ ಸರ್ವದಾ ಗಚ್ಛಂತ್ಯಃ । ವಜ್ರೀ ವಜ್ರವೃಷಭಃ ಕಾಮಾನಾಂ ವರ್ಷಿತೇಂದ್ರೋ ಯಾ ನಿರುದ್ಧಾ ಅಪೋ ರರಾದ ಲಿಖತಿ ದೇವೀರ್ದೇವ್ಯಸ್ತಾ ಆಪ ಇಹಾಸ್ಮಿನ್ಪ್ರದೇಶೇ ಸ್ಥಿತಂ ಮಾಮವಂತು । ರಕ್ಷಂತು । ಅಭಿ ಗಚ್ಛಂತು ವಾ ॥

ಪ್ರತಿಪದಾರ್ಥ

ಪುನಾನಾಃ—ಜಗತ್ತನ್ನು ಶುದ್ಧಿಗೊಳಿಸುವವೂ । **ಅನಿವಿಶಮಾನಾಃ**—ವಿಚ್ಛಿತ್ತಿಯಿಲ್ಲದೇ ಪ್ರವಹಿಸುವವೂ । **ಸಮುದ್ರಜ್ಯೇಷ್ಠಾಃ**—ಸಮುದ್ರವೇ ಉತ್ತಮವಾದ ಆಶ್ರಯಸ್ಥಾನವಾಗಿ ಉಳ್ಳವೂ ಆದ ಉದಕಗಳು । **ಸಲಿಲಸ್ಯ**—ಅಂತರಿಕ್ಷದ । **ಮಧ್ಯಾತ್**—ಮಧ್ಯಭಾಗದಿಂದ । **ಯಂತಿ**—ಹರಿದ ಬರುತ್ತವೆ । **ವಜ್ರೀ**—ವಜ್ರಾಯುಧವನ್ನು ಹಿಡಿದಿರುವವನೂ । **ವೃಷಭಃ**—ಕಾಮವರ್ಷಕನೂ ಆದ । **ಇಂದ್ರಃ**—ಇಂದ್ರನು । **ಯಾಃ**—ಯಾವ ಉದಕಗಳನ್ನು । **ರರಾಧ**—(ತಡೆಯನ್ನು) ಸೀಳಿ ಪ್ರವಹಿಸುವಂತೆ ಮಾಡಿದನೋ, । **ದೇವೀಃ**—ದೇವತಾತ್ಮಗಳಾದ । **ತಾಃ ಆಪಃ**—ಅದೇ ಉದಕಗಳು (ಉದಕಾಭಿಮಾನಿದೇವತೆಗಳು) । **ಇಹ**—ಈ ಯಜ್ಞದಲ್ಲಿ ನಿರತನಾದ । **ಮಾಂ**—ನನ್ನನ್ನು । **ಅವಂತು**—ರಕ್ಷಿಸಲಿ.

ಭಾವಾರ್ಥ

ಜಗತ್ತನ್ನು ಶುದ್ಧಿಗೊಳಿಸುವವೂ, ನಿಚ್ಛಿತ್ತಿಯಿಲ್ಲದೇ ಪ್ರವಹಿಸುವವೂ ಸಮುದ್ರವೇ ಉತ್ತಮವಾದ ಆಶ್ರಯಸ್ಥಾನವಾಗಿ ಉಳ್ಳವೂ ಆದ ಉದಕಗಳು ಅಂತರಿಕ್ಷದ ಮಧ್ಯಭಾಗದಿಂದ ಹರಿದು ಬರುತ್ತವೆ ವಜ್ರಾಯುಧವನ್ನು ಹಿಡಿದಿರುವವನೂ, ಕಾಮವರ್ಷಕನೂ ಆದ ಇಂದ್ರನು ಯಾವ ಉದಕಗಳನ್ನು ಬಂಧನದಿಂದ ಬಿಡಿಸಿ ಪ್ರವಹಿಸುವಂತೆ ಮಾಡಿದನೋ, ದೇವತಾತ್ಮಗಳಾದ ಅದೇ ಉದಕಗಳು (ಉದಕಾಭಿಮಾನಿದೇವತೆಗಳು) ಈ ಯಜ್ಞದಲ್ಲಿ ನಿರತನಾದ ನನ್ನನ್ನು ರಕ್ಷಿಸಲಿ

English Translation

The waters, with their ocean chief, proceed from the midst of the firmament, purifying (all things), flowing unceasingly may the divine waters, whom the thunder bearing Indra, the showerer, sent forth, protect me here (on earth)

ವಿಶೇಷವಿಷಯಗಳು

ಸಮುದ್ರಜ್ಯೇಷ್ಠಾಃ—ಸಮುದ್ರವೇ ಉತ್ತಮವಾದ ಆಶ್ರಯಸ್ಥಾನವಾಗಿ ಉಳ್ಳ ಉದಕಗಳು ಎಂದರ್ಥವು ಇಲ್ಲಿ ಇನ್ನೊಂದು ವಿಷಯವನ್ನು ವಿಶದಪಡಿಸಲೇಕಾಗಿದೆ ಈಗಿರುವ ನೋಟಕರಾದ ಉದಕಗಳೆಲ್ಲಾ ಸಮುದ್ರವೇ ಉತ್ಪತ್ತಿಸ್ಥಾನವು ಎಂದರೆ ಕೆರೆ, ಕೂಳ, ಬಾವಿ, ಕುಂಟೆ, ನದಿ ಮೊದಲಾದುವುಗಳಲ್ಲಿರುವ ಜಲಗಳೆಲ್ಲಾ ಒಂದಾನೊಂದು ಕಾಲದಲ್ಲಿ ಸಮುದ್ರದ ಭಾಗವೇ ಆಗಿತ್ತು ಎಂದರೆ ಸಮುದ್ರದ ನೀರು ಸೂರ್ಯನ ಕಿರಣಗಳಿಂದ ತಪ್ತವಾಗಿ ಆವಿಯ ರೂಪದಿಂದ ಮೇಘಮಂಡಲಗಳಾಗಿ ಪರಿವರ್ತಿತವಾಗುತ್ತವೆ ಆನಂತರ ಆ ಮೇಘಗಳು ವೃಷ್ಟಿಯ ಮೂಲಕ ಸುರಿಸುವ ಉದಕಗಳಿಂದ ಬಹುಭಾಗವು ನದಿಗಳಾಗಿ ಪ್ರವಹಿಸಿ ಪುನಃ ಸಮುದ್ರವನ್ನೇ ಸೇರುತ್ತವೆ. ಇನ್ನೂ ಕೆಲವು ಭಾಗ ಕೆರೆ, ಕುಂಟೆ ಸರೋವರ ಮೊದಲಾದ ಜಲಾಶಯಗಳಲ್ಲಿ ನಿಲ್ಲುವುದು ಇನ್ನೂ ಸ್ವಲ್ಪಭಾಗ ಭೂಮಿಯೊಳಕ್ಕೆ ಇಳಿದು (ಇಂಗಿ)ಅಲ್ಲಿ ಸ್ವಲ್ಪದೂರದವರೆಗೂ ಹೋಗಿ ಘಟ್ಟಿಯಾದ ಬಂಡೆಯು ಸಿಕ್ಕಿದನಂತರ ಅಲ್ಲಿಯೇ ಸಂಗ್ರಹವಾಗಿರುವುದು. ಈ ನೀರಿಗೆ ಸೂರ್ಯರಶ್ಮಿಗಳ ಸಂಪರ್ಕವಿಲ್ಲದ್ದರಿಂದ ಇದು ಆವಿಯಾಗಿ ಹೋಗುವ ಸಂಭವವಿರುವುದಿಲ್ಲ ಆದ್ದರಿಂದ ಪ್ರತಿವರ್ಷವೂ **ವರ್ಷಾಕಾಲದಲ್ಲಿ** ಬೀಳುವ ವೃಷ್ಟ್ಯುದಕದ **ಕೆಲವು ಭಾಗವು** ಭೂಮಿಯಲ್ಲಿ ಇಳಿದು ಹೋಗಿ ಸಂಗ್ರಹವಾಗುತ್ತಿರುವುದರಿಂದ ಇದರ ಪ್ರಮಾಣವು ಹೆಚ್ಚಾಗಿಯೇ ಇರುತ್ತದೆ. ನಾವು ಭೂಮಿಯನ್ನು ಅಗೆದಾಗ ಉಕ್ಕಿಬರುವ ಜಲವೇ **ಈ** ವಿಧವಾದ ನೀರು ಈ ನೀರೂ, ಕೆರೆ, ಕೊಳ, ನದಿ ಇವುಗಳಲ್ಲಿರುವ ನೀರೂ ಸಮುದ್ರದ ನೀರಿನಂತೆ ಉಪ್ಪಾಗಿರದೆ ಸ್ವಚ್ಛವಾಗಿಯೂ ಸಿಹಿಯಾಗಿಯೂ ಇರುವುದು ಏಕೆಂದರೆ ಸಮುದ್ರದಿಂದ ಆವಿಯಾಗಿ ಹೋಗುವ **ಜಲವು** ಸಮುದ್ರದ

ಲ್ಲಿರುವ ಉಪ್ಪನ್ನು ತೆಗೆದುಕೊಂಡು ಹೋಗದೆ ಅಲ್ಲಿಯೇ ಬಿಟ್ಟು ಸ್ವಚ್ಛವಾದ ನೀರುಮಾತ್ರ ಆವಿಯರೂಪದಲ್ಲಿ ಹೋಗುವುದು ಆದ್ದರಿಂದ ಈ ಉದಕಗಳು ಉಪ್ಪಾಗಿರದೆ ಸಿಹಿಯಾಗಿರುವುವು. ಸಮುದ್ರದ ನೀರು ಉಪ್ಪಾಗಿರಲು ಕಾರಣ ವೇನೆಂದರೆ ಭೂಮಿಯು ಮೊದಲು ಸೃಷ್ಟಿಯಾದಾಗ ಆವೆಯರೂಪದಲ್ಲಿದ್ದ ಆನ್ಲಜನಕವೂ (Oxegen) ಜಲಜನಕವೂ (Hydrogen) ಸಂಯೋಗವಾಗಿ ಜಲವು ಉತ್ಪತ್ತಿಯಾಯಿತು ಆಗ ಅದು ಯಾವ ವಿಧವಾದ ಒಣ್ಣವೂ, ರುಚಿಯೂ, ವಾಸನೆಯೂ ಇಲ್ಲದೆ ಸ್ವಚ್ಛವಾಗಿದ್ದಿತು ಆ ಜಲವೆಲ್ಲಾ ಭೂಮಿಯ ತಗ್ಗಾಗಿರುವ ಪ್ರದೇಶವನ್ನಾವರಿಸಿ ತುಂಬಿಕೊಂಡಿತು ಇದೇ ಸಮುದ್ರವು. ಬರಬರುತ್ತಾ ಪ್ರತಿಕ್ಷಣದಲ್ಲಿಯೂ ಸೂರ್ಯರಶ್ಮಿಯಿಂದ ಸಮುದ್ರದ ನೀರು ಕಾದು ಕೆಲವು ಭಾಗ ಆವೆಯಾಗಿ ಹೋಗಿ ಅಂತರಿಕ್ಷದಲ್ಲಿ ವೇಘವಾಗಿ ಕೆಲವು ಕಾಲವಿದ್ದು ಒಳಕ ಮಳೆಯರೂಪದಲ್ಲಿ ಭೂಮಿಯಮೇಲೆ ಬಿದ್ದು ನದಿಯಾಗಿ ಪ್ರವಹಿಸಿ ಸಮುದ್ರವನ್ನು ಸೇರುವುದು. ವೃಷ್ಟ್ಯುದಕವು ನದಿಯಾಗಿ ಪ್ರವಹಿಸುವಾಗ ಭೂಮಿಯ ಮೇಲಿರುವ ಮಣ್ಣು ಮತ್ತು ಇತರ ಖನಿಜಪದಾರ್ಥವನ್ನು ಕೊಚ್ಚಿಕೊಂಡು ಹೋಗಿ ಸಮುದ್ರವನ್ನು ಸೇರುವುದು. ಮಣ್ಣುಮುಂದಾದ ವಸ್ತುಗಳು ನೀರಿನೊಡನೆ ಕೆಲವು ಕಾಲವಿದ್ದರೂ ನೀರು ಸಮುದ್ರವನ್ನು ಸೇರಿದ ನಂತರ ಆ ಮಣ್ಣು ಸಮುದ್ರತಳದಲ್ಲಿ ನಿಂತುಬಿಡುವುದು. ತಿಳಿನೀರು ಮಾತ್ರ ಸಮುದ್ರದ ನೀರಿನೊಡನೆ ಬೆರತುಹೋಗುವುದು ಆದರೆ ನದಿಯು ಹರಿಯುವಾಗ ನೀರಿನೊಡನೆ ಬೆರೆತ ಖನಿಜ ಪದಾರ್ಥಗಳು ಅದರಲ್ಲೂ ಮುಖ್ಯವಾಗಿ ಉಪ್ಪು (Chloride) ನೀರಿನಲ್ಲಿ ಚೆನ್ನಾಗಿ ಕರಗಿರುವುದರಿಂದ ನದಿಯು ಸಮುದ್ರವನ್ನು ಸೇರಿದಮೇಲೂ ಈ ಉಪ್ಪು ಆ ನೀರಿನಿಂದ ಪ್ರತ್ಯೇಕವಾಗುವುದಿಲ್ಲ ಆದಕ್ಕೆ ಬದಲಾಗಿ ಸಮುದ್ರದ ನೀರನ್ನು ಉಪ್ಪನ್ನಾಗಿ ಮಾಡುವುದು ಈರೀತಿ ಪ್ರತಿವರ್ಷವೂ ಸಾವಿರಾರು ನದಿಗಳು ಸಮುದ್ರಕ್ಕೆ ಸ್ವಲಸ್ವಲ್ಪವಾಗಿ ಉಪ್ಪನ್ನು ತಂದು ಸೇರಿಸುತ್ತಿರುವುವು. ಈ ಕಾರ್ಯವು ಕೋಟ್ಯಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆಯುತ್ತಿರುವುದರಿಂದ ಸಮುದ್ರದ ನೀರು ಈಗಿರುವಂತೆ ಒಹಳ ಉಪ್ಪಿನಿಂದ ಕೂಡಿದೆ ಪ್ರತಿವರ್ಷವೂ ಸಮುದ್ರಕ್ಕೆ ನದಿಗಳ ಮೂಲಕ ಹೆಚ್ಚುಹೆಚ್ಚಾಗಿ ಉಪ್ಪು ಸೇರುತ್ತದೆಯೇ ವಿನಹ ಆ ಉಪ್ಪು ಯಾವ ವಿಧದಿಂದಲೂ ಸಮುದ್ರವನ್ನು ಬಿಟ್ಟು ಹೊರಕ್ಕೆ ಹೋಗುವುದಿಲ್ಲ ಆದ್ದರಿಂದ ಕ್ರಮೇಣ ಸಮುದ್ರದ ನೀರು ಹೆಚ್ಚುಹೆಚ್ಚಾಗಿ ಉಪ್ಪಾಗುವುದು. ಸಮುದ್ರದ ನೀರಿನಲ್ಲಿರುವ ಉಪ್ಪಿನ ಅಂಶದಿಂದಲೂ ಪ್ರತಿವರ್ಷವೂ ಸಮುದ್ರಕ್ಕೆ ಸೇರುವ ಉಪ್ಪಿನ ಅಂಶದಿಂದಲೂ ಲೆಕ್ಕಮಾಡಿದಲ್ಲಿ ಭೂಮಿಯು ಉತ್ಪತ್ತಿಯಾಗಿ ಎಷ್ಟು ಕೋಟಿವರ್ಷಗಳಾಗಿವೆ ಎಂಬುದನ್ನು ವಿಜ್ಞಾನಿಗಳು ಕಂಡುಹಿಡಿಯಬಹುದು.

ಸಂಹಿತಾಪಾಠಃ

ಯಾ ಆಪೋ ದಿವ್ಯಾ ಉತ ವಾ ಸ್ರವಂತಿ ಖನಿತ್ರಿಮಾ ಉತ ವಾ ಯಾಃ ಸ್ವಯಂಜಾಃ ।
ಸಮುದ್ರಾರ್ಥಾ ಯಾಃ ಶುಚಯಃ ಪಾವಕಾಸ್ತಾ ಆಪೋ ದೇವೀರಿಹ ಮಾಮವಂತು ॥ ೨ ॥

ಪದಪಾಠಃ

ಯಾಃ । ಆಪಃ । ದಿವ್ಯಾಃ । ಉತ । ವಾ । ಸ್ರವಂತಿ । ಖನಿತ್ರಿಮಾಃ । ಉತ । ವಾ । ಯಾಃ । ಸ್ವಯಂಜಾಃ ।
ಸಮುದ್ರಾರ್ಥಾಃ । ಯಾಃ । ಶುಚಯಃ । ಪಾವಕಾಃ । ತಾಃ । ಆಪಃ । ದೇವೀಃ । ಇಹ । ಮಾಂ ।
ಅವಂತು ॥ ೨ ॥

ಸಾಯಣಭಾಷ್ಯಂ

ಯಾ ಆಪೋ ದಿವ್ಯಾ ಆಂತರಿಕ್ಷಭವಾಃ ಸಂತಿ । ಉತ ವಾಪಿ ಚ ಯಾ ಆಪೋ ನದ್ಯಾದಿಗತಾಃ ಸತ್ಯಃ ಸ್ರವಂತಿ ಗಚ್ಛಂತಿ । ಯಾಶ್ಚ ಖನಿತ್ರಿಮಾಃ ಖನನೇನ ನಿವೃತ್ತಾಃ । ಉತ ವಾಪಿ ಚ ಯಾಃ ಸ್ವಯಂಜಾಃ ಸ್ವಯಮೇವ ಪ್ರಾದುರ್ಭವಂತ್ಯಃ ಸಮುದ್ರಾರ್ಥಾಃ । ಸಮುದ್ರ ಏವಾರ್ಥೋ ಗಂತವ್ಯೋ ಯಾಸಾಂ ತಾಃ ಸಮುದ್ರಾರ್ಥಾಃ । ಶುಚಯೋ ದೀಪ್ತಿಯುಕ್ತಾಃ ಪಾವಕಾಃ ಶೋಧಯಿತ್ರ್ಯಶ್ಚ ಭವಂತಿ । ತಾ ಆಪೋ ಮಾಮವಂತ್ವಿತಿ ॥

ಪ್ರತಿಪದಾರ್ಥ

ಯಾಃ ಆಪಃ—ಯಾವ ಉದಕಗಳು । **ದಿವ್ಯಾಃ**—ದ್ಯುಲೋಕೋತ್ಪನ್ನವಾಗಿವೆಯೋ, । **ಉತ ವಾ**—ಮತ್ತು । **ಸ್ರವಂತಿ**—ಪ್ರವಾಹಾತ್ಮಕವಾಗಿವೆಯೋ, । **ಉತ ವಾ**—ಅಲ್ಲದೇ, । **ಯಾಃ**—ಯಾವ ಉದಕಗಳು । **ಖನಿತ್ರಿಮಾಃ**—ತಡೆಯನ್ನು ಸೀಳುವುದರಿಂದ ಹೊರಹೊಂಟು ಹರಿಯುವುವೋ, । **ಉತ ವಾ**—ಅಥವಾ ಅಲ್ಲದೇ. । **ಯಾಃ**—ಯಾವ ಉದಕಗಳು । **ಸ್ವಯಂಜಾಃ**—ತಾವಾಗಿಯೇ ಪ್ರಾದುರ್ಭವಿಸಿ । **ಸಮುದ್ರಾರ್ಥಾಃ**—ಸಮುದ್ರವನ್ನು ಹೋಗಿ ಸೇರುವುವೋ । **ದೇವೀಃ**—ದೇವತಾತ್ಮಗಳಾದ । **ತಾ ಆಪಃ**—ಆದೇ ಉದಕಗಳು । **ಇಹ**—ಈ ಯಜ್ಞದಲ್ಲಿ ನಿರತನಾದ । **ಮಾಂ**—ನನ್ನನ್ನು । **ಅವಂತು**—ರಕ್ಷಿಸಲಿ.

ಭಾವಾರ್ಥ

ಯಾವ ಉದಕಗಳು ದ್ಯುಲೋಕೋತ್ಪನ್ನವಾಗಿವೆಯೋ ಮತ್ತು ಯಾವುವು ಸ್ರವಾಹಾತ್ಮಕವಾಗಿಯೋ, ಅಲ್ಲದೇ ಯಾವ ಉದಕಗಳು ತಮ್ಮ ತಡೆಯನ್ನು ಸೀಳುವುದರಿಂದ ಹೊರಹೊಂಟು ಹರಿಯುವುವೋ ಅಲ್ಲದೇ, ಯಾವ ಉದಕಗಳು ತಾವಾಗಿಯೇ ಪ್ರಾದುರ್ಭವಿಸಿ ಸಮುದ್ರವನ್ನು ಹೋಗಿ ಸೇರುವುವೋ ದೇವತಾತ್ಮಗಳಾದ ಆದೇ ಉದಕಗಳು ಈ ಯಜ್ಞದಲ್ಲಿ ನಿರತನಾದ ನನ್ನನ್ನು ರಕ್ಷಿಸಲಿ

English Translation

May the waters that are in the sky, or those that flow (on the earth), those (whose channels) have been dug, or those that have sprung up spontaneously, and those that seek the ocean, all pure and purifying, may those divine waters protect me here (on earth)

ವಿಶೇಷವಿಷಯಗಳು

ಯಾ ಆಪಃ ದಿವ್ಯಾಃ—ದ್ಯುಲೋಕ ಅಥವಾ ಅಂತರಿಕ್ಷದಲ್ಲಿ ಉತ್ಪನ್ನವಾದ ಉದಕಗಳು ಎಂದರೆ ಮೇಘ ಮಂಡಲಗಳಿಂದ ವೃಷ್ಟಿರೂಪದಲ್ಲಿ ಸುರಿಯುವ ಮಳೆಯನೀರು.

ಉತ ವಾ ಸ್ರವಂತಿ—ಹರಿಯುವ ನೀರು ಎಂದರೆ ಪ್ರವಾಹರೂಪದಿಂದ ಹರಿಯುವ ನದಿಯ ನೀರು.

ಯಾ ಖನಿತ್ರಿಮಾಃ—ಅಗೆಯುವ ಸಾಧನಗಳಾದ ಗುದ್ದಲಿ ಮೊದಲಾದ ಆಯುಧಗಳಿಂದ ಅಗೆದು ತೋಡಿರುವ ಭಾವಿ, ಕೊಳ ಮೊದಲಾದ ಜಲಾಶಯಗಳ ನೀರು.

ಆಮಿವಹೇತ್ಯಷ್ಟರ್ಚಂ ದ್ವಾವಿಂಶಂ ಸೂಕ್ತಂ । ಆದ್ಯಾ ಗಾಯತ್ರೀ ಪಂಚಮ್ಯಾದ್ಯಾಕ್ಷರತೋಽನುಷ್ಟುಭೋ ದ್ವಿತೀಯಾದ್ಯಾಸ್ತಿಸ್ರ ಉಪರಿಷ್ಟಾದ್ಬೃಹತ್ಯಃ । ತ್ರೈಷ್ಟುಭಾ ಚತುರ್ಥ್ಯಾದಿಕಾ ಬೃಹತೀತಿ ತಲ್ಲಕ್ಷಣಯೋಗಾತ್ । ಆದ್ಯಾ ವಾಸ್ತೋಷ್ಪತಿದೇವತಾಕಾ ದ್ವಿತೀಯಾ ಇಂದ್ರಾವಿಷ್ಣೂ । ತಥಾ ಚಾನುಕ್ರಾಂತಂ । ಆಮಿವಹಾಷ್ಟೌ ವಾಸ್ತೋಷ್ಪತ್ಯಾದ್ಯಾ ಗಾಯತ್ರೀ ಶೇಷೇಂದ್ರಾವಿಷ್ಣೂ ಬೃಹತ್ಯಾದಯೋಽನುಷ್ಟುಭಃ ಪ್ರಸ್ವಾಪಿನ್ಯ ಉಪನಿಷದಿತಿ ॥ ಗತೋ ವಿನಿಯೋಗಃ । ಬೃಹದ್ದೇವತಾಯಾಂ ಯದುಕ್ತಂ ತನ್ನಿಬೋಧ ಲಿಖ್ಯತೇ । **ವರುಣಸ್ಯ ಗೃಹಾನ್ಗತ್ವಾ ವಸಿಷ್ಠಃ ಸ್ವಪ್ನಮಾಚರನ್ । ಪ್ರವಿವೇಶಾಥ ತಂ ತತ್ರ ಶ್ವಾ ನವನ್ನಮ್ಯವರ್ತತ ॥ ಕ್ರಂದಂತಂ ಸಾರಮೇಯಂ ಸ ಧಾವಂತಂ ದಸ್ಯುಮುದ್ಯತಂ । ಯದಜರ್ಜುನೇತಿ ಚ ದ್ವಾಭ್ಯಾಂ ಸಾಂತ್ವಯಿತ್ವಾ ಹ್ಯಸೂಷುಪತ್ । ಏವಂ ಪ್ರಸ್ಥಾಪಯಾಮಾಸ ಜನಮನ್ಯಂ ಚ ವಾರುಣಂ । ಬೃಹದ್ರಥಂ । ಇತಿ ॥ ಅತ್ರ ಕೇಚಿತ್ಪುನರೇವಮಾಹುಃ । ಆಸಾಂ ಪ್ರಸ್ವಾಪಿನೀತ್ವಂ ತು ಕಥಾಸು ಪರಿಕಲ್ಪ್ಯತೇ । ವಸಿಷ್ಠಸ್ತೃಷಿತೋಽನ್ನಾರ್ಥೀ ತ್ರಿರಾತ್ರಾಲಬ್ಧಭೋಜನಃ । ಚತುರ್ಥರಾತ್ರೌ ಚೌರ್ಯಾರ್ಧಂ ವಾರುಣಂ ಗೃಹಮೇತ್ಯಸು ॥ ಕೋಷ್ಠಾಗಾರೇ ಪ್ರವೇಶಾಯ ಪಾಲಕಶ್ವಾದಿಸುಪ್ತಯೇ । ಯದಜರ್ಜುನೇತಿ ಸಪ್ತರ್ಚಂ ದದರ್ಶ ಚ ಜಜಾಪ ಚೇತಿ ॥

ಅನುವಾದವು— **ಆಮಿವಹಾ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಇಪ್ಪತ್ತೆರಡನೆಯ ಸೂಕ್ತವು. ಇವರಲ್ಲಿ ಎಂಟು ಋಕ್ಕುಗಳಿರುವುವು ಈ ಸೂಕ್ತದ ಮೊದಲನೆಯ ಋಕ್ಕು ಗಾಯತ್ರೀಛಂದಸ್ಸುಳ್ಳದು ಐದ

ನೆಯ ಋಕ್ಕಿನಿಂದ ಮುಂದಿನ ನಾಲ್ಕು ಋಕ್ಕುಗಳು ಅನುಷ್ಟುಪ್ಛಂದಸ್ಸುವು; ಎರಡನೆಯ ಋಕ್ಕಿನಿಂದ ಮುಂದಿನ ಮೂರು ಋಕ್ಕುಗಳು ಉಪರಿಷ್ಟಾದ್ಬೃಹತೀ ಎಂಬ ಛಂದಸ್ಸಿನವು. **ತ್ರ್ಯಷ್ಟಕಾ ಚತುರ್ಥದ್ವಾದಶಕೇ ಬೃಹತೀ** ಎಂದರೆ ಒಂದು ಛಂದಸ್ಸಿನಲ್ಲಿ ನಾಲ್ಕು ಪಾದಗಳಿದ್ದು ಮೊದಲಿನ ಮೂರು ಪಾದಗಳಲ್ಲಿ ಎಂಟೆಂಟು ಅಕ್ಷರಗಳೂ ನಾಲ್ಕನೆಯ ಪಾದದಲ್ಲಿ ಎಂಟು ಅಕ್ಷರಗಳೂ ಇದ್ದರೆ ಅದು ಉಪರಿಷ್ಟಾದ್ಬೃಹತೀ ಛಂದಸ್ಸೆನಿಸುವುದು. ಈ ಸೂಕ್ತದ ಮೊದಲನೆಯ ಋಕ್ಕಿಗೆ ಬಾರ್ಹಸ್ಪತ್ಯೆಯು ದೇವತೆಯು; ಉಳಿದ ಋಕ್ಕುಗಳಿಗೆ ಇಂದ್ರನು ದೇವತೆಯು. ಅನುಕ್ರಮಣಿಕೆಯಲ್ಲಿ-**ತವಿಾವಹಾಷ್ಟೌ ವಾಸ್ತೋಷ್ಪತ್ಯಾದ್ಯಾ ಗಾಯತ್ರೀ ಶೇಷಾಸ್ತ್ರ್ಯುಪರಿಷ್ಟಾದ್ಬೃಹತ್ಯಾದಯೋಽನುಷ್ಟುಭಃ ಪ್ರಸ್ವಾಪಿನ್ಯ ಉಪನಿಷತ್** ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಈ ಸೂಕ್ತದ ವಿಷಯದಲ್ಲಿ ಶೌನಕೋಕ್ತವಾದ ಬೃಹದ್ದೇವತಾ ಎಂಬ ಗ್ರಂಥದಲ್ಲಿ ಈರೀತಿ ವಿವರಣೆ ಇದೆ—

ವರುಣಸ್ಯ ಗೃಹಾನ್ ರಾತ್ರ್ಯಾ ವಸಿಷ್ಠಃಸ್ವಪ್ನಮಾಚರನ್ ।
ಪ್ರವಿವೇಶಾಥ ತಂ ತತ್ರ ಶ್ವಾ ನದನ್ನಭ್ಯವರ್ತತ ॥
ಕ್ರುದಂತಂ ಸಾರಮೇಯಂ ಸ ಧಾವಂತಂ ದಸ್ಪುಮುದ್ಯತಂ ।
ಯದರ್ಜುನೇತಿ ಚ ದ್ವಾಭ್ಯಾಂ ಸಾಂತ್ವಯಿತ್ವಾ ಹ್ಯಸೂಷುಪತ್ ।
ಏವಂ ಪ್ರಸ್ವಾಪಯಾಮಾಸ ಜನಮನ್ಯಂ ಚ ವಾರುಣಂ ॥

(ಬೃ ದೇ ೬-೧೧೧,೧೩೧)

ಒಂದು ದಿನದ ರಾತ್ರಿ ವಸಿಷ್ಠಋಷಿಯು ಸ್ವಪ್ನದಲ್ಲಿಯೇ (ನಿದ್ರೆಯಲ್ಲಿಯೇ) ಸಂಚರಿಸುತ್ತಾ ತನ್ನ ಹಿತೈಷಿಯಾದ ವರುಣನ ಮನೆಗೆ ಹೋದನು. ಆಗ ಅಲ್ಲಿ ಕಾವಲಿದ್ದ ಒಂದು ನಾಯಿಯು ಬೊಗಳುತ್ತಾ ಈ ವಸಿಷ್ಠನನ್ನು ಅಟ್ಟಿಸಿಕೊಂಡು ಕಚ್ಚುವುದಕ್ಕೆ ಬಂದಿತು ತನ್ನನ್ನು ಕಚ್ಚಲು ಬರುತ್ತಿರುವ ಈ ನಾಯಿಯನ್ನು ವಸಿಷ್ಠನು ಕಂಡು ಯದರ್ಜುನ ಎಂದು ಮೊದಲಾಗುವ ಈ ಸೂಕ್ತವು ಎರಡು ಋಕ್ಕುಗಳಿಂದ (೨ನೆಯ ಋಕ್ಕುಗಳು) ಸಮಾಧಾನಪಡಿಸಿ ನಿದ್ರಾಭೋಗುವಂತೆ ಮಾಡಿದನು ಎಂದಿದೆ ಇನ್ನು ಕೆಲವರು ಈ ಕಥೆಯನ್ನು ಬೇರೆ ರೀತಿಯಲ್ಲಿ ಹೇಳುವರು —

ಆಸಾಂ ಪ್ರಸ್ವಾಪಿನಿತ್ವಂ ತು ಕಥಾಸು ಪರಿಕಲ್ಪ್ಯತೇ ।
ವಸಿಷ್ಠಸ್ತೃಷಿತೋಽನ್ಯಾರ್ಥೀ ಶ್ರಾದ್ಧಾಲಬ್ಧಭೋಜನಃ ।
ಚತುರ್ಥರಾತ್ರೌ ಚೌರ್ಯಾರ್ಥಂ ವಾರುಣಂ ಗೃಹಮೇತ್ಯ ತು ।
ಕೋಷ್ಠಾಗಾರೇ ಪ್ರವೇಶಾಯ ಪಾಲಕಶ್ವಾದಿಸುಪ್ತಯೇ ।
ಯದರ್ಜುನೇತಿ ಸಪ್ತರ್ಚಂ ದದರ್ಶ ಚ ಜಜಾಪ ಚ ॥

(ಅನು. ಭಾ. ೭-೫೫)

ಒಂದಾನೊಂದು ಕಾಲದಲ್ಲಿ ವಸಿಷ್ಠನು ಮೂರು ದಿನಗಳವರೆಗೂ ಯಾವ ಆಹಾರವೂ ದೊರೆಯದೆ ಉಪವಾಸದಿಂದಲೂ, ಬಾಯಾರಿಕೆಯಿಂದಲೂ ಬಳಲಿ ಬೆಂಡಾಗಿ ನಾಲ್ಕನೆಯ ದಿವಸದ ರಾತ್ರಿ ತನ್ನ ತಂದೆಯಾದ ವರುಣನ ಮನೆಗಾದರೂ ಹೋಗಿ ಕದ್ದಾದರೂ ಅನ್ನವನ್ನು ತಿಂದು ಬರಬೇಕೆಂದು ನಿಶ್ಚಯಿಸಿ ವರುಣನ ಗೃಹವನ್ನು ಪ್ರವೇಶಿಸಿದನು. ಆಗ ಕೊಟ್ಟಗೆಯ ಸಮೀಪದಲ್ಲಿ ಮಲಗಿದ್ದ ನಾಯಿಯು ಇವನನ್ನು ಕಚ್ಚುವುದಕ್ಕೆ ಬರಲು ಆಗ ವಸಿಷ್ಠನು ಹೆದರಿ **ಯದರ್ಜುನ ಸಾರಮೇಯ** ಎಂದು ಮೊದಲಾಗುವ ಈ ಸೂಕ್ತದ ಏಳು ಋಕ್ಕುಗಳಿಂದ (೩-೯ ಋಕ್ಕುಗಳಿಂದ) ಆ ನಾಯಿಯನ್ನು ಸಮಾಧಾನಪಡಿಸಿ ನಿದ್ರಿಸುವಂತೆ ಮಾಡಿ ಆ ಋಕ್ಕುಗಳನ್ನು ಪಠಿಸಿ ಅವುಗಳಿಗೆ ಮಂತ್ರದ್ರಷ್ಟೃವಾದ ಋಷಿಯಾದನು ಎಂದು ಮಹಾಭಾರತದ ಅನುಶಾಸನಪರ್ವದಲ್ಲಿ ಹೇಳಿದೆ.

ಸೂಕ್ತ—೫೫

ಮಂಡಲ—೭ ॥ ಅನುವಾಕ—೩ ॥ ಸೂಕ್ತ—೫೫ ॥
ಅಷ್ಟಕ—೫ ॥ ಅಧ್ಯಾಯ—೪ ॥ ವರ್ಗ—೨೨ ॥
ಸೂಕ್ತದಲ್ಲಿರುವ ಮಕ್ಕಳಂಖ್ಯೆ—೮ ॥
ಋಷಿಃ—ವಸಿಷ್ಠಃ ॥
ದೇವತಾ—೧ ವಾಸ್ತೋಷ್ಪತಿಃ । ೨-೮ ಇಂದ್ರಃ ॥
ಛಂದಃ—೧ ಗಾಯತ್ರೀ । ೨-೪ ಉಷ್ಣಿಕ್ಸ್ಥಾಪ್ಯ ಬೃಹತೀ ।
೫-೮, ಅನುಷ್ಟುಪ್ ॥

ಸಂಹಿತಾಪಾಠಃ

ಅಮೀವಹಾ ವಾಸ್ತೋಷ್ಪತೇ ವಿಶ್ವಾ ರೂಪಾಣ್ಯಾವಿಶನ್ ।
ಸಖಾ ಸುಶೇವ ಏಧಿ ನಃ ॥ ೧ ॥

ಪದಪಾಠಃ

ಅಮೀವಹೇತಿ ಅಮೀವಹಾ । ವಾಸ್ತೋಃ । ಪತೇ । ವಿಶ್ವಾ । ರೂಪಾಣಿ । ಆವಿಶನ್ ।
ಸಖಾ । ಸುಶೇವ ಇತಿ ಸುಶೇವಃ । ಏಧಿ । ನಃ ॥ ೧ ॥

ಸಾಯಣಭಾಷ್ಯ.

ಹೇ ವಾಸ್ತೋಷ್ಪತೇ ಗೃಹಸ್ಯ ಪಾಲಕೈತಸ್ಸಂಜ್ಞಕ ಬೀಜ ಅಮೀವಹಾಮಿವಾನಾಂ ರೋಗಾಣಾಂ ನಾಶಕಸ್ತ್ವಂ ವಿಶ್ವಾ ವಿಶ್ವಾನಿ ಬಹೂನಿ ರೂಪಾಣ್ಯಾವಿಶನ್ ಪ್ರವಿಶನ್ । ಯದ್ಯೆಮ್ಯೂಪಂ ಕಾಮಯಂತೇ ತತ್ತ್ವದ್ವೇವಾ ವಿಶಂತಿ । ನಿ ೧೦-೧೭ । ಇತಿ ಯಾಸ್ಕಃ । ನೋಽಸ್ಮಾಕಂ ಸಖಾ ಮಿತ್ರಭೂತಃ ಸುಶೇವಃ ಸುಷ್ಠು ಸುಖಕರ ಏಧಿ । ಭವ ॥

ಪ್ರತಿಪದಾರ್ಥ

ವಾಸ್ತೋಷ್ಪತೇ—ಎಲೈ ವಾಸ್ತೋಷ್ಪತಿದೇವನೇ, । **ಅಮೀವಹಾ**—ರೋಗನಾಶಕನಾದ ನೀನು । **ವಿಶ್ವಾ**—ಅನೇಕವಿಧವಾದ । **ರೂಪಾಣಿ**—ಸ್ವರೂಪಗಳನ್ನು । **ಆವಿಶನ್**—ಹೊಂದುತ್ತ । **ನಃ**—ನಮಗೆ । **ಸಖಾ**—ಮಿತ್ರನಾಗಿಯೂ । **ಸುಶೇವಃ**—ಸುಖಕಾರಕನಾಗಿಯೂ । **ಏಧಿ**—ಆಗಿರು.

ಭಾವಾರ್ಥ

ಎಲೈ ವಾಸ್ತೋಷ್ಪತಿದೇವನೇ, ರೋಗನಾಶಕನಾದ ನೀನು ಅನೇಕವಿಧವಾದ ಸ್ವರೂಪಗಳನ್ನು ಹೊಂದುತ್ತ ನಮಗೆ ಮಿತ್ರನಾಗಿಯೂ, ಸುಖಕಾರಕನಾಗಿಯೂ ಆಗಿರು.

English Translation

Protector of the dwelling, remover of disease, assuming all (kinds of) forms, be to us a friend the granter of happiness.

ವಿಶೇಷವಿಷಯಗಳು

ವಾಸ್ತೋಷ್ಪತಿಶಬ್ದದ ನಿರ್ವಚನವನ್ನು ವಿವರಿಸುವದಕ್ಕಾಗಿ ಯಾಸ್ಕರು ಈ ಋಕ್ಕಿಗೆ ನಿರುಕ್ತವನ್ನು ಹೇಳಿದಾರೆ

ವಾಸ್ತೋಷ್ಪತಿಃ । ವಾಸ್ತುರ್ವಸತೇರ್ನಿವಾಸಕರ್ಮಣಸ್ತಸ್ಯ ಪಾತಾ ವಾ ಪಾಲಯಿತಾ ವಾ ॥ ತಸ್ಯೈಷಾ ಭವತಿ ॥ ಅಮೀವಹಾ ವಾಸ್ತೋಷ್ಪತೇ ವಿಶ್ವಾರೂಪಾಣ್ಯಾವಿಶನ್ । ಸಖಾ ಸುಶೇವ ಏಧಿನಃ ॥

ಅಭ್ಯಮನಹಾ ವಾಸ್ತೋಷ್ಪತೇ ಸರ್ವಾಣಿ ರೂಪಾಣ್ಯಾವಿಶನ್ ಸಖಾ ನಃ ಸುಸುಖೋ ಭವ। ಶೇವ ಇತಿ ಸುಖನಾಮ ಶಿಷ್ಯತೇರ್ವಕಾರೋ ನಾಮಕರಣೋಽನ್ತಸ್ಥಾನ್ತರೋಪಲಿಂಗೇ । ವಿಭಾಷಿತಗುಣಃ ಶಿವಮಿತ್ಯಸ್ಯೈಷ ಭವತಿ । ಯದ್ರೂಪಂ ಕಾಮಯತೇ ತತ್ತದ್ಭೇಷಜಂ ಭವತಿ। ರೂಪಂ ರೂಪಂ ಮಘವಾ ಬೋಭವೀತಿ ಇತ್ಯಪಿ ನಿಗಮೋ ಭವತಿ ॥

(ನಿ. ೧೦-೧೭)

ವಾಸ್ತುಶಬ್ದವು **ವಸ್**-ವಾಸಿಸು ಎಂಬ ಧಾತುವಿನಿಂದ ನಿಷ್ಪನ್ನವಾಗಿ ಈ ಶಬ್ದಕ್ಕೆ ವಾಸಮಾಡುವ ಗೃಹವರ್ಗವೆಂದು ಅರ್ಥವಿದೆ. **ಪತಿಃ** ಎಂದರೆ ಸ್ವಾಮಿಯು ಅಥವಾ ರಕ್ಷಕನು ಆದ್ದರಿಂದ **ವಾಸ್ತೋಷ್ಪತಿ** ಯೆಂದರೆ ವಾಸಮಾಡುವ ಗೃಹಕ್ಕೆ ಸ್ವಾಮಿಯು ಅಥವಾ ಅದರ ಸಂರಕ್ಷಕನು ಎಂದರ್ಥವು. ಈ ಶಬ್ದದ ಪ್ರಯೋಗವನ್ನು ವಿವರಿಸುವದಕ್ಕಾಗಿ ಪ್ರಕೃತ ಋಕ್ಕನ್ನೇ ಉದಾಹರಣೆಯಾಗಿ ತೆಗೆದುಕೊಂಡು ಅರ್ಥವಿವರಣೆಮಾಡಿರುವರು

ಎಲ್ಲಿ ಗೃಹಾಧಿಪತಿಯೇ, ನೀನು ರೋಗಗಳ ನಾಶಕನು ನೀನು ನಾನಾರೂಪಗಳನ್ನು ಧರಿಸಲು ಶಕ್ತನಾಗಿದ್ದೀಯೆ. ನೀನು ನಮಗೆ ಯಾವಾಗಲೂ ಸುಖಕರನಾದ ಎಂದರೆ ಹಿತಕಾರಿಯಾದ ಸ್ನೇಹಿತನಾಗಿರು ಎಂದು ಈ ಮಂತ್ರದ ಅರ್ಥವು ಶೇವ ಎಂಬ ಶಬ್ದಕ್ಕೆ ಸುಖವೆಂದರ್ಥವು. ಈ ಶಬ್ದವು **ಶಿಷ್** ಎಂಬ ಧಾತುವಿಗೆ **ವ** ಎಂಬ ಪ್ರತ್ಯಯವು ಸೇರಿ **ಶಿವ** ಎಂದಾಗಿ ಅನಂತರ ವಿಕಾರಕ್ಕೆ ಗುಣ ಒಂದು **ಶೇ** ಎಂದಾಗಿರುವುದು. ಎಂದರೆ **ಶೇವ** ಎಂಬ ರೂಪವು ಸಿದ್ಧಿಸುವುದು **ಶಿವ** ಎಂಬ ಶಬ್ದವೂ ಇದೇ ಧಾತುವಿನಿಂದ ನಿಷ್ಪನ್ನವಾಗಿದೆ

ಈ ವಾಸ್ತೋಷ್ಪತಿಯಾದ ದೇವನು ಯಾರು ಎಂದರೆ **ಈ** ದೇವನಿಗೆ ರೋಗರುಜಿನಗಳನ್ನು ಗುಣಪಡಿಸುವ ಶಕ್ತಿಯಿರುವದರಿಂದ ವಾಸ್ತೋಷ್ಪತಿಯೆಂದರೆ ರುದ್ರನೆಂದು ಕೆಲವರು ಹೇಳುವರು ದೇವತೆಗಳಿಗೆ ಇಷ್ಟವಾದ ರೂಪವನ್ನು ಧರಿಸಲೇಕೆಂದು ಇಷ್ಟವಿಲ್ಲದ ಆಯಾ ರೂಪಗಳನ್ನು ಧರಿಸಬಲ್ಲರು ಈ ವಿಷಯದಲ್ಲಿ **ರೂಪಂರೂಪಂ ಮಘವಾ ಬೋಭವೀತಿ** ಎಂಬ ಶ್ರುತಿವಾಕ್ಯವೇ ಉದಾಹರಣೆಯಾಗಿರುವುದು

ಸಂಹಿತಾಪಾಠಃ

ಯದ್ಜರ್ಜುನ ಸಾರಮೇಯ ದತಃ ಪಿಶಂಗ ಯಚ್ಛಸೇ ।

ವೀವ ಭ್ರಾಜಂತ ಋಷ್ಟಯ ಉಪ ಸ್ಕಂಭೇಷು ಬಪ್ಸತೋ ನಿ ಷು ಸ್ವಪ ॥

ಪದಪಾಠಃ

ಯತ್ । ಅರ್ಜುನ । ಸಾರಮೇಯ । ದತಃ । ಪಿಶಂಗ । ಯಚ್ಛಸೇ ।

ವೀಇವ । ಭ್ರಾಜಂತೇ । ಋಷ್ಟಯಃ । ಉಪ । ಸ್ಕಂಭೇಷು । ಬಪ್ಸತಃ । ನಿ । ಸು । ಸ್ವಪ ॥ ೨ ॥

ಸಾಯಣಭಾಷ್ಯಂ

ಹೇ ಅರ್ಜುನ ಶ್ವೇತ ಹೇ ಸಾರಮೇಯ । ಸರಮಾ ನಾಮ ದೇವಶುನೀ । ತಸ್ಯಾಃ ಕುತೋಽಪ್ಯೇವ ಹೇ ಪಶಂಗ ಕೇಚಿದಂಗೇಷು ಪಿಂಗಲವರ್ಣೋಽವಂಭೂತ ಹೇ ಶುನಕ ತ್ವಂ ದತೋ ದಂತಾನ್ ದಿದಾ ಯೆ ಚ್ಛಸೇ ವಿವೃಣೋಷಿ । ಅಸ್ಮಾನ್ಪಶ್ವಮಿತ್ಯರ್ಥಃ । ತದಾನೀಂ ನೀವ ಭ್ರಾಜಂತ ಋಷ್ಟಯೋ ಯುಷ್ಮಾಯು ಧಾನಿ ವಿಶೇಷೇಣ ಭಾಸಂತೇ ತಥೋಪಾಸ್ಮತ್ಸೈನ್ಯೇಷು ಬಭ್ಲತೋ ಭಕ್ಷಯತಸ್ತವ ದಂತಾಃ ಸ್ರಕ್ವೇಷು ಸ್ರಕ್ತ್ವಾಸು ಭಾಸಂತೇ । ಸ್ರಕ್ವಾಶಬ್ದ ಓಷ್ಠಪ್ರದೇಶವಿಶೇಷವಾಚೀತ್ಯರ್ಥಃ । ತಥಾಭೂತಸ್ತ್ವ ಮಿಹಾನೀಂ ಸು ಸುಷ್ಠು ನಿ ಸ್ವಪ । ನಿತರಾಂ ನಿದ್ರಾಂ ಕುರು ॥

ಪ್ರತಿಪದಾರ್ಥ

ಅರ್ಜುನ—ಶ್ವೇತವರ್ಣವುಳ್ಳವನೂ । **ಪಿಶಂಗ**—ಕೆಲವು ಅಂಗಗಳಲ್ಲಿ ಮಾತ್ರ ಪಿಂಗಲವರ್ಣವುಳ್ಳವನೂ । **ಸಾರಮೇಯ**—ಸರಮಾಪುತ್ರನಾದ ಎಲೈ ಸಾರಮೇಯನೇ । **ಯತ್**—ಯಾವಾಗ । **ದತಃ**—ದಂತಗಳನ್ನು । **ಯಚ್ಛಸೇ**—ತೋರಿಸುತ್ತಿರುವೆಯೋ ಆಗ । **ವಿ ಭ್ರಾಜಂತಃ**—ಬೀಸಲಾಗಿ ಪ್ರಕಾಶಿಸುತ್ತಿವೆ । **ಋಷ್ಟಯಃ ಇವ**—ಆಯುಧಗಳಂತೆ **ಉಪ ಬಭ್ಲತೇ**—ಕಚ್ಚಲು ಬಾಯಿತೆರೆದು ಕೊಂಡಿರುವ ಸಮಯದಲ್ಲಿ ನಿನ್ನ ಸ್ರಕ್ವೇಷು (ಅದೂ ಸಹ) **ಸು**—ಚೆನ್ನಾಗಿ ನಿದ್ರೆಮಾಡು

ಭಾವಾರ್ಥ

ಶ್ವೇತ ವರ್ಣವು, ಕೆಲವು ಅಂಗಗಳಲ್ಲಿ ಹೊಂಬಣ್ಣವೂ ಆಗಿರುವ ನಾಯಿಯೇ (ಸಾರಮೇಯ) ನಿನ್ನನ್ನು ಕಚ್ಚಲು ಬಾಯಿ ತೆರೆದು ಹಲ್ಲುಗಳನ್ನು ತೋರಿಸುತ್ತಿರುವೆ ಆಗ ಆ ನಿನ್ನ ದಂತಗಳು ವಿಶೇಷವಾಗಿ ಪ್ರಕಾಶಿಸುವ ಆಯುಧಗಳಂತೆ ತೀಕ್ಷ್ಣವಾಗಿರುವುದರಿಂದ ಕೂಡಲೆ ಭಕ್ಷಿಸುತ್ತವೆ ಆದರೂ ಸಹ ನೀನು ಸದ್ದಿಲ್ಲದೆ ಸುಮ್ಮನೆ ಮಲಗಿ ನಿದ್ರಿಸು

English Translation

White offspring of Sarama, with tawny limbs, although bearing you display your teeth against me, bristling like lances in your gums never the less, go quietly to sleep,

ವಿಶೇಷವಿಷಯಗಳು

ಈ ಋಕ್ಕಿನಲ್ಲಿ ವರುಣನ ಮನೆಯ ಬಾಗಿಲಿನಲ್ಲಿದ್ದ ನಾಯನ್ನು ಸಮಾಧಾನಪಡಿಸಿ ಸಾಮವೇದವು ಎಂದು ಸಂಬೋಧಿಸಿದಾನೆ. ಸರಮೇ ಎಂಬುದು ದೇವಶುನಿಯು ಎಂದರೆ ದೇವಲೋಕದಲ್ಲಿರುವ ದಿವ್ಯನಾಯಿಯು ಆ ನಾಯಿಯ ಮರಿಯಾದ್ದರಿಂದ ಇದನ್ನು ಸಾರಮೇಯ ಎಂದು ಕರೆಯಲಾಗಿದೆ. ಸರಮೆಯು ಇಂದ್ರನ ಆಜ್ಞಾನುಸಾರವಾಗಿ ದೇವತೆಗಳ ಗೋವುಗಳನ್ನು ಅಪಹರಿಸಿ ಗುಹೆಯಲ್ಲಿ ಬಚ್ಚಿಟ್ಟಿದ್ದ ಪಣಿಗಳೆಂಬ ಅಸುರರನ್ನು ಹುಡುಕಿ ಅವರೊಡನೆ ಸಂಭಾಷಣೆಮಾಡಿ, ದೇವತೆಗಳ ಶಕ್ತಿಯನ್ನು ಅವರಿಗೆ ತಿಳಿಸಿ ಅಪಹೃತವಾದ ಗೋವುಗಳನ್ನು ಬಿಡಿಸಿಕೊಂಡು ಬರಲು ಸಹಾಯ ಮಾಡಿತೆಂದು ಹತ್ತನೆಯ ಮಂಡಲದ ೧೦೮ನೇ ಸೂಕ್ತದಲ್ಲಿ ವಿವರಣೆ ಇದೆ ಈ ಸರಮೆಯ ವಿಷಯವನ್ನು ನಾವು ಬೇರೆಕಡೆ ವಿಸ್ತಾರವಾಗಿ ವಿವರಿಸುತ್ತೇನೆ.

प्रकृत ऋक्किನಲ್ಲಿ ವಿವರಿಸಿರುವ ನಾಯಿಯ ವಿಷಯದಲ್ಲಿ ಬೃಹದ್ದೇವತೋಕ್ತವಾದ ಒಂದು ಪೂರ್ವೇತಿಹಾಸವಿದೆ.—

वरुणस्य गृहान्त्प्रो वसिष्ठः स्वप्ने आचरत् ।
प्रविवेशाथ तं तत्र श्वा नदन्नभ्यधावत ॥
क्रन्दंतं सारमेयं स धावंतं दक्षुमुद्यतं ।
यदर्जुनेति च द्वाभ्यां सान्तयित्वा व्यसुप्सपत् ।
स तं प्रस्वापयामास जनमन्यं च वारुणं ॥

(बृ. दे. ६-७६)

ಒಂದು ದಿವಸ ರಾತ್ರೆಕಾಲದಲ್ಲಿ ಸ್ವಪ್ನದಲ್ಲಿ ಎಂದರೆ ನಿದ್ರೆಯಲ್ಲಿಯೇ ಎಚ್ಚರವಿಲ್ಲದೆ ತಿರಗಾಡುತ್ತಾ ತನ್ನ ತಂದೆಯಾದ ವರುಣನ ಗೃಹಕ್ಕೆ ಪ್ರವೇಶಮಾಡಿದನು ಆ ವೇಳೆಯಲ್ಲಿ ಅಲ್ಲಿ ಮಲಗಿದ್ದ ಒಂದು ನಾಯಿಯು ಇವನನ್ನು ಕಚ್ಚುವುದಕ್ಕಾಗಿ ಬೊಗಳುತ್ತ ಅಟ್ಟಿಸಿಕೊಂಡು ಬಂದಿತು. ಅದನ್ನು ಸಮಾಧಾನಪಡಿಸುವುದಕ್ಕಾಗಿ ಪ್ರಕೃತ ಸೂಕ್ತದ ಯದರ್ಜುನ ಎಂದು ಮೊದಲಾಗುವ ಈ ಸೂಕ್ತದ ೨-೪ ಋಕ್ಕುಗಳಿಂದ ಆ ನಾಯಿಯನ್ನು ಸಮಾಧಾನಗೊಳಿಸಿ ಅದನ್ನೂ ಅಲ್ಲಿ ಮಲಗಿದ್ದ ವರುಣನ ಕಡೆಯ ಜನರನ್ನೂ ನಿದ್ರಿಸುವಂತೆ ಮಾಡಿದನು ಎಂಬ ಕಥೆ ಇದೆ. ಈ ನಾಯಿಯನ್ನೂ ಭೃತ್ಯಾದಿ ಜನರನ್ನೂ ಸಮಾಧಾನಪಡಿಸಿ ನಿದ್ರಿಸುವಂತೆಮಾಡಿದ ವಿಷಯವೇ ಈ ಸೂಕ್ತದಲ್ಲಿ ವರ್ಣಿತವಾಗಿದೆ

संहितापाठः

स्तेनं रायः सारमेयं तस्करं वा पुनस्सर ।
स्तोत्र्यान्निंद्रस्य रायसि किमस्मान्द्वक्षुनायसे नि षु स्वप ॥ ४ ॥

पदपाठः

स्तेनं । रायः । सारमेयं । तस्करं । वा । पुनरित्सर ।
स्तोत्र्यान् । इंद्रस्य । रायसि । किं । अस्मान् । द्वक्षुनायसे । नि । सु । स्वप ॥ ४ ॥

सायणभाष्यं

हे पुनःसर । गतमेव देशं पुनः सरतीति पुनःसरः । तादृग्भूत हे सारमेय श्वं स्तेनं । प्रच्छन्नधनापहारिं स्तेनं । तं तस्करं । प्रत्यक्षधनापहारिं तस्करं तं वा रायः । गच्छ । इंद्रस्य स्तोत्र्यानस्मान् किं रायसि । गच्छसि । अस्मान्द्वक्षुनायसे । किं बाधसे । नि षु स्वप । अत्यंतं निद्रां कुरु ॥

प्रतिपदार्थः

पुनःसर—पुनःपुनः ಅಟ್ಟಿಸಿಕೊಂಡು ಬರತಕ್ಕ । सारमेयं—ಎಲೈ ಸಾರಮೇಯನೇ । स्तेनं—ಕದಿಯತಕ್ಕ । तस्करं वा—ಕಳ್ಳನನ್ನು ಮಾತ್ರ । रायः—ಅಟ್ಟಿಸಿಕೊಂಡು ಹೋಗು. । इंद्रस्य—

ಇಂದ್ರನ । **ಸ್ತೋತ್ಯಾನ್**—ಸ್ತುತಿಕರ್ತರಾದ ನಮ್ಮನ್ನು । **ಕಿಂ ರಾಯೆಸಿ**—ಯಾತಕ್ಕೆ ಅಟ್ಟಿಸಿಕೊಂಡು ಬರುವೆ? । **ಅಸ್ಮಾನ್**—ನಮ್ಮನ್ನು । **ದುಚ್ಛುನಾಯಸೇ**—ಯಾತಕ್ಕಾಗಿ ಬಾಧಿಸುವೆ? । **ನಿ ಷು ಸ್ವಪ**—ಸದ್ದಿಲ್ಲದೆ ನಿದ್ರೆಮಾಡು

ಭಾವಾರ್ಥ

ಪುನಃಪುನಃ ಅಟ್ಟಿಸಿಕೊಂಡು ಬರುವ ಎಲೈ ಸಾರಮೇಯವೇ, ಧನಾಪಹಾರವನ್ನು ಮಾಡುವ ಕಳ್ಳನನ್ನು ಮಾತ್ರ ನೀನು ಅಟ್ಟಿಸಿಕೊಂಡು ಹೋಗು. ಇಂದ್ರನ ಸ್ತುತಿಕರ್ತರಾದ ನಮ್ಮನ್ನು ಏತಕ್ಕೆ ಅಟ್ಟಿಸಿಕೊಂಡು ಬರುವೆ? ಏತಕ್ಕಾಗಿ ನಮ್ಮನ್ನು ಹಿಂಸಿಸುವೆ? ಸದ್ದಿಲ್ಲದೆ ನಿದ್ರೆಮಾಡು

English Translation

Offspring of Sarama, returning (to the charge), attack the pilferer or the thief why do you assail the worshippers of Indra? why do you intimidate us? go quietly to sleep

ಸಂಹಿತಾಪಾಠಃ

ತ್ವಂ ಸೂಕರಸ್ಯ ದರ್ದೃಹಿ ತವ ದರ್ದರ್ತು ಸೂಕರಃ ।

ಸ್ತೋತ್ಯಾನಿಂದ್ರಸ್ಯ ರಾಯಸಿ ಕಿಮಸ್ಮಾನ್ದುಚ್ಛುನಾಯಸೇ ನಿ ಷು ಸ್ವಪ ॥ ೪ ॥

ಪದಪಾಠಃ

ತ್ವಂ । ಸೂಕರಸ್ಯ । ದರ್ದೃಹಿ । ತವ । ದರ್ದರ್ತು । ಸೂಕರಃ ।

ಸ್ತೋತ್ಯಾನ್ । ಇಂದ್ರಸ್ಯ । ರಾಯಸಿ । ಕಿಂ । ಅಸ್ಮಾನ್ । ದುಚ್ಛುನಾಯಸೇ । ನಿ । ಸು । ಸ್ವಪ ॥ ೪ ॥

ಸಾಯಣಭಾಷ್ಯಂ

ಹೇ ಸಾರಮೇಯ ತ್ವಂ ಸೂಕರಸ್ಯ ವರಾಹಸ್ಯ ॥ ದ್ವಿತೀಯಾರ್ಥೇ ಷಷ್ಠೀ ॥ ದರ್ದೃಹಿ । ವಿದಾರಯ । ಸೂಕರೋಽಪಿ ತವ ದರ್ದರ್ತು । ವಿದಾರಯತು । ಯುವಯೋರ್ನಿತ್ಯವೈರಿತ್ವಾತ್ । ಅಸ್ಮಾನ್ಮಾ ದಶೇತ್ಯರ್ಥಃ ॥ ಸ್ತೋತ್ಯನಿತ್ಯರ್ಥರ್ಚಃ ಪೂರ್ವಸ್ಯಾಮೃಚಿ ವ್ಯಾಖ್ಯಾತಃ ॥

ಪ್ರತಿಪದಾರ್ಥ

(ಎಲೈ ಸಾರಮೇಯವೇ) **ತ್ವಂ**—ನೀನು । **ಸೂಕರಸ್ಯ**—ಹಂದಿಯನ್ನು । **ದರ್ದೃಹಿ**—ಕಚ್ಚು । **ಸೂಕರಃ** ವರಾಹವು । **ತವ**—ನಿನ್ನನ್ನು । **ದರ್ದರ್ತು**—ಕಚ್ಚಲಿ । **ಇಂದ್ರಸ್ಯ**—ಇಂದ್ರನ । **ಸ್ತೋತ್ಯಾನ್**—ಸ್ತುತಿಕರ್ತರಾದ ನಮ್ಮನ್ನು । **ಕಿಂ ರಾಯೆಸಿ**—ಏತಕ್ಕಾಗಿ ಅಟ್ಟಿಸಿಕೊಂಡು ಬರುವೆ? । **ಅಸ್ಮಾನ್**—ನಮ್ಮನ್ನು । (**ಕಿಂ**) **ದುಚ್ಛುನಾಯಸೇ**—ಏತಕ್ಕೆ ಹಿಂಸಿಸುವೆ? । **ನಿ ಷು ಸ್ವಪ**—ಸದ್ದಿಲ್ಲದೆ ನಿದ್ರೆಮಾಡು.

ಭಾವಾರ್ಥ

ಎಲೈ ಸಾರಮೇಯವೇ, ನೀನು ಹಂದಿಯನ್ನು ಕಚ್ಚು ಹಂದಿಯು ನಿನ್ನನ್ನು ಕಚ್ಚಲಿ. ಪರಸ್ಪರ ನಿಮ್ಮಲ್ಲಿ ಮಾತ್ರ ಕಲಹವಾಗಲಿ. ಇಂದ್ರನ ಸ್ತುತಿಕರ್ತರಾದ ನಮ್ಮನ್ನು ಏತಕ್ಕಾಗಿ ಅಟ್ಟಿಸಿಕೊಂಡು ಬರುವೆ? ನಮ್ಮನ್ನು ಏತಕ್ಕೆ ಹಿಂಸಿಸುವೆ? ಸದ್ದಿಲ್ಲದೆ ನಿದ್ರೆಮಾಡು.

English Translation

Do you rend the hog: let the hog rend you: why do you assail the worshippers of Indra? why do you intimidate us? go quietly to sleep.

ಸಂಹಿತಾಪಾಠಃ

ಸಸ್ತು ಮಾತಾ ಸಸ್ತು ಪಿತಾ ಸಸ್ತು ಶ್ವಾ ಸಸ್ತು ವಿಶ್ಪತಿಃ ।

ಸಸಂತು ಸರ್ವೇ ಜ್ಞಾತಯಃ ಸಸ್ತ್ವಯಮಭಿತೋ ಜನಃ ॥ ೫ ॥

ಪದಪಾಠಃ

ಸಸ್ತು । ಮಾತಾ । ಸಸ್ತು । ಪಿತಾ । ಸಸ್ತು । ಶ್ವಾ । ಸಸ್ತು । ವಿಶ್ಪತಿಃ ।

ಸಸಂತು । ಸರ್ವೇ । ಜ್ಞಾತಯಃ । ಸಸ್ತು । ಅಯಂ । ಅಭಿತಃ । ಜನಃ ॥ ೫ ॥

ಸಾಯಣಭಾಷ್ಯಂ

ಹೇ ಸಾರಮೇಯ ಮಾತಾ ತ್ವದೀಯಾ ಜನನೀ ಸಸ್ತು । ಸ್ವಪತು । ಪಿತಾ ಚ ಸಸ್ತು । ಶ್ವಾ ಸಾರಮೇಯೋ ಭವಾನ್ ಸಸ್ತು । ವಿಶ್ಪತಿರ್ಜಾಮಾತಾ ಯದ್ವಾ ವಿಶಾಂ ಜನಾನಾಂ ಪಾಲಕೋ ಗೃಹೀ ಸಸ್ತು । ಸರ್ವೇ ಜ್ಞಾತಯೋ ಬಂಧವೋಽಪಿ ಸಸಂತು । ಸ್ವಪಂತು । ಅಭಿತಃ ಪರಿತಃ ಸ್ಥಿತೋಽಯಮಪಿ ಸರ್ವೋ ಜನಃ ಸಸ್ತು । ಸ್ವಪತು ॥

ಪ್ರತಿಪದಾರ್ಥ

(ಎಲೈ ಸಾರಮೇಯವೇ,) **ಮಾತಾ**—ನಿನ್ನ ಜನನಿಯು । **ಸಸ್ತು**—ಮಲಗಿ ನಿದ್ರೆಮಾಡಲಿ. । **ಪಿತಾ**—ನಿನ್ನ ತಂದೆಯೂ । **ಸಸ್ತು**—ನಿದ್ರೆಮಾಡಲಿ । **ಶ್ವಾ**—ಸರಮಾಪುತ್ರನಾದ ನೀನೂ । **ಸಸ್ತು**—ನಿದ್ರೆಮಾಡು. ।**ವಿಶ್ಪತಿಃ**—ಗೃಹಜನರ ಪಾಲಕನಾದ ಯಜಮಾನನೂ । **ಸಸ್ತು**—ನಿದ್ರೆಮಾಡಲಿ. । **ಸರ್ವೇ ಜ್ಞಾತಯಃ**—ಸಕಲ ಬಂಧು ಜನರೂ । **ಸಸಂತು**—ನಿದ್ರೆಮಾಡಲಿ. । **ಅಭಿತಃ**—ಸುತ್ತಲೂ ಇರುವ । **ಅಯಂ ಜನಃ**—ಈ ಪರಿವಾರಜನರೆಲ್ಲರೂ **ಸಸ್ತು**—ನಿದ್ರೆಮಾಡಲಿ.

ಭಾವಾರ್ಥ

ಎಲೈ ಸಾರಮೇಯವೇ, ನಿನ್ನ ಜನನಿಯು ಮಲಗಿ ನಿದ್ರೆಮಾಡಲಿ. ನಿನ್ನ ತಂದೆಯೂ ನಿದ್ರೆಮಾಡಲಿ. ಸರಮಾಪುತ್ರನಾದ ನೀನೂ ನಿದ್ರೆಮಾಡು. ಗೃಹಜನರ ಪಾಲಕನಾದ ಯಜಮಾನನೂ ನಿದ್ರೆಮಾಡಲಿ. ಸಕಲ ಬಂಧು ಜನರೂ ನಿದ್ರೆಮಾಡಲಿ. ಸುತ್ತಲೂ ಇರುವ ಈ ಪರಿವಾರಜನವೆಲ್ಲವೂ ನಿದ್ರೆಮಾಡಲಿ.

English Translation

Let the mother sleep, let the father sleep, let the dog sleep, let the lord of the house sleep, let all the kindred sleep, let the people (who are stationed) around sleep.

ಸಂಹಿತಾಪಾಠಃ

ಯ ಆಸ್ತೇ ಯಶ್ಚ ಚರತಿ ಯಶ್ಚ ಪಶ್ಯತಿ ನೋ ಜನಃ ।

ತೇಷಾಂ ಸಂ ಹನ್ಮೋ ಅಕ್ಷಾಣಿ ಯಥೇದಂ ಹರ್ಮ್ಯಂತಥಾ ॥ ೬ ॥

ಪದಪಾಠಃ

ಯಃ । ಆಸ್ತೇ । ಯಃ । ಚ । ಚರತಿ । ಯಃ । ಚ । ಪಶ್ಯತಿ । ನಃ । ಜನಃ ।

ತೇಷಾಂ । ಸಂ । ಹನ್ಮಃ । ಅಕ್ಷಾಣಿ । ಯಥಾ । ಇದಂ । ಹರ್ಮ್ಯಂ । ತಥಾ ॥ ೬ ॥

ಸಾಯಣಭಾಷ್ಯಂ

ಯೋ ಜನ ಆಸ್ತೇ ಅಸ್ಮಿನ್ಪ್ರದೇಶೇ ತಿಷ್ಠತಿ ಯಶ್ಚ ಚರತಿ ಗಚ್ಛತಿ ಯಶ್ಚ ಜನೋ ನೋಽಸ್ಮಾನ್ಪಶ್ಯತಿ ಏವಂಭೂತಾನಾಂ ತೇಷಾಂ ಜನಾನಾಮಕ್ಷಾಣೀಂದ್ರಿಯಾಣಿ ಸಂ ಹನ್ಮಃ । ಸಂಹನನಮ । ಸಂಹತಿರ್ನಿಮೀಲನಂ । ನಿಮಿಲಯಾಮೀತ್ಯರ್ಥಃ । ಇದಂ ಪ್ರತ್ಯಕ್ಷೇಣೋಪಲಭ್ಯಮಾನಂ ಹರ್ಮ್ಯಂ ಪ್ರಾಸಾದಾದಿಸ್ಥಾವರಾತ್ಮಕಂ ವಸ್ತುಜಾತಂ ಯಥಾ ನಿಶ್ಚಲಂ ಭವತಿ ತಥೈವಮೇ ಸರ್ವೇ ಜನಾ ನಿಶ್ಚಲಾ ಭವಂತ್ವಿತ್ಯರ್ಥಃ ॥

ಪ್ರತಿಪದಾರ್ಥ

ಯಃ—ಯಾವ ಜನರು । **ಆಸ್ತೇ**—ಇಲ್ಲಿ ನಿಂತಿದ್ದಾರೆಯೋ । **ಯಶ್ಚ**—ಯಾರು । **ಚರತಿ**—ಸಂಚರಿಸುವರೋ, । **ಯಶ್ಚ ಜನಃ**—ಯಾವ ಜನರು । **ನಃ**—ನಮ್ಮನ್ನು । **ಪಶ್ಯತಿ**—ನೋಡಬಲ್ಲರೋ । **ತೇಷಾಂ**—ಆ ಎಲ್ಲ ಜನರ । **ಅಕ್ಷಾಣಿ**—ಚಕ್ಷುರಾದೀಂದ್ರಿಯಗಳನ್ನು । **ಇದಂ ಹರ್ಮ್ಯಂ**—ಈ ಉಪ್ಪರಿಗೆಮನೆಯು । **ಯಥಾ**—ಯಾವ ರೀತಿ ನಿಶ್ಚಲವಾಗಿರುವುದೋ । **ತಥಾ**—ಹಾಗೆ ಇವರೂ ನಿಶ್ಚಲವಾಗಿರುವಂತೆ । **ಸಂ ಹನ್ಮಃ**—ಕಣ್ಣನ್ನು ಮುಚ್ಚಿಬಿಡುತ್ತೇವೆ

ಭಾವಾರ್ಥ

ಇಲ್ಲಿ ಯಾವ ಜನರು ನಿಂತಿದ್ದಾರೆಯೋ, ಯಾರು ಸಂಚರಿಸುವರೋ, ಯಾರು ನಮ್ಮನ್ನು ನೋಡಬಲ್ಲರೋ ಆ ಎಲ್ಲ ಜನರ ಚಕ್ಷುರಾದೀಂದ್ರಿಯಗಳನ್ನು ಸಹ ಈ ಉಪ್ಪರಿಗೆಮನೆಯು ಯಾವ ರೀತಿ ನಿಶ್ಚಲವಾಗಿರುವುದೋ ಅದೇ ರೀತಿ ನಿಶ್ಚಲವಾಗಿಬಿಡುವಂತೆ ನಾವು ಕಣ್ಣನ್ನು ಮುಚ್ಚಿಬಿಡುತ್ತೇವೆ.

English Translation

The man who sits, or he who walks, or he who sees us, of these we shut up the eyes, so that they may be as unconcious as the mansion.

ಸಂಹಿತಾಪಾಠಃ

ಸಹಸ್ರಶೃಂಗೋ ವೃಷಭೋ ಯಃ ಸಮುದ್ರಾದುದಾಚರತ್ ।

तेना सहस्येना वयं नि जनान्त्स्वापयामसि ॥ ३ ॥

पदपाठः

सहस्रऽशृंगः । वृषभः । यः । समुद्रात् । उत्ऽआचरत् ।

तेन । सहस्येन । वयं । नि । जनान् । स्वापयामसि ॥ ३ ॥

सायणभाष्यं

सहस्रशृंगः सहस्रकिरणो वृषभो कामानां वर्षिता यः सूर्यः समुद्रादंबुधेः सकाशादुदाचरत् उदागच्छति सहस्येनाभिभवित्रा तेन सूर्येण वयं स्तोतारो जनान् सर्वान्नि स्वापयामसि । नितरां स्वापयामः ॥

प्रतिपदार्थ

सहस्रशृंगः—सावितारु किरणगळुळ्ळवनू । वृषभः—कामवर्षकनू आद । यः—यावन सूर्यनु । समुद्रात्—समुद्रदिंद । उदाचरत्—उदयिसि बरुवनो । सहस्येन—सकलवन्नु निरोधिसुव । तेन—आ सूर्यन सहायदिंद । वयं—स्तुतिकर्तरादा नावु । जनान्—ई सकल जनरन्नू । नि स्वापयामसि—निश्चलरागि निद्रिसुवंते माडुवेवु

भावार्थ

सावितारु किरणगळुळ्ळवनू, कामवर्षकनू आद यावन सूर्यनु समुद्रदिंद उदयिसिबरुवनो, अंतह सकलवन्नु निरोधिसुव आ सूर्यन सहायदिंद स्तुतिकर्तरादा नावु ई सकल जनरन्नु तडेगट्टि निल्लिसि निश्चलरागि निद्रिसुवंते माडुवेवु.

English Translation

We put men to sleep through the irresistible might of the bull with a thousand horns, (sun) who rises out of the ocean.

संहितापाठः

प्रोष्ठेशया वह्येशया नारीर्यास्तल्पशीवरीः ।

स्त्रियो याः पुण्यगंधास्ताः सर्वाः स्वापयामसि ॥ ४ ॥

पदपाठः

प्रोष्ठेऽशयाः । वह्येऽशयाः । नारीः । याः । तल्पऽशीवरीः ।

स्त्रियः । याः । पुण्यऽगंधाः । ताः । सर्वाः । स्वापयामसि ॥ ४ ॥

ಸಾಯಣಭಾಷ್ಯಂ

ಯಾ ಯೋದೃಶ್ಯೋ ನಾರೀರ್ನಾರ್ಯಃ ಸ್ತ್ರಿಯಃ ಪ್ರೋಷ್ಠೇಶಯಾಃ ಸ್ವಾಂಕಶೇ ಶಯಾನಾಃ । ಯಾ ವಹ್ಯೇಶಯಾಃ । ವಹ್ಯಂ ವಾಹನಂ । ತಲ್ಪಶೀವರೀಃ । ಯಾಸ್ತಲ್ಪಶೀವರೀಸ್ತಲ್ಪಶಯಾಃ । ಯಾಃ ಸ್ತ್ರಿಯಃ ಪುಣ್ಯಗಂಧಾಃ ಮಂಗಲ್ಯಗಂಧಾಃ । ತಾಸ್ತಾದೃಶೀಃ ಸರ್ವಾಃ ಸ್ತ್ರೀಃ ಸ್ವಾಪಯಾಮಸಿ । ವಯಂ ನಿದ್ರಾಂ ಕಾರಯಾಮಃ ॥

ಪ್ರತಿಪದಾರ್ಥ

ಯಾಃ ನಾರೀಃ—ಯಾವ ಸ್ತ್ರೀಯರು । **ಪ್ರೋಷ್ಠೇಶಯಾಃ**—ಹೊರಗಿನ ಅಂಗಳದಲ್ಲಿ ಮಲಗಿರುವರೋ । **ವಹ್ಯೇಶಯಾಃ**—ಯಾರು ಮಂಚಗಳ ಮೇಲೆ ಮಲಗಿರುವರೋ, । **ತಲ್ಪಶೀವರೀಃ**—ಯಾರು ಸುಪ್ಪತ್ತಿಗೆಯ ಮೇಲೆ ಮಲಗಿರುವರೋ । **ಯಾಃ ಸ್ತ್ರಿಯಃ**—ಯಾವ ಸ್ತ್ರೀಯರು । **ಪುಣ್ಯಗಂಧಾಃ**—ಮಂಗಳಕರವಾದ ಗಂಧಯುಕ್ತರಾಗಿರುವರೋ । **ತಾಃ ಸರ್ವಾಃ**—ಆ ಎಲ್ಲಾ ಸ್ತ್ರೀಯರನ್ನೂ । **ಸ್ವಾಪಯಾಮಸಿ**—ನಿದ್ರಿಸುವಂತೆ ಮಾಡುವೆವು.

ಭಾವಾರ್ಥ

ಯಾವ ಸ್ತ್ರೀಯರು ಹೊರಗಿನ ಅಂಗಳದಲ್ಲಿ ಮಲಗಿರುವರೋ ಅವರನ್ನೂ, ಹಾಗೆಯೇ ಮಂಚಗಳ ಮೇಲೆ ಮಲಗಿರುವವರನ್ನೂ, ಸುಪ್ಪತ್ತಿಗೆಯಮೇಲೆ ಮಲಗಿರುವವರನ್ನೂ ಮತ್ತು ಯಾವ ಸ್ತ್ರೀಯರು ಮಂಗಳಕರವಾದ ಸುಗಂಧಯುಕ್ತರಾಗಿರುವರೋ ಅವರನ್ನೂ ಈ ಎಲ್ಲಾ ಸ್ತ್ರೀಯರನ್ನೂ ನಿದ್ರಿಸುವಂತೆ ಮಾಡುತ್ತೇನೆ

English Translation

We put to sleep all those women who are lying in the courtyard, in litter on the bed, the women who are decorated with holiday perfumes

---

ಐವತ್ತಾರನೆಯ ಸೂಕ್ತವು

ಪೀಠಿಕೆ

ಈ ಸೂಕ್ತದಲ್ಲಿಯೂ ಮುಂದಿನ ಮೂರು ಸೂಕ್ತಗಳಲ್ಲಿಯೂ ಮರುದ್ದೇವತೆಗಳನ್ನು ಸ್ತುತಿಸಲಾಗಿದೆ ಈ ಮರುದ್ದೇವತೆಗಳ ವಿಷಯವನ್ನು ಇಲ್ಲಿ ವಿವರಿಸುವುದು ಅವಶ್ಯಕವಾಗಿದೆ

ಮರುದ್ದೇವತೆಗಳ ಸೂಕ್ಷ್ಮಪರಿಚಯ

ಋಗ್ವೇದದಲ್ಲಿ ಮರುದ್ದೇವತೆಗಳನ್ನು ರುದ್ರಪುತ್ರರೆಂದು ಕರೆಯುವ ರೂಢಿಇದೆ. ಇವರು ರುದ್ರಪುತ್ರರು ಹೇಗಾದರು ಎಂಬ ವಿಷಯದಲ್ಲಿ ಸಾಯಣರು ಈರೀತಿ ವಿವರಿಸಿದಾರೆ—

ರುದ್ರೋ ಯದ್ಯೋ ಮರುತೋ ರುಕ್ಮವಕ್ಷಸೋ ವೃಷಾಜನಿ ಪೃತ್ನಾಸು ಶುಷ್ಮ ಊಧನಿ ॥

(ಋ. ಸಂ. ೨-೩೪-೨)

ಎಂಬ ಋಕ್ಕಿನಲ್ಲಿ ಹೇಳುವಂತೆ ಮರುತ್ತುಗಳು ರುದ್ರಪುತ್ರರಾಗಿ ಪೃಶ್ನಿಯಲ್ಲಿ ಹುಟ್ಟಿದರೆಂದು ಪ್ರಸಿದ್ಧವಾದ ಕಥೆ ಇರುವುದರಿಂದ ಇವರನ್ನು ಸಂಬೋಧಿಸುವಾಗಲೆಲ್ಲಾ ಈ ವಿಶೇಷಣವನ್ನೇ ಹೆಚ್ಚಾಗಿ ಉಪಯೋಗಿಸಿದೆ. ಈ ಋಕ್ಕನ್ನು ವಿವರಿಸುವಾಗ ಸಾಯಣಾಚಾರ್ಯರು ಇನ್ನೊಂದು ಕಥೆಯನ್ನೂ ಹೇಳುತ್ತಾರೆ—

ಪೃಶ್ನಿರ್ನಾನಾವರ್ಣಾ ಇಯಂ ಭೂಮಿಃ ಪುರಾ ಗೋರೂಪಧರಾಸೀತ್ । ತಸ್ಯಾಂ ಮಹೇಶೋ ವೃಷೋ ಭೂತ್ವಾ ಮರುತ ಉತ್ಪಾದಯಾಮಾಸೇತ್ಯಾಚಕ್ಷತೇ ॥

(ಸಾಯಣಭಾಷ್ಯ. ಋ. ಸಂ. ೨-೩೪-೨)

ನಾನಾವರ್ಣವುಳ್ಳ ಪೃಥ್ವಿಯು ಹಿಂದೆ ಗೋರೂಪವನ್ನು ಧರಿಸಿದಾಗ ಮಹೇಶನು ವೃಷಭರೂಪದಿಂದ ಮರುತ್ತುಗಳನ್ನು ಉತ್ಪನ್ನಮಾಡಿದನು ಎಂಬ ಕಥೆಯಿದೆ ಎಂದು ಸಾಯಣರು ರುದ್ರನ ಮತ್ತು ಮರುತ್ತುಗಳ ಪಿತಾಪುತ್ರಸಂಬಂಧವನ್ನು ತಿಳಿಸಿದಾರೆ ಮತ್ತು ಮೇಲಿನ ಋ. ಸಂ ೨-೩೪-೨ ನೇ ಋಕ್ಕಿನಲ್ಲಿ ಹೇಳಿರುವ ಕಥೆಯು ತೈತ್ತಿರೀಯಸಂಹಿತೆಯಲ್ಲಿಯೂ ಉಕ್ತವಾಗಿರುವುದರಿಂದ ಅಲ್ಲಿನ ವಾಕ್ಯವನ್ನೂ ಉದಾಹರಿಸಿದಾರೆ.

ಪೃಶ್ನಿಯೈ ವೈ ಪಯಸೋ ಮರುತೋ ಜಾತಾಃ ।

(ತೈ ಸಂ ೨-೨-೧೧-೪)

ಆದುದರಿಂದಲೇ ಅನೇಕ ಕಡೆಗಳಲ್ಲಿ ಮರುತ್ತುಗಳಿಗೆ ರುದ್ರಪುತ್ರರೆಂದೇ ಸಂಬೋಧನೆ ಇದೆ. ಉದಾಹರಣೆಗೆ—

ಪ್ರ ಯೇ ಶುಂಭಂತೇ ಜನಯೋ ನ ಸಪ್ತಯೋ ಯಾಮನ್ರುದ್ರಸ್ಯ ಸೂನವಃ ಸುದಂಸಸಃ ।

(ಋ ಸಂ ೧-೪೧೧)

ಇದಂ ಪಿತ್ರೇ ಮರುತಾಮುಚ್ಯತೇ ವಚಃ ಸ್ವಾದೋಃ ಸ್ವಾದೀಯೋ ರುದ್ರಾಯ ವರ್ಧನಂ ।
ರಾಸ್ವಾ ಚ ನೋ ಅಮೃತ ಮರ್ತಭೋಜನಂ ತ್ಮನೇ ತೋಕಾಯ ತನಯಾಯ ಮೃಳ ॥

(ಋ ಸಂ ೧-೧೧೪-೬)

ಎಂಬ ಋಕ್ಕುಗಳಲ್ಲಿಯೂ, ಹೀಗೆಯೇ ಋ. ಸಂ. ೧ ೧೬೪-೯, ೨-೩೩-೧ ಮುಂತಾದ ಅನೇಕ ಕಡೆಗಳಲ್ಲಿಯೂ ಮರುತ್ತುಗಳಿಗೆ ರುದ್ರಪುತ್ರರೆಂಬ ವಿಶೇಷಣವಿದೆ. ಮೇಲೆ ಉದಹರಿಸಿರುವ ೧-೧೧೪-೬ ನೇ ಋಕ್ಕನ್ನು ವಿವರಿಸುವಾಗ ಸಾಯಣರು ಇನ್ನೊಂದು ಕಥೆಯನ್ನು ಹೇಳಿದ್ದಾರೆ—

ರುದ್ರಸ್ಯ ಚ ಮರುತಾಂ ಪಿತೃತ್ವನೋವಮಾಖ್ಯಾಯತೇ । ಪುರಾ ಕದಾಚಿದಿಂದ್ರೋಽಸುರಾನ್ ಜಿಗಾಯ । ತದಾನೀಂ ದಿತಿರಸುರಮಾತಾ ಇಂದ್ರಹನನಸಮರ್ಥಂ ಪುತ್ರಂ ಕಾಮಯಮಾನಾ ತಪಸಾ ಭರ್ತುಃ ಸಕಾಶಾದ್ಗರ್ಭಂ ಲೇಭೇ । ಇಮಂ ವೃತ್ತಾಂತಮವಗಚ್ಛನ್ನಿಂದ್ರೋ ವಜ್ರಹಸ್ತಃಸನ್ ಸೂಕ್ಷ್ಮರೂಪೋ ಭೂತ್ವಾ ತಸ್ಯಾ ಉದರಂ ಪ್ರವಿಶ್ಯ ತಂ ಗರ್ಭಂ ಸಪ್ತಧಾ ಬಿಭೇದ । ಪುನರಪ್ಯೇಕೈಕಂ ಸಪ್ತಖಂಡಮಕರೋತ್ । ತೇ ಸರ್ವೇ ಗರ್ಭೈಕದೇಶಾಯೋನೇರ್ನಿರ್ಗತ್ಯ ಅರುದನ್ । ಏತಸ್ಮಿನ್ನವಸರೇ ಲೀಲಾರ್ಥಂ ಗಚ್ಛಂತಾ ಪಾರ್ವತೀಪರಮೇಶ್ವರೌ ಇಮಾನ್ ದದೃಶತುಃ । ಮಹೇಶಂ ಪ್ರತಿ ಪಾರ್ವತೀ ಏವಮವೋಚತ್ । ಇಮೇ ಮಾಂಸಖಂಡಾ ಯಥಾ ಪ್ರತ್ಯೇಕಂ ಪುತ್ರಾಃ ಸಂಪದ್ಯಂತಾಮೇವಂ ತ್ವಯಾ ಕಾರ್ಯಂ ಮಯಿ ಚೇತ್ಪ್ರೀತಿರಸ್ತೀತಿ । ಸ ಚ ಮಹೇಶ್ವರಸ್ತಾನ್ ಸಮಾನರೂಪಾನ್ ಸಮಾನವಯಸಃ ಸಮಾನಾಲಂಕಾರಾನ್ ಪುತ್ರಾನ್ ಕೃತ್ವಾ ಗೌರ್ಯೈ ಪ್ರದದಾವೇಮೇ ಪುತ್ರಾಃ ಸಂಪ್ತಿತಾ । ಅತಃ ಸರ್ವೇಷು ಮಾರುತೇಷು ಸೂಕ್ತೇಷು ಮರುತೋ ರುದ್ರಪುತ್ರಾ ಇತಿ ಸ್ತೂಯಂತೇ । ರೌದ್ರೇಷು ಚ ಮರುತಾಂ ಪಿತಾ ರುದ್ರ ಇತಿ ॥

(ಸಾಯಣಭಾಷ್ಯ. ಋ. ಸಂ. ೧-೧೧೪-೬)

ಪೂರ್ವದಲ್ಲಿ ಒಂದುಸಲ ಇಂದ್ರನು ಅಸುರರನ್ನು ಜಯಿಸಿದನು. ಆಗ ಅಸುರಮಾತೆಯಾದ ದಿತಿಯು ಇಂದ್ರನನ್ನು ಕೊಲ್ಲಲು ಸಮರ್ಥನಾದ ಒಬ್ಬ ಪುತ್ರನನ್ನು ಪಡೆಯಬೇಕೆಂಬ ಆಸೆಯಿಂದ ತಪಸ್ಸನ್ನಾಚರಿಸಿ ತನ್ನ ಪತಿಯ ಅನುಗ್ರಹದಿಂದ ಗರ್ಭವನ್ನು ಧರಿಸಿದಳು. ಇಂದ್ರನು ಈ ಸಮಾಚಾರವನ್ನು ತಿಳಿದು ವಜ್ರಾಯುಧವನ್ನು ಕೈಯಲ್ಲಿ ಹಿಡಿದುಕೊಂಡು ಸೂಕ್ಷ್ಮರೂಪಿಯಾಗಿ ಬಂದು ಅವಳ ಉದರವನ್ನು ಪ್ರವೇಶಿಸಿ ಆ ಗರ್ಭವನ್ನು ಏಳುಛಾಗವಾಗಿ ಸೀಳಿದನು. ಅವುಗಳಲ್ಲಿ ಪ್ರತಿಯೊಂದನ್ನೂ ಪುನಃ ಏಳೇಳು ತುಂಡುಗಳನ್ನಾಗಿ ಮಾಡಿದನು ಆಗ ಅವೆಲ್ಲವೂ ಮಾತೃಗರ್ಭದಿಂದ ಹೊರಕ್ಕೆ ಬಂದು ಅಳುತ್ತಿದ್ದವು. ಆ ಸಮಯದಲ್ಲಿ ಲೀಲಾರ್ಥವಾಗಿ ಪಾರ್ವತೀಪರಮೇಶ್ವರರಿಬ್ಬರೂ ಸಂಚರಿಸುತ್ತಿದ್ದಾಗ ಇವನ್ನು ನೋಡಿ ಪಾರ್ವತಿಯು ಮರುಕಗೊಂಡು, ಮಹೇಶ್ವರನನ್ನು ಕುರಿತು, ಎಲೈ ಪ್ರಿಯನೇ, ನಿನಗೆ ನನ್ನಲ್ಲಿ ಪ್ರೀತಿಯಿರುವುದಾದರೆ ಅಳುತ್ತಿರುವ ಈ ಮಾಂಸಖಂಡಗಳೆಲ್ಲವನ್ನೂ ಮುಕ್ಕಳನ್ನಾಗಿ ಪರಿವರ್ತಿಸಬೇಕೆಂದು ಪ್ರಾರ್ಥಿಸಿದಳು ಆಗ ಪರಮೇಶ್ವರನು ಪಾರ್ವತಿಯ ಪ್ರಾರ್ಥನೆಯನ್ನು ಮನ್ನಿಸಿ ಅವೆಲ್ಲವನ್ನೂ ಒಂದೇ ವಿಧವಾದ ರೂಪವುಳ್ಳವರನ್ನಾಗಿಯೂ, ಒಂದೇ ವಯಸ್ಸಿನವರಾಗಿಯೂ, ಒಂದೇವಿಧ ಅಲಂಕಾರವುಳ್ಳವರನ್ನಾಗಿಯೂ ಮಾಡಿ ಪುತ್ರರೂಪರಾದ ಅವರನ್ನು-ಇವು ನಿನ್ನ ಪುತ್ರರಾಗಲಿ ಎಂದು ಗೌರಿಗೆ ಕೊಟ್ಟನು ಆದುದರಿಂದ ಮರುತ್ಸೂಕ್ತಗಳಲ್ಲೆಲ್ಲಾ ಮರುತ್ತುಗಳಿಗೆ ರುದ್ರಪುತ್ರರೆಂದೂ, ರುದ್ರಸೂಕ್ತಗಳಲ್ಲಿ ರುದ್ರನಿಗೆ ಮರುತ್ತುಗಳ ತಂದೆಯೆಂದೂ ಹೇಳುವ ರೂಢಿ ಒದಿತೆಂದು ಸಾಯಣರು ಈ ಇತಿಹಾಸವನ್ನು ಹೇಳಿರುತ್ತಾರೆ

ಇಂದ್ರನಿಗೂ ಮರುತ್ತುಗಳಿಗೂ ಇರುವ ಸಾಹಚರ್ಯ

ಇಂದ್ರನಿಗೂ ಮರುತ್ತುಗಳಿಗೂ ಇರುವ ಶಾಶ್ವತವಾದ ಸಾಹಚರ್ಯವು ಪ್ರಸಿದ್ಧವಾದದ್ದು ಇಂದ್ರನಿಗೂ, ಮರುತ್ತುಗಳಿಗೂ ಇರುವ ರಾಜಪ್ರಜಾಸಂಬಂಧವೂ, ಮರುತ್ತುಗಳೊಡಗೂಡಿದ ಇಂದ್ರನಿಗೆ ಮುಖ್ಯವಾದ ಯಜ್ಞಕ್ರಿಯೆಗಳಲ್ಲಿ ಹವಿಸ್ಸಿನ ಅರ್ಪಣೆಯೂ ಮತ್ತು ವೃತ್ರಾಸುರನೊಡನೆ ಯುದ್ಧವನ್ನು ಮಾಡುವಾಗ ಇಂದ್ರನಿಗೆ ಮರುತ್ತುಗಳು ಸಹಾಯನಾಡುವುದೂ ಸಂಹಿತೆಗಳಲ್ಲಿಯೂ, ಬ್ರಾಹ್ಮಣಗಳಲ್ಲಿಯೂ ಅನೇಕಕಡೆ ವರ್ಣಿತವಾಗಿವೆ ಇಂದ್ರನು ಮರುತ್ತುಗಳೊಡನೆ ಸೇರಿಕೊಂಡು ಉಳಿದ ದೇವತೆಗಳಿಂದ ಪ್ರತ್ಯೇಕವಾಗಿದ್ದುದನ್ನು ಹೇಳುವ ಪೂರ್ವಕಥೆಯು ತಪಸಧಬ್ರಾಹ್ಮಣದಲ್ಲಿರುವುದು

ಅತಿಥ್ಯೇನವೈ ದೇವಾ ಇಷ್ವಾ। ತಾನ್ತ್ಸಮದವಿಂದತ್ತೇ ಚತುರ್ಧಾ ವ್ಯದ್ರವನ್ನಸ್ಯೋನ್ಯಸ್ಯ ಶ್ರಿಯಾತಿಷ್ಯಮಾನಾ ಅಗ್ನಿರ್ವಸುಭಿಸ್ಸೋಮೋ ರುದ್ರೈರ್ವರುಣ ಆದಿತ್ಯೈರಿಂದ್ರೋ ಮರುದ್ಭಿರ್ಬೃಹಸ್ಪತಿರ್ವಿಶ್ವೈರ್ದೇವೈಃ ॥

(ಶ. ಬ್ರಾ ೩-೪-೨-೧)

ಹಿಂದೆ ದೇವತೆಗಳು ಆತಿಥ್ಯಕ್ರಿಯೆಯನ್ನು ನೆರವೇರಿಸಿದಾಗ ಅವರವರಲ್ಲೇ ವೈಮನಸ್ಯವುಂಟಾಗಿ ಒಬ್ಬರಿಗೊಬ್ಬರು ಸೇರಲಿಷ್ಟಪಡದೆ ನಾಲ್ಕು ಗುಂಪುಮಾಡಿಕೊಂಡು ಬೇರೆಬೇರೆಯಾದರು ಆಗ ಅಗ್ನಿಯು ವಸುಗಳೊಂದಿಗೂ, ಸೋಮನು ರುದ್ರರೊಂದಿಗೂ, ವರುಣನು ಆದಿತ್ಯರೊಂದಿಗೂ, ಇಂದ್ರನು ಮರುತ್ತುಗಳೊಂದಿಗೂ, ಬೃಹಸ್ಪತಿಯು ವಿಶ್ವೇದೇವತೆಗಳೊಂದಿಗೂ ಕೂಡಿಕೊಂಡು ಪ್ರತ್ಯೇಕವಾಗಿ ಗುಂಪುಮಾಡಿಕೊಂಡರು ಎಂಬ ಕಥೆಯಲ್ಲಿ ಇಂದ್ರನು ಮರುತ್ತುಗಳೊಡನೆ ಸಾಹಚರ್ಯವನ್ನು ಬೆಳೆಸಿ ಅವರೊಡನೆ ಇಟ್ಟುಕೊಂಡಿರುವ ನಿಕಟವಾದ ಸಂಬಂಧವನ್ನು ಹೇಳಿರುವುದು. ಇದೂ ಅಲ್ಲದೆ ಇಂದ್ರನೇ ರಾಜನೆಂದೂ ಮರುತ್ತುಗಳೇ ಪ್ರಜೆಗಳೆಂದೂ ಅನೇಕಕಡೆ ಹೇಳಿದೆ. ಉದಾಹರಣೆಗೆ—

ಕ್ಷತ್ರಂ ವಾ ಇಂದ್ರೋ ವಿಶೋ ಮರುತೋ ವಿಶಾ ವೈ ಕ್ಷತ್ರಿಯೋ ಬಲವಾನ್ ಭವತಿ ॥

(ಶ ಬ್ರಾ. ೪-೩-೩-೬)

ಇಂದ್ರನು ಕ್ಷಾತ್ರತೇಜಸ್ಸುಳ್ಳ ರಾಜನು, ಮರುತ್ತುಗಳೇ ಪ್ರಜೆಗಳು. ಪ್ರಜೆಗಳ ಸಹಕಾರದಿಂದಲೇ ರಾಜನು ಶಕ್ತಿಯುಳ್ಳವನಾಗಿ ಆಗುತ್ತಾನೆಂದೂ ಮರುತ್ತುಗಳ ಸಾಹಾಯದಿಂದ ಇಂದ್ರನ ಪರಾಕ್ರಮವು ವೃದ್ಧಿಯಾಯಿತೆಂದೂ ಸೂಚಿಸಿದೆ. ಈ ರೀತಿಯಾದ ನಿಕಟವಾದ ಸಂಬಂಧವೂ, ಸಾಹಚರ್ಯವೂ ಇರುವುದರಿಂದಲೇ ಇಂದ್ರನನ್ನೂ ಮರುತ್ತುಗಳನ್ನೂ ಒಟ್ಟಿಗೆ ಉದ್ದೇಶಿಸಿ ಹವಿಸ್ಸನ್ನು ಆರ್ಪಿಸುವ ಕ್ರಮವೂ ಶ್ರುತಿಗಳಲ್ಲಿ ಕಂಡುಬರುತ್ತದೆ

ಅನವದ್ಯೈರಭಿ ದ್ಯುಭಿರ್ಮಖಃ ಸಹಸ್ವದರ್ಚತಿ ।
ಗಣೈರಿಂದ್ರಸ್ಯ ಕಾಮ್ಯೈಃ ॥

(ಋ. ಸಂ. ೧-೬ ೪)

ಮಂದ್ರಾಃ ಸುಜಿಹ್ವಾಃ ಸ್ವರಿತಾರ ಆಸಭಿಃ ಸಂಮಿಶ್ಲಾ ಇಂದ್ರೋ ಮರುತಃ ಪರಿಷ್ಟುಭಃ ।

(ಋ ಸಂ ೧೬೬-೧೧)

ಸ ನೋ ಮರುದ್ಭಿರ್ವೃಷಭ ಶ್ರವೋ ಧಾ ಉಗ್ರೇಭಿಃ ಸ್ಥವಿರಃ ಸಹೋದಾಃ ।

(ಋ ಸಂ ೧-೧೭೧-೫)

ಇತ್ಯಾದಿ ಋಕ್ಕುಗಳಲ್ಲಿ ಇಂದ್ರನಿಗೂ ಮರುತ್ತುಗಳಿಗೂ ಒಟ್ಟಿಗೆ ಸೇರಿಸಿ ಆಹ್ವಾನವೂ ಹವಿರರ್ಪಣೆಯೂ ಇರುವುದು ಕಂಡುಬರುತ್ತದೆ. ಈರೀತಿಯ ಸಾಹಚರ್ಯವಿರುವುದರಿಂದಲೇ ಇಲ್ಲಿಯೂ ಸಹ ಮರುತ್ವಾನ್ ಎಂಬ ವಿಶೇಷಣವಿದೆ ಮರುತ್ತುಗಳೊಡಗೂಡಿರುವ ಇಂದ್ರನನ್ನು ಉದ್ದೇಶಿಸಿರುವ ಸಂದರ್ಭಗಳಲ್ಲೆಲ್ಲಾ ಇಂದ್ರನನ್ನು ಮರುತ್ವಾನ್ ಎಂದೇ ಕರೆದಿದೆಯೆಂದು ಬೃಹದ್ದೇವತೆಯೆಂಬ ಗ್ರಂಥದಲ್ಲಿ ಈ ದೇವತೆಗಳ ಸಂಬಂಧಸೂಚಕವಾದ ವಿಶೇಷಣವನ್ನು ವಿವರಿಸಿದೆ.

ವೀರುದ್ಭಿಃ ಸಹ ಯತ್ರೇಂದ್ರೋ ಮರುತ್ವಾಂಸ್ತತ್ರ ಸೋಽಭವತ್ ।

(ಬೃ- ದೇ ೪-೫೬)

ಮರುದ್ದೇವತೆಗಳ ವಿಶೇಷವಿವರಣೆ

ಪುರಾಣಾದಿಗ್ರಂಥಗಳಲ್ಲಿಯೂ, ಆಧುನಿಕಸಾಹಿತ್ಯದಲ್ಲಿಯೂ ಮರುತ್, ವಾಯು ಎಂಬ ಶಬ್ದಗಳ ಅರ್ಥ ವಿಷಯದಲ್ಲಿ ವಿಶೇಷವ್ಯತ್ಯಾಸವು ಕಂಡುಬರುವುದಿಲ್ಲ. ಈ ಶಬ್ದಗಳ ವಿಷಯದಲ್ಲಿ ಗಾಳಿ ಅಥವಾ ವಾಯುದೇವತೆ ಎಂದೇ ಅರ್ಥಮಾಡಿ ವ್ಯವಹರಿಸುವ ರೂಢಿ ಇದೆ. ಆದರೆ ಋಗ್ವೇದದಲ್ಲಿ ಈ ಎರಡು ಶಬ್ದಗಳಿಗೂ ಅರ್ಥದಲ್ಲಿಯೂ, ಪ್ರಯೋಗ ಅಥವಾ ವ್ಯವಹಾರದಲ್ಲಿಯೂ ಪರಸ್ಪರ ಬಹಳ ವ್ಯತ್ಯಾಸವಿದೆ. ವಾಯು ಅಥವಾ ವಾತ ಎಂದರೆ ಅಂತರಿಕ್ಷ ಅಥವಾ ಆಕಾಶದಲ್ಲಿ ವ್ಯಾಪಿಸಿರುವ ಗಾಳಿ ಅಥವಾ ವಾಯುದೇವತೆ ಗಾಳಿ ಎಂಬ ಅರ್ಥಕ್ಕಿಂತಲೂ ವಾಯುದೇವತೆ ಎಂಬ ವ್ಯವಹಾರವೇ ಹೆಚ್ಚು ಬಳಕೆಯಲ್ಲಿದೆ- ಮತ್ತು ಈ ದೇವತೆಯನ್ನು ಸ್ತುತಿಸುವಾಗಲೆಲ್ಲಾ ಏಕವಚನಪ್ರಯೋಗವೇ ಇರುವುದು. ಆದರೆ ಮರುದ್ದೇವತೆಗಳನ್ನು ಯಾವಾಗಲೂ ಬಹುವಚನಪ್ರಯೋಗದಿಂದಲೇ ವ್ಯವಹರಿಸಲಾಗಿದೆ. ಇದಲ್ಲದೆ ವಾಯು ಮತ್ತು ಮರುತ್ತುಗಳ ವೈಶಿಷ್ಟ್ಯದಲ್ಲಿಯೂ ಬಹಳ ವ್ಯತ್ಯಾಸವಿದೆ. ವಾಯುವಿನ ಗುಣವರ್ಣನೆಯು ವಿಶೇಷವಾಗಿಲ್ಲ. ವಾಯುವು ಅಂತರಿಕ್ಷದಲ್ಲಿ ನೆಲೆಸಿರುವುದರಿಂದ ಮಧ್ಯಸ್ಥಾನದೇವತೆಯೆಂದು ಪ್ರಸಿದ್ಧನಾಗಿದಾನೆ. ಮರುತ್ತುಗಳು ಅನೇಕರಾದ್ದರಿಂದ ಇವರನ್ನು ದೇವಗಣವೆಂದು ಕರೆಯುವ ರೂಢಿ ಇದೆ. **ಸಪ್ತಗಣಾವೈ ವೈ ಮರುತಃ, ಮಾರುತಂ ಶರ್ಧಃ; ಮಾರುತಂ ಗಣಂ** ಇತ್ಯಾದಿ ಶಬ್ದಗಳಿಂದ ಅಥವಾ ಇದೇ ಅರ್ಥವಿರುವ ಇತರ ಶಬ್ದಗಳಿಂದ ವ್ಯವಹರಿಸುವುದೇ ರೂಢಿಯು. ಇವರೂ ವಾಯುವಿನಂತೆ ಮಧ್ಯಮಸ್ಥಾನ (ಅಂತರಿಕ್ಷ) ದೇವತೆಗಳೇ ಆಗಿದಾರೆ.

ಮರುತ್ತುಗಳು ಅತಿರಭಸದಿಂದ ಬೀಸುವ ಚಂಡಮಾರುತದ ಸ್ವರೂಪವು. ಮುಂಗಾರುಮಳೆ ಹುಯ್ಯುವಾಗ ಮಳೆ ಬರುವುದಕ್ಕೆ ಮೊದಲು ಅಥವಾ ಮಳೆಯು ಸುರಿಯುತ್ತಿರುವಾಗ ಗಾಳಿಯು ಅತಿರಭಸವಾಗಿ ಬೀಸುವುದು ಎಲ್ಲರಿಗೂ ಅನುಭವದ ವಿಷಯವೇ ಆಗಿದೆ. ರಭಸದಿಂದ ಬೀಸುವ ಈ ಚಂಡಮಾರುತವನ್ನೇ ಮರುದ್ದೇವತೆಗಳ ಸಂಘ ವೆಂದು ಋಗ್ವೇದದಲ್ಲಿ ವರ್ಣಿಸಿದೆ ಮಳೆಯು ಹುಯ್ಯುವುದಕ್ಕೆ ಮೊದಲು ಅಥವಾ ಹುಯ್ಯುವಾಗ ಗಾಳಿಯ ರಭಸವು ವಿಶೇಷವಾಗಿರುವುದು ಆದ್ದರಿಂದ ಮಳೆಗೂ ಮರುತ್ತುಗಳಿಗೂ ವಿಶೇಷ ಸಂಬಂಧವಿದೆ ಆದುದರಿಂದಲೇ ಮರುತ್ತು ಗಳನ್ನು **ಉಕ್ಷಣಃ, ಜಲಸ್ಯ ಸೇಕ್ತಾರಃ** ನೀರಿನಿಂದ ಎಲ್ಲವನ್ನೂ ತೋಯಿಸುವವರು ಎಂದು ಮೊದಲಾದ ವಿಶೇಷಣ ಗಳಿಂದ ಸ್ತುತಿಸಲಾಗಿದೆ. ಇದಲ್ಲದೆ ಗುಡುಗು, ಮಿಂಚು, ಸಿಡಿಲು ಇವುಗಳಿಂದಲೂ, ಅತಿರಭಸವಾಗಿ ಬೀಸುತ್ತಿರುವ ಗಾಳಿಯಿಂದಲೂ ಕೂಡಿರುವ ವೃಷ್ಟಿಗೆ ವೃತ್ರಹನನಾದಿರೂಪವಾದ ಇಂದ್ರನ ಸಂಬಂಧವೂ ಇರುವುದರಿಂದ ಮರುದ್ದೇವತೆ ಗಳಿಗೂ ಇಂದ್ರನಿಗೂ ಸ್ನೇಹವೂ ಸಾಹಚರ್ಯವೂ ಇರುವುದೆಂದು ಅನೇಕಕಡೆ ಹೇಳಿದೆ ವೃಷ್ಟಿಯನ್ನು ಸುರಿಸದೆ ತಡೆದು ಸಿಲ್ಲಿಸಿದ ಮೇಘಗಳನ್ನು ಅಥವಾ ವೃತ್ರನನ್ನು ಇಂದ್ರನು ತನ್ನ ವಜ್ರಾಯುಧದಿಂದ ಪ್ರಹರಿಸಿ ಮಳೆಗರಯುವಂತೆ ಮಾಡುತ್ತಾನೆ. ಆ ವೃಷ್ಟಿಕರ್ಮದಲ್ಲಿ ಮೇಘಗಳನ್ನು ಜಜ್ಜುರಿಸಿ ಮಳೆಹುಯ್ಯುವಂತೆ ಮರುತ್ತುಗಳು ಮಾಡುವುದರಿಂದ ವೃಷ್ಟಿಕರ್ಮಕ್ಕೆ ಮರುತ್ತುಗಳು ಇಂದ್ರನಿಗೆ ಸಹಾಯಮಾಡಿದಂತಾಗುತ್ತದೆ ಈ ಕಾರಣದಿಂದಲೇ ಇಂದ್ರನಿಗೂ ಮರು ತ್ತುಗಳಿಗೂ ವಿಶೇಷರೀತಿಯ ಸಖ್ಯವಿದೆ. ಇಂದ್ರನಿಗೆ ಮರುತ್ವಾನ್ ಎಂಬ ವಿಶೇಷಣವು ಸಹ ಈ ಕಾರಣದಿಂದಲೇ ಉಂಟಾಗಿದೆ.

ಮರುತಃ ಎಂಬ ಶಬ್ದದ ನಿರ್ವಚನ

ಯಾಸ್ಕರು ಮರುತಃ ಎಂಬ ಶಬ್ದದ ನಿರ್ವಚನವನ್ನು ಈರೀತಿ ಹೇಳಿದಾರೆ—

ಅಥಾತೋ ಮಧ್ಯಮಸ್ಥಾನಾ ದೇವಗಣಾಃ । ತೇಷಾಂ ಮರುತಃ ಪ್ರಥಮಾಗಾಮಿನೋ ಭವಂತಿ । ಮರುತಃ । ಮರುತೋ ಮಿತರಾವಿಣೋ ವಾ ಮಿತರೋಚಿನೋ ವಾ ಮಹದ್ದ್ರವಂತೀತಿ ವಾ ॥

(ನಿ ೧೧-೧೪)

ಎಂದರೆ, ಈಗ ಮಧ್ಯಮಸ್ಥಾನವಾದ ಅಂತರಿಕ್ಷಸ್ಥ ದೇವಗಣಗಳ ವಿಷಯವನ್ನು ಹೇಳುತ್ತೇವೆ. ಈ ಗಣಗಳಲ್ಲಿ ಮರುತ್ತುಗಳೇ ಪ್ರಥಮಸ್ಥಾನವು **ಮರುತ್** ಎಂಬ ಶಬ್ದವು ಮಿ + ರು ಎಂಬ ಎರಡು ಧಾತುಗಳಿಂದ ನಿಷ್ಪನ್ನವಾಗಿದೆ. ಕ್ಷಿಪ್ರವಾದ ಎಂದರೆ ಆಳತೆಗೆ ಸರಿಯಾದ, ಒಂದೇವಿಧವಾದ ಅಥವಾ ಒಂದೇಸಮನಾದ ಶಬ್ದಮಾಡುವವರಾದ್ದರಿಂದ ಈ ದೇವತೆಗಳಿಗೆ ಮರುತ್ತುಗಳೆಂದು ಹೆಸರು. ಅಥವಾ ಮಿ + ರುಚ್ ಎಂಬ ಧಾತುಗಳಿಂದ ಮರುತ್ ಶಬ್ದವು ನಿಷ್ಪನ್ನ ವಾದರೆ ಒಂದೇಸಮನಾದ ಪ್ರಕಾಶವುಳ್ಳವರು ಎಂದೂ, ಮಹತ್‌ಪೂರ್ವಕವಾದ ದ್ರು ಧಾತುವಿನಿಂದ ನಿಷ್ಪನ್ನವಾದರೆ ಬಹಳವಾಗಿ, ರಭಸವಾಗಿ ಬೀಸುವವರು ಅಥವಾ ಚಲಿಸುವವರು ಎಂದೂ ನಿರ್ವಚನದ ಅರ್ಥವು

ಸೂಕ್ತಗಳಲ್ಲಿಯೂ ಋಕ್ಕುಗಳಲ್ಲಿಯೂ ಕಂಡುಬರುವ ಮರುದ್ದೇವತೆಗಳ ವಿವರಣೆ

ಈ ಮರುದ್ದೇವತೆಗಳಿಗೆ ಇತರ ದೇವತೆಗಳ ಪಥ್ಯದಲ್ಲಿ ಬಹುಮುಖ್ಯವಾದ ಸ್ಥಾನವಿದೆ. ೩೩ ಪೂರ್ತ ಸೂಕ್ತ ಗಳು ಇವರನ್ನು ಸ್ತುತಿಸಿರುವುದಲ್ಲದೆ ಇಂದ್ರನೊಡನೆ ೭ ಸೂಕ್ತಗಳಲ್ಲಿಯೂ, ಅಗ್ನಿ ಮತ್ತು ಪೂಷನ್ ಎಂಬ ದೇವತೆ

ಗಳೊಡನೆ ಒಂದೊಂದು ಸೂಕ್ತದಲ್ಲಿಯೂ ಒಟ್ಟು ೪೨ ಸೂಕ್ತಗಳಲ್ಲಿ ಇವರು ಸ್ತುತರಾಗಿದಾರೆ. ಇವರನ್ನು ಗಣ ಅಥವಾ ಶರ್ಧ (೧-೩೭-೧) ಇತ್ಯಾದಿ ಶಬ್ದಗಳಿಂದಲೂ ಒಹುವಚನಪ್ರಯೋಗದಿಂದಲೂ ವರ್ಣಿಸಲಾಗಿದೆ. ಅವರು ರುದ್ರನ ಪುತ್ರರು. ಅನೇಕಕಡೆ ಅವರನ್ನು ರುದ್ರರೆಂದೇ ಕರೆಯಲಾಗಿದೆ (೧-೫೯-೪,೭ ಇತ್ಯಾದಿ) ಕೆಲವುವೇಳೆ ಇವರಿಗೆ ರುದ್ರಿಯರೆಂದೂ (೧-೩೮-೭ , ೨-೩೪ ೧೦ ಇತ್ಯಾದಿ) ಹೆಸರಿದೆ. ಪೃಶ್ನಿಯ ಪುತ್ರರು (೨-೩೪-೨ , ೫-೫೨-೧೬ , ೫-೬೦-೫ ; ೫-೬೬-೩) ಪೃಶ್ನಿಮಾತರಃ (ಪೃಶ್ನಿಯೇ ತಾಯಿಯಾಗಿ ಉಳ್ಳವರು) ಎಂದೂ ಅನೇಕಸಲ ಕರೆದಿದೆ. (೧-೨೩-೧೦ ; ೪ ೬. ೫.೨೧ ೧೧ ಇತ್ಯಾದಿ) ಪೃಶ್ನಿ ಎಂಬ ಗೋವೇ (೫ ೫೨-೧೬) ಅಥವಾ ಸಾಧಾರಣವಾದ ಗೋವೇ (೪ ೪೩-೧ ಅವರ ಜನಸಿಯು ಅವರನ್ನು ಗೋಮಾತರಃ ಎಂದೂ ಕರೆದಿದೆ (೧-೪೫-೩ , ೪ ೩೦ ೪) ಈ ಗೋವು ಪ್ರಾಯಶಃ ಚಂಡಮಾರುತದ ನಾನಾವರ್ಣರಂಜಿತವಾದ ಮೇಘವಿರಬಹುದು. ದೊಡ್ಡದಾದ ಕೆಚ್ಚಲುಳ್ಳ ಗೋವುಗಳು ಉರಿಯುತ್ತಾ ಬರುತ್ತವೆ (೨-೩೪-೫) ಎಂಬಲ್ಲಿ ಅವು ಬಿರುಗಾಳಿಯು ಬೀಸುತ್ತಿರುವಾಗ ಮಿಂಚು, ಸಿಡಿಲುಗಳಿಂದಕೂಡಿದ ಮೇಘಗಳೇ ಆಗಿರಬೇಕು. ಪೃಶ್ನಿಯಿಂದ ಜನಿಸಿದಾಗ ಮರುತ್ತುಗಳನ್ನು ಅಗ್ನಿಗೆ ಹೋಲಿಸಿದೆ (೬-೬೬ ೧, ೨, ೩) ಸಿಡಿಲಿನ ಗರ್ಭದಿಂದ ಮರುತ್ತುಗಳು ಜನಿಸಿದರು (೧-೨೩-೧೨) ಅಗ್ನಿಯು ಅವರಿಗೆ ರೂಪವನ್ನು ಕೊಟ್ಟನು ಅಥವಾ ಅವರನ್ನು ಪಡೆದನು (೬-೩-೪ , ೧-೭೧-೪) ವಾಯುವು ಅವರನ್ನು ಅಂತರಿಕ್ಷದ ಯೋನಿಯಲ್ಲಿ ಇಟ್ಟನು (೧ ೧೩೪-೪) ಮತ್ತು ಅವರು ಆಕಾಶದ ಪುತ್ರರು (೧೦-೭೭-೨) ಮತ್ತು ಆಕಾಶದ ವೀರರು. (೧-೬೪ ೪ , ೧-೧೪೨-೧ ; ೫-೫೪-೧೦) ಅಥವಾ ಆಕಾಶದ ಗಂಡುಗಳು (೩-೫೪ ೧೩ ; ೫-೫೯ ೬) ಒಂದು ಕಡೆ ಅವರಿಗೆ ಸಮುದ್ರವು ತಾಯಿ (ಸಮುದ್ರ ಮಾತರಃ) ಎಂದು ಹೇಳಿದೆ (೧೦ ೭೮ ೬) ಬೇರೆ ಕೆಲವು ಸ್ಥಳಗಳಲ್ಲಿ ಆತ್ಮಯೋನಿಗಳು) ತಮ್ಮಿಂದ ತಾವೇ ಜನಿಸಿದವರು) ಎಂದೂ (೧-೧೭೮ ೨ ; ೫-೪೭-೨) ಹೇಳಿದೆ.

ಅವರು ಸಹೋದರರಾದರೂ ಅವರಲ್ಲಿ ಜ್ಯೇಷ್ಠ, ಕನಿಷ್ಠ ಎಂಬ ವ್ಯತ್ಯಾಸವಿಲ್ಲ (೫ ೫೯-೬ , ೫-೬೦ ೫) ಏಕೆಂದರೆ, ಅವರೆಲ್ಲರೂ ಸಮಾನವಯಸ್ಸಿನವರು (೧-೧೬೫-೧) ಅವರೆಲ್ಲಾ ಒಟ್ಟಿಗೆ ಬೆಳೆದವರು (೫-೫೬-೫ , ೭-೫೮ -೧) ಮತ್ತು ಒಂದೇವಿಧವಾದ ಮನಸ್ಸುಳ್ಳವರು (೮-೨೦-೧ ಮತ್ತು ೨೧). ಅವರಿಗೆಲ್ಲಾ ಒಂದೇ ಜನ್ಮಸ್ಥಾನ (೫ ೫೩-೩) ಮತ್ತು ಒಂದೇ ವಾಸಸ್ಥಳ (೧-೧೬೫ ೧ , ೭-೫೬ ೧) ಅವರು ಆಕಾಶದಲ್ಲಿಯೂ, ಭೂಮಿಯಲ್ಲಿಯೂ, ಸ್ವರ್ಗದಲ್ಲಿಯೂ ಬೆಳೆದರು (೫ ೫೫-೭) ಅಥವಾ ಮೂರುಸ್ವರ್ಗದಲ್ಲಿ ಬೆಳೆದರು (೫-೬೦-೬) ಅವರು ಪರ್ವತವಾಸಿಗಳೆಂದೂ ಒಂದುಕಡೆ (೪ ೪೩-೧, ೨) ಹೇಳಿದೆ

ಇಂದ್ರಾಣಿಯು ಅವರಿಗೆ ಮಿತ್ರಳು. ಇಂದ್ರಾಣಿ (೧೦-೮೬-೯) ಮತ್ತು ಸರಸ್ವತಿಯರೊಡನೆ (೭-೯೬-೩) ಕಲೆಯುತ್ತಾರೆ. ಅವರು ಈರೀತಿ ಬಾಂಧವ್ಯವಿಟ್ಟುಕೊಂಡಿರುವುದು ರೋದಸೀ (ದ್ಯಾವಾಪೃಥಿವೀ ಅಥವಾ ರುದ್ರಪತ್ನಿ) ಎಂಬ ದೇವತೆಯೊಡನೆಯೇ ಹೆಚ್ಚು ಅವಳು ಅವರಿಗೆ ಸುಖಸಾಧನಗಳನ್ನು ಒದಗಿಸುತ್ತಾ ಅವರೊಡನೆ ರಥದಲ್ಲಿ ನಿಂತಿರುತ್ತಾಳೆ (೫ ೫೬-೮) ಅಥವಾ ಪಾರ್ಶ್ವದಲ್ಲಿ ನಿಂತಿರುತ್ತಾಳೆ (೬-೬೬-೬). ಅವಳ ಹೆಸರು ಬರುವ ಐದುಸ್ಥಳಗಳಲ್ಲಿಯೂ ಮರುದ್ದೇವತೆಗಳ ಸಹಿತವಾಗಿಯೇ ಇರುವುದು (೧ ೧೬೭-೪, ೫). ಆದುದರಿಂದ ಅಶ್ವಿನೀದೇವತೆಗಳಿಗೆ ಸೂರ್ಯೆಯಂತೆ ಅವಳು ಅವರ ವಧುವೆಂದು ಪರಿಗಣಿತಳಾಗಿದ್ದಾಳೆ. ಇದರಿಂದಲೇ ಅವರಿಗೆ ಭದ್ರಜಾನಯಃ (ಸುಂದರಳಾದ ಭಾರ್ಯೆಯುಳ್ಳವರು (೫-೬೧-೪) ಎಂಬ ವಿಶೇಷಣವು. ಮತ್ತು ಅವರನ್ನು ವರರಿಗೆ (೫-೬೦-೪) ಅಥವಾ ಯುವಕರಾದ ಪ್ರಣಯಿಗಳಿಗೆ (೧೦ ೭೮-೬) ಹೋಲಿಸಲಾಗಿದೆ.

ಮರುದ್ದೇವತೆಗಳ ತೇಜಸ್ಸು ಆಗಾಗ್ಗೆ ಪ್ರಸಕ್ತವಾಗುತ್ತದೆ. ಅವರು ಸುವರ್ಣವರ್ಣದವರು, ಸೂರ್ಯನಂತೆ ಉಜ್ಜ್ವಲವಾದ ಕಾಂತಿಯುಳ್ಳವರು, ಜ್ವಲಿಸುವ ಅಗ್ನಿಯಂತೆ ಈಷದ್ರಕ್ತವರ್ಣವುಳ್ಳವರು. (೬-೬೬-೨ , ೭-೫೯-೧೧ ;

೪-೭-೭) ಬೆಂಕಿಯ ಜ್ವಾಲೆಗಳಂತೆ ಪ್ರಕಾಶಿಸುತ್ತಾರೆ (೧೦ ೭೪-೩) ಅಗ್ನಿಯ ರೂಪವುಳ್ಳವರು ಅಥವಾ ಅಗ್ನಿಯ ತೇಜಸ್ಸುಳ್ಳವರು (೧೦-೪೪ ೧, ೩-೨೬ ೫) ತೇಜಸ್ಸಿನಲ್ಲಿ ಅವರನ್ನು ಅಗ್ನಿಗೆ ಹೋಲಿಸಿದೆ. (೧೦-೭೪-೨) ಅವರು ಅಗ್ನಿಯಂತೆ (೨-೩೪-೧) ಅಥವಾ ಉದ್ದೀಪ್ತನಾದ ಅಗ್ನಿಯಂತೆ (೬-೬೬-೨) ಇದಾರೆ ಅವರಿಗೆ ಅಗ್ನಿಯೆಂದೇ ಹೆಸರು (೩-೨೬-೪) ಸರ್ಪಗಳ ಕಾಂತಿಯುಳ್ಳವರು (ಅಹಿಭಾನವಃ ೧-೧೭೨ ೧). ಪರ್ವತಗಳಲ್ಲಿ ಪ್ರಕಾಶಿಸುತ್ತಾರೆ (೪ ೭-೧) ಅವರು ಸ್ವಭಾನುಗಳು (ಸ್ವತಃ ಪ್ರಕಾಶಿಸುವವರು ೧ ೫೭-೨ ಇತ್ಯಾದಿ) ಈ ವಿಶೇಷಣವು ಬೇರೆ ಯಾವ ದೇವತೆಗಳಿಗೂ ಹೇಳಿಲ್ಲ ಮತ್ತು ಅವರನ್ನು ತೇಜಸ್ವಿಗಳು ಜಾಜ್ವಲ್ಯಮಾನರು ಎಂಬ ವಿಶೇಷಣಗಳಿಂದ ಪದೇಪದೇ ವರ್ಣಿಸಲಾಗಿದೆ. (೧ ೧೬೫-೧೭)

ಅವರಿಗೆ ವಿದ್ಯುತ್ತಿನೊಡನೆ ವಿಶೇಷವಾದ ಸಂಬಂಧವಿದೆ (೫ ೫೪-೩, ೫ ೧೧, ೧-೬೪-೫) ಮರುತ್ತುಗಳು ಘೃತವನ್ನು ಎಂದರೆ ವೃಷ್ಟಿಯನ್ನು ಸುರಿಸುವಾಗ ವಿದ್ಯುತ್ತುಗಳು ಭೂಮಿಯನ್ನು ನೋಡಿ ಹಸನ್ಮುಖರಾಗುತ್ತಾರೆ (೧-೧೬೮ ೪, ೫-೫೩-೬) ಮರುತ್ತುಗಳು ಮಳೆಯನ್ನು ಕರೆಯುವಾಗ ಕರುವನ್ನು ಹಿಂಬಾಲಿಸುತ್ತಾ ಹಸುವು ಅರಚುವಂತೆ ಸಿಡಿಲು ಧ್ವನಿಮಾಡುತ್ತದೆ (೭-೫೬-೧೩) ವಿದ್ಯುತ್ತು ಅವರಿಗೆ ಎಷ್ಟರಮಟ್ಟಿಗೆ ಸಂಬಂಧಿಸಿದೆ ಎಂದರೆ ವಿದ್ಯುತ್ತು ಸಮಾಪ್ತಪದವಾಗಿ ಪ್ರಯುಕ್ತವಾಗಿರುವ ಐದು ಸ್ಥಳಗಳಲ್ಲಿ. ಒಂದು ಹೋತಾಗಿ ಉಳಿದುದೆಲ್ಲವೂ ಮರುತ್ ಎಂಬುದ ರೊಡನೆಯೇ ಇದೆ ಅವರು ಸಿಡಿಲನ್ನು ಕೈಯಲ್ಲಿ ಹಿಡಿದುಕೊಂಡಿದಾರೆ (೪ ೭-೨೫, ೫-೫೪-೧೧) ಸಿಡಿಲೆಂದರೆ ಅವರಿಗೆ ಬಹಳ ಆನಂದ (೫ ೫೪-೩) ಅವರ ಕೈಯಲ್ಲಿ ಭರ್ಜಿಗಳಿವೆ ಇಪ್ಪೆ ಭರ್ಜಿ ಅಥವಾ ಋಷ್ಟಿ ಎಂಬ ಸಿಡಿಲೇ ಇರಬೇಕು ಏಕೆಂದರೆ ಅವರಿಗೆ ಋಷ್ಟಿವಿದ್ಯುತ್—ಸಿಡಿಲನ್ನೇ ಭರ್ಜಿಯನ್ನಾಗಿ ಉಪಯೋಗಿಸುವವರು ಎಂಬ ವಿಶೇಷಣವಿದೆ (೧ ೧೬೮ ೫, ೫-೫೨ ೧೩) ಇನ್ನು ಕೆಲವು ಸ್ಥಳಗಳಲ್ಲಿ ಅವರಿಗೆ ಭಂಗಾರದಿಂದ (೪-೭-೩೭) ಮಾಡಿದ ಕೊಡಲಿಯೂ ಆಯುಧವೆಂದಿದೆ (೧-೩೭-೨, ೧ ೪೮-೩, ೫-೫೩-೪, ೫-೫೭-೨, ೪-೨೦-೪)೫-೫೭-೨, ೪-೨೦-೪) ಒಂದು ಸಲ ಅವರು ವಜ್ರಾಯುಧವನ್ನು ಧರಿಸಿದ್ದಾರೆಂಬ ವರ್ಣನೆಯೂ ಇದೆ. ಕೆಲವು ಸ್ಥಳಗಳಲ್ಲಿ ಅವರನ್ನು ಧನುರ್ಬಾಣಧಾರಿಗಳೆಂದೂ (೫-೫೩-೪ ; ೫-೫೭-೨, ೪-೨೦-೪, ೧೨) ಒಂದುಸಲ ಬಾಣವನ್ನು ಪಿಡುತ್ತಿರುವ ಬಿಲ್ಲುಗಾರರೆಂದೂ ಹೇಳಿದೆ ಆದರೆ ಈ ಲಕ್ಷಣವು ಅವರಿಗೆ ಅಪರೂಪ ಅವರು ಪುಷ್ಪಹಾರ ನೊದಲಾದ ಅಲಂಕಾರಗಳಿಂದ ಅಲಂಕೃತರಾಗಿದಾರೆ (೫-೫೩-೪) ಭಂಗಾರದ ನಡುಪಟ್ಟಿಗಳನ್ನು ಹಾಕಿಕೊಂಡಿದಾರೆ (೫ ೫೫ ೬) ವಿವಾಹಾರ್ಥಿಯಾದ ಶ್ರೀಮಂತನಂತೆ ತಮ್ಮ ದೇಹವನ್ನು ಸುವರ್ಣಾಭರಣಗಳಿಂದ ಅಲಂಕರಿಸಿಕೊಳ್ಳುತ್ತಾರೆ (೫-೬೦-೪). ಬಾಹುಪುರಿ, ಕಾಲಂದಿಗೆಗಳು ಅವರ ವೈಯಕ್ತಿಕ ಆಭರಣಗಳು ಈ ಆಭರಣಗಳಿಂದ ಅಲಂಕೃತರಾದ ಅವರು ನಕ್ಷತ್ರರಂಜಿತವಾದ ಆಕಾಶದಂತೆ ಅಥವಾ ಮೋಡದಿಂದ ಬೀಳುತ್ತಿರುವ ಮಳೆಯ ಹನಿಗಳಂತೆ ಧಳಧಳಿಸುತ್ತಾರೆ. ಅವರ ಭುಜದ ಮೇಲೆ ಭಲ್ಲೆಗಳೂ, ಕಾಲಿನಲ್ಲಿ ಕಾಲಂದಿಗೆಗಳೂ, ಎದೆಯಮೇಲೆ ಸುವರ್ಣಾಭರಣಗಳೂ, ಕೈಗಳಲ್ಲಿ ಕೆಂಡಕಾರುತ್ತಿರುವ ಸಿಡಿಲುಗಳೂ, ತಲೆಯಮೇಲೆ ಸುವರ್ಣಮಯವಾದ ಶಿರಸ್ತ್ರಾಣಗಳೂ ಇವೆ (೫-೫೪-೧೧)

ಮರುದ್ದೇವತೆಗಳು ಉಪಯೋಗಿಸುವ ರಥಗಳು ಮಿಂಚಿನಿಂದ ಹೊಳೆಯುತ್ತವೆ (೧-೪೮-೧, ೫-೫೪-೧೩) ಅವು ಸುವರ್ಣಮಯವಾದವು. (೫-೫೭-೧) ಮತ್ತು ಅವಕ್ಕೆ ಚಿನ್ನದ ಚಕ್ರಗಳು ಅಥವಾ ನೇಮಿಗಳು (೧-೬೪-೧೧ ; ೧-೫೮-೫) ಇವೆ. ಅವುಗಳಲ್ಲಿ ಅವರ ಆಯುಧಗಳಿವೆ. (೫-೫೭-೬) ನೀರಿನ ಬಾನೆಗಳಿವೆ (೧-೪೭-೨) ರಥವನ್ನು ಎಳೆಯುವ ಕುದುರೆಗಳು ಕಂದುಬಣ್ಣದವು (೧-೪೪-೨ ; ೫-೫೭-೪) ಆ ಕುದುರೆಗಳಿಗೆ ಭಂಗಾರದ ಗೊರಸುಗಳಿವೆ. (೪-೭-೩೭) ಅವು ಮನೋವೇಗವುಳ್ಳವು. (೧-೪೫-೪) ಈ ಅಶ್ವಗಳು ಚುಕ್ಕೆಗಳುಳ್ಳವು. ಪೃಷದಶ್ವರೆಂದು (ಚುಕ್ಕೆ

ಚುಕ್ಕೆಯಾಗಿರುವ ಅಶ್ವಗಳುಳ್ಳವರು) ಇವರಿಗೆ ವೈಯಕ್ತಿಕವಾದ ಹೆಸರಿದೆ. ಇವರ ರಥಕ್ಕೆ ಹೆಣ್ಣುಕುದುರೆಗಳನ್ನು ಕಟ್ಟಿದಾರೆಂದೂ (೧-೫೯-೬) ಇದೆ. ಇವರು ಗಾಳಿಯನ್ನು ತಮ್ಮ ರಥಕ್ಕೆ ಅಶ್ವವಾಗಿ ಕಟ್ಟಿದಾರೆಂದು (೫-೫೮-೭)ಹೇಳಿದೆ.

ಮರುತ್ತುಗಳು ಆಕಾಶದಂತೆ ಬೃಹದಾಕಾರವುಳ್ಳವರು (೫-೫೭-೪) ಭೂಮ್ಯಾಕಾಶಗಳನ್ನು ವಿಸ್ತರಿದ್ದಾರೆ (೧೦-೭೭-೩) ಅವರ ಮಹತ್ವರೂಪವು ಅಪರಿಮಿತವಾದುದು (೫-೫೮-೨). ಅವರ ಸಾಮರ್ಥ್ಯದ ಮಿತಿಯನ್ನು ಯಾರೂ ತಿಳಿಯಲಾರರು (೧-೧೬೭-೯) ಅವರು ಯುವಕರು (೧-೬೪-೨, ೧-೧೬೫-೨, ೫-೪೭-೧೫) ಮತ್ತು ಅವರಿಗೆ ವಾರ್ಧಕ್ಯವೇ ಇಲ್ಲ (೧-೬೪-೩) ಅವರು ಅಸುರರು, ಉತ್ಸಾಹಶಾಲಿಗಳು, ಓಜಸ್ವಿಗಳು, ಕೊಳೆಯಿಲ್ಲದವರು (೧-೬೪-೨, ೧೭) ಮತ್ತು ಧೂಳು ಇಲ್ಲದವರು (೬-೬೬-೨) ಭಯಂಕರರೂಪವುಳ್ಳವರು (೧-೧೯-೪) ಸಿಡುಕುಸ್ವಭಾವದವರು (೭-೫೬-೪) ಭಯಂಕರರು (೫-೫೬-೨, ೩, ೭-೫೮ ೨) ದುಷ್ಟನೃಗಗಳಂತೆ ಭೀಕರರು (೭-೩೪-೧೧) ಮಕ್ಕಳಂತೆ ಅಥವಾ ಕರುಗಳಂತೆ ಕ್ರೀಡಾಸಕ್ತರು (೧ ೧೬೬-೨, ೭-೫೬-೧೬೬ , ೧೦-೭೮-೬) ಕಪ್ಪಾದ ಬೆನ್ನುಗಳುಳ್ಳ ಹಂಸಗಳಂತಿದ್ದಾರೆ (೭ ೫೯-೭) ಅಯೋನಿಯವಾದ ಕೋರೆದಾಡೆಗಳುಳ್ಳ ಕಾಡುಹಂದಿಗಳಂತೆಯೂ (೧-೪೪-೫) ಸಿಂಹಗಳಂತೆಯೂ (೧-೬೪-೮) ಇದ್ದಾರೆ.

ಅವರು ಗಟ್ಟಿಯಾಗಿ ಧ್ವನಿಮಾಡುತ್ತಾರೆ (೧-೧೬೬ ೭ ಇತ್ಯಾದಿ) ಆ ಧ್ವನಿಯೇ ಗುಡುಗು (೧ ೨೩-೧೧) ಮತ್ತು ಅದು ಗಾಳಿಬೀಸುವ ಶಬ್ದವು (೭-೫೬-೩) ಅವರು ಬಂದರೆ ಆಕಾಶವು ಭಯದಿಂದ ಅದುರುತ್ತದೆಯೋ ಎನ್ನುವಂತಿದೆ (೫-೭-೨೬) ಪರ್ವತಗಳನ್ನು ಕಂಪಿಸುವಂತೆಯೂ, ಭೂಮಿ ಅಥವಾ ಎರಡುಲೋಕಗಳನ್ನು ನಡುಗುವಂತೆಯೂ ಮಾಡುತ್ತಾರೆ ರಥನೇಮಿಗಳಿಂದ ಪರ್ವಗಳನ್ನು ಅಥವಾ ಬಂಡೆಗಳನ್ನು ಚೂರುಚೂರುಮಾಡುತ್ತಾರೆ (೧-೬೪-೧೧, ೫-೫೨-೯) ಅವರು ಗಾಳಿಯಿಂದ ಸಹಿತರಾಗಿ ಬಂದು ಪರ್ವತಗಳನ್ನು ಕಂಪಿಸುವಂತೆ ಮಾಡುತ್ತಾರೆ (೮-೨೦-೪) ವೃಕ್ಷಗಳನ್ನು ಉರುಳಿಸಿ ಕಾಡಾನೆಗಳಂತೆ ಕಾಡುಗಳನ್ನು ಭಕ್ಷಿಸುತ್ತಾರೆ (೧-೫೯-೫ , ೧-೬೪-೭) ಕಾಡುಗಳು ಅವರಿಗೆ ಹೆದರಿ ನೆಲಕ್ಕೆ ಬಗ್ಗುತ್ತವೆ. (೫-೬೦-೨) ಪರ್ವತಗಳಂತೆ ಅಪ್ರತಿಹತರಾಗಿ ಸ್ವರ್ಗ ಮತ್ತು ಭೂಮಿಗಳ ಪ್ರಾಣಿಗಳನ್ನು ಕೆಳಕ್ಕೆ ಎಸೆಯುತ್ತಾರೆ (೧-೬೪ ೩). ಸರ್ವಪ್ರಾಣಿಗಳೂ ಅವರಿಗೆ ಹೆದರುತ್ತವೆ (೧-೪೫-೪) ಬಿರುಗಾಳಿಯಂತೆ ವೇಗವಾಗಿ ಚಲಿಸುತ್ತಾರೆ (೧೦-೭೮-೩). ಧೂಳನ್ನು ಸುಳಿಯುರೂಪದಲ್ಲಿ ಮೇಲಕ್ಕೆ ಎಬ್ಬಿಸುತ್ತಾರೆ (೧-೬೪-೧೨) ಗಾಳಿಯನ್ನು ಅಥವಾ ಗಾಳಿಯ ಶಬ್ದವನ್ನು ಉಂಟುಮಾಡುತ್ತಾರೆ (೭-೫೬-೩) ಗಾಳಿಯ ಜತೆಯಲ್ಲಿ ಬರುತ್ತಾರೆ (೮-೭ ೩,೪,೧೭) ಅದನ್ನು ತಮ್ಮ ಅಶ್ವವನ್ನಾಗಿ ಮಾಡಿಕೊಳ್ಳುತ್ತಾರೆ (೫ ೫೮-೭)

ಮಳೆಗರೆಯುವುದೇ ಅವರ ಕಾರ್ಯಗಳಲ್ಲಿ ಮುಖ್ಯವಾದುದು ಮಳೆಯು ಅವರ ಉಡುಪು (೫ ೫೭-೪). ಅವರು ಸಮುದ್ರದಿಂದ ಮೇಲಕ್ಕೆ ಎದ್ದು ಮಳೆಯನ್ನು ಸುರಿಸುತ್ತಾರೆ (೧-೩೪ ೯) ಎರಡು ಪ್ರಪಂಚಗಳಲ್ಲಿಯೂ ಮಳೆ ಸುರಿಸುತ್ತಾ ಬೀಸುತ್ತಾರೆ (೧-೬೪-೬ , ೪-೭-೧೬). ಮಳೆಯು ಅವರನ್ನು ಅನುಸರಿಸುತ್ತದೆ (೫-೫೩-೧೦). ನೀರನ್ನು ತರುತ್ತಾರ ಮತ್ತು ಮಳೆಯನ್ನುಂಟುಮಾಡುತ್ತಾರೆ (೫-೫೪-೩) ಮಳೆಯಿಂದ ತಮ್ಮ ಪ್ರಕಾಶವನ್ನು ಮರೆಮಾಡಿಕೊಳ್ಳುತ್ತಾರೆ (೫ ೫೯-೧) ಸೂರ್ಯನ ಕಣ್ಣನ್ನು ಮಳೆಯಿಂದ ಮುಚ್ಚುತ್ತಾರೆ (೫-೫೯-೫). ಮಳೆಗರೆದಾಗ ಮೋಡಗಳಿಂದ ಕತ್ತಲನ್ನುಂಟುಮಾಡುತ್ತಾರೆ (೧-೩೪-೯). ಗಾಳಿಯೊಡನೇ ವೇಗವಾಗಿ ಚಲಿಸುತ್ತಾ ಹಿಮವನ್ನೆರಚುತ್ತಾರೆ (೫-೭-೬) ಅಂತರಿಕ್ಷದ ಬಾನೆ, ಮೋಡ (೫-೫೩ ೬ , ೫-೫೯-೬) ಮತ್ತು ಪರ್ವತಪ್ರವಾಹಗಳು ನೀರುಸುರಿಯುವಂತೆ ಮಾಡುತ್ತಾರೆ (೫-೫೯-೭). ಅವರು ಧಾವಿಸುವಾಗ ನೀರು ಪ್ರವಹಿಸುತ್ತದೆ (೫-೫೮-೬) ಅವರ ಈ ಕಾರ್ಯದಿಂದ ಭೂಲೋಕದ ನದಿಯೊಂದಕ್ಕೆ **ಮರುದ್ವೃಧಾ** (ಮರುತ್ತುಗಳಿಂದ ಅಭಿವೃದ್ಧಿಪಡಿಸಲ್ಪಟ್ಟುದು (೧೦-೭೫-೫) ಎಂಬ

ಹೆಸರು ಬಂದಿದೆ. ರುದ್ರಪುತ್ರರ ಜೆವರೇ ಮಳೆಯಾಯಿತು (೫-೫೮ ೭). ಮರುತ್ತುಗಳಿಂದ ಸೃಷ್ಟವಾದ ವೃಷ್ಟಿಯು ಅಲಂಕಾರಿಕವಾಗಿ ಕ್ಷೀರ (೧-೧೬೬-೩) ಘೃತ (೧-೮೫-೩ , ೧೦ ೮೮-೪) ಕ್ಷೀರ ಮತ್ತು ಘೃತ (೧-೬೪-೬) ಎನಿಸಿ ಕೊಂಡಿದೆ ವಸಂತಕಾಲ (ಮಧುವನ್ನೇ) ಸುರಿಸುತ್ತಾರೆ (೧-೮೫-೧೧) ಅಥವಾ ಭೂಮಿಯನ್ನು ಮಧುವಿನಿಂದ ತೋಯಿಸುತ್ತಾರೆ (೫ ೫೫ ೮) ರಮುದ್ರದಿಂದ ನೀರನ್ನು ಆಕಾಶಕ್ಕೆ ಎತ್ತಿ ಅಲ್ಲಿಂದ ಮಳೆಯ ರೂಪದಲ್ಲಿ ಭೂಮಿಯ ಮೇಲೆ ಸುರಿಸುತ್ತಾರೆ (೫. ವೇ ೪-೩೭ ೪). ಅವರು ಸುರಿಸುವ ಮಳೆಯ ಜತೆಯಲ್ಲಿ ಯಾವಾಗಲೂ ಮಿಂಚು, ಗುಡುಗುಗಳು ಇದ್ದೇ ಇರುತ್ತವೆ ನೀರನ್ನು ಸುರಿಸುವ ಇಚ್ಛೆಯಿಂದ ಮರುತ್ತುಗಳು ಘರ್ಜಿಸುತ್ತಾ ರಭಸದಿಂದ ನುಗ್ಗುತ್ತಾರೆ (೫-೫೪-೩)- ತಮ್ಮ ಸಾಮರ್ಥ್ಯದಿಂದ ಗಾಳಿ, ಮಿಂಚು, ಸಿಡಿಲುಗಳನ್ನು ಉಂಟುಮಾಡುತ್ತಾರೆ ಕೆಚ್ಚಲಿನಿಂದ ಸ್ವರ್ಗೀಯ ವಸ್ತುಗಳನ್ನು ದೋಹನಮಾಡಿ ಭೂಮಿಯನ್ನು ಹಾಲಿನಿಂದ ತುಂಬಿಸುತ್ತಾರೆ (೧-೬೪ ೫) ಅವರಿಂದ ದುಗ್ಧವಾದ ಚಿಲುಮೆಯು ಘರ್ಜಿಸುತ್ತದೆ (೧ ೬೪ ೬) ಅವರಿಂದ ಉದಕವು ಸುರಿಸಿದಾಗ ಆಕಾಶವು ಕೆಂಬಣ್ಣದ ವೃಷಭವು ಗುಟುರುಹಾಕುತ್ತದೆ (೫ ೫೮-೬) ಅಶ್ವವು ನೀರನ್ನು ಸೃಜಿಸುವಂತೆ ಮಾಡುತ್ತಾರೆ (೧-೬೪ ೬) ಆಕಾಶದ ಮಳೆಯನ್ನು ಅನುಗ್ರಹಿಸಿ, ಅಶ್ವದಿಂದ ಉತ್ಪನ್ನವಾದ ಪ್ರವಾಹಗಳು ಜೆನ್ನಾಗಿ ಪ್ರವಹಿಸುವಂತೆ ಮಾಡುತ್ತಾರೆ (೫-೬೩-೬) ಅಶ್ವದೊಡನೆ ನೇರಿ ನೀರನ್ನುಂಟುಮಾಡುವಾಗ, ಮರುತ್ತುಗಳು ಸ್ವರ್ಣವರ್ಣದವರಾಗುತ್ತಾರೆ (೫-೫೪-೧೩ ವೇಳೆಗಳು ಧ್ವನಿಗೈಯ್ಯುವಾಗ ಪ್ರವಾಹಗಳು ಮರುತ್ತುಗಳ ರಥನೇಮಿಗಳ ಧ್ವನಿಯನ್ನು ಪ್ರತಿಧ್ವನಿಸುತ್ತವೆ. (೧-೧೬೮ ೧) ಇಂದ್ರನು ಸುರಿಸುವ ನೀರಿಗೆ **ಮರುತ್ಪತೀ** (ಮರುದ್ದೇವತೆಗಳಿಂದ ಸಹಿತವಾದವು) ಎಂದು ಹೆಸರು (೧-೮೦-೪) ಸೃಷ್ಟಿಕಾರಕರೆಂಬ ಅರ್ಥದಲ್ಲಿಯೇ ಅವರಿಗೆ **ಪುರುದ್ರಪ್ಸಾಃ** (೫ ೫೬ ೫) ಅಥವಾ ರ್ಪ್ಸನಃ (೧-೬೪-೨) ಹೆಚ್ಚಾದ ಜಲಬಿಂದುಗಳುಳ್ಳವರು ಮತ್ತು ಸುದಾನವಃ (ಜೆನ್ನಾಗಿ ನೀರಿನಲ್ಲಿ ನೆನೆದಿರುವವನು) ಎಂಬ ಹೆಸರುಗಳಿವೆ ಅವರು ಶಾಪನನ್ನು ಕಡಿಮೆ ಮಾಡುತ್ತಾರೆ (೫-೫೪-೧೧) ಆದರೆ ಅವರೇ ಕತ್ತಲನ್ನು ಹೋಗಲಾಡಿಸಿ (೭ ೫೬-೨೦) ಬೆಳಕನ್ನುಂಟು ಮಾಡಿ (೧ ೬೬ ೧೦) ಸೂರ್ಯನಿಗೆ ದಾರಿಮಾಡುತ್ತಾರೆ (೮-೭-೮) ವಾಯುವಿನ ಪರಿಮಿತಿಯನ್ನು ಗೊತ್ತುಮಾಡಿದಾರೆ. (೫ ೫೫ ೨) ಭೂಭಾಗಗಗನ್ನು ಮತ್ತು ತೇಜೋಮಿಶ್ರವಾದ ಆಕಾಶಭಾಗಗಳನ್ನು ವಿಸ್ತರಿಸಿ ಎರಡು ಲೋಕಗಳನ್ನು ಪ್ರತ್ಯೇಕಿಸಿದಾರೆ (೪ ೬೩-೯,೧೦)

ಗಾಳಿಯಲ್ಲಿ ಕೇಳಿಬರುವ ಧ್ವನಿಯಿಂದಲೇ ಅವರನ್ನು ಗಾಯಕರೆಂದು ಕರೆದಿರಬಹುದು (೫-೫೭-೧ , ೫-೬೦-೪ , ೫-೫೫-೯) ಅವರು ಸ್ವರ್ಗಲೋಕದ ಗಾಯಕರು (೫-೫೭-೫) ಅವರು ಗಾನವನ್ನು ಮಾಡುತ್ತಾರೆ (೧-೧೯-೪; ೧-೧೬೬-೭) ಅವರು ಹಾಡುತ್ತಾ ಸೂರ್ಯನು ಪ್ರಕಾಶಿಸುವಂತೆ ಮಾಡಿದರು. (೪-೪೯ ೧೦) ಕೊಳಲು ಊದುತ್ತಾ ಪರ್ವತವನ್ನು ಸಿಳಿದರು (೧-೪೫-೧೦) ಇಂದ್ರನು ಅಪಿಯನ್ನು ವಧಿಸಿದಾಗ ಮರುತ್ತುಗಳು ಅವಸಿಗಾಗಿ ಗಾನಮಾಡಿ ಸೋಮರಸವನ್ನು ಸಿದ್ಧಪಡಿಸಿದರು (೫-೪೯ ೨; ೫-೩೦-೬) ಗಾನಮಾಡಿ ಇಂದ್ರನಿಗೆ ಸಾಮರ್ಥ್ಯವನ್ನುಂಟು ಮಾಡಿದರು (೧-೪೫-೨) ಅವರ ಗಾನವೆಂದರೆ ಮುಖ್ಯವಾಗಿ ಗಾಳಿಯಲ್ಲಿ ಕೇಳಿಬರುವ ಶಬ್ದ (೪ ೨೨-೪) ಆದರೂ ಅದು ಸ್ತುತಿಯೆಂದು ಭಾವಿಸಲ್ಪಟ್ಟಿದೆ (೩ ೧೪-೪) ಇಂದ್ರಸಹಿತರಾಗಿರುವಾಗ ಅವರು ಋತ್ವಿಜರೆಂದು ಆಹೂತರಾಗುತ್ತಾರೆ (೫-೨೯-೩) ಮತ್ತು ಋತ್ವಿಜರಿಗೆ ಹೋಲಿಸಲ್ಪಟ್ಟಿದಾರೆ (೧೦-೬೮-೧೦). ಅವರೇ ಮೊದಲು ಯಾಗಮಾಡಿದವರು (೨ ೩೬-೨). ಶಿಷ್ಯರ ಮನೆಗಳಲ್ಲಿ ಅಗ್ನಿಯನ್ನು ಶುದ್ಧಿಮಾಡಿದವರೂ ಇವರೇ. ಅಗ್ನಿಯನ್ನು ಉದ್ದೀಪ್ತಿಗೊಳಿಸಿದವರು ಭೃಗುಗಳು (೧೦-೧೨೨-೫). ಇತರ ಅನೇಕ ದೇವತೆಗಳಂತೆ ಇವರೂ ಸೋಮಪಾನವಾಡಿದವರೆಂದು (೨-೩೬-೨; ೪-೪೫ ೯, ೧೦, ೧೧, ೧೨ ಇತ್ಯಾದಿ) ಹೇಳಲ್ಪಟ್ಟಿದಾರೆ

ಗುಡುಗು, ಮಳೆ ಮತ್ತೂ ಇವರೂ ಒಂದು ಎಂಬ ಭಾವನೆ ಇರುವುದರಿಂದ ಸ್ವಭಾವವಾಗಿ ಇವರು ಇಂದ್ರನ ಸ್ನೇಹಿತರು. ಸಹೋದ್ಯೋಗಿಗಳಾಗಿ ಅವನೊಡನೆ ನಿಕಟಬಾಂಧವ್ಯವುಳ್ಳವರಾಗಿದ್ದಾರೆ. ಕಣ್ವ ಸ್ತುತಿ ಗಾನ ಇವುಗಳಂದ (೧.೧೬೫ ೧೧ ಇತ್ಯಾದಿ) ಇಂದ್ರನ ಶಕ್ತಿಸಾಮರ್ಥ್ಯಗಳನ್ನು ಹೆಚ್ಚಿಸುತ್ತಾರೆ (೩-೨೫-೯, ೬-೧೭-೧೧). ವೃತ್ರನೊಡನೆ ಯುದ್ಧದಲ್ಲಿ ಸಾಧಾರಣವಾಗಿ ಮರುತ್ತುಗಳೇ ಅವನಿಗೆ ಸಹಾಯಕರು (೮-೬೫-೨, ೩ ; ೧೦ ೧೧೩-೩) ತ್ರಿತ ಮತ್ತು ಇಂದ್ರರಿಗೆ ಅವರು ವೃತ್ರನಥೆಯಲ್ಲಿ ಸಹಾಯಮಾಡುತ್ತಾರೆ (೮-೬-೨೪) ವೃತ್ರವಧವನ್ನು ವರ್ಣಿಸುವ ಸೂಕ್ತವನ್ನು ಗಾನಮಾಡುವಂತೆ ಪ್ರಾರ್ಥಿತರಾಗಿದಾರೆ (೮-೬೮-೧, ೨, ೩). ಅಹಿ ಮತ್ತು ಶಂಬರನೊಡನೆ ಇಂದ್ರನು ಮಾಡಿದ ಯುದ್ಧಗಳಲ್ಲಿ ಮರುತ್ತುಗಳು ಅವನಿಗೆ ಸಹಾಯಮಾಡಿದರು (೩-೪೭-೩,೪) ಮರುತ್ಸಹಿತನಾಗಿಯೇ ಇಂದ್ರನು ಬೆಳಕು (೮-೬೫-೪) ಮತ್ತು ಗೋವುಗಳನ್ನು(೧-೬-೫) ಪಡೆದನು. ಮತ್ತು ಆಕಾಶಕ್ಕೆ ಆಧಾರಭೂತನಾದನು (೭-೪೭-೫) ವಾಸ್ತವವಾಗಿ ನೋಡಿದರೆ ಇವರ ಸಹಾಯದಿಂದಲೇ ಇಂದ್ರನು ತನ್ನ ಎಲ್ಲಾ ಸಾಹಸಕಾರ್ಯಗಳನ್ನೂ ಮಾಡಿದಾನೆ (೧-೧೦೦, ೧೦೧, ೧೬೫ ಮತ್ತು ೧೦-೬೫ ನೆಯಸೂಕ್ತಗಳು) ಕೆಲವು ಸಂದರ್ಭಗಳಲ್ಲಿ ಮರುದ್ದೀಪತೆಗಳೇ ಈ ಸಾಹಸ ಕಾರ್ಯಗಳಲ್ಲಿ ಇಂದ್ರನಿಗಿಂತ ಹೆಚ್ಚು ಸ್ವತಂತ್ರರು ಇಂದ್ರನಿಂದ ಸಹಿತರಾಗಿ ಮರುತ್ತುಗಳು ವೃತ್ರನನ್ನು ಪ್ರಹರಿಸುತ್ತಾರೆ (೧-೨೩-೯) ವೃತ್ರಾಸುರನ ಕೀಲುಗಳನ್ನು ಬೇರೆಮಾಡಿದರು (೮-೬-೨೩) ಅಪಹೃತವಾದ ಗೋವುಗಳನ್ನು ಕಂಡುಹಿಡಿದರು (೨-೩೪-೧) ಇತರ ದೇವತೆಗಳಂತೆ ಇವರಿಗೂ ಇಂದ್ರನೇ ನಾಯಕನು (೧ ೨೩-೮ ಇತ್ಯಾದಿ) ಇಂದ್ರನಿಂದ ಸಹಿತರಾಗಿಯೇ ಇವರು ಇರುವರು (೧೦-೧೩೮-೨) ಅವರು ಇಂದ್ರನಿಗೆ ಪುತ್ರಸದೃಶರು (೧-೧೦೦-೫)ಅವನ ಭ್ರಾತೃಗಳೆನಿಸಿಕೊಂಡಿದಾರೆ (೧-೧೬೦-೨) ಒಂದೆರಡು ಸಲಮಾತ್ರ ಮರುತ್ತುಗಳು ಇಂದ್ರನ ಕೈಬಿಟ್ಟರೆಂದು ಹೇಳಿದೆ ಅಹಿಯೊಡನೆ ಅವನೊಬ್ಬನೇ ಯುದ್ಧಮಾಡುವಂತೆ ಸನ್ನಿವೇಶವೊದಗುವಂತೆ ಮಾಡಿ (೧-೧೬೫-೬) ಅವನನ್ನು ಒಂಟಿಯಾಗಿ ಬಿಟ್ಟು ಬಿಟ್ಟರು (೮-೬-೩೧) ಒಂದು ಋಕ್ಕಿನಲ್ಲಿ ಮಾತ್ರ ಇಂದ್ರನಿಗೂ ಇವರಿಗೂ ದ್ವೇಷವೆಂದು ಉಕ್ತವಾಗಿದೆ ಮರುತ್ತುಗಳು- ಎಲೈ ಇಂದ್ರನೇ, ನಮ್ಮನ್ನು ವಧಿಸಲು ಇಚ್ಛಿಸುವುದೇಕೆ? ಯುದ್ಧದಲ್ಲಿ ನಮ್ಮನ್ನು ವಧಿಸಬೇಡ ಎಂದು ಇಂದ್ರನಿಗೆ ಹೇಳಿದಾರೆ (೧-೧೭೦-೨ , ೧ ೧೨೧-೬) ತೈತ್ತಿರೀಯಬ್ರಾಹ್ಮಣದಲ್ಲಿ (ತೈ ಬ್ರಾ ೨-೭ ೧೧-೧) ಇಂದ್ರನಿಗೂ ಮರುತ್ತುಗಳಿಗೂ ಘರ್ಷಣೆಯಾಯಿತೆಂದು ಹೇಳಿದೆ.

ಮರುತ್ತುಗಳು ಇಂದ್ರನೊಡನೆ ಇಲ್ಲದಿರುವ ಕಾಲದಲ್ಲಿ ಅವರಲ್ಲಿ ಹಿಂಸಾತ್ಮಕವಾದ ಗುಣಗಳು ಕಂಡುಬರುತ್ತವೆ. ಈ ವಿಷಯದಲ್ಲಿ ಅವರು ತಮ್ಮ ತಂದೆಯಾದ ರುದ್ರನ ಗುಣಗಳನ್ನು ಪ್ರದರ್ಶಿಸುತ್ತಾರೆ. ಅವರನ್ನು ಸ್ತುತಿಸುವ ಜನರನ್ನೂ ಸಿಡಿಲು ತೊಂದರೆಪಡಿಸದಂತೆಯೂ ಅವರ ದುರಾಗ್ರಹವು ಅವರನ್ನು ಮುಟ್ಟದಂತೆಯೂ ಮಾಡಬೇಕೆಂದು ಪ್ರಾರ್ಥಿತರಾಗಿದಾರೆ (೭ ೫೬-೯). ಅವರು ಎಸೆಯುವ ಬಾಣ ಮತ್ತು ಕಲ್ಲುಗಳನ್ನು(೧-೧೭೨ ೨) ಸಿಡಿಲು (೭ ೫೭-೪) ಗೋವು ಮತ್ತು ಮನುಷ್ಯರನ್ನು ವಧಿಸುವ ವಜ್ರಾಯುಧ (೭-೫೬-೧೭) ನೊದಲಾದ ಆಯುಧಗಳಿಂದ ತಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿತರಾಗಿದಾರೆ ಅವರಿಂದ ಕೆಡಕುಂಟಾಗಬಹುದು (೧ ೪೯-೪) ಅವರು ಕುಪಿತರಾಗಬಾರದೆಂದು ಬೇಡಲಾಗಿದೆ. (೧-೭೧-೧ , ೭-೫೮-೫). ಅವರಿಗೆ ಸರ್ಪಗಳಂತೆ ಕೋಪಬರುತ್ತದೆ (೧ ೬೪-೮,೯) ರುದ್ರನಂತೆ ಇವರಿಂದಲೂ ಸಿಂಧು, ಆಸಿಕ್ನಿ ಎಂಬ ನದಿಗಳೂ, ಸಮುದ್ರಗಳೂ ಮತ್ತು ಪರ್ವತಗಳಲ್ಲಿರುವ ಓಷಧಿಗಳೂ ಪ್ರಾರ್ಥಿತರಾಗಿದಾರೆ (೮-೨೦-೨೩,೨೪,೨೫-೨೬) ಶುದ್ಧವೂ ಅನುಕೂಲವೂ ಸುಖಕರವೂ ಆದ ಚಿಕಿತ್ಸಾವಿಧಾನಗಳು ಮರುತ್ಸಹಿತನಾದ ರುದ್ರನಲ್ಲಿನಿವೆ (೨-೨೩-೧೩) ಆದನ್ನು ಮರುತ್ತುಗಳು ಮಳೆಯರೂಪದಲ್ಲಿ ಕೊಡುತ್ತಾರೆ (೫ ೫೩-೧೪) ಆದುದರಿಂದ ಓಷಧಿ ಎಂದರೆ ಇಲ್ಲಿ ಉದಕವೇ ಇರಬೇಕು. ಅಗ್ನಿಯಂತೆ ಇವರಿಗೂ ಪಾವಕ (ಶುದ್ಧಿಮಾಡುವವರು) ಎಂಬ ವಿಶೇಷಣ ಶಬ್ದಪ್ರಯೋಗವಿದೆ. (೭-೫೬-೧೨ ಇತ್ಯಾದಿ)

ಮೇಲೆ ಹೇಳಿದ ಗುಣಗಳಿಂದ ಮರುತ್ತುಗಳು ಚಂಡಮಾರುತದ ಆಧವಾ ರಭಸದಿಂದ ಬೀಸುವ ಬಿರುಗಾಳಿಯ ದೇವತೆಗಳೆಂಬುದು ಸ್ಪಷ್ಟವಾಗುತ್ತದೆ. ಮರುತ್ ಶಬ್ದಕ್ಕೆ ಗಾಳಿ ಎಂಬ ಸಾಮಾನ್ಯಾರ್ಥಮಾಡುವುದು ಆಧುನಿಕಸಂಸ್ಕೃತ ಭಾಷೆಯಲ್ಲಿ ಯುಕ್ತವೆಂದು ತೋರಿದರೂ ವೇದಗಳಲ್ಲಿ ಮೇಲೆ ಕಂಡ ಗುಣಗಳನ್ನು ಆದರಲ್ಲಿ ವಿವರಿಸಿದಂತೆ ಆಗುವುದಿಲ್ಲ.

ಏನತ್ತಆರನೆಯ ಸೂಕ್ತವು

ಸಾಯಣಭಾಷ್ಯಂ

ಅಥ ಚತುರ್ಥೇಽನುವಾಕೇ ಪಂಚದಶ ಸೂಕ್ತಾನಿ । ತತ್ರ ಕ ಈಂ ವ್ಯಕ್ತಾ ಇತಿ ಪಂಚವಿಂಶತ್ಯೃಚಂ ಪ್ರಥಮಂ ಸೂಕ್ತಂ ವಸಿಷ್ಠಸ್ಯಾರ್ಷಂ ಮರುದ್ದೇವತಾಕಂ । ಆದ್ಯಾ ಏಕಾದಶ ದ್ವಿಪದಾ ವಿಂಶತ್ಯಕ್ಷರಾ ವಿರಾಜಃ ಶಿಷ್ಟ್ವಾಶ್ಚತುರ್ದಶ ತ್ರಿಷ್ಟುಭಃ । ತಥಾ ಚಾನುಕ್ರಾಂತಂ । ಕ ಈಂ ಪಂಚಾಧಿಕಾ ಮಾರುತಂ ಹಾದ್ಯಾ ಏಕಾದಶ ದ್ವಿಪದಾ ಇತಿ ॥ ದಶರಾತ್ರೇ ಚತುರ್ಥೇಽಹನ್ಯಾಗ್ನಿಮಾರುತೇ ಶಸ್ತ್ರ ಇದಂ ಮಾರುತಸಿನಿದ್ವಾನಂ । ಸೂತ್ರಯತೇ ಹಿ । ವೈಶ್ವಾನರಸ್ಯ ಸುಮತೌ ಕ ಈಂ ವ್ಯಕ್ತಾ ನರಃ । ಆ ಲ ಲ । ಇತಿ ॥

ಅನುವಾದವು—ಏಳನೆಯ ಮಂಡಲದ ನಾಲ್ಕನೆಯ ಅನುವಾಕದಲ್ಲಿ ಹದಿನೈದು ಸೂಕ್ತಗಳಿರುವುವು ಅವುಗಳಲ್ಲಿ **ಕ ಈಂ ವ್ಯಕ್ತಾಃ** ಎಂಬ ಈ ಸೂಕ್ತವು ಮೊದಲನೆಯದು ಇದರಲ್ಲಿ ಇಪ್ಪತ್ತೈದು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಸಿಷ್ಠನು ಋಷಿಯು, ಮರುತ್ತುಗಳು ದೇವತೆಯು ಈ ಸೂಕ್ತದ ಮೊದಲನೆಯ ಹನ್ನೊಂದು ಋಕ್ಕುಗಳು ಇಪ್ಪತ್ತು ಅಕ್ಷರಗಳುಳ್ಳ ದ್ವಿಪದಾ ವಿರಾಟ್ ಎಂಬ ಛಂದಸ್ಸಿನವು ಉಳಿದ ಹದಿನಾಲ್ಕು ಋಕ್ಕುಗಳು ತ್ರಿಷ್ಟುಪ್ ಛಂದಸ್ಸುವು ಅನುಕ್ರಮಣಿಕೆಯಲ್ಲಿ **ಕ ಈಂ ಪಂಚಾಧಿಕಾ ಮಾರುತಂ ಹಾದ್ಯಾ ಏಕಾದಶ ದ್ವಿಪದಾ** ಎಂದು ಪ್ರಸಿದ್ಧವಾಗಿರುವುದು. ದಶರಾತ್ರವೆಂಬ ಯಾಗದ ನಾಲ್ಕನೆಯ ದಿವಸ ಆಗ್ನಿಮಾರುತರಸ್ತೋತ್ರಮಂತ್ರಗಳ ಮಧ್ಯದಲ್ಲಿ ಈ ಸೂಕ್ತವನ್ನು ಮಾತ್ರತಸಿನಿದ್ವಾನಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ವೈಶ್ವಾನರಸ್ಯ ಸುಮತೌ ಕ ಈಂ ವ್ಯಕ್ತಾ ನರಃ** ಎಂಬ ಸೂತ್ರದಿಂದ (೨. ೮-೮) ವಿವೃತವಾಗಿರುವುದು.

ಸೂಕ್ತ—೫೬

ಮಂಡಲ—೭ ॥ ಅನುವಾಕ—೪ ॥ ಸೂಕ್ತ—೫೬ ॥
ಅಷ್ಟಕ—೫ ॥ ಅಧ್ಯಾಯ—೪ ॥ ವರ್ಗ—೨೩, ೨೪, ೨೫, ೨೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೨೫ ॥
ಋಷಿಃ—ವಸಿಷ್ಠಃ ॥
ದೇವತಾ— ಮರುತಃ ॥
ಛಂದಃ—೧-೧೧ ದ್ವಿಪದಾ । ೧೨-೨೫ ತ್ರಿಷ್ಟುಪ್ ॥

ಸಂಹಿತಾಪಾಠಃ

ಕ ಈಂ ವ್ಯಕ್ತಾ ನರಃ ಸನೀಳಾ ರುದ್ರಸ್ಯ ಮರ್ಯಾ ಅಧಾ ಸ್ವಶ್ವಾಃ ॥ ೧ ॥

ಪದಪಾಠಃ

ಕೇ । ಈಂ । ವಿಽಅಕ್ತಾಃ । ನರಃ । ಸಽನೀಳಾಃ । ರುದ್ರಸ್ಯ । ಮರ್ಯಾಃ । ಅಧ । ಸುಽಅಶ್ವಾಃ ॥ ೧ ॥

सायणभाष्यं

व्यक्ताः कान्तियुक्ता नरो नेतारः सनीळाः समानौकसो रुद्रस्य महादेवस्य पुत्रा मर्या मर्त्येभ्यो नृभ्यो हिता अधापि च स्वश्वाः शोभनवाहा ईमिमु एवंभूताः के भवंतीति रूपातिशयाद्दृषिराक्ष्यर्ग्भिराह ॥

प्रतिपदार्थ

स नीळाः—समानवाद वासस्थानवुळ्ळवरू, । व्यक्ताः—कान्तियुतरू । नरः—मार्गदर्शकरू । रुद्रस्य—रुद्रपुत्ररू । मर्याः—मानवरिगे हितकारिगळू । अध—मत्तु । स्वश्वाः—उत्तमवाद अश्ववुळ्ळवरू आद । ईम्—ई दिव्यव्यक्तिगळु । के—यारागिरबहुदु ?

भावार्थ

समानवाद वासस्थानवुळ्ळवरू, कान्तियुतरू, मार्गदर्शकरू, रुद्रपुत्ररू, मानवरिगे हितकारिगळू मत्तु उत्तमवाद अश्ववुळ्ळवरू आद ई दिव्यव्यक्तिगळु यारागिरबहुदु ?

English Translation

Who are these resplendent chiefs, the dwellers in one abode, the sons of Rudra, friends of man, at present well mounted ?

संहितापाठः

नकिर्ह्येषां जनूंषि वेद ते अंग विद्रे मिथो जनित्रं ॥ ७ ॥

पदपाठः

नकिः । हि । एषां । जनूंषि । वेद । ते । अंग । विद्रे । मिथः । जनित्रं ॥ ७ ॥

सायणभाष्यं

एषां मरुतां जनूंषि जन्मानि नकिर्हि वेद । कश्चिदपि न खलु जानाति । ते तादृशा मरुतो मिथः परस्परं जनित्रं रुद्रपृश्निभ्यां सकाशात्प्रादुर्भूतं स्वकीयं जन्मांग विद्रे । स्वयमेव विदंति ॥

प्रतिपदार्थ

एषां—ई मरुत्तुगळ । जनूंषि—जन्मगळन्नु । नकिः हि वेद—यारू अरितिल्ल । ते—महद्रूपवुळ्ळ आदे मरुत्तुगळु । मिथः—तावे परस्परर । जनित्रं—रुद्र मत्तु पृश्निगळ योगदिंद उत्पन्नवाद तम्म जन्मवन्नु । अंग—निश्चयवागियू । विद्रे—अरितिद्दारे.

भावार्थ

ई मरुत्तुगळ उत्पत्तिक्रमवन्नु अरितवरारू इल्ल. महत्स्वरूपवुळ्ळ इदे मरुत्तुगळु रुद्र मत्तु पृश्निगळ योगदिंद-उत्पन्नवाद तम्म जन्मवन्नु तावे परस्परे अरितिद्दारे.

English Translation

No one indeed knows their origin, they alone respectively know their birth.

ಸಂಹಿತಾಪಾಠಃ

ಅಭಿ ಸ್ವಪೂಭಿರ್ಮಿಥೋ ವಪಂತ ವಾತಸ್ವನಸಃ ಶ್ಯೇನಾ ಅಸ್ಪೃಧ್ರನ್ ॥ ೩ ॥

ಪದಪಾಠಃ

ಅಭಿ । ಸ್ವಪೂಭಿಃ । ಮಿಥಃ । ವಪಂತ । ವಾತಸ್ವನಸಃ । ಶ್ಯೇನಾಃ । ಅಸ್ಪೃಧ್ರನ್ ॥ ೩ ॥

ಸಾಯಣಭಾಷ್ಯಂ

ಮರುತಃ ಸ್ವಪೂಭಿಃ ಸ್ವಕೀಯೈಃ ಪವನೈಃ ಸಂಚರಣೈಃ ಸ್ವಯಮೇವ ಸಂಚರಂತೋ ಮಿಥಃ ಪರಸ್ಪರಮಭಿ ವಪಂತ । ಸಂಗಚ್ಛಂತೇ । ಅಪಿ ಚ ವಾತಸ್ವನಸೋ ವಾಯುವತ್ಸ್ವನಂತಃ ಶಬ್ದಾಯಮಾನಾಃ ಶ್ಯೇನಾಃ ॥ ಶ್ಯೈಙ್ ಗತಾವಿತಿ ಧಾತೋ ರೂಪಂ ॥ ಗಮನಶೀಲಾಃ । ಯದ್ವಾ । ಶ್ಯೇನಾ ಇತಿ ಉಪ್ತ್ಯೋಪಮಮೇತತ್ । ಶ್ಯೇನಾಃ ಪಕ್ಷಿಣಃ । ತದ್ವದ್ಗಚ್ಛಂತಃ । ಅಸ್ಪೃಧ್ರನ್ । ಪರಸ್ಪರಂ ರೂಪಸೌಂದರ್ಯಾದಿಭಿಃ ಸ್ಪರ್ಧಂತೇ ॥

ಪ್ರತಿಪದಾರ್ಥ

ಸ್ವಪೂಭಿಃ—ತಮ್ಮ ಪವನವೇಗಗಳಿಂದಲೇ ಸಂಚರಿಸುವ ಮರುತ್ತುಗಳು । ಮಿಥಃ—ಪರಸ್ಪರವಾಗಿ । ಅಭಿ ವಪಂತ—ಒಟ್ಟಿಗೆ ಸೇರಿಕೊಳ್ಳುತ್ತಾರೆ. । ವಾತಸ್ವನಸಃ—ವಾಯುವಿನಂತೆ ಶಬ್ದಮಾಡತಕ್ಕವರೂ । ಶ್ಯೇನಾಃ—ಶ್ಯೇನಪಕ್ಷಿಯಂತೆ ಉತ್ತಮವಾದ ಗಮನವುಳ್ಳವರೂ ಆದ ಮರುತ್ತುಗಳು । ಅಸ್ಪೃಧ್ರನ್—ತಮ್ಮ ಸೌಂದರ್ಯಾದಿಗಳಿಂದ ಪರಸ್ಪರ ತಾವೇ ಸ್ಪರ್ಧಿಸುತ್ತಾರೆ

ಭಾವಾರ್ಥ

ತಮ್ಮ ಪವನವೇಗಗಳಿಂದಲೇ ಸಂಚರಿಸುವ ಮರುತ್ತುಗಳು ಪರಸ್ಪರ ಒಟ್ಟಿಗೆ ಸೇರಿಕೊಳ್ಳುತ್ತಾರೆ ವಾಯುವಿನಂತೆ ಶಬ್ದಮಾಡತಕ್ಕವರೂ, ಶ್ಯೇನಪಕ್ಷಿಯಂತೆ ಉತ್ತಮವಾದ ಗಮನವುಳ್ಳವರೂ ಆದ ಮರುತ್ತುಗಳು ತಮ್ಮ ಸೌಂದರ್ಯಾದಿಗಳಿಂದ ಪರಸ್ಪರ ತಾವೇ ಸ್ಪರ್ಧಿಸುತ್ತಾರೆ

English Translation

They go together by their own pure paths. roaring like the wind, fleet as falcons, they mutually rival each other

ಸಂಹಿತಾಪಾಠಃ

ಏತಾನಿ ಧೀರೋ ನಿಣ್ಯಾ ಚಿಕೇತ ಪೃಶ್ನಿರ್ಯದೂಧೋ ಮಹೀ ಜಭಾರ ॥ ೪ ॥

ಪದಪಾಠಃ

ಏತಾನಿ । ಧೀರಃ । ನಿಣ್ಯಾ । ಚಿಕೇತ । ಪೃಶ್ನಿಃ । ಯತ್ । ಊಧಃ । ಮಹೀ । ಜಭಾರ ॥

सायणभाष्यं

धीरो धीमाꣳ अप्यस्त्रजो ऽन्नो जनो निण्या निण्यानि श्वेतवर्णान्येतानि मरुदात्मकानि भूतानि चिकेत । जानीयात् । किंतु न सर्वे जना जानन्तीत्यर्थः । महीं महतीं पृश्निर्मरुतां जननीं यद्यानि मरुदात्मकानि भूतान्यूधन्यूधरिक्षे स्वकीये जरठे वा जभार बभार । एतानि चिकेतेति पूर्वेण संबंधः ॥

प्रतिपदार्थ

महीं—महत्स्वरूपवुळ्ळ । **पृश्निः**—रुद्रपत्नियाद पृश्नियु । **यत्**—यावा ई मरुत्तुगळन्नु । **ऊधः**—अन्तरिक्षरूपवाद तन्न जरठदल्लि । **जभार**—धरिसिदळो । **एतानि**—अन्तह । **निण्या**—श्वेतवर्णवुळ्ळ ई मरुत्तुगळन्नु । **धीरः**—प्राज्ञनु मात्र । **चिकेत**—अरियुत्तानॆ

भावार्थ

महत्स्वरूपवुळ्ळवळू रुद्रपत्नियू आद पृश्नियु यावा ई मरुत्तुगळन्नु अन्तरिक्षरूपवाद तन्न जरठदल्लि धरिसिदळो, अन्तह श्वेतवर्णवुळ्ळ ई मरुत्तुगळन्नु प्राज्ञनुमात्र अरियुत्तानॆ

English Translation

The sage may know those white-complexioned beings (the Maruts) whom the vast Prishni bore at her udder.

संहितापाठः

सा विट्सुवीरा मरुद्भिरस्तु सनात्सहंती पुष्यंती नृम्णं ॥ ५ ॥

पदपाठः

सा । विट् । सुऽवीरा । मरुत्ऽभिः । अस्तु । सनात् । सहंती । पुष्यंती । नृम्णं ॥

सायणभाष्यं

सा विट् सा प्रजा मरुतः परिचरति । सा प्रजा मरुद्भिर्हेतुभिः सनाच्चिरात्सहंती शत्रूनभिभवंती नृम्णं धनं बलं वा पुष्यंती लभंती सुवीरा शोभनपुत्रयुक्तास्तु । भवतु ॥

प्रतिपदार्थ

सा विट्—मरुत्तुगळन्नु पूजिसुव प्रजॆगळु । **मरुद्भिः**—मरुत्तुगळॊडनॆ कूडिकॊंडु । **सनात्**—बहुकाल । **सहंती**—(शत्रुगळन्नु) सोलिसुत्तलू । **नृम्णं**—धनवन्नु । **पुष्यंती**—हॊंदुत्तलू ! **सुवीरा**—उत्तमवाद पुत्रादिगळिंद कूडिदवरागियू । **अस्तु**—आगिरलि.

भावार्थ

मरुत्तुगळन्नु पूजिसुव प्रजॆगळु मरुत्तुगळॊडनॆ कूडिकॊंडु ऒहुकाल शत्रुगळन्नु सोलिसुत्तलू धनवन्नु हॊंदुत्तलू उत्तमवाद पुत्रादिगळिंद कूडिदवरागियू आगिरलि.

English Translation

May the people, through (the favours of) the Maruts, always be victorious, possessed of male posterity, and in the enjoyment of wealth.

ಸಂಹಿತಾಪಾಠಃ

ಯೂಯಮಂ ಯೇಷ್ಠಾಃ ಶುಭಾ ಶೋಭಿಷ್ಠಾಃ ಶ್ರಿಯಾ ಸಂಮಿಶ್ಲಾ ಓಜೋಭಿ-
ರುಗ್ರಾಃ ॥ ೬ ॥

ಪದಪಾಠಃ

ಯೂಯಮಂ । ಯೇಷ್ಠಾಃ । ಶುಭಾ । ಶೋಭಿಷ್ಠಾಃ । ಶ್ರಿಯಾ । ಸಂಽಮಿಶ್ಲಾಃ । ಓಜಃಽಭಿಃ । ಉಗ್ರಾಃ ॥

ಸಾಯಣಭಾಷ್ಯಂ

ಮರುತೋ ಯೂಯಮಂ ಯಾತವ್ಯಂ ಗಂತವ್ಯಂ ಪ್ರದೇಶಂ ಯೇಷ್ಠಾ ಯಾತೃತಮಾ ಅತಿಶಯೇನ ಗಂತಾರಃ ಶುಭಾಲಂಕಾರೇಣ ಶೋಭಿಷ್ಠಾ ಅತಿಶಯೇನ ಶೋಭಯುಕ್ತಾಃ ಶ್ರಿಯಾ ಕಾಂತ್ಯಾ ಸಂಮಿಶ್ಲಾಃ ಸಂಗಚ್ಛಮಾನಾ ಓಜೋಭಿರ್ಬಲೈರುಗ್ರಾ ಉದ್ಗೂರ್ಣಾಃ । ಏವಂಭೂತಾ ಭವಂತೀತಿ ಶೇಷಃ ॥

ಪ್ರತಿಪದಾರ್ಥ

(ಮರುತಃ—ಮರುತ್ತುಗಳು) । ಯೂಯಮಂ—ನೀವೇಲ್ಲರೂ ಸ್ನಾನವನ್ನು । ಯೇಷ್ಠಾಃ—ಅತಿಶಯವಾಗಿ ಹೋಗಿ ಸೇರುವವರೂ । ಶುಭಾ—ಉತ್ತಮವಾದ ಅಲಂಕಾರದಿಂದ । ಶೋಭಿಷ್ಠಾಃ—ಪ್ರಕಾಶಿಸುವವರೂ । ಶ್ರಿಯಾ—ಕಾಂತಿಯೊಡನೆ । ಸಂಮಿಶ್ಲಾಃ—ಹೊಂದಿಕೊಂಡಿರುವವರೂ । ಓಜೋಭಿಃ—ತಮ್ಮ ಬಲಗಳೊಡನೆ । ಉಗ್ರಾಃ—ಅತ್ಯಧಿಕವಾದ ಶಕ್ತಿಯುಳ್ಳವರೂ ಆದವರಾಗಿರುತ್ತಾರೆ.

ಭಾವಾರ್ಥ

ಮರುತ್ತುಗಳು ಸೇರಬೇಕಾದ ಸ್ಥಾನವನ್ನು ಅತಿಶಯವಾಗಿ ಹೋಗಿ ಸೇರುವವರೂ, ಕಾಂತಿಯೊಡನೆ ಹೊಂದಿಕೊಂಡಿರುವವರೂ ತಮ್ಮ ಬಲಗಳೊಡನೆ ಅತ್ಯಧಿಕವಾದ ಶಕ್ತಿಯನ್ನು ಹೊಂದಿದವರೂ ಆಗಿರುತ್ತಾರೆ.

English Translation

The Maruts rapidly repair to the place (of their destination), richly decorated with ornaments, invested with beauty, terrible by their strength

ಸಂಹಿತಾಪಾಠಃ

ಉಗ್ರಂ ವ ಓಜಃ ಸ್ಥಿರಾ ಶವಾಂಸ್ಯಧಾ ಮರುದ್ಭಿರ್ಗಣಸ್ತುವಿಷ್ಮಾನ್ ॥ ೭ ॥

ಪದಪಾಠಃ

ಉಗ್ರಂ । ವಃ । ಓಜಃ । ಸ್ಥಿರಾ । ಶವಾಂಸಿ । ಅಧ । ಮರುತ್ಽಭಿಃ । ಗಣಃ । ತುವಿಷ್ಮಾನ್ ॥

ಸಾಯಣಭಾಷ್ಯಂ

ಹೇ ಮರುತಃ ವೋ ಯುಷ್ಮಾಕಮೋಜಸ್ತೇಜ ಉಗ್ರಮುದ್ಗೂರ್ಣಂ ಭವತು । ತವಾಂಸಿ ಯುಷ್ಮದೀಯಾನಿ ಬಲಾನಿ ಸ್ಥಿರಾ ಸ್ಥಿರಾಣಿ ಕೈಶ್ಚಿದನಪಹರ್ತವ್ಯಾನಿ ಭವಂತು । ಅಥಾಪಿ ಚ ಮರುದ್ಗಿರ್ಗಣೋ ಮರುತಾಂ ಸಂಘಸ್ತುವಿಷ್ಮಾನ್ ವೃದ್ಧಿಮಾನ್ಭವತು ॥

ಪ್ರತಿಪದಾರ್ಥ

(ಎಲೈ ಮರುತ್ತುಗಳೇ) **ವಃ**—ನಿಮ್ಮ । **ಓಜಃ**—ತೇಜಸ್ಸು । **ಉಗ್ರಂ**—ಅತ್ಯಧಿಕವಾಗಿರಲಿ । **ತವಾಂಸಿ**—ನಿಮ್ಮ ಬಲಗಳು । **ಸ್ಥಿರಾ**—ಶಾಶ್ವತವಾಗಿರಲಿ. । **ಅಥ**—ಮತ್ತು । **ಮರುದ್ಗಿಃ**—ಮರುತ್ತುಗಳ । **ಗಣಃ**—ಸಂಘವು। **ತುವಿಷ್ಮಾನ್**—ಪುಷ್ಟಿಯನ್ನು ಹೊಂದಿದುದಾಗಿರಲಿ.

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮ ತೇಜಸ್ಸು ಅಧಿಕವಾಗಿರಲಿ. ನಿಮ್ಮ ಬಲಗಳು ಶಾಶ್ವತವಾಗಿರಲಿ ಮತ್ತು ಮರುತ್ತುಗಳ ಸಂಘವು ಪುಷ್ಟಿಯನ್ನು ಹೊಂದಿದುದಾಗಿರಲಿ.

English Translation

Terrible by your strength, steadfast your energies, prosperous be the company of the Maruts.

ಸಂಹಿತಾಪಾಠಃ

ಶುಭ್ರೋ ವಃ ಶುಷ್ಮಃ ಕ್ರುಧ್ಮೀ ಮನಾಂಸಿ ಧುನಿರ್ಮುನಿರಿವ ಶರ್ಧಸ್ಯ ಧೃಷ್ಣೋಃ ॥ ೮ ॥

ಪದಪಾಠಃ

ಶುಭ್ರಃ । ವಃ । ಶುಷ್ಮಃ । ಕ್ರುಧ್ಮೀ । ಮನಾಂಸಿ । ಧುನಿಃ । ಮುನಿಃ । ಇವ । ಶರ್ಧಸ್ಯ । ಧೃಷ್ಣೋಃ ॥

ಸಾಯಣಭಾಷ್ಯಂ

ಹೇ ಮರುತಃ ವೋ ಯುಷ್ಮಾಕಂ ಶುಷ್ಮೋ ಬಲಂ ಶುಭ್ರಃ ಸರ್ವತಃ ಶೋಭಮಾನಂ । ಕಿಂಚ ವೋ ಮನಾಂಸಿ ಕ್ರುಧ್ಮೀ ಸಂಗ್ರಾಮೇಷು ಶತ್ರುಹನನಾರ್ಥಂ ಕ್ರೋಧನಶೀಲಾನಿ । ಧೃಷ್ಣೋರ್ಧರ್ಷಣಶೀಲಸ್ಯ ಶರ್ಧಸ್ಯ ಬಲವತೋ ಯುಷ್ಮದೀಯಸ್ಯ ಗಣಸ್ಯ ಧುನಿರ್ವೃಕ್ಷಾದೀನಾಂ ಕಂಪಯಿತುರ್ವೇಗೋ ಮುನಿರಿವ । ಮನನಾನ್ಮುನಿಃ ಸ್ತೋತಾ । ಸ ಯಥಾ ಬಹುವಿಧಂ ಶಬ್ದಮುತ್ಪಾದಯತಿ ಏವಂ ಬಹುವಿಧಶಬ್ದಸ್ಯೋತ್ಪಾದಕ ಇತ್ಯರ್ಥಃ ॥

ಪ್ರತಿಪದಾರ್ಥ

(ಎಲೈ ಮರುತ್ತುಗಳೇ,) **ವಃ**— ನಿಮ್ಮ । **ಶುಷ್ಮಃ** — ಬಲವು । **ಶುಭ್ರಃ** — ಪ್ರಕಾಶಮಾನವಾಗಿದೆ. । **ಮನಾಂಸಿ**—ನಿಮ್ಮ ಮನಸ್ಸುಗಳು । **ಕ್ರುಧ್ಮೀ**—ಸಂಗ್ರಾಮಗಳಲ್ಲಿ ಶತ್ರುಗಳ ಮೇಲೆ ಕ್ರೋಧವನ್ನು ಪ್ರಕಟಿಸುವುದಾಗಿದೆ. । **ಧೃಷ್ಣೋಃ**—ಶತ್ರುವನ್ನು ಪ್ರತಿಭಟಿಸುವುದೂ । **ಶರ್ಧಸ್ಯ**—ಶಕ್ತಿಯುತವಾದುದೂ ಆದ ನಿಮ್ಮ ಗಣದ । **ಧುನಿಃ**—ವೃಕ್ಷಗಳನ್ನು ಕಂಪಿಸುವಂತೆ ಮಾಡುವ ವೇಗವು । **ಮುನಿರಿವ**—ಸ್ತುತಿಕರ್ತನ ಶಬ್ದದಂತೆ ಶಬ್ದಾತ್ಮಕವಾಗಿರುತ್ತದೆ.

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮ ಬಲವು ಪ್ರಕಾಶಮಾನವಾದುದಾಗಿದೆ. ನಿಮ್ಮ ಮನಸ್ಸುಗಳು ಸಂಗ್ರಾಮಗಳಲ್ಲಿ ಶತ್ರುಗಳ ಮೇಲೆ ಕ್ರೋಧವನ್ನು ಪ್ರಕಟಿಸುವುದಾಗಿದೆ. ಶತ್ರುವನ್ನು ಪ್ರತಿಭಟಿಸುವುದೂ, ಶಕ್ತಿಯುತವಾದುದೂ ಆದ ನಿಮ್ಮ ಗಣದ ವೃತ್ತಾದಿಗಳನ್ನು ಕಂಪಿಸುವಂತೆ ಮಾಡುವ ವೇಗವು ಸ್ತುತಿಕರ್ತನ ಶಬ್ದದಂತೆ ಶಬ್ದಾತ್ಮಕವಾದುದಾಗಿರುತ್ತದೆ.

English Translation

Glorious is your vigour, unrelenting are your minds. (the exertion) of your irrestible force, the agitator (of the trees), is like (the manifold tone of the prayers of) a muni.

ಸಂಹಿತಾಪಾಠಃ

ಸನೇಮ್ಯಸ್ಮದ್ಯುಯೋತೇ ದಿದ್ಯುಂ ಮಾ ವೋ ದುರ್ಮತಿರಿಹ ಪ್ರಣಿಙ್ನಃ ॥ ೯ ॥

ಪದಪಾಠಃ

ಸನೇಮಿ । ಅಸ್ಮತ್ । ಯುಯೋತೇ । ದಿದ್ಯುಂ । ಮಾ । ವಃ । ದುರ್ಮತಿಃ । ಇಹ । ಪ್ರಣಿಕ್ । ನಃ ॥

ಸಾಯಣಭಾಷ್ಯಂ

[ಹೇ ಮರುತಃ ಸನೇಮಿ ಪುರಾಣಂ ದಿದ್ಯುಮಾಯುಧಮಸ್ಮದಸ್ಮತ್ತೋ ಯುಯೋತೇ । ಪೃಥಕ್ಕುರುತ । ವೋ ಯುಷ್ಮದೀಯಾ ದುರ್ಮತಿಃ ಕ್ರೂರಮತಿರಿಹಾಸ್ಮಿನ್ಕರ್ಮಣಿ ನೋಽಸ್ಮಾನ್ಮಾ ಪ್ರಣಿಕ್ ಮಾ ವ್ಯಾಪ್ನೋತು ॥]

ಪ್ರತಿಪದಾರ್ಥ

(ಎಲೈ ಮರುತ್ತುಗಳೇ) ಸನೇಮಿ—ಪುರಾತನವಾದ । ದಿದ್ಯುಂ—ನಿಮ್ಮ ಆಯುಧವನ್ನು । ಅಸ್ಮತ್—ನಮ್ಮಿಂದ । ಯುಯೋತ—ಬೇರೆಮಾಡಿರಿ । ವಃ—ನಿಮ್ಮ । ದುರ್ಮತಿಃ—ಕ್ರೂರವಾದ ಬುದ್ಧಿಯು । ಇಹ—ಈ ಕರ್ಮಕಾಲದಲ್ಲಿ । ನಃ—ನಮ್ಮನ್ನು । ಮಾ ಪ್ರಣಿಕ್—ವ್ಯಾಪಿಸದಿರಲಿ.

ಭಾವಾರ್ಥ

ಎಲೈ ಮರುತ್ತುಗಳೇ, ಪುರಾತನವಾದ ನಿಮ್ಮ ಆಯುಧವನ್ನು ನಮ್ಮ ಹತ್ತಿರ ಒರಮಾಡದಿರಿ. ನಿಮ್ಮ ಶಿಕ್ಷಾರೂಪವಾದ ಬುದ್ಧಿಯು ಈ ಕರ್ಮಕಾಲದಲ್ಲಿ ನಮ್ಮನ್ನು ಆವರಿಸದಿರಲಿ

English Translation

Withhold from us your ancient blazing (weapon) let not your displeasure light upon us at this sacrifice

ಸಂಹಿತಾಪಾಠಃ

ಪ್ರಿಯಾ ವೋ ನಾಮ ಹುವೇ ತುರಾಣಾಮಾ ಯತ್ತೃಪನ್ನರುತೋ ವಾವಶಾನಾಃ ॥ ೧೦ ॥

ಪದಪಾಠಃ

ಪ್ರಿಯಾ । ವಃ । ನಾಮ । ಹುವೇ । ತುರಾಣಾಂ । ಆ । ಯತ್ । ತೃಪತ್ । ಮರುತಃ । ವಾವಶಾನಾಃ ॥

ಸಾಯಣಭಾಷ್ಯಂ

[ಹೇ ಮರುತಃ ತುರಾಣಾಂ ಶತ್ರೂಣಾಂ ಹಿಂಸಕಾನಾಂ ಶ್ವರಾವತಾಂ ವಾ ವೋ ಯುಷ್ಮಾಕಂ ಪ್ರಿಯಾ ಪ್ರಿಯೇಣ ನಾಮ ನಾಮ್ನಾ ಹುವೇ । ಆಹ್ವಯಾಮಿ । ಯದ್ಯೇನಾನೇನ ವಾವಶಾನಾಃ ಕಾಮಯಮಾನಾಃ ಸಂತಸ್ತೃಪತ್ ತೃಪ್ತಿಂ ಗಚ್ಛಂತಿ ॥]

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ । **ಯತ್**—ಯಾವ ನನ್ನ ಆಹ್ವಾನವನ್ನು । **ವಾವಶಾನಾಃ**—ಅಪೇಕ್ಷಿಸಿದವರಾಗಿ । **ತೃಪತ್**—ನೀವು ತೃಪ್ತಿಯನ್ನು ಹೊಂದುವಿರೋ ಆ ರೀತಿ । **ತುರಾಣಾಂ**—ಶತ್ರುಹಿಂಸಕರಾದ । **ವಃ**—ನಿಮ್ಮ । **ಪ್ರಿಯಾ**—ಹಿತಕರವಾದ । **ನಾಮ**—ಹೆಸರಿನ ಉಚ್ಚಾರದಿಂದ । **ಆ ಹುವೇ**—ಕರೆಯುತ್ತೇನೆ

ಭಾವಾರ್ಥ

ಎಲೈ ಮರುತ್ತುಗಳೇ, ಯಾವ ನನ್ನ ಆಹ್ವಾನವನ್ನು ಅಪೇಕ್ಷಿಸಿದವರಾಗಿ ನೀವು ತೃಪ್ತಿಯನ್ನು ಹೊಂದುವಿರೋ ಆ ರೀತಿ, ಶತ್ರುಹಿಂಸಕರಾದ ನಿಮ್ಮ ಹಿತಕರವಾದ ಹೆಸರನ್ನು ಪರಿಸಿ ನಿಮ್ಮನ್ನು ಕರೆಯುತ್ತೇನೆ

English Translation

I invoke your beloved names, Maruts, destroyers (of foes), that they who are desirous of the offering may be satisfied

ಸಂಹಿತಾಪಾಠಃ

स्वायुधासऽइष्मिणः सुनिष्काऽउत स्वयं तन्वः शुंभमानाः॥

ಪದಪಾಠಃ

सुऽआयुधासः । इष्मिणः । सुऽनिष्काः । उत । स्वयं । तन्वः । शुंभमानाः ॥ ೧೧ ॥

ಸಾಯಣಭಾಷ್ಯಂ

स्वायुधासः स्वायुधाः शोभनास्त्र इष्मिणोः गंतारः सुनिष्काः शोभनालंकारा उताऽपि च तन्वः स्वकीयानि शरीराणि शुंभमानाः स्वयमेव शोभयंतोः मरुत इवंभूता भवंतीत्यर्थः ॥

ಪ್ರತಿಪದಾರ್ಥ

ಸ್ವಾಯುಧಾಸಃ—ಉತ್ತಮವಾದ ಅಸ್ತ್ರಗಳುಳ್ಳವರೂ । **ಇಷ್ಮಿಣಃ**—ಸಂಚಾರಶೀಲರೂ । **ಸುನಿಷ್ಕಾಃ**—ಉತ್ತಮವಾದ ಅಲಂಕಾರವುಳ್ಳವರೂ । **ಉತ**—ಮತ್ತು । **ತನ್ವಃ**—ತಮ್ಮ ಶರೀರಗಳನ್ನು । **ಸ್ವಯಂ ಶುಂಭಮಾನಾಃ**—ತಾವೇ ಅಲಂಕರಿಸಿಕೊಳ್ಳುವವರೂ ಆದ ಮರುತ್ತುಗಳು ಪ್ರಕಾಶಿಸುತ್ತಾರೆ.

ಭಾವಾರ್ಥ

ಉತ್ತಮವಾದ ಅಸ್ತ್ರಗಳುಳ್ಳವರೂ, ಸಂಚಾರಶೀಲರೂ, ಉತ್ತಮವಾದ ಅಲಂಕಾರವುಳ್ಳವರೂ ಮತ್ತು ತಮ್ಮ ಶರೀರಗಳನ್ನು ತಾನೇ ಅಲಂಕರಿಸಿಕೊಳ್ಳುವವರೂ ಆದ ಮರುತ್ತುಗಳು ಪ್ರಕಾಶಿಸುತ್ತಾರೆ

English Translation

Bearers are (the Maruts) of bright weapons, rapid are they in motion wearers of brilliant ornaments and, self-irradiators of their persons

ಸಂಹಿತಾಪಾಠಃ

ಶುಚೀ॑ ವೋ॒ ಹವ್ಯಾ॑ ಮ॒ರುತಃ॑ ಶುಚೀ॑ನಾಂ ಶುಚಿ॑ಂ ಹಿನೋಮ್ಯಧ್ವ॒ರಂ
ಶುಚಿ॑ಭ್ಯಃ ।
ಋ॒ತೇನ॑ ಸ॒ತ್ಯಮೃ॒ತಸಾ॑ಪ ಆ॒ಯುಞ್ಛುಚಿ॑ಜನ್ಮಾನಃ ಶುಚ॑ಯಃ ಪಾ॒ವಕಾ॑ಃ ॥

ಪದಪಾಠಃ

ಶುಚೀ॑ । ವ॒ಃ । ಹ॒ವ್ಯಾ । ಮ॒ರು॒ತ॒ಃ । ಶುಚೀ॑ನಾಂ । ಶುಚಿ॑ಂ । ಹಿ॒ನೋ॒ಮಿ॒ । ಅ॒ಧ್ವ॒ರಂ । ಶುಚಿ॑ಭ್ಯಃ ।
ಋ॒ತೇನ॑ । ಸ॒ತ್ಯಂ । ಋ॒ತ॒ಸಾಪ॑ಃ । ಆ॒ಯು॒ನ್ । ಶುಚಿ॑ಜನ್ಮಾನಃ । ಶುಚ॑ಯಃ । ಪಾ॒ವಕಾ॑ಃ ॥ ೧೨ ॥

ಸಾಯಣಭಾಷ್ಯಂ

ಮಾರುತೇ ಪಶೌ ಶುಚೀ ವೋ ಹವ್ಯೇತಿ ವಪಾಯಾ ಅನುವಾಕ್ಯಾ । ಸೂಕ್ತಿತಂ ಚ । ಶುಚೀ ವೋ ಹವ್ಯಾ ಮರುತಃ ಶುಚೀನಾಂ ನೂ ಷ್ಮಿರಂ ಮರುತಃ । ಅ. ೩-೭ । ಇತಿ ॥

ಹೇ ಮರುತಃ ಶುಚೀನಾಂ ಶುದ್ಧಾನಾಂ ವೋ ಯುಷ್ಮಾಕಂ ಶುಚೀ ಶುಚೀನಿ ಹವ್ಯಾ ಹವ್ಯಾನಿ ಹವಿರ್ಯುಕ್ತಾನಿ ಭವಂತು । ಶುಚಿಭ್ಯಃ ಪ್ರಕಾಶಮಾನೇಭ್ಯೋ ಯುಷ್ಮಭ್ಯಂ ಶುಚಿಂ ಶುದ್ಧಮಧ್ವರಂ ಯಾಗಂ ಹಿನೋಮಿ । ಅಹಂ ಪ್ರೇರಯಾಮಿ । ಋತಸಾಪ ಋತಮುದಕಂ ಸ್ಪೃಶಂತೋ ಮರುತ ಋತೇನ ಸತ್ಯೇನೈವ ಸತ್ಯಮಾಯನ್ । ಗಚ್ಛಂತಿ । ಕೀದೃಶಾಃ । ಶುಚಿಜನ್ಮಾನಃ ಶೋಭನಜನನಾಃ ಶುಚಯೋ ದೀಪ್ಯಮಾನಾಃ ಪಾವಕಾಃ ಶೋಧಕಾಃ । ಏವಂಭೂತಾ ಗಚ್ಛಂತೀತ್ಯರ್ಥಃ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, | **ಶುಚೀನಾಂ**—ಶುದ್ಧರಾದ | **ವಃ**—ನಿಮಗೆ | **ಶುಚೀ**—ಶುದ್ಧವಾದ **ಹವ್ಯಾ**—ಹವಿಸ್ಸುಗಳು ಅರ್ಪಿತವಾಗುತ್ತವೆ | **ಶುಚಿಭ್ಯಃ**—ಶುದ್ಧರಾದ ನಿಮ್ಮನ್ನುದ್ದೇಶಿಸಿ | **ಶುಚಿಂ**—ಶುದ್ಧವಾದ| **ಅಧ್ವರಂ**—ಯಾಗವನ್ನು | **ಹಿನೋಮಿ**—ನೆರವೇರಿಸುತ್ತೇನೆ | **ಶುಚಿಜನ್ಮಾನಃ**—ಶುದ್ಧವಾದ ಜನ್ಮವುಳ್ಳವರೂ | **ಶುಚಯಃ**—ಪ್ರಕಾಶಮಾನರೂ | **ಪಾವಕಾಃ**—ಶುದ್ಧಿಕಾರಕರೂ ಆದ ಮರುತ್ತುಗಳು | **ಋತಸಾಪಃ**—ಉದಕವನ್ನು ಸ್ಪರ್ಶಿಸುತ್ತ | **ಋತೇನ**—ಸತ್ಯದಿಂದ | **ಸತ್ಯಂ**—ಸತ್ಯವನ್ನು | **ಆಯನ್**—ಪ್ರವೇಶಿಸುತ್ತಾರೆ.

ಭಾವಾರ್ಥ

ಎಲೈ ಮರುತ್ತುಗಳೇ, ಶುದ್ಧರಾದ ನಿಮಗೆ ಪರಿಶುದ್ಧವಾದ ಹವಿಸ್ಸುಗಳು ಅರ್ಪಿತವಾಗುತ್ತವೆ. ಶುದ್ಧರಾದ ನಿಮ್ಮನ್ನು ದ್ವೇಷಿಸಿ ಶುದ್ಧವಾದ ಯಾಗವನ್ನು ನೆರವೇರಿಸುತ್ತೇನೆ. ಶುದ್ಧವಾದ ಜನ್ಮವುಳ್ಳವರೂ, ಪ್ರಕಾಶಮಾನರೂ, ಶುದ್ಧಿಕಾರಕರೂ ಆದ ಮರುತ್ತುಗಳು ಉದಕವನ್ನು ಸ್ಪರ್ಶಿಸುತ್ತ ತಮ್ಮ ಸತ್ಯಸ್ವರೂಪದಿಂದ ಸತ್ಯವನ್ನು ಪ್ರವೇಶಿಸುತ್ತಾರೆ.

English Translation

Pure oblations be offered, Maruts, to you who are pure the shedders of water proceed by truth to truth, pure, purifiying, of pure birth.

ವಿಶೇಷವಿಷಯಗಳು

ಮರುದ್ದೇವತೆಗಳನ್ನು ದ್ವೇಷಿಸಿ ಮಾಡುವ ಪಶುಯಾಗದಲ್ಲಿ **ಶುಚೀ ವೋ ಹವ್ಯಾ** ಎಂಬ ಈ ಋಕ್ಕನ್ನು ಆನುವಾಕ್ಯಮಂತ್ರವನ್ನಾಗಿ ಪರಿಸರೇಕೆಂದು ಆಶ್ವಲಾಯನಶ್ರೌತಸೂತ್ರದ-**ಶಚೀ ವೋ ಹವ್ಯಾ ಮರುತಃ ಶು-ಚೀನಾಂ ನೂ ಷ್ಮಿರಂ ಮರುತಃ** ಎಂಬ ಸೂತ್ರದಿಂದ (ಆ ೩-೭) ವಿವೃತವಾಗಿರುವುದು

ಸಂಹಿತಾಪಾಠಃ

ಅಂಸೇಷ್ವಾ ಮರುತಃ ಖಾದಯೋ ವೋ ವಕ್ಷಃಸು ರುಕ್ಮಾ ಉಪಶಿಶ್ರಿಯಾಣಾಃ
ವಿ ವಿದ್ಯುತೋ ನ ವೃಷ್ಟಿಭೀ ರುಚಾನಾ ಅನು ಸ್ವಧಾಮಾಯುಧೈರ್ಯಚ್ಛಮಾನಾಃ ॥ ೧೩ ॥

ಪದಪಾಠಃ

ಅಂಸೇಷು । ಆ । ಮರುತಃ । ಖಾದಯಃ । ವಃ । ವಕ್ಷಃಸು । ರುಕ್ಮಾಃ । ಉಪಶಿಶ್ರಿಯಾಣಾಃ ।
ವಿ । ವಿದ್ಯುತಃ । ನ । ವೃಷ್ಟಿಭಿಃ । ರುಚಾನಾಃ । ಅನು । ಸ್ವಧಾಂ । ಆಯುಧೈಃ । ಯಚ್ಛಮಾನಾಃ ॥

ಸಾಯಣಭಾಷ್ಯಂ

ಹೇ ಮರುತಃ ಅಂಸೇಷು ಯುಷ್ಮದೀಯೇಷು ಸ್ಕಂಧಪ್ರದೇಶೇಷು ಖಾದಯೋಽಲಂಕಾರವಿ-ಶೇಷಾ ಆ ಮುಕ್ತಾ ಭವಂತೀತಿ ಶೇಷಃ । ಸುರುಕ್ಮಾಃ ಸುಷ್ಠು ರೋಚಮಾನಾ ಹಾರಾ ವೋ ಯುಷ್ಮ-ದೀಯಂ ವಕ್ಷ ಉರಃಪ್ರದೇಶಮುಪಶಿಶ್ರಿಯಾಣಾ ಆಶ್ರಿತಾ ಭವಂತಿ । ಕಿಂ ಚ ಹೇ ಮರುತಃ ವೃಷ್ಟಿಭಿರ್ವರ್ಷ-ಕೈಃ ಸಾರ್ಧಂ ವಿದ್ಯುತೋ ನ ತಡಿತೋ ಯಥಾ ರುಚಾನಾ ರೋಚಮಾನಾಸ್ತಾದೃಗ್ಭೂತಾ ಯೂಯಂ ಆಯುಧೈರ್ಮೇಘತಾಡನೈಃ ಸ್ವಧಾಮುದಕಮನು ಯಚ್ಛಮಾನಾಃ ಪ್ರಯಚ್ಛಂತೋ ವಿ ಚರಥೇತಿ ಶೇಷಃ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । **ಅಂಸೇಷು**—ನಿಮ್ಮ ಸ್ಕಂಧಪ್ರದೇಶಗಳಲ್ಲಿ । **ಖಾದಯಃ**—ಆಲಂ ಕಾರವಿಶೇಷಗಳು । **ಆ (ಮುಕ್ತಾ)**—ಪ್ರಕಾಶಿಸುತ್ತಿವೆ. । **ವಃ ವಕ್ಷಃಸು**—ನಿಮ್ಮ ಎದೆಗಳಮೇಲೆ । **ರುಕ್ಮಾಃ**—

ಹೊಂಬಣ್ಣದ ಹಾರಗಳು । **ಉಪಶಿಶ್ರಿಯಾಣಾಃ**—ಆಶ್ರಯವನ್ನು ಹೊಂದಿವೆ । **ವೃಷ್ಟಿಭಿಃ**—ಮಳೆಯೊಡನೆ ಕೂಡಿದ **ವಿದ್ಯುತೋ ನ**—ಮಿಂಚುಗಳಂತೆ । **ಆಯುಧೈಃ**—ನಿಮ್ಮ ಆಯುಧಗಳಿಂದ ಕೂಡಿ । **ರುಚಾನಾಃ**—ಪ್ರಕಾಶಿಸುವ ನೀವು । **ಸ್ವಧಾಂ**—ಉದಕವನ್ನು । **ಅನು ಯತೇ ಚೃಮಾನಾಃ**—ಒದಗಿಸುತ್ತ । **ವಿ (ಚರಥ)**—ಸಂಚರಿಸುತ್ತೀರಿ

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮ ಸ್ಕಂಧಪ್ರದೇಶಗಳಲ್ಲಿ ಆಲಂಕಾರವಿಶೇಷಗಳು ಪ್ರಕಾಶಿಸುತ್ತಿವೆ ನಿಮ್ಮ ಎದೆಗಳ ಮೇಲೆ ಹೊಂಬಣ್ಣದ ಹಾರಗಳು ಆಶ್ರಯವನ್ನು ಕೊಂದಿವೆ ಮಳೆಗಳೊಡನೆ ಕೂಡಿದ ಮಿಂಚುಗಳಂತೆ ನಿಮ್ಮ ಆಯುಧಗಳೊಡನೆ ಕೂಡಿ ಪ್ರಕಾಶಿಸುವ ನೀವು ಉದಕವನ್ನು ಒದಗಿಸುತ್ತ ಸಂಚರಿಸುತ್ತೀರಿ.

English Translation

Bright ornaments, Maruts are on your shoulders, shining (necklaces) are pendant on your breasts, glittering with rain, like lightnings, you are distributing the waters with your weapons.

ಸಂಹಿತಾಪಾಠಃ

ಪ್ರ ಬುಧ್ನ್ಯಾ ವ ಈರತೇ ಮಹಾಂಸಿ ಪ್ರ ನಾಮಾನಿ ಪ್ರಯಜ್ಯವಸ್ತಿರಧ್ವಂ ।
ಸಹಸ್ರಿಯಂ ದಮ್ಯಂ ಭಾಗಮೇತಂ ಗೃಹಮೇಧೀಯಂ ಮರುತೋ ಜುಷಧ್ವಂ

ಪದಪಾಠಃ

ಪ್ರ । ಬುಧ್ನ್ಯಾ । ವಃ । ಈರತೇ । ಮಹಾಂಸಿ । ಪ್ರ । ನಾಮಾನಿ । ಪ್ರಯಜ್ಯವಃ । ತಿರಧ್ವಂ ।
ಸಹಸ್ರಿಯಂ । ದಮ್ಯಂ । ಭಾಗಂ । ಏತಂ । ಗೃಹಮೇಧೀಯಂ । ಮರುತಃ । ಜುಷಧ್ವಂ ॥ ೧೪ ॥

ಸಾಯಣಭಾಷ್ಯಂ

ಗೃಹಮೇಧೀಯೇ ಪ್ರ ಬುಧ್ನ್ಯಾ ವ ಇತಿ ಪ್ರಧಾನಸ್ಯ ಯಾಜ್ಯಾ । ಸೂಕ್ತಿತಂ ಚ । ಪ್ರ ಬುಧ್ನ್ಯಾ ವ ಈರತೇ ಮಹಾಂಸೀತಿ ಪುಷ್ಟಿಮಂತೌ ವಿರಾಜೌ ಸಂಯಾಜ್ಯೇ । ಆ ೨-೧೪ । ಇತಿ ॥

ಹೇ ಮರುತಃ ವೋ ಯುಷ್ಮದೀಯಾನಿ ಬುಧ್ನಾ ಬುಧ್ನ್ಯಾನ್ಯಂತರಿಕ್ಷೇ ಭವಾನಿ ಮಹಾಂಸಿ ತೇಜಾಂಸಿ ಪ್ರೇರತೇ । ಪ್ರಕರ್ಷೇಣ ಗಚ್ಛಂತಿ । ಕಿಂ ಚ ಹೇ ಪ್ರಯಜ್ಯವಃ ಪ್ರಕರ್ಷೇಣ ಯಷ್ಟವ್ಯಾ ಮರುತಃ ಯೂಯಂ ನಾಮಾನಿ । ಪಾಂಸೂನ್ನಮಯಂತೀತಿ ನಾಮಾನ್ಯುದಕಾನಿ । ಪ್ರ ತಿರಧ್ವಂ । ವರ್ಧಯತ । ಹೇ ಮರುತಃ ಯೂಯಂ ಸಹಸ್ರಿಯಂ ಸಹಸ್ರಸಂಖ್ಯಾಕಂ ದಮ್ಯಂ ದಮೇ ಗೃಹೇ ಭವಂ ಗೃಹಮೇಧೀಯಂ ಗೃಹಮೇಧಿಗುಣೇಭ್ಯೋ ಯುಷ್ಮಭ್ಯಂ ದೇಯಮೇತನ್ಮೇತಾದೃಶಂ ಭಾಗಂ ಜುಷಧ್ವಂ । ಸೇವಧ್ವಂ । ಏಕಂ ಭಾಗಂ ಸಹಸ್ರಿಯಮಿತಿ ಕಥಮಾಹ । ತಥಾ ಚ ಶ್ರೂಯತೇ । ಯಾವದೇಕಾ ದೇವತಾ ಕಾಮಯತೇ ಯಾವದೇಕಾ ತಾವದಾಹುತಿಃ ಪೃಥಕ್ತೇ ನ ಹಿ ತದಸ್ತಿ ಯತ್ತಾನದೇವ ಸ್ಯಾದ್ಯಾವದ್ಧುತೋ ಹೋತೇತಿ ॥

ಪ್ರತಿಪದಾರ್ಥ

(ಎಲೈ ಮರುತ್ತುಗಳೇ) **ವಃ**—ನಿಮ್ಮ । **ಬುಧ್ನ್ಯಾ**—ಅಂತರಿಕ್ಷಸ್ಥವಾದ । **ಮಹಾಂಸಿ**—ತೇಜಸ್ಸುಗಳು । **ಪ್ರ ಈರತೇ**—ಅತಿಶಯವಾಗಿ ಹರಡಿ ಕಂಗೊಳಿಸುತ್ತವೆ । **ಪ್ರಯಜ್ಯವಃ**—ಉತ್ತಮವಾದ ಪೂಜೆಗೆ ಅರ್ಹರಾದ ಎಲೈ ಮರುತ್ತುಗಳೇ । **ನಾಮಾನಿ**—ಉದಕಗಳನ್ನು । **ಪ್ರ ತಿರಧ್ವಂ**—ಅಧಿಕವಾಗುವಂತೆ ಮಾಡಿರಿ. । **ಮರುತಃ**—ಎಲೈ ಮರುತ್ತುಗಳೇ, । **ಸಹಸ್ರಿಯಂ**—ಸಹಸ್ರಸಂಖ್ಯಾಕವಾದುದೂ, । **ದಮ್ಯಂ**—ಗೃಹಸ್ಥವಾದುದೂ, । **ಗೃಹಮೇಧೀಯಂ**—ಗೃಹದಲ್ಲಿ ಪೂಜಿತರಾಗುವ ನಿಮಗೆ ಅರ್ಪಿತವಾಗುವುದೂ ಆದ । **ಏತಂ ಭಾಗಂ**— ಈ ಯಜ್ಞಭಾಗವನ್ನು । **ಜುಷಧ್ವಂ**—ಸೇವಿಸಿರಿ.

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮ ಅಂತರಿಕ್ಷಸ್ಥವಾದ ತೇಜಸ್ಸುಗಳು ಅತಿಶಯವಾಗಿ ಹರಡಿ ಕಂಗೊಳಿಸುತ್ತವೆ. ಉತ್ತಮವಾದ ಪೂಜೆಗೆ ಅರ್ಹರಾದ ಎಲೈ ಮರುತ್ತುಗಳೇ, ಉದಕವನ್ನು ಅಧಿಕವಾಗುವಂತೆ ಮಾಡಿರಿ ಎಲೈ ಮರುತ್ತುಗಳೇ, ಸಹಸ್ರಸಂಖ್ಯಾಕವಾದುದೂ, ಗೃಹಸ್ಥವಾದುದೂ, ಗೃಹದಲ್ಲಿ ಪೂಜಿತವಾಗುವ ನಿಮಗೆ ಅರ್ಪಿತವಾಗುವುದೂ ಆದ ಈ ಯಜ್ಞಭಾಗವನ್ನು ಸೇವಿಸಿರಿ.

English Translation

Your celestial splendours, Maruts, spread wide objects of worship, you send down (the waters) that beat down (the dust). accept, Maruts this your portion of the domestic worship of the household multiplied a thousand fold.

ವಿಶೇಷವಿಷಯಗಳು

ಗೃಹಮೇಧೀಯವೆಂಬ ಇಷ್ಟಿಯಲ್ಲಿ **ಪ್ರ ಬುಧ್ನ್ಯಾ ವಃ** ಎಂಬ ಈ ಋಕ್ಕನ್ನು ಪ್ರಧಾನಾಹುತಿಯಲ್ಲಿ ಯಾಜ್ಯಾ ಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಪ್ರ ಬುಧ್ನ್ಯಾ ವ ಈರತೇ ಮಹಾಂಸೀತಿ ಪುಷ್ಟಿಮಂತೌ ವಿರಾಜೌ ಸಂಯಾಜ್ಯೇ** ಎಂಬ ಸೂತ್ರದಿಂದ (ಆ. ೨-೧೮) ವಿವೃತವಾಗಿರುವುದು.

ಸಂಹಿತಾಪಾಠಃ

ಯದಿ ಸ್ತುತಸ್ಯ ಮರುತೋ ಅಧೀಥೇತ್ಥಾ ವಿಪ್ರಸ್ಯ ವಾಜಿನೋ ಹವೀಮನ್ ।
ಮಕ್ಷೂ ರಾಯಃ ಸುವೀರ್ಯಸ್ಯ ದಾತ ನೂ ಚಿದ್ಯಮನ್ಯ ಆದಭದರಾವಾ ॥

ಪದಪಾಠಃ

ಯದಿ । ಸ್ತುತಸ್ಯ । ಮರುತಃ । ಅಧಿ । ಇಥ । ಇತ್ಥಾ । ವಿಪ್ರಸ್ಯ । ವಾಜಿನಃ । ಹವೀಮನ್ ।
ಮಕ್ಷು । ರಾಯಃ । ಸುವೀರ್ಯಸ್ಯ । ದಾತ । ನು । ಚಿತ್ । ಯಂ । ಅನ್ಯಃ । ಆದಭತ್ । ಅರಾವಾ ॥

ಸಾಯಣಭಾಷ್ಯಂ

ವಾಜಿನೋ ಹವಿರ್ಲಕ್ಷಣಾನ್ನವತೋ ವಿಪ್ರಸ್ಯ ಮೇಧಾವಿನೋ ಮಮ ಸಂಬಂಧಿನಿ ಹವೀಮನ್ ಹವಿಷ್ಮತಿ ಹವಿಷಾ ಯುಕ್ತೇ ಸ್ತೋತ್ರೇ ಕ್ರಿಯಮಾಣೇ ಸತಿ ಹೇ ಮರುತಃ ಯೂಯಂ ಯದಿ ಯಸ್ಮಾತ್ಕಾರಣಾತ್ ಸ್ತುತಸ್ಯ ಸ್ತುತಂ ಮದೀಯಂ ಸ್ತೋತ್ರಮಿತ್ಥೇತ್ಥಮನೇನ ಪ್ರಕಾರೇಣಾಧೀಥ ಅವಗಚ್ಛಥ ತಸ್ಮಾತ್ಕಾರಣಾತ್ ಹೇ ಮರುತಃ ಯೂಯಂ ಸುವೀರ್ಯಸ್ಯ ಶೋಭನಪುತ್ರೋಪೇತಸ್ಯ ರಾಯೋ ರಾಯಂ ಧನಂ । ದ್ವಿತೀಯಾರ್ಥೇ ಷಷ್ಠೀ । ಮಕ್ಷು ಶೀಘ್ರಂ ದಾತ । ದತ್ತ । ಅರಾವಾರಾತಿಃ ಶತ್ರುಭೂತೋಽನ್ಯೋ ಜನೋ ಯಂ ರಾಯಂ ನೂ ಚಿದಾದಭತ್ ನೈವಾಖಿಹನ್ಯಾತ್ । ತದ್ಧನಮಸ್ಮಭ್ಯಂ ದತ್ತೇತಿ ಸಂಬಂಧಃ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । **ವಾಜಿನಃ**—ಹವಿಸ್ಸುಳ್ಳವನೂ । **ವಿಪ್ರಸ್ಯ**—ಮೇಧಾವಿಯೂ ಆದ ನನ್ನಿಂದ । **ಹವೀಮನ್**—ಹವಿರ್ಯುಕ್ತವಾದ ಸ್ತುತಿಪರನವಾಗುವ ಕಾಲದಲ್ಲಿ । **ಯದಿ**—ಯಾವ ನಿಮಿತ್ತವಾಗಿ । **ಸ್ತುತಸ್ಯ**—ಸ್ತುತಿಕರ್ತನಾದ ನನ್ನ ಸ್ತುತಿಯನ್ನು । **ಇತ್ಥಾ** — ಈ ಪ್ರಕಾರವಾಗಿ । **ಅಧೀಥ** — ತಿಳಿಯುವಿರೋ, (ಆದುದರಿಂದಲೇ) । **ಸುವೀರ್ಯಸ್ಯ**— ಉತ್ತಮವಾದ ವೀರಪುತ್ರಾದಿಗಳಿಂದ ಕೂಡಿದುದೂ, । **ಅರಾವಾ**—ಶತ್ರುವಾದ । **ಅನ್ಯಃ**—ಬೇರೊಬ್ಬನು । **ಯಂ**—ಯಾವುದನ್ನು । **ನೂ ಚಿತ್**—ಸುಲಭವಾಗಿ । **ಆ ದಭತ್**—ಅಪಹರಿಸಲಾರನೋ ಅಂತಹುದೂ ಆದ । **ರಾಯಃ**—ಧನವನ್ನು । **ಮಕ್ಷು**—ಶೀಘ್ರವಾಗಿ । **ದಾತ**—ಕೊಡಿರಿ

ಭಾವಾರ್ಥ

ಎಲೈ ಮರುತ್ತುಗಳೇ, ಹವಿರ್ವಂತನೂ, ಮೇಧಾವಿಯೂ ಆದ ನನ್ನಿಂದ ಹವಿರ್ಯುಕ್ತವಾದ ಸ್ತುತಿಪರನವಾಗುವ ಕಾಲದಲ್ಲಿ ಯಾವ ನಿಮಿತ್ತವಾಗಿ ಸ್ತುತಿಕರ್ತನಾದ ನನ್ನ ಸ್ತುತಿಯನ್ನು ಈ ಪ್ರಕಾರವಾಗಿ ತಿಳಿಯುವಿರೋ ಆದುದರಿಂದಲೇ ಉತ್ತಮವಾದ ವೀರಪುತ್ರಾದಿಗಳಿಂದ ಕೂಡಿದುದೂ ಶತ್ರುವಾದ ಅನ್ಯಪುರುಷನಿಂದ ಅಪಹರಿಸಲು ಸಾಧ್ಯವಿಲ್ಲದುದೂ ಆದ ಧನವನ್ನು ಶೀಘ್ರವಾಗಿ ಕೊಡಿರಿ

English Translation

If, Maruts, you justly appreciate the praise of the devout offerer of (sacrificial) food, conjoined with oblations, then promptly bestow (upon us) riches, comprehending excellent male posterity, such as no unfriendly man can take away.

ಸಂಹಿತಾಪಾಠಃ

ಅತ್ಯಾಸೋ ನ ಯೇ ಮರುತಃ ಸ್ವಂಚೋ ಯಕ್ಷದೃಶೋ ನ ಶುಭಯಂತ ಮರ್ಯಾಃ ।
ತೇ ಹಮ್ರ್ಯೇಷ್ಠಾಃ ಶಿಶವೋ ನ ಶುಭ್ರಾ ವತ್ಸಾಸೋ ನ ಪ್ರಕ್ರೀಳಿನಃ ಪಯೋಧಾಃ ॥ ೧೬ ॥

क्रमपाठः

अत्यासः । न । ये । मरुतः । स्वञ्चः । यक्षद्रयः । न । शुभयन्तः । मर्याः ।
शे । हस्त्यैष्ठाः । शिशवः । न । शुभ्राः । वत्सासः । न । प्रक्रीळिनः । पयसः धाः ॥ ८ ॥

सायणभाष्यं

मरुद्भ्यः क्रीळिभ्यः सप्तकसालमित्यस्याक्ष्याऽस इति याज्या । सूक्तिनं च । अत्यासो न ये मरुतः स्वंचो जुह्वो दमूनाः । आ ३ ८ । इति ॥

अत्यासो नात्याः सततगामिनोऽश्वा इव स्वंचः सुष्ठु गच्छन्तो ये मरुतो यक्षद्रयः शोभनं स मर्या यक्षस्योत्सवस्य द्रष्टारो मनुष्या इव शुभयन्त शोभन्तेऽहर्म्येष्ठा हर्म्ये स्थिताः शिशवो न कुमारा इव शुभ्राः शोभमाना वत्सासो न वत्सा इव प्रक्रीळिनः प्रकर्षेण क्रीडमानास्ते मरुतः पयोधाः पयस उदकस्य धारयितारो दातारो वा भवन्ति ॥

प्रतिपदार्थ

ये मरुतः—यावे मरुत्तुगळु । अत्यासो न—वेगगामिगळाद अश्वगळंते । स्वंचः—श्रेष्ठवाद गतियुळ्ळवरो, । यक्षद्रयः—उत्सवगळन्नु नोडतक्क । मर्याः न—मानवरंते । शुभयंत—शोभिसुवरो । अहर्म्येष्ठाः—उप्परिगेमनेगळल्लि इरुव । शिशवो न — एळेय मक्कळंते । शुभ्राः — प्रकाशमानरो । वत्सासो न — एळेय करुगळंते । प्रक्रीळिनः—आटवाडुत्तिरुवरो । ते—आदे मरुत्तुगळु । पयोधाः—उदकधारकरागिरुत्तारे.

भावार्थ

वेगगामिगळाद अश्वगळंते उत्तमवाद गतियुळ्ळवरू, उत्सवगळन्नु नोडलु अलंकरिसि कॊंडिरुव मानवरंते शोभिसुववरू, उप्परिगेमनेगळल्लि इरुव एळेयमक्कळंते प्रकाशिसुव वरू, एळेय करुगळंते आटवाडुत्तिरुववरू आद मरुत्तुगळु उदकधारंकरागिदुत्तारे.

English Translation.

The swift-moving Maruts are like rapid horses, shining like men gazing at a festival · innocent as children in the (paternal) mansion, frolicksome as calves, they are the dispensers of water.

विशेषविषयगळु

मरुद्भ्यः क्रीळिभ्यः सप्तकसालं ऎंब मरुद्देवतेगळन्नुद्देशिसि माडुव काम्येष्टि यल्लि (तै. सं. ७-५-५-३) अत्यासः ऎंब ई ऋक्कन्नु याज्यामंत्रवन्नागि हरिसबेकेंदु आश्वलायनशौनकसूत्रद अत्यासो न ये मरुतः स्वंचो जुह्वो दमूनाः ऎंब सूत्रदिंद (अ. ३-७५) विवृतवागिरुवुदु.

ಸಂಹಿತಾಪಾಠಃ

ದಶಸ್ಯಂತೋ ನೋ ಮರುತೋ ಮೃಳಂತು ವರಿವಸ್ಯಂತೋ ರೋದಸೀ ಸುಮೇಕೇ ।
ಆರೇ ಗೋಹಾ ನೃಹಾ ವಧೋ ವೋ ಅಸ್ತು ಸುಮ್ನೇಭಿರಸ್ಮೇ ವಸವೋ ನಮಧ್ವಂ ॥ ೧೭ ॥

ಪದಪಾಠಃ

ದಶಸ್ಯಂತಃ । ನಃ । ಮರುತಃ । ಮೃಳಂತು । ವರಿವಸ್ಯಂತಃ । ರೋದಸೀ ಇತಿ । ಸುಮೇಕೇ ಇತಿ ಸು-ಮೇಕೇ ।
ಆರೇ । ಗೋಽಹಾ । ನೃಽಹಾ । ವಧಃ । ವಃ । ಅಸ್ತು । ಸುಮ್ನೇಭಿಃ । ಅಸ್ಮೇ ಇತಿ । ವಸವಃ । ನಮಧ್ವಂ ॥ ೧೭ ॥

ಸಾಯಣಭಾಷ್ಯಂ

ಮರುತೋ ನೋಽಸ್ಮಭ್ಯಂ ದಶಸ್ಯಂತೋ ಧನಾನಿ ಪ್ರಯಚ್ಛಂತಃ ಸುಮೇಕೇ ಸುರೂಪೇ ರೋದಸೀ ದ್ಯಾವಾಪೃಥಿವ್ಯೌ ವರಿವಸ್ಯಂತಃ ಸ್ವಮಹಿಮ್ನಾ ಪೂರಯಂತೋ ಮೃಳಂತು । ಮೃಳಯಂತು । ಅಸ್ಮಾನ್ಸುಖಯುಕ್ತಾನ್ ಕುರ್ವಂತು । ಅಪಿ ಚ ಹೇ ವಸವೋ ವಾಸಕಾ ಮರುತಃ ಗೋಹಾ ಗವಾಂ ಮೇಘಸ್ಥಾನಾಮುದಕಾನಾಂ ಭೇದಕೋ ನೃಹಾ ನೃಣಾಂ ಶತ್ರೂಣಾಂ ಹಂತಾ ವೋ ಯುಷ್ಮದೀಯಂ ವಧ ಆಯುಧಮಾರೇಽಸ್ತು । ಅಸ್ಮತ್ತೋ ದೂರೇ ಭವತು । ಯೂಯಮಪಿ ಸುಮ್ನೇಭಿಃ ಸುಖೈಃ ಸುಖ್ಯೈಃ ಸಹಾಸ್ಮೇ ಅಸ್ಮಾಸು ನಮಧ್ವಂ । ಸ್ವಯಮೇವಾಭಿಮುಖಾ ಭವತ ॥

ಪ್ರತಿಪದಾರ್ಥ

ಮರುತಃ—ಮರುತ್ತುಗಳು । **ನಃ**—ನಮಗೆ । **ದಶಸ್ಯಂತಃ**—ಧನಾದಿಗಳನ್ನು ಕೊಡುತ್ತಲೂ, । **ಸು-ಮೇಕೇ**—ಉತ್ತಮವಾದ ರೂಪವುಳ್ಳ । **ರೋದಸೀ**—ದ್ಯಾವಾಪೃಥಿವಿಗಳನ್ನು । **ವರಿವಸ್ಯಂತಃ**—ತಮ್ಮ ಪ್ರಭಾವಗಳಿಂದ ತುಂಬುತ್ತಲೂ । **ಮೃಳಂತು**—ನಮ್ಮನ್ನು ಸುಖಪಡಿಸಲಿ । **ವಸವಃ**—ವಸತಿದಾಯಕರಾದ ಎಲೈ ಮರುತ್ತುಗಳೇ, । **ಗೋಹಾ**—ಮೇಘವನ್ನು ಸೀಳಿ ಉದಕವನ್ನು ಸುರಿಸುವುದೂ । **ನೃಹಾ**—ಶತ್ರುಜನರನ್ನು ನಾಶಪಡಿಸುವುದೂ ಆದ । **ವಃ ವಧಃ**—ನಿಮ್ಮ ಆಯುಧವು । **ಆರೇ ಅಸ್ತು**—ನಮ್ಮಿಂದ ದೂರವಾಗಿರಲಿ । **ಸುಮ್ನೇಭಿಃ**—ನಿಮ್ಮ ಸುಖಸಾಧನಗಳೊಡನೆ । **ಅಸ್ಮೇ**—ನಮ್ಮಲ್ಲಿಗೆ । **ನಮಧ್ವಂ**—ಆದರದಿಂದ ಒರುವವರಾಗಿ.

ಭಾವಾರ್ಥ

ಮರುತ್ತುಗಳು ನಮಗೆ ಧನಪ್ರದರಾಗಿಯೂ, ಆಕರ್ಷಕವಾದ ಸ್ವರೂಪವುಳ್ಳ ದ್ಯಾವಾಪೃಥಿವಿಗಳನ್ನು ತಮ್ಮ ಪ್ರಭಾವಗಳಿಂದ ತುಂಬುತ್ತಲೂ ನಮ್ಮನ್ನು ಸುಖಪಡಿಸಲಿ. ವಸತಿದಾಯಕರಾದ ಎಲೈ ಮರುತ್ತುಗಳೇ ಮೇಘವನ್ನು ಸೀಳಿ ಉದಕವನ್ನು ಸುರಿಸುವುದೂ, ಶತ್ರುಜನರನ್ನು ನಾಶಪಡಿಸುವುದೂ ಆದ ನಿಮ್ಮ ಆಯುಧವು ನಮ್ಮಿಂದ ದೂರವಾಗಿರಲಿ. ಎಲೈ ಮರುತ್ತುಗಳೇ, ನಿಮ್ಮ ಸುಖಸಾಧನಗಳೊಡನೆ ಸ್ವಯಂಪ್ರೇರಿತರಾಗಿ ನಮ್ಮಲ್ಲಿಗೆ ಬನ್ನಿರಿ

English Translation

May the munificent Maruts, filling the beautiful heaven and earth with their glory, make us happy. your fatal weapon, the render of clouds, the destroyer of men, be far from us : bend down to us, Vasus with blessings.

ಸಂಹಿತಾಪಾಠಃ

ಆ ವ್ಓ ಹೋತಾ ಜೋಹವೀತಿ ಸತ್ತ್ಯಃ ಸತ್ರಾಚೀಂ ರಾತಿಂ ಮರುತೋ ಗೃಣಾನಃ ।

ಯ ಈವತೋ ವೃಷಣ್ವೋ ಅಸ್ತಿ ಗೋಪಾಃ ಸೋ ಅದ್ವಯಾವೀ ಹವತೇ ವ ಉಕ್ಥೈಃ ॥ ೧೪ ॥

ಪದಪಾಠಃ

ಆ । ವಃ । ಹೋತಾ । ಜೋಹವೀತಿ । ಸತ್ತ್ಯಃ । ಸತ್ರಾಚೀಂ । ರಾತಿಂ । ಮರುತಃ । ಗೃಣಾನಃ ।

ಯಃ । ಈವತಃ । ವೃಷಣಃ । ಅಸ್ತಿ । ಗೋಪಾಃ । ಸಃ । ಅದ್ವಯಾವೀ । ಹವತೇ । ವಃ । ಉಕ್ಥೈಃ ॥೧೪॥

ಸಾಯಣಭಾಷ್ಯಂ

ಮಾರುತೇ ಸಶಾವಾ ವೋ ಹೋತೇತ್ಯೇಷಾನುವಾಕ್ಯಾ । ಸೂತ್ರಿತಂ ಚ ಆ ವೋ ಹೋತಾ ಜೋಹವೀತಿ ಸತ್ತ್ಯಃ ಪ್ರ ಚಿತ್ರಮರ್ಕಂ ಗೃಣತೇ ತುರಾಯ । ಆ ೩-೭ । ಇತಿ ॥

ಹೇ ಮರುತಃ ಸತ್ರೋ ಹೋತೃಷದನೇ ನಿಷಣ್ಣೋಽಸ್ಮದೀಯೋ ಹೋತಾ ಸತ್ರಾಚೀಂ ಸರ್ವತೋ ಗಮನಶೀಲಂ ರಾತಿಂ ತ್ವದೀಯಂ ದಾನಂ ಗೃಣಾನಃ ಸ್ತುವನ್ ವೋ ಯುಷ್ಮಾನಾ ಜೋಹವೀತಿ । ಭೃಶಮಾಹ್ವಯತಿ । ಹೇ ವೃಷಣಃ ಕಾಮಾನಾಂ ವರ್ಷಿತಾರೋ ಮರುತಃ ಯೋ ಹೋತೇವತೋ ಗಚ್ಛತೋ ವ್ಯಾಪಾರವತೋ ಯಜಮಾನಸ್ಯ ಗೋಪಾ ಅಸ್ತಿ ಯುಷ್ಮದಾಹ್ವಾನನಿಮಿತ್ತೇನ ರಕ್ಷಕೋ ಭವತಿ ಸ ಹೋತಾದ್ವಯಾವೀ ಮಾಯಾರಹಿತಃ ಸನ್ವೋ ಯುಷ್ಮಾನುಕ್ಥೈಃ ಸ್ತೋತ್ರೈರ್ಹವತೇ । ಸ್ತೌತಿ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । ಸತ್ತ್ಯಃ—ಸ್ವಸ್ಥಾನದಲ್ಲಿ ಕುಳಿತಿರುವ । ಹೋತಾ—ಹೋತೃವು । ಸತ್ರಾಚೀಂ—ಸರ್ವತ್ರವ್ಯಾಪಿಸುವುದೂ । ರಾತಿಂ—ನಿಮ್ಮಿಂದ ದತ್ತವಾದುದೂ ಆದ ದಾನವನ್ನು । ಗೃಣಾನಃ—ಸ್ತುತಿಸುತ್ತ । ವಃ—ನಿಮ್ಮನ್ನು । ಆ ಜೋಹವೀತಿ—ಪದೇಪದೇ ಕರೆಯುತ್ತಾನೆ । ವೃಷಣಃ—ಕಾಮವರ್ಷಕರಾದ ಎಲೈ ಮರುತ್ತುಗಳೇ, । ಯಃ—ಯಾವ ಹೋತೃವು । ಈವತಃ—ಕರ್ಮನಿರತನಾದ ಯಜಮಾನನಿಗೆ । ಗೋಪಾಃ ಅಸ್ತಿ—ರಕ್ಷಕನಾಗಿರುವನೋ । ಸಃ—ಅದೇ ಹೋತೃವು । ಅದ್ವಯಾವೀ—ವಂಚನೆಯಿಲ್ಲದೆ । ವಃ—ನಿಮ್ಮನ್ನು । ಉಕ್ಥೈಃ—ಸ್ತೋತ್ರಗಳಿಂದ । ಹವತೇ—ಸ್ತುತಿಸುತ್ತಾನೆ.

ಭಾವಾರ್ಥ

ಎಲೈ ಮರುತ್ತುಗಳೇ, ತನ್ನ ನಿಯಮಿತವಾದ ಸ್ಥಾನದಲ್ಲಿ ಕುಳಿತಿರುವ ಹೋತೃವು ಸರ್ವತ ವ್ಯಾಪಿಸುವುದೂ ನಿಮ್ಮಿಂದ ದತ್ತವಾದುದೂ ಆದ ದಾನವನ್ನು ಸ್ತುತಿಸುತ್ತ ನಿಮ್ಮನ್ನು ಪದೇಪದೇ ಕರೆಯುತ್ತಾನೆ. ಕಾಮವರ್ಷಕರಾದ ಎಲೈ ಮರುತ್ತುಗಳೇ, ಯಾವ ಹೋತೃವು ಕರ್ಮನಿರತನಾದ ಯಜಮಾನನಿಗೆ ರಕ್ಷಕನಾಗಿರುವನೋ ಆದೇ ಹೋತೃವು ಯಾವ ವಂಚನೆಯೂ ಇಲ್ಲದವನಾಗಿ ನಿಮ್ಮನ್ನು ಸ್ತೋತ್ರಗಳಿಂದ ಸ್ತುತಿಸುತ್ತಾನೆ.

English Translation

Praising your universal liberality, Maruts, the ministrant priest repeatedly worships you seated (in the sacrificial chamber) he, showerers (of benefits), who is the guardian of the zealous (worshipper), he, (the priest) who is void of insincerity, glorifies you with hymns

ವಿಶೇಷವಿಷಯಗಳು

ಮರುದ್ದೇವತೆಗಳನ್ನು ದ್ವೇಷಿಸಿ ಮಾಡುವ ಪಶುಯಾಗದಲ್ಲಿ **ಆ ವೋ ಹೋತಾ** ಎಂಬ ಈ ಋಕ್ಕನ್ನು ಅನುವಾಕ್ಯಾನುಂತ್ರವನ್ನಾಗಿ ಪರಿಸಟೇಕೆಂದು ಆಶ್ವಲಾಯನಶ್ರೌತಸೂತ್ರದ **ಆ ವೋ ಹೋತಾ ಜೋಹವೀತಿ ಸತ್ತ್ರಾ ಪ್ರ ಚಿತ್ರಮರ್ಕಂ ಗೃಣತೇ ತುರಾಯ** ಎಂಬ ಸೂತ್ರದಿಂದ (ಆ ೩-೭) ವಿಹೃತವಾಗಿರುವುದು

ಸಂಹಿತಾಪಾಠಃ

ಇಮೇ᳡ ತುರಂ ಮರುತೋ᳡ ರಾಮಯಂತೀಮೇ᳡ ಸಹಃ ಸಹಸ ಆ ನಮಂತಿ ।
ಇಮೇ᳡ ಶಂಸಂ ವನುಷ್ಯತೋ᳡ ನಿ ಪಾಂತಿ ಗುರು ದ್ವೇಷೋ᳡ ಅರರುಷೇ ದಧಂತಿ ॥ ೧೯ ॥

ಪದಪಾಠಃ

ಇಮೇ᳡ । ತುರಂ । ಮರುತಃ᳡ । ರಮಯಂತಿ । ಇಮೇ᳡ । ಸಹಃ᳡ । ಸಹಸಃ । ಆ । ನಮಂತಿ ।
ಇಮೇ᳡ । ಶಂಸಂ । ವನುಷ್ಯತಃ᳡ । ನಿ । ಪಾಂತಿ । ಗುರು । ದ್ವೇಷಃ᳡ । ಅರರುಷೇ । ದಧಂತಿ ॥ ೧೯ ॥

ಸಾಯಣಭಾಷ್ಯಂ

ಇಮ ಈದೃಶೋ ಮರುತಸ್ತುರಂ ಕರ್ಮಸು ಕ್ಷಿಪ್ರಂವಂತಂ ಯಜಮಾನಂ ರಮಯಂತಿ । ಕ್ರೀಡಯಂತಿ । ಇಮೇ᳡ ಮರುತಃ᳡ ಸಹಃ ಸಹಸಾ ಬಲೇನ ಸಹಸೋ᳡ ಬಲವತೋ᳡ ಜನಾನಾ ನಮಂತಿ । ಇಮೇ᳡ ಮರುತೋ᳡ ವನುಷ್ಯತೋ᳡ ಹಿಂಸಕಾತ್ಪುರುಷಾಚ್ಛಂಸಂ ಶಂಸಕಂ ಸ್ತೋತಾರಂ ನಿ ಪಾಂತಿ । ನಿತರಾಂ ಪಾಲಯಂತಿ । ಅರರುಷೇ ಹವಿರಪ್ರಯಚ್ಛತೇ ಜನಾಯಃ ಗುರು ಮಹದ್ದ್ವೇಷೋ᳡ಽಪ್ರಿಯಂ ದಧಂತಿ

ಪ್ರತಿಪದಾರ್ಥ

ಇಮೇ ಮರುತಃ—ಈ ಮರುತ್ತುಗಳು । **ಕುರಂ**—ಕರ್ಮಾಸಕ್ತನಾದ ಯಜಮಾನನನ್ನು । **ರಮಯಂತಿ**—ಸಂತೋಷಗೊಳಿಸುತ್ತಾರೆ । **ಇಮೇ**—ಈ ಮರುತ್ತುಗಳು । **ಸಹಃ**—ತಮ್ಮ ಶಕ್ತಿಯಿಂದ । **ಸಹಸಃ**—ಶಕ್ತಿಯುತರಾದ ಜನರನ್ನು । **ಆ ನಮಂತಿ**—ಕುಗ್ಗಿಸುತ್ತಾರೆ । **ಇಮೇ**—ಈ ಮರುತ್ತುಗಳು । **ವನುಷ್ಯತಃ**—ಹಿಂಸಕನಾದ ಶತ್ರುವಿನಿಂದ । **ಶಂಸಂ**—ಪ್ರಶಸ್ಯನಾದ ಸ್ತುತಿಕರ್ತನನ್ನು । **ನಿ ಪಾಂತಿ**—ಪೂರ್ಣವಾಗಿ ರಕ್ಷಿಸುತ್ತಾರೆ । **ಅರರುಷೇ**—ಅದಾತೃವಾದ ಜನರಿಗೆ । **ಗುರು**—ಅಧಿಕವಾದ । **ದ್ವೇಷಃ**—ಕಟ್ಟಿದ್ದನ್ನು । **ದಧಂತಿ**—ಮಾಡುತ್ತಾರೆ.

ಭಾವಾರ್ಥ

ಈ ಮರುತ್ತುಗಳು ಕರ್ಮಾಸಕ್ತನಾದ ಯಜಮಾನನನ್ನು ಸಂತೋಷಗೊಳಿಸುತ್ತಾರೆ ಇವರು ತಮ್ಮ ಶಕ್ತಿಯಿಂದ ಶಕ್ತಿಯುತರಾದ ಶತ್ರುಜನರನ್ನು ಕುಗ್ಗಿಸುತ್ತಾರೆ. ಇದೇ ಮರುತ್ತುಗಳು ಹಿಂಸಕನಾದ ಶತ್ರುವಿನಿಂದ ಪ್ರಶಸ್ಯನಾದ ಸ್ತುತಿಕರ್ತನನ್ನು ಪೂರ್ಣವಾಗಿ ರಕ್ಷಿಸುತ್ತಾರೆ. ಅದಾತೃವಾದ ಲೋಭಿಗಳಿಗೆ ಅಧಿಕವಾಗಿ ಕಟ್ಟಿದ್ದನ್ನು ಮಾಡುತ್ತಾರೆ

English Translation

These, Maruts, give pleasure to the zealous (worshipper) these humble the strength of the strong man . these protect their adorers from the malignant : they entertain severe displeasure towards the withholder of offerings.

ಸಂಹಿತಾಪಾಠಃ

ಇಮೇ ರಧ್ರಂ ಚಿನ್ಮರುತೋ ಜುನಂತಿ ಭೃಮಿಂ ಚಿದ್ಯಥಾ ವಸವೋ ಜುಷಂತ ।
ಅಪ ಬಾಧಧ್ವಂ ವೃಷಣಸ್ತಮಾಂಸಿ ಧತ್ತ ವಿಶ್ವಂ ತನಯಂ ತೋಕಮಸ್ಮೇ ॥

ಪದಪಾಠಃ

ಇಮೇ । ರಧ್ರಂ । ಚಿತ್ । ಮರುತಃ । ಜುನಂತಿ । ಭೃಮಿಂ । ಚಿತ್ । ಯಥಾ । ವಸವಃ । ಜುಷಂತ ।
ಅಪ । ಬಾಧಧ್ವಂ । ವೃಷಣಃ । ತಮಾಂಸಿ । ಧತ್ತ । ವಿಶ್ವಂ । ತನಯಂ । ತೋಕಂ । ಅಸ್ಮೇ ಇತಿ ॥

ಸಾಯಣಭಾಷ್ಯಂ

ಇಮೇ ಮರುತೋ ರಧ್ರಂ ಚಿತ್ ಸಮೃಧ್ಧಮಪಿ ಜನಂ ಜುನಂತಿ । ಪ್ರೇರಯಂತಿ । ಭೃಮಿಂ ಚಿದ್ಭ್ರಮಣಶೀಲಮಪಿ ದರಿದ್ರಂ ಜುನಂತಿ । ಪ್ರೇರಯಂತಿ । ವಸವೋ ವಾಸಕಾ ದೇವಾ ಯುಷ್ಮಾನ್ಯಥಾ ಜುಷಂತ ಕಾಮಯೇರನ್ ಹೇ ವೃಷಣಃ ಕಾಮಾನಾಂ ವರ್ಷಿತಾರಃ ಶೇ ಯೂಯಂ ತಮಾಂಸ್ಯಪ ಬಾ-

ಧಧ್ವಂ । ನಾಶಯತ । ಅಪಿ ಜಾಸ್ಮೇ ಅಸ್ಮಭ್ಯಂ ವಿಶ್ವಂ ಬಹುಲಂ ತೋಕಂ ಪುತ್ರಂ ತನಯಂ ಪೌತ್ರಂ ಚ ಧತ್ತ । ಪ್ರಯಚ್ಛತ ॥

ಪ್ರತಿಪದಾರ್ಥ

ಇಮೇ ಮರುತಃ—ಈ ಮರುತ್ತುಗಳು । **ರಧ್ರಂ ಚಿತ್**—ಸಂಪದ್ವೃದ್ಧನನ್ನು । **ಜುನಂತಿ**—ಪ್ರೇರಿಸುತ್ತಾರೆ । **ಭೃಮಿಂ ಚಿತ್**—ದರಿದ್ರನನ್ನೂ ಸಹ ಪ್ರೇರಿಸಿ ಉತ್ಪೇಜನವನ್ನು ಕೊಡುತ್ತಾರೆ. । **ವೃಷಣಃ**—ಕಾಮವರ್ಷಕರಾದ ಎಲೈ ಮರುತ್ತುಗಳೇ । **ಯಥಾ**—ಯಾವ ಪ್ರಕಾರ । **ವಸವಃ**—ವಸತಿದಾಯಕರಾದ ದೇವತೆಗಳು । **ಜುಷಂತ**—ನಿಮ್ಮ ಕರ್ಮವನ್ನು ಆಶಿಸುವರೋ ಆರೀತಿ । **ತಮಾಂಸಿ**—ಕತ್ತಲೆಗಳನ್ನು । **ಅಪ ಬಾಧಧ್ವಂ**—ನಾಶಪಡಿಸಿರಿ । **ಅಸ್ಮೇ**—ನಮಗೆ । **ವಿಶ್ವಂ**—ಅನೇಕವಾಗಿ । **ತೋಕಂ**—ಪುತ್ರರನ್ನೂ । **ತನಯಂ**—ಪೌತ್ರರನ್ನೂ । **ಧತ್ತ**—ಕೊಡಿರಿ.

ಭಾವಾರ್ಥ

ಈ ಮರುತ್ತುಗಳು ಸಂಪದ್ವೃದ್ಧನನ್ನು ಯಾವ ರೀತಿ ಪ್ರೇರಿಸುವರೋ, ದರಿದ್ರನನ್ನೂ ಅದೇ ರೀತಿ ಪ್ರೇರಿಸಿ ಹುರಿದುಂಬಿಸುತ್ತಾರೆ. ಕಾಮವರ್ಷಕರಾದ ಎಲೈ ಮರುತ್ತುಗಳೇ, ವಸತಿದಾಯಕರಾದ ದೇವತೆಗಳು ಯಾವ ರೀತಿ ನಿಮ್ಮ ಕರ್ಮವನ್ನು ಆಶಿಸುವರೋ ಆರೀತಿ ಕತ್ತಲೆಗಳನ್ನು ನಾಶಪಡಿಸಿರಿ. ನಮಗೆ ಅನೇಕವಾಗಿ ಪುತ್ರರನ್ನೂ ಪೌತ್ರರನ್ನೂ ಕೊಡಿರಿ.

English Translation

These, Maruts, encourage the prosperous man they encourage the (poor) wanderer they, as Vasus, are pleased (with you) showerers (of benefits), dissipate the darkness grant us many sons and grandsons

ಸಂಹಿತಾಪಾಠಃ

ಮಾ ವೋ᳡ ದಾತ್ರಾನ್ಮರುತೋ᳡ ನಿರರಾಮ ಮಾ ಪಶ್ಚಾ᳡ದ್ದಘ್ಮ ರಥ್ಯೋ᳡ ವಿಭಾಗೇ ।
ಆ ನ᳡ಃ ಸ್ಪಾರ್ಹೇ ಭಜತನಾ ವಸವ್ಯೇ᳡ ಯದೀಂ ಸುಜಾತಂ ವೃಷಣೋ ವೋ᳡ ಅಸ್ತಿ ॥ ೨೧ ॥

ಪದಪಾಠಃ

ಮಾ । ವಃ । ದಾತ್ರಾತ್ । ಮರುತಃ । ನಿಃ । ಅರಾಮ । ಮಾ । ಪಶ್ಚಾತ್ । ದಘ್ಮ । ರಥ್ಯಃ । ವಿಭಾಗೇ ।
ಆ । ನಃ । ಸ್ಪಾರ್ಹೇ । ಭಜತನ । ವಸವ್ಯೇ । ಯತ್ । ಈಂ । ಸುಜಾತಂ । ವೃಷಣಃ । ವಃ । ಅಸ್ತಿ ॥

ಸಾಯಣಭಾಷ್ಯಂ

ಹೇ ಮರುತಃ ವೋ ಯುಷ್ಮಾಕಂ ದಾತ್ರಾದ್ದಾನಾನ್ನಾ ನಿರರಾಮ । ವಯಂ ಮಾ ನಿರ್ಗಮಾಮ । ಯೂಯಮಸ್ಮಾನ್ಪರಿತ್ಯಕ್ತ್ವಾನ್ಯೇಭ್ಯೋ ಧನಂ ಮಾ ದತ್ತೇತ್ಯರ್ಥಃ । ಹೇ ರಥ್ಯೋ ರಥವಂತೋ

ಮರುತಃ ವಿಭಾಗೇ ಯುಷ್ಮದೀಯಸ್ಯ ಧನಸ್ಯ ದಾನೇ ಪಶ್ಚಾನ್ಮಾ ದಭ್ಮ । ದಭ್ಯತಿರ್ಗತಿಕರ್ಮಾ । ವಯಂ ಪಶ್ಚಾದ್ಭಾಗಿನೋ ಮಾ ಭೂಮ । ಯೂಯಂ ಪ್ರಥಮಮಸ್ಮಭ್ಯಮೇವ ದತ್ತೇತಿ ಯಾವತ್ । ಸ್ಪಾರ್ಹೇ ಸ್ಪೃಹಣೀಯೇ ವಸನ್ಯೇ ಧನಸಮೂಹೇ ಯೂಯಂ ನೋಽಸ್ಮಾನಾ ಭಜತನ । ಭಾಗಿನಃ ಕುರುತ । ಹೇ ವೃಷಣೋ ವರ್ಷಿತಾರೋ ಮರುತಃ ವೋ ಯುಷ್ಮಾಕಂ ಸುಜಾತಂ ಶೋಭನಜನಂ ಯದ್ವಸವ್ಯಮಸ್ತಿ ತಸ್ಮಿನ್ನಾಭಾಗಿನಃ ಕುರುತೇತಿ ಸಂಬಂಧಃ । ಈಮಿತಿ ಪೂರಣಃ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । **ವಃ**—ನಿಮ್ಮ । **ದಾತ್ರಾತ್**—ದಾನದಿಂದ । **ಮಾ ನಿರರಾಮ**—ನಾವು ಬಿಡುಗಡೆಯನ್ನು ಹೊಂದದಂತೆ ಇರಲಿ. । **ರಥ್ಯಃ**—ರಥವಂತರಾದ ಎಲೈ ಮರುತ್ತುಗಳೇ । **ವಿಭಾಗೇ**—ನಿಮ್ಮ ದಾನದ ಸ್ವೀಕಾರದಲ್ಲಿ । **ಪಶ್ಚಾತ್ ಮಾ ದಭ್ಮ**—ನಾವು ಕೊನೆಯ ಅಂಶದ ಭಾಗಿಗಳಾಗುವಂತೆ ಮಾಡಬೇಡಿರಿ । **ಸ್ಪಾರ್ಹೇ**—ಆತ್ಯಪೇಕ್ಷಿತವಾದುದೂ, । **ವಸನ್ಯೇ**—ವಿಸ್ತೃತವಾದುದೂ ಆದ ಧನಸಮೂಹಕ್ಕೆ । **ನಃ**—ನಮ್ಮನ್ನು । **ಆ ಭಜತನ**—ಭಾಗಿಗಳಾಗುವಂತೆ ಮಾಡಿರಿ. । **ವೃಷಣಃ**—ಕಾಮವರ್ಷಕರಾದ ಎಲೈ ಮರುತ್ತುಗಳೇ । **ವಃ**—ನಿಮಗೆ ಸೇರಿದುದೂ । **ಸುಜಾತಂ**—ಉತ್ತಮವಾದ ಜನಭರಿತವಾದುದೂ ಆದ । **ಯತ್ ಅಸ್ತಿ**—ಯಾವ ನಿಮ್ಮ ಸಂಪತ್ತಿರುವುದೋ ಅದಕ್ಕೆ ನಾವು ಭಾಗಿಗಳಾಗುವಂತೆ ಮಾಡಿರಿ

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮ ದಾನವನ್ನು ನಮಗೆ ಯಾವಾಗಲೂ ತಪ್ಪಿಸಬೇಡಿರಿ ರಥವಂತರಾದ ಎಲೈ ಮರುತ್ತುಗಳೇ, ನಿಮ್ಮ ದಾನದ ಸ್ವೀಕಾರದಲ್ಲಿ ನಾವು ಕೊನೆಯ ಅಂಶದ ಭಾಗಿಗಳಾಗುವಂತೆ ಮಾಡಬೇಡಿರಿ ಅತ್ಯಪೇಕ್ಷಿತವಾದುದೂ, ಪುಷ್ಕಳವಾದುದೂ ಆದ ಧನಸಮೂಹಕ್ಕೆ ನಮ್ಮನ್ನು ಭಾಗಿಗಳಾಗುವಂತೆ ಮಾಡಿರಿ. ಕಾಮವರ್ಷಕರಾದ ಎಲೈ ಮರುತ್ತುಗಳೇ, ನಿಮಗೆ ಸೇರಿದುದೂ, ಉತ್ತಮವಾದ ಜನಭರಿತವಾದುದೂ ಆದ ಯಾವ ನಿಮ್ಮ ಸಂಪತ್ತಿರುವುದೋ ಅದಕ್ಕೆ ನಾವು ಭಾಗಿಗಳಾಗುವಂತೆ ಮಾಡಿರಿ.

English Translation

Never, Maruts, may we be excluded from your bounty : let us not, lordsof chariots, be lost in its apportionment make us sharers in that desirable opulence which, showerers (of benefits), is born of you.

ಸಂಹಿತಾಪಾಠಃ

ಸಂ ಯದ್ಧನಂತ ಮನ್ಯುಭಿರ್ಜನಾಸಃ ಶೂರಾ ಯಹ್ವೀಷ್ವೋಷಧೀಷು ವಿಕ್ಷು ।
ಅಧಾ ಸ್ಮಾ ನೋ ಮರುತೋ ರುದ್ರಿಯಾಸಸ್ತ್ರಾತಾರೋ ಭೂತ ಪೃತನಾ-
ಸ್ವರ್ಯಃ ॥ ೨೨ ॥

ಪದಪಾಠಃ

ಸಂ । ಯತ್ । ಹನಂತೇ । ಮನ್ಯುಭಿಃ । ಜನಾಸಃ । ಶೂರಾಃ । ಯೇಷ್ವೀಷು । ಓಷಧೀಷು । ವಿಕ್ಷು ।

ಅಧ । ಸ್ಮ । ನಃ । ಮರುತಃ । ರುದ್ರಿಯಾಸಃ । ತ್ರಾತಾರಃ । ಭೂತ । ಪೃತನಾಸು । ಆರ್ಯಃ ॥ ೨೨ ॥

ಸಾಯಣಭಾಷ್ಯಂ

ಯದ್ಯದಾ ಶೂರಾ ವಿಕ್ರಾಂತಾ ಜನಾಸೋ ಜನಾ ಯೇಷ್ವೀಷು ಮಹತೀಷ್ವೋಷಧೀಷು ವಿಕ್ಷು ಪ್ರಜಾಸು ಚ ಜೇತವ್ಯಾಸು ಮನ್ಯುಭಿಃ ಕೋಪೈರಭಿಮಾನೈರ್ವಾ ಸಂ ಹನಂತ ಸಂಗಚ್ಛಂತೇ ಅಧ ತದಾನೀಂ ಹೇ ರುದ್ರಿಯಾಸೋ ರುದ್ರಪುತ್ರಾ ಹೇ ಮರುತಃ ಯೂಯಂ ಪೃತನಾಸು ಯುದ್ಧೇಷ್ವರ್ಯೋಽರೇಃ ಶತ್ರೋಃ ಸಕಾಶಾನ್ನೋಽಸ್ಮಾಕಂ ತ್ರಾತಾರೋ ಭೂತ । ರಕ್ಷಕಾ ಭವತ ॥

ಪ್ರತಿಪದಾರ್ಥ

ರುದ್ರಿಯಾಸಃ—ರುದ್ರಪುತ್ರರಾದ । **ಮರುತಃ**—ಎಲೈ ಮರುತ್ತುಗಳೇ, । **ಪೃತನಾಸು**—ಯುದ್ಧಗಳಲ್ಲಿ । **ಯತ್**—ಯಾವಾಗ । **ಶೂರಾಃ**—ಪರಾಕ್ರಮಿಗಳಾದ । **ಜನಾಸಃ**—ಜನರು । **ಯೇಷ್ವೀಷು**—ಮಹತ್ತಾದ । **ಓಷಧೀಷು**—ಓಷಧಿಗಳಲ್ಲಿಯೂ । **ವಿಕ್ಷು**—ಪ್ರಜೆಗಳಲ್ಲಿಯೂ ಇರುವ ಸಂಪತ್ತನ್ನು ಜಯಿಸಬೇಕೆಂದು । **ಮನ್ಯುಭಿಃ**—ತಮ್ಮ ಕ್ರೋಧಗಳೊಡಗೂಡಿ । **ಸಂ ಹನಂತ**—ಒಟ್ಟಿಗೆ ಸೇರಿಕೊಳ್ಳುವರೋ । **ಅಧ**—ಆ ಕಾಲದಲ್ಲಿ । **ಆರ್ಯಃ**—ಶತ್ರುವಿನಿಂದ । **ನಃ**—ನಮಗೆ । **ತ್ರಾತಾರಃ**—ರಕ್ಷಕರಾಗಿ । **ಭೂತ**—ಆಗಿರಿ

ಭಾವಾರ್ಥ

ರುದ್ರಪುತ್ರರಾದ ಎಲೈ ಮರುತ್ತುಗಳೇ, ಯುದ್ಧಗಳಲ್ಲಿ ಯಾವಾಗ ಪರಾಕ್ರಮಿಗಳಾದ ಜನರು ಮಹತ್ತಾದ ಓಷಧಿಗಳನ್ನೂ ಪ್ರಜೆಗಳನ್ನೂ ಜಯಿಸಲು ತಮ್ಮ ಕ್ರೋಧಗಳೊಡಗೂಡಿ ಒಟ್ಟಿಗೆ ಸೇರಿಕೊಳ್ಳುವರೋ ಆ ಕಾಲದಲ್ಲಿ ಶತ್ರುವಿನಿಂದ ನಮ್ಮನ್ನು ರಕ್ಷಿಸಿರಿ

English Translation

When heroic men filled with wrath, assemble for(the sake of conquering) many plants and people, then Maruts, sons of Rudra, be our defenders in battles against our enemies

ಸಂಹಿತಾಪಾಠಃ

ಭೂರಿ ಚಕ್ರ ಮರುತಃ ಪಿತ್ರ್ಯಾಣ್ಯುಕ್ಥಾನಿ ಯಾ ವಃ ಶಸ್ಯಂತೇ ಪುರಾ ಚಿತ್ ।

ಮರುದ್ಭಿರುಗ್ರಃ ಪೃತನಾಸು ಸಾಳ್ಹ ಮರುದ್ಭಿರಿತ್ಸನಿತಾ ವಾಜಮರ್ವಾ ॥೨೩॥

पदपाठः

भूरि । चक्र । मरुतः । पित्र्या णि । उक्था नि । यूयम् । पः [शस्यन्ते । पुरा । चित् ।

मरुत्ऽभिः । उग्रः । पृतनासु । साळ्हा । मरुत्ऽभिः । इत् । सनिता । वाजम् । अर्वा ॥

सायणभाष्यम्

हे मरुतः यूयूयं भूरि भूरीणि बहूनि पित्र्याण्यस्मत्पितृसंबन्धीनि धनदानादीनि कर्माणि चक्र । कृतवन्तोऽभवत । पुरा चित् पूर्वकालेऽपि वोऽयुष्माकमुक्थानि प्रशस्यानि यानि कर्माणि प्रशस्यन्ते प्रख्याप्यन्ते तानि चक्रेऽति संबन्धः । उग्र ओजस्वी पृतनासु युद्धेषु मरुद्भिर्युष्माभिर्हेतुभिः साळ्हा शत्रूणामभिभविता भवति । मरुद्भिरित्मरुद्भिर्युष्माभिरेव हेतुभिरर्वा स्तोत्रैरभिगन्ता वाजमन्नं सनिता संभक्ता भवति । यदा । अर्वाश्वो वाजं युद्धं सनिता भवति ॥

प्रतिपदार्थ

मरुतः—ಎಲೈ ಮರುತ್ತುಗಳೇ, । पुरा चित्—ಪೂರ್ವಕಾಲದಲ್ಲಿಯೂ । वः—ನಿಮ್ಮ । यानि उक्थानि शस्यन्ते—ಯಾವ ಕರ್ಮಗಳು ಪ್ರಶಸ್ಯವಾಗಿ ಇದ್ದವೋ ಅಂತಹ । भूरि—ಅಧಿಕವಾದುದೂ । पित्र्याणि—ನಮ್ಮ ಪಿತೃಾದಿಗಳಿಗೆ ಅನುಗ್ರಹಿಸಲ್ಪಟ್ಟುದೂ ಆದ ದಾನಾದಿಕರ್ಮಗಳನ್ನು । चक्र—ನೆರವೇರಿಸಿದ್ದೀರಿ । उग्रः—ಅಧಿಕವಾದ ಒಲವುಳ್ಳವನು । पृतनासु—ಯುದ್ಧಗಳಲ್ಲಿ । मरुद्भिः—ಮರುತ್ತುಗಳೊಡಗೂಡಿ । साळ्हा—ಶತ್ರುಗಳನ್ನು ಜಯಿಸಬಲ್ಲವನಾಗುತ್ತಾನೆ । अर्वा—ಸ್ತುತಿಗಳಿಂದ ಸಮೀಪಿಸುವ ಸ್ತುತಿಕರ್ತನು । मरुद्भिरित्—ಮರುತ್ತುಗಳ ಸಹಾಯದಿಂದಲೇ । वाजं—ಅನ್ನಕ್ಕೆ । सनिता—ಭಾಗಿಯಾಗುತ್ತಾನೆ.

ಭಾವಾರ್ಥ

ಎಲೈ ಮರುತ್ತುಗಳೇ, ಹಿಂದೆ ನಮ್ಮ ಪಿತೃಾದಿಗಳಿಗೆಲ್ಲಾ ಹಿತವಾದ ಯಾವ ದಾನಾದಿಕರ್ಮಗಳನ್ನು ಮಾಡಿದ್ದೀರೋ ಆ ಪ್ರಶಸ್ಯವಾದ ಕರ್ಮಗಳು ಈಗಲೂ ಪ್ರಶಂಸಿತವಾಗುತ್ತಿವೆ. ನಿಮ್ಮ ಸಹಾಯವಿದ್ದರೆ ಮಾತ್ರ ಓಜಸ್ವಿಯು ಶತ್ರುಗಳನ್ನು ಜಯಿಸಬಲ್ಲನು ಸ್ತುತಿಗಳಿಂದ ಮರುತ್ತುಗಳನ್ನು ಸಮೀಪಿಸುವ ಸ್ತುತಿಕರ್ತನು ಮಾತ್ರ ಮರುತ್ತುಗಳ ಸಹಾಯದಿಂದಲೇ ಅನ್ನಕ್ಕೆ ಭಾಗಿಯಾಗುತ್ತಾನೆ.

English Translation

You have bestowed, Maruts, many (benefits) on our forefathers, which praiseworthy (benefits) have been celebrated in former times. by the (favour of the) Maruts the fierce (warrior) is victorious in combats; by the (favour of the) Maruts the worshipper ever obtains food.

ಸಂಹಿತಾಪಾಠಃ

ಅಸ್ಮೇ ವೀರೋ ಮರುತಃ ಶುಷ್ಮ್ಯಸ್ತು ಜನಾನಾಂ ಯೋ ಅಸುರೋ ವಿ-
ಧರ್ತಾ ।
ಅಪೋ ಯೇನ ಸುಕ್ಷಿತಯೇ ತರೇಮಾಧ ಸ್ವಮೇಕೋ ಅಭಿ ವಃ ಸ್ಯಾಮ ॥

ಪದಪಾಠಃ

ಅಸ್ಮೇ ಇತಿ । ವೀರಃ । ಮರುತಃ । ಶುಷ್ಮೀ । ಅಸ್ತು । ಜನಾನಾಂ । ಯಃ । ಅಸುರಃ । ವಿಧರ್ತಾ ।
ಅಪಃ । ಯೇನ । ಸುಕ್ಷಿತಯೇ । ತರೇಮ । ಅಧ । ಸ್ವಂ । ಓಕಃ । ಅಭಿ । ವಃ । ಸ್ಯಾಮ ॥ ೨೪ ॥

ಸಾಯಣಭಾಷ್ಯಂ

ಹೇ ಮರುತಃ ಅಸ್ಮೇ ಅಸ್ಮಾಕಂ ವೀರಃ ಪುತ್ರಃ ಶುಷ್ಮ್ಯಸ್ತು । ಬಲವಾನ್ಭವತು । ಅಸುರಃ ಪ್ರ-
ಜ್ಞಾವಾನ್ಯೋ ಜನಾನಾಂ ಶತ್ರೂಣಾಂ ವಿಧರ್ತಾ ವಿಧಾರಕಃ । ಯೇವ ಪುತ್ರೇಣ ವಯಂ ಸುಕ್ಷಿತಯೇ
ಸುಷ್ಠು ನಿವಾಸಾಯಾಪ ಅಪ್ನವತಃ ಶತ್ರೂಂಸ್ತರೇಮ ಹಿಂಸೇಮ । ಸ ಪುತ್ರೋ ಬಲವಾನಸ್ತ್ವಿತಿ ಪೂ-
ರ್ವೇಣಾನ್ವಯಃ । ಅಥಾಪಿ ಚ ವೋ ಯುಷ್ಮದೀಯಾ ವಯಂ ಸ್ವೋಕ ಆತ್ಮೀಯಂ ಸ್ಥಾನಮಭಿ
ಸ್ಯಾಮ । ಆತಿಷ್ಠೇಮ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । ಅಸ್ಮೇ—ನಮ್ಮ । ಅಸುರಃ—ಪ್ರಜ್ಞಾವಂತನಾದ । ಯಃ—ಯಾವ
ನಮ್ಮ ಪುತ್ರನು । ಜನಾನಾಂ—ಶತ್ರುಜನರಿಗೆ । ವಿಧರ್ತಾ—ನಿರೋಧಕನಾಗಿರುವನೋ । ಯೇನ—ಯಾವ ಪುತ್ರನ
ಸಹಾಯದಿಂದ । ಸುಕ್ಷಿತಯೇ—ಉತ್ತಮವಾದ ಗೃಹಲಾಭಕ್ಕಾಗಿ । ಅಪಃ—ವ್ಯಾಪಕನಾದ ಶತ್ರುವನ್ನು । ತರೇಮ
—ನಾವು ಹಿಂಸಿಸಬಲ್ಲೆವೋ ಅಂತಹ । ವೀರಃ—ವೀರಪುತ್ರನು । ಶುಷ್ಮೀ—ಒಲಯುತನಾಗಿ । ಅಸ್ತು—ಆಗಲಿ. ।
ಅಧ—ಮತ್ತು । ವಃ—ನಿಮಗೆ ಸೇರಿದ ನಾವು । ಸ್ವಂ ಓಕಃ—ನಮ್ಮ ನಮ್ಮ ವಾಸಗೃಹವನ್ನು । ಅಭಿ ಸ್ಯಾಮ—
ಸೇರಿಕೊಳ್ಳುವಂತಾಗಲಿ

ಭಾವಾರ್ಥ

ಎಲೈ ಮರುತ್ತುಗಳೇ, ನಮ್ಮ ವೀರಪುತ್ರನು ಒಲಯುತನಾಗಲಿ. ಪ್ರಜ್ಞಾವಂತನಾದ ಯಾವನು ಶತ್ರು
ಜನರಿಗೆ ನಿರೋಧಕನಾಗಿರುವನೋ, ಯಾವ ಪುತ್ರನ ಸಹಾಯದಿಂದ ನಾವು ಶತ್ರುವನ್ನು ನಾಶಮಾಡಿ ಉತ್ತಮವಾದ
ಗೃಹವನ್ನು ಪಡೆಯಬಲ್ಲೆವೋ ಅಂತಹ ನಮ್ಮ ಪುತ್ರನ ಶಕ್ತಿಯನ್ನು ವೃದ್ಧಿಪಡಿಸಿರಿ ನಿಮ್ಮ ಆರಾಧಕರಾದ ನಾವು
ನಮ್ಮ ನಮ್ಮ ವಾಸಗೃಹಗಳನ್ನು ಸೇರಿಕೊಳ್ಳುವಂತಾಗಲಿ

English Translation

May our male progeny, Maruts, be vigorous, one who is intelligent, the scatterer of (hostile) men, by whom we may cross the water (of enmity) to a secure dwelling · may we, your (servants), dwell in our own abode.

ಸಂಹಿತಾಪಾಠಃ

ತನ್ನ ಇಂದ್ರೋ ವರುಣೋ ಮಿತ್ರೋ ಅಗ್ನಿರಾಪ ಓಷಧೀರ್ವನಿನೋ ಜುಷಂತ ।
ಶರ್ಮನ್ಸ್ಯಾಮ ಮರುತಾಮುಪಸ್ಥೇ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ

ಪದಪಾಠಃ

ತತ್ । ನಃ । ಇಂದ್ರಃ । ವರುಣಃ । ಮಿತ್ರಃ । ಅಗ್ನಿಃ । ಆಪಃ । ಓಷಧೀಃ । ವನಿನಃ । ಜುಷಂತ ।
ಶರ್ಮನ್ । ಸ್ಯಾಮ । ಮರುತಾಂ । ಉಪಸ್ಥೇ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥೨೫॥

ಸಾಯಣಭಾಷ್ಯಂ

ಪೂರ್ವಂ ವ್ಯಾಖ್ಯಾತೇಯಂ । ಅಕ್ಷರಾರ್ಥಸ್ತು । ಇಂದ್ರಾದಯೋ ದೇವಾ ಅಸ್ಮದೀಯಂ ಸ್ತೋತ್ರಂ ಸೇವಂತಾಂ । ಮರುತಾಮುಪಸ್ಥಾನೇ ವರ್ತಮಾನಾ ವಯಂ ಸುಖೇ ಸ್ಯಾಮ । ಹೇ ಮರುತಃ ಯೂಯಂ ಸರ್ವದಾಸ್ಮಾನವಿನಾಶ್ಯೈಃ ಪಾಲಯತ ॥

ಪ್ರತಿಪದಾರ್ಥ

ನಃ—ನಮ್ಮ । **ತತ್**—ಈ ಸ್ತೋತ್ರವನ್ನು । **ಇಂದ್ರಃ**—ಇಂದ್ರನೂ । **ವರುಣಃ**—ವರುಣನೂ । **ಮಿತ್ರಃ**—ಮಿತ್ರನೂ । **ಅಗ್ನಿಃ**—ಅಗ್ನಿಯೂ । **ಆಪಃ**—ಅಬ್ದೇವತೆಗಳೂ । **ಓಷಧೀಃ**—ಓಷಧಿಗಳೂ । **ವನಿನಃ**—ವೃಕ್ಷಗಳೂ । **ಜುಷಂತ**—ಸೇವಿಸಲಿ. । (ವಯಂ—ನಾವು) । **ಮರುತಾಂ**—ಮರುತ್ತುಗಳ । **ಉಪಸ್ಥೇ**—ಸಮೀಪದಲ್ಲಿ ಕುಳಿತವರಾಗಿ । **ಶರ್ಮನ್**—ಸುಖಕರವಾದ ಗೃಹದಲ್ಲಿ । **ಸ್ಯಾಮ**—ಇರುವಂತಾಗಲಿ. । (ಎಲೈ ದೇವತೆಗಳೇ,) **ಯೂಯಂ**—ನೀವು । **ಸದಾ**—ಯಾವಾಗಲೂ । **ನಃ**—ನಮ್ಮನ್ನು । **ಸ್ವಸ್ತಿಭಿಃ**—ಕಲ್ಯಾಣಗಳಿಂದ । **ಪಾತ**—ರಕ್ಷಿಸಿರಿ.

ಭಾವಾರ್ಥ

ನಮ್ಮ ಈ ಸ್ತೋತ್ರವನ್ನು ಇಂದ್ರನೂ, ವರುಣನೂ, ಮಿತ್ರನೂ, ಅಗ್ನಿಯೂ, ಅಬ್ದೇವತೆಗಳೂ, ಓಷಧಿಗಳೂ, ವೃಕ್ಷಗಳೂ ಸೇವಿಸಲಿ ನಾವು ಮರುತ್ತುಗಳ ಸಮೀಪವರ್ತಿಗಳಾಗಿ ಸುಖಕರವಾದ ಗೃಹದಲ್ಲಿರುವಂತಾಗಲಿ ಎಲೈ ದೇವತೆಗಳೇ, ನೀವು ಯಾವಾಗಲೂ ನಮ್ಮನ್ನು ಕಲ್ಯಾಣಗಳಿಂದ ರಕ್ಷಿಸಿರಿ.

English Translation

May Indra, Varuna, Mitra, Agni, the waters, the plants, the trees, be pleased with us : may we racline in happiness upon the lap of the Maruts : and do you ever cherish us with blessings.

———

ಐವತ್ತೇಳನೆಯ ಸೂಕ್ತವು

ಸಾಯಣಭಾಷ್ಯಂ

ಮಧ್ವೋ ವ ಇತಿ ಸಪ್ತರ್ಚಂ ದ್ವಿತೀಯಂ ಸೂಕ್ತಂ ವಸಿಷ್ಠಸ್ಯಾರ್ಷಂ ತ್ರೈಷ್ಟುಭಂ ಮರುದ್ದೇವತಾಕಂ । ಮಧ್ವಃ ಸಪ್ತೇತ್ಯನುಕ್ರಾಂತಂ ॥ ದಶರಾತ್ರೇ ಷಷ್ಠೇಽಹನ್ಯಾಗ್ನಿಮಾರುತ ಇದಂ ಮಾರುತನಿವಿದ್ಧಾನಂ । ಸೂತ್ರಿತಂ ಚ । ಮಧ್ವೋ ವೋ ನಾಮ ಸ ಪ್ರತ್ನಥೇತ್ಯಾಗ್ನಿಮಾರುತಂ । ಆ ೪-೪ । ಇತಿ ॥

ಅನುವಾದವು--ಮಧ್ವೋ ವಃ ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಸಿಷ್ಠನು ಋಷಿಯು, ಮರುತ್ತುಗಳು ದೇವತೆಯು, ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ **ಮಧ್ವಃ ಸಪ್ತ** ಎಂದು ಹೇಳಿರುವುದು ದಶರಾತ್ರನೆಂಬ ಯಾಗದ ಆರನೆಯ ದಿವಸ ಆಗ್ನಿಮಾರುತಶಸ್ತ್ರಗಳನ್ನು ಪರಿಸುವಾಗ ಈ ಸೂಕ್ತವನ್ನು ಸಿಪಿದ್ಧಾನಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರವ **ಮಧ್ವೋ ವೋ ನಾಮ ಸ ಪ್ರತ್ನಥೇತ್ಯಾಗ್ನಿಮಾರುತಂ** ಎಂಬ ಸೂತ್ರದಿಂದ (ಆ ೪ ೪) ವಿವೃತವಾಗಿರುವುದು

ಸೂಕ್ತ—೫೭

ಮಂಡಲ—೭ ॥ ಅನುವಾಕ—೪ ॥ ಸೂಕ್ತ —೫೭ ॥
ಅಷ್ಟಕ—೫ ॥ ಅಧ್ಯಾಯ—೪ ॥ ವರ್ಗ—೨೭ ॥
ಸೂಕ್ತವಲ್ಲಿಯಾನ ಋಕ್ಸಂಖ್ಯೆ—೭ ॥
ಋಷಿಃ—ವಸಿಷ್ಠಃ ॥
ದೇವತಾ— ಮರುತಃ ॥
ಛಂದಃ— ತ್ರಿಷ್ಟುಪ್ ॥

ಸಂಹಿತಾಪಾಠಃ

ಮಧ್ವೋ ವೋ ನಾಮ ಮಾರುತಂ ಯಜತ್ರಾಃ ಪ್ರ ಯಜ್ಞೇಷು ಶವಸಾ ಮದಂತಿ ।
ಯೇ ರೇಜಯಂತಿ ರೋದಸೀ ಚಿದುರ್ವೀ ಪಿನ್ವಂತ್ಯುತ್ಸಂ ಯದಯಾಸುರುಗ್ರಾಃ ॥ ೧ ॥

ಪದಪಾಠಃ

ಮಧ್ವಃ । ವಃ । ನಾಮ । ಮಾರುತಂ । ಯಜತ್ರಾಃ । ಪ್ರ । ಯಜ್ಞೇಷು । ಶವಸಾ । ಮದಂತಿ ।
ಯೇ । ರೇಜಯಂತಿ । ರೋದಸೀ ಇತಿ । ಚಿತ್ । ಉರ್ವೀ ಇತಿ । ಪಿನ್ವಂತಿ । ಉತ್ಸಂ । ಯತ್ ।
ಅಯಾಸುಃ । ಉಗ್ರಾಃ ॥ ೧ ॥

ಸಾಯಣಭಾಷ್ಯಂ

ಹೇ ಯಜತ್ರಾ ಯಜನೀಯಾ ಮರುತಃ ವೋ ಯುಷ್ಮದೀಯಂ ಮಾರುತಂ ಮರುತ್ಸಂಬಂಧಿ ನಾಮ ನಾಮಧೇಯಂ ಮಧ್ವೋ ಮಧವೋ ಮಾದಯಿತಾರಃ ಸ್ತೋತಾರೋ ಯಜ್ಞೇಷು ಯಾಗೇಷು ಶವಸಾ ಬಲೇನ ಪ್ರ ಮದಂತಿ । ಪ್ರಕರ್ಷೇಣ ಸ್ತುವಂತಿ । ಉಚ್ಚೈಃ ಸ್ತುವಂತೀತ್ಯರ್ಥಃ । ಯೇ ಮರುತ ಉರ್ವೀ ವಿಸ್ತೀರ್ಣೇ ರೋದಸೀ ಚಿದ್ದ್ಯಾವಾಪೃಥಿವ್ಯಾವಪಿ ರೇಜಯಂತಿ ಕಂಪಯಂತಿ ಕಿಂಚೋತ್ಸಂ ಮೇಘಂ ಪಿನ್ವಂತಿ ವರ್ಷಯಂತಿ ಉಗ್ರಾ ಉದ್ಗೂರ್ಣಾ ಯದ್ಯೇ ಮರುತೋಽಯಾಸುಃ ಯೋಂತಿ ಸರ್ವತ್ರ ಗಚ್ಛಂತಿ । ತೇಷಾಂ ಮರುತಾಂ ಯುಷ್ಮಾಕಂ ನಾಮ ಪ್ರ ಮದಂತೀತಿ ಪೂರ್ವೇಣಾನ್ವಯಃ ॥

ಪ್ರತಿಪದಾರ್ಥ

ಯಜತ್ರಾಃ—ಪೂಜ್ಯರಾದ ಎಲೈ ಮರುತ್ತುಗಳೇ, । **ಯೇ**—ಯಾವ ನೀವು । **ಉರ್ವೀ**—ವಿಸ್ತೃತವಾದ। **ರೋದಸೀ ಚಿತ್**—ದ್ಯಾವಾಪೃಥಿವಿಗಳನ್ನೂ ಸಹ । **ರೇಜಯಂತಿ**—ಕಂಪಿಸುವಂತೆ ಮಾಡುವಿರೋ । **ಯತ್**—ಯಾವ ನೀವು । **ಉಗ್ರಾಃ**—ಅತ್ಯಧಿಕವಾದ ಬಲವುಳ್ಳವರಾಗಿ । **ಅಯಾಸುಃ**—ಸರ್ವತ್ರ ಸಂಚರಿಸುವಿರೋ ಅಂತಹ । **ವಃ**—ನಿಮ್ಮ । **ಮಾರುತಂ**—ಮರುತ್ಸಂಬಂಧಿಯಾದ । **ನಾಮ**—ನಾಮಧೇಯವನ್ನು । **ಮಧ್ವಃ**—ನಿಮಗೆ ಹರ್ಷ ಜನಕರಾದ ಸ್ತುತಿಕರ್ತರು । **ಯಜ್ಞೇಷು**—ಯಾಗಗಳಲ್ಲಿ । **ಶವಸಾ**—ಶಕ್ತಿಯಿಂದ ಕೂಡಿ । **ಪ್ರ ಮದಂತಿ**—ಹರ್ಷ ಜನಕವಾಗುವಂತೆ ಸ್ತುತಿಸುತ್ತಾರೆ

ಭಾವಾರ್ಥ

ಪೂಜಾರ್ಹರಾದ ಎಲೈ ಮರುತ್ತುಗಳೇ, ಯಾವ ನೀವು ವಿಸ್ತೃತವಾದ ದ್ಯಾವಾಪೃಥಿವಿಗಳನ್ನು ಕಂಪಿಸುವಂತೆ ಮಾಡುವಿರೋ ಮತ್ತು ಮೇಘವನ್ನು ವೃಷ್ಟಿಕಾರಕವಾಗುವಂತೆ ಮಾಡುವಿರೋ, ಯಾವ ನೀವು ಅತ್ಯಧಿಕವಾದ ಒಲವು ಳ್ಳವರಾಗಿ ಸರ್ವತ್ರ ಸಂಚರಿಸುವಿರೋ ಅಂತಹ ನಿಮ್ಮ ಮರುತ್ಸಂಬಂಧಿಯಾದ ನಾಮಧೇಯವನ್ನು ನಿಮಗೆ ಹರ್ಷಕಾರ ಕರಾದ ಸ್ತುತಿಕರ್ತರು ಯಾಗಗಳಲ್ಲಿ ಶಕ್ತಿಯಿಂದ ಕೂಡಿ ಹರ್ಷಜನಕವಾಗುವಂತೆ ಸ್ತುತಿಸುತ್ತಾರೆ

English Translation

Adorable (Maruts), the worshippers vigorously celebrate at sacrifices your appellation of company of the Maruts, they who cause the spacious heaven and earth to tremble, the clouds to rain, and move everywhere terrible.

ಸಂಹಿತಾಪಾಠಃ

ನಿಷ್ಟೇತಾರೋ ಹಿ ಮರುತೋ ಗೃಣಂತಂ ಪ್ರಣೇತಾರೋ ಯಜಮಾನಸ್ಯ ಮನ್ಮ ।
ಅಸ್ಮಾಕಮದ್ಯ ವಿದಥೇಷು ಬರ್ಹಿರಾ ವೀತಯೇ ಸದತ ಪಿಪ್ರಿಯಾಣಾಃ ॥೨॥

ಪದಪಾಠಃ

ನಿ॒ಷ್ಟೀ॒ತಾರ॑ಃ । ಹಿ । ಮ॒ರುತ॑ಃ । ಗೃ॒ಣಂ॒ತಂ॒ । ಪ್ರ॒ಣೇ॒ತಾರ॑ಃ । ಯ॒ಜ॒ಮಾ॒ನಸ್ಯ । ಮ॒ನ್ಮ॑ ।

ಅ॒ಸ್ಮಾಕ॑ಂ । ಅ॒ದ್ಯ । ವಿ॒ದಥೇ॑ಷು । ಬ॒ರ್ಹಿಃ । ಆ । ವೀ॒ತ॒ಯೇ॒ । ಸ॒ದ॒ತ॒ । ಪಿ॒ಪ್ರಿ॒ಯಾ॒ಣಾಃ ॥ ೨ ॥

ಸಾಯಣಭಾಷ್ಯಂ

ಯೇ ಮರುತೋ ಗೃಣಂತಂ ಸ್ತುವಂತಂ ಜನಂ ನಿಚೇತಾರೋ ಹಿ ಮೃಗಯಮಾಣಾ ಭವಂತಿ ಖಲು ಆಪಿ ಚ ಯಜಮಾನಸ್ಯ ಮನ್ಮಾಭಿಮತಂ ಕಾಮಂ ಪ್ರಣೇತಾರಶ್ಚ ಭವಂತಿ । ಅಪರೋಽರ್ಧರ್ಚಃ ಪ್ರತ್ಯಕ್ಷಕೃತಃ । ಹೇ ಮರುತಃ ಯೂಯಂ ಪಿಪ್ರಿಯಾಣಾಃ ಪ್ರೀಯಮಾಣಾಃ ಸಂತೋಽದ್ಯಾಸ್ಮಿನ್ದಿವಸೇಽಸ್ಮಾಕಂ ವಿದಥೇಷು ಯಜ್ಞೇಷು ವೀತಯೇ ಸೋಮಸ್ಯ ಭಕ್ಷಣಾಯ ಬರ್ಹಿರ್ಬರ್ಹಿಷಿ ಕುಶಮಯೇ ಆ ಸದತ । ಆಸೀದತ । ಉಪವಿಶತ ॥

ಪ್ರತಿಪದಾರ್ಥ

ಮರುತಃ—ಮರುತ್ತುಗಳು ! **ಗೃಣಂತಂ**—ಸ್ತುತಿಸುವ ಜನವನ್ನು । **ನಿಚೇತಾರೋ ಹಿ**—ಹುಡುಕಿ ಕೊಂಡು ಹೋಗುತ್ತಾರೆ । **ಯಜಮಾನಸ್ಯ**—ಯಜ್ಞಕರ್ತನ । **ಮನ್ಮ**—ಇಷ್ಟಾರ್ಥವನ್ನು । **ಪ್ರಣೇತಾರಃ**—ನೆರವೇರಿಸುತ್ತಾರೆ. । (ಎಲೈ ಮರುತ್ತುಗಳೇ) **ಪಿಪ್ರಿಯಾಣಾಃ**—ಪ್ರೀತಿಯನ್ನು ಹೊಂದಿರುವ ನೀವು । **ಅದ್ಯ**—ಈ ಯಾಗ ದಿನದಲ್ಲಿ । **ಅಸ್ಮಾಕಂ**—ನಮ್ಮ । **ವಿದಥೇಷು**—ಯಜ್ಞಗಳಲ್ಲಿ । **ವೀತಯೇ**—ಸೋಮಪಾನಾರ್ಥವಾಗಿ । **ಬರ್ಹಿಃ**—ದರ್ಭಾಸನದ ಮೇಲೆ । **ಆ ಸದತ**—ಕುಳಿತುಕೊಳ್ಳಿರಿ

ಭಾವಾರ್ಥ

ಮರುತ್ತುಗಳು ತಮ್ಮ ಸ್ತುತಿಕರ್ತರನ್ನು ಹುಡುಕಿಕೊಂಡು ಹೋಗುತ್ತಾರೆ ಯಜ್ಞಕರ್ತನ ಇಷ್ಟಾರ್ಥವನ್ನು ನೆರವೇರಿಸುತ್ತಾರೆ. ಎಲೈ ಮರುತ್ತುಗಳೇ, ಪ್ರೀತಿಯನ್ನು ಪ್ರಕಟಿಸುವ ನೀವು ಈ ಯಾಗದಿನದಲ್ಲಿ ನಮ್ಮ ಯಜ್ಞಗಳಲ್ಲಿ ಸೋಮಪಾನಾರ್ಥವಾಗಿ ದರ್ಭಾಸನದ ಮೇಲೆ ಕುಳಿತುಕೊಳ್ಳಿರಿ

English Translation

The Maruts verily are the benefactors of him who praises them, the gratifiers of the wishes of the institutor of the solemnity . do you, being pleased, sit down to-day upon the grass at our ceremony, to partake (of the sacrificial food).

ಸಂಹಿತಾಪಾಠಃ

ನೈತಾವ॑ದನ್ಯೇ ಮ॒ರುತೋ॒ ಯಥೇ॒ಮೇ ಭ್ರಾ॒ಜಂತೇ॒ ರು॒ಕ್ಮೈ॒ರಾಯು॑ಧೈಸ್ತ॒-
ನೂಭಿ॑ಃ ।
ಆ ರೋ॑ದ॒ಸೀ ವಿ॒ಶ್ವಪಿ॑ಶಃ ಪಿ॒ಶಾನಾ॒ಃ ಸ॒ಮಾನ॒ಮಂಜ್ಯಂ॑ಜತೇ॒ ಶುಭೇ॒ ಕಂ ॥೩॥

ಪದಪಾಠಃ

ನ। ಏತಾವತ್। ಅನ್ಯೇ। ಮರುತಃ। ಯಥಾ। ಇಮೇ। ಭ್ರಾಜಂತೇ। ರುಕ್ಮೈಃ। ಆಯುಧೈಃ।
ತನೂಭಿಃ।

ಆ। ರೋದಸೀ ಇತಿ। ವಿಶ್ವಪಿಶಃ। ಪಿಶಾನಾಃ। ಸಮಾನಂ। ಅಂಜಿ। ಅಂಜತೇ। ಶುಭೇ। ಕಂ ॥ ೩

ಸಾಯಣಭಾಷ್ಯಂ

ಇಮ ಈದೃಶಾ ಮರುತೋ ಯಥಾ ಯೇತ್ಪರಿಮಾಣಂ ಧನಾದಿಕಂ ದದತಿ ಅನ್ಯೇ ಮರುದ್ವ್ಯತಿರಿಕ್ತಾ ದೇವಾ ಏತಾವದ್ಧನಾದಿಕಂ ನ ದದ್ಯುರಿತ್ಯರ್ಥಃ । ತೇ ಚ ರುಕ್ಮೈ ರೋಚಮಾನೈರಾಭರಣೈರಾಯುಧೈಃ ಸ್ವಕೀಯಾಸ್ತ್ರೈಸ್ತನೂಭಿರಾತ್ಮೀಯೈಃ ಕೇವಲೈರಂಗೈಶ್ಚ ಭ್ರಾಜಂತೇ । ಸರ್ವದಾ ಭಾಸಂತೇ । ಕಶ್ಚಿದೇಕವಾಕ್ಯತಾಮಾಹ । ಯೇಥೇಮೇ ಮರುತೋ ರುಕ್ಮಾದಿಭಿರ್ಭ್ರಾಜಂತೇ ನೈತಾವದೇತದ್ವ್ಯತಿರಿಕ್ತಾ ಭ್ರಾಜಂತ ಇತಿ । ಅಪಿ ಚ ರೋದಸೀ ದ್ಯಾವಾಪೃಥಿವ್ಯೌ ಪಿಶಾನಾಃ ಪ್ರಕಾಶಯಂತೋ ವಿಶ್ವಪಿಶೋ ವ್ಯಾಪ್ತದೀಪ್ತಯ ಏವಂಭೂತಾ ಮರುತಃ ಶುಭೇ ಶೋಭಾಯೈ ಸಮಾನಂ ಸದೃಶರೂಪಮಂಜ್ಯಾಭರಣಮಾಂಜತೇ । ಸ್ವಕೀಯಾವಯವೇಷ್ವಭಿವ್ಯಕ್ತೀಕುರ್ವಂತಿ । ಕಮಿತಿ ಪೂರಣಃ ॥

ಪ್ರತಿಪದಾರ್ಥ

ಇಮೇ ಮರುತಃ—ಈ ಮರುತ್ತುಗಳು । ಯಥಾ—ಯಾವ ಪ್ರಮಾಣದಲ್ಲಿ ಧನಾದಿಗಳನ್ನು ಕೊಡುವರೋ ಏತಾವತ್—ಅದೇ ಪ್ರಮಾಣದಲ್ಲಿ । ಅನ್ಯೇ—ಇತರ ದೇವತೆಗಳು । ನ—ಕೊಡುವುದಿಲ್ಲ. । (ತೇ—ಅವರು) । ರುಕ್ಮೈಃ—ಹೊಂಬಣ್ಣವುಳ್ಳವೂ । ಆಯುಧೈಃ—ಆಯುಧಗಳಿಂದ ಕೂಡಿದವೂ ಆದ । ತನೂಭಿಃ—ಶರೀರಗಳಿಂದ । ಭ್ರಾಜಂತೇ—ಪ್ರಕಾಶಿಸುತ್ತಾರೆ. । ರೋದಸೀ—ದ್ಯಾವಾಪೃಥಿವಿಗಳನ್ನು । ಪಿಶಾನಾಃ—ಪ್ರಕಾಶಿಸುವಂತೆ ಮಾಡುತ್ತಲೂ । ವಿಶ್ವಪಿಶಃ—ಸರ್ವತ್ರ ಹರಡಿದ ಕಾಂತಿಯುಳ್ಳವರೂ ಆದ ಮರುತ್ತುಗಳು । ಶುಭೇ—ತಮ್ಮ ದೇಹದ ಅಲಂಕಾರಕ್ಕಾಗಿ । ಸಮಾನಂ—ಒಂದೇ ರೂಪವುಳ್ಳ । ಅಂಜಿ—ಆಭರಣವನ್ನು । ಆ ಅಂಜತೇ—ಧರಿಸಿಕೊಂಡಿರುತ್ತಾರೆ

ಭಾವಾರ್ಥ

ಮರುತ್ತುಗಳು ಯಜಮಾನರಿಗೆ ಯಾವ ಪ್ರಮಾಣದಲ್ಲಿ ಧನಾದಿಗಳನ್ನು ಕೊಡುವರೋ ಅದೇ ಪ್ರಮಾಣದಲ್ಲಿ ಇತರ ದೇವತೆಗಳು ಕೂಡುವುದಿಲ್ಲ ಅವರು ಹೊಂಬಣ್ಣವುಳ್ಳವೂ ಆಯುಧಗಳಿಂದ ಕೂಡಿದವೂ ಆದ ಶರೀರಗಳಿಂದ ಪ್ರಕಾಶಿಸುತ್ತಾರೆ ಮತ್ತು ದ್ಯಾವಾಪೃಥಿವಿಗಳನ್ನು ಪ್ರಕಾಶಿಸುವಂತೆ ಮಾಡುತ್ತಲೂ, ಸರ್ವತ್ರ ಹರಡಿದ ಕಾಂತಿಯುಳ್ಳವರೂ ಆದ ಮರುತ್ತುಗಳು ತಮ್ಮ ದೇಹದ ಅಲಂಕಾರಕ್ಕಾಗಿ ಒಂದೇ ರೂಪವುಳ್ಳ ಆಭರಣವನ್ನು ಧರಿಸಿಕೊಂಡಿರುತ್ತಾರೆ.

English Translation

No other (deities give) such (good things) as the Maruts, as they shine with brilliant (ornaments), weapons, and persons: illumining heaven and earth, wide radiating, they heighten their common lustre for (our) good,

संहितापाठः

ऋधक्सा वो मरुतो दिद्युदस्तु यद्न आगः पुरुषता कराम
मा वस्तस्यामपि भूमा यजत्रा अस्मे वो अस्तु सुमतिश्च-
निष्षा ॥ ४ ॥

पदपाठः

ऋधक् । सा । वः । मरुतः । दिद्युत् । अस्तु । यत् । नः । आगः । पुरुषता । कराम।
मा । वः । तस्याम् । अपि । भूम । यजत्राः । अस्मे इति । वः । अस्तु । सुऽमतिः ।
चनिष्षा ॥ ४ ॥

सायणभाष्यं

हे मरुतः वो युष्मदीया सा प्रसिद्धा दिद्युद्दीप्तिर्यधगस्तु । अस्मत्तः पृथग्भवतु । यद्यद्यपि वयं वो युष्माकमागोऽपराधं पुरुषता पुरुषतया मनुष्यत्वेन कराम कुर्वाम । मनुष्याणां हि प्रमादः सुलभ इत्यर्थः । हे यजत्रा यजनीया मरुतः वो युष्मदीयायां तस्यां दिद्युत्यपीषदपि मा भूम । चनिष्यन्नवत्तमा । अतिशयेनान्नप्रदेत्यर्थः । वो युष्मदीया सुमतिरनुग्रहबुद्धिरस्मे अस्मासु अस्तु ॥

प्रतिपदार्थ

मरुतः—एलै मरुत्तुगळे, । वः — निमगे सेरिदुदू । सा — प्रसिद्धवादुदू आद । दिद्युत्—आयुधवु । ऋधक् अस्तु—नम्मिंद दूरवागिरलि । यजत्राः—यज्ञार्हरादा एलै मरुत्तुगळे । यत्—ऒंदुवेळे । वः—निम्म विषयदल्लि । आगः—पापवन्नु । पुरुषता—मनुष्यस्वभावदिंद ऒंदुवेळे । कराम—माडिद्दे आदरे । वः—निम्म । तस्याम्—आयुधक्के । अपि—कॊंचवू । मा भूम—वशवागुवंते माडबेडिरि । चनिष्षा—अतिशयवाद अन्नयुक्तवाद । वः—निम्म । सुमतिः—अनुग्रहबुद्धियु । अस्मे—नम्म मेले । अस्तु—इरलि

भावार्थ

एलै मरुत्तुगळे, निमगे सेरिदुदू, प्रसिद्धवादुदू आद आयुधवु नम्मिंद दूरवागिरलि. यज्ञार्हरादा एलै मरुत्तुगळे, ऒंदुवेळे निम्म विषयदल्लि मनुष्यस्वभावदिंद पापवन्नु आचरिसिद्दे आदरे, निम्म आयुधक्के कॊंचवू वशवागुवंते माडबेडिरि. अतिशयवाद अन्नयुक्तवाद निम्म अनुग्रहबुद्धियु नम्म मेलिरलि.

English Translation

May that blazing (weapon) of yours, Maruts, be far from us, althongh, through human infirmities, we offer you offence let us not adorable Marute be exposed to your (shaft): may your favour, the source of abundance, ever be shown into us

ಸಂಹಿತಾಪಾಠಃ

ಕೃತೇ ಚಿದತ್ರ ಮರುತೋ ರಣಂತಾನವದ್ಯಾಸಃ ಶುಚಯಃ ಪಾವಕಾಃ ।
ಪ್ರ ಣೋವತ ಸುಮತಿಭಿರ್ಯಜತ್ರಾಃ ಪ್ರ ವಾಜೇಭಿಸ್ತಿರತ ಪುಷ್ಯಸೇ ನಃ ॥

ಪದಪಾಠಃ

ಕೃತೇ । ಚಿತ್ । ಅತ್ರ । ಮರುತಃ । ರಣಂತ । ಅನವದ್ಯಾಸಃ । ಶುಚಯಃ । ಪಾವಕಾಃ ।
ಪ್ರ । ನಃ । ಅವತ । ಸುಮತಿಽಭಿಃ । ಯಜತ್ರಾಃ । ಪ್ರ । ವಾಜೇಭಿಃ । ತಿರತ । ಪುಷ್ಯಸೇ । ನಃ ॥ ೫ ॥

ಸಾಯಣಭಾಷ್ಯಂ

ಅತ್ರಾಸ್ಮಿನ್ಕೃತೇ ಚಿದಸ್ಮದೀಯೇ ಯಜ್ಞಕರ್ಮಣ್ಯೇವ ಮರುತೋ ರಣಂತ । ರಮಂತಾಂ । ಕೀದೃಶಾ ಮರುತಃ । ಅನವದ್ಯಾಸೋಽನಿಂದಿತಾಃ ಶುಚಯೋ ದೀಪ್ತಿಯುಕ್ತಾಃ ಪಾವಕಾಃ ಕೋಧಕಾ ಏವಂಭೂತಾ ಇತಿ । ಕಿಂಚ ಹೇ ಮರುತೋ ಯಜತ್ರಾ ಯಜನೀಯಾಃ ಯೂಯಂ ನೋಽಸ್ಮಾನ್ ಸುಮತಿಭಿರನುಗ್ರಹಬುದ್ಧಿಭಿಃ ಸುಷ್ಠುತಿಭಿರ್ವಾ ಪ್ರಾವತ । ಪ್ರಕರ್ಷೇಣ ಪಾಲಯತ । ತಥಾ ನೋಽಸ್ಮಾನ್ವಾಜೇಭಿರ್ವಾಜೈರನ್ನೈಃ ಪುಷ್ಯಸೇ ಪೋಷಾರ್ಥಂ ಪ್ರ ತಿರತ । ಪ್ರವರ್ಧಯಂತ ॥

ಪ್ರತಿಪದಾರ್ಥ

ಅನವದ್ಯಾಸಃ—ದೋಷರಹಿತರೂ । ಶುಚಯಃ—ಕಾಂತಿಯುತರೂ । ಪಾವಕಾಃ—ಶುದ್ಧಿಕಾರಕರೂ ಆದ । ಮರುತಃ—ಮರುತ್ತುಗಳು । ಅತ್ರ ಕೃತೇ ಚಿತ್—ಈ ನಮ್ಮ ಯಾಗದಲ್ಲಿ ಮಾತ್ರ । ರಣಂತ—ಹರ್ಷವನ್ನು ಹೊಂದಲಿ । (ಎಲೈ ಮರುತ್ತುಗಳೇ) । ಯಜತ್ರಾಃ—ಪೂಜ್ಯರಾದ ನೀವು । ನಃ—ನಮ್ಮನ್ನು । ಸುಮತಿಭಿಃ—ಅನುಗ್ರಹಬುದ್ಧಿಗಳಿಂದ । ಪ್ರ ಅವತ—ಅತಿಶಯವಾಗಿ ರಕ್ಷಿಸಿರಿ. । ನಃ—ನಮ್ಮನ್ನು । ವಾಜೇಭಿಃ—ಅನ್ನಗಳಿಂದ ಪುಷ್ಯಸೇ—ಪುಷ್ಟಿಯುತವಾದ ಜೀವನಕ್ಕಾಗಿ । ಪ್ರ ತಿರತ—ಬೆಳೆಯುವಂತೆ ಮಾಡಿರಿ.

ಭಾವಾರ್ಥ

ದೋಷರಹಿತರೂ, ಕಾಂತಿಯುತರೂ, ಶುದ್ಧಿಕಾರಕರೂ ಆದ ಮರುತ್ತುಗಳು ಈ ನಮ್ಮ ಯಾಗದಲ್ಲಿ ಮಾತ್ರ ಹರ್ಷವನ್ನು ಹೊಂದಲಿ ಎಲೈ ಮರುತ್ತುಗಳೇ, ಪೂಜ್ಯರಾದ ನೀವು ನಮ್ಮನ್ನು ಅನುಗ್ರಹಬುದ್ಧಿಗಳಿಂದ ರಕ್ಷಿಸಿರಿ. ನಮ್ಮನ್ನು ಅನ್ನಗಳಿಂದ ಪುಷ್ಟಿಯುತವಾದ ಜೀವನಕ್ಕಾಗಿ ಬೆಳೆಯುವಂತೆ ಮಾಡಿರಿ.

English Translation

May the Maruts, who are irreproachable, pure, and purifying delight in this our ceremony protect us, adorable Maruts, with favourable thoughts · be ever anxious to sustain us with food

ಸಂಹಿತಾಪಾಠಃ

ಉತ ಸ್ತುತಾಸೋ ಮರುತೋ ವ್ಯಂತು ವಿಶ್ವೇಭಿರ್ನಾಮಭಿರ್ನರೋ ಹವೀಂಷಿ
ದದಾತ ನೋ ಅಮೃತಸ್ಯ ಪ್ರಜಾಯೈ ಜಿಗೃತ ರಾಯಃ ಸೂನೃತಾ ಮಘಾನಿ॥

ಪದಪಾಠಃ

ಉತ । ಸ್ತುತಾಸಃ । ಮರುತಃ । ವ್ಯಂತು । ವಿಶ್ವೇಭಿಃ । ನಾಮಭಿಃ । ನರಃ । ಹವೀಂಷಿ ।
ದದಾತ । ನಃ । ಅಮೃತಸ್ಯ । ಪ್ರಜಾಯೈ । ಜಿಗೃತ । ರಾಯಃ । ಸೂನೃತಾ । ಮಘಾನಿ ॥ ೬ ॥

ಸಾಯಣಭಾಷ್ಯಂ

ಉತಾಪಿ ಚ ಸ್ತುತಾಸ ಏವಮಸ್ಮಾಭಿಃ ಸ್ತುತಾ ಮರುತೋ ಹವೀಂಷಿ ವ್ಯಂತು । ಭಕ್ಷಯಂತು ಕೀದೃಶಾಃ । ವಿಶ್ವೇಭಿರ್ವಿಶ್ವೈರ್ನಾಮಭಿರುದಕೈಃ ಸಹಿತಾ ನರೋ ನೇತಾರಃ । ಕೀಷಃ ಪ್ರತ್ಯಕ್ಷಸ್ತುತಃ । ಹೇ ಮರುತಃ ನೋಽಸ್ಮದೀಯಾಯೈ ಪ್ರಜಾಯೈ ಸಂತತಯೇಽಮೃತಸ್ಯಾಮೃತಮುದಕಂ ದದಾತ ದತ್ತ । ತಥಾ ಹವಿಷೋ ದಾತುರ್ಯಜಮಾನಸ್ಯ ಸೂನೃತಾ ಸೂನೃತಾನಿ ಸುಷ್ಠು ನೃತ್ಯಂತಿ ಶೋಭನಯೋಗ್ಯಾನಿ ಮಘಾನಿ ಧನಾನಿ ಜಿಗೃತ । ಉದ್ಗಿರತ । ಪ್ರಯಚ್ಛತೇತ್ಯರ್ಥಃ ॥

ಪ್ರತಿಪದಾರ್ಥ

ವಿಶ್ವೇಭಿಃ—ಸಮಸ್ತವಾದ । ನಾಮಭಿಃ—ಉದಕಗಳಿಂದ ಕೂಡಿದವರೂ । ನರಃ—ನೇತೃಗಳೂ । ಉತ ಮತ್ತು । ಸ್ತುತಾಸಃ—ನಮ್ಮಿಂದ ಪ್ರಶಂಸಿತರೂ ಆದ । ಮರುತಃ—ಮರುತ್ತ್ಗಳು । ಹವೀಂಷಿ—ನಮ್ಮ ಹವಿಸ್ಸುಗಳನ್ನು । ವ್ಯಂತು—ಭಕ್ಷಿಸಲಿ. । (ಎಲೈ ಮರುತ್ತುಗಳೇ) ನಃ—ನಮ್ಮ । ಪ್ರಜಾಯೈ—ಸಂತತಿಗೆ । ಅಮೃತಸ್ಯ—ಉದಕವನ್ನು । ದದಾತ—ಕೊಡಿರಿ । ಸೂನೃತಾ—ಮಂಗಳಪ್ರದವೂ ಪ್ರಶಸ್ಯವೂ ಆದ । ಮಘಾನಿ—ಧನಗಳನ್ನು । ಜಿಗೃತ—ಒದಗಿಸಿಕೊಡಿರಿ.

ಭಾವಾರ್ಥ

ಸಮಸ್ತವಾದ ಉದಕಗಳಿಂದ ಕೂಡಿದವರೂ ನೇತೃಗಳೂ ಮತ್ತು ನಮ್ಮಿಂದ ಪ್ರಶಂಸಿತರೂ ಆದ ಮರುತ್ತುಗಳು ನಮ್ಮ ಹವಿಸ್ಸನ್ನು ಭಕ್ಷಿಸಲಿ ಎಲೈ ಮರುತ್ತುಗಳೇ, ನಮ್ಮ ಸಂತತಿಗೆ ಉದಕವನ್ನು ಒದಗಿಸಿರಿ. ಮಂಗಳ ಪ್ರದವೂ ಪ್ರಶಸ್ಯವೂ ಆದ ಧನಗಳನ್ನು ನಮಗೆ ಕೊಡಿರಿ

English Translation

May the glorified Maruts partake of the oblations, they who accompanied by the bending waters, are the leaders of rites . bestow water, Maruts, upon our progeny, return suitable opulence for (the donation of sacrificial) riches

ಸಂಹಿತಾಪಾಠಃ

ಆ ಸ್ತುತಾಸೋ ಮರುತ್ತೋ ವಿಶ್ವೇ ಊತೀ ಅಚ್ಛಾ ಸೂರೀನ್ತ್ಸರ್ವತಾತಾ ಜಿಗಾತ ।
ಯೇ ನಸ್ತ್ಮನಾ ಶತಿನೋ ವರ್ಧಯಂತಿ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥ ೭ ॥

ಪದಪಾಠಃ

ಆ । ಸ್ತುತಾಸಃ । ಮರುತಃ । ವಿಶ್ವೇ । ಊತೀ । ಅಚ್ಛ । ಸೂರೀನ್ । ಸರ್ವತಾತಾ । ಜಿಗಾತ ।
ಯೇ । ನಃ । ತ್ಮನಾ । ಶತಿನಃ । ವರ್ಧಯಂತಿ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥ ೭ ॥

ಸಾಯಣಭಾಷ್ಯಂ

ಹೇ ಮರುತಃ ಸ್ತುತಾಸ ಏವಮಸ್ಮಾಭಿಃ ಸ್ತುತಾ ವಿಶ್ವೇ ಸರ್ವೇ ಯೂಯಮೂತ್ಯಾ ರಕ್ಷಯಾ ಸಹಿತಾಃ ಸೂರೀನ್ ಸ್ತೋತೄನಚ್ಛಾಭಿಲಕ್ಷ್ಯ ಸರ್ವತಾತಾ ಸರ್ವತಾತಾ ಯಜ್ಞ ಆ ಜಿಗಾತ । ಆಗಚ್ಛತ । ಯೇ ಮರುತಸ್ತ್ಮನಾತ್ಮನೈವ ನೋಽಸ್ಮಾಞ್ಛತಿನಃ ಶತಸಂಖ್ಯಾಕಾನ್ಧನಾರ್ಥಯಂತಿ । ಯಥಾ ವಯಂ ಪುತ್ರ-ಪೌತ್ರಾದಿಭಿಃ ಶತಿನೋ ಭವೇಮ । ತಥಾ ವರ್ಧಯಂತೀತ್ಯರ್ಥಃ । ತೇ ಯೂಯಮಸ್ಮಾ ಜಿಗಾತೇತಿ ಪೂರ್ವೇಣ ಸಂಬಂಧಃ । ಏವಂಭೂತಾ ಮರುತಃ ಯೂಯಂ ಸರ್ವದಾಸ್ಮಾನ್ಪಾಲಯತ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । **ಯೇ**—ಯಾವ ನೀವು । **ತ್ಮನಾ**—ಸ್ವಯಂಪ್ರೇರಿತರಾಗಿ । **ನಃ**—ನಮ್ಮನ್ನು । **ಶತಿನಃ**—ಅತ್ಯಧಿಕವಾಗಿ । **ವರ್ಧಯಂತಿ**—ವೃದ್ಧಿಗೊಳಿಸುವಿರೋ ಅಂತಹವರೂ । **ಸ್ತುತಾಸಃ**—ನಮ್ಮಿಂದ ಸ್ತುತಿಸಲ್ಪಟ್ಟವರೂ ಆದ । **ವಿಶ್ವೇ**—ನೀವೆಲ್ಲರೂ । **ಊತೀ**—ನಿಮ್ಮ ರಕ್ಷಣೆಗಳೊಡನೆ । **ಸೂರೀನ್ ಅಚ್ಛ**—ಸ್ತುತಿಕರ್ತರಾದ ನಮ್ಮ ಅಭಿಮುಖವಾಗಿ । **ಸರ್ವತಾತಾ**—ಈ ಯಜ್ಞದಲ್ಲಿ । **ಆ ಜಿಗಾತ**—ಬನ್ನಿರಿ. । **ಯೂಯಂ**—ನೀವು । **ನಃ**—ನಮ್ಮನ್ನು । **ಸದಾ**—ಯಾವಾಗಲೂ । **ಸ್ವಸ್ತಿಭಿಃ**—ಕಲ್ಯಾಣಗಳಿಂದ । **ಪಾತ**—ರಕ್ಷಿಸಿರಿ.

ಭಾವಾರ್ಥ

ಎಲೈ ಮರುತ್ತುಗಳೇ, ಯಾವ ನೀವು ಸ್ವಯಂಪ್ರೇರಿತರಾಗಿ ನಮ್ಮನ್ನು ಅತ್ಯಧಿಕವಾಗಿ ವೃದ್ಧಿಗೊಳಿಸುವಿರೋ ಅಂತಹವರೂ ನಮ್ಮಿಂದ ಸ್ತುತಿಸಲ್ಪಟ್ಟವರೂ ಆದ ನೀವೆಲ್ಲರೂ ನಿಮ್ಮ ರಕ್ಷಣೆಗಳೊಡನೆ ಸ್ತುತಿಕರ್ತರಾದ ನಮಗೆ ಅಭಿಮುಖವಾಗಿ ಈ ಯಜ್ಞಕ್ಕೆ ಬನ್ನಿರಿ. ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ.

English Translation

Glorified Maruts, do you all come at the time of sacrifice to the presence of the worshippers along with your protections, for you are they who, of your own will, multiply our hudreds. do you ever cherish us with blessings.

———

ಐವತ್ತೆಂಟನೆಯ ಸೂಕ್ತವು

ಸಾಯಣಭಾಷ್ಯಂ

ಪ್ರ ಸಾಕಮುಕ್ಷೇ ಇತಿ ಷಡೃಚಂ ತೃತೀಯಂ ಸೂಕ್ತಂ ವಸಿಷ್ಠಸ್ಯಾರ್ಷಂ ತ್ರೈಷ್ಟುಭಂ ಮರುದ್ದೇವತಾಕಂ । ಅನುಕ್ರಾಂತಂ ಚ । ಪ್ರ ಸಾಕಮುಕ್ಷೇ ಷಡಿತಿ ॥ ಗತೋ ವಿನಿಯೋಗಃ ॥

ಅನುವಾದವು—ಪ್ರ ಸಾಕಮುಕ್ಷೇ ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು ಇದರಲ್ಲಿ ಆರು ಋಕ್ಕುಗಳಿರುವುವು ಈ ಸೂಕ್ತವು ವಸಿಷ್ಠನು ಋಷಿಯು, ಮರುತ್ತುಗಳು ದೇವತೆಯು, ತ್ರಿಷ್ಟುಪ್ಛಂದಸ್ಸು ಅನುಕ್ರಮಣಿಕೆಯಲ್ಲಿ **ಪ್ರ ಸಾಕಮುಕ್ಷೇ ಷಟ್** ಎಂದು ಹೇಳಿರುವುದು ವಿನಿಯೋಗವನ್ನು ಹಿಂದಯೇ ಹೇಳಲಾಗಿದೆ.

ಸೂಕ್ತ—೫೮

ಮಂಡಲ—೭ ॥ ಅನುವಾಕ—೩ ॥ ಸೂಕ್ತ—೫೮ ॥
ಅಷ್ಟಕ—೫ ॥ ಅಧ್ಯಾಯ—೪ ॥ ವರ್ಗ—೨೮ ॥
ಸೂಕ್ತದಲ್ಲಿರುವ ಮಕ್ಕಂಟ್ಟಿ—೬ ॥
ಋಷಿಃ—ವಸಿಷ್ಠಃ ॥
ದೇವತಾ—ಮರುತಃ ॥
ಛಂದಃ—ತ್ರಿಷ್ಟುಪ್ ।

ಸಂಹಿತಾಪಾಠಃ

ಪ್ರ ಸಾ॒ಕಮು॒ಕ್ಷೇ ಅ॒ರ್ಚತಾ॒ ಗ॒ಣಾಯ॒ ಯೋ ದೈ॒ವ್ಯಸ್ಯ॒ ಧಾಮ್ನ॒ಸ್ತುವಿ॑ಷ್ಮಾನ್।
ಉ॒ತ ಕ್ಷೋ॒ದಂತಿ॑ ರೋ॒ದಸೀ॑ ಮ॒ಹಿತ್ವಾ॒ ನಕ್ಷಂ॑ತೇ॒ ನಾಕಂ॒ ನಿರ್ಯ॑ತೇರವಂ॒ಶಾತ್ ॥ ೧ ॥

ಪದಪಾಠಃ

ಪ್ರ । ಸಾ॒ಕಂ॒ಽಉ॒ಕ್ಷೇ॒ । ಅ॒ರ್ಚ॒ತ॒ । ಗ॒ಣಾಯ॑ । ಯಃ । ದೈ॒ವ್ಯಸ್ಯ॑ । ಧಾಮ್ನ॑ಃ । ತುವಿ॑ಷ್ಮಾನ್ ।
ಉ॒ತ । ಕ್ಷೋ॒ದಂ॒ತಿ॒ । ರೋ॒ದ॒ಸೀ ಇತಿ॑ । ಮ॒ಹಿ॒ತ್ವಾ । ನಕ್ಷಂ॑ತೇ । ನಾಕಂ॑ । ನಿಃ॒ಽಋ॒ತೇ॒ । ಅ॒ವಂ॒ಶಾತ್ ॥

ಸಾಯಣಭಾಷ್ಯಂ

हे स्तोतारः यूयंयं साकमुक्षे सतेतं वर्षित्रे गणाय मरुत्वेमूहाय प्रार्चत । स्तोत्रं प्रोच्चारयत । यो मरुद्गणो दैव्यस्य देवसंबन्धिनो धाम्नः स्वर्गाख्यस्य स्थानस्य तुविष्मान् वृद्धिमान्भवति । सर्वेभ्यो देवेभ्यः प्रवृद्ध इत्यर्थः । तस्मै गणायेति पूर्वेण संबंधः । उतापि च मरुतो महित्वा स्वकीयेन महत्त्वेन सहिता रोदसी द्यावापृथिव्यौ क्षोदंति । भंजंति । यथा निर्यतेर्भूमेरवंशादंतरिक्षाच्च नाकं स्वर्गं नक्षंतेः । व्याप्नुवंति ॥

ಪ್ರತಿಪದಾರ್ಥ

(ಎಲೈ ಸ್ತುತಿಕರ್ತರೇ) **ಯಃ**—ಯಾವ ಮರುದ್ಗಣವು । **ದೈವ್ಯಸ್ಯ**—ದೇವನಿವಾಸವಾದ । **ಧಾಮ್ನಃ**—ಸ್ವರ್ಗಸ್ಥಾನದಲ್ಲೆಲ್ಲಾ । **ತುವಿಷ್ಮಾನ್**—ಅತ್ಯಂತ ಪ್ರಬಲವಾಗಿರುವುದೋ ಅಂತಹುದೂ । **ಸಾಕಮುಕ್ಷೇ**—ಅನುಸ್ಯೂತವಾಗಿ ಮಳೆಯನ್ನು ಸುರಿಸುವುದೂ ಆದ । **ಗಣಾಯ**—ಮರುದ್ಗಣವನ್ನು ಉದ್ದೇಶಿಸಿ । **ಪ್ರಾರ್ಚತ**—ಸ್ತುತಿಯನ್ನರ್ಪಿಸಿರಿ । **ಉತ**—ಮತ್ತು । (**ಮರುತಃ**—ಮರುತ್ತುಗಳು) । **ಮಹಿತ್ವಾ**—ತಮ್ಮ ಮಾಹಾತ್ಮ್ಯದಿಂದ । **ರೋದಸೀ**—ದ್ಯಾವಾಪೃಥಿವಿಗಳನ್ನೂ । **ಕ್ಷೋದಂತಿ**—ಕುಗ್ಗಿಸುತ್ತಾರೆ. । **ನಿರ್ಯತೇಃ**—ಭೂಮಿಯಿಂದ ಹಿಡಿದು । **ಅವಂಶಾತ್**—ಅಂತರಿಕ್ಷದ ಮೂಲಕ । **ನಾಕಂ**—ಸ್ವರ್ಗವನ್ನೆಲ್ಲಾ । **ನಕ್ಷಂತೇ**—ವ್ಯಾಪಿಸುತ್ತಾರೆ

ಭಾವಾರ್ಥ

ಎಲೈ ಸ್ತುತಿಕರ್ತರೇ, ಯಾವ ಮರುದ್ಗಣವು ದೇವನಿವಾಸವಾದ ಸ್ವರ್ಗಸ್ಥಾನದಲ್ಲೆಲ್ಲಾ ಅತ್ಯಂತ ಪ್ರಬಲವಾಗಿರುವುದೋ ಅಂತಹುದೂ ಅನುಸ್ಯೂತವಾಗಿ ಮಳೆಯನ್ನು ಸುರಿಸುವುದೂ ಆದ ಮರುದ್ಗಣವನ್ನು ಉದ್ದೇಶಿಸಿ ಸ್ತುತಿಯನ್ನರ್ಪಿಸಿರಿ ಮರುತ್ತುಗಳು ತಮ್ಮ ಮಾಹಾತ್ಮ್ಯದಿಂದ ದ್ಯಾವಾಪೃಥಿವಿಗಳನ್ನು ಕುಗ್ಗಿಸುತ್ತಾರೆ. ಭೂಮಿಯಿಂದ ಹಿಡಿದು ಅಂತರಿಕ್ಷದಮೂಲಕ ಸ್ವರ್ಗವನ್ನೆಲ್ಲಾ ವ್ಯಾಪಿಸುತ್ತಾರೆ.

English Translation

Offer worship to the company (of the Maruts), the associated dispensers of moisture, which is powerful over the celestial region the Maruts, by their greatness, oppress both heaven and earth : they spread from the earth and the firmament to heaven,

ಸಂಹಿತಾಪಾಠಃ

जनूंष्यिद्वो मरुतस्त्वेष्येण भीमासस्तुविमन्यवोऽयासः ।
प्र ये महोभिरोजसोत सन्ति विश्वो वो याम॑न्नयते स्वर्दृक् ॥ ३ ॥

ಪದಪಾಠಃ

ಜನೂಃ । ಚಿತ್ । ವಃ । ಮರುತಃ । ತ್ವೇಷ್ಯೇಣ । ಭೀಮಾಸಃ । ತುವಿಮನ್ಯವಃ । ಅಯಾಸಃ ।

ಪ್ರ । ಯೇ । ಮಹಃಭಿಃ । ಓಜಸಾ । ಉತ । ಸಂತಿ । ವಿಶ್ವಃ । ವಃ । ಯಾಮನ್ । ಭಯತೇ । ಸ್ವರ್ದೃಕ್ ॥ ೨ ॥

ಸಾಯಣಭಾಷ್ಯಂ

ಹೇ ಭೀಮಾಸೋ ಭೀಮಾಸ್ತುವಿಮನ್ಯವಃ ಪ್ರವೃದ್ಧಮತಯೋಽಯಾಸೋ ಗಂತಾರ ಇತಿ ತ್ರೀಣಿ ಸಂಬೋಧನಾನಿ । ಏವಂಭೂತಾ ಹೇ ಮರುತಃ ವೋ ಯುಷ್ಮಾಕಂ ಜನೂರ್ಜನ್ಮ ತ್ವೇಷ್ಯೇಣ ದೀಪ್ತೇನ ರುದ್ರೇಣ ಬಭೂವೇತಿ ಶೇಷಃ । ಉತಾಪಿ ಚ ಯೇ ಮರುತೋ ಮಹೋಭಿಸ್ತೇಜೋಭಿರೋಜಸಾ ಬಲೇನ ಚ ಪ್ರ ಸಂತಿ ಪ್ರಭವಂತಿ ತೇಷಾಂ ವೋ ಯುಷ್ಮಾಕಂ ಯಾಮನ್ ಯಾಮನಿ ಗಮನೇ ವಿಶ್ವಃ ಸ್ವರ್ದೃಕ್ ಸೂರ್ಯಸ್ಯ ದ್ರಷ್ಟಾ ಸರ್ವೋ ಜೀವಸಮೂಹಃ । ಯದ್ವಾ । ಸ್ವರಂತರಿಕ್ಷಂ । ತತ್ಪಶ್ಯತೀತಿ ವೃಕ್ಷಃ ಸ್ವರ್ದೃಕ್ । ಸರ್ವದೋತ್ತಿಷ್ಠನ್ನಿತ್ಯರ್ಥಃ । ಭಯತೇ । ಬಿಭೇತಿ ॥

ಪ್ರತಿಪದಾರ್ಥ

ಭೀಮಾಸಃ—ಭಯಂಕರರೂ । ತುವಿಮನ್ಯವಃ—ಅತ್ಯಧಿಕವಾದ ಮತಿಯುಳ್ಳವರೂ । ಅಯಾಸಃ—ಗಮನಶೀಲರೂ ಆದ । ಮರುತಃ—ಎಲೈ ಮರುತ್ತುಗಳೇ । ವಃ—ನಿಮ್ಮ । ಜನೂಃ—ಜನ್ಮವು । ತ್ವೇಷ್ಯೇಣ—ಪ್ರಭಾಯುತನಾದ ರುದ್ರನಿಂದ ಉಂಟಾಗಿದೆ । ಉತ—ಮತ್ತು । ಯೇ—ಯಾವ ನೀವು । ಮಹೋಭಿಃ—ನಿಮ್ಮ ತೇಜಸ್ಸುಗಳಿಂದಲೂ । ಓಜಸಾ—ಒಲದಿಂದಲೂ ಕೂಡಿ । ಪ್ರ ಸಂತಿ—ಪ್ರಭಾವಶಾಲಿಗಳಾಗಿರುವಿರೋ ಅಂತಹ । ವಃ—ನಿಮ್ಮ । ಯಾಮನ್—ಸಂಚಾರಕಾಲದಲ್ಲಿ । ಸ್ವರ್ದೃಕ್—ಅಂತರಿಕ್ಷವನ್ನು ನೋಡುತ್ತಿರುವ (ವೃಕ್ಷದಂತೆ) । ವಿಶ್ವಃ—ಸಮಸ್ತ ಜನವೂ । ಭಯತೇ—ಭಯಗೊಳ್ಳುತ್ತದೆ

ಭಾವಾರ್ಥ

ಭಯಂಕರರೂ, ಅತ್ಯಧಿಕವಾದ ಮತಿಯುಳ್ಳವರೂ, ಗಮನಶೀಲರೂ ಆದ ಎಲೈ ಮರುತ್ತುಗಳೇ, ನಿಮ್ಮ ಜನ್ಮವು ಪ್ರಭಾಯುತನಾದ ರುದ್ರನಿಂದ ಉಂಟಾಗಿದೆ. ಯಾವ ನೀವು ನಿಮ್ಮ ತೇಜಸ್ಸುಗಳಿಂದಲೂ ಬಲದಿಂದಲೂ ಕೂಡಿ ಪ್ರಭಾವಶಾಲಿಗಳಾಗಿರುವಿರೋ ಅಂತಹ ನಿಮ್ಮ ಸಂಚಾರಕಾಲದಲ್ಲಿ ಅಂತರಿಕ್ಷವನ್ನು ನೋಡುತ್ತಿರುವ ಸಮಸ್ತ ಜನವೂ (ಅಥವಾ ವೃಕ್ಷಗಳೂ) ಭಯಗೊಳ್ಳುತ್ತದೆ

English Translation

Formidable, high spirited, quick-moving Maruts, your birth is from the illustrious Rudra : every gazer on the sun is alarmed with the course of you who are pre-eminent in lusture and strength.

ಸಂಹಿತಾಪಾಠಃ

ಬೃಹದ್ವಯೋ ಮಘವದ್ಭ್ಯೋ ದಧಾತ ಜುಜೋಷನ್ನಿನ್ಮರುತಃ ಸುಷ್ಟುತಿಂ ನಃ

ಗತೋ ನಾಧ್ವಾ ವಿ ತಿರಾತಿ ಜಂತುಂ ಪ್ರ ಣಃ ಸ್ಪಾರ್ಹಾಭಿರೂತಿಭಿಸ್ತಿರೇತ ॥

ಪದಪಾಠಃ

ಬೃಹತ್ । ವಯಃ । ಮಘವದ್ಭ್ಯಃ । ದಧಾತ । ಜುಜೋಷನ್ । ಇತ್ । ಮರುತಃ । ಸುಷ್ಟುತಿಂ । ನಃ ।
ಗತಃ । ನ । ಅಧ್ವಾ । ವಿ । ತಿರಾತಿ । ಜಂತುಂ । ಪ್ರ । ನಃ । ಸ್ಪಾರ್ಹಾಭಿಃ । ಊತಿಭಿಃ । ತಿರೇತ ॥ ೩ ॥

ಸಾಯಣಭಾಷ್ಯಂ

ಹೇ ಮರುತಃ ಯೂಯಂ ಮಘವದ್ಭ್ಯೋ ಹವಿರ್ಲಕ್ಷಣಾನ್ನವದ್ಭ್ಯೋಽಸ್ಮಭ್ಯಂ ಬೃಹನ್ಮಹದ್ವಯೋಽನ್ನಂ ದಧಾತ । ಪ್ರಯಚ್ಛತ । ನೋಽಸ್ಮದೀಯಾಂ ಸುಷ್ಟುತಿಂ ಶೋಭನಂ ಸ್ತೋತ್ರಂ ಜುಜೋಷನ್ನಿತ್ । ಸೇವಂತಾಮೇವ । ಗತೋ ಮರುದ್ಭಿಃ ಪ್ರಾಪ್ತೋಽಧ್ವಾ ಮಾರ್ಗೋ ಜಂತುಂ ಪ್ರಾಣಿನಂ ನ ವಿ ತಿರಾತಿ । ನಾಹಂತಿ । ಉದಕೇನಾಪ್ಯಾಯಯತ್ಯೇವ । ಯದ್ವಾ । ವಿತಿರತಿರ್ವರ್ಧನಾರ್ಥಃ । ನೇತಿ ಚಾರ್ಥೇ । ಮರುದ್ಭಿರ್ಗತೋ ಮಾರ್ಗಶ್ಚ ಜಂತುಂ ವರ್ಧಯತಿ । ತಥಾ ನೋಽಸ್ಮಾನ್ ಸ್ಪಾರ್ಹಾಭಿಃ ಸ್ಪೃಹಣೀಯಾಭಿರೂತಿಭೀ ರಕ್ಷಾಭಿಃ ಪ್ರ ತಿರೇತ । ಪ್ರವರ್ಧಯತೇ ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । **ಮಘವದ್ಭ್ಯಃ**—ಹವಿಸ್ಸನ್ನು ಹೊಂದಿರುವ ನಮಗೆ । **ಬೃಹತ್**—ಅತ್ಯಧಿಕವಾದ । **ವಯಃ**—ಅನ್ನವನ್ನು । **ದಧಾತ**—ಕೊಡಿರಿ. । **ನಃ**—ನಮ್ಮ । **ಸುಷ್ಟುತಿಂ** — ಉತ್ತಮವಾದ ಸ್ತುತಿಯನ್ನು । **ಜುಜೋಷನ್ನಿತ್**—ಖಂಡಿತ ಸೇವಿಸಿರಿ । **ಗತಃ**—ಮರುತ್ತುಗಳು ಆಶ್ರಯಿಸಿರಿವ । **ಅಧ್ವಾ**—ಮಾರ್ಗವು । **ಜಂತುಂ**—ಪ್ರಾಣಿಸಮೂಹವನ್ನು । **ನ ವಿ ತಿರಾತಿ**—ಹಿಂಸಿಸುವುದಿಲ್ಲ । (ಅಲ್ಲದೆ) **ನಃ**—ನಮ್ಮನ್ನು । **ಸ್ಪಾರ್ಹಾಭಿಃ**—ಅಪೇಕ್ಷಿತಗಳಾದ । **ಊತಿಭಿಃ**—ರಕ್ಷಣೆಗಳಿಂದ । **ಪ್ರ ತಿರೇತ**—ವೃದ್ಧಿಗೊಳಿಸುತ್ತವೆ.

ಭಾವಾರ್ಥ

ಎಲೈ ಮರುತ್ತುಗಳೇ, ಹವಿಸ್ಸನ್ನು ಅರ್ಪಿಸುವ ನಮಗೆ ಅತ್ಯಧಿಕವಾದ ಅನ್ನವನ್ನು ಕೊಡಿರಿ. ನಮ್ಮ ಉತ್ತಮವಾದ ಸ್ತುತಿಯನ್ನು ಖಂಡಿತ ಸೇವಿಸಿರಿ. ಮರುತ್ತುಗಳು ಆಶ್ರಯಿಸಿರುವ ಮಾರ್ಗವು ಪ್ರಾಣಿಸಮೂಹವನ್ನು ಹಿಂಸಿಸುವುದಿಲ್ಲ, ನಮ್ಮನ್ನು ಅಪೇಕ್ಷಿತಗಳಾದ ರಕ್ಷಣೆಗಳಿಂದ ವೃದ್ಧಿಗೊಳಿಸುತ್ತವೆ.

English Translation

Grant, Maruts, to us who are affluent (in sacrificial offering) abundant food : accept complacently our earnest praise : the path you follow is not hurtful to living beings : may it increase our (prosperity) by (your) desirable protections.

ಸಂಹಿತಾಪಾಠಃ

ಯುಷ್ಮೋತೋ ವಿಪ್ರೋ ಮರುತಃ ಶತಸ್ವೀ ಯುಷ್ಮೋತೋ ಅರ್ವಾ ಸಹುರಿಃ ಸಹಸ್ರೀ ।
ಯುಷ್ಮೋತಃ ಸಮ್ರಾಳುತ ಹಂತಿ ವೃತ್ರಂ ಪ್ರ ತದ್ವೋ ಅಸ್ತು ಧೂತಯೋ ದೇಷ್ಣಂ ॥ ೪ ॥

ಪದಪಾಠಃ

ಯುಷ್ಮಾಊತಃ । ವಿಪ್ರಃ । ಮರುತಃ । ಶತಸ್ವೀ । ಯುಷ್ಮಾಊತಃ । ಅರ್ವಾ । ಸಹುರಿಃ । ಸಹಸ್ರೀ ।
ಯುಷ್ಮಾಊತಃ । ಸಮ್ರಾಟ್ । ಉತ । ಹಂತಿ । ವೃತ್ರಂ । ಪ್ರ । ತತ್ । ವಃ । ಅಸ್ತು । ಧೂತಯಃ ।
ದೇಷ್ಣಂ ॥ ೪ ॥

ಸಾಯಣಭಾಷ್ಯಂ

ಹೇ ಮರುತಃ ಯುಷ್ಮೋತೋ ಯುಷ್ಮಾಭೀ ರಕ್ಷಿತೋ ವಿಪ್ರಃ ಸ್ತೋತಾ ಶತಸ್ವೀ ಶತಸಂಖ್ಯೋಪೇತಧನವಾನ್ಭವತಿ । ಯುಷ್ಮೋತೋ ಯುಷ್ಮಾಭೀ ರಕ್ಷಿತೋಽರ್ವಾಭಿಗಂತಾ ಸಹುರಿಃ ಶತ್ರೂಣಾಮಭಿಭವಿತಾ ಸ್ತೋತಾ ಸಹಸ್ರೀ ಸಹಸ್ರಧನವಾನ್ಭವತಿ । ಯುಷ್ಮೋತೋ ಯುಷ್ಮಾಭೀ ರಕ್ಷಿತಃ ಸಮ್ರಾಟ್ ಸಾಮ್ರಾಜ್ಯಯುಕ್ತೋ ಭವತಿ । ಉತಾಪಿ ಚ ವೃತ್ರಂ ಶತ್ರುಂ ಹಂತಿ । ಯುಷ್ಮದ್ರಕ್ಷಕೋ ಹಿನಸ್ತಿ । ಹೇ ಧೂತಯಃ ಕಂಪಯಿತಾರೋ ಮರುತಃ ವೋ ಯುಷ್ಮಾಭಿರ್ದತ್ತಂ ತತ್ಪ್ರಸಿದ್ಧಂ ದೇಷ್ಣಂ ಧನಂ ಪ್ರಾಸ್ತು । ಪ್ರಭೂತಂ ಭವತು ॥

ಪ್ರತಿಪದಾರ್ಥ

ಮರುತಃ—ಎಲೈ ಮರುತ್ತುಗಳೇ, । **ಯುಷ್ಮೋತಃ**—ನಿಮ್ಮಿಂದ ರಕ್ಷಿತನಾದ । **ವಿಪ್ರಃ**—ಸ್ತುತಿಕರ್ತನು। **ಶತಸ್ವೀ**—ಶತಸಂಖ್ಯಾಕವಾದ ಧನವಂತನಾಗಿ ಆಗುತ್ತಾನೆ. । **ಯುಷ್ಮೋತಃ**—ನಿಮ್ಮಿಂದ ರಕ್ಷಿತನಾದ । **ಅರ್ವಾ**—ನಿಮ್ಮ ಆರಾಧಕನು । **ಸಹುರಿಃ**—ಶತ್ರುಗಳನ್ನು ಸೋಲಿಸುವವನಾಗಿ ಆಗುತ್ತಾನೆ । **ಸಹಸ್ರೀ**—ಸಹಸ್ರಸಂಖ್ಯಾಕವಾದ ಧನವಂತನಾಗಿಯೂ ಆಗುತ್ತಾನೆ । **ಯುಷ್ಮೋತಃ**—ನಿಮ್ಮಿಂದ ರಕ್ಷಿತನು । **ಸಮ್ರಾಟ್**—ಸಾರ್ವಭೌಮನಾಗಿ ಆಗುತ್ತಾನೆ । **ಉತ**—ಮತ್ತ । **ವೃತ್ರಂ**—ಶತ್ರುವನ್ನು । **ಹಂತಿ**—ಕೊಲ್ಲುತ್ತಾನೆ । **ಧೂತಯಃ**—ಎಲ್ಲವನ್ನೂ ಕಂಪಿಸುವಂತೆ ಮಾಡುವ ಎಲೈ ಮರುತ್ತುಗಳೇ । **ವಃ**—ನಿಮ್ಮಿಂದ ದತ್ತವಾದುದೂ । **ತತ್**—ಪ್ರಸಿದ್ಧವಾದುದೂ ಆದ । **ದೇಷ್ಣಂ**—ಧನವು । **ಪ್ರ ಅಸ್ತು**—ಅಧಿಕವಾಗಿ ಬೆಳೆಯಲಿ.

ಭಾವಾರ್ಥ

ಎಲೈ ಮರುತ್ತುಗಳೇ, ನಿಮ್ಮಿಂದ ರಕ್ಷಿತನಾದ ಸ್ತುತಿಕರ್ತನು ಶತಸಂಖ್ಯಾಕವೂ ಸಹಸ್ರಸಂಖ್ಯಾಕವೂ ಆದ ಧನವಂತನಾಗುತ್ತಾನೆ. ನಿಮ್ಮ ರಕ್ಷಣೆಯ ಸಹಾಯದಿಂದ ನಿಮ್ಮ ಆರಾಧಕನು ಶತ್ರುಗಳನ್ನು ಸೋಲಿಸುತ್ತಾನೆ.

ಅಂತಹ ಯಜಮಾನನು ಸಾರ್ವಭೌಮನಾಗುತ್ತಾನೆ. ಸಕಲವನ್ನು ನಡಗಿಸುವ ಶಕ್ತಿಯುಳ್ಳ ಎಲೈ ಮರುತ್ತುಗಳೇ, ನಿಮ್ಮಿಂದ ದತ್ತವಾದ ಶ್ರೀಷ್ಠವಾದ ಧನವು ನಮ್ಮಲ್ಲಿ ಅಧಿಕವಾಗಿ ಬೆಳೆಯಲಿ.

English Translation

The pious man protected, Maruts, by you, is the possessor of hundreds; the assailant, overcomer (of his foes), protected by you, is the possessor of thousands . protected by you, the Emperor slays his enemy may the wealth that is given, agitators, by you ever be abundant

ಸಂಹಿತಾಪಾಠಃ

ತಾ ಆ ರುದ್ರಸ್ಯ ಮೀಳ್ಹುಷೋ ವಿವಾಸೇ ಕುವಿನ್ನಂಸಂತೇ ಮರುತಃ ಪುನರ್ನಃ
ಯತ್ಸಸ್ವರ್ತಾ ಜಿಹೀಳಿರೇ ಯದಾವಿರವ ತದೇನ ಈಮಹೇ ತುರಾಣಾಂ ॥೫॥

ಪದಪಾಠಃ

ತಾನ್ । ಆ । ರುದ್ರಸ್ಯ । ಮೀಳ್ಹುಷಃ । ವಿವಾಸೇ । ಕುವಿತ್ । ನಂಸಂತೇ । ಮರುತಃ । ಪುನಃ । ನಃ ।
ಯತ್ । ಸಸ್ವರ್ತಾ । ಜಿಹೀಳಿರೇ । ಯತ್ । ಆವಿಃ । ಅವ । ತತ್ । ಏನಃ । ಈಮಹೇ । ತುರಾಣಾಂ ॥

ಸಾಯಣಭಾಷ್ಯಂ

ಮೀಳ್ಹುಷಃ ಕಾಮಾನಾಂ ವರ್ಷಿತೃಸ್ಯ ರುದ್ರಸ್ಯೇಶ್ವರಸ್ಯ ಪುತ್ರಾಂಸ್ತಾನ್ಮರುತ ಆ ವಿವಾಸೇ। ಅಹಂ ಹೋತಾ ಪರಿಚರಾಮಿ । ತೇ ಮರುತೋ ನೋಽಸ್ಮಭ್ಯಂ ಕುವಿದ್ಬಹುಕೃತ್ವಃ ಪುನರ್ಭೂಯೋ ನಂಸಂತೇ । ನಮಂತಾಂ । ಅಭಿಮುಖೀಭವಂತು । ಕುವಿಚ್ಛಬ್ದೋನೈವ ಪುನಃಶಬ್ದಾರ್ಥಸ್ಯ ಲಬ್ಧತ್ವಾತ್ಪುನಃ ಶಬ್ದಗ್ರಹಣಂ ಕಿಮರ್ಥಂ । ಆದರಾರ್ಥಂ । ಸಸ್ವರ್ತಾಂತರ್ಹಿತೇನಾಪ್ರಕಾಶೇನ ಯದ್ಯೇನೈನಸಾ ಜಿಹೀಳಿರೇ ಮರುತಃ ಕ್ರುಧ್ಯೇಯುಃ ಆವಿಃ ಪ್ರಕಾಶೇನ ಯದ್ಯೇನೈನಸಾ ಚ ಜಿಹೀಳಿರೇ ತುರಾಣಾಂ ಕ್ಷಿಪ್ರಾಣಾಂ ಮರುತಾಂ ಸಂಬಂಧಿ ತದುಭಯಮೇನೋಽಪರಾಧಮವೇಮಹೇ । ಸ್ತೋತ್ರೇಣ ವಯಮುಪನಯಾಮಃ ॥

ಪ್ರತಿಪದಾರ್ಥ

ಮೀಳ್ಹುಷಃ—ಇಷ್ಟಾರ್ಥಪ್ರದನಾದ । ರುದ್ರಸ್ಯ—ರುದ್ರಪುತ್ರರಾದ । ತಾನ್—ಮರುತ್ತುಗಳನ್ನು । ಆ ವಿವಾಸೇ—ಆರಾಧಿಸಿ ಪೂಜಿಸುತ್ತೇನೆ. । ಮರುತಃ—ಅದೇ ಮರುತ್ತುಗಳು । ಪುನಃ ಕುವಿತ್—(ಪುನಃಪುನಃ) ಅನೇಕವೇಳೆ । ನಃ—ನಮ್ಮಕಡೆಗೆ । ನಂಸಂತೇ—ಬಗ್ಗುತ್ತಾ ಎದುರುಗೊಂಡು ಬರಲಿ. । ಸಸ್ವರ್ತಾ—ಹೊರಗಡೆ ಪ್ರಕಾಶವಾಗದ । ಯತ್—ಯಾವ ಪಾಪದಿಂದ । ಜಿಹೀಳಿರೇ—ಮರುತ್ತುಗಳು ಕೋಪಗೊಳ್ಳಬಹುದೋ । ಆವಿಃ—ಪ್ರಕಾಶವಾದ । ಯತ್—ಯಾವ ಪಾಪದಿಂದ ಅವರು ಕೋಪಗೊಳ್ಳುವರೋ । ತುರಾಣಾಂ—ಶೀಘ್ರಗಾಮಿಗಳು

ಗಳಾದ ಆ ಮರುತ್ತುಗಳ ವಿಷಯದಲ್ಲಿ ಆಚರಿಸುವ । **ಕತ್**—ಆ ಎರಡುವಿಧವಾದ । **ಏನಃ**—ಪಾಪವನ್ನೂ । **ಅವ-ಈಮಹೇ**—ನಾವು ಪರಿಹರಿಸುತ್ತೇವೆ.

ಭಾವಾರ್ಥ

ಇಷ್ಟಾರ್ಥಪ್ರದನಾದ ರುದ್ರನ ಪುತ್ರರಾದ ಮರುತ್ತುಗಳನ್ನು ಆರಾಧಿಸಿ ಪೂಜಿಸುತ್ತೇನೆ. ಆದೇ ಮರುತ್ತುಗಳು ನಮ್ಮ ಕಡೆಗೆ ಅನುಗ್ರಹಿಸಿ ಅನೇಕವೇಳೆ ಬರಲಿ. ಹೊರಗಡೆ ಪ್ರಕಾಶವಾಗದಿರುವುದೂ, ಪ್ರಕಾಶವಾಗುವುದೂ ಆದ ಯಾವ ಎರಡು ವಿಧವಾದ (ಅಂತರಂಗಬಹಿರಂಗಗಳೆಂಬ) ಪಾಪದಿಂದ ಮರುತ್ತುಗಳು ಅಗ್ರಹಗೊಳ್ಳುವರೋ ಅವರ ವಿಷಯದಲ್ಲಿ ಆಚರಿಸುವ ಆ ಎರಡು ವಿಧವಾದ ಪಾಪಗಳನ್ನು ನಾವು ಪರಿಹರಿಸುತ್ತೇವೆ

English Translation

I adore those sons of the showerer, Rudra may the Maruts, repeateadly invoked, again come to us . may we expiate (by praise) whatever we have committed secretly or openly against the swift moving Maruts, by which they are displeased.

ವಿಶೇಷವಿಷಯಗಳು

ನಂಸಂತೇ—ಈ ಶಬ್ದಕ್ಕೆ ಯಾಸ್ಕರು ನಿರ್ವಚನವನ್ನು ಹೇಳುತ್ತಾ-**ಕುವಿನ್ನಂಸಂತೇ ಮರುತಃ ಪುನರ್ನಃ** (ನಿ ೪-೧೫) **ಪುನರ್ನೋ ನಮಂತೇ ಮರುತಃ** ಎಂದರೆ ಮರುದ್ದೇವತೆಗಳು ನಮಗಭಿಮುಖವಾಗಿ ಪುನಃಪುನಃ ಬಗ್ಗಿ ಬರುವರು **ನಂಸಂತೇ** ಎಂಬ ಶಬ್ದಕ್ಕೆ **ನಮಂತೇ**-ಬಗ್ಗುತ್ತಾರೆ ಎಂದು ಅರ್ಧವಿವರಣೆಮಾಡಿದಾರೆ.

ಸಂಹಿತಾಪಾಠಃ

ಪ್ರ ಸಾ ವಾಚಿ ಸುಷ್ಟುತಿರ್ಮಘೋನಾಮಿದಂ ಸೂಕ್ತಂ ಮರುತೋ ಜುಷಂತ
ಆರಾಚ್ಚಿದ್ದ್ವೇಷೋ ವೃಷಣೋ ಯುಯೋತ ಯೂಯಂ ಪಾತ ಸ್ವಸ್ತಿಭಿಃ
ಸದಾ ನಃ ॥ ೬ ॥

ಪದಪಾಠಃ

ಪ್ರ । ಸಾ । ವಾಚಿ । ಸುಽಸ್ತುತಿಃ । ಮಘೋನಾಂ । ಇದಂ । ಸುಽಉಕ್ತಂ । ಮರುತಃ । ಜುಷಂತ ।
ಆರಾತ್ । ಚಿತ್ । ದ್ವೇಷಃ । ವೃಷಣಃ । ಯುಯೋತ । ಯೂಯಂ । ಪಾತ । ಸ್ವಸ್ತಿಽಭಿಃ । ಸದಾ । ನಃ ॥೬॥

ಸಾಯಣಭಾಷ್ಯಂ

ಮಘೋನಾಂ ಧನವತಾಂ ಮರುತಾಂ ಸಂಬಂಧಿನೀ ಸುಷ್ಟುತಿರ್ಯಾ ಶೋಭನಾ ಸ್ತುತಿರಸ್ಮಿನ್ಸೂಕ್ತೇ ಕೃತಾ ಸಾ ಸ್ತುತಿರಸ್ಮಾಭಿಃ ಪ್ರ ವಾಚಿ । ಪ್ರೋಕ್ತಾಸೀತ್ । ಮರುತ ಇದಮಿದಾನೀಗ್ಭೂತಂ ಸೂಕ್ತಂ ಜುಷಂತ । ಸೇವಂತಾಂ । ಹೇ ವೃಷಣಃ ಕಾಮಾನಾಂ ವರ್ಷಿತಾರಃ ಯೂಯಂ ದ್ವೇಷೋ ದ್ವೇಷಾಂಸಿ ಶತ್ರೂನಾರಾಚ್ಚಿದ್ದೂರಾದೇವ ಯುಯೋತ । ಅಸ್ಮತ್ತಃ ಪೃಥಕ್ಕುರುತ । ಯೂಯಂ ನೋಽಸ್ಮಾನ್ ಸ್ವಸ್ತಿಭಿಃ ಸರ್ವದಾ ರಕ್ಷತ ॥

ಪ್ರತಿಪದಾರ್ಥ

ಮಘೋನಾಂ—ಧನವಂತರಾದ ಮರುತ್ತುಗಳಿಗೋಸ್ಕರ । **ಸುಷ್ಟುತಿಃ**—ಯಾವ ಸ್ತುತಿಯು ನಿರ್ಮಿತವಾಗಿರುವುದೋ । **ಸಾ**—ಆ ಸ್ತುತಿಯು । **ಪ್ರ ವಾಚಿ**—ಪರಿತವಾಗಿದೆ । **ಮರುತಃ**—ಮರುತ್ತುಗಳು । **ಇದಂ ಸೂಕ್ತಂ** ಈ ಸ್ತುತಿಯನ್ನು । **ಜುಷಂತ**—ಸೇವಿಸಲಿ. । **ವೃಷಣಃ**—ಇಷ್ಟಾರ್ಥಪ್ರದರಾದ ಎಲೈ ಮರುತ್ತುಗಳೇ, । **ದ್ವೇಷಃ**—ನಮ್ಮ ಶತ್ರುಗಳನ್ನು । **ಅರಾಚ್ಚಿತ್**—ದೂರದೇಶದಿಂದಲೇ । **ಯುಯೋತ**—ಬೇರೆಮಾಡಿರಿ. । (ಎಲೈ ಮರುತ್ತುಗಳೇ) **ಯೂಯಂ**—ನೀವು । **ನಃ**— ನಮ್ಮನ್ನು । **ಸದಾ** — ಯಾವಾಗಲೂ । **ಸ್ವಸ್ತಿಭಿಃ** — ಕಲ್ಯಾಣಗಳಿಂದ । **ಪಾತ**—ರಕ್ಷಿಸಿರಿ.

ಭಾವಾರ್ಥ

ಧನವಂತರಾದ ಮರುತ್ತುಗಳನ್ನುದ್ದೇಶಿಸಿ ಯಾವ ಸೂಕ್ತವು ನಿರ್ಮಿತವಾಗಿರುವುದೋ ಆ ಸೂಕ್ತವು ನಮ್ಮಿಂದ ಪರಿತವಾಗಿದೆ. ಮರುತ್ತುಗಳು ಈ ಸೂಕ್ತವನ್ನು ಸೇವಿಸಲಿ ಇಷ್ಟಾರ್ಥಪ್ರದರಾದ ಎಲೈ ಮರುತ್ತುಗಳೇ, ನಮ್ಮ ಶತ್ರುಗಳನ್ನು ದೂರದೇಶದಿಂದಲೇ ಬೇರೆ ಮಾಡಿರಿ ಎಲೈ ಮರುತ್ತುಗಳೇ, ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ.

English Translation

The pious praise of the opulent Maruts has been recited may the Maruts be gratified by this hymn remove far from us, showerers (of benefits), those who hate us and ever cherish us with blessings

---

ಐವತ್ತೊಂಭತ್ತನೆಯ ಸೂಕ್ತವು

ಸಾಯಣಭಾಷ್ಯಂ

ಯಂ ತ್ರ್ಯಧ್ವ ಇತಿ ದ್ವಾದಶರ್ಚಂ ಚತುರ್ಥಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಯಂ ತ್ರ್ಯಧ್ವೇ ದ್ವಾದಶ ತ್ರಿಪ್ರಗಾಥಾದಿ ನವಮ್ಯಾದ್ಯಾಸ್ತಿಸ್ರೋ ಗಾಯತ್ರ್ಯೃಕ್ಷಂತ್ಯಾನುಷ್ಟುಬ್ಗಾದ್ರೀ ಮೃತ್ಯುವಿನೋಚಿನೀತಿ । ಆದ್ಯಾತೃತೀಯಾಪಂಚಮ್ಯೋ ಬೃಹತ್ಯೋ ದ್ವಿತೀಯಾಚತುರ್ಥೀಷಷ್ಠ್ಯೃಕಾಃ ಸತೋಬೃಹತ್ಯಃ ಸಪ್ತಮ್ಯಷ್ಟಮ್ಯಾವನುಕ್ತತ್ರಾಷ್ಟ್ರಿಷ್ಟುಭೌ ನವಮೀಆದಶಮ್ಯೇಕಾದಶ್ಯೋ ಗಾಯತ್ರ್ಯೃಕಾಃ । ದ್ವಾದಶ್ಯನುಷ್ಟುಪ್ ಸಾ ಚ ರುದ್ರದೇವತಾಕಾ । ಶಿಷ್ಟಾ ಮಾರುತ್ಯಃ ॥ ಸೂಕ್ತವಿನಿಯೋಗೋ ಲೈಂಗಿಕಃ ॥

ಅನುವಾದವು—**ಯಂ ತ್ರ್ಯಧ್ವೇ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇವರಲ್ಲಿ ಹನ್ನೆರಡು ಋಕ್ಕುಗಳರುವುವು. **ಅನುಕ್ರಮಣಿಕೆಯಲ್ಲಿ—ಯಂ ತ್ರ್ಯಧ್ವೇ ದ್ವಾದಶ ತ್ರಿಪ್ರಗಾಥಾದಿ ನವಮ್ಯಾದ್ಯಾಸ್ತಿಸ್ರೋ ಗಾಯತ್ರ್ಯೃಕ್ಷಂತ್ಯಾನುಷ್ಟುಬ್ಗಾದ್ರೀ ಮೃತ್ಯುವಿನೋಚಿನೀ** ಎಂದು ಹೇಳಿರುವುದು. ಈ ಸೂಕ್ತದ ಮೊದಲಿನ ಮತ್ತು ಐದನೆಯ ಋಕ್ಕುಗಳು ಬೃಹತೀಛಂದಸ್ಸವು. ಎರಡು, ನಾಲ್ಕು, ಆರನೆಯ ಋಕ್ಕುಗಳು ಸತೋಬೃಹತೀಛಂದಸ್ಸವು. ಏಳು ಮತ್ತು ಎಂಟನೆಯ ಋಕ್ಕುಗಳು ತ್ರಿಷ್ಟುಪ್ಛಂದಸ್ಸವು.

ಒಂಭತ್ತು, ಹತ್ತು ಮತ್ತು ಹನ್ನೊಂದನೆಯ ಋಕ್ಕುಗಳು ಗಾಯತ್ರೀಛಂದಸ್ಸುವು. ಹನ್ನೆರಡನೆಯ ಋಕ್ಕು ಅನುಷ್ಟುಪ್ ಛಂದಸ್ಸುವು ಮತ್ತು ರುದ್ರದೇವತಾಕವು. ಉಳಿದ ಋಕ್ಕುಗಳು ಮರುದ್ದೇವತಾಕವು. ಸೂಕ್ತವಿನಿಯೋಗವು ಲೈಂಗಿಕವು.

ಸೂಕ್ತ—೨೯

ಮಂಡಲ—೭ ॥ ಅನುವಾಕ—೪ ॥ ಸೂಕ್ತ —೨೯ ॥
ಅಷ್ಟಕ—೫ ॥ ಅಧ್ಯಾಯ—೪ ॥ ವರ್ಗ—೨೯, ೩೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ವಸಿಷ್ಠಃ ॥
ದೇವತಾ— ೧-೧೧ ಮರುತಃ । ೧೨ ರುದ್ರಃ (ಮೃತ್ಯುವಿನೋಚಿನೇ ಋಕ್) ॥
ಛಂದಃ— ೧, ೩, ೫, ೬ಗಾತ್ರೀ । ೨, ೪, ೬, ೭ನಿಚೃದ್ಗಾಯತ್ರೀ ।
೮, ೯, ತ್ರಿಷ್ಟುಪ್ । ೯-೧೧ ಗಾಯತ್ರೀ । ೧೨ ಅನುಷ್ಟುಪ್ ॥

ಸಂಹಿತಾಸ್ವರಃ

ಯಂ ತ್ರಾಯಧ್ವ ಇದಮಿದಂ ದೇವಾಸೋ ಯಂ ಚ ನಯಥ ।
ತಸ್ಮಾ ಅಗ್ನೇ ವರುಣ ಮಿತ್ರಾರ್ಯಮನ್ಮರುತಃ ಶರ್ಮ ಯಚ್ಛತ ॥ ೧ ॥

ಪದಸ್ವರಃ

ಯಂ । ತ್ರಾಯಧ್ವೇ । ಇದಂ೪ಇದಂ । ದೇವಾಸಃ । ಯಂ । ಚ । ನಯಥ ।
ತಸ್ಮೈ । ಅಗ್ನೇ । ವರುಣ । ಮಿತ್ರ । ಅರ್ಯಮನ್ । ಮರುತಃ । ಶರ್ಮ । ಯಚ್ಛತ ॥ ೧ ॥

ಸಾಯಣಭಾಷ್ಯಂ

ಹೇ ದೇವಾಸೋ ದೇವಾಃ ಇದಮಿದಮಿತೋ ಭಯಹೇತೋರ್ಯಂ ಸ್ತೋತಾರಂ ತ್ರಾಯಧ್ವೇ ಪಾಲಯಧ್ವೇ । ಯಂ ಚ ಸ್ತೋತಾರಂ ನಯಥ ಸನ್ಮಾರ್ಗಂ ಪ್ರಾಪಯಥ । ಹೇ ಅಗ್ನೇ ವರುಣ ಮಿತ್ರಾರ್ಯಮನ್ ಹೇ ಮರುತ ಏವಂಭೂತಾ ಹೇ ದೇವಾಃ ತಸ್ಮೈ ಸ್ತೋತ್ರೇ ಶರ್ಮ ಸುಖಂ ಯಚ್ಛತ । ದತ್ತ ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ, । **ವರುಣ**—ಎಲೈ ವರುಣನೇ, । **ಮಿತ್ರ**—ಎಲೈ ಮಿತ್ರನೇ, । **ಅರ್ಯಮನ್**—ಎಲೈ ಅರ್ಯಮನೇ, । **ಮರುತಃ**—ಎಲೈ ಮರುತ್ತುಗಳೇ । **ದೇವಾಸಃ**—ಎಲೈ ಸಕಲ ದೇವತೆಗಳೇ, । **ಇದಮಿದಂ**—ಸಕಲ ಭಯಹೇತುಗಳಿಂದಲೂ । **ಯಂ**—ಯಾವ ಸ್ತುತಿಕರ್ತನನ್ನು । **ತ್ರಾಯಧ್ವೇ**—ರಕ್ಷಿಸುವಿರೋ । **ಯಂ ಚ**—ಯಾವನನ್ನು । **ನಯಥ**—ಸನ್ಮಾರ್ಗದಲ್ಲಿ ಒಯ್ಯುವಿರೋ । **ತಸ್ಮೈ**—ಅಂತಹ ಸ್ತುತಿಕರ್ತನಿಗೆ । **ಶರ್ಮ**—ಸುಖವನ್ನು । **ಯಚ್ಛತ**—ಒದಗಿಸಿಕೊಡಿರಿ.

ಭಾವಾರ್ಥ

ಎಲೈ ಅಗ್ನಿಯೇ, ಎಲೈ ವರುಣನೇ, ಎಲೈ ಆರ್ಯಮನೇ, ಎಲೈ ಮರುತ್ತುಗಳೇ, ಎಲೈ ಸಕಲ ದೇವತೆಗಳೇ, ಸಕಲ ಭಯಹೇತುಗಳಿಂದಲೂ ಯಾವ ಸ್ತುತಿಕರ್ತನನ್ನು ರಕ್ಷಿಸುವಿರೋ ಯಾವನನ್ನು ಸನ್ಮಾರ್ಗದಲ್ಲಿ ಒಯ್ಯುವಿರೋ ಅಂತಹ ಸ್ತುತಿಕರ್ತನಿಗೆ ಸುಖವನ್ನು ಒದಗಿಸಿಕೊಡಿರಿ

English Translation

Agni, Varuna, Mitra, Maruts, grant happiness, gods, to him whom you preserve from (the perils of) this (world), whom you guide here (to the paths of virtue).

ಸಂಹಿತಾಪಾಠಃ

ಯುಷ್ಮಾಕಂ ದೇವಾ ಅವಸಾಹನಿ ಪ್ರಿಯ ಈಜಾನಸ್ತರತಿ ದ್ವಿಷಃ ।
ಪ್ರ ಸ ಕ್ಷಯಂ ತಿರತೇ ವಿ ಮಹೀರಿಷೋ ಯೋ ವೋ ವರಾಯ ದಾಶತಿ ॥೨॥

ಪದಪಾಠಃ

ಯುಷ್ಮಾಕಂ । ದೇವಾಃ । ಅವಸಾ । ಅಹನಿ । ಪ್ರಿಯೇ । ಈಜಾನಃ । ತರತಿ । ದ್ವಿಷಃ ।
ಪ್ರ । ಸಃ । ಕ್ಷಯಂ । ತಿರತೇ । ವಿ । ಮಹೀಃ । ಇಷಃ । ಯಃ । ವಃ । ವರಾಯ । ದಾಶತಿ ॥ ೨ ॥

ಸಾಯಣಭಾಷ್ಯಂ

ಹೇ ದೇವಾಃ ಯುಷ್ಮಾಕಂ ಯುಷ್ಮದೀಯೇನಾವಸಾ ರಕ್ಷಣೇನ ಪ್ರಿಯೇಽಹನಿ ಸರ್ವೇಷಾಂ ದೇವಾನಾಂ ಪ್ರಿಯಭೂತೇ ಸುತ್ಯಾಭಿಧಾನೇ ದಿವಸ ಈಜಾನ ಇಷ್ಟವಾಞ್ಜನೋ ದ್ವಿಷಃ ಶತ್ರೂಂಸ್ತರತಿ । ಅಕ್ರಾಮತಿ । ಸ ಯಜಮಾನಃ ಕ್ಷಯಂ ಸ್ವಕೀಯಂ ನಿವಾಸಂ ಪ್ರ ತಿರತೇ । ಪ್ರವರ್ಧಯತಿ । ಯೋ ಯಜಮಾನೋ ವೋ ಯುಷ್ಮಭ್ಯಂ ಮಹೀರ್ಮಹಾಂತೀಷೋ ಹವಿರ್ಲಕ್ಷಣಾನ್ಯನ್ನಾನಿ ವರಾಯ ನಿವಾರಣಾಯ ಯೂಯಂ ನಾನ್ಯತ್ರ ಗಚ್ಛೇತಾಸ್ಮದೀಯಾನ್ಯೇವ ಹವೀಂಷಿ ಸ್ವೀಕುರುತೇತಿ ನಿರೋಧನಂ ಕರ್ತುಂ ವಿ ದಾಶತಿ ವಿಶೇಷೇಣ ಪ್ರದಾತಿ । ಅತ ಏವ ಸ ಸ್ವಕೀಯಂ ನಿವಾಸಂ ವರ್ಧಯತೀತ್ಯರ್ಥಃ ॥

ಪ್ರತಿಪದಾರ್ಥ

ದೇವಾಃ—ಎಲೈ ದೇವತೆಗಳೇ, । ಯುಷ್ಮಾಕಂ—ನಿಮ್ಮ । ಅವಸಾ—ರಕ್ಷಣೆಯಿಂದ ಕೂಡಿ । ಪ್ರಿಯೇ ಅಹನಿ—ನಿಮಗೆ ಪ್ರೀತಿಕರವಾದ ಯಜ್ಞದಿವಸಗಳಲ್ಲಿ । ಈಜಾನಃ—ನಿಮ್ಮನ್ನು ಪೂಜಿಸುವ ಯಜಮಾನನು । ದ್ವಿಷಃ—ಶತ್ರುಗಳನ್ನು । ತರತಿ—ಜಯಿಸುತ್ತಾನೆ. । ಯಃ—ಯಾವ ಯಜಮಾನನು । ವಃ—ನಿಮಗೆ । ಮಹೀಃ—ಅತ್ಯಧಿಕವಾದ । ಇಷಃ—ಹವಿಸ್ಸನ್ನು । ವರಾಯ—ನೀವು ಬೇರೊಬ್ಬ ಯಜಮಾನನಲ್ಲಿಗೆ ಹೋಗುವುದನ್ನು ತಪ್ಪಿಸಲು । ವಿ ದಾಶತಿ—ವಿಶೇಷರೀತಿಯಲ್ಲಿ ಅರ್ಪಿಸುವನೋ । ಸಃ—ಅದೇ ಯಜಮಾನನು । ಕ್ಷಯಂ—ತನ್ನ ನಿವಾಸಸ್ಥಾನವನ್ನು । ಪ್ರ ತಿರತೇ—ಬೆಳೆಸಿಕೊಳ್ಳುತ್ತಾನೆ.

ಭಾವಾರ್ಥ

ಎಲೈ ದೇವತೆಗಳೇ, ನಿಮ್ಮ ರಕ್ಷಣೆಯಿಂದ ಕೂಡಿ ನಿಮಗೆ ಪ್ರೀತಿಕರವಾದ ಯಜ್ಞದಿವಸಗಳಲ್ಲಿ ನಿಮ್ಮನ್ನು ಪೂಜಿಸುವ ಯಜಮಾನನು ಶತ್ರುಗಳನ್ನು ಜಯಿಸುತ್ತಾನೆ. ನೀವು ಬೇರೆ ಯಜಮಾನನಲ್ಲಿಗೆ ಹೋಗುವುದನ್ನು ತಪ್ಪಿಸಲು ಯಾರು ನಿಮಗೆ ಅತ್ಯಧಿಕವಾದ ಹವಿಸ್ಸನ್ನು ಅರ್ಪಿಸುವನೋ ಅದೇ ಯಜಮಾನನು ತನ್ನ ನಿವಾಸಸ್ಥಾನವನ್ನು ಬೆಳೆಸಿಕೊಳ್ಳುತ್ತಾನೆ.

English Translation

Through your protection, gods, the man who worships on an auspicious day overcomes his adversaries he who offers abundant (sacrificial) food to you to detain you (at his rite) enlarges his habitation.

ಸಂಹಿತಾಪಾಠಃ

ನಹಿ ವಶ್ಚರಮಂ ಚನ ವಸಿಷ್ಠಃ ಪರಿಮಂಸತೇ ।
ಅಸ್ಮಾಕಮದ್ಯ ಮರುತಃ ಸುತೇ ಸಚಾ ವಿಶ್ವೇ ಪಿಬತ ಕಾಮಿನಃ ॥ ೩ ॥

ಪದಪಾಠಃ

ನಹಿ । ವಃ । ಚರಮಂ । ಚನ । ವಸಿಷ್ಠಃ । ಪರಿಮಂಸತೇ ।
ಅಸ್ಮಾಕಂ । ಅದ್ಯ । ಮರುತಃ । ಸುತೇ । ಸಚಾ । ವಿಶ್ವೇ । ಪಿಬತ । ಕಾಮಿನಃ ॥ ೩ ॥

ಸಾಯಣಭಾಷ್ಯಂ

ವಸಿಷ್ಠ ಋಷಿರ್ವೋ ಯುಷ್ಮಾಕಂ ಮಧ್ಯೇ ಚರಮಂ ಚನಾವರಮಪಿ ನಹಿ ಪರಿಮಂಸತೇ । ವರ್ಜಯಿತ್ವಾ ನ ಸ್ತೌತಿ । ಕಿಂತು ಸರ್ವಾನೇವ ಯುಷ್ಮಾನ್ ಸ್ತೌತೀತ್ಯರ್ಥಃ । ಅದ್ಯಾಸ್ಮಿನ್ನೇಽಸ್ಮಾಕಮದೀಯೇ ಸುತೇ ಸೋಮೇಽಭಿಷುತೇ ಸತಿ ಹೇ ಮರುತಃ ಕಾಮಿನಃ ಸೋಮಂ ಕಾಮಯಮಾನಾ ವಿಶ್ವೇ ಯೂಯಂ ಸಚಾ ಸಂಗತ್ಯ ಪಿಬತ । ಪಾನಂ ಕುರುತ ॥

ಪ್ರತಿಪದಾರ್ಥ

ಕಾಮಿನಃ—ಸೋಮಾಪೇಕ್ಷಿಗಳಾದ । **ಮರುತಃ**—ಎಲೈ ಮರುತ್ತುಗಳೇ, । **ವಃ**—ನಿಮ್ಮಗಳ ನಡುವೆ । **ಚರಮಂ ಚನ**—ಅತ್ಯಂತ ಕನಿಷ್ಠನನ್ನು ಸಹ । **ವಸಿಷ್ಠಃ**—ವಸಿಷ್ಠನು । **ನಹಿ ಪರಿಮಂಸತೇ**—ತಿರಸ್ಕರಿಸುವುದಿಲ್ಲ. **ಅದ್ಯ**—ಈ ಯಾಗದಿನದಲ್ಲಿ । **ಅಸ್ಮಾಕಂ**—ನಮ್ಮಿಂದ । **ಸುತೇ**—ಸೋಮವು ಹಿಂಡಲ್ಪಟ್ಟು ಆರ್ಪಿತವಾಗುವಾಗ । **ವಿಶ್ವೇ**—ನೀವೆಲ್ಲರೂ । **ಸಚಾ**—ಒಟ್ಟಿಗೆ ಸೇರಿ । **ಪಿಬತ**—ಸೋಮಪಾನವನ್ನು ಮಾಡಿರಿ

ಭಾವಾರ್ಥ

ಸೋಮಾಪೇಕ್ಷಿಗಳಾದ ಎಲೈ ಮರುತ್ತುಗಳೇ, ನಿಮ್ಮ ನಡುವೆ ಅತ್ಯಂತ ಕನಿಷ್ಠನನ್ನು ಸಹ ವಸಿಷ್ಠನು ತಿರಸ್ಕರಿಸುವುದಿಲ್ಲ ಈ ಯಾಗದಿನದಲ್ಲಿ ನಮ್ಮಿಂದ ಸೋಮವು ಹಿಂಡಲ್ಪಟ್ಟು ಆರ್ಪಿತವಾಗುವಾಗ ನೀವೆಲ್ಲರೂ ಒಟ್ಟಿಗೆ ಸೇರಿ ಸೋಮಪಾನವನ್ನು ಮಾಡಿರಿ.

English Translation

Vashistha overlooks not the very lowest amongst you. Maruts, who are desirous (of the libation), do you all drink together to-day of our effused Soma juices.

संहितापाठः

नहि व ऊतिः पृतनासु मर्धति यस्मा अराध्वं नरः ।
अभि व आर्वत्सुमतिर्नवीयसी तूयं यात पिपीषवः ॥ ४ ॥

पदपाठः

नहि । वः । ऊतिः । पृतनासु । मर्धति । यस्मै । अराध्वं । नरः ।
अभि । वः । आ । आर्वत् । सुऽमतिः । नवीयसी । तूयं । यात । पिपीषवः ॥ ४ ॥

सायणभाष्यं

हे मरुतः वो युष्मदीयोतीः रक्षा पृतनासु युद्धेषु नहि मर्धति । न खलु हिनस्ति । शत्रुभिः कृतां हिंसां न सहते इत्यर्थः । हे नरो नेतारः यूयं यस्मै जनायाराध्वं कामानदधुं तं जनं न हिनस्तीति संबंधः । नवीयसी नवतरा वो युष्मदीया सुमतिरनुग्रहबुद्धिरभ्यावर्त्त । अस्मानभ्यावर्तताम् । तथा हे पिपीषवः सोमपानकामाः यूयमपि तूयं क्षिप्रं यात । आगच्छत ॥

प्रतिपदार्थ

नरः—नेतृगळाद एल्लै मरुत्तुगळे, । यस्मै—यावन यजमाननिगे । अराध्वं—नीवु इष्टार्थगळन्नु कोडुवीरो, अवनन्नु । वः—निम्म । ऊतिः—रक्षणेयु । पृतनासु—युद्धगळल्लि । नहि मर्धति—हिंसिसुवुदिल्ल । नवीयसी—नूतनवाद । वः—निम्म । सुमतिः—अनुग्रहबुद्धियु । अभ्यावर्त्त—नम्मल्लिगे तिरुगलि. । पिपीषवः—सोमपानवन्न बेक्षिसुव नीवु तूयं—क्षिप्रवागि । यात—नम्मल्लिगे बन्नि०.

भावार्थ

नेतृगळाद एल्लै मरुत्तुगळे, यावन यजमाननिगे नीवु इष्टार्थगळन्नु कोडुवीरो, अवनन्नु निम्म रक्षणेयु युद्धकालगळल्लि हिंसिसुवुदिल्ल. निम्म नूतनवाद (प्रशस्यवाद) अनुग्रह बुद्धियु नम्म कडेगे तिरुगलि. सोमपानवन्न बेक्षिसुव नीवू सह नम्मल्लिगे बन्नि०.

English Translation

Your protection, leaders (of rites), yields no detriment to him whom you defend in battles: may your latest favour return to us: come quickly, eager to drink the Soma.

संहितापाठः

ओ षु घृष्विराधसो यातनान्धांसि पीतये ।

इमा वो हव्या मरुतो ररे हि कं मो ष्वन्यत्र गंतन ॥

पदपाठः

ओ इति । सु । घृष्विराधसः । यातन । अन्धांसि । पीतये ।

इमा । वः । हव्या । मरुतः । ररे । हि । कं । मो इति । सु । अन्यत्र । गंतन ॥ ५ ॥

सायणभाष्यं

हे घृष्विराधसः परस्परघृष्वानि सुसंहतानि राधांसि येषां तेषां हे मरुतः यूयमन्धांसि सोमलक्षणानि हवींषि पीतये भक्षणार्थं सु सुष्ठ्वा यातन आयात । हि यस्मात्कारणात् हे मरुतः वो युष्मभ्यमेतानि हव्या हव्यानि हवींषि ररे अहं ददामि अतः कारणाद्यूयमन्यत्र मो षु गंतन । मा गच्छत ॥

प्रतिपदार्थ

घृष्विराधसः—ಶೇಖರಿಸಲ್ಪಟ್ಟಿರುವ ಧನವುಳ್ಳ । **मरुतः**—ಎಲೈ ಮರುತ್ತುಗಳೇ, । **हि**—ಯಾವ ನಿಮಿತ್ತವಾಗಿ । **वः**—ನಿಮ್ಮನ್ನುದ್ದೇಶಿಸಿ । **इमा हव्या**—ಈ ಹವಿಸ್ಸುಗಳನ್ನು । **ररे**—ನಾನು ಅರ್ಪಿಸುವೆನೋ ಆದುದರಿಂದಲೇ । **अन्धांसि**—ಈ ಹವಿಸ್ಸುಗಳನ್ನು । **पीतये**—ಸೇವಿಸಲು । **सु**—ಅತಿಶಯವಾಗಿ । **ओ यातन**—ಇಲ್ಲಿಗೆ ಬನ್ನಿರಿ । **अन्यत्र**—ಬೇರೆ ಕಡೆಗೆ । **मो षु गंतन**—ಖಂಡಿತ ಹೋಗಬೇಡಿರಿ.

ಭಾವಾರ್ಥ

ಧನವನ್ನು ಶೇಖರಿಸಿರುವ ಎಲೈ ಮರುತ್ತುಗಳೇ, ಯಾವ ನಿಮಿತ್ತವಾಗಿ ನಿಮ್ಮನ್ನುದ್ದೇಶಿಸಿ ಈ ಹವಿಸ್ಸುಗಳನ್ನು ನಾನು ಅರ್ಪಿಸುವೆನೋ, ಆ ನಿಮಿತ್ತವಾಗಿ ಈ ಅರ್ಪಿತವಾದ ಹವಿಸ್ಸುಗಳನ್ನು ಸೇವಿಸಲು ಇಲ್ಲಿಗೆ ಬನ್ನಿರಿ. ಬೇರೆ ಕಡೆಗೆ ಖಂಡಿತ ಹೋಗಬೇಡಿರಿ

English Translation

Do you whose riches are connected together come to partake of the (sacrificial) viands, for, Maruts, I offer to you these oblations, therefore go not away to any other (sacrifice).

संहितापाठः

आ च नो बर्हिः सदतावितां च नः स्वाहार्णे दातवे वसु ।

ಅಸ್ರೇಧಂತೋ ಮರುತಃ ಸೋಮ್ಯೇ ಮಧ್ವೌ ಸ್ವಾಹೇಹ ಮಾದಯಾಧ್ವೈ ॥

ಪದಪಾಠಃ

ಅ । ಚ । ನಃ । ಬರ್ಹಿಃ । ಸದತ । ಆವಿತ । ಚ । ನಃ । ಸ್ವಾಹಾಣಿ । ದಾತವೇ । ವಸು ।

ಅಸ್ರೇಧಂತಃ । ಮರುತಃ । ಸೋಮ್ಯೇ । ಮಧ್ವೌ । ಸ್ವಾಹಾ । ಇಹ । ಮಾದಯಾಧ್ವೈ ॥ ೬ ॥

ಸಾಯಣಭಾಷ್ಯಂ

ಹೇ ಮರುತಃ ಯೂಯಂ ನೋಽಸ್ಮದೀಯೇ ಬರ್ಹಿಃ ಕುಶಮಯೇ ಬರ್ಹಿಷ್ಯಾ ಸದತ ಚ । ಉಪವಿಶತ । ಸ್ವಾಹಾಣಿ ಸ್ಪೃಹಣೀಯಾನಿ ವಸು ವಸೂನಿ ಧನಾನಿ ದಾತವೇಽಸ್ಮಭ್ಯಂ ದಾತುಂ ನೋಽಸ್ಮಾನವಿತ ಚ । ಆಗಚ್ಛತ ಚ । ಹೇ ಮರುತಃ ಅಸ್ರೇಧಂತೋಽಹಿಂಸಂತೋ ಯೂಯಮಿಹಾಸ್ಮಿನ್ಯಜ್ಞೇ ಮಧ್ವೌ ಮದಕರೇ ಸೋಮ್ಯೇ ಸೋಮಾತ್ಮಕೇ ಹವಿಷಿ ಸ್ವಾಹಾ ಸ್ವಾಹಾಕಾರೇಣ ಮಾದಯಾಧ್ವೈ । ಮಾದಯಧ್ವಂ । ಮಾದ್ಯತ ॥

ಪ್ರತಿಪದಾರ್ಥ

(ಎಲೈ ಮರುತ್ತುಗಳೇ,) **ನಃ**—ನಮ್ಮ । **ಬರ್ಹಿಃ**—ದರ್ಭಾಸನದಮೇಲೆ । **ಆ ಸದತ**—ಕುಳಿತುಕೊಳ್ಳಿರಿ । **ಸ್ವಾಹಾಣಿ**—ಅತ್ಯಪೇಕ್ಷಿತಗಳಾದ । **ವಸು**—ಧನಗಳನ್ನು । **ದಾತವೇ**—ಕೊಡುವುದಕ್ಕೆ । **ನಃ**—ನಮಗಲ್ಲಿಗೆ । **ಆವಿತ ಚ**—ಬನ್ನಿರಿ । **ಮರುತಃ**—ಎಲೈ ಮರುತ್ತುಗಳೇ, । **ಅಸ್ರೇಧಂತಃ**—ಆಹಿಂಸಕರಾದ ನೀವು । **ಇಹ**—ನಮ್ಮ ಈ ಯಜ್ಞದಲ್ಲಿ । **ಸ್ವಾಹಾ** — ಸ್ವಾಹಾಕಾರಪೂರ್ವಕವಾಗಿ ಅರ್ಪಿತವಾಗುವ । **ಮಧ್ವೌ** — ಹರ್ಷಕಾರಕವಾದುದೂ । **ಸೋಮ್ಯೇ**—ಸೋಮಾತ್ಮಕವೂ ಆದ ಹವಿಸ್ಸಿನಲ್ಲಿ । **ಮಾದಯಾಧ್ವೈ**—ತೃಪ್ತಿಯನ್ನು ಅನುಭವಿಸಿರಿ.

ಭಾವಾರ್ಥ

ಎಲೈ ಮರುತ್ತುಗಳೇ, ನಮ್ಮ ದರ್ಭಾಸನದ ಮೇಲೆ ಕುಳಿತುಕೊಳ್ಳಿರಿ. ನಮಗೆ ಆತ್ಯಪೇಕ್ಷಿತಗಳಾದ ಧನಗಳನ್ನು ಕೊಡಲು ನಮ್ಮಲ್ಲಿಗೆ ಬನ್ನಿರಿ. ಎಲೈ ಮರುತ್ತುಗಳೇ, ಹಿಂಸಾರಹಿತರಾದ ನೀವು ನಮ್ಮ ಈ ಯಜ್ಞದಲ್ಲಿ ಹರ್ಷಕಾರಕವೂ, ಸೋಮಾತ್ಮಕವೂ ಆದ ಹವಿಸ್ಸಿನಲ್ಲಿ ಸ್ವಾಹಾಕಾರಪೂರ್ವಕವಾದ ತೃಪ್ತಿಯನ್ನು ಅನುಭವಿಸಿರಿ

English Translation

Sit down on our sacred grass : come to bestow upon us desirable riches : doing no harm, Maruts delight in the sweet Soma libation presented at this season.

ಸಂಹಿತಾಪಾಠಃ

ಸಸ್ವಶ್ಚಿದ್ಧಿ ತನ್ವೋಃ ಶುಂಭಮಾನಾ ಆ ಹಂಸಾಸೋ ನೀಲಪೃಷ್ಠಾ ಅಪಪ್ತನ್ ।

विश्वं शर्धोऽ अभितोऽ मा नि षेदत नरोऽ न रण्वाः सवनेऽ मदंतः ॥ ६ ॥

ಪದಪಾಠಃ

ससरिति । चित् । हि । तन्वः । शुंभमानाः । आ । हंसासः । नीलऽपृष्ठाः । अपप्तन् । विश्वं । शर्धः । अभितः । मा । नि । षेदत । नरः । न । रण्वाः । सवनेऽ । मदंतः ॥ ६ ॥

ಸಾಯಣಭಾಷ್ಯಂ

ससरंतेर्हिता मरुतस्तन्वः स्वकीयान्यंगानि शुंभमानाऽ आलंकरणैः शोभयंतोऽ मरुतोऽ नीलपृष्ठा असितवर्णा हंसासोऽ हंसा इवाऽपप्तन् । अपतंतु । आगच्छंतु । विश्वं शर्धोऽ व्याप्तोऽ मरुद्गणोऽ मा मामभितः समंतान्नि षेदत । निषीदतु । तत्र दृष्टांतः । सवनेऽस्मदीयेऽ यज्ञेऽ मदंतोऽ हृष्यंतोऽ रण्वा रमणीयाऽ नरोऽ न मनुष्या इव तद्वत् ॥

ಪ್ರತಿಪದಾರ್ಥ

ससरिः—ಗೂಢವಾದ ಸ್ವರೂಪವುಳ್ಳ ಮರುತ್ತುಗಳು । **तन्वः**—ತಮ್ಮ ಅಂಗಗಳನ್ನ । **शुंभमानाः**—ಅಲಂಕರಿಸಿಕೊಂಡು । **नीलपृष्ठाः**—ನೀಲವಾದ ಬೆನ್ನುಳ್ಳ । **हंसासः**—ಹಂಸಗಳಂತ । **आ अपप्तन्**—ಇಳಿದು ಬರಲಿ । **सवनेऽ**—ನಮ್ಮ ಯಜ್ಞದಲ್ಲಿ । **मदंतः**—ಹರ್ಷವನ್ನ ಹೊಂದುವವರೂ । **रण्वाः**—ಆಕರ್ಷಕವಾದ ರೂಪವುಳ್ಳವರೂ ಆದ । **नरोऽ न**—ಋತ್ವಿಗಾದಿಗಳಂತೆ । **विश्वं शर्धः**—ಸಕಲ ಮರುದ್ಗಣವೂ । **मा अभितः**—ನನ್ನ ಸುತ್ತಲೂ । **नि षेदत**—ಕುಳಿತುಕೊಳ್ಳಲಿ

ಭಾವಾರ್ಥ

ಹೊರಕ್ಕೆ ಪ್ರಕಾಶಿಸದೇ ಇರುವ ಸ್ವರೂಪವುಳ್ಳ ಮರುತ್ತುಗಳು ತಮ್ಮ ಅಂಗಗಳನ್ನ ಅಲಂಕರಿಸಿಕೊಂಡು ನೀಲವರ್ಣದ ಬೆನ್ನುಳ್ಳ ಹಂಸಗಳಂತೆ ಇಳಿದುಬರಲಿ ನಮ್ಮ ಯಜ್ಞದಲ್ಲಿ ಹರ್ಷವನ್ನ ಹೊಂದುವವರೂ, ಆಕರ್ಷಕವಾದ ರೂಪವುಳ್ಳವರೂ ಆದ ಋತ್ವಿಗಾದಿಗಳಂತೆ ಸಕಲ ಮರುದ್ಗಣವೂ ಸಹ ನನ್ನ ಸುತ್ತಲೂ ಕುಳಿತುಕೊಳ್ಳಲಿ

English Translation

May the Maruts yet unrevealed, decorating their persons, descend like black-backed swans . let the entire company gather round me like happy men rejoicing together at a solemn rite

ಸಂಹಿತಾಪಾಠಃ

यो नोऽ मरुतोऽ अभि दुर्हृणायुस्तिरश्चित्तानि वसवोऽ जिघांसति ।

ದ್ರುಹಃ ಪಾಶಾನ್ಪ್ರತಿ ಸ ಮುಚೀಷ್ಟ ತಪಿಷ್ಠೇನ ಹನ್ಮನಾ ಹಂತನಾ ತಂ ॥

ಪದಪಾಠಃ

ಯಃ । ನಃ । ಮರುತಃ । ಅಭಿ । ದುಃಹೃಣಾಯುಃ । ತಿರಃ । ಚಿತ್ತಾನಿ । ವಸವಃ । ಜಿಘಾಂಸತಿ ।

ದ್ರುಹಃ । ಪಾಶಾನ್ । ಪ್ರತಿ । ಸಃ । ಮುಚೀಷ್ಟ । ತಪಿಷ್ಠೇನ । ಹನ್ಮನಾ । ಹಂತನ । ತಂ ॥ ೪ ॥

ಸಾಯಣಭಾಷ್ಯಂ

ಸಾಕಮೇಧೇಷು ಮರುದ್ಭ್ಯಃ ಸಾಂತಪನೇಭ್ಯ ಇತ್ಯಸ್ಯ ಯೋ ನೋ ಮರುತ ಇತಿ ಪೂರ್ವಾನುವಾಕ್ಯಾ ಸಾಂತಪನಾ ಇದಮಿತಿ ಯಾಜ್ಯಾ । ತಥಾ ಚ ಸೂತ್ರಿತಂ । ಸಾಂತಪನಾ ಇದಂ ಹವಿರ್ಯೋ ನೋ ಮರುತೋ ಅಭಿದುರ್ಹೃಣಾಯುಃ । ಅ ೨-೧೪ । ಇತಿ ॥

ಹೇ ವಸವಃ ಪ್ರಶಸ್ಯಾ ಹೇ ಮರುತಃ ನೋಽಸ್ಮದೀಯಾನಿ ಚಿತ್ತಾನಿ ದುರ್ಹೃಣಾಯುರಶೋಭನಂ ಕ್ರುಧ್ಯಂಸ್ತಿರಃ ಸರ್ವೇಷ್ವಿರಸ್ಕೃತೋ ಯೋ ಜನೋಽಭಿ ಜಿಘಾಂಸತಿ ಅಭಿಮುಖ್ಯೇನ ಹಂತುಮಿಚ್ಛತಿ ಸ ಜನೋ ದ್ರುಹಃ ಪಾಪಾನಾಂ ದ್ರೋಗ್ಧುರ್ವರುಣಸ್ಯ ಪಾಶಾನಸ್ಮಾಸು ಪ್ರತಿ ಸ ಮುಚೀಷ್ಟ । ಬಧ್ನೀಯಾತ್। ಯೂಯಂ ತಂ ಜನಂ ತಪಿಷ್ಠೇನ ತಪ್ತೃತಮೇನ ಹನ್ಮನಾ ಹನನಸಾಧನೇನಾಯುಧೇನ ಹಂತನ । ಹತ । ಹಿಂಸ್ತ ॥

ಪ್ರತಿಪದಾರ್ಥ

ವಸವಃ—ಪ್ರಶಸ್ಯರಾದ । **ಮರುತಃ**—ಎಲೈ ಮರುತ್ತುಗಳೇ, । **ನಃ**—ನಮ್ಮ । **ಚಿತ್ತಾನಿ**—ಮನಸ್ಸುಗಳನ್ನು । **ದುರ್ಹೃಣಾಯುಃ**—ಕ್ರೂರವಾಗಿ ನೋಯಿಸುವವನೂ । **ಯಃ**—ಯಾರು । **ಅಭಿ ಜಿಘಾಂಸತಿ**—ನಮ್ಮನ್ನು ಕೊಲ್ಲಲಿಚ್ಛಿಸುವನೋ । **ಸಃ**—ಅವನೂ । **ದ್ರುಹಃ**—ಪಾಪಿಗಳಿಗೆ ಹಿಂಸಕನಾದ ವರುಣನ । **ಪಾಶಾನ್**—ಪಾಶಗಳನ್ನು । **ಪ್ರತಿ ಸ ಮುಚೀಷ್ಟ**—ನಮ್ಮಮೇಲೆ ಪ್ರಯೋಗಿಸಬಹುದು. । **ತಂ**—ಅಂತಹ ಜನವನ್ನು । **ತಪಿಷ್ಠೇನ**—ದಹಿಸತಕ್ಕ । **ಹನ್ಮನಾ**—ಆಯುಧಗಳಿಂದ । **ಹಂತನ**—ಕೊಲ್ಲಿರಿ.

ಭಾವಾರ್ಥ

ಪ್ರಶಸ್ಯರಾದ ಎಲೈ ಮರುತ್ತುಗಳೇ, ನಮ್ಮ ಮನಸ್ಸುಗಳನ್ನು ಯಾರು ಕ್ರೂರವಾಗಿ ನೋಯಿಸುವರೋ, ಯಾರು ನಮ್ಮನ್ನು ಕೊಲ್ಲಲಿಚ್ಛಿಸುವರೋ ಅಂತಹ ಜನರು ಪಾಪಿಗಳಿಗೆ ಹಿಂಸಕನಾದ ವರುಣನ ಪಾಶಗಳನ್ನು ನಮ್ಮ ಮೇಲೆ ಪ್ರಯೋಗಿಸಬಹುದು. ಅಂತಹ ಜನರನ್ನು ನಿಮ್ಮ ದಹನಾತ್ಮಕವಾದ ಆಯುಧಗಳಿಂದ ಕೊಲ್ಲಿರಿ.

English Translation

The man, Maruts, who wounds our feelings, he who rebuked by all, yet seeks, Vasus, to kill us, he would bind us in the bonds of (Varuna), the avenger (of iniquity), such a man do you destroy with a consuming fatal weapon.

ವಿಶೇಷವಿಷಯಗಳು

ಮರುದ್ಭ್ಯಃ ಸಾಂತಪನೇಭ್ಯಃ ಎಂಬ ದೇವತೆಗಳನ್ನುದ್ದೇಶಿಸಿ ಮಾಡುವ ಸಾಕಮೇಧಹೋಮಗಳಲ್ಲಿ **ಯೋ ನೋ ಮರುತಃ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿಯೂ, **ಸಾಂತಪನಾ ಇದಂ** ಎಂಬ ಮುಂದಿನ ಋಕ್ಕನ್ನು (೯ ನೇ ಋಕ್ಕನ್ನು) ಯಾಜ್ಯಾಮಂತ್ರವನ್ನಾಗಿಯೂ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಸಾಂತಪನಾ ಇದಂ ಹವಿರ್ಯೋ ನೋ ಮರುತೋ ಅಭಿ ದುರ್ಹೃಣಾಯುಃ** ಎಂಬ ಸೂತ್ರದಿಂದ (ಆ ೨ ೧೮) ವಿವೃತವಾಗಿರುವುದು.

ಸಂಹಿತಾಪಾಠಃ

ಸಾಂತಪನಾ ಇದಂ ಹವಿರ್ಮರುತಸ್ತಜ್ಜುಜುಷ್ಟನ ।

ಯುಷ್ಮಾಕೋತೀ ರಿಶಾದಸಃ ॥

ಪದಪಾಠಃ

ಸಾಂತಪನಾಃ । ಇದಂ । ಹವಿಃ । ಮರುತಃ । ತತ್ । ಜುಜುಷ್ಟನ ।

ಯುಷ್ಮಾಕ । ಊತೀ । ರಿಶಾದಸಃ ॥ ೯ ॥

ಸಾಯಣಭಾಷ್ಯಂ

ಸಾಂತಪನಾಃ ಶತ್ರೂಣಾಂ ಸಂತಾಪಕಾ ಹೇ ಮರುತಃ ಇದಂ ಪ್ರತ್ಯಕ್ಷೇಣೋಪಲಭ್ಯಮಾನಂ ಹವಿರ್ಯುಷ್ಮಭ್ಯಂ ಕಲ್ಪಿತಮಿತಿ ಶೇಷಃ । ಹೇ ರಿಶಾದಸೋ ರಿಶತಾಂ ಹಿಂಸತಾಮಸಿತಾರೋ ರಿಶಾನಾಮತ್ತಾರೋ ವಾ ಯೂಯಂ ಯುಷ್ಮಾಕ ಯುಷ್ಮಾಕಮೂತ್ಯಾ ರಕ್ಷಯಾ ತತ್ತಾದೃಶಂ ಹವಿರ್ಜುಜುಷ್ಟನ । ಸೇವಧ್ವಂ ॥

ಪ್ರತಿಪದಾರ್ಥ

ಸಾಂತಪನಾಃ—ಶತ್ರುಹಿಂಸಕರಾದ । **ಮರುತಃ**—ಎಲೈ ಮರುತ್ತುಗಳೇ, । **ಇದಂ ಹವಿಃ**—ಈ ಹವಿಸ್ಸು ನಿಮ್ಮನ್ನುದ್ದೇಶಿಸಿ ಅರ್ಪಿತವಾಗಿದೆ. । **ರಿಶಾದಸಃ**—ಶತ್ರುಗಳನ್ನು ನಾಶಮಾಡುವ ನೀವು । **ಯುಷ್ಮಾಕಂ**—ನಿಮ್ಮ **ಊತೀ**—ರಕ್ಷಣೆಗಳೊಡನೆ ಕೂಡಿ । **ತತ್**—ಆ ಹವಿಸ್ಸನ್ನು । **ಜುಜುಷ್ಟನ**—ಸೇವಿಸಿರಿ

ಭಾವಾರ್ಥ

ಶತ್ರುಹಿಂಸಕರಾದ ಎಲೈ ಮರುತ್ತುಗಳೇ, ಈ ಹವಿಸ್ಸು ನಿಮ್ಮನ್ನುದ್ದೇಶಿಸಿ ಅರ್ಪಿತವಾಗಿದೆ ಶತ್ರುಗಳನ್ನು ನಾಶಮಾಡುವ ನೀವು ನಿಮ್ಮ ರಕ್ಷಣೆಗಳೊಡನೆ ಕೂಡಿ ಅದನ್ನು ಸೇವಿಸಿರಿ

English Translation

Maruts, destroyers of foes, this oblation is designed for you · do you, who are the devourers of enemies, (coming) with your protections, graciously accept it.

ಸಂಹಿತಾಪಾಠಃ

ಗೃಹಮೇಧಾಸ ಆ ಗತ ಮರುತ್ತೋ ಮಾಪ ಭೂತನ ।

ಯುಷ್ಮಾಕೋತೀ ಸುದಾನವಃ ॥ ೧೦ ॥

ಪದಪಾಠಃ

ಗೃಹಮೇಧಾಸಃ । ಆ । ಗತ । ಮರುತಃ । ಮಾ । ಅಪ । ಭೂತನ ।

ಯುಷ್ಮಾಕ । ಊತೀ । ಸುದಾನವಃ ॥ ೧೦ ॥

ಸಾಯಣಭಾಷ್ಯಂ

ಗೃಹಮೇಧಾಸ ಇತಿ ಗೃಹಮೇಧೀಯಸ್ಯ ಹವಿಷೋಽನುವಾಕ್ಯಾ । ಸೂತ್ರಿತಂ ಚ । ಗೃಹಮೇಧಾಸ ಆ ಗತ ಪ್ರ ಬುಧ್ನ್ಯಾ ವ ಈರತೇ ಮಹಾಂಸಿ । ಆ ೨-೧೮ । ಇತಿ ॥

ಗೃಹಮೇಧಾಸೋ ಗೃಹೇ ಕ್ರಿಯಮಾಣೋ ಯಜ್ಞೋ ಯೇಷಾಂ ತೇ ಸುದಾನವಃ ಶೋಭನದಾನಾ ಹೇ ಮರುತಃ ಯೂಯಂ ಯುಷ್ಮಾಕ ಯುಷ್ಮಾಕಮೂತ್ಯೋತ್ಯಾ ರಕ್ಷಣಯಾ ಯುಕ್ತಾ ಆ ಗತ । ಅಸ್ಮದೀಯಂ ಯಜ್ಞಂ ಪ್ರತ್ಯಾಗಚ್ಛತ । ಹೇ ಮರುತಃ ಮಾಪ ಭೂತನ । ಅಪಗತಾ ಮಾ ಭವತ ॥ ಭೂ ಪ್ರಾಪ್ತ್ಯಾವಿತಿ ಧಾತುಃ ॥

ಪ್ರತಿಪದಾರ್ಥ

ಗೃಹಮೇಧಾಸಃ—ಗೃಹದಲ್ಲಿ ಪೂಜೆಗೆ ಯೋಗ್ಯರೂ । **ಸುದಾನವಃ**—ಉತ್ತಮವಾದ ದಾನಿಗಳೂ ಆದ । **ಮರುತಃ**—ಎಲೈ ಮರುತ್ತುಗಳೇ, । **ಯುಷ್ಮಾಕಂ**—ನಿಮ್ಮ । **ಊತೀ**—ರಕ್ಷಣೆಗಳೊಡನೆ । **ಆ ಗತ**—ಬನ್ನಿರಿ. । **ಮಾಪ ಭೂತನ**—ನಮ್ಮನ್ನು ಬಿಟ್ಟು ಬೇರೆ ಕಡೆಗೆ ಹೋಗಬೇಡಿರಿ.

ಭಾವಾರ್ಥ

ಗೃಹದ ಪೂಜೆಗೆ ಉತ್ತಮವಾದ ಪಾತ್ರರೂ, ಉತ್ತಮವಾದ ದಾನಿಗಳೂ ಆದ ಎಲೈ ಮರುತ್ತುಗಳೇ, ನಿಮ್ಮ ರಕ್ಷಣೆಗಳೊಡನೆ ಬನ್ನಿರಿ ನಮ್ಮನ್ನು ಬಿಟ್ಟು ಬೇರೆ ಕಡೆಗೆ ಹೋಗಬೇಡಿರಿ.

English Translation

Objects of domestic worship, munificent Maruts, come with your protections go not away.

ವಿಶೇಷವಿಷಯಗಳು

ಗೃಹಮೇಧೀಯೇಷ್ಟಿಯಲ್ಲಿ **ಗೃಹಮೇಧಾಸಃ** ಎಂಬ ಈ ಋಕ್ಕನ್ನು ಹವಿಸ್ಸನ್ನು ಹೋಮಮಾಡುವಾಗ **ಅನುವಾಕ್ಯಾಮಂತ್ರವನ್ನಾಗಿ** ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಗೃಹಮೇಧಾಸ ಆಗತ ಪ್ರ ಬುಧ್ನ್ಯಾ ವ ಈರತೇ ಮಹಾಂಸಿ** ಎಂಬ ಸೂತ್ರದಿಂದ (ಆ. ೨-೧೮) ವಿನಿಯುಕ್ತವಾಗಿರುವುದು.

ಸಂಹಿತಾಪಾಠಃ

ಇಹೇಹ ವಃ ಸ್ವತವಸಃ ಕವಯಃ ಸೂರ್ಯತ್ವಚಃ ।

ಯಜ್ಞಂ ಮರುತ ಆ ವೃಣೇ ॥ ೧೧ ॥

ಪದಪಾಠಃ

ಇಹೇಇಹ । ವಃ । ಸ್ವತವಸಃ । ಕವಯಃ । ಸೂರ್ಯತ್ವಚಃ ।

ಯಜ್ಞಂ । ಮರುತಃ । ಆ । ವೃಣೇ ॥ ೧೧ ॥

ಸಾಯಣಭಾಷ್ಯಂ

ವೈಶ್ವದೇವೇ ಪರ್ವಣಿ ಮಾರುತಸ್ಯಾನುವಾಕ್ಯಾ ಇಹೇಹ ವಃ ಇತ್ಯೇಷಾ । ಸೂತ್ರಿತಂ ಚ । ಇಹೇಹ ವಃ ಸ್ವತವಸಃ ಪ್ರ ಚಿತ್ರಮುರ್ಕ್ಕಂ ಗೃಣತೇ ಶುಚಾಯವೇ । ಆ ೨-೧೬ । ಇತಿ ॥

ಹೇ ಸ್ವತವಸಃ ಸ್ವಾಯತ್ತಬಲಾಃ ಸ್ವಯಂ ಪ್ರವೃದ್ಧಾ ವಾ ಹೇ ಕವಯಃ ಕ್ರಾಂತದರ್ಶಿನಃ ಸೂರ್ಯತ್ವಚಃ ಸೂರ್ಯವರ್ಣಾ ಏವಂಭೂತಾ ಹೇ ಮರುತಃ ಯೂಯಮಿಹೇಹೈವಾಸ್ಮದೀಯಂ ಯಜ್ಞಮಾ ವೃಣೇ । ಆಭಜಾಮಿ । ಕಲ್ಪಯಾಮಿ ॥

ಪ್ರತಿಪದಾರ್ಥ

ಸ್ವತವಸಃ—ಸ್ವಯಂ ಸಂಪಾದಿತವಾದ ಶಕ್ತಿಯುಳ್ಳವರೂ । **ಕವಯಃ**—ಮೇಧಾವಿಗಳೂ । **ಸೂರ್ಯತ್ವಚಃ**—ಸೂರ್ಯನಂತೆ ಪ್ರಭಾಯುತರೂ ಆದ । **ಮರುತಃ**—ಎಲೈ ಮರುತ್ತುಗಳೇ, । **ವಃ**—ನಿಮ್ಮನ್ನು ದ್ವೇಷಿಸಿ ನೇರವೇರಿಸಿದ । **ಇಹೇಹ ಯಜ್ಞಂ**—ನಮ್ಮ ಈ ಯಜ್ಞಕ್ಕೆ ಮಾತ್ರ । **ಆ ವೃಣೇ**—ಪ್ರಾರ್ಥಿಸಿ ಕರೆಯುತ್ತೇನೆ

ಭಾವಾರ್ಥ

ಸ್ವಯಂ ಸಂಪಾದಿತವಾದ ಶಕ್ತಿಯುಳ್ಳವರೂ, ಮೇಧಾವಿಗಳೂ ಸೂರ್ಯನಂತೆ ಪ್ರಭಾಯುತರೂ ಆದ ಎಲೈ ಮರುತ್ತುಗಳೇ, ನಿಮ್ಮನ್ನು ದ್ವೇಷಿಸಿ ನೇರವೇರಿಸಿದ ಈ ಯಜ್ಞಕ್ಕೆ ನಿಮ್ಮನ್ನು ಕರೆಯುತ್ತೇನೆ

English Translation

Maruts of independant strength, who are far-seeing, glorious as the sun, come hither, come hither, I invoke you to the sacrifice.

ವಿಶೇಷವಿಷಯಗಳು

ವೈಶ್ವದೇವಪರ್ವದಲ್ಲಿ **ಇಹೇಹ ವಃ** ಎಂಬ ಈ ಋಕ್ಕನ್ನು ಮರುದ್ದೇವತೆಗಳನ್ನು ದ್ವೇಷಿಸಿ ಮಾಡುವ ಹೋಮದಲ್ಲಿ ಅನುವಾಕ್ಯಾ ಮಂತ್ರವನ್ನಾಗಿ ಪರಿಸರೇಕೆಂದು ಆಶ್ವಲಾಯನಶ್ರೌತಸೂತ್ರದ—**ಇಹೇಹ ವಃ ಸ್ವತವಸಃ ಪ್ರ ಚಿತ್ರಮುರ್ಕ್ಕಂ ಗೃಣತೇ ಶುಚಾಯ** ಎಂಬ ಸೂತ್ರದಿಂದ (ಆ ೨-೧೬) ವಿವೃತವಾಗಿರುವುದು

ಸಂಹಿತಾಪಾಠಃ

ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ।

ऊर्वारुकमिव बन्धनान्मृत्योर्मुक्षीय मामुतः ॥ ०३ ॥

पदपाठः

त्र्यंबकं । यजामहे । सुगंधिं । पुष्टिवर्धनं ।

ऊर्वारुकमिव । बन्धनान्मृत्योर्मुक्षीय । मामुतः ॥ ०३ ॥

सायणभाष्यं

अत्र शौनकः । त्रिरात्रं नियतोऽपोह्य शपथेत्थायसं चरुं । होत्राहुति-शतं पूर्णां जुहुयाच्छंसितव्रतः ॥ समुद्दिश्य महादेवं त्र्यंबकं त्र्यंबकेत्यृचा । एतत्पर्वशतं कृत्वा जीवेद्वर्षशतं सुधीः ॥ ऋग्वि. ३ ०३ । (त्र्यंबकाणां ब्रह्मविष्णु-रुद्राणामंबकं पितरं यजामहे इति शिष्यसमाहितोऽहं वसिष्ठो ब्रवीति । किंविशिष्ट-मित्यत आह । सुगंधिं प्रसारितपुण्यकीर्तिं । पुनः किं विशिष्टं । पुष्टिवर्धनं । जगद्बीजं उरुशक्तिमित्यर्थः । उपासकस्य वर्धनं । अणिमादिशक्तिवर्धनं । अतस्त्वत्प्रसादादेव मृत्योर्मरणात्संसारादाद्या मुक्षीय । नोचय । यथा बन्धनादुर्वारुकं कर्कट-टीफलं मुच्यते तद्वन्मरणात्संसारादाद्या नोचय । किं मर्यादीकृत्य । अमृतात् । सायुज्यतामोक्षपर्यंतमित्यर्थः । अथ तैत्तिरीयभाष्ये । तै. सं. ०-७-६-७ । शोभनः शरीरगंधः पुण्यगंधो वा यस्यासौ सुगंधिः । यथावृक्षस्य संपुष्टितस्य दूराद्गंधो वात्येवं पुण्यस्य कर्मणो दूराद्गंधो वातीति क्रतवः । पुष्टिं शरीरधनादिविषयां वर्धयतीति पुष्टिवर्धनः । तादृशं त्र्यंबकं यजामहे । पूजयामः । लोके यथोर्वारुकफलानि बन्धनाद्वृंताच्छ्वयेमेव मुच्यंते तद्वदहं त्र्यंबकप्रसादेन मृत्योर्मुक्षीय । नोचेनयुष्मो भूयासं । अमृताच्चिरजीवितात्स्वर्गादेर्वा मा मुक्षीय । चतुर्थपादार्थेमंत्रस्य तात्पर्यार्था-तिशयं दर्शयति । त्र्यंबकं यजामह इत्याह मृत्योर्मुक्षीय मामृतादिति वाक्यशेषदाहेति ॥)

प्रतिपदार्थ

सुगंधिं—पुण्यकर्मरूपवाद सुगंधवुळ्ळवनूं । पुष्टिवर्धनं—जगत्पुष्टियेन्नु अधिक गोळिसुवनवनूं आद । त्र्यंबकं—त्रिमूर्तिगळिगूं पितृवाद परतत्त्ववन्नु । (जगदीश्वरनन्नु) यजामहे—पूजिसुत्तेनॆ. । बन्धनात्—तन्न कॊट्टिनिंद । उर्वारुकमिव—उर्वारुक फलवु कळचि बिद्दु होगुवंते । मृत्योः—मरणधर्मवुळ्ळ संसारदिंद । मुक्षीय—नावु बिडु गडॆयन्नु हॊंदुवंते अवनु अनुग्रहिसलि. । मा अमृतात्—मुक्तियिंद नावु दूरवागिरुवंते आगदिरलि.

ಭಾವಾರ್ಥ

ಪುಣ್ಯಕರ್ಮರೂಪವಾದ ಸುಗಂಧವುಳ್ಳವನೂ, ಜಗತ್ಪುಷ್ಟಿಯನ್ನು ಅಧಿಕಗೊಳಿಸುವವನೂ, ತ್ರಿಮೂರ್ತಿಗಳಿಗೂ ಪಿತೃವೂ ಆದ ಪರಮೇಶ್ವರನನ್ನು ನಾವು ಪೂಜಿಸುತ್ತೇವೆ ತನ್ನ ಕೊಟ್ಟಿನಿಂದ ಉರ್ವಾರುಕಫಲವು ಕಳಚಿ ಬಿದ್ದುಹೋಗುವಂತೆ, ಮರಣಧರ್ಮವುಳ್ಳ ಸಂಸಾರದಿಂದ ನಾವು ಬಿಡುಗಡೆಯನ್ನು ಹೊಂದುವಂತಾಗಲಿ ಆದರೆ ಮುಕ್ತಿಯಿಂದ ನಾವು ದೂರವಿರದಂತೆ ಆಗಲಿ.

English Translation

We worship Tryambaka, whose fame is fragrant, the augmenter of increase may I be liberated from death, and, like the Urvaruka from its stalk, but not to immortality [let us worship Tryambaka, whose fame is fragrant, the augmrnter of increase may I be liberated from death like the Urvaruka from its stalk, but not into immortality]

ವಿಶೇಷವಿಷಯಗಳು

ಈ ಋಕ್ಕಿನ ವಿಷಯದಲ್ಲಿ ಶೌನಕಮಹರ್ಷಿಯು ತಮ್ಮ ಋಗ್ವಿಧಾನವೆಂಬ ಗ್ರಂಥದಲ್ಲಿ ಈರೀತಿ ಹೇಳಿರುವರು—

ತ್ರಿರಾತ್ರಂ ನಿಯತೋಪೋಷ್ಯ ಶ್ರಪಯೇತ್ಪಾಯಸಂ ಚರುಂ ।
ತೇನಾಹುತಿಶತಂ ಪೂರ್ಣಂ ಜುಹುಯಾಚ್ಛಂಸಿತವ್ರತಃ ॥
ಸಮುದ್ದಿಶ್ಯ ಮಹಾದೇವಂ ತ್ರ್ಯಂಬಕಂ ತ್ರ್ಯಂಬಕೇತ್ಯೃಚಾ ।
ಏತತ್ಪರ್ವಶತಂ ಕೃತ್ವಾ ಜೀವೇದ್ವರ್ಷಶತಂ ಸುಖೀ ॥

(ಋಗ್ವಿಧಾನ ೨-೩೧ಳ, ೩೧೫)

ಮೂರು ರಾತ್ರಿಗಳು ಎಂದರೆ ಮೂರು ದಿನಗಳು ಪೂರ್ತಿ ಉಪವಾಸಮಾಡಿ ಮೂರನೆಯ ದಿವಸ ಪಾಯಸವನ್ನೂ ಚರು (ಅನ್ನ)ವನ್ನೂ ಪಕ್ವಮಾಡಿ ಆ ದ್ರವ್ಯಗಳಿಂದ ನೂರು ಹೋಮಗಳನ್ನು ವಿಧಿವತ್ತಾಗಿ ಮಾಡಬೇಕು. ಮಹಾದೇವನಾದ ತ್ರ್ಯಂಬಕದೇವತೆಯನ್ನು **ತ್ರ್ಯಂಬಕಂ ಯಜಾಮಹೇ** ಎಂಬ ಈ ಋಕ್ಕಿನಿಂದ ಮೇಲೆ ಹೇಳಿದಂತೆ ನೂರು ಪರ್ವಕಾಲಗಳಲ್ಲಿ ಹೋಮನನ್ನು ಮಾಡಿದಲ್ಲಿ ಆ ಪುರುಷನು ನೂರು ವರ್ಷಗಳನಂತರ ಸುಖವಾಗಿ ಜೀವಿಸಿರುವನು ಎಂದುಹೇಳಿದಾರೆ.

ತ್ರ್ಯಂಬಕಂ—**ತ್ರಯಾಣಾಂ ಬ್ರಹ್ಮವಿಷ್ಣುರುದ್ರಾಣಾಮಂಬಕಂ ಪಿತರಂ** । ತ್ರ್ಯಂಬಕನೆಂದರೆ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳಿಗೂ ತಂದೆ ಅಥವಾ ಪಾಲಕನಾದ ಸರ್ವೇಶ್ವರನೆಂದರ್ಥವು.

ಸುಗಂಧಿಂ—**ಪ್ರಸಾರಿತಪುಣ್ಯಕೀರ್ತಿಂ** । ಈ ದೇವನ ಕೀರ್ತಿಯು ಸರ್ವತ್ರ ಹರಡಿರುವುದು.

ಪುಷ್ಟಿವರ್ಧನಂ— ಜಗತ್ತಿಗೆ ಬೀಜಸ್ವರೂಪನು ಮತ್ತು ಈ ದೇವನ ಶಕ್ತಿಯು ಅಪರಿಮಿತವಾದುದು ಅಥವಾ ತನ್ನನ್ನು ಉಪಾಸನೆಮಾಡುವವನನ್ನು ಧನಧಾನ್ಯಾದಿಗಳಿಂದ ಅಭಿವೃದ್ಧಿಯನ್ನೈದುವಂತೆ ಮಾಡುವವನು ಅಥವಾ ಅಣಿಮಾದಿಶಕ್ತಿಗಳ ವರ್ಧಕನು.

ಉರ್ವಾರುಕಮಿವ ಬಂಧನಾತ್—ಉರ್ವಾರುಕಫಲವು ಹಣ್ಣಾದಮೇಲೆ ಯಾವರೀತಿ ತೊಟ್ಟಿನಿಂದ ಬೇಗನೆ ಬಿಡಲ್ಪಡುವುದೋ ಎಂದರೆ ಕಳಚಿಬೀಳುವುದೋ ಆದರಂತೆ ಸಂಸಾರಬಂಧನದಿಂದ ನನ್ನನ್ನು ಮುಕ್ತನನ್ನಾಗಿ ಮಾಡು

ಯಜುರ್ವೇದದ ತೈತ್ತಿರೀಯಸಂಹಿತೆಯಲ್ಲಿಯೂ (ತೈ ಸಂ. ೧ ೪-೪-೪) ಈ ಮಂತ್ರವು ಪಠಿತವಾಗಿರುವುದರಿಂದ ಅಲ್ಲಿ ಈ ಮಂತ್ರದ ಅರ್ಥವಿವರಣೆಯು ಈರೀತಿ ಇರುವುದು—

ಸುಗಂಧಿಂ—ಶೋಭನಃ ಶರೀರಗಂಧಃ ಪುಣ್ಯಗಂಧೋ ವಾ ಯಸ್ಯಾಸೌ ಸುಗಂಧಿಃ । ಯಥಾ ವೃಕ್ಷಸ್ಯ ಸಂಪುಷ್ಪಿತಸ್ಯ ದೂರಾದ್ಗಂಧೋ ವಾತ್ಯೇವಂ ಪುಣ್ಯಸ್ಯ ಕರ್ಮಣೋ ದೂರಾದ್ಗಂಧೋ ವಾತಿ (ತೈ. ಆ. ೧೦-೯) ಇತಿ ಶ್ರುತೇಃ ॥ ಉತ್ತಮವಾದ ಶರೀರಗಂಧ ಎಂದರೆ ವಾಸನೆಯುಳ್ಳವನು ಘಮಘಮಿಸುತ್ತಿರುವ ಸುವಾಸನೆಯಿಂದ ಕೂಡಿದವನು ಅಥವಾ ಚೆನ್ನಾಗಿ ಹೂವುಗಳನ್ನು ಬಿಟ್ಟಿರುವ ವೃಕ್ಷವು ತನ್ನ ಹೂವುಗಳ ಗಂಧವನ್ನು ಎಂದರೆ ವಾಸನೆಯನ್ನು ವಾಯುವಿನಮೂಲಕ ಒಹಳದೂರ ಬೀರುವಂತೆ ಉತ್ತಮಕೆಲಸಗಳನ್ನು ಮಾಡಿದ ಪುರುಷನ ಕೀರ್ತಿಯು ಬಹುದೂರ ವ್ಯಾಪಿಸುವುದು. ಆದ್ದರಿಂದ ಜಗನ್ನಿಯಾಮಕನೂ, ಸೃಷ್ಟಿಕರ್ತನೂ ಆದ ಸರ್ವೇಶ್ವರನ ಕೀರ್ತಿಯು ಅಥವಾ ಶಕ್ತಿಸಾಮರ್ಥ್ಯಗಳು ಎಲ್ಲೆಲ್ಲೆಯೂ ಹರಡಿ ಪ್ರಸಿದ್ಧವಾಗಿವೆ ಎಂದಭಿಪ್ರಾಯವು.

ಪುಷ್ಟಿವರ್ಧನಂ—ಪುಷ್ಟಿಂ ಶರೀರಧನಾದಿವಿಷಯಾಂ ವರ್ಧಯತೀತಿ ಪುಷ್ಟಿವರ್ಧನಃ । ತಾದೃಶಂ ತ್ರ್ಯಂಬಕಂ ಯಜಾಮಹೇ ಪೂಜಯಾಮಃ । ಶರೀರಕ್ಕೆ ಬೇಕಾದ ಆಹಾರಾದಿಪುಷ್ಟಿಯನ್ನೂ ಧನಸಂಪತ್ತನ್ನೂ ವೃದ್ಧಿಪಡಿಸುವವನಾದ್ದರಿಂದ ಈ ದೇವನಿಗೆ ಪುಷ್ಟಿವರ್ಧನನೆಂದು ವಿಶೇಷಣವಿದೆ ಇಂತಹ ಗುಣವಿಶಿಷ್ಟವಾದ ತ್ರ್ಯಂಬಕನಾಮಕ ಸರ್ವೇಶ್ವರನನ್ನು ಪೂಜಿಸೋಣ

ಲೋಕೇ ಯಥೋರ್ವಾರುಕಫಲಾನಿ ಬಂಧನಾದ್ಬೃಂತಾತ್ ಸ್ವಯಮೇವ ಮುಚ್ಯಂತೇ ತದ್ವದಹಂ ತ್ರ್ಯಂಬಕಪ್ರಸಾದೇನ ಮೃತ್ಯೋರ್ಮುಕ್ಷೀಯ ಮೋಚನಯುಕ್ತೋ ಭೂಯಾಸಂ । ಅಮೃತಾಚ್ಚಿರ ಜೀವಿತಾತ್ ಸ್ವರ್ಗಾದೇರ್ವಾ ಮಾ ಮುಕ್ಷೀಯ । ಲೋಕವ್ಯವಹಾರದಲ್ಲಿ ನಾವು—ಉರ್ವಾರುಕಫಲವು ಹಣ್ಣಾದೊಡನೆಯೇ ತಾನಾಗಿ ತೊಟ್ಟಿನಿಂದ ಕಳಚಿ ಬಿದ್ದುಹೋಗುವುದನ್ನು ನೋಡುತ್ತಿರುವೆವು ಅದರಂತೆ ನಮ್ಮ ಸಂಸಾರ ಬಂಧವು ಬಿಡುಗಡೆಯಾಗಿ ಮೃತ್ಯುವಿನಿಂದ ಪಾರಾಗಿ ಬಹುಕಾಲ ಸ್ವರ್ಗಾದಿಗಳಲ್ಲಿ ಇರುವಂತಾಗಲಿ ಮತ್ತು ಅಲ್ಲಿಂದ ನಾವು ಬಿಟ್ಟು ಹೋಗದಂತಾಗಲಿ ಎಂದು ಹೇಳಿ, ಇದನ್ನು ಸಮರ್ಥಿಸುವ—**ತ್ರ್ಯಂಬಕಂ ಯಜಾಮಹ ಇತ್ಯಾಹ । ಮೃತ್ಯೋರ್ಮುಕ್ಷೀಯ ಮಾಮೃತಾದಿತಿ ವಾನೈತದಾಹ ।** (ತೈ ಬ್ರಾ (೧-೬-೧೦ ೫) ಎಂಬ ಬ್ರಾಹ್ಮಣವಾಕ್ಯಗಳನ್ನು ಉದಾಹರಿಸಿರುವರು.

ವೇದಾರ್ಥಸ್ಯ ಪ್ರಕಾಶೇನ ತಮೋಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕಭೂಪಾಲ ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಪಂಚಮಾಷ್ಟಕೇ ಚತುರ್ಥೋಽಧ್ಯಾಯಃ

॥ ಓಂ ತತ್ಸತ್ ॥

ಇಲ್ಲಿಗೆ ಸಾಯಣಭಾಷ್ಯಸಹಿತವೂ ಕರ್ಣಾಟಕಭಾಷಾನುವಾದಯುತವೂ ಆದ ಋಗ್ವೇದಸಂಹಿತೆಯ ಐದನೆಯ ಅಷ್ಟಕದಲ್ಲಿ ನಾಲ್ಕನೆಯ ಅಧ್ಯಾಯವು ಸಮಾಪ್ತವಾದುದು.



॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಣಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥
ವ್ಯಾಖ್ಯಾಯ ನಿಗಮಾಖ್ಯಜ್ಞಃ ಪಂಚಮಸ್ಯ ಚತುರ್ಥಕಂ ।
ಅಧ್ಯಾಯಂ ಸಾಯಣಾಚಾರ್ಯಃ ಪುಂಚಮಂ ವ್ಯಾಕರೋತ್ಕಥ ॥

ಸಾಯಣಭಾಷ್ಯ ಸಹಿತಾ

ಋಗ್ವೇದ ಸಂಹಿತಾ

(ಕರ್ನಾಟಕ ಭಾಷಾರ್ಥಾನುವಾದ ವಿವರಣೆ ಸಹಿತವಾಗಿ)

॥ ಪಂಚಮಾಷ್ಟಕೇ ಪಂಚಮೋಽಧ್ಯಾಯಃ ॥

ಐದನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು

॥ ಸಪ್ತಮ ಮಂಡಲಂ ॥

ಏಳನೆಯ ಮಂಡಲದ ಸೂಕ್ತಗಳು

ಅರವತ್ತನೆಯ ಸೂಕ್ತವು

ಪೀಠಿಕೆ

ಸೂರ್ಯದೇವತೆಯ ವಿಷಯ

ಈ ಸೂಕ್ತದಲ್ಲಿಯೂ ಇದರ ಮುಂದಿನ ಆರು ಸೂಕ್ತಗಳಲ್ಲಿಯೂ ಪ್ರಾರಂಭದಲ್ಲಿ ಸೂರ್ಯನ ಸ್ತುತಿಯೂ ಅನಂತರ ಮಿತ್ರಾವರುಣರ ಸ್ತುತಿಯೂ ಇರುವುದು ಆದ್ದರಿಂದ ಸೂರ್ಯನ ವಿಷಯವನ್ನು ಇಲ್ಲಿ ಸೂಕ್ಷ್ಮವಾಗಿ ವಿವರಿಸಿ ಅನಂತರ ಮಿತ್ರಾವರುಣರ ವಿಷಯವನ್ನು ವಿಮರ್ಶೆ ಮಾಡುವೆವು

ಋಗ್ವೇದದಲ್ಲಿಯೂ ಯಜುರ್ವೇದದಲ್ಲಿಯೂ ಅನೇಕಕಡೆ ಹಗಲಿಗೆ ಮಿತ್ರನು ಅಧಿಪತಿಯೆಂದೂ, ರಾತ್ರಿಗೆ ವರುಣನು ಅಧಿಪತಿಯೆಂದೂ ಹೇಳಿದೆ. **ಮೈತ್ರಂ ವಾ ಅಹಃ । ವಾರುಣೀ ರಾತ್ರಿಃ** ॥ ಇತ್ಯಾದಿ ಅನೇಕ ಶ್ರುತವಾಕ್ಯೋದಾಹರಣೆಗಳನ್ನು ಕೊಡಬಹುದು. ಆದರೆ ಸೂರ್ಯನಿಗೂ ಮಿತ್ರಾವರುಣರಿಗೂ ಏನು ಸಂಬಂಧ ಎಂದರೆ

ನಮ್ಮ ಕಣ್ಣುಗಳಿಗೆ ಕಾಣಿಸುತ್ತಿರುವ ಈ ಸೂರ್ಯನು ಮಿತ್ರನ ಮತ್ತು ವರುಣನ ಕಣ್ಣುಗಳಂತಿರುವವನು ಎಂದು ಹೇಳಿದೆ.— **ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ** (ಋ. ಸಂ. ೧-೧೧೫ ೧) **ಚಕ್ಷುರ್ಮಿತ್ರಸ್ಯ ವರುಣಸ್ಯ** (ಋ ಸಂ ೭-೬೫ ೧) **ನನೋ ಮಿತ್ರಸ್ಯ ವರುಣಸ್ಯ ಚಕ್ಷಸೇ** (ಋ ಸಂ ೧೦-೩೭-೧) ಇತ್ಯಾದ್ಯನೇಕ ಋಕ್ಕುಗಳಲ್ಲಿ ಸೂರ್ಯನು ಮಿತ್ರ ಮತ್ತು ವರುಣರ ಚಕ್ಷುಸ್ಸೆಂದು ಪ್ರಸಿದ್ಧನಾಗಿದ್ದಾನೆ.

ಸೂರ್ಯನು ದ್ಯುಲೋಕದ ಪುತ್ರನು (**ದಿವಸ್ಪುತ್ರಾಯ ಸೂರ್ಯಾಯ ಶಂಸತ.** ೧೦-೩೭-೧) ಕೆಲವೆಡೆ ಸೂರ್ಯನು ಅದಿತಿಯ ಪುತ್ರನೆಂದೂ ಪರಿಗಣಿತನಾಗಿದಾನೆ. (**ಸೂರ್ಯಮಾದಿತೇಯಂ** ೧೦-೪೮-೧) ಸೂರ್ಯನು ರಥದ ಮೇಲೆ ಕುಳಿತಿರುತ್ತಾನೆ ಅವನ ರಥವನ್ನು ಒಂದು ಅಥವಾ ಅನೇಕ ಕುದುರೆಗಳು ಎಳೆಯುತ್ತವೆ. ಸಾಧಾರಣವಾಗಿ ಏಳು ಕುದುರೆಗಳು ಅವನ ರಥವನ್ನು ವಹಿಸುತ್ತವೆ- (**ಸಪ್ತಾಶ್ವಾ ಹರಿತಃ ಸೂರ್ಯಸ್ಯ** ೧೦೫೫ ೫, ೪) ಸೂರ್ಯನು ಜಗತ್ತಿಗೆಲ್ಲಾ ಆತ್ಮನು ಎಂದರೆ ಪ್ರಾಣಿಗಳ ಶರೀರದಲ್ಲಿ ಅಂತರಾತ್ಮನಾಗಿ ಅವರುಗಳ ಚಲನವಲನಗಳನ್ನು ನಿಯಮಿಸುತ್ತಾನೆ. ಜಡವಸ್ತುಗಳ ಚಲನವಲನಕ್ಕು ಸೂರ್ಯನೇ ಕಾರಣವು (**ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ** ೧-೧೧೫-೧) ಸೂರ್ಯನ ಶಕ್ತಿಯಿಂದ ಪ್ರಚೋದಿತರಾಗಿ ಜನರು ತಮ್ಮ ತಮ್ಮ ಕೆಲಸಕಾರ್ಯಗಳನ್ನು ಮಾಡಲು ಸಮರ್ಥರಾಗುತ್ತಾರೆ (**ನೂನಂ ಜನಾಃ ಸೂರ್ಯೇಣ ಪ್ರಸೂತಾ ಅಯನ್ನರ್ಥಾಂಸಿ ಕೃಣವನ್ನಪಾಂಸಿ** ೭-೬೫-೪) ಅವನು ಬಹುದೂರದವರಿಗೂ ಎಲ್ಲವನ್ನು ನೋಡಬಲ್ಲನು, ಮನುಷ್ಯರು ಮಾಡುವ ಒಳ್ಳೆಯ ಮತ್ತು ಕೆಟ್ಟ ಕೆಲಸಗಳೆಲ್ಲವನ್ನೂ ನೋಡುತ್ತಾನೆ. (೧-೫೦-೨, ೭; ೭-೬೧-೧, ೭-೬೫-೧,೪ ಇತ್ಯಾದಿ)

ಯಾಸ್ಕರು ಸೂರ್ಯಶಬ್ದಾರ್ಥವನ್ನು ವಿವರಿಸುತ್ತಾ—

ಸೂರ್ಯಃ ಸರ್ತೇರ್ವಾ, ಸುವತೇರ್ವಾ, ಸ್ವೀರ್ಯತೇರ್ವಾ ॥

(ನಿ. ೧೨-೧೪)

ಎಂದು ಹೇಳಿದಾರೆ ಎಂದರೆ ಸೂರ್ಯಶಬ್ದವು ಸೃ—ಸಂಚರಿಸು ಎಂಬ ಧಾತುವಿನಿಂದಾಗಲಿ, ಷೂಙ್—ಉತ್ಪತ್ತಿ ಮಾಡು ಎಂಬ ಧಾತುವಿನಿಂದಾಗಲಿ, ಪ್ರೇರಿಸು ಎಂಬರ್ಥವುಳ್ಳ ಸು + ಈರಯತಿ ಎಂಬ ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು ಎಂದು ಹೇಳಿದಾರೆ ಸೂರ್ಯನು ಪ್ರಾತಃಕಾಲದಲ್ಲಿ ಪೂರ್ವದಿಕ್ಕಿನಲ್ಲಿ ಉದಯಿಸಿ ಅಂತರಿಕ್ಷದಲ್ಲಿ ಎಡಬಿಡದೆ ಸಂಚರಿಸುತ್ತಾ ಸಾಯಂಕಾಲದ ಹೊತ್ತಿಗೆ ಪಶ್ಚಿಮದಿಕ್ಕನ್ನುಸೇರಿ ಅಸ್ತನಾಗುವನು. ಆದ್ದರಿಂದ ಸೂರ್ಯನ ಸಂಚಾರವು ಅವಿಚ್ಛಿನ್ನವಾಗಿರುವುದು ಮತ್ತು ಸೂರ್ಯನ ಶಕ್ತಿಯಿಂದಲೇ ಪ್ರಪಂಚದಲ್ಲಿರುವ ಸಮಸ್ತ ಪ್ರಾಣಿಗಳೂ, ಸಸ್ಯಾದಿಗಳೂ ಉತ್ಪತ್ತಿಯಾಗುವವು. ಸೂರ್ಯನ ಕಿರಣಗಳಿಂದ ತಪ್ತವಾದ ವಾಯುವು ತನ್ನ ಜಲನವಲನಗಳಿಂದ ಪ್ರಪಂಚದಲ್ಲಿ ನಾನಾವಿಧ ನೃತ್ಯಾಸಗಳಿಗೆ ಕಾರಣವಾಗಿರುವುದು. ಸೂರ್ಯನ ಕಿರಣಗಳ ಶಾಖದಿಂದಲೇ ಸಮುದ್ರಾದಿ ಜಲಾಶಯಗಳ ನೀರು ಆವಿಯಾಗಿ ಅಂತರಿಕ್ಷದಲ್ಲಿ ಮೇಘರೂಪದಿಂದ ವೃಷ್ಟಿಯನ್ನು ಸುರಿಸಿ ಸಸ್ಯಾದಿಗಳ ಉತ್ಪತ್ತಿಗೆ ಕಾರಣವಾಗಿರುವುದು. ಸಸ್ಯಾದಿಗಳಿಂದ ಪ್ರಾಣಿಗಳೂ ಮನುಷ್ಯರೂ ಉತ್ಪನ್ನರಾಗುವರು. (**ಆದ್ಭ್ಯ ಓಷಧಯಃ। ಓಷಧೀಭ್ಯೋಽನ್ನಂ । ಅನ್ನಾತ್ಪುರುಷಃ ॥** ತೈ ಉ ೨-೧-೧) ಜಡವಸ್ತುಗಳ ಚಲನವಲನಗಳೂ ಕೂಡ ಸೂರ್ಯನ ಶಾಖದಿಂದಲೇ ಉಂಟಾಗುವವು. ಹೇಗೆಂದರೆ—**ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ** ಎಂಬಲ್ಲಿ ಹೇಳಿರುವಂತೆ, ಕಾಂತಿಸಮೂಹವಾಗಿರುವ ಸೂರ್ಯನು ಮಂಡಲಮಧ್ಯದಲ್ಲಿ ಇರುವವನಾದರೂ ಎಲ್ಲವನ್ನೂ ತನ್ನ ಶಾಖದಿಂದ ವ್ಯಾಪಿಸಿರುವ ಕಾರಣ ಎಲ್ಲಕ್ಕೂ ಅಂತರ್ಯಾಮಿಯಾಗಿ ಆಯಾಯ ಕಾಲಕ್ಕನುಗುಣವಾಗಿ ಮಾಡುವಂತೆ ಪ್ರೇರಿಸುವವನಾಗಿರುವನು. ಆದ್ದರಿಂದ ಚಲಿಸುವ (ಪ್ರಾಣಿಗಳೇ ಮೊದಲಾದ) ಸ್ಥಿರವಾದ (ಜಡವಸ್ತುಗಳ) ವಸ್ತುಗಳ ಕಾರ್ಯ

ವರ್ಗದ ಉತ್ಪತ್ತಿಗೆ ಕಾರಣನಾಗಿರುವನು. ಸೂರ್ಯನು ಉದಯವನ್ನು ಹೊಂದಿದಕೂಡಲೇ ಮೃತರಂತೆ ನಿಶ್ಚೇಷ್ಟಿತರಾಗಿ ಯಾವ ಕಾರ್ಯವನ್ನೂ ಮಾಡಲು ಜ್ಞಾನವೂ ಶಕ್ತಿಯೂ ಇಲ್ಲದಿರುವ ಪ್ರಾಣಿಗಳನ್ನು ಉತ್ತೇಜನಗೊಳಿಸಿ ಅವರು ತಮ್ಮ ತಮ್ಮ ಕಾರ್ಯಗಳಲ್ಲಿ ಪ್ರವೃತ್ತರಾಗುವಂತೆ ಮಾಡುವ ಸಾಮರ್ಥ್ಯವು ಸೂರ್ಯನೊಬ್ಬನಿಗೆಮಾತ್ರ ಇರುವುದು.

ಯೋಽಸೌ ತಪನ್ನುದೇತಿ । ಸ ಸರ್ವೇಷಾಂ ಭೂತಾನಾಂ ಪ್ರಾಣಾನಾದಾಯೋದೇತಿ । .. ..
ಅಸೌ ಯೋಽಸ್ತಮೇತಿ । ಸ ಸರ್ವೇಷಾಂ ಭೂತಾನಾಂ ಪ್ರಾಣಾನಾದಾಯಾಸ್ತಮೇತಿ । ....
ಅಸೌ ಯ ಆಪೂರ್ಯತಿ । ಸ ಸರ್ವೇಷಾಂ ಭೂತಾನಾಂ ಪ್ರಾಣೈರಾಪೂರ್ಯತಿ ।
(ತೈ ಆ ೧೧೪-೧)

ಎಂಬ ಶ್ರುತಿವಾಕ್ಯಗಳಲ್ಲಿ ಹೇಳಿರುವಂತೆ-ಸೂರ್ಯನು ಅಸ್ತಂಗತನಾಗುವಾಗ ಸಮಸ್ತ ಜೀವರಾಶಿಗಳ ಪ್ರಾಣಗಳನ್ನು ಎಂದರೆ ಚಲನವಲನಾದಿಕ್ರಿಯೆಯನ್ನೂ ಜ್ಞಾನಕ್ರಿಯೆಯನ್ನೂ ತನ್ನ ಜೊತೆಯಲ್ಲಿಯೇ ತೆಗೆದುಕೊಂಡು ಹೋಗುವನು ಆದ್ದರಿಂದ ರಾತ್ರಿಕಾಲದಲ್ಲಿ ಪ್ರಾಣಿಗಳು ಯಾವ ಕಾರ್ಯವನ್ನು ಮಾಡಲು ಸಮರ್ಥರಾಗದೆ ನಿದ್ರಾವಶರಾಗುವರು. ಪುನಃ ಪ್ರಾತಃಕಾಲದಲ್ಲಿ ಸೂರ್ಯನು ಉದಯಿಸುವಾಗ ಆ ಸಮಸ್ತ ಪ್ರಾಣಿಗಳ ಪ್ರಾಣಗಳನ್ನು ಎಂದರೆ ಕಾರ್ಯಗಳನ್ನು ಮಾಡುವ ಶಕ್ತಿಗಳನ್ನೂ ಜ್ಞಾನಕ್ರಿಯೆಯನ್ನೂ ತನ್ನ ಜತೆಯಲ್ಲಿಯೇ ತೆಗೆದುಕೊಂಡುಬಂದು ಉದಯಿಸುವನು. ಆಗ ಆ ಪ್ರಾಣಿಗಳನ್ನು ತನ್ನ ಉತ್ಸಾಹರೂಪವಾದ ಶಕ್ತಿಯಿಂದ ತುಂಬುವನು ಎಂದು ಹೇಳಿದ ಸೂರ್ಯನು ಲೋಕವೆಲ್ಲಕ್ಕೂ ಜ್ಞಾನವನ್ನೂ ಕ್ರಿಯಾಶಕ್ತಿಯನ್ನೂ ಕೊಟ್ಟು ತನ್ನ ಉದಯಾಸ್ತಗಳಿಂದ ಚೇತನಾಚೇತನವ್ಯವಹಾರವುಂಟಾಗಿ ಮಾಡುವುದರಿಂದ ಸೂರ್ಯನು ಸ್ಥಾವರಜಂಗಮವಾದ ಸಮಸ್ತ ವಸ್ತುಜಾತಗಳಿಗೂ ಆತ್ಮನೂ ಜೀವಾತ್ಮನೂ ಆಗಿರುವನೆಂದು ಸೂರ್ಯನ ಮಹತ್ತ್ವವನ್ನು ಇಲ್ಲಿ ವರ್ಣಿಸಿದೆ.

ಇದಲ್ಲದೆ ಈಗಿನ ವಿಜ್ಞಾನಶಾಸ್ತ್ರಪ್ರಕಾರವಾಗಿಯೂ (Scientific view) ಸೂರ್ಯನೇ ಈ ಪ್ರಪಂಚದಲ್ಲಿರುವ ಸಮಸ್ತ ವಸ್ತುಗಳ ಚಲನವಲನಗಳಿಗೂ ಕಾರಣನು. ಸೂರ್ಯನಿಂದಲೇ ನಾವು ಎಲ್ಲಾ ವಿಧವಾದ ಶಕ್ತಿಯನ್ನೂ (energy) ಪಡೆಯುತ್ತೇವೆ ಪ್ರಾಣಿವರ್ಗದಲ್ಲಿ ನಡೆಯುತ್ತಿರುವ ಚಲನವಲನಾದಿಗಳಿಗೂ, ಅಂತರಿಕ್ಷದಲ್ಲಿ ನಡೆಯುವ ವಾಯುವಿನ ಚಲನ, ಮೇಘಗಳ ಉತ್ಪತ್ತಿ, ವೃಷ್ಟಿವರ್ಷಣ ಮೊದಲಾದ ಕಾರ್ಯಗಳಿಗೂ, ಭೂಮಿಯಲ್ಲಿ ಎಡಬಿಡದೆ ನಡೆಯುತ್ತಿರುವ ಸಸ್ಯೋತ್ಪತ್ತಿ, ನದಿಗಳ ಪ್ರವಾಹರೂಪವಾದ ಚಲನ ಮೊದಲಾದ ಎಲ್ಲಾ ವಿಧವಾದ ಕಾರ್ಯಗಳಿಗೂ ಸೂರ್ಯನೇ ಆಧವಾ ಸೂರ್ಯನ ಕಿರಣಗಳೇ ಕಾರಣವು. ಸೂರ್ಯನ ಪ್ರಕಾಶವಿಲ್ಲದಿದ್ದರೆ ಈ ಪ್ರಪಂಚದಲ್ಲಿ ಗಾಢವಾದ ಅಂಧಕಾರವು ಆವರಿಸುವುದಲ್ಲದೆ ಒಂದು ಹುಲ್ಲುಕಡ್ಡಿಯ ಚಲನವೂ ಸಹ ನಡೆಯಲಾರದು ಆದುದರಿಂದ **ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ** ಎಂಬ ವಾಕ್ಯಕ್ಕೆ-The sun is the source of all the energies so for as this world (earth) is concerned ಎಂಬ ಅಭಿಪ್ರಾಯವನ್ನು ಹೇಳುವುದು ಯುಕ್ತವಾಗಿರುವುದು

ಪುರಾಣಾದಿಗಳಲ್ಲಿ ಸೂರ್ಯನನ್ನು ಆದಿತ್ಯ, ಪೂಷಾ, ಮಿತ್ರ, ಸವಿತೃ ಮೊದಲಾದ ಶಬ್ದಗಳಿಂದ ಕರೆಯಲಾಗಿದೆ. ಆದರೆ ವೇದಗಳಲ್ಲಿ ಆದರಲ್ಲಿಯೂ ಋಗ್ವೇದದಲ್ಲಿ ಸೂರ್ಯನ ವೈಶಿಷ್ಟ್ಯವೇ ಬೇರೆ, ಆದಿತ್ಯನ ವೈಶಿಷ್ಟ್ಯವೇ ಬೇರೆ. ಪೂಷಾ, ಮಿತ್ರ, ಸವಿತೃ ಇತ್ಯಾದಿ ದೇವತೆಗಳ ವೈಶಿಷ್ಟ್ಯವೇ ಬೇರೆಯಾಗಿರುವುದು ಸೂರ್ಯನ ಗುಣಗಳು ಮಿತ್ರ ಮೊದಲಾದ ದ್ವಾದಶಾದಿತ್ಯರಲ್ಲಿ ಕಂಡುಬರುವುದಾದರೂ, ಯಜ್ಞಯಾಗಾದಿಗಳಲ್ಲಿ ಸೂರ್ಯನನ್ನು ಸ್ತುತಿಸುವ ಕಡೆ ಆದಿತ್ಯನನ್ನು ಸ್ತುತಿಸಲಾಗುವುದಿಲ್ಲ ಇವರೆಲ್ಲರೂ ಬೇರೆ ಬೇರೆ ದೇವತೆಗಳೆಂದೇ ಪರಿಗಣನೆ ಅಸ್ಪೇ ಅಲ್ಲ. ವೇದ

ಗಳಲ್ಲಿ ಒಬ್ಬನೇ ದೇವತೆಯು ಅವನ ವೈಯಕ್ತಿಕವಾದ ಗುಣವಿಶಿಷ್ಟನಾಗಿರುವಾಗ ಆ ಗುಣಸಹಿತವಾದ ದೇವತೆಯೇ ಬೇರೆಯೆಂದು ಭಾವಿಸಲ್ಪಟ್ಟಿರುವುದು. ಹೇಗೆಂದರೆ- ಇಂದ್ರನು ಮರುತ್ವಾನಿಂದ್ರಃ ಮಹಾನಿಂದ್ರಃ ಎಂದು ಕರೆಯಲ್ಪಟ್ಟಾಗ ಇಂದ್ರನೇ ಬೇರೆ, ಮರುತ್ವಾನಿಂದ್ರ (ಮರುದ್ದೇವತೆಗಳೊಡನಿರುವ ಇಂದ್ರನು) ನೇ ಬೇರೆ, ಮಹಾನಿಂದ್ರ (ಮಹತ್ಸ್ವರೂಪವುಳ್ಳ ಇಂದ್ರನೇ) ಬೇರೆ ಎಂದು ಪರಿಗಣಿಸಿ ಆಯಾಸಂದರ್ಭಕ್ಕನುಸಾರವಾಗಿ ಅವರುಗಳನ್ನು ಆರಾಧಿಸಲಾಗಿರುವುದು. ಅದರಂತೆ ಅಗ್ನಿಃ ಅಗ್ನಿಃಪಾವಕಃ ಇತ್ಯಾದಿ ಪ್ರಭೇದಗಳೂ ಇತರ ದೇವತೆಗಳಲ್ಲಿಯೂ ಕಂಡುಬರುವುದು-

ಋಗ್ವೇದದಲ್ಲಿ ಸೂರ್ಯನನ್ನು ಸ್ತುತಿಸುವ ಋಕ್ಕುಗಳು ಈರೀತಿ ಇವೆ ಅವು ಯಾವವೆಂದರೆ—

ಋ. ಸಂ.	೧—೫೦	ನೇ ಸೂಕ್ತದಲ್ಲಿ	೧ ರಿಂದ ೧೩ ವರೆಗಿನ	೧೩ ಋಕ್ಕುಗಳು
,,	೧—೧೧೫	,,	೧ ,, ೬ ,,	೬ ,,
,,	೪— ೪೦	,,	೫ ನೇ ಋಕ್ಕು	೧ ,,
,,	೫— ೪೦	,,	೫ ,,	೧ ,,
,,	೬— ೬೦	,,	೧ ,,	೧ ,,
,,	೭— ೬೨	,,	೧ ರಿಂದ ೩ ,,	೩ ,,
,,	೭— ೬೩	,,	೧ ರಿಂದ ೪$\frac{೧}{೨}$,,	೪$\frac{೧}{೨}$,,
,,	೭— ೬೬	,,	೧೪ ರಿಂದ ೧೬ ,,	೩ ,,
,,	೮—೧೦೧	,,	೧೧ ರಿಂದ ೧೨ ,,	೨ ,,
,,	೧೦— ೩೭	,,	೧ ರಿಂದ ೧೨ ,,	೧೨ ,,
,,	೧೦—೧೫೮	,,	೧ ರಿಂದ ೫ ,,	೫ ,,
,,	೧೦—೧೭೦	,,	೧ ರಿಂದ ೪ ,,	೪ ,,
,,	೧೦—೧೮೯	,,	೧ ರಿಂದ ೩ ,,	೩ ,,

ಈ ಋಕ್ಕುಗಳು ಮಾತ್ರ ಸೂರ್ಯನ ಪರವಾಗಿವೆ. ಸೂರ್ಯನ ಪರವಾದ ಋಕ್ಕುಗಳು ಋಗ್ವೇದದಲ್ಲಿ ಬೇರೆ ಯಾವುದೂ ಇಲ್ಲ

ಋಗ್ವೇದದಲ್ಲಿ ಸೂರ್ಯನ ವಿಷಯವಾದ ಋಕ್ಕುಗಳಲ್ಲಿರುವ ವಿವರಣೆಯು.

ಋಗ್ವೇದದಲ್ಲಿ ಸೂರ್ಯನನ್ನು ಸ್ತುತಿಸುವ ಸೂಕ್ತಗಳು ೫ ಪೂರ್ತಾ ಸೂಕ್ತಗಳೂ ಇತರ ಸೂಕ್ತಗಳಲ್ಲಿ ಕೆಲವು ಋಕ್ಕುಗಳೂ ಒಟ್ಟು ೬೦ ವರೆ ಋಕ್ಕುಗಳು ಇರುವವು. ಸೂರ್ಯನಂತೆ ಇಂದ್ರಿಯಗೋಚರವಾದ ದೇವತೆ ಬೇರೆ ಯಾವುದೂ ಇಲ್ಲ. ಆಕಾಶದಲ್ಲಿರುವ ಸೂರ್ಯನ ಬೆಳಕೇ ಅಗ್ನಿಯ ಮುಖ (ಋ. ಸಂ. ೧೦-೭-೩) ಸೂರ್ಯನ ನೇತ್ರವು ಅನೇಕಕಡೆ ಉಕ್ತವಾಗಿದೆ (೫-೪೦-೪ ಇತ್ಯಾದಿ) ಆದರೆ ಅವನೇ ಮಿತ್ರ ವರುಣ ಮತ್ತು ಅಗ್ನಿಯ ಚಕ್ಷುಸ್ಸು (೧-೧೧೫-೧) ಸೂರ್ಯನಿಗೂ ನೇತ್ರೇಂದ್ರಿಯಕ್ಕೂ ನಿಕಟಸಂಬಂಧವಿದೆ- ಮೃತನಾದ ಮನುಷ್ಯನ ನೇತ್ರೇಂದ್ರಿಯವು ಸೂರ್ಯನಲ್ಲಿ ಅಂತರ್ಗತವಾಗುತ್ತದೆ ಎಂದು ಹೇಳಿದೆ (೧೦-೧೬-೩, ೧೦-೯೦-೩, ೧೦-೧೫೮-೩, ೪) ಸೂರ್ಯನು ನೇತ್ರೇಂದ್ರಿಯಗಳಿಗೆಲ್ಲಾ ಒಡೆಯನು (ಅ. ವೇ. ೫-೨೪-೯). ಪ್ರಾಣಿಗಳೆಲ್ಲರಿಗೂ ಕಣ್ಣಾಗಿ ಆಕಾಶ, ಭೂಮಿ, ನೀರು

ಇವುಗಳಿಗೆಲ್ಲಾ ಆಚೆ ನೋಡುತ್ತಾನೆ (ಅ ವೇ. ೧೩-೧೪ ೫). ಅವನು ದೂರದರ್ಶಿ, ಎಂದರೆ ಬಹುದೂರ ನೋಡಬಲ್ಲನು (೭-೩೫-೪, ೧೦-೩೭-೧) ಸರ್ವದರ್ಶಿ (೧-೫೦-೨). ಎಲ್ಲ ಪ್ರಪಂಚದ ಗೂಢಚಾರಿ (೪ ೧೩-೩) ಸ್ಥಾವರ ಜಂಗಮಾತ್ಮಕವಾದ ಪ್ರಪಂಚವನ್ನೂ, ಮಾನವರು ಮಾಡುವ ಒಳ್ಳೆಯ ಮತ್ತು ಕೆಟ್ಟಕೆಲಸಗಳನ್ನೂ ನೋಡುತ್ತಾನೆ (೧-೫೦-೭, ೬-೫೧-೨, ೭ ೬೦ ೨, ೭-೬೧-೧, ೭-೬೩-೧, ೪) ಸೂರ್ಯನ ಉದಯದಿಂದ ಜಾಗೃತರಾಗಿ ಜನರು ತಮ್ಮ ಕೆಲಸಕಾರ್ಯಗಳಲ್ಲಿ ಪ್ರವೃತ್ತರಾಗುತ್ತಾರೆ (೭-೬೩-೪) ಅವನು ಮನುಷ್ಯರೆಲ್ಲರನ್ನೂ ಎಚ್ಚರಗೊಳಿಸುತ್ತಾ ಉದಯಿಸುತ್ತಾನೆ (೭-೬೩-೨,೩) ಚರಾಚರವಸ್ತುಗಳಿಗೆಲ್ಲಾ ಅವನೇ ಆತ್ಮ, ಅವನೇ ರಕ್ಷಕ (ಋ.ಸಂ ೧-೧೧೫-೧, ೭-೬೦-೨) ಅವನ ರಥಕ್ಕೆ ಒಂದೇ ಕುದುರೆ(೭-೬೩-೨) ಅಥವಾ ಏಳು ಕುದುರೆಗಳವೆ (೫-೪೫ ೯) ಅಥವಾ ಏಳು ಶೀಘ್ರಗಾಮಿಗಳಾದ ಕುದುರೆಗಳವೆ (೪-೧೩ ೩) ಹರಿತಃ) (೧-೫೦ ೮, ೯, ೭ ೬೦-೩) ಅಥವಾ ಏಳು ಕುದುರೆಗಳವೆ.

ವರುಣನು ಸೂರ್ಯನಿಗೋಸ್ಕರ ಅವನು ಸಂಚರಿಸಬೇಕಾದ ಮಾರ್ಗವನ್ನು ನಿರ್ಮಾಣಮಾಡಿಸುತ್ತಾನೆ (೧-೨೪ ೮ ; ೭ ೮೭-೧) ಅಥವಾ ಮಿತ್ರ, ವರುಣ ಮತ್ತು ಅರ್ಯಮರು ಮೂವರೂ ನಿರ್ಮಾಣಮಾಡಿಸುತ್ತಾರೆ (೭-೬೦-೪) ಪೂಷಣನು ಅವನ ದೂತನು (೬-೫೮-೩) ಸೂರ್ಯನು ಉಷೋದೇವತೆಯ ಮಂಡಲದಿಂದ ಪ್ರಕಾಶಿಸುತ್ತಾ ಹೊರಹೊರಡುತ್ತಾನೆ. (೭ ೬೩-೩) ಕೆಲವುಕಡೆ ಉಷೋದೇವತೆಯನ್ನು ಸೂರ್ಯನ ಪತ್ನಿಯೆಂದು ಹೇಳಿದೆ (೭-೭೫-೫)

ಸೂರ್ಯನು ಅದಿತಿಯ ಮಗನಾದುದರಿಂದ ಅವನಿಗೆ ಆದಿತ್ಯ ಅಥವಾ ಆದಿತೇಯ ಎಂಬ ಹೆಸರು ಬಂದಿದೆ (೧-೫೦-೧೨, ೧ ೧೯೫-೯, ೪ ೯೦-೧೧, ೧೦-೪೮-೧೧) ಆದರೆ ಇವನೂ ಆದಿತ್ಯರೂ ಭಿನ್ನರು (೪ ೫೫ ೧೩, ೧೫). ದ್ಯುದೇವತೆಯು ಅವನ ಜನಕನು (೧೦ ೩೭ ೧) ಅವನು ದೇವತೆಗಳಿಂದ ಜನಿಸಿದವನು ಸಾಗರದಲ್ಲಿ ಅಡಗಿದ್ದ ಅವನನ್ನು ದೇವತೆಗಳು ಮೇಲಕ್ಕೆ ಎತ್ತಿದರು (೧೦-೭೨ ೭) ಅಗ್ನಿಯ ರೂಪಾಂತರವಾಗಿ ದೇವತೆಗಳು ಅವನನ್ನು ಆಕಾಶದಲ್ಲಿ ಸ್ಥಾಪಿಸಿದರು (೧೦-೪೪-೧೧) ಅವನು ವಿರಾಟ್ಪೂರುಷನ ನೇತ್ರದಿಂದ ಉದ್ಭವಿಸಿದನು (೧೦-೯೦ ೧೩)

ನಾನಾದೇವತೆಗಳು ಪ್ರತ್ಯೇಕಪ್ರತ್ಯೇಕವಾಗಿ ಸೂರ್ಯನ ಉತ್ಪತ್ತಿಗೆ ಕಾರಣರೆಂದು ಹೇಳಿದೆ ಇಂದ್ರನು ಅವನನ್ನು ಜನಿಸುವಂತೆ ಮಾಡಿ (೩-೧೩-೪) ಆಕಾಶದಲ್ಲಿ ಸ್ಥಾಪಿಸಿ ಅಲ್ಲಿ ಪ್ರಕಾಶಿಸುವಂತೆ ಮಾಡಿದನು (೩-೪೪-೩, ೪-೭೪-೭) ಇಂದ್ರಾವಿಷ್ಣುಗಳು ಅವನ ಜನಕರು (೪-೯೯-೪) ಬೆಳಕಿನಿಂದೂಡಗೂಡಿದ ಸೂರ್ಯನನ್ನು ಇಂದ್ರಾ ಸೋಮರು ಬೆಳೆಸಿದರು (೬-೭೨-೩) ಮಿತ್ರಾವರುಣರು ಅವನನ್ನು ಆಕಾಶದಲ್ಲಿ ಸ್ಥಾಪಿಸಿದನು (೭-೪೨-೩). ಸೂರ್ಯನಲ್ಲಿ ಪ್ರಕಾಶವು ಸೋಮನಿಂದ ಸ್ಥಾಪಿತವಾಯಿತು (೬-೪೪-೨೩ ; ೯-೯೭-೪೦). ಸೋಮನಿಂದಲೇ ಸೂರ್ಯನು ಜನಿಸಿದನು (೯-೯೬-೫ ; ೯ ೧೧೦-೫) ಸೋಮದೇವತೆಯೇ ಸೂರ್ಯನನ್ನು ಪ್ರಕಾಶಿಸುವಂತೆ ಮಾಡಿದನು(೯ ೬೩-೪) ಅಥವಾ ಆಕಾಶದಲ್ಲಿ ಇರುವಂತೆ ಮಾಡಿದನು (೯-೧೦೬-೪) ಸೂರ್ಯನ ಕಾಂತಿಯನ್ನು ಒಹಳಮೇಲೆ ಸ್ಥಾಪಿಸಿದ್ದೂ (೧೦-೩೭-೨) ಆಕಾಶಕ್ಕೆ ಏರುವಂತೆ ಮಾಡಿದುದೂ (೧೦-೧೫೬-೪) ಅಗ್ನಿಯೇ ಸೃಷ್ಟಿಕರ್ತನಾದ ಧಾತೃವೇ ಸೂರ್ಯ ಚಂದ್ರರಿಬ್ಬರನ್ನೂ ರೂಪುಗೊಳಿಸಿದನು (೧೦-೧೯೦-೩) ಅಂಗಿರಸರ ಯಜ್ಞಕರ್ಮಗಳಿಂದ ಸೂರ್ಯನು ಆಕಾಶವನ್ನು ಏರಲು ಸಾಧ್ಯವಾಯಿತು (೧೦-೬೭-೩). ಸೂರ್ಯನ ಜನ್ಮಸಂಬಂಧವಾದ ಈ ಋಕ್ಕುಗಳಲ್ಲೆಲ್ಲಾ ಕಾಂತಿಯುಕ್ತವಾದ ಸೂರ್ಯಮಂಡಲವೇ ಸೂಚಿತವಾದಂತಿದೆ.

ಅನೇಕ ವಾಕ್ಯಗಳಲ್ಲಿ ಸೂರ್ಯನು ಅಂತರಿಕ್ಷದಲ್ಲಿ ಹಾರಾಡುತ್ತಿರುವ ಒಂದು ಪಕ್ಷಿ (೧೦-೧೭೭-೧,೨) ಯೆಂದು ಭಾವಿಸಲ್ಪಟ್ಟಿದಾನೆ. ಅವನು ಪುಷ್ಪವಾದ ಒಂದು ಪಕ್ಷಿ (೫-೪೭-೩) ಸೂರ್ಯನು ಹಾರುತ್ತಾನೆ. (೧-೧೯೧-೯) ಅವನನ್ನು ಹಾರುತ್ತಿರುವ ಗಿಡುಗನಿಗೆ ಹೋಲಿಸಿದೆ (೭-೬೩-೫) ಒಂದುಕಡೆ ಗಿಡುಗನೆಂದೇ ಕರೆದಿದೆ. (೫-೪೫-೯)

ಇನ್ನೊಂದು ಕಡೆ ಅವನು ವೃಷಭ ಮತ್ತು ಪಕ್ಷಿಎಂತಲೂ (೫-೪೭-೩) ಒಣ್ಣಬಣ್ಣದ ಚುಕ್ಕೆಗಳುಳ್ಳ ವೃಷಭ ಎಂತಲೂ ಪಕ್ಷಿ ಎಂತಲೂ (೧೦ ೧೮೯ ೧, ೫ ೪೭-೩) ಕರೆಯಲ್ಪಟ್ಟಿದಾನೆ ಉಷೋದೇವಿಯು ತಂದ ಶ್ವೇತವರ್ಣದ ಮತ್ತು ಉಜ್ವಲವಾದ ಅಶ್ವವೆಂದೂ ಒಂದುಕಡೆ ಕರೆದಿದೆ (೭-೭೭-೩)ಸೂರ್ಯನ ಸಪ್ತಾಶ್ವಗಳೇ ಅವನ ರಶ್ಮಿಗಳು (೮-೭೧ ೧೬) ಏಕೆಂದರೆ ಈ ರಶ್ಮಿಗಳು ಅವನನ್ನು ಒಯ್ದು ತರುತ್ತವೆ

ಒಂದೊಂದುಸಲ ಸೂರ್ಯನನ್ನು ಜಡಶಬ್ದಾರ್ಥಕ್ಕೆ ಹೋಲಿಸಿರುವುದು ಕಂಡುಬರುವುದು. ಅವನು ಆಕಾಶದಲ್ಲಿರುವ ಒಂದು ರತ್ನ (೭-೬೩ ೪; ೭-೫೧ ೧) ಆಕಾಶಮಧ್ಯದಲ್ಲಿ ಕೆತ್ತಿರುವ ನಾನಾವರ್ಣದ ತಿಲೆ (೫-೪೭ ೩, ೫ ಬ್ರಾ ೬-೧ ೨-೩) ಅವನು ಒಂದು ಹೊಳೆಯುತ್ತಿರುವ ಆಯುಧ. ಅದನ್ನು ಮಿತ್ರಾವರುಣರು ಮಳೆ ಮೋಡಗಳಿಂದ ಮರೆ ಮಾಡುತ್ತಾರೆ (೫-೬೩-೪) ಅವನು ಮಿತ್ರಾವರುಣರ ಪವಿ ಎಂಬ ಆಯುಧ (೫-೬೨-೨) ಅವರಿಬ್ಬರಿಂದ ಆಕಾಶದಲ್ಲಿ ಸ್ಥಾಪಿತವಾದ ರಥ (೫-೬೩ ೭) ಸೂರ್ಯನೇ ಒಂದು ಚಕ್ರ (೧-೧೭೫-೫; ೪-೩೦-೪) ಸೂರ್ಯನ ರಥಚಕ್ರದ ವಿಷಯವು (೪-೨೮-೨, ೫-೭೯ ೧೦) ಅನೇಕಕಡೆ ಉಕ್ತವಾಗಿದೆ

ಸೂರ್ಯನು ಪ್ರಕಾಶಿಸುವುದು ಪ್ರಪಂಚಕ್ಕೋಸ್ಕರ (೭-೬೩ ೧), ಮನುಷ್ಯರು ಮತ್ತು ದೇವತೆಗಳಕೋಸ್ಕರ (೧-೫೦-೫) ಅನಂತರ ತನ್ನ ಕಾಂತಿಯಿಂದ ಕತ್ತಲನ್ನು ಒಡಿಸುತ್ತಾನೆ (೧೦-೩೭-೪) ಚರ್ಮದಂತ ತಮಸ್ಸನ್ನು ಸುರುಳಿ ಸುತ್ತುತ್ತಾನೆ (೭ ೬೩-೧) ಚರ್ಮವೊಂದನ್ನು ಎಸೆಯುವಂತೆ ಅವನ ಕಾಂತಿಯು ತಮಸ್ಸನ್ನು ನೀರಿನೊಳಕ್ಕೆ ಎಸೆಯುತ್ತದೆ (೪ ೧೩-೪) ಅವನು ಅಂಧಕಾರಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ಮಾಟಗಾತಿಯರನ್ನೂ ಜಯಿಸುತ್ತಾನೆ. (೧-೧೯೧ ೮, ೯, ೭-೧೦೪-೨೪) ಸೂರ್ಯನ ಪ್ರಚಂಡವಾದ ತಾಪದ ವಿಷಯವನ್ನು ಎರಡುಕಡೆ ಹೇಳಿದೆ (೭-೭೪-೧೯; ೯-೧೦೭-೨೦) ಋಗ್ವೇದದಲ್ಲಿ ಸೂರ್ಯನು ಕ್ರೂರದೇವತೆಯಲ್ಲ. ಈ ಅಂಶವು ಅರ್ವಾವೇದ ಮತ್ತು ಬ್ರಾಹ್ಮಣಗಳಲ್ಲಿ ಸ್ಪಷ್ಟವಾಗಿ ಹೇಳಿದೆ.

ಸೂರ್ಯನು ಜೀವಿತದ ಅವಧಿಯನ್ನು ಹೆಚ್ಚಿಸುತ್ತಾನೆ (೫-೪೪-೭) ರೋಗರುಜಿನಗಳನ್ನೂ ಕೆಟ್ಟ ಕನಸುಗಳನ್ನೂ ನಿವಾರಿಸುತ್ತಾನೆ (೧೦ ೩೭-೪) ಸೂರ್ಯೋದಯದ ದರ್ಶನವೆಂದರೆ ಹೆಚ್ಚುಕಾಲ ಒದುಕುವುದು ಎಂದರ್ಥ. (೪-೫೫-೪, ೭-೫೨ ೫) ಎಲ್ಲಾ ಪ್ರಾಣಿಗಳೂ ಸೂರ್ಯನನ್ನಾಶ್ರಯಿಸಿವೆ. (೧-೧೬೪-೧೧) ಮತ್ತು ಆಕಾಶವೂ ಅವನನ್ನೇ ಆಶ್ರಯಿಸಿದೆ (೧೦ ೮೫-೫-೧) ಅವನಿಗೆ ವಿಶ್ವಕರ್ಮನೆಂದು ಹೆಸರು. (೧೦-೧೭೦-೪) ಅವನ ಮಹತ್ತ್ವದಿಂದ ಅವನು ದೇವತೆಗಳ ಪುರೋಹಿತನಾಗಿದಾನೆ (೪-೯೦-೧೨) ಉದಯಕಾಲದಲ್ಲಿ ಮಿತ್ರಾವರುಣರು ಇತರ ದೇವತೆಗಳಿಗೆ ತಾವು ಪಾಪರಹಿತರೆಂದು ಹೇಳಬೇಕೆಂದು ಪುನುಷ್ಯರು ಸೂರ್ಯನನ್ನು ಪ್ರಾರ್ಥಿಸುತ್ತಾರೆ. (೭-೬೦-೧; ೭ ೬೨-೨) ಒಂದು ಸಲ ಇಂದ್ರನು ಸೂರ್ಯನನ್ನು ಪರಾಭವಗೊಳಿಸಿ ಅವನ ರಥಚಕ್ರವನ್ನು ಅಪಹರಿಸಿದನು. (೧-೧೭೫-೪, ೪-೩೦-೪) ಎಂದಿದೆ.

ಮಿತ್ರಾವರುಣರ ವಿಮರ್ಶೆ

ಮಿತ್ರಾವರುಣರು ಪ್ರತ್ಯೇಕದೇವತೆಗಳೆಂದು ಭಾವಿಸಲ್ಪಟ್ಟಿದ್ದರೂ ಅವರಿಬ್ಬರನ್ನೂ ಸಂಪ್ತವಿಕವಾಗಿ (ಒಟ್ಟಿಗೆ) ಸ್ತುತಿಸಿರುವ ಮಂತ್ರಗಳೇ ಹೆಚ್ಚಾಗಿವೆ. ಇವರು ಸೂರ್ಯನ ಅನೇಕ ರೂಪಗಳಾದ ದ್ವಾದಶಾದಿತ್ಯರಲ್ಲಿ ಈ ಹೆಸರಿನ ಅಂಶದೇವತೆಗಳೆಂದು ಕೆಲವು ಕಡೆಯೂ ಮತ್ತೆ ಬೇರೆಕಡೆ ಈ ದೇವತೆಗಳು ಅಗ್ನಿಯ ಬೇರೆ ರೂಪಗಳೆಂದೂ ವರ್ಣಿತರಾಗಿದಾರೆ.

ತ್ವಮಗ್ನೇ ವರುಣೋ ಜಾಯಸೇ ಯತ್ತ್ವಂ ಮಿತ್ರೋ ಭವಸಿ ಯತ್ಸಮಿದ್ಧಃ ।

(ಋ ಸಂ ೫ ೩ ೧)

ಎಂಬ ಋಕ್ಕಿನಲ್ಲಿ ಅಗ್ನಿಯು ಉತ್ಪನ್ನನಾದಾಗ ಅವನಿಗೆ ವರುಣನೆಂದೂ, ಚೆನ್ನಾಗಿ ಹೊತ್ತಿಸಲ್ಪಟ್ಟು ಧಗಧಗನೆ ಉರಿಯುತ್ತಿರುವಾಗ ಅವನಿಗೆ ಮಿತ್ರನೆಂದೂ ಹೆಸರುಗಳಿವೆಯೆಂದು ಇಲ್ಲಿ ಹೇಳಿದೆ. ಇದಲ್ಲದೆ ತೈತ್ತಿರೀಯಬ್ರಾಹ್ಮಣದಲ್ಲಿ—

ಮಿತ್ರೋ೭ಸಿ ವರುಣೋ೭ಸೀತ್ಯಾಹ । ಮೈತ್ರಂ ವಾ ಅಹಃ । ವಾರುಣೀ ರಾತ್ರಿಃ । ಅಹೋ ರಾತ್ರಾಭ್ಯಾಮೇವೈನಮುಸಾವಹತಿ ।

(ತೈ ಬ್ರಾ. ೧-೭ ೧೦ ೧)

ಮಿತ್ರನು ಹಗಲಿಗೆ ಅಧಿಪತಿಯೆಂದೂ, ವರುಣನು ರಾತ್ರಿಗೆ ಅಧಿಪತಿಯೆಂದೂ ಹೇಳಿದೆ ಆದುದರಿಂದ ಈ ದೇವತೆಗಳು ಕೆಲವುಕಡೆ ಸೂರ್ಯನ ಅಂಶದೇವತೆಗಳೆಂದೂ, ಕೆಲವುಕಡೆ ಅಗ್ನಿಯ ಬೇರೆಬೇರೆ ಹೆಸರುಗಳೆಂದೂ ಹೇಳಿರುವುದನ್ನು ಗಮನಿಸಬೇಕು

ಮಿತ್ರಃ—ಪುರಾಣಾದಿಗಳಲ್ಲಿ ಮಿತ್ರನು ದ್ವಾದಶಾದಿತ್ಯರಲ್ಲಿ ಒಬ್ಬನು. ಋಗ್ವೇದದಲ್ಲಿ ಮಿತ್ರನು ಸೂರ್ಯನ ಬೇರೊಂದು ಹೆಸರಾದರೂ ಮಿತ್ರನಿಗೆ ಸ್ಪಷ್ಟವಾದ ವೈಶಿಷ್ಟ್ಯವಿದ ಎಂದರೆ ವೈಯಕ್ತಿಕಪ್ರಾಧಾನ್ಯವಿದ ಋಗ್ವೇದದಲ್ಲಿ ಮಿತ್ರ, ವರುಣ ಎಂಬುವರು ಅದಿತಿಯ ಪುತ್ರರೆಂದು ಹೇಳಿದೆ ಆದ್ದರಿಂದ ಇವರನ್ನು ಆದಿತ್ಯರೆಂದು ಲಕ್ಷಕ್ಕೆ ಕರೆದಿದೆ ಈ ಆದಿತ್ಯರು ಎಂದರೆ ಅದಿತಿಪುತ್ರರು ಆರುಮಂದಿಯೆಂದು—

ಇಮಾ ಗಿರ ಆದಿತ್ಯೇಭ್ಯೋ ಘೃತಸ್ನೂಃ ಸನಾದ್ರಾಜಭ್ಯೋ ಜುಹ್ವಾ ಜುಹೋಮಿ ।
ಶೃಣೋತು ಮಿತ್ರೋ ಅರ್ಯಮಾ ಭಗೋ ನಸ್ತುವಿಜಾತೋ ವರುಣೋ ದಕ್ಷೋ ಅಂಶಃ ॥

(ಋ ಸಂ ೨-೨೭ ೧)

ಎಂದರೆ, ಮಿತ್ರ, ಅರ್ಯಮಾ, ಭಗ, ವರುಣ, ದಕ್ಷ, ಅಂಶ ಎಂದು ಆರುಜನರ ಹೆಸರನ್ನು ಮಾತ್ರ ಇಲ್ಲಿ ಹೇಳಿದೆ

ದೇವಾ ಆದಿತ್ಯಾ ಯೇ ಸಪ್ತ ತೇಭಿಃ ಸೋಮಾಭಿ ರಕ್ಷ ನ ಇಂದ್ರಾಯೇಂದೋ ಪರಿ ಸ್ರವ ॥

(ಋ ಸಂ ೯-೧೦೪-೩)

ಎಂಬ ಋಕ್ಕಿನಲ್ಲಿ ಅದಿತಿಪುತ್ರರು ಏಳುಜನರೆಂದಿದೆ

ಅಷ್ಟೌ ಪುತ್ರಾಸೋ ಅದಿತೇರ್ಯೇ ಜಾತಾಸ್ತನ್ವ ೧ ಸ್ಪರಿ ।
ದೇವಾঁ ಉಪಪ್ರೈತ್ಸಪ್ತಭಿಃ ಪರಾ ಮಾರ್ತಾಂಡಮಾಸ್ಯತ್ ॥
ಸಪ್ತಭಿಃ ಪುತ್ರೈರದಿತಿರುಪ ಪ್ರೈತ್ಪೂರ್ವ್ಯಂ ಯುಗಂ ।
ಪ್ರಜಾಯೈ ಮೃತ್ಯವೇ ತ್ವತ್ಪುನರ್ಮಾರ್ತಾಂಡಮಾಭರತ್ ॥

(ಋ ಸಂ. ೧೦-೭೨ ೮,೯)

ಎಂಬ ಋಕ್ಕುಗಳಲ್ಲಿ ಅದಿತಿಗೆ ಮೊದಲು ಏಳು, ಅನಂತರ ಮಾರ್ತಾಂಡನೆಂದು ಒಬ್ಬನು, ಒಟ್ಟು ಎಂಟುಮಂದಿ ಪುತ್ರರಿದ್ದರೆಂದು ಹೇಳಿದೆ ಇದಲ್ಲದೆ ತೈತ್ತಿರೀಯಾರಣ್ಯಕದಲ್ಲಿ—

ಅಷ್ಟೌ ಪುತ್ರಾಸೋ ಅದಿತೇಃ । ಯೇ ಜಾತಾಸ್ತನ್ವಃ ಪರಿ । ದೇವಾঁ ಉಪಪ್ರೈತ್ಸಪ್ತಭಿಃ । ಪರಾಮಾರ್ತಾಂಡಮಾಸ್ಯತ್ । ಸಪ್ತಭಿಃ ಪುತ್ರೈರದಿತಿಃ । ಉಪಪ್ರೈತ್ಪೂರ್ವ್ಯಂ ಯುಗಂ । ಪ್ರಜಾಯೈ ಮೃತ್ಯವೇ ಕತ್ । ಪರಾ ಮಾರ್ತಾಂಡಮಾಭರದಿತಿ । ತಾನನುಕ್ರಮಿಷ್ಯಾಮಃ । ಮಿತ್ರಶ್ಚ ವರುಣಶ್ಚ । ಧಾತಾ ಚಾರ್ಯಮಾ ಚ । ಅಗ್ಂಶಶ್ಚ ಭಗಶ್ಚ । ಇಂದ್ರಶ್ಚ ವಿವಸ್ವಾಗ್ಶ್ಚೇತ್ಯೇತೇ ॥ (ತೈ. ಆ. ೧-೧೩-೩)

ಎಂಬಲ್ಲಿ ಅದಿತಿಗೆ ಇದ್ದ ಎಂಟುಮಂದಿ ಪುತ್ರರ ಹೆಸರನ್ನೂ ಹೇಳದೆ ಮಿತ್ರ, ವರುಣ, ಧಾತಾ, ಅರ್ಯಮಾ, ಅಂಶ, ಭಗ, ಇಂದ್ರ, ವಿವಸ್ವಾನ್ ಎಂಬುವರೇ ಆ ಎಂಟು ಜನರು ಎಂದಿದೆ ಇದೇ ವಿಷಯವು ತೈತ್ತಿರೀಯಬ್ರಾಹ್ಮಣದಲ್ಲಿ

ಅದಿತಿಃ ಪುತ್ರಕಾಮಾ । ಸಾಧ್ಯೇಭ್ಯೋ ದೇವೇಭ್ಯೋ ಬ್ರಹ್ಮೌದನಮಪಚತ್ । ತಸ್ಯಾ ಉಚ್ಛೇಷಣಮದದುಃ । ತತ್ಪ್ರಾಶ್ನಾತ್ । ಸಾ ರೇತೋಧತ್ತ । ತಸ್ಯೈ ಧಾತಾ ಚಾರ್ಯಮಾ ಚಾಜಾಯೇತಾಂ । ಸಾ ದ್ವಿತೀಯಮಪಚತ್ । ತಸ್ಯಾ ಉಚ್ಛೇಷಣಮದದುಃ । ತತ್ಪ್ರಾಶ್ನಾತ್ । ಸಾ ರೇತೋಧತ್ತ । ತಸ್ಯೈ ಮಿತ್ರಶ್ಚ ವರುಣಶ್ಚಾಜಾಯೇತಾಂ । ಸಾ ತೃತೀಯಮಪಚತ್ । ತಸ್ಯಾ ಉಚ್ಛೇಷಣಮದದುಃ । ತತ್ಪ್ರಾಶ್ನಾತ್ । ಸಾ ರೇತೋಧತ್ತ । ತಸ್ಯಾ ಅಗ್ಂಶಶ್ಚ ಭಗಶ್ಚಾಜಾಯೇತಾಂ । ಸಾ ಚತುರ್ಥಮಪಚತ್ । ತಸ್ಯಾ ಉಚ್ಛೇಷಣಮದದುಃ । ತತ್ಪ್ರಾಶ್ನಾತ್ । ಸಾ ರೇತೋಧತ್ತ । ತಸ್ಯಾ ಇಂದ್ರಶ್ಚ ವಿವಸ್ವಾಗ್ಶ್ಚಾಜಾಯೇತಾಂ ॥

(ತೈ. ಬ್ರಾ. ೧-೧೯-೧,೨,೩)

ಎಂದು ಉಕ್ತವಾಗಿದೆ. ಅದಿತಿಯು ಎಂಟುಮಂದಿ ಪುತ್ರರನ್ನು ಪಡೆದ ವಿಷಯವು ಇಲ್ಲಿ ಸ್ಪಷ್ಟವಾಗಿ ವಿವರಿಸಿದೆ ಈ ಎಂಟು ಮಂದಿಯಲ್ಲಿ ಮಿತ್ರ, ವರುಣ, ಅರ್ಯಮಾ ಎಂಬ ಮೂರು ಮಂದಿಯೇ ಋಗ್ವೇದದಲ್ಲಿ ವಿಶೇಷವಾಗಿ ಪ್ರಸಿದ್ಧರಾದವರು. ಋ ಸಂ ೨.೨೭ ನೇ ಸೂಕ್ತದಲ್ಲಿ ಮಿತ್ರ, ವರುಣ, ಅರ್ಯಮಾ ಎಂಬುವರ ಲೋಕೋಪಕಾರವಾದ ಸಾಹಸಕೃತ್ಯತಳ ವಿಸ್ತಾರವಾದ ವರ್ಣನೆ ಇದೆ. ಮಿತ್ರಶಬ್ದದ ನಿರ್ವಚನವನ್ನು ಯಾಸ್ಕರು ತಮ್ಮ ನಿರುಕ್ತದಲ್ಲಿ ಈರೀತಿ ತಿಳಿಸಿದಾರೆ—

ಮಿತ್ರಃ ಪ್ರಮಿನಾತೇಸ್ತ್ರಾಯತೇ ಸಂಮಿನ್ವಾನೋ ದ್ರವತೀತಿ ವಾ । ಮೇದಯತೇರ್ವಾ ॥

(ನಿ ೧೦-೨೧)

ಮಿತ್ರಶಬ್ದಕ್ಕೆ ಅರ್ಥವೇನು, ಎಂದರೆ—**ಮಿತ್ರಃ ಕಸ್ಮಾತ್ । ಸ ಹಿ ಪ್ರಮಿನಾತೇಃ ತ್ರಾಯತೇ । ಪ್ರಮಿನಾತಿ ಮರಣಂ । ತತಃ ಸರ್ವಲೋಕಂ ತ್ರಾಯತೇ ವರ್ಷದ್ವಾರೇಣ ॥** ಪ್ರಮಿನಾತಿ ಎಂದರೆ ಮರಣವು. ಲೋಕದಲ್ಲಿ ಜನರಿಗೆ ವೃಷ್ಟಿಯನ್ನುಂಟುಮಾಡಿ ಆ ಮೂಲಕ ಅನ್ನಾದ್ಯಾಹಾರಗಳನ್ನು ಒದಗಿಸಿ, ಹಸಿವಿನಿಂದ ಉಂಟಾಗಬಹುದಾದ ಮರಣಭಯವನ್ನು ತಪ್ಪಿಸಿ ರಕ್ಷಿಸುತ್ತಾನಾದ್ದರಿಂದ ಈ ದೇವತೆಗೆ ಮಿತ್ರನೆಂದು ಹಸರು. **ಸಮಂತಕೋ ಮಿನ್ವಾನಃ ಉದಕೇನ ದ್ರವತಿ ಅಂತರಿಕ್ಷಲೋಕೇ ।** ಈ ದೇವತೆಯು ಉದಕಕ್ಕೆ ಅಧಿಪತಿಯಾಗಿ ಅಂತರಿಕ್ಷದಲ್ಲಿದ್ದುಕೂಡು ಮೇಘಗಳ ಮೂಲಕ ಸುತ್ತಲೂ ಎಂದರೆ ಸಮಸ್ತಪ್ರದೇಶವನ್ನೂ ಆಂಟಿಕೊಳ್ಳುವಂತೆ ಎಂದರೆ ಒಂದಾಗಿ ಸೇರಿಕೊಳ್ಳುವಂತೆ ಮಾಡುತ್ತಾನಾದ್ದರಿಂದ ಈ ದೇವತೆಗೆ ಮಿತ್ರನೆಂದು ಹೆಸರು ಎಂದು ಮೂರುವಿಧವಾದ ನಿಷ್ಪತ್ತಿಯನ್ನು ಹೇಳಿ ಅವನ್ನು ಸಮರ್ಥಿಸುವುದಕ್ಕಾಗಿ—

ಮಿತ್ರೋ ಜನಾನ್ ಯಾತಯತಿ ಬ್ರುವಾಣೋ ಮಿತ್ರೋ ದಾಧಾರ ಪೃಥಿವೀಮುತ ದ್ಯಾಂ ।
ಮಿತ್ರಃ ಕೃಷ್ಟೀರನಿಮಿಷಾಭಿ ಚಷ್ಟೇ ಮಿತ್ರಾಯ ಹವ್ಯಂ ಘೃತವಜ್ಜುಹೋತ ॥

(ಋ. ಸಂ. ೩.೫೯.೧)

ಎಂಬ ಋಕ್ಕನ್ನು ಉದಾಹರಣೆಗಾಗಿ ಕೊಟ್ಟಿರುವರು. ಈ ಋಕ್ಕಿನಲ್ಲಿ ಮಿತ್ರನು ಕೃಷ್ಯಾದಿಕರ್ಮಗಳಿಗೆ ಸಹಾಯಕನಾಗಿ ವೃಷ್ಟ್ಯಾದಿಗಳನ್ನು ಸುರಿಸಿ ಜನರಿಗೆ ಅನ್ನಾದ್ಯಾಹಾರಗಳನ್ನು ಒದಗಿಸುತ್ತಾ ಭೂಲೋಕದ ಜನರನ್ನೂ ಸ್ವರ್ಗನಿವಾಸಿಗಳನ್ನೂ ಧರಿಸಿ ಪೋಷಿಸುವನು. ಎಲೈ ಮನುಷ್ಯರೇ, ಇಂತಹ ಮಿತ್ರದೇವನಿಗೆ ಘೃತಮಿಶ್ರಿತವಾದ ಹವಿರಾದಿಗಳನ್ನು

ಅರ್ಪಿಸಿ ಎಂದು ಮಿತ್ರನ ಅಸಾಧಾರಣಗುಣಗಳನ್ನೂ ಲೋಕೋಪಕಾರವನ್ನೂ ಒಹುಚೆನ್ನಾಗಿ ವರ್ಣಿಸಿದೆ ಋಗ್ವೇದದಲ್ಲಿ ಮಿತ್ರನ ಪರವಾಗಿ ಇರುವ ಸೂಕ್ತವೆಂದರೆ ೯ ಋಕ್ಕುಗಳುಳ್ಳ ಮೂರನೇ ಮಂಡಲದ ೫೯ನೇ ಸೂಕ್ತಮಾತ್ರ. ಇತರ ಕಡೆ ಮಿತ್ರನು ವರುಣನೊದಲಾದ ಇತರ ದೇವತೆಗಳ ಜೊತೆಯಲ್ಲಿ ಸ್ತುತನಾಗಿದಾನೆ.

ಮಿತ್ರ ಮತ್ತು ವರುಣರ ಸಾಹಚರ್ಯವು ಬಹಳ ಹೆಚ್ಚಾಗಿರುವುದರಿಂದ ಮಿತ್ರನೊಬ್ಬನೇ ದೇವತೆಯಾಗಿರುವ ಸೂಕ್ತವು ಋಗ್ವೇದದಲ್ಲಿ ಹಿಂದೆ ಹೇಳಿದಂತೆ ಒಂದು ಮಾತ್ರವಿರುವುದು (ಋ ಸಂ. ೩-೫೯) ಅಲ್ಲಿಯೂ ಈ ದೇವತೆಯ ಸ್ತುತಿಭಾಗವು ಅಲ್ಪವೆ. ಆದರೆ ಮೊದಲನೆಯ ಋಕ್ಕಿನಲ್ಲಿಮಾತ್ರ ಮಿತ್ರನ ವೈಶಿಷ್ಟ್ಯವು ಚೆನ್ನಾಗಿ ವಿವರಿಸಲ್ಪಟ್ಟಿದೆ ಅದೇ ಸೂಕ್ತದ ಐದನೆಯ ಋಕ್ಕಿನಲ್ಲಿ–

ಮಹಾ ಆದಿತ್ಯೋ ನಮಸೋಪಸದ್ಯೋ ಯಾತಯಜ್ಜನೋ ಗೃಣತೇ ಸುಶೇವಃ ।

(ಋ ಸಂ ೩-೫೯-೫)

ಈ ಮಿತ್ರನನ್ನು ಮನುಷ್ಯರನ್ನೆಲ್ಲಾ ಒಟ್ಟಾಗಿ ಸೇರಿಸುವ ಮಹನೀಯನಾದ ಆದಿತ್ಯನೆಂದು ಕರೆದಿದೆ ಈ ಅರ್ಧವಿರುವ **ಯಾತಯಜ್ಜನಃ** ಎಂಬ ಶಬ್ದವು

ವ್ರತೇನ ಸ್ಥೋ ಧ್ರುವಕ್ಷೇಮಾ ಧರ್ಮಣಾ ಯಾತಯಜ್ಜನಾ ।

(ಋ ಸಂ. ೫ ೬೮-೩)

ಎಂಬ ಋಕ್ಕಿನಲ್ಲಿ ಮಿತ್ರಾವರುಣರಿಬ್ಬರ ಪರವಾಗಿಯೂ

ಮಿತ್ರಸ್ಯಯೋರ್ವರುಣೋ ಯಾತಯಜ್ಜನೋ್ಯರ್ಯಮಾ ಯಾತಯಜ್ಜನಃ ।

(ಋ ಸಂ. ೧೦-೧೨೬-೫)

ಎಂಬ ಋಕ್ಕಿನಲ್ಲಿ ಮಿತ್ರ ವರುಣ ಆರ್ಯಮಾ ಎಂದು ಮೂರುಮಂದಿಯ ಪರವಾಗಿಯೂ ಪ್ರಯುಕ್ತವಾಗಿದೆ. ಮೇಲೆ ಹೇಳಿದ ಋ. ಸಂ ೩-೫೯ನೆಯ ಸೂಕ್ತದಪ್ರಕಾರ ಮಿತ್ರನು ಸ್ವರ್ಗ ಮತ್ತು ಭೂಮಿಗಳಿಗೆ ಆಧಾರನಾಗಿದಾನೆ. ಮನುಷ್ಯರು ಐದು ಪಂಗಡಗಳು (ಪಂಚಜನಾಃ) ಅವನಿಗೆ ವಿಧೇಯರಾಗಿದಾರೆ ಇತರ ದೇವತೆಗಳಿಗೆಲ್ಲಾ ಅವನು ಜೀವನಾಧಾರನಾಗಿದಾನೆ ಎಂದು ಮಿತ್ರನ ಗುಣವರ್ಣನೆ ಇದೆ. ಋ ಸಂ ೫ ೬೧-೪ರಲ್ಲಿ ಸವಿತೃ ಮತ್ತು ಪಿತ್ರನು ಇಬ್ಬರೂ ಒಂದೇ ವ್ಯಕ್ತಿಯೆಂದೂ ವಾಜಸನೇಯ ಸಂಹಿತೆಯಲ್ಲಿ (ವಾ ಸಂ. ೪-೩) ಮಿತ್ರನ ನಿಯಮಗಳನ್ನನುಸರಿಸಿಯೇ ವಿಷ್ಣುವು ಮೂರು ಹೆಜ್ಜೆಗಳನ್ನಿಟ್ಟನೆಂದೂ, ಋ ಸಂ. ೫-೩-೧ರಲ್ಲಿ ಅಗ್ನಿಯು ಉತ್ಪನ್ನನಾದಾಗ ವರುಣನು, ದೀಪ್ತನಾದಾಗ ಮಿತ್ರನು ಎಂದೂ,

ಮಿತ್ರೋ ಅಗ್ನಿರ್ಭವತಿ ಯತ್ಸಮಿಧ್ಯೋ ಮಿತ್ರೋ ಹೋತಾ ವರುಣೋ ಜಾತವೇದಾಃ ।
ಮಿತ್ರೋ ಅಧ್ವರ್ಯುರಿಷಿರೋ ದಮೂನಾ ಮಿತ್ರಃ ಸಿಂಧೂನಾಮುತ ಪರ್ವತಾನಾಂ ॥

(ಋ. ಸಂ. ೩-೫-೪)

ಎಂಬಲ್ಲಿ ಚೆನ್ನಾಗಿ ಪ್ರಜ್ವಲಿತವಾದ ಅಗ್ನಿಯೇ ಮಿತ್ರನೆಂದೂ, ಈ ಮಿತ್ರನೇ ಯಜ್ಞದಲ್ಲಿ ಹೋತೃವೂ, ಅಧ್ವರ್ಯುವೂ, ವರುಣನೂ, ಜಾತವೇದಸ್ಸೆಂಬ ಅಗ್ನಿಯೂ ಆಗಿರುವನೆಂದೂ, ಇವನು ನದಿಗಳಿಗೂ ಪರ್ವತಗಳಿಗೂ ಸ್ನೇಹಿತ (ಹಿತಕಾರಿ) ನೆಂದೂ ಮಿತ್ರನ ಗುಣಗಳ ವರ್ಣನೆ ಇದೆ.

ಮಿತ್ರಶಬ್ದವು ಸೂರ್ಯನಿಗೆ ಪರ್ಯಾಯಪದವಾಗಿರುವುದೆಂದು ಸಾಯಣರ ಮತ ಮಿ ಮತ್ತು ತ್ರಾ ಎರಡು ಧಾತುಗಳೂ ಸೇರಿ ಮಿತ್ರಶಬ್ದವು ನಿಷ್ಪನ್ನವಾಗಿದೆಯೆಂದು ಈ ಶಬ್ದದ ಅವಯವಾರ್ಥವನ್ನು ಬಿಡಿಸಿ ಕೋರಿಸಿದ್ದಾರೆ **ಪ್ರಕರ್ಷೇಣ ಸರ್ವಮ್ಮಿಾಯತೇ ಜ್ಞಾಯತೇ ತಥಾ ಸರ್ವಾನ್ ವೃಷ್ಟಿಪ್ರದಾನೇನ ತ್ರಾಯತ ಇತಿ ವಾ**

ಮಿತ್ರಃ ಸೂರ್ಯಃ । ಎಲ್ಲರಿಂದಲೂ ಪೂರ್ಣವಾಗಿ ತಿಳಿಯಲ್ಪಡುತ್ತಾನೆ ಮತ್ತು ಎಲ್ಲರನ್ನೂ ರಕ್ಷಿಸುತ್ತಾನೆ. ಈ ಎರಡು ಗುಣಗಳೂ ಇರುವುದರಿಂದ ಸೂರ್ಯನು ಮಿತ್ರಶಬ್ದವಾಚ್ಯನಾಗುತ್ತಾನೆ. ಮಿತ್ರನೆಂಬ ಶಬ್ದಕ್ಕೆ ಸ್ನೇಹಿತ, ಹಿತಕಾರಿ ಎಂಬರ್ಥವು ಕೆಲವುಕಡೆ ಕಂಡುಬರುವುದು ಉದಾಹರಣೆಗೆ—

ಮಿತ್ರಂ ದೇವಾ ಅಬ್ರುವನ್ತ್ಸೋಮಗ್ಂ ರಾಜಾನಗ್ಂ ಹನಾಮೇತಿ ಸೋ೬ಬ್ರವೀನ್ನಾ-ಹಗ್ಂ ಸರ್ವಸ್ಯ ವಾ ಅಹಂ ಮಿತ್ರಮಸ್ಮೀತಿ ।

(ತೈ ಸಂ. ೬-೪-೮-೧)

ಒಂದುಸಮಯದಲ್ಲಿ ಸೋಮರಸವನ್ನು ಹಿಂಡುವ ಸಂದರ್ಭದಲ್ಲಿ ದೇವತೆಗಳು ಮಿತ್ರನನ್ನುಕುರಿತು ಇಂತೆಂದರು— ಎಲೈ ಮಿತ್ರನೇ, ನಾವು ಸೋಮರಾಜನನ್ನು(ಸೋಮಲತೆಯನ್ನು) ಸಂಹಾರಮಾಡೋಣ(ಜಜ್ಜಿ ಸೋಮರಸವನ್ನು ಹಿಂಡೋಣ ಎಂದು ಹೇಳಲು ಅದಕ್ಕೆ ಮಿತ್ರನು— ಎಲ್ಲಾದರೂ ಉಂಟೇ, ನಾನು ಎಲ್ಲರಿಗೂ ಸ್ನೇಹಿತನಾಗಿರುವುದರಿಂದಲೇ ನನಗೆ ಮಿತ್ರನೆಂಬ ಹೆಸರು ಬಂದಿದೆ. ಆದ್ದರಿಂದ ಈ ಕಾರ್ಯದಲ್ಲಿ ನಾನು ನಿಮ್ಮೊಡನೆ ಸೇರುವುದಿಲ್ಲ ಎಂದನು ಇತ್ಯಾದಿ ವಿಷಯಗಳು ಮಿತ್ರನ ಗುಣಗಳನ್ನು ವರ್ಣಿಸುವುವಾಗಿವೆ

ವರುಣಃ—ವರುಣೋ ವೃಣೋತೀತಿ ಸತಃ (ನಿ ೧೦-೨) ಮೇಘಸಮೂಹದಿಂದ ಆವೃತನಾದ್ದರಿಂದ ಈ ದೇವತೆಗೆ ವರುಣನೆಂದು ಹೆಸರು ಎಂದು ಯಾಸ್ಕರ ನಿರ್ವಚನವಿದೆ.

ವರುಣನು ಅತಿಶ್ರೇಷ್ಠನಾದ ದೇವತೆ, ಸಾಮರ್ಥ್ಯಾದಿಗಳಲ್ಲಿ ಇಂದ್ರನಿಗೆ ಸಮಾನನು. ವರುಣದೇವತಾಕವಾದ ಮಂತ್ರಗಳ ಸಂಖ್ಯೆ ಬಹಳ ಕಡಿಮೆ ವರುಣದೇವತಾಕವಾದ ಸೂಕ್ತಗಳು ಋಗ್ವೇದದಲ್ಲಿ ಹನ್ನೆರಡಿವೆ ಅದರ ಮಿತ್ರಾವರುಣರನ್ನು ಒಟ್ಟಾಗಿ ಸ್ತುತಿಸಿರುವ ಸೂಕ್ತಗಳು ಇಪ್ಪತ್ತನಾಲ್ಕು ಇವೆ.

ವರುಣನಿಗೆ ಮಾನುಷದೇಹ, ಮಾನುಷವ್ಯಾಪಾರಗಳುಂಟು. ಆದರೆ ಭೌತಿಕ ಶರೀರ ಮತ್ತು ವ್ಯಾಪಾರಗಳಿಗಿಂತ ಹೆಚ್ಚಾಗಿ ಅವನ ನೈತಿಕವ್ಯಾಪಾರಾದಿಗಳ ಮತ್ತು ಕಾರ್ಯಗಳ ವರ್ಣನೆಯೇ ಹೆಚ್ಚಾಗಿ ಸೂಚಿತವಾಗಿದೆ ಅವನಿಗೆ ಮುಖ, ಕಣ್ಣು, ತೋಳುಗಳು, ಕೈಗಳು ಮತ್ತು ಪಾದಗಳಿವೆ, ರಥ ನಡೆಯಿಸುತ್ತಾನೆ, ಕುಳಿತುಕೊಳ್ಳುತ್ತಾನೆ. ತಿನ್ನುತ್ತಾನೆ, ಪಾನಮಾಡುತ್ತಾನೆ ಇತ್ಯಾದಿ ಅವನ ಶರೀರವ್ಯಾಪಾರಗಳ ವಿವರಣೆ ಇದೆ ಅಗ್ನಿ, ಮಿತ್ರ, ಮತ್ತು ವರುಣರಿಗೆ ಸೂರ್ಯನೇ ನೇತ್ರನೆಂದು—

ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।

(ಋ. ಸಂ. ೧-೧೧೫-೧)

ಉದು ತ್ಯಚ್ಚಕ್ಷುರ್ಮಹಿ ಮಿತ್ರಯೋರ್ವಾ ಏತಿ ಪ್ರಿಯಂ ವರುಣಯೋರದಬ್ಧಂ ।

(ಋ ಸಂ. ೬-೫೧-೧)

ಉದ್ವಾಂ ಚಕ್ಷುರ್ವರುಣ ಸುಪ್ರತೀಕಂ ದೇವಯೋರೇತಿ ಸೂರ್ಯಸ್ತತನ್ವಾನ್ ।

(ಋ. ಸಂ. ೭-೬೧-೧)

ಚಕ್ಷುರ್ಮಿತ್ರಸ್ಯ ವರುಣಸ್ಯ ದೇವಶ್ಚರ್ಮೇವ ಯಃ ಸಮವಿವ್ಯಕ್ ತಮಾಂಸಿ ।

(ಋ. ಸಂ. ೭-೬೧-೩)

ನಮೋ ಮಿತ್ರಸ್ಯ ವರುಣಸ್ಯ ಚಕ್ಷಸೇ ಮಹೋ ದೇವಾಯ ತದೃತಂ ಸಪರ್ಯತ ।

(ಋ. ಸಂ. ೧೦-೩೭-೧)

ಎಂಬ ಋಕ್ಕುಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಸೂರ್ಯನು ಇವನಿಗೆ ನೇತ್ರಪ್ರಾಯನೆಂಬ ವಿಷಯವು ಮಿತ್ರಾವರುಣನೇವತಾಕವಾದ ಸೂಕ್ತಗಳ ಮೊದಲನೆಯ ಋಕ್ಕಿನಲ್ಲಿಯೇ ಇರುವುದರಿಂದ ಮಿತ್ರಾವರುಣರ ಪ್ರಸ್ತಾಪ ಬಂದಾಗಲೆಲ್ಲಾ ಮೊದಲು ಗೋಚರವಾಗುವುದೇ ಈ ಅಂಶವೆಂದು ತೋರುತ್ತದೆ. ಮತ್ತು ಋ. ಸಂ ೭-೬೬-೧೦ನೆಯ ಋಕ್ಕಿನಲ್ಲಿ ಆರ್ಯಮಾ, ಮಿತ್ರ ವರುಣರು ಸೂರ್ಯನೇತ್ರರೆಂದು ಹೇಳಿದೆ ವರುಣನು ದೂರದೃಷ್ಟಿಯುಳ್ಳವನು (**ಉರು-ಚಕ್ಷಸಂ**) ಎಂದು (ಋ. ಸಂ. ೧-೨೫-೫ ; ೧-೨೫-೧೬) ಮೊದಲಾದ ಋಕ್ಕುಗಳಲ್ಲಿ ಹೇಳಿದೆ.

ಆ ನೋ ಬರ್ಹೀ ರಿಶಾದಸೋ ವರುಣೋ ಮಿತ್ರೋ ಆರ್ಯಮಾ ।
ಸೀದಂತು ಮನುಷೋ ಯಥಾ ॥

(ಋ. ಸಂ ೧-೨೬-೪)

ವ್ರತೇನ ಸ್ಥೋ ಧ್ರುವಕ್ಷೇಮಾ ಧರ್ಮಣಾ ಯಾತಯಜ್ಜನಾ ।
ನಿ ಬರ್ಹಿಷಿ ಸದತಂ ಸೋಮಪೀತಯೇ ॥

(ಋ. ಸಂ ೫-೬೮-೩)

ಇತ್ಯಾದಿ ಋಕ್ಕುಗಳಲ್ಲಿ ಸೋಮಪಾನಕ್ಕಾಗಿ ಮಿತ್ರ ವರುಣ ಆರ್ಯಮರನ್ನು ಯಜ್ಞವೇದಿಯಲ್ಲಿ ಹಾಸಿರುವ ದರ್ಭೆಯ ಮೇಲೆ ಬಂದು ಕುಳಿತುಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ

ಯುವೀ ಸಖಾಯೌ ಸಖ್ಯಾಯ ಸೋಮ್ಯೈಃ ಸುತೇಭಿಃ ಸುಪ್ರಯಸಾ ಮಾದಯೈತೇ ।

(ಋ. ಸಂ. ೪-೪೯-೩)

ಇತ್ಯಾದಿ ಋಕ್ಕುಗಳಲ್ಲಿ ವರುಣನು ಇಂದ್ರಾದಿದೇವತೆಗಳೊಡನೆ ಸೋಮಪಾನಮಾಡುತ್ತಾನೆಂದು ಹೇಳಿದೆ

ಬಿಭ್ರದ್ವಾಪಿಂ ಹಿರಣ್ಯಯಂ ವರುಣೋ ವಸ್ತ ನಿರ್ಣಿಜಂ ।
ಪರಿ ಸ್ಪಶೋ ನಿ ಷೇದಿರೇ ॥ (ಋ. ಸಂ. ೧-೨೫-೧೩)

ಎಂಬ ಋಕ್ಕಿನಲ್ಲಿವರುಣನು ಸುವರ್ಣಮಯವಾದ ಮೇಲುಹೊದಿಕೆ ಅಥವಾ ಸಿಲುವಂಗಿಯನ್ನು (ಕವಚವನ್ನು) ಮತ್ತು ಹೊಳೆಯುವ ಉಡುಪನ್ನೂ ಧರಿಸುತ್ತಾನೆಂಬ ವರ್ಣನೆ ಇದೆ ವರುಣನ ರಥವು ಸುವರ್ಣಮಯವಾದುದು, ಮತ್ತು ಸೂರ್ಯನಂತೆ ಕಾಂತಿಯುಕ್ತವಾದದ್ದು ಮತ್ತು ಅದರಲ್ಲಿ ಅಶ್ವಪ್ರಯೋದಕವಾದ ಚಾವಟಿಗಳವೆ ಮಿತ್ರಾವರುಣರು ಆಕಾಶದಲ್ಲಿ ಬಹಳ ಎತ್ತರವಾದ ಪ್ರದೇಶದಲ್ಲಿ ರಥಾರೋಹಣಮಾಡುತ್ತಾರೆ. (ಋ. ಸಂ. ೫ ೬೩ ೧) ಇತ್ಯಾದಿ ವರ್ಣನೆಗಳವೆ

ಮಿತ್ರಾವರುಣರ ವಾಸಗೃಹವು ಸುವರ್ಣಮಯವಾದುದು ಮತ್ತು ಅದು ಮೇಲುಲೋಕದಲ್ಲಿದೆ. ವರುಣನು ಆಲ್ಲಿರುವ ತನ್ನ ಪ್ರಾಸಾದದಲ್ಲಿ ಕುಳಿತು—

ನಿ ಷಸಾದ ಧೃತವ್ರತೋ ವರುಣಃ ಪಸ್ತ್ಯಾ ೩ ಸ್ವಾ ।
ಸಾಮ್ರಾಜ್ಯಾಯ ಸುಕ್ರತುಃ ॥
ಅತೋ ವಿಶ್ವಾನ್ಯದ್ಭುತಾ ಚಿಕಿತ್ವಾ ಅಭಿ ಪಶ್ಯತಿ ।
ಕೃತಾನಿ ಯಾ ಚ ಕರ್ತ್ವಾ ॥

(ಋ. ಸಂ. ೧ ೨೫-೧೦,೧೧)

ಪ್ರಪಂಚದಲ್ಲಿ ನಡೆಯುವುದನ್ನೆಲ್ಲಾ ನೋಡುತ್ತಾನೆ. ಮಿತ್ರಾವರುಣರ ವಾಸಸ್ಥಾನವು ಬಹಳ ದೊಡ್ಡದು, ಒಹಳ ಎತ್ತರವಾದುದು, ಸಹಸ್ರಸ್ತಂಭಗಳುಳ್ಳದ್ದಾಗಿ ದೃಢವಾಗಿದೆ. ಮತ್ತು ಅವರ ಮನೆಗೆ ಸಹಸ್ರದ್ವಾರಗಳವೆ. (ಋ. ಸಂ. ೭-೮೮-

೫). ಸರ್ವದರ್ಶಿಯಾದ ಸೂರ್ಯನು ತನ್ನ ವಾಸಸ್ಥಾನದಿಂದ ಹೊರಟು ಮಿತ್ರಾವರುಣರ ಮನೆಗೆ ಮನುಷ್ಯರ ಕೆಲಸಗಳನ್ನು ತಿಳಿಸಲು ಹೋಗುತ್ತಾನೆ, ಮತ್ತು ಅವರ ಪ್ರಿಯವಾದ ಮನೆಯನ್ನು ಪ್ರವೇಶಿಸುತ್ತಾನೆ ಇತ್ಯಾದಿ ವರ್ಣನೆಗಳೂ ಇವೆ. ವರುಣನು ಒಂಟಿಯಾಗಿ ಅಥವಾ ಮಿತ್ರಸಹಿತನಾಗಿ ಇತರ ದೇವತೆಗಳಂತೆ ಅನೇಕಕಡೆ ರಾಜನೆಂಬ ರಬ್ದದಿಂದ ಕರೆಯಲ್ಪಟ್ಟದಾನೆ

ಅಬುಧ್ನೇ ರಾಜಾ ವರುಣೋ ವನಸ್ಯೋರ್ಧ್ವಂ ಸ್ತೂಪಂ ದದತೇ ಪೂತದಕ್ಷಃ ।

(ಋ. ಸಂ. ೧-೨೪-೭)

ತ್ವಂ ವಿಶ್ವೇಷಾಂ ವರುಣಾಸಿ ರಾಜಾ ಯೇ ಚ ದೇವಾ ಅಸುರ ಯೇ ಚ ಮರ್ತಾಃ ।

(ಋ ಸಂ. ೨-೨೭-೧೦)

ತೇನ ವಿಶ್ವಸ್ಯ ಭುವನಸ್ಯ ರಾಜಾ ಯವಂ ನ ವೃಷ್ಟಿರ್ವ್ಯನತ್ತಿ ಭೂಮ ।

(ಋ ಸಂ ೫-೪೫-೩)

ಇತ್ಯಾದಿ ಯಕ್ಕುಗಳಲ್ಲಿ ವರುಣನು ಮನುಷ್ಯರಿಗೆ ಮಾತ್ರವೇ ಅಲ್ಲ, ದೇವತೆಗಳಿಗೂ ಸಕಲ ಲೋಕಗಳಿಗೂ ರಾಜನೆಂದು ಹೇಳಿದೆ. ವರುಣನಲ್ಲದೇ ಇಂದ್ರ, ಯಮ, ಸೋಮ ಮೊದಲಾದ ದೇವತೆಗಳಿಗೂ ರಾಜನೆಂಬ ಗೌರವಸೂಚಕವಾನ ಹೆಸರಿದೆ

ಇಂದ್ರನ ಸಂಬಂಧವಾದ ಕಥೆಗಳು ಅನೇಕವಿವೆ ಆದರೆ ವರುಣನ ವಿಷಯದಲ್ಲಿ ಇದಕ್ಕೆ ತೀರಾವಿರುದ್ಧವಾಗಿದೆ. ಒಂದಾದರೂ ಕಥೆಗಳಿಲ್ಲ ವರುಣನು ಭೌತಿಕ ಮತ್ತು ನೈತಿಕವಿಧಿಗಳ ನಿಯಾಮಕನೆಂದು **(ವರುಣಸ್ಯ ವ್ರತಾನಿ)** ಬಹಳವಾಗಿ ಹೊಗಳಿದೆ. ಮಿತ್ರಾವರುಣರ ದೈವಶಕ್ತಿಯನ್ನು ಮಾಯಾ ಎಂಬ ಪದದಿಂದ ವರ್ಣಿಸಿದೆ. ಇದು ದೇವತೆಗಳಿಗೆ ಅನ್ವಯಿಸುವಾಗ ಒಳ್ಳೆಯದನ್ನು ಮಾಡಲು ಅವರಿಗಿರುವ ಗೂಢವಾದ ಶಕ್ತಿ ಎಂತಲೂ ಅರ್ಥ. ಒಳ್ಳೆಯ ಅರ್ಥದಲ್ಲಿ ಮಿತ್ರಾವರುಣರಿಗೆ ಈ ಪದವು ಸಲ್ಲುತ್ತದೆ. ಕೆಟ್ಟ ಅರ್ಥದಲ್ಲಿ ರಾಕ್ಷಸರಿಗೆ ಅನ್ವಯಿಸುತ್ತದೆ ಅಸುರಶಬ್ದಾರ್ಥದಂತೆ ಮಾಯಾಶಬ್ದಕ್ಕೂ ಎರಡರ್ಥಗಳಲ್ಲಿಯೂ ಪ್ರಯೋಗವಿದೆ ತನ್ನಲ್ಲಿ ನಿಗೂಢವಾದ ಈ ಮಾಯಾಶಕ್ತಿಯಿಂದ ವರುಣನು ವಾಯುಮಂಡಲದಲ್ಲಿ ನಿಂತು ಅಳತೆಕಡ್ಡಿಯಿಂದ ಅಳೆಯುವಂತೆ ಸೂರ್ಯನಿಂದ ಭೂಮಿಯನ್ನು ಅಳೆಯುತ್ತಾನೆ. ಸೂರ್ಯನು ಅಂತರಿಕ್ಷವನ್ನು ದಾಟುವಂತೆ ಮಾಡಿ ಅವನನ್ನು ಮುಳೆಮೋಡಗಳಿಂದ ಮುಸಕಾಗುವಂತೆ ಮಾಡುತ್ತಾನೆ. ಆಗ ಮಧುಮಿಶ್ರಿತವಾದ (ಸಿಹಿಯಾದ) ಹನಿಗಳು ಉದುರುತ್ತವೆ (ಋ. ಸಂ ೫-೬೩-೪) ಆಕಾಶವು ಮುಳೆಗರೆಯುವಂತೆ ಮಾಡುತ್ತಾನೆ ಆದ್ದರಿಂದ ಈ ಮಾಯಾ ಎಂಬ ಪದವು ಋ ಸಂ ೬-೪೮-೪, ೭-೫೮-೪, ೧೦೯೯-೧೦, ೧೦-೧೪೭-೫ ಮೊದಲಾದ ಋಕ್ಕುಗಳಲ್ಲೆಲ್ಲಾ ದೇವತೆಗಳಲ್ಲಿ ಮುಖ್ಯವಾಗಿ ವರುಣನಿಗೇ ಅನ್ವಯಿಸಿ ಹೇಳಿದೆ

ಪ್ರಕೃತಿನಿಯಮಗಳನ್ನು ವಿಧಿಸುವವನು ವರುಣನು. ಅವನೇ ಭೂಮಿ ಮತ್ತು ಸ್ವರ್ಗಗಳನ್ನು ಸ್ಥಾಪಿಸಿದನು. ಮತ್ತು,

ಅಸೀದದ್ವಿಶ್ವಾ ಭುವನಾನಿ ಸಮ್ರಾಡ್ವಿಶ್ವೇತ್ತಾನಿ ವರುಣಸ್ಯ ವ್ರತಾನಿ ।

(ಋ. ಸಂ. ೪-೪೨-೧)

ಎಂಬ ಋಕ್ಕಿನಲ್ಲಿ, ವರುಣನು ಸಮಸ್ತಲೋಕಗಳಲ್ಲಿಯೂ ವಾಸಮಾಡುವನೆಂದೂ, ಅವನ ನಿಯಮಾದಿಗಳು ಅಲ್ಲೆಲ್ಲಾ ಆಚರಿಸಲ್ಪಡುವುವೆಂದೂ,

ತಿಸ್ರೋ ದ್ಯಾವೋ ನಿಹಿತಾ ಅಂತರಸ್ಮಿಂಸ್ತಿಸ್ರೋ ಭೂಮಿರುಪರಾಃ ಷಡ್ವಿಧಾನಾಃ ।

(ಋ. ಸಂ. ೭-೮೭-೫)

ಎಂಬಲ್ಲಿ ಮೂರು ಊರ್ಧ್ವಲೋಕಗಳೂ, ಮೂರು ಭೂ (ಅಧೋ) ಲೋಕಗಳೂ ಅವನ ವಶದಲ್ಲಿವೆಯೆಂದು ಹೇಳಿದೆ. ವರುಣ ಮತ್ತು ಮಿತ್ರರು ಪ್ರಪಂಚವೆಲ್ಲವನ್ನೂ ಆಳುತ್ತಾರೆ (ಋ. ಸಂ. ೫-೬೩-೭). ಅವರೇ ಸಮಸ್ತ ಜಗತ್ತಿಗೂ ರಕ್ಷಕರು (ಋ. ೨-೨೭-೪). ವರುಣನು ಸ್ವರ್ಗ, ಭೂಮಿ, ಆಕಾಶಗಳಿಗೆ ಆಧಾರಭೂತನಾಗಿದ್ದಾನೆ (ಋ ಸಂ. ೫-೬೯-೧, ೪). ಅವನು ಉದಕದಲ್ಲಿ ಅಗ್ನಿಯನ್ನೂ, ಆಕಾಶದಲ್ಲಿ ಸೂರ್ಯನನ್ನೂ, ಕಲ್ಲಿನಮೇಲೆ ಸೋಮನನ್ನೂ ಇಟ್ಟಿದ್ದಾನೆ. ಸೂರ್ಯನಿಗೋಸ್ಕರ ಅಗಲವಾದ ದಾರಿಯನ್ನು ಮಾಡಿದ್ದಾನೆ. ವರುಣ, ಮಿತ್ರ ಮತ್ತು ಅರ್ಯಮರು ಸೂರ್ಯನಿಗೋಸ್ಕರ ದಾರಿಯನ್ನು ಬಿಡಿಸುತ್ತಾರೆ (ಋ. ಸಂ. ೩-೬೦-೪) ಇತ್ಯಾದ್ಯನೇಕ ಋಕ್ಕುಗಳಲ್ಲಿ ವರುಣನ ಅಧಿಕಾರದ ವರ್ಣನೆ ಇದೆ

ತೈತ್ತಿರೀಯಸಂಹಿತೆಯಲ್ಲಿ (ತೈ ಸಂ. ೬-೪-೮-೩) **ಮಿತ್ರೋ೨ಹರಜನಯದ್ವರುಣೋ ರಾತ್ರಿಂ**—ಎಂದರೆ ಮಿತ್ರನು ಹಗಲನ್ನೂ ವರುಣನು ರಾತ್ರಿಯನ್ನೂ ಸೃಷ್ಟಿಮಾಡಿದರೆಂದಿದೆ ಆದ್ದರಿಂದ— **ಮೈತ್ರಂ ವಾ ಅಹಃ। ವಾರುಣೀ ರಾತ್ರಿಃ।** ಎಂದರೆ ಮಿತ್ರನು ಹಗಲಿಗೆ ಅಧಿಪತಿಯೆಂದೂ ವರುಣರು ರಾತ್ರಿಗೆ ಅಧಿಪತಿಯೆಂದೂ ಅನೇಕಕಡೆಗಳಲ್ಲಿ ಹೇಳಿದೆ ಒಂದು ಸ್ಥಳದಲ್ಲಿ (ತೈ. ಸಂ. ೨-೧-೭-೪) ವರುಣನು ಋತುಗಳನ್ನು ವಿಭಜಿಸಿದನೆಂದು ಹೇಳಿದೆ.

ವೇದ ಮಾಸೋ ಧೃತವ್ರತೋ ದ್ವಾದಶ ಪ್ರಜಾವತಃ।
ವೇದಾ ಯ ಉಪಜಾಯತೇ ॥

(ಋ ಸಂ. ೧-೨೫-೮)

ಎಂಬಲ್ಲಿ ವರುಣನಿಗೆ ಹನ್ನೆರಡು ಮಾಸಗಳೂ ತಿಳಿದಿವೆಯೆಂದೂ,

ವಿ ಯೋ ದಧೌ ಶರದಂ ಮಾಸಮಾದಹರ್ಯಜ್ಞಮಕ್ತುಂ ಜಾದೃಚಂ।
ಅನಾಪ್ಯಂ ವರುಣೋ ಮಿತ್ರೋ ಅರ್ಯಮಾ ಕ್ಷತ್ರಂ ರಾಜಾನ ಆಶತ ॥

(ಋ. ಸಂ. ೭-೬೬-೧೧)

ಎಂಬ ಋಕ್ಕಿನಲ್ಲಿ ಮಿತ್ರ ವರುಣ ಆರ್ಯಮರು, ಶರತ್ಕಾಲ, ತಿಂಗಳು, ಹಗಲು ಮತ್ತು ರಾತ್ರಿಗಳನ್ನು ವಿಂಗಡಿಸಿದರು ಎಂದೂ ಹೇಳಿದೆ.

ಉದಕವನ್ನು ಕ್ರಮಪಡಿಸುವವನೂ ವರುಣನೇ ಎಂದು ಅನೇಕಕಡೆಗಳಲ್ಲಿ ಹೇಳಿದೆ. ನದಿಗಳು ಹರಿಯುವಂತೆ ಮಾಡಿದವನೂ ಅವನೇ. ಅವನ ಆಜ್ಞೆಯಂತೆಯೇ ಅವು ಯಾವಾಗಲೂ ಪ್ರವಹಿಸುತ್ತಿರುತ್ತವೆ (ಋ. ಸಂ ೨-೨೮-೪) ನದಿಗಳು ವೇಗವಾಗಿ ಹರಿಯುತ್ತಾ ಸಮುದ್ರದೊಳಕ್ಕೆ ನೀರನ್ನು ತಂದು ಸುರಿಯುತ್ತಿದ್ದರೂ ಅದನ್ನು ತುಂಬದಿರುವುದು ಅವನ ಗೂಢವಾದ ಶಕ್ತಿಯಿಂದಲೇ (ಋ. ಸಂ ೫-೮೫-೬). ವರುಣ ಮತ್ತು ಮಿತ್ರರು ನದಿಗಳಿಗೆ ಒಡೆಯರು. ವರುಣನು ಸಾಗರಗಳಿಗೆ ಒಡೆಯನೆಂಬುದು ಸಿದ್ಧವಾದ ಅಂಶವಾದರೂ ಋಗ್ವೇದದಲ್ಲಿ ಈ ವಿಷಯವನ್ನು ತಿಳಿಸಿರುವುದು ಅಪರೂಪ. ಪ್ರಾಯಶಃ ಇದು ಅಮುಖ್ಯವೆಂದೇ ಇದನ್ನು ಬಿಟ್ಟಿರಬಹುದು. ಪುರಾಣಾದಿಗಳಲ್ಲಿ ವರುಣನು ಜಲಾಧಿಪತಿಯೆಂದು ಪ್ರಸಿದ್ಧನಾಗಿದ್ದಾನೆ. ಮತ್ತು ವರುಣನು ಅಷ್ಟದಿಕ್ಪಾಲಕರಲ್ಲಿ ಒಬ್ಬನಾಗಿ ಪಶ್ಚಿಮದಿಕ್ಕಿಗೆ ಅಧಿಪತಿಯೆಂದು ಪುರಾಣಾದಿಗಳಲ್ಲಿ ಹೇಳಿರುವ ವಿಷಯ ಋಗ್ವೇದದಲ್ಲಿ ಅದಕ್ಕೆ ಯಾವ ಸಮರ್ಥನೆಯೂ ಇಲ್ಲ. ಸಾಧಾರಣವಾಗಿ ವರುಣನಿಗೆ ಸಂಬಂಧವಿರುವುದೆಲ್ಲಾ ವಾಯುಮಂಡಲದಲ್ಲಿರುವ ನೀರಿನೊಡನೆಯೇ ಸೃಷ್ಟಿಗಾಗಿ ಪ್ರಾರ್ಥಿಸಲ್ಪಡುವ ದೇವತೆಗಳಲ್ಲಿ ವರುಣ ಮತ್ತು ಮಿತ್ರರೇ ಮುಖ್ಯರಾದವರು. ಪರ್ವತಗಳೆಲ್ಲಾ ಮೋಡಗಳಿಂದ ಆವೃತವಾಗಿರುವಾಗ ಮುಡಮೇಲಾದ ಬಾಣಿಯಿಂದ (ಮೋಡದಿಂದ) ಸ್ವರ್ಗ, ಭೂಮಿ ಮತ್ತು ಆಕಾಶಗಳಿಗೆ ನೀರ್ಗರೆದು ಭೂಮಿಯನ್ನೆಲ್ಲಾ

ವರುಣನು ನೆನೆಯುವಂತೆ ಮಾಡುವನು ಎಂದು ಋ ಸಂ. ೫-೮೫-೩,೪ನೆಯ ಋಕ್ಕುಗಳಲ್ಲಿ ಹೇಳಿದೆ. ಒಂದು ಇಡೀ ಸೂಕ್ತವೇ (ಋ. ಸಂ. ೫-೬೩ನೇ ಸೂಕ್ತ) ಅವರ ಮಳೆಗರೆಯುವ ಶಕ್ತಿಯನ್ನು ಪ್ರಶಂಸಿಸಿದೆ. ತೈತ್ತಿರೀಯಸಂಹಿತೆಯಲ್ಲಿ (ತೈ. ಸಂ. ೫-೫-೪-೧) **ಆಪೋ ವರುಣಸ್ಯ ಪತ್ನಯ ಆಸನ್**—ಉದಕಗಳು ವರುಣನ ಪತ್ನಿಯರೆಂದೂ (ತೈ ಸಂ. ೬-೪-೩-೩) **ಮಿತ್ರಾವರುಣೌ ವಾ ಆಪಾಂ ನೇತಾರೌ**–ಮಿತ್ರಾವರುಣರು ನೀರಿಗೆ ನಾಯಕರು ಎಂದೂ ಹೇಳಿದೆ.

ವರುಣನ ಶಾಸನಗಳು ಚೆನ್ನಾಗಿ ಸ್ಥಾಪಿತವಾಗಿದೆಯೆಂದು ಪದೇಪದೇ ಹೇಳಲ್ಪಟ್ಟಿದೆ. ಈ ಕಾರಣದಿಂದಲೇ ಅವನಿಗೆ ಧೃತವ್ರತ ಎಂದು ಹೆಸರು. ಮಿತ್ರಾವರುಣರಿಬ್ಬರಿಗೂ ಈ ವಿಶೇಷಣವಿದೆ.

ಪರಿ ಧಾಮಾನಿ ಮಮ್ರ್ಯಶದ್ವರುಣಸ್ಯ ಪುರೋ ಗಯೇ ವಿಶ್ವೇದೇವಾ ಅನು ವ್ರತಂ ನಭಂತಾಮನ್ಯಕೇ ಸಮೇ ॥

(ಋ ಸಂ. ೪ ೪೧-೭)

ನ ವಾಂ ದೇವಾ ಅಮೃತಾ ಏ ಮಿನಂತಿ ವ್ರತಾನಿ ಮಿತ್ರಾವರುಣಾ ಧ್ರುವಾಣಿ ॥

(ಋ. ಸಂ. ೫-೬೯-೪)

ಇತ್ಯಾದಿ ಋಕ್ಕುಗಳಲ್ಲಿ ದೇವತೆಗಳೂ ಸಹ ಮಿತ್ರಾವರುಣಾರ್ಯಮರ ಆಜ್ಞೆಗಳನ್ನು ಪಾಲಿಸುತ್ತಾರೆಂದೂ, ಅನಾದಿದೇವತೆಗಳೂ ಕೂಡ ಅವರ ಧೃತವ್ರತಗಳನ್ನು ಮೀರಲಾರರೆಂದೂ ಹೇಳಿದೆ. ಮಿತ್ರಾವರುಣರು ನಿಯಮ (ಋತ) ಮತ್ತು ಬೆಳಕಿಗೆ ನಿಯಾಮಕರು ಈ ಶಾಸನಗಳ ಬಲದಿಂದಲೇ ಅವರು ನಿಯಮಗಳಿಗೆ ಬೆಂಬಲಕೊಡಲು ಸಾಧ್ಯವಾಗಿದೆ. ಈ ಗುಣವು ವಿಶೇಷವಾಗಿ ಇವರಿಬ್ಬರಲ್ಲಿ, ಒಂದೊಂದು ವೇಳೆ ಆದಿತ್ಯರಲ್ಲಿ, ಅಥವಾ ಇತರ ಸಾಧಾರಣದೇವತೆಗಳಲ್ಲಿಯೂ ಕಂಡುಬರುತ್ತದೆ. ಅವರು ಸತ್ಯ (ಋತ) ಮತ್ತು ನ್ಯಾಯವನ್ನು ಅಭಿವೃದ್ಧಿಗೊಳಿಸುವವರು ಅಥವಾ ಅವುಗಳ ರಕ್ಷಕರು **(ಋತಸ್ಯ ಗೋಪಾಃ)** ಅಥವಾ ನಿಯಮಗಳನ್ನು ಪಾಲಿಸುವಂತೆ ಮಾಡುವವರು ಎಂಬ ವಿಶೇಷಣವು ಮಿತ್ರಾವರುಣರಿಗೆ ಅನೇಕವೇಳೆ ಪ್ರಯೋಗಿಸಿರುವುದು ಕಂಡುಬರುತ್ತದೆ.

ವರುಣನ ಶಕ್ತಿಯು ಅಗಾಧವಾದುದು. ಹಾರುವ ಪಕ್ಷಿಗಳಾಗಲಿ, ಹರಿಯುವ ನದಿಗಳಾಗಲಿ, ಅವನ ರಾಜ್ಯದ ಗಡಿಯ ಮೇರೆಯನ್ನು ಸೇರಲಾರವು, ಅವನ ಶಕ್ತಿಯನ್ನು ಮೀರಲಾರವು, ಅವನ ಕೋಪವನ್ನು ತಡೆಯಲಾರವು. ಮಿತ್ರಾವರುಣರ ಸೀಮೆಯ ಎಲ್ಲೆಕಟ್ಟನ್ನು ಆಕಾಶ ಮತ್ತು ನದಿಗಳು ಕೂಡ ತಲಪಿಲ್ಲ. ಸಮಸ್ತವೂ ವರುಣನಲ್ಲಿಯೇ ಅಡಗಿವೆ ಎಲ್ಲಾ ಪ್ರಾಣಿಗಳ ವಸತಿಗಳೂ, ಮೂರು ಸ್ವರ್ಗಗಳೂ ಮೂರು ಭೂಲೋಕಗಳೂ ಅವನಲ್ಲಿಯೇ ಸ್ಥಾಪಿತವಾಗಿವೆ. ವರುಣನು ಸರ್ವಜ್ಞನು. ಆಕಾಶದಲ್ಲಿ ಪಕ್ಷಿಗಳ ಹಾರಾಟ, ಸಮುದ್ರದಲ್ಲಿ ನಾವೆಗಳ ಸಂಚಾರ, ದೂರ ಗಾಮಿಯಾದ ವಾಯುವಿನ ಗತಿ ಇವೆಲ್ಲವೂ ಅವನಿಗೆ ತಿಳಿದಿದೆ. ಹಿಂದೆ ಕಳೆದುಹೋದ ಅಥವಾ ಮುಂದೆ ಬರುವ ಎಲ್ಲಾ ಸಂಗತಿಗಳನ್ನೂ ಅವನು ನೋಡುತ್ತಾನೆ ಮನುಷ್ಯರ ಸತ್ಯಾಸತ್ಯಕರ್ಮಗಳ ಸಾಕ್ಷಿಯಾಗಿದ್ದಾನೆ ಪ್ರತಿಯೊಬ್ಬ ಮನುಷ್ಯನು ಮಾಡುವ ಕಾರ್ಯಗಳು, ಯೋಜನೆಗಳು, ಉಪಾಯಗಳು ಎಲ್ಲವೂ ವರುಣನಿಗೆ ತಿಳಿಯುತ್ತವೆ. ಸ್ವರ್ಗ ಮತ್ತು ಭೂಲೋಕಗಳಲ್ಲಿ ಮತ್ತು ಅವುಗಳಿಂದಾಚೆ ಇರುವುದೆಲ್ಲವನ್ನೂ ಅವನು ಗ್ರಹಿಸಬಲ್ಲನು. ಆಕಾಶದಾಚೆ ಎಷ್ಟೋದೂರ ಓಡಿಹೋದರೂ ಯಾರೂ ವರುಣನ ದೃಷ್ಟಿಪಥವನ್ನು ಬಿಟ್ಟುಹೋಗಲಾಗುವುದಿಲ್ಲ.

ನೀತಿನಿಯಾಮಕನಾದುದರಿಂದ ವರುಣನಿಗೆ ಪಾಪವೆಂದರೆ ಬಹಳ ಕೋಪ ಬರುತ್ತದೆ. ಅವನ ನಿಯಮಗಳನ್ನುಲ್ಲಂಘಿಸಿದರೂ ಕೋಪ. ಇವೆರಡಕ್ಕೂ ಅವನು ಬಹಳ ಕ್ರೂರಶಿಕ್ಷೆಯನ್ನು ವಿಧಿಸುತ್ತಾನೆ. ಪಾಪಿಗಳನ್ನು ಬಂಧಿ

ಸುವ ವರುಣನ ಪಾಶವು ಋ. ಸಂ. ೧–೨೪-೧೫, ೧-೨೫ ೧೧, ೬-೭೪ ೪, ೧೦–೮೫-೭೪ ಮೊದಲಾದ ಋಕ್ಕುಗಳಲ್ಲಿ ಉಕ್ತವಾಗಿದೆ. ಆ ಪಾಶವು ಅನೃತವಾದಿಯನ್ನು ಬಂಧಿಸುತ್ತದೆ, ಸತ್ಯವಾದಿಯನ್ನು ಬಿಟ್ಟುಬಿಡುತ್ತದೆ.

ಯುವೋ ರಾಷ್ಟ್ರಂ ಬೃಹದಿನ್ನತಿ ದ್ಯೌರ್ಯೋ ಸೇತೃಭಿರರಜ್ಜುಭಿಃ ಸಿನೀಥಃ ।
ಪರಿ ನೋ ಹೇಳೋ ವರುಣಸ್ಯ ವೃಜ್ಯಾ ಉರುಂ ನ ಇಂದ್ರಃ ಕೃಣವದು ಲೋಕಂ ॥

(ಋ ಸಂ ೭-೪೪-೨)

ಎಂಬ ಋಕ್ಕಿನಲ್ಲಿ ಇಂದ್ರನೊಡನಿರುವ ವರುಣನು ಹಗ್ಗವಿಲ್ಲದ ಒಂಧನಗಳಿಂದ ಕಟ್ಟುತ್ತಾನೆ ಎಂದು ಹೇಳಿದೆ ಈ ಪಾಶವೆಂಬ ಶಬ್ದವು ಋಗ್ವೇದದಲ್ಲಿ ಅಗ್ನಿದೇವತಾಕವಾದ ಮಂತ್ರಗಳಲ್ಲಿ ಒಂದೊಂದೆಡೆ ಮಾತ್ರ ಬಂದಿದೆ ಆದೂ, ಅವನ ಭಕ್ತರನ್ನು ಬಂಧಿಸಿರುವ ಪಾಶವನ್ನು ಬಿಡಿಸು ಎಂದು ಪ್ರಾರ್ಥಿಸುವ ಸಂದರ್ಭದಲ್ಲಿ ಆದ್ದರಿಂದ ಈ ಪಾಶಬಂಧನ, ಪಾಶ ವಿಮೋಚನ ಎಂಬ ಕಾರ್ಯಗಳು ವರುಣನಿಗೆ ಮಾತ್ರ ಸಂಬಂಧಿಸಿದ್ದೆಂದು ಹೇಳಬಹುದು ಮಿತ್ರಸಹಿತನಾದ ವರುಣನು ಅನೃತವನ್ನು ಓಡಿಸುವವನು, ದ್ವೇಷಿಸುವವನು ಮತ್ತು ಶಿಕ್ಷಿಸುವವನು. ಮಿತ್ರಾವರುಣರು ತಮ್ಮನ್ನು ಸ್ತುತಿಸದವರ ವಿಷಯದಲ್ಲಿಯೂ, ತಾತ್ಸಾರದಿಂದಿರುವವರನ್ನೂ ಶಿಕ್ಷಿಸುತ್ತಾರೆ ಆದರೆ ವರುಣನು ಪಶ್ಚಾತ್ತಾಪಪಡುವವರನ್ನು ಮನ್ನಿಸುತ್ತಾನೆ, ಪಾಶದಿಂದ ಬಿಚ್ಚುತ್ತಾನೆ. ಮತ್ತು ಪಾಪಪರಿಹಾರಮಾಡುತ್ತಾನೆ ಸ್ವತಃ ಮಾಡಿದ ಪಾಪದಿಂದ ಮಾತ್ರವಲ್ಲ, ಅವನ ಪೂರ್ವೀಕರು ಮಾಡಿದ ಪಾಪದಿಂದಲೂ ಮನುಷ್ಯನನ್ನು ಬಿಡುಗಡೆಮಾಡುತ್ತಾನೆ ತನ್ನಿಂದ ವಿಧಿಸಲ್ಪಟ್ಟ ನಿಯಮಗಳನ್ನೇ ಪ್ರತಿಸಿತ್ಯವೂ ಉಲ್ಲಂಘಿಸಿ ಅನಂತರ ಪಶ್ಚಾತ್ತಾಪಪಡುವವರನ್ನು ರಕ್ಷಿಸುತ್ತಾನೆ ಮತ್ತು ತನ್ನ ಆಜ್ಞೆಗಳನ್ನು ವಿಸ್ಮೃತಿಯಿಂದ ಉಲ್ಲಂಘಿಸಿದವರಲ್ಲಿ ಕಸಿಕರವನ್ನು ತೋರುತ್ತಾನೆ ವರುಣನಲ್ಲಿ ನೂರಾರು, ಸಾವಿರಾರು ಔಷಧಗಳಿವೆ. ಅವನು ಮೃತ್ಯುವನ್ನು ದೂರ ಓಡಿಸುತ್ತಾನೆ, ಮತ್ತು ಪಾಪವನ್ನು ಪರಿಹಾರಮಾಡುತ್ತಾನೆ. ಅವನು ಪ್ರಾಣಾಪಹಾರ ಮಾಡಬಲ್ಲನು, ಜೀವದಾನವನ್ನೂ ಮಾಡಬಲ್ಲನು. ಇತ್ಯಾದಿಯಾಗಿ ವರುಣನ ಗುಣವರ್ಣನೆಯು ಅನೇಕ ಋಕ್ಕುಗಳಲ್ಲಿವೆ.

ಅರವತ್ತನೆಯ ಸೂಕ್ತವು

ಸಾಯಣಭಾಷ್ಯಂ

ಕೇತುಃ—ಪ್ರಜ್ಞಾಪಕನೂ । ಅರ್ಣವಃ—ಉದಕಪ್ರದನೂ । ಜನಾನಾಂ—ಸಕಲ ಮಾನವರಿಗೂ ।
ಪ್ರಸವೀತಾ—ಕರ್ಮಪ್ರೇರಕನೂ ಆದ । ಸೂರ್ಯಸ್ಯ—ಸೂರ್ಯನು । ಉದ್ವೇತಿ—ಉದಯಿಸುತ್ತಾನೆ

ಭಾವಾರ್ಥ

ರಥದ ನೊಗಕ್ಕೆ ಯೋಜಿತವಾದುದೂ, ಕಪ್ಪುವರ್ಣದ್ದೂ ಆದ ಅಶ್ವವು ಯಾವ ರಥಚಕ್ರವನ್ನು ವಹಿಸುವುದೋ, ಸಕಲ ವಿಶ್ವಕ್ಕೂ ಒಂದೇ ಆದ ಆ ರಥಚಕ್ರವನ್ನು ಉರುಳಿಸುತ್ತ ಪೂಜ್ಯನೂ, ಪ್ರಜ್ಞಾಪಕನೂ, ಉದಕ ಪ್ರದನೂ, ಸಕಲ ಮಾನವರಿಗೂ ಕರ್ಮಪ್ರೇರಕನೂ ಆದ ಸೂರ್ಯನು ಉದಯಿಸುತ್ತಾನೆ

English Translation

The animator of men arises, the great rain-shedding banner of Surya rolling on the universal wheel, which the white steeds yoked to his car drag along

संहितापाठः

विभ्राजमान उषसामुपस्थाद्रेभैरुदेत्यनुमद्यमानः ।
एष मे देवः सविता चचछंद यः समानं न प्रमिनाति धामु ॥

पदपाठः

विऽभ्राजमानः । उषसाम् । उपऽस्थात् । रेभैः । उत् । एति । अनुऽमद्यमानः ।
एषः । मे । देवः । सविता । चचछंद । यः । समानम् । न । प्रऽमिनाति । धामु ॥ ६ ॥

सायणभाष्यम्

अयं सूर्योऽ विभ्राजमानोऽ विशेषेण दीप्यमान उषसामुपस्थादुपस्थे मध्ये रेभैः स्तोतृभिरनुमद्यमानः सन्नुदेति । किंचैष देवो द्योतमानः सविता मे मह्यं चचछंद । उपचछंदयति कामान् । एष इत्युक्तं क इति । योऽ देवः समानं सर्वेषां प्राणिनामेकरूपं धामु स्वीयं तेजःस्थानं न प्रमिनाति न हिनस्ति न संकोचयति स देव उदेतीति ॥

प्रतिपदार्थ

यः—यावं देवनु । समानं—सकल लोकक्कू ऒंदे विधवाद । धामु—तन्न तेजस्सन्नु । न प्रमिनाति—संकोचपडिसुवुदिल्लवो अंतह । विभ्राजमानः—विशेष रीतियल्लि प्रकाशिसुवनू । रेभैः—स्तुतिकर्तरिंद । अनुमद्यमानः—तृप्तिगोळिसल्पट्टवनू आद सूर्यनु । उषसाम्—उषस्सुगळ । उपस्थात्—मध्यप्रदेशदिंद । उदेति—उदयिसि बरुत्तानॆ । देवः—देवतात्मनाद । एषः सविता—ई सवितृवु । मे—ननगॆ । चचछंद—इष्टार्थगळन्नु तुंबि कॊडुत्तानॆ

भावार्थ

यावं देवनु सकल लोकक्कू ऒंदे विधवाद तन्न तेजस्सन्नु संकोचपडिसुवुदिल्लवो अंतह विशेषरीतियल्लि प्रकाशिसुवनू, स्तुतिकर्तरिंद तृप्तिगोळिसल्पट्टवनू आद सूर्यनु उषस्सुगळ मध्यप्रदेशदिंद उदयिसि बरुत्तानॆ. देवतात्मनाद ई सवितृवु नन्न इष्टार्थगळन्नु तुंबिकॊडुत्तानॆ.

English Translation

Delighted by the praises (of his worshippers), the radiant sun rises from the lap of the dawns · that divine sun gratifies my desires, who limits not the lustre that is common (to all).

ಸಂಹಿತಾಪಾಠಃ

ದಿವೋ ರುಕ್ಮ ಉರುಚಕ್ಷಾ ಉದೇತಿ ದೂರೇ ಅರ್ಥಸ್ತರಣಿರ್ಭ್ರಾಜಮಾನಃ ।
ನೂನಂ ಜನಾಃ ಸೂರ್ಯೇಣ ಪ್ರಸೂತಾ ಅಯನ್ನರ್ಥಾನಿ ಕೃಣವನ್ನಪಾಂಸಿ॥

ಪದಪಾಠಃ

ದಿವಃ । ರುಕ್ಮಃ । ಉರುಚಕ್ಷಾಃ । ಉತ್ । ಏತಿ । ದೂರೇ । ಅರ್ಥಃ । ತರಣಿಃ । ಭ್ರಾಜಮಾನಃ ।
ನೂನಂ । ಜನಾಃ । ಸೂರ್ಯೇಣ । ಪ್ರಸೂತಾಃ । ಅಯನ್ । ಅರ್ಥಾನಿ । ಕೃಣವನ್ । ಅಪಾಂಸಿ ॥ ೪ ॥

ಸಾಯಣಭಾಷ್ಯಂ

ಅಯಂ ಸೂರ್ಯೋ ರುಕ್ಮೋ ರೋಚಮಾನ ಉರುಚಕ್ಷಾಃ ಪ್ರಭೂತತೇಜಾಶ್ಚ ಸನ್ದಿವೋ ಽಂತರಿಕ್ಷಾದುದೇತಿ । ಯದ್ವಾ । ದಿವೋ ಽಂತರಿಕ್ಷಸ್ಯ ರುಕ್ಮ ಆಭರಣಸ್ಥಾನೀಯಃ । ಕೀದೃಶೋ ಽಯಂ । ದೂರೇಅರ್ಥೋ ದೂರೇಗಂತಾ ॥ ಅರ್ಥೋ ಽರ್ತೇಃ ॥ ದೂರೇ ಪ್ರಾರ್ಥ್ಯಮಾನೋ ವಾ । ತರಣಿಸ್ತಾರಕೋ ಭ್ರಾಜಮಾನೋ ದೀಪ್ಯಮಾನಃ ಸನ್ನುದೇತಿ । ನೂನಂ ನಿಶ್ಚಯಂ ಜನಾಃ ಸರ್ವೇ ಪ್ರಾಣಿನಃ ಸೂರ್ಯೇಣ ಪ್ರೇರಕೇಣ ದೇವೇನ ಪ್ರಸೂತಾ ಅನುಜ್ಞಾತಾಃ ಪ್ರೇರಿತಾಃ ಸಂತೋ ಽರ್ಥಾನಿ ಗಂತವ್ಯಾನ್ಯನುಷ್ಠೇಯಾನ್ಯಪಾಂಸಿ ಕರ್ಮಾಣಿ ಕೃಣವನ್ । ಕುರ್ವಂತಿ ॥

ಪ್ರತಿಪದಾರ್ಥ

ದೂರೇ ಅರ್ಥಃ—ಬಹುದೂರ ಸಂಚರಿಸುವವನೂ । **ತರಣಿಃ**—ಅಂತರಿಕ್ಷವನ್ನು ದಾಟುವವನೂ । **ಭ್ರಾಜಮಾನಃ**—ಪ್ರಕಾಶಮಾನನೂ । **ರುಕ್ಮಃ**—ಹೊಂಬಣ್ಣವುಳ್ಳವನೂ । **ಉರುಚಕ್ಷಾಃ**—ಅತ್ಯಧಿಕವಾದ ತೇಜಸ್ಸುಳ್ಳವನೂ ಆದ ಸೂರ್ಯನು । **ದಿವಃ**—ಅಂತರಿಕ್ಷದಿಂದ । **ಉದೇತಿ**—ಉದಯಿಸುತ್ತಾನೆ । **ನೂನಂ**—ನಿಶ್ಚಯವಾಗಿಯೂ । **ಜನಾಃ**—ಸಕಲ ಪ್ರಾಣಿಗಳೂ । **ಸೂರ್ಯೇಣ**—ಸೂರ್ಯನಿಂದ । **ಪ್ರಸೂತಾಃ**—ಪ್ರೇರಿತರಾಗಿಯೂ **ಅಯನ್**—ಕರ್ತವ್ಯಾಭಿಮುಖರಾಗಿಯೂ । **ಅರ್ಥಾನಿ**—ತಮ್ಮ ಅನುಷ್ಠೇಯವಾದ । **ಅಪಾಂಸಿ**—ಕರ್ಮಗಳನ್ನು । **ಕೃಣವನ್**—ಮಾಡುತ್ತಾರೆ.

ಭಾವಾರ್ಥ

ಬಹುದೂರ ಸಂಚರಿಸುವವನೂ, ಅಂತರಿಕ್ಷವನ್ನು ದಾಟುವವನೂ, ಪ್ರಕಾಶಮಾನನೂ, ಹೊಂಬಣ್ಣವುಳ್ಳವನೂ, ಅತ್ಯಧಿಕವಾದ ತೇಜಸ್ಸುಳ್ಳವನೂ ಆದ ಸೂರ್ಯನು ಅಂತರಿಕ್ಷದಿಂದ ಉದಯಿಸುತ್ತಾನೆ ಸಕಲ ಪ್ರಾಣಿಗಳೂ

ಸೂರ್ಯನಿಂದ ಪ್ರೇರಿತರಾಗಿಯೂ, ಕರ್ತವ್ಯಾಭಿಮುಖರಾಗಿಯೂ, ತಮ್ಮ ಅನುಷ್ಠೇಯವಾದ ಕರ್ಮಗಳನ್ನು ಮಾಡುತ್ತಾರೆ ಎಂದರೆ, ಸೂರ್ಯನಿಂದ ಪ್ರೇರಿತರಾದ ಸಕಲರೂ ತಮ್ಮ ಕರ್ತವ್ಯಾಭಿಮುಖರಾಗಿ ತಮ್ಮ ಕರ್ಮಗಳನ್ನು ಮಾಡುತ್ತಾರೆ

English Translation

The bright and glorious sun rises from the firmament far going, traversing (the heavens), diffusing light verily all beings animated by Surya proceed and execute their assigned labours

ಸಂಹಿತಾಪಾಠಃ

ಯತ್ರಾ ಚಕ್ಷುರಮೃತಾ ಗಾತುಮಸ್ಮೈ ಶ್ಯೇನೋ ನ ದೀಯನ್ನನ್ವೇತಿ ಪಾಥಃ।
ಪ್ರತಿ ವಾಂ ಸೂರ ಉದಿತೇ ವಿಧೇಮ ನಮೋಭಿರ್ಮಿತ್ರಾವರುಣೋತ ಹವ್ಯೈಃ॥

ಪದಪಾಠಃ

ಯತ್ರ । ಚಕ್ಷುಃ । ಅಮೃತಾಃ । ಗಾತುಂ । ಅಸ್ಮೈ । ಶ್ಯೇನಃ । ನ । ದೀಯನ್ । ಅನು । ಏತಿ । ಪಾಥಃ ।
ಪ್ರತಿ । ವಾಂ । ಸೂರೇ । ಉತ್ಯೇಷತೇ । ವಿಧೇಮ । ನಮಃಭಿಃ । ಮಿತ್ರಾವರುಣಾ । ಉತ । ಹವ್ಯೈಃ॥

ಸಾಯಣಭಾಷ್ಯಂ

ಯತ್ರ ಯಸ್ಮಿನ್ನಂತರಿಕ್ಷೇಽಮ್ಯಾ ಅಮರಣಧರ್ಮಾಣಃ ಸೂರ್ಯಾ ದೇವಾಃ ಸ್ಥಿತಾ ಸ್ಥಾನಾದ್ಗಚ್ಛಂತಿ ತತ್ರ ಯ ಗಾತುಂ ಮಾರ್ಗಂ ಚಕ್ಷುಃ ಅಕುರ್ವನ್ ಕರ್ತವ್ಯಕೋಽಂತರಿಕ್ಷಮನ್ವೇತಿ । ಅನುಗಚ್ಛತಿ । ಕಃ ಇವ । ದೀಯನ್ ಗಚ್ಛನ್ಶ್ಯೇನೋ ನ ಶಂಸನೀಯೇಗಮನೋ ಗೃಧ್ರ ಇವ । ಅಯಮುರ್ಧ್ವಕರ್ಮಾ ಭಾರ್ಯೇ ಇತ್ಯುಕ್ತಂ । ಹೇ ಮಿತ್ರಾವರುಣಾ ಮಿತ್ರಾವರುಣೌ ವಾಂ ಯುವಾಂ ಸೂರೇ ಸೂರ್ಯೇ ಉದಿತೇ ಸತಿ ಪ್ರಾತಃಸವನೇ ನಮೋಭಿರ್ನಮಸ್ಕಾರೈಃ ಸ್ತುತಿಭಿರುತಾಪಿ ಚ ಹವ್ಯೈರ್ಹವಿರ್ಭಿಶ್ಚ ಪ್ರತಿ ವಿಧೇಮ । ಪರಿಚರೇಮ॥

ಪ್ರತಿಪದಾರ್ಥ

ಯತ್ರ—ಯಾವ ಅಂತರಿಕ್ಷದಲ್ಲಿ । **ಅಮೃತಾಃ**—ಮರಣಧರ್ಮರಹಿತರಾದ ದೇವತೆಗಳು । **ಅಸ್ಮೈ**—ಈ ಸೂರ್ಯನಿಗೆ । **ಗಾತುಂ**—ಸಂಚರಿಸುವ ಮಾರ್ಗವನ್ನು । **ಚಕ್ಷುಃ**—ನಿರ್ಮಿಸಿದರೋ । **ಪಾಥಃ**—ಆರೀ ಅಂತರಿಕ್ಷ ಮಾರ್ಗದಲ್ಲಿ । **ದೀಯನ್**—ವೇಗವಾಗಿ ಸಂಚರಿಸುವ । **ಶ್ಯೇನೋ ನ**—ಶ್ಯೇನಪಕ್ಷಿಯಂತೆ । **ಅನ್ವೇತಿ**—ಸೂರ್ಯನು ಸಂಚರಿಸುತ್ತಾನೆ. । **ಮಿತ್ರಾವರುಣಾ**—ಎಲೈ ಮಿತ್ರಾವರುಣರೇ, । **ವಾಂ**—ನಿಮ್ಮನ್ನು । **ಸೂರೇ ಉದಿತೇ**—ಸೂರ್ಯನು ಉದಯಿಸಿದಾಗ (ಪ್ರಾತಃಸವನಕಾಲದಲ್ಲಿ) । **ನಮೋಭಿಃ**—ನಮಸ್ಕಾರಪೂರ್ವಕವಾಗಿಯೂ । **ಉತ**—ಮತ್ತು । **ಹವ್ಯೈಃ**—ಹವಿಸ್ಸುಗಳಿಂದ ಕೂಡಿಯೂ । **ಪ್ರತಿ ವಿಧೇಮ**—ಉಪಚರಿಸುತ್ತೇವೆ

ಭಾವಾರ್ಥ

ಯಾವ ಅಂತರಿಕ್ಷವಲ್ಲಿ ಮರಣಧರ್ಮರಹಿತರಾದ ದೇವತೆಗಳು ಈ ಸೂರ್ಯನಿಗೆ ಸಂಚರಿಸುವ ಮಾರ್ಗವನ್ನು ನಿರ್ಮಿಸಿದರೋ ಅದೇ ಅಂತರಿಕ್ಷದಲ್ಲಿ ಸೂರ್ಯನು ವೇಗವಾಗಿ ಸಂಚರಿಸುವ ಶ್ಯೇನಪಕ್ಷಿಯಂತೆ ಸಂಚರಿಸುತ್ತಾನೆ. ಎಲೈ ಮಿತ್ರಾವರುಣರೇ, ಸೂರ್ಯನ ಉದಯವಾದೊಡನೆಯೇ (ಪ್ರಾತಃಸವನಕಾಲದಲ್ಲಿ) ನಿಮ್ಮನ್ನು ನಮಸ್ಕಾರ ಪೂರ್ವಕವಾಗಿಯೂ, ಹವಿಸ್ಸುಗಳಿಂದ ಕೂಡಿಯೂ ಉಪಚರಿಸುತ್ತೇವೆ.

English Translation

He travels the path which the immortals have prepared for his course darting along like a hawk we worship you, Mitra and Varuna, when the sun has risen, with praises and oblations.

ವಿಶೇಷವಿಷಯಗಳು

ಪಾಥಃ.–ಯಾಸ್ಕರು ಈ ಋಕ್ಕಿನಲ್ಲಿರುವ **ಪಾಥಃ** ಎಂಬ ಶಬ್ದಕ್ಕೆ **ಪಾಥೋಽನ್ತರಿಕ್ಷಂ ಪಥಾ ವ್ಯಾಖ್ಯಾತಂ । ಶ್ಯೇನೋ ನ ದೀಯನ್ನೇತಿ ಪಾಥಃ ಇತ್ಯಪಿ ನಿಗಮೋ ಭವತಿ** (ನಿ. ೬-೭) ಎಂದು ನಿರ್ವಚನವನ್ನು ಹೇಳಿದ್ದಾರೆ. ಎಂದರೆ **ಪಾಥಃ** ಎಂಬ ಶಬ್ದಕ್ಕೆ ಮಾರ್ಗವು ಎಂದರ್ಥವಿದ್ದರೂ ಇಲ್ಲಿ ಸೂರ್ಯನು ಸಂಚರಿಸುವ ಮಾರ್ಗವಾದ ಅಂತರಿಕ್ಷವು ಎಂದು ವಿವರಿಸಿದ್ದಾರೆ ಮತ್ತು **ಪಂಥಾಃ** ಎಂಬ ಶಬ್ದವು-**ಪಂಥಾಃ ಪತತೇರ್ವಾ ಪದ್ಯತೇರ್ವಾ ಪಂಥತೇರ್ವಾ** (ನಿ ೭-೨೨) ಎಂದೂ ಹೇಳಿರುವರು ಎಂದರೆ **ಪಂಥಾಃ** ಎಂಬ ಶಬ್ದವು ಕೆಳಕ್ಕೆ ಬೀಳು ಎಂಬರ್ಥವಿರುವ **ಪತ್** ಧಾತುವಿನಿಂದಾಗಲೆ, ಹೋಗು ಎಂಬರ್ಥವಿರುವ **ಪದ್** ಧಾತುವಿನಿಂದಾಗಲೆ, ಚಲಿಸು ಎಂಬರ್ಥವಿರುವ **ಪಂಥ್** ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದೆಂದು ತಿಳಿಸಿದ್ದಾರೆ ಈ ಮೂರು ಧಾತುಗಳೂ ಗತ್ಯರ್ಥವನ್ನು ಸೂಚಿಸುವುವು

ಸಂಹಿತಾಪಾಠಃ

ನೂ ಮಿತ್ರೋ ವರುಣೋ ಅರ್ಯಮಾ ನಸ್ಮನೇ ತೋಕಾಯ ವರಿವೋ ದಧಂತು ।
ಸುಗಾ ನೋ ವಿಶ್ವಾ ಸುಪಥಾನಿ ಸಂತು ಯೂಯಂ ಪಾತ ಸ್ವಸ್ತಿಭಿಃ ಸದಾ ನಃ

ಪದಪಾಠಃ

ನು । ಮಿತ್ರಃ । ವರುಣಃ । ಆರ್ಯಮಾ । ನಃ । ಸ್ಮನೇ । ತೋಕಾಯ । ವರಿವಃ । ದಧಂತು ।
ಸುಽಗಾ । ನಃ । ವಿಶ್ವಾ । ಸುಽಪಥಾನಿ । ಸಂತು । ಯೂಯಂ । ಪಾತ । ಸ್ವಸ್ತಿಽಭಿಃ । ಸದಾ । ನಃ ॥ ೬ ॥

ಸಾಯಣಭಾಷ್ಯಂ

ಮಿತ್ರೋ ವರುಣೋಽರ್ಯಮಾ ಚೈತೇ ತ್ರಯೋ ದೇವಾ ನ್ವದ್ಯ ನೋಽಸ್ಮಾಕಂ ತ್ಮನ ಆತ್ಮನ ಆತ್ಮಹಿತಾಯ ತೋಕಾಯ ಪುತ್ರಾಯ ಚ ವರಿವೋ ಧನಂ ದಧಂತು । ಪ್ರಯಚ್ಛಂತು । ನೋಽಸ್ಮಾಕಂ ವಿಶ್ವಾ ಸರ್ವಾಣಿ ಗಂತವ್ಯಾನಿ ಸುಗಾ ಸುಗಮನಾನಿ ಸುಪಥಾನಿ ಚ ಸಂತು । ಭವಂತು । ಶಿಷ್ಟಂ ಗತಂ ॥

ಪ್ರತಿಪದಾರ್ಥ

ಮಿತ್ರಃ—ಮಿತ್ರನೂ, । **ವರುಣಃ**—ವರುಣನೂ, । **ಆರ್ಯಮಾ**—ಅರ್ಯಮನೂ । **ನು**—ಈಗ । **ನಃ**—ನಮಗೆ । **ತ್ಮನೇ**—ಸ್ವಂತಕ್ಕೂ । **ತೋಕಾಯ**—ನಮ್ಮ ಪುತ್ರರಿಗೂ । **ವರಿವಃ**—ಧನವನ್ನು । **ದಧಂತು**—ಕೊಡಲಿ **ನಃ**—ನಮಗೆ । **ವಿಶ್ವಾ**—ಸಮಸ್ತವಾದ । **ಸುಗಾ**—ಸಂಚಾರಮಾರ್ಗಗಳೂ । **ಸುಪಥಾನಿ**—ಉತ್ತಮವಾದ ಸಂಚಾರಕ್ಕೆ ಯೋಗ್ಯವಾಗಿ । **ಸಂತು**—ಆಗಲಿ । (ಎಲೈ ದೇವತೆಗಳೇ) **ಯೂಯಂ**—ನೀವು । **ಸದಾ**—ಯಾವಾಗಲೂ **ನಃ**—ನಮ್ಮನ್ನು । **ಸ್ವಸ್ತಿಭಿಃ**—ಕಲ್ಯಾಣಗಳಿಂದ । **ಪಾತ**—ರಕ್ಷಿಸಿರಿ.

ಭಾವಾರ್ಥ

ಮಿತ್ರನೂ, ವರುಣನೂ, ಅರ್ಯಮನೂ ಈಗ ನಮ್ಮ ಸ್ವಂತಕ್ಕೂ ನಮ್ಮ ಪುತ್ರರಿಗೂ ಧನವನ್ನು ಕೊಡಲಿ ನಮ್ಮ ಮಾರ್ಗವನ್ನೆಲ್ಲಾ ಉತ್ತಮವಾದ ಸಂಚಾರಕ್ಕೆ ಯೋಗ್ಯವಾದವನ್ನಾಗಿ ಮಾಡಲಿ ಎಲೈ ದೇವತೆಗಳೇ, ನೀವು ಯಾವಾಗಲೂ ನಮ್ಮನ್ನು ಕಲ್ಯಾಣಗಳಿಂದ ರಕ್ಷಿಸಿರಿ.

English Translation

May Mitra, Varuna, Aryaman grant affluence to us and to our posterity may all paths be easy of access to us, and do you ever cherish us with blessings

———

ಅರನತ್ತನಾಲ್ಕನೆಯ ಸೂಕವು

ದಿವಿ ಕ್ಷಯಂತೇತಿ ಪಂಚರ್ಚಂ ನವಮಂ ಸೂಕ್ತಂ ವಸಿಷ್ಠಸ್ಯಾರ್ಷಂ ಮೈತ್ರಾವರುಣಂ । ದಿವಿ ಪಂಚೇತ್ಯನುಕ್ರಮಣಿಕಾ ॥ ತೃತೀಯೇ ಛಂದೋಮೇ ಪ್ರಉಗಶಸ್ತ್ರ ಆದ್ಯಸ್ತೃಚೋ ಮೈತ್ರಾವರುಣಸ್ಯ । ಸೂತ್ರಿತಂ ಚ । ದಿವಿ ಕ್ಷಯಂತಾ ರಜಸಃ ಪೃಥಿವ್ಯಾಮಾ ವಿಶ್ವವಾರಾಶ್ವಿನಾ ಗತಂ ನಃ । ಆ ೪-೧೧ । ಇತಿ ॥

ಅನುವಾದವು—**ದಿವಿ ಕ್ಷಯಂತಾ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಒಂಭತ್ತನೆಯ **ಸೂಕ್ತವು** ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಸಿಷ್ಠನು ಋಷಿಯು, ಮಿತ್ರಾವರುಣರು ದೇವತೆಯು; ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ— **ದಿವಿ ಪಂಚ** ಎಂದು ಹೇಳಿರುವುದು ತೃತೀಯ-ಛಂದೋಮದಲ್ಲಿ ಪ್ರಉಗಶಸ್ತ್ರಮಂತ್ರಸರನಮಾಡುವಾಗ ಮಿತ್ರಾವರುಣದೇವತೆಗಳನ್ನುದ್ದೇಶಿಸಿ ಈ ಸೂಕ್ತದ ಮೊದಲಿನ ಮೂರು ಋಕ್ಕುಗಳನ್ನು ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ದಿವಿ ಕ್ಷಯಂತಾ ರಜಸಃ ಪೃಥಿವ್ಯಾಮಾ ವಿಶ್ವವಾರಾಶ್ವಿನಾ ಗತಂ ನಃ** ಎಂಬ ಸೂತ್ರದಿಂದ (ಆ. ೪-೧೧) ವಿವೃತವಾಗಿರುವುದು.

ಸೂಕ್ತ—೬೪

ಮಂಡಲ—೭ ॥ ಅನುವಾಕ—೪ ॥ ಸೂಕ್ತ—೬೪ ॥
ಅಷ್ಟಕ—೫ ॥ ಅಧ್ಯಾಯ—೫ ॥ ವರ್ಗ—೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
ಋಷಿಃ—ವಸಿಷ್ಠಃ ॥
ದೇವತಾ—ಮಿತ್ರಾವರುಣೌ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ದಿವಿ ಕ್ಷಯಂತಾ ರಜಸಃ ಪೃಥಿವ್ಯಾಂ ಪ್ರ ವಾಂ ಘೃತಸ್ಯ ನಿರ್ಣಿಜೋ ದದೀರನ್ ।
ಹವ್ಯಂ ನೋ ಮಿತ್ರೋ ಅರ್ಯಮಾ ಸುಜಾತೋ ರಾಜಾ ಸುಕ್ಷತ್ರೋ ವರುಣೋ ಜುಷಂತ ॥ ೧ ॥

ಪದಪಾಠಃ

ದಿವಿ । ಕ್ಷಯಂತಾ । ರಜಸಃ । ಪೃಥಿವ್ಯಾಂ । ಪ್ರ । ವಾಂ । ಘೃತಸ್ಯ । ನಿಃನಿಜಃ । ದದೀರನ್ ॥
ಹವ್ಯಂ । ನಃ । ಮಿತ್ರಃ । ಆರ್ಯಮಾ । ಸುಜಾತಃ । ರಾಜಾ । ಸುಕ್ಷತ್ರಃ । ವರುಣಃ । ಜುಷಂತ ॥ ೧ ॥

ಸಾಯಣಭಾಷ್ಯಂ

ದಿವಿ ದ್ಯುಲೋಕೇಽಂತರಿಕ್ಷೇ ಪೃಥಿವ್ಯಾಂ ಚ ವರ್ತಮಾನಸ್ಯ ರಜಸ ಉದಕಸ್ಯ ಕ್ಷಯಂತಾ । ಕ್ಷಯತಿರೈಶ್ವರ್ಯಕರ್ಮಾ । ಸ್ವಾಮಿನಾ ಭವಥಃ । ಹೇ ಮಿತ್ರಾವರುಣೌ ವಾಂ ಯುವಾಭ್ಯಾಂ ಪ್ರೇರಿತಾ ಮೇಘಾ ಘೃತಸ್ಯ ನಿರ್ಣಿಜ ಉದಕಸ್ಯ ರೂಪಾಣಿ ದದೀರನ್ । ದದತೇ । ಪ್ರಯಚ್ಛಂತಿ । ಅಥವಾ ವಾಂ ಯುವಾಭ್ಯಾಂ ಘೃತಸ್ಯ ನಿರ್ಣಿಜೋ ರೂಪಾಣಿ । ಘೃತಾನೀತ್ಯರ್ಥಃ । ತಾನಿ ದದೀರನ್ । ದೀಯಂತೇ। ನೋಽಸ್ಮಾಕಂ ಸಂಬಂಧಿ ಹವ್ಯಂ ಮಿತ್ರಃ ಸುಜಾತಃ ಸುಷ್ಠು ಪ್ರಾದುರ್ಭೂತೋಽರ್ಯಮಾ ರಾಜಾ ಸರ್ವಸ್ಯ ಸ್ವಾಮೀ ಸುಕ್ಷತ್ರಃ ಶೋಭನಬಲೋ ವರುಣಶ್ಚೈತೇ ಜುಷಂತ । ಸೇವಂತಾಂ ॥

ಪ್ರತಿಪದಾರ್ಥ

ದಿವಿ—ಆಂತರಿಕ್ಷದಲ್ಲಿಯೂ । ಪೃಥಿವ್ಯಾಂ—ಭೂಮಿಯಲ್ಲಿಯೂ ಇರುವ । ರಜಸಃ—ಉದಕಕ್ಕೆ । ಕ್ಷಯಂತಾ—ಒಡೆಯರಾದ ಎಲೈ ಮಿತ್ರಾವರುಣರೇ । ವಾಂ—ನಿಮ್ಮಿಂದ ಪ್ರೇರಿತವಾದ ಮೇಘಗಳು । ಘೃತಸ್ಯ ನಿರ್ಣಿಜಃ—ಉದಕದ ಧಾರೆಗಳನ್ನು ಅಥವಾ ವೃಷ್ಟಿಯನ್ನು । ದದೀರನ್—ಕೊಡುತ್ತವೆ (ಸುರಿಸುತ್ತವೆ) । [ಅಥವಾ ವಾಂ—ನಿಮಗಾಗಿ । ಘೃತಸ್ಯ ನಿರ್ಣಿಜಃ—ಆಜ್ಯರೂಪದ ಹವಿಸ್ಸುಗಳು । ದದೀರನ್—ಅರ್ಪಿತವಾಗುತ್ತವೆ] ನಃ—ನಮ್ಮ ಎಂದರೆ ನಾವು ಅರ್ಪಿಸುವ । ಹವ್ಯಂ—ಈ ಹವಿಸ್ಸನ್ನು । ಮಿತ್ರಃ—ಮಿತ್ರನೂ । ಸುಜಾತಃ—ಶ್ರೇಷ್ಠ

वाग जनिसिद । **अर्यमा**—अर्यमनू । **राजा**—सर्वरिगू प्रभुवादवनू । **सुक्षत्रः**—उत्तमु वाद ऒलवुळ्ळवनू आद । **वरुणः**—वरुणनू, ई मूवरू । **जुषंत**—सेविसलि.

भावार्थ

भूमध्यंतरिक्षगळल्लिरुव समस्त उदकगळिगू ऒडेयरादं ऎलै मित्रावरुणरे, मेघगळु निम्मिंद प्रेरितवागियेे नृष्टियन्नु भूमियमेलि सुरिसुत्तवे. (अथवा हविस्सिन रूपदिंदिरुव घृतवु निमगे अर्पिसल्पडुत्तद) ईग नावु अर्पिसुव हविस्सन्नु मित्रनू उत्तमजनवुळ्ळ अर्यमनू, सकलरिगू प्रभुवू उत्तमु बलशालियूं आद वरुणनू ई मूवरू सेवसिलि

English Translation

Ruling over the waters that are in heaven and earth, impelled by you (the clouds) assume the form of rain may the auspiciously manifested Mitra, the rayal Aryaman, the powerful Varuna accept our oblation

संहितापाठः

आ राजाना महऽ रुतस्य गोप्ता सिंधुपतीऽ क्षत्रियाऽ यातनु-
र्वाक् ।
इळांऽ नोऽ मित्रावरुणोत वृष्टिमवऽ दिवऽ इस्रतं जीरदानूऽ ॥

पदपाठः

आ । राजाना । महः । रुतस्य । गोप्ता । सिंधुपतीऽ इति सिंधुऽपतीऽ । क्षत्रियाऽ । यातं । अर्वाक् ।
इळांऽ । नः । मित्रावरुणा । उत । वृष्टिं । अवऽ । दिवः । इस्रतं । जीरदानूऽ इति जीरऽदानूऽ ॥ ७ ॥

सायणभाष्यं

हे राजाना सर्वस्य स्वामिनौ हे महः महत ऋतस्योदकस्य यज्ञस्य गोप्ता गोपायितारौ ॥ सुप्रामंत्रितेऽ परांगवत्स्वर इति परांगवद्भावात् षष्ठ्या-मंत्रितसमुदायस्य निघातशत्वं ॥ हे सिंधुपतीऽ नद्याः पालयितारौ हे क्षत्रियाऽ बल-वंतौ युवामर्वागस्मदभिमुखमा यातं । आगच्छतं । किं च हे मित्रावरुणा मित्रावरुणौ हे जीरदानूऽ क्षिप्रदानौ युवां नोऽस्मभ्यमिळामन्नमुताऽपि च पुष्टिं च तत्साधिकां वृष्टिं च दिवोऽन्तरिक्षादवावस्तादिस्रतं । प्रेरयेतं ॥

ಪ್ರತಿಪದಾರ್ಥ

ರಾಜಾನಾ—ಸರ್ವರಿಗೂ ಪ್ರಭುವಾದವರೂ । **ಮಹಃ**—ಮಹತ್ಪುರುಷವುಳ್ಳವರೂ । **ಯತಸ್ಯ**—ಉದಕಕ್ಕೆ ಅಥವಾ ಯಜ್ಞಕ್ಕೆ । **ಗೋಪಾ**—ರಕ್ಷಕರಾದವರೂ । **ಸಿಂಧುಪತೀ**—ನದಿಗಳ ಪಾಲಕರೂ । **ಕ್ಷತ್ರಿಯಾ**—ಶಕ್ತಿಯುಳ್ಳವರೂ ಆದ ಎಲೈ ಮಿತ್ರಾವರುಣರೇ ನೀವು । **ಆರ್ವಾಕ್**—ನಮಗೆ ಅಭಿಮುಖರಾಗಿ । **ಆ ಯಾತಂ**—ಬನ್ನಿರಿ. । **ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ಜೀರದಾನೂ**—ಬೇಗನೆ ಇಷ್ಟಾರ್ಥಗಳನ್ನು ಕೊಡುವವರಾದ ನೀವು । **ನಃ**—ನಮಗೆ । **ಇಳಾಂ**—ಅನ್ನವನ್ನೂ । **ಉತ**—ಮತ್ತು । **ಪುಷ್ಟಿಂ**—ಪುಷ್ಟಿಪ್ರದವಾದ ವೃಷ್ಟಿಯನ್ನೂ । **ದಿವಃ**—ಅಂತರಿಕ್ಷದಿಂದ । **ಅವ**—ಅಧೋಮುಖವಾಗಿ । **ಇನ್ವತಂ**—ಬೀಳುವಂತೆ ಪ್ರೇರಿಸಿರಿ

ಭಾವಾರ್ಥ

ಸರ್ವರಿಗೂ ಪ್ರಭುವಾದವರೂ, ಮಹನೀಯರೂ, ಉದಕಕ್ಕೆ ಅಥವಾ ಯಜ್ಞಕ್ಕೆ ರಕ್ಷಕರೂ, ನದಿಗಳ ಪಾಲಕರೂ ಶಕ್ತಿಯುತರೂ ಆದ ಎಲೈ ಮಿತ್ರಾವರುಣರೇ, ನೀವು ನಮಗಭಿಮುಖವಾಗಿ ಬನ್ನಿರಿ ಎಲೈ ಮಿತ್ರಾವರುಣರೇ, ಬೇಗನೆ ನಮ್ಮ ಇಷ್ಟಾರ್ಥಗಳನ್ನು ಸಲ್ಲಿಸುವ ನೀವು ನಮಗೆ ಅನ್ನವನ್ನೂ, ಪುಷ್ಟಿಪ್ರದವಾದ ವೃಷ್ಟಿಯನ್ನೂ ಅಂತರಿಕ್ಷದಿಂದ ಅಧೋಮುಖವಾಗಿ ಬೀಳುವಂತೆ ಪ್ರೇರಿಸಿರಿ.

English Translation

Soverigns, mighty preservers of water, powerful lords of rivers, come to our presence send down to us, munificent Mitra and Varuna, from the firmament, sustenance and rain.

ಸಂಹಿತಾಪಾಠಃ

ಮಿತ್ರಸ್ತನ್ನೋ ವರುಣೋ ದೇವೋ ಅರ್ಯಃ ಪ್ರ ಸಾಧಿಷ್ಟೇಭಿಃ ಪಥಿಭಿರ್ನಯಂತು ।
ಬ್ರವದ್ಯಥಾ ನ ಆದರಿಃ ಸುದಾಸ ಇಷಾ ಮದೇಮ ಸಹ ದೇವಗೋಪಾಃ॥೩॥

ಪದಪಾಠಃ

ಮಿತ್ರಃ । ತತ್ । ನಃ । ವರುಣಃ । ದೇವಃ । ಅರ್ಯಃ । ಪ್ರ । ಸಾಧಿಷ್ಟೇಭಿಃ । ಪಥಿಭಿಃ । ನಯಂತು ।
ಬ್ರವತ್ । ಯಥಾ । ನಃ । ಆತ್ । ಅರಿಃ । ಸುಽದಾಸೇ । ಇಷಾ । ಮದೇಮ । ಸಹ । ದೇವಽಗೋಪಾಃ॥

ಸಾಯಣಭಾಷ್ಯಂ

ಮಿತ್ರೋ ವರುಣೋ ದೇವೋಽರ್ಯೋಽರ್ಯಮಾ ಚೈತೇ ಶ್ರಯೋಽಪಿ ನೋಽಸ್ಮಾಂಸ್ತತ್ತದಾಯದಾಸ್ಮಾಕಮಪೇಕ್ಷಿತಂ ಕದಾ ಸಾಧಿಷ್ಟೇಭಿಃ ಸಾಧಕತಮೈಃ ಪಥಿಭಿರ್ಮಾರ್ಗೈರ್ನಯಂತು । ಪ್ರಾಪ-

ಯೆಂತು । ಕಿಂಚ ನೋಽಸ್ಮಾನ್ ಸುದಾಸೇ ಶೋಭನದಾನಾಯ ಜನಾಯಾರಿರರ್ಯಮಾ ಯಥಾ ಬ್ರವತ್ ಅಸಾವನುಕಂಪ್ಯ ಇತಿ ಬ್ರೂಯಾತ್ ತಥಾ ಕುರ್ವಂತು । ಅರ್ಯಮ್ಣಃ ಪುನರಭಿಧಾನಮಾದರಾರ್ಥಂ । ದೇವಗೋಪಾ ದೇವಾ ಯೂಯಂ ಗೋಪಾಯಿತಾರೋ ಯೇಷಾಮಸ್ಮಾಕಂ ತೇ ವಯಮಿಷಾ ಯುಷ್ಮಾಭಿರ್ದಾತವ್ಯೇನಾನ್ನೇನ ಸಹ ಪುತ್ರಾದಿಸಹಿತಾ ಮದೇಮ । ಹೃಷ್ಯೇಮ

ಪ್ರತಿಪದಾರ್ಥ

ಮಿತ್ರಃ—ಮಿತ್ರನೂ, । ವರುಣಃ—ವರುಣನೂ, । ಅರ್ಯಮಾ—ಅರ್ಯಮನೂ ಈ ಮೂವರೂ । ನಃ—ನಮ್ಮನ್ನು । ತತ್—ನಾವು ಅಪೇಕ್ಷಿಸಿದಾಗ । ಸಾಧಿಷ್ಟೇಭಿಃ—ಸಾಧನಭೂತವಾದ । ಪಥಿಭಿಃ—ಮಾರ್ಗಗಳಿಂದ । ನಯಂತು—ನಿರ್ದಿಷ್ಟಸ್ಥಾನಕ್ಕೆ ಒಯ್ಯಲಿ. (ಮತ್ತು) । ನಃ—ನಮ್ಮನ್ನು ಎಂದರೆ ನಮ್ಮ ವಿಷಯವನ್ನು । ಸುದಾಸೇ—ಉತ್ತಮದಾನಿಗಳಾದ ಸಜ್ಜನರಿಗೆ । ಅರಿಃ—ಅರ್ಯಮನು । ಯಥಾ ಬ್ರವತ್—ಅರಿಕೆಮಾಡಲಿ. । ದೇವಗೋಪಾಃ—ದೇವತೆಗಳಾದ ನಿಮ್ಮಿಂದ ರಕ್ಷಿತರಾದ ನಾವು । ಇಷಾ—ನೀವು ನಮಗೆ ಕೊಡುವ ಅನ್ನದಿಂದ । ಸಹ—ಪುತ್ರಾದಿಗಳಿಂದ ಸಹಿತರಾಗಿ । ಮದೇಮ—ಸಂತೋಷದಿಂದ ಇರುವಂತಾಗಲಿ.

ಭಾವಾರ್ಥ

ಮಿತ್ರ, ವರುಣ, ಅರ್ಯಮಾ ಎಂಬ ಈ ಮೂವರು ದೇವತೆಗಳೂ ಸೇರಿ ನಾವು ಅಪೇಕ್ಷಿಸಿದಾಗ ಯೋಗವಾದ ಮಾರ್ಗಗಳಿಂದ ನಮ್ಮನ್ನು ನಿರ್ದಿಷ್ಟಸ್ಥಾನಕ್ಕೆ ಒಯ್ಯಲಿ. ನಾವು ಉತ್ತಮವಾದ ಅನುಗ್ರಹಕ್ಕೆ ಪಾತ್ರರೆಂಬ ವಿಷಯವನ್ನು ಸಜ್ಜನರಿಗೆ ಅರ್ಯಮನು ತಿಳಿಸಲಿ ದೇವತೆಗಳಾದ ನಿಮ್ಮಿಂದ ಸಂರಕ್ಷಿತರಾದ ನಾವು, ನೀವು ಕೊಡುವ ಅನ್ನಾದ್ಯಾಹಾರಗಳಿಂದ ಪುತ್ರಾದಿಸಹಿತರಾಗಿ ಸಂತೋಷದಿಂದಿರುವಂತಾಗಲಿ.

English Translation

May Mitra, Varuna, the divnie Aryaman, conduct us by the most practicable paths, then, (when we desiae their guidance), accordingly as Aryaman promises to the liberal donor (of oblations), may we, enjoying the protection of the gods, rejoice in abundance, together with posterity.

ಸಂಹಿತಾಪಾಠಃ

ಯೋ ವಾಂ ಗರ್ತಂ ಮನಸಾ ತಕ್ಷದೇತಮೂರ್ಧ್ವಾಂ ಧೀತಿಂ ಕೃಣವದ್ಧಾರಯಚ್ಚ ।
ಉಕ್ಷೇಥಾಂ ಮಿತ್ರಾವರುಣಾ ಘೃತೇನ ತಾ ರಾಜಾನಾ ಸುಕ್ಷಿತೀಸ್ತರ್ಪಯೇಥಾಂ ॥ ೪ ॥

ಪದಪಾಠಃ

ಯುವಃ । ವಾಂ । ಗರ್ತಂ । ಮನಸಾ । ತಕ್ಷತ್ । ಏತಂ । ಊಧ್ವಾಂ । ಧೀತಿಂ । ಕೃಣವತ್ । ಧಾರಯತ್ । ಚ ।

ಉಕ್ಷೇಥಾಂ । ಮಿತ್ರಾವರುಣಾ । ಘೃತೇನ । ತಾ । ರಾಜಾನಾ । ಸುಕ್ಷಿತೀಃ । ತರ್ಪಯೇಥಾಂ ॥ ೪ ॥

ಸಾಯಣಭಾಷ್ಯಂ

ಹೇ ಮಿತ್ರಾವರುಣೌ ಯೋ ವಾಂ ಯುವಯೋರೇತಂ ಗರ್ತಂ ರಥಂ ಮನಸಾ ತಕ್ಷತ್ ಸ್ತೋತ್ರೇಣ ಸಂಕಲ್ಪಯೇತ್ ತಥಾ ಕೃತ್ವೋತ್ಕೃಷ್ಟಮುನ್ನತಾಂ ಧೀತಿಂ ಕರ್ಮ ಸ್ತುತಿರೂಪಂ ಕೃಣವತ್ ಕುರ್ಯಾತ್ ಉಚ್ಚೈಃ ಸ್ತುಯಾತ್ ಏವಂ ಕೃತ್ವಾ ಧಾರಯೇಚ್ಚ ಯಾಗೇ ಧಾರಯೇತ್ ಹೇ ರಾಜಾನಾ ಸ್ವಾಮಿನೌ ಮಿತ್ರಾವರುಣಾ ಮಿತ್ರಾವರುಣೌ ತಾ ತೌ ಯುವಾಂ ಜನಂ ಘೃತೇನೋದಕೇನೋಕ್ಷೇಥಾಂ ಸಿಂಚತಂ । ತಸ್ಮೈ ಸುಕ್ಷಿತೀಃ ಶೋಭನನಿವಾಸಾಃ ಪ್ರಜಾಃ ತರ್ಪಯೇಥಾಂ । ಯಥಾ ಸುಕ್ಷಿತಯೋ ಭವಂತಿ ತಥಾ ತರ್ಪಯೇಥಾಮಿತಿ ॥

ಪ್ರತಿಪದಾರ್ಥ

(ಎಲೈ ಮಿತ್ರಾವರುಣರೇ) **ಯುವಃ**—ಯಾವ ಪುರುಷನು । **ವಾಂ**—ನಿಮ್ಮ । **ಏತಂ ಗರ್ತಂ**—ಈ ರಥವನ್ನು **ಮನಸಾ**—ಮನಸ್ಸಿನಿಂದ ಎಂದರೆ ಸ್ತೋತ್ರದಿಂದ । **ತಕ್ಷತ್**—ಸ್ತುತಿಸಿ ಪ್ರಶಂಸಿಸುವನೋ (ಮತ್ತೆ) । **ಊಧ್ವಾಂ**—ಉನ್ನತವಾದ ಎಂದರೆ ಶ್ರೇಷ್ಠವಾದ । **ಧೀತಿಂ**—ಸ್ತುತಿರೂಪವಾದ ಕವಿಗಳನ್ನ **ಕೃಣವತ್**—ಉಚ್ಚಧ್ವನಿಯಿಂದ ನಿರ್ಮಿಸಿ (ಸ್ತುತಿಸಿ) । **ಧಾರಯೇಚ್ಚ**—ಯಜ್ಞಾದಲ್ಲಿ ಆರ್ಪಿಸುವನೋ ಆ ಪುರುಷನನ್ನು । **ರಾಜಾನಾ**—ಸರ್ವರಿಗೂ ಸ್ವಾಮಿಗಳಾದ । **ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ತಾ**—ಆ ನೀವು । **ಘೃತೇನ**—ವೃಷ್ಟಿರೂಪವಾದ ಉದಕದಿಂದ । **ಉಕ್ಷೇಥಾಂ**—ಸೇಕಿಸಿರಿ (ಅವನಿಗೆ) । **ಸುಕ್ಷಿತೀಃ**—ಉತ್ತಮವಾದ ವಾಸಸ್ಥಾನಗಳನ್ನು ಕೂಟ್ಟು । **ತರ್ಪಯೇಥಾಂ**—ತೃಪ್ತಿಯನ್ನುಂಟುಮಾಡಿರಿ

ಭಾವಾರ್ಥ

ಎಲೈ ಮಿತ್ರಾವರುಣರೇ, ಯಾವ ಪುರುಷನು ನಿಮ್ಮ ರಥವನ್ನು ತನ್ನ ಮನಸ್ಸಿನಲ್ಲಿಯೇ ಸ್ತುತಿಸಿ ಪ್ರಶಂಸಿಸುವನೋ ಮತ್ತು ಯಜ್ಞಾದಲ್ಲಿ ಆ ಸ್ತುತಿಯನ್ನು ಉಚ್ಚಧ್ವನಿಯಿಂದ ಪಠಿಸಿ ಆರ್ಪಿಸುವನೋ ಅಂತಹ ಪುರುಷನನ್ನು ಎಲೈ ಸರ್ವರಿಗೂ ಪ್ರಭುಗಳಾದ ಮಿತ್ರಾವರುಣರೇ, ವೃಷ್ಟ್ಯುದಕಗಳಿಂದ ಸೇಕಿಸಿರಿ ಎಂದರೆ ಅವನಿಗಾಗಿ ವೃಷ್ಟಿಯನ್ನು ಸುರಿಸಿರಿ ಮತ್ತು ಅವನಿಗೆ ಉತ್ತಮವಾದ ನಿವಾಸಸ್ಥಾನಗಳನ್ನು ಕೊಟ್ಟು ಸಂತೋಷಪಡಿಸಿರಿ

English Translation

Mitra and Varuna, bedew with water him who fabricates your chariot in his mind, offering high praise, and confirming it (by sacrifice): render, sovereign (deities), the people well affected towards him.

ಸಂಹಿತಾಪಾಠಃ

ಏಷ ಸ್ತೋಮೋ ವರುಣ ಮಿತ್ರ ತುಭ್ಯಂ ಸೋಮಃ ಶುಕ್ರೋ ನ ವಾಯು-
ವೇ ಽಯಾಮಿ ।
ಅವಿಷ್ಟಂ ಧಿಯೋ ಜಿಗೃತಂ ಪುರಂಧೀರ್ಯೂಯಂ ಪಾತ ಸ್ವಸ್ತಿಭಿಃ ಸದಾ ನಃ

ಪದಪಾಠಃ

ಏಷಃ । ಸ್ತೋಮಃ । ವರುಣ । ಮಿತ್ರ । ತುಭ್ಯಂ । ಸೋಮಃ । ಶುಕ್ರಃ । ನ । ವಾಯವೇ । ಅಯಾಮಿ ।
ಅವಿಷ್ಟಂ । ಧಿಯಃ । ಜಿಗೃತಂ । ಪುರಂ೭ಧೀಃ । ಯೂಯಂ । ಪಾತ । ಸ್ವಸ್ತಿ೭ಭಿಃ । ಸದಾ । ನಃ ॥ ೫ ॥

ಸಾಯಣಭಾಷ್ಯಂ

ಅನಯಾ ಸ್ತುತಿಮುಪಸಂಹರತಿ । ಹೇ ವರುಣ ಹೇ ಮಿತ್ರ ತುಭ್ಯಂ ಯುವಯೋರ್ವಾಯವೇ ವಾಯುರ್ಗಂತಾದಿತ್ಯಃ । ಸ ಏವಾರ್ಯಮಾ । ತಸ್ಮೈ ಚೈಷ ಸ್ತೋಮಃ ಸ್ತವೋ೭ಯಾಮಿ । ಅಕಾರಿ । ಕಿಮಿವ । ಶುಕ್ರೋ ದೀಪ್ತಃ ಸೋಮೋ ನ ಯುಷ್ಮಭ್ಯಂ ಪ್ರೀತಿಕರಃ ಸೋಮೋ ಯಥಾ ದೀಯತೇ ತದ್ವತ್ । ಧಿಯಃ ಕರ್ಮಾಣ್ಯಸ್ಮದೀಯಾನ್ಯವಿಷ್ಟಂ । ರಕ್ಷತಂ । ಪುರಂಧೀಃ ಸ್ತುತೀರ್ಜಿಗೃತಂ । ಪ್ರಬುಧ್ಯತಂ । ಅಸ್ಮದ್ಗತಂ ॥

ಪ್ರತಿಪದಾರ್ಥ

ವರುಣ—ಎಲೈ ವರುಣನೇ, । ಮಿತ್ರ—ಎಲೈ ಮಿತ್ರನೇ, । ತುಭ್ಯಂ—ನಿಮಗೋಸ್ಕರ ಎಂದರೆ ನಿಮ್ಮನ್ನುದ್ದೇಶಿಸಿಯೂ । ವಾಯವೇ—ಸಂಚಾರಶೀಲನಾದ ಆರ್ಯಮನನ್ನುದ್ದೇಶಿಸಿಯೂ । ಶುಕ್ರಃ—ಶುಭ್ರವಾದ । ಸೋಮಃ ನ—ಸೋಮರಸದಂತೆ ನಿಮಗೆ ಹಿತಕರವಾದ । ಏಷಃ ಸ್ತೋಮಃ—ಈ ಸ್ತುತಿಯು । ಅಯಾಮಿ—ನಿರ್ಮಿತವಾಗಿದೆ. । ಧಿಯಃ—ನಾವು ಮಾಡುತ್ತಿರುವ ಯಜ್ಞಾದಿಗಳನ್ನು । ಅವಿಷ್ಟಂ—(ವಿಘ್ನಗಳಿಲ್ಲದಂತೆ) ರಕ್ಷಿಸಿರಿ ಪುರಂಧೀಃ—ನಮ್ಮ ಸ್ತುತಿಗಳನ್ನು । ಜಿಗೃತಂ—(ಕೇಳಿ) ತಿಳಿಯಿರಿ. ಎಲೈ ಮಿತ್ರಾವರುಣಾದಿದೇವತೆಗಳೇ । ಯೂಯಂ—ನೀವು । ನಃ—ನಮ್ಮನ್ನು । ಸದಾ—ಯಾವಾಗಲೂ । ಸ್ವಸ್ತಿಭಿಃ—ಕಲ್ಯಾಣಗಳಿಂದ । ಪಾತ—ರಕ್ಷಿಸಿರಿ.

ಭಾವಾರ್ಥ

ಎಲೈ ಮಿತ್ರಾವರುಣರೇ, ಎಲೈ ಆರ್ಯಮನೇ, ನಿಮ್ಮನ್ನುದ್ದೇಶಿಸಿ ಶುಭ್ರವಾದ ಸೋಮರಸದಂತೆ ನಿಮಗೆ ಹಿತಕರವಾದ ಈ ಸ್ತುತಿಯು ನಿರ್ಮಿತವಾಗಿದೆ. ಈಗ ನಾವು ಮಾಡುತ್ತಿರುವ ಯಜ್ಞಾದಿಕರ್ಮಗಳನ್ನು ವಿಘ್ನರಹಿತವನ್ನಾಗಿ ಮಾಡಿ ರಕ್ಷಿಸಿರಿ. ಮತ್ತು ನಮ್ಮ ಸ್ತುತಿಯನ್ನು ಕೇಳಿ ತಿಳಿಯಿರಿ. ಎಲೈ ದೇವತೆಗಳೇ, ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ.

English Translation

Varuna and Mitra, this praise, pure as the Soma libation, has been offered to you, and also Aryaman, (to you) · protect our rites be awake to our praises . and do you ever cherish us with blessings.

ಅರವತ್ತೈದನೆಯ ಸೂಕ್ತವು

ಸಾಯಣಭಾಷ್ಯಂ

ಪ್ರತಿ ವಾಂ ಸೂರ ಇತಿ ಪಂಚರ್ಚಂ ದಶಮಂ ಸೂಕ್ತಂ ವಸಿಷ್ಠಸ್ಯಾರ್ಷಂ ಮೈತ್ರಾವರುಣಂ। ಪ್ರತಿ ವಾಮಿತ್ಯನುಕ್ರಾಂತಂ ॥ ದ್ವಿತೀಯೇ ಛಂದೋಮೇ ಪ್ರಯೋಗಶಸ್ತ್ರೇಷ್ಯೇಷು ತೃಚಃ । ಸೂತ್ರಿತಂ ಚ। ಪ್ರತಿ ವಾಂ ಸೂರ ಇತಿ ಉದಿತೇ ಸೂಕ್ತ್ಯೃರ್ಧೇನುಃ ಪ್ರತ್ನಸ್ಯ । ಆ ೪ ೧೦ । ಇತಿ ॥

ಅನುವಾದವು—ಪ್ರತಿ ವಾಂ ಸೂರೇ ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು ಇದರಲ್ಲಿ ಐದು ಋಕ್ಕುಗಳಿರುವುವು. ಈ ಸೂಕ್ತಕ್ಕೆ ವಸಿಷ್ಠನು ಋಷಿಯು, ಮಿತ್ರಾವರುಣರು ದೇವತೆಯು ಅನುಕ್ರಮಣಿಕೆಯಲ್ಲಿ-ಪ್ರತಿ ವಾಂ ಎಂದು ಹೇಳಿರುವುದು ದ್ವಿತೀಯಛಂದೋಮದಲ್ಲಿ ಸ್ತುಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ಪ್ರತಿ ವಾಂ ಎಂದು ಮೊದಲಾಗುವ ಮೊದಲನೆ ಮೂರು ಋಕ್ಕುಗಳು ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ-ಪ್ರತಿ ವಾಂ ಸೂರ ಉದಿತೇ ಸೂಕ್ತ್ಯೃರ್ಧೇನುಃ ಪ್ರತ್ನಸ್ಯ ಎಂಬ ಸೂತ್ರದಿಂದ (ಆ ೮.೧೦) ವಿವೃತವಾಗಿರುವುದು.

ಸೂಕ್ತ—೬೫

ಮಂಡಲ—೭ ॥ ಅನುವಾಕ—೪ ॥ ಸೂಕ್ತ—೬೫ ॥
ಅಷ್ಟಕ—೫ ॥ ಅಧ್ಯಾಯ—೫ ॥ ವರ್ಗ—೭ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
ಋಷಿಃ—ವಸಿಷ್ಠಃ ॥
ದೇವತಾ—ಮಿತ್ರಾವರುಣೌ ॥
ಛಂದಃ—ತ್ರಿಷ್ಟುಪ್ ।

ಸಂಹಿತಾಪಾಠಃ

ಪ್ರತಿ ವಾಂ ಸೂರ ಉದಿತೇ ಸೂಕ್ತೈರ್ಮಿತ್ರಂ ಹುವೇ ವರುಣಂ ಪೂತದಕ್ಷಂ।
ಯಯೋರಸುರ್ಯಮಕ್ಷಿತಂ ಜ್ಯೇಷ್ಠಂ ವಿಶ್ವಸ್ಯ ಯಾಮನ್ನಾ ಚಿತಾ ಜಿಗತ್ನು

ಪದಪಾಠಃ

ಪ್ರತಿ । ವಾಂ । ಸೂರೇ । ಉತ್ಽಇತೇ । ಸುಽಉಕ್ತೈಃ । ಮಿತ್ರಂ । ಹುವೇ । ವರುಣಂ । ಪೂತಽದಕ್ಷಂ।
ಯಯೋಃ । ಅಸುರ್ಯಂ । ಅಕ್ಷಿತಂ । ಜ್ಯೇಷ್ಠಂ । ವಿಶ್ವಸ್ಯ । ಯಾಮನ್ । ಆ । ಚಿತಾ । ಜಿಗತ್ನು ।

ಸಾಯಣಭಾಷ್ಯಂ

ಸೂರೇ ಸೂರ್ಯ ಉದಿತೇ ಪ್ರಾತರಸವನೇ ಮಿತ್ರಂ ಪೂತದಕ್ಷಂ ಶುದ್ಧಬಲಂ ವರುಣಂ ವಾಂ ಸೂಕ್ತೈರ್ಹುವೇ । ಅಧ್ವರೇ । ಯಯೋರ್ಮಿತ್ರಾವರುಣಯೋರಕ್ಷಿತಮಕ್ಷೀಣಮತ ಏವ ಜ್ಯೇಷ್ಠಮ-ಸುರ್ಯಂ ಬಲಮಾಚಿತಾಚಿತ ಉಪಚಿತೇ ಶೂರಸಂಘೈರುಪೇತೇ ಯಾಮನ್ ಯಾಮನಿ ಸಂಗ್ರಾಮೇ ವಿಶ್ವಸ್ಯ ಶತ್ರುಸಂಘಸ್ಯ ಜಿಗತ್ನುಜೇತೃ ಭವತಿ ॥

ಪ್ರತಿಪದಾರ್ಥ

ಸೂರೇ—ಸೂರ್ಯನು । **ಉದಿತೇ**—ಉದಯಿಸಲು ಪ್ರಾತಸ್ಸವನದಲ್ಲಿ । **ಮಿತ್ರಂ**—ಮಿತ್ರನನ್ನೂ । **ಪೂತದಕ್ಷಂ**—ಶುದ್ಧಬಲವುಳ್ಳ । **ವರುಣಂ**—ವರುಣನನ್ನೂ । **ವಾಂ**—ಈ ನಿಮ್ಮಿಬ್ಬರನ್ನೂ । **ಸೂಕ್ತೈಃ**—ಸ್ತುತಿವಾಕ್ಯಗಳಿಂದ । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ. । **ಯಯೋಃ**—(ಯಾವ) ಆ ಮಿತ್ರಾವರುಣರ । **ಅಕ್ಷಿತಂ**—ನಾಶರಹಿತವಾದುದೂ । **ಜ್ಯೇಷ್ಠಂ**—ಶ್ರೇಷ್ಠವಾದುದೂ ಆದ । **ಅಸುರ್ಯಂ**—ಬಲವು । **ಆಚಿತಾ**—ಶತ್ರುಶೂರರು ಯುದ್ಧಾರ್ಥವಾಗಿ ಒಟ್ಟಾಗಿ ಸೇರಿರುವ । **ಯಾಮನ್**—ಯುದ್ಧದಲ್ಲಿ । **ವಿಶ್ವಸ್ಯ**—ಸಮಸ್ತಶತ್ರುಸಮೂಹವನ್ನು । **ಜಿಗತ್ನು**—ಜಯಿಸುವುದಾಗಿರುವುದು.

ಭಾವಾರ್ಥ

ಯಾವ ಮಿತ್ರಾವರುಣರ ನಾಶರಹಿತವಾದುದೂ ಶ್ರೇಷ್ಠವಾದುದೂ ಆದ ಬಲವು ಯುದ್ಧದಲ್ಲಿ ಒಟ್ಟಾಗಿ ಸೇರಿರುವ ಶತ್ರುಸಮೂಹವನ್ನು ಜಯಿಸಲು ಸಮರ್ಥವಾಗಿರುವುದೋ ಅಂತಹ ಮಿತ್ರನನ್ನೂ, ಶುದ್ಧಬಲವುಳ್ಳ ವರುಣನನ್ನೂ ನಿಮ್ಮಿಬ್ಬರನ್ನೂ ಸೂರ್ಯನು ಉದಯಿಸಿದ ಕೂಡಲೇ ಪ್ರಾತಸ್ಸವನಕಾಲದಲ್ಲಿ ಸ್ತುತಿವಾಕ್ಯಗಳಿಂದ ಪ್ರಾರ್ಥಿಸಿ ಕರೆಯುತ್ತೇನೆ.

English Translation

When the sun has risen, I invoke Mitra and you, Varuna, of pure vigour, whose imperishable and superior might is triumphant in the crowded conflict over all enemies.

ಸಂಹಿತಾಪಾಠಃ

ತಾ ಹಿ ದೇವಾನಾಮಸುರಾ ತಾವರ್ಯಾ ತಾ ನಃ ಕ್ಷಿತೀಃ ಕರತಮೂರ್ಜ-
ಯಂತೀಃ ।
ಅಶ್ಯಾಮ ಮಿತ್ರಾವರುಣಾ ವಯಂ ವಾಂ ದ್ಯಾವಾ ಚ ಯತ್ರ ಪೀಪಯನ್ನ-
ಹಾ ಚ ॥ ೨ ॥

ಪದಪಾಠಃ

ತಾ । ಹಿ । ದೇವಾನಾಂ । ಅಸುರಾ । ತೌ । ಆರ್ಯಾ । ತಾ । ನಃ । ಕ್ಷಿತೀಃ । ಕರತಂ । ಊರ್ಜಯಂತೀಃ ।
ಅಶ್ಯಾಮ । ಮಿತ್ರಾವರುಣಾ । ವಯಂ । ವಾಂ । ದ್ಯಾವಾ । ಚ । ಯತ್ರ । ಪೀಪಯನ್ । ಅಹಾ । ಚ ॥೨॥

ಸಾಯಣಭಾಷ್ಯಂ

ತಾ ಹಿ ತೌ ಖಲು ದೇವೌ ದೇವಾನಾಂ ಮಧ್ಯೇಽಸುರಾ ಬಲವಂತೌ । ಆರ್ಯಾರ್ಯೌ ತೌ ಸರ್ವಸ್ಯೇಶ್ವರೌ । ತಾ ತೌ ನೋಽಸ್ಮಾಕಂ ಕ್ಷಿತೀಃ ಪುತ್ರಾದಿರೂಪಾಃ ಪ್ರಜಾ ಊರ್ಜಯಂತೀಃ ಪ್ರವೃದ್ಧಾಃ ಕರತಂ । ಕುರುತಂ । ಹೇ ಮಿತ್ರಾವರುಣಾ ಮಿತ್ರಾವರುಣೌ ವಯಂ ವಾಂ ಯುವಾಮಶ್ಯಾಮ । ವ್ಯಾಪ್ನುಯಾಮ । ಯತ್ರ ಯಸ್ಯಾಂ ಯುವಯೋರ್ವ್ಯಾಪ್ತೌ ದ್ಯಾವಾ ದ್ಯಾವಾಪೃಥಿವ್ಯೌ । ಸರ್ವದಾತಯೋಃ ಸಹಭಾವಾದಯಮರ್ಥೋ ಲಭ್ಯತೇ । ಅಹಾ ಚ । ಏತದ್ರಾತ್ರೀರುಪಲಕ್ಷಣಂ । ಅಹೋರಾತ್ರಾಣಿ ಚ ಪೀಪಯನ್ ಅಸ್ಮಾನ್ ಸ್ಯಾಯಯೀಯುಃ ॥

ಪ್ರತಿಪದಾರ್ಥ

ತಾ ಹಿ—ಆ ಮಿತ್ರಾವರುಣರೇ । **ದೇವಾನಾಂ**—ದೇವತೆಗಳ ಮಧ್ಯದಲ್ಲಿ । **ಅಸುರಾ**—ಶಕ್ತಿವಂತರಾಗಿದ್ದಾರೆ । **ಆರ್ಯಾ ತೌ**—ಸರ್ವರಿಗೂ ಒಡೆಯರಾದ । **ತಾ**—ಆ ಮಿತ್ರಾವರುಣರು । **ನಃ**—ನಮ್ಮ । **ಕ್ಷಿತೀಃ**—ಪುತ್ರಾದಿಪ್ರಜೆಗಳನ್ನು । **ಊರ್ಜಯಂತೀಃ**—ಪ್ರವೃದ್ಧರಾಗುವಂತೆ । **ಕರತಂ**—ಮಾಡಲಿ । **ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ವಯಂ**—ನಾವು । **ವಾಂ**—ನಿಮ್ಮಿಬ್ಬರನ್ನೂ । **ಅಶ್ಯಾಮ**—ಹೊಂದುವಂತಾಗಲಿ । **ಯತ್ರ ದ್ಯಾವಾ**—ನೀವು ವ್ಯಾಪಿಸಿರುವ (ಯಾವ) ದ್ಯಾವಾಪೃಥಿವಿಗಳು । **ಅಹಾ ಚ**—ಹಗಲು ರಾತ್ರಿಗಳೂ ಸಹ **ಪೀಪಯನ್**—ನಮ್ಮನ್ನು ತೃಪ್ತರನ್ನಾಗಿ ಮಾಡಲಿ.

ಭಾವಾರ್ಥ

ಆ ಮಿತ್ರಾವರುಣರೆಂಬ ದೇವತೆಗಳೇ ಸಮಸ್ತ ದೇವತೆಗಳ ಮಧ್ಯದಲ್ಲಿಯೂ ಶಕ್ತಿಸಾಮರ್ಥ್ಯಗಳುಳ್ಳವರಾಗಿದಾರೆ ಸರ್ವರಿಗೂ ಒಡೆಯರಾದ ಆ ಮಿತ್ರಾವರುಣರು ನಮ್ಮ ಪುತ್ರಾದಿಸಂತತಿಗಳನ್ನು ಪ್ರವರ್ಧಮಾನರಾಗುವಂತೆ ಮಾಡಲಿ. ಎಲೈ ಮಿತ್ರಾವರುಣರೇ, ನಾವು ನಿಮ್ಮಿಬ್ಬರ ಸಮೀಪವರ್ತಿಗಳಾಗಿರಲಿ ನೀವು ವ್ಯಾಪಿಸಿರುವ ಈ ದ್ಯಾವಾಪೃಥಿವಿಗಳೂ ಅಹೋರಾತ್ರಿಗಳೂ ಸಹ ನಮಗೆ ತೃಪ್ತಿಯನ್ನುಂಟುಮಾಡಲಿ

English Translation

They verily are mighty among the gods . they are rulers they bestow upon us a numerous posterity : may we obtain you, Mitra and Varuna, whether on earth or in heaven, and wherever the (passing) days may preserve us

ಸಂಹಿತಾಪಾಠಃ

ತಾ ಭೂರಿಪಾಶಾವನೃತಸ್ಯ ಸೇತೂ ದುರತ್ಯೇತೂ ರಿಪವೇ ಮರ್ತ್ಯಾಯ ।

ಋತಸ್ಯ ಮಿತ್ರಾವರುಣಾ ಪಥಾ ವಾಮುಪೋ ನ ಸ್ತೋತಾ ದುರಿತಾ ತರೇಮ ॥

पदपाठः

ता । भूरिऽपाशौ । अनृतस्य । सेतू इति । दुरत्येतू इति दुःऽअत्येतू । रिपवे ।
मर्त्याय ।

ऋतस्य । मित्रावरुणा । पथा । वां । अपः । न । नावा । दुःऽइता । तरेम ॥ ६ ॥

सायणभाष्यं

ता तौ मित्रावरुणौ भूरिपाशौ प्रभूतबंधनसाधनसाशोपेतावनृतस्य योगरहितस्य सेतू सेतुवद्बंधकौ रिपवे मर्त्याय वैरिजनाय दुरत्येतू दुरतिक्रमौ भवतः । हे मित्रावरुणा तादृशौ मित्रावरुणौ वां युवयोरृतस्य यज्ञस्य युवयोरर्थायानुष्ठीयमानस्य योगस्य पथा मार्गेण दुरिता दुःखानि तरेम नावापो न प्रभूतान्युदकानीव ॥

प्रतिपदार्थ

ता—ಆ ಮಿತ್ರಾವರುಣರು । **भूरिपाशौ**—ಬಂಧನಸಾಧನವಾದ ಪಾಶವುಳ್ಳವರು । **अनृतस्य**—ಯಜ್ಞಯಾಗಾದಿಗಳನ್ನು ಮಾಡದಿರುವವರಿಗೆ । **सेतू**— ಸೇತುವೆಯಂತೆ ಬಂಧನವನ್ನುಂಟುಮಾಡುವವರು । **रिपवे**—ಶತ್ರುವಾದ । **मर्त्याय**—ಮಾನವನಿಂದ । **दुरत्येतू**—ಸಮಾಪಿಸಲ್ಪಡಲು ಸಾಧ್ಯವಿಲ್ಲದವರು । **मित्रावरुणा**—ಈ ವಿಧಗುಣವಿಶಿಷ್ಟರಾದ ಎಲೈ ಮಿತ್ರಾವರುಣರೇ । **वां**—ನಿಮ್ಮ । **ऋतस्य**— ಧನಾಪೇಕ್ಷೆಯಿಂದ ನಾವು ಮಾಡುವ ಯಜ್ಞದ । **पथा**—ಮಾರ್ಗದಿಂದ । **नावा**—ದೋಣಿಯಿಂದ । **अपो न**—(ಆಳವಾದ) ನೀರನ್ನು ದಾಟುವಂತೆ । **दुरिता**—ದುಃಖಗಳನ್ನು । **तरेम**—ನಾವು ದಾಟುವಂತಾಗಲಿ.

भावार्थ

ಆ ಮಿತ್ರಾವರುಣರ ಪಾಶಗಳು ಯಜ್ಞಾದಿಗಳನ್ನು ಮಾಡದಿರುವವರನ್ನು ಸೇತುವೆಯಂತೆ ಬಂಧನದಿಂದ ಕಟ್ಟುವ ಸಾಮರ್ಥ್ಯವುಳ್ಳದ್ದಾಗಿರುವುವು. ನಿಮ್ಮನ್ನು ಯಾವ ಶತ್ರುಜನವೂ ಸಮಾಪಿಸಲು ಸಾಧ್ಯವಿಲ್ಲ. ಇಂತಹ ಗುಣಗಳಿಂದ ಸಹಿತರಾದ ಎಲೈಮಿತ್ರಾವರುಣರೇ, ಧನಾಪೇಕ್ಷೆಯಿಂದ ನಾವು ಮಾಡುವ ಯಜ್ಞದ ಈ ನಿಮ್ಮ ಮಾರ್ಗದರ್ಶನದಿಂದ ಆಳವಾದ ನೀರನ್ನು ದೋಣಿಯಿಂದ ದಾಟುವಂತೆ ದುಃಖಗಳನ್ನು ನಾವು ದಾಟುವಂತಾಗಲಿ.

English Translation

Holders are you of many fetters, barriers against the irreligious, invincible by hostile mortals: may we cross over all the danger, Mitra and Varuna, by the path of sacrifice, to you, as (we cross over) water by a boat.

संहितापाठः

आ नो मित्रावरुणा हव्यजुष्टिं घृतैर्गव्यूतिमुक्षतमिळाभिः ।

ಪ್ರತಿ ವಾಮತ್ರ ವರಮಾ ಜನಾಯ ಪೃಣೀತಮುದ್ನೋ ದಿವ್ಯಸ್ಯ ಚಾರೋಃ ॥

ಪದಪಾಠ

ಆ । ನಃ । ಮಿತ್ರಾವರುಣಾ । ಹವ್ಯಜುಷ್ಟಿಂ । ಘೃತೈಃ । ಗವ್ಯೂತಿಂ । ಉಕ್ಷತಂ । ಇಳಾಭಿಃ ।
ಪ್ರತಿ । ವಾಂ । ಅತ್ರ । ವರಂ । ಆ । ಜನಾಯ । ಪೃಣೀತಂ । ಉದ್ನಃ । ದಿವ್ಯಸ್ಯ । ಚಾರೋಃ ॥ ೪ ॥

ಸಾಯಣಭಾಷ್ಯಂ

ವೈತ್ರಾವರುಣೇ ಸಶಾವಾ ನೋ ಮಿತ್ರಾವರುಣೇತ್ಯೇಷಾ ಚತುರ್ಥ್ಯನುವಾಕ್ಯಾ । ಸೂತ್ರಿತಂ ಚ । ಆ ನೋ ಮಿತ್ರಾವರುಣಾ ಹವ್ಯಜುಷ್ಟಿಂ ಯುವಂ ವಸ್ತ್ರಾಣಿ ಪೀವಸಾ ವಸಾಥೇ । ಆ. ೩ ೮ । ಇತಿ ॥

ಹೇ ಮಿತ್ರಾವರುಣಾ ಮಿತ್ರಾವರುಣೌ ನೋಽಸ್ಮಾಕಂ ಹವ್ಯಜುಷ್ಟಿಂ ಹವಿಃಸೇವನವಂತಂ ಯಜ್ಞಮಾ ಗಚ್ಛತಮಿತಿ ಶೇಷಃ । ಆಗತ್ಯ ಚೇಳಾಭಿರನ್ನೈಃ ಸಹ ಘೃತೈರುದಕೈರ್ಗವ್ಯೂತಿಮಸ್ಮದೀಯಾಂ ಭೂಮಿಮುಕ್ಷತಂ । ಸಿಂಚತಂ । ವಾಂ ಯುವಾಂ ಪ್ರತ್ಯಕ್ಷಾಸ್ಮಿನ್ಲೋಕೇ ವರಮುತ್ಕೃಷ್ಟಂ ಹವಿಃ ಸ್ತೋತ್ರಂ ವಾ ಕ ಆ ಯಚ್ಛೇದಿತಿ ಶೇಷಃ । ಅತಃ ಕೇವಲಂ ಕೃಪಯೈವ ದಿವ್ಯಸ್ಯ ದಿವಿ ಭವಸ್ಯ ಚಾರೋಶ್ಚರಣೀಯಸ್ಯೋದ್ನ ಉದಕಸ್ಯ ॥ ಕರ್ಮಣಿ ಷಷ್ಠೀ ॥ ಉಕ್ತಲಕ್ಷಣಮುದಕಂ ಪೃಣೀತಂ । ಪ್ರಯಚ್ಛತಂ॥

ಪ್ರತಿಪದಾರ್ಥ

ಮಿತ್ರಾವರುಣಾ—ಎಲೈ ಮಿತ್ರಾವರುಣರೇ, । ನಃ—ನಮ್ಮ । ಹವ್ಯಜುಷ್ಟಿಂ—ಹವಿಸ್ಸೇವನರೂಪವಾದ ಯಜ್ಞಕ್ಕೆ । ಆ (ಗಚ್ಛತಂ)—ದಯಮಾಡಿಸಿರಿ (ಆನಂತರ) । ಇಳಾಭಿಃ—ಅನ್ನಗಳಿಂದಲೂ । ಘೃತೈಃ—ಉದಕಗಳಿಂದಲೂ । ಗವ್ಯೂತಿಂ—ನಾವು ವಾಸಿಸುತ್ತಿರುವ ಈ ಪ್ರದೇಶವನ್ನು । ಉಕ್ಷತಂ—ಸೇಕಿಸಿರಿ । ವಾಂ ಪ್ರತಿ—ನಿಮ್ಮನ್ನುದ್ದೇಶಿಸಿ । ಅತ್ರ—ಈ ಲೋಕದಲ್ಲಿ । ವರಂ—ಉತ್ಕೃಷ್ಟವಾದ ಹವಿಸ್ಸನ್ನು ಅಥವಾ ಸ್ತೋತ್ರವನ್ನು । ಆ—ಯಾವನು ತಾನೇ ಅರ್ಪಿಸಬಲ್ಲನು ? (ಆದ್ದರಿಂದ) । ದಿವ್ಯಸ್ಯ—ಅಂತರಿಕ್ಷದಲ್ಲಿ ನೀಹಾರರೂಪದಿಂದಿರುವ । ಚಾರೋಃ—ಉತ್ತಮವಾದ । ಉದ್ನಃ—ವೃಷ್ಟ್ಯುದಕವನ್ನು । ಜನಾಯ—ಜನರಿಗಾಗಿ । ಪೃಣೀತಂ—ಒದಗಿಸಿಕೊಡಿ.

ಭಾವಾರ್ಥ

ಎಲೈ ಮಿತ್ರಾವರುಣರೇ, ನಿಮಗಾಗಿ ಹವಿಸ್ಸನ್ನು ಅರ್ಪಿಸುತ್ತಿರುವ ಈ ಯಜ್ಞಕ್ಕೆ ದಯಮಾಡಿ ಆನಂತರ ಅನ್ನಾದ್ಯಾಹಾರಗಳಿಂದಲೂ, ವೃಷ್ಟ್ಯುದಕಗಳಿಂದಲೂ ನಾವು ವಾಸಿಸುತ್ತಿರುವ ಈ ಭೂಪ್ರದೇಶವನ್ನು ಸೇಕಿಸಿ ತೃಪ್ತಿಪಡಿಸಿ. ನಿಮ್ಮನ್ನುದ್ದೇಶಿಸಿ ಯಾವ ಪುರುಷನುತಾನೇ ಉತ್ಕೃಷ್ಟವಾದ ಹವಿಸ್ಸನ್ನು ಅಥವಾ ಸ್ತೋತ್ರವನ್ನು ಅರ್ಪಿಸಲು ಸಮರ್ಥನು ? (ಆದ್ದರಿಂದ ನೀವು ಅನುಗ್ರಹಾತ್ಮಕಬುದ್ಧಿಯಿಂದ) ಅಂತರಿಕ್ಷದಲ್ಲಿರುವ ಉತ್ತಮವಾದ ಉದಕವನ್ನು ವೃಷ್ಟಿರೂಪದಲ್ಲಿ ಜನರಿಗೆ ಒದಗಿಸಿಕೊಡಿ

English Translation

Come, Mitra and Varuna, to our offered oblation sprinkle our place of sacrifice with water and viands (who) in this world (may) present to you

excellant (donations) that you may (thereby be induced to) gratify and with celestial and beautiful water.

ವಿಶೇಷವಿಷಯಗಳು

ಮಿತ್ರಾವರುಣರನ್ನು ದ್ವೇಷಿಸಿ ಮಾಡುವ ಪಶುಹೋಮದಲ್ಲಿ **ಆ ನೋ ಮಿತ್ರಾವರುಣಾ** ಎಂಬ ಈ ಋಕ್ಕನ್ನು ಯೆ ಅನುವಾಕ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಆ ನೋ ಮಿತ್ರಾವರುಣಾ ಘೃಷ್ವಿಂ ಯುವಂ ವಸ್ತ್ರಾಣಿ ಪೀವಸಾ ವಸಾಥೇ** ಎಂಬ ಸೂತ್ರದಿಂದ (ಆ ೩ ಲ) ವಿವೃತವಾಗಿರುವುದು

ಸಂಹಿತಾಪಾಠಃ

ಏಷ ಸ್ತೋಮೋ ವರುಣ ಮಿತ್ರ ತುಭ್ಯಂ ಸೋಮಃ ಶುಕ್ರೋ ನ ವಾಯವೇ ಯಾಮಿ ।
ಅವಿಷ್ಟಂ ಧಿಯೋ ಜಿಗೃತಂ ಪುರಂಧೀರ್ಯೂಯಂ ಪಾತ ಸ್ವಸ್ತಿಭಿಃ ಸದಾ ನಃ

ಪದಪಾಠಃ

। ಸ್ತೋಮಃ । ವರುಣ । ಮಿತ್ರ । ತುಭ್ಯಂ । ಸೋಮಃ । ಶುಕ್ರಃ । ನ । ವಾಯವೇ । ಆಯಾಮಿ
ಷ್ಟಂ । ಧಿಯಃ । ಜಿಗೃತಂ । ಪುರಂಧೀಃ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥ ೫ ॥

ಸಾಯಣಭಾಷ್ಯಂ

ಅನಯಾ ಸ್ತುತಿಮುಪಸಂಹರತಿ । ಹೇ ವರುಣ ಹೇ ಮಿತ್ರ ತುಭ್ಯಂ ಯುವಯೋರ್ವಾಯವೇ । ಯುರ್ಗಂತಾದಿತ್ಯಃ । ಸ ಏವಾರ್ಯಮಾ । ತಸ್ಮೈ ಚೈಷ ಸ್ತೋಮಃ ಸ್ತವ್ಯೋಽಯಾಮಿ । ಅಕಾರಿ । ನ । ಶುಕ್ರೋ ದೀಪ್ತಃ ಸೋಮೋ ನ ಯುಷ್ಮಭ್ಯಂ ಪ್ರೀತಿಕರಃ ಸೋಮೋ ಯಥಾ ದೀಯತೇ ೯ । ಧಿಯಃ ಕರ್ಮಾಣ್ಯಸ್ಮದೀಯಾನ್ಯವಿಷ್ಟಂ । ರಕ್ಷತಂ । ಪುರಂಧೀಃ ಸ್ತುತೀರ್ಜಿಗೃತಂ । ಪ್ರಬು- । ಆಸ್ಮದ್ಗತಂ ॥

ಪ್ರತಿಪದಾರ್ಥ

ವರುಣ—ಎಲೈ ವರುಣನೇ, । ಮಿತ್ರ—ಎಲೈ ಮಿತ್ರನೇ, । ತುಭ್ಯಂ—ನಿಮಗೋಸ್ಕರ ಎಂದರೆ ನಿಮ್ಮ ಪ್ರೀತಿಸಿಯೂ । ವಾಯವೇ—ಸಂಚಾರಶೀಲನಾದ ಆರ್ಯಮನನ್ನುದ್ದೇಶಿಸಿಯೂ । ಶುಕ್ರಃ—ಶುಭ್ರವಾದ । ಸೋಮಃ ನ—ಸೋಮರಸದಂತೆ ನಿಮಗೆ ಹಿತಕರವಾದ । ಏಷಃ ಸ್ತೋಮಃ—ಈ ಸ್ತುತಿಯು । ಆಯಾಮಿ—ತವಾಗಿದೆ. । ಧಿಯಃ—ನಾವು ಮಾಡುತ್ತಿರುವ ಯಜ್ಞಾದಿಗಳನ್ನು । ಅವಿಷ್ಟಂ—(ವಿಘ್ನಗಳಿಲ್ಲದಂತೆ) ರಕ್ಷಿಸಿರಿ ಧೀಃ—ನಮ್ಮ ಸ್ತುತಿಗಳನ್ನು । ಜಿಗೃತಂ—(ಕೇಳಿ) ತಿಳಿಯಿರಿ. ಎಲೈ ಮಿತ್ರಾವರುಣಾದಿದೇವತೆಗಳೇ । ಯಂ—ನೀವು । ನಃ—ನಮ್ಮನ್ನು । ಸದಾ—ಯಾವಾಗಲೂ । ಸ್ವಸ್ತಿಭಿಃ—ಕಲ್ಯಾಣಗಳಿಂದ । ಪಾತ—ರಿ.

ಭಾವಾರ್ಥ

ಎಲೈ ಮಿತ್ರಾವರುಣರೇ, ಎಲೈ ಆರ್ಯಮನೇ, ನಿಮ್ಮನ್ನುದ್ದೇಶಿಸಿ ಶುಭ್ರವಾದ ಸೋಮರಸದಂತೆ ನಮಗೆ ಹಿತಕರವಾದ ಈ ಸ್ತುತಿಯು ನಿರ್ಮಿತವಾಗಿದೆ ಈಗ ನಾವು ಮಾಡುತ್ತಿರುವ ಯಜ್ಞಾದಿಕರ್ಮಗಳನ್ನು ವಿಘ್ನರಹಿತವನ್ನಾಗಿ ಮಾಡಿ ರಕ್ಷಿಸಿರಿ ಮತ್ತು ನಮ್ಮ ಸ್ತುತಿಯನ್ನು ಕೇಳಿ ತಿಳಿಯಿರಿ ಎಲೈ ದೇವತೆಗಳೇ, ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ

English Translation

Varuna and Mitra, this praise, pure as the Soma libation, has been offered to you, and also Aryaman, (to you) protect our rites be awake to our praises and do you ever cherish us with blessings

---

ಅರವತ್ತಾರನೆಯ ಸೂಕವು

ಸಾಯಣಭಾಷ್ಯಂ

ಪ್ರ ಮಿತ್ರಯೋರಿತ್ಯೇಕೋನವಿಂಶತ್ಯೃಚಸ್ಯೈಕಾದಶಂ ಸೂಕ್ತಂ ವಸಿಷ್ಠಸ್ಯಾರ್ಷಂ । ಆತ್ರೇಯಮನುಕ್ರಮಣಿಕಾ । ಪ್ರ ಮಿತ್ರಯೋರೇಕೋನಾ ಗಾಯತ್ರಂ ದಶಮ್ಯಾದ್ಯಾಸ್ತ್ರಯಃ ಪ್ರಗಾಥಾಃ ಪುರಉಷ್ಣಿಕ್ ಚತುರ್ಥ್ಯಾದ್ಯಾ ದಶಾದಿತ್ಯಾಸ್ತಿಸ್ರಃ ಸೌರ್ಯ ಇತಿ । ದಶಮಿನಾ ಬೃಹತ್ಯೇಕಾದಶೀ ಸತೋಬೃಹತೀ ದ್ವಾದಶೀ ಬೃಹತೀ ತ್ರಯೋದಶೀ ಸತೋಬೃಹತೀ ಚತುರ್ದಶೀ ಬೃಹತೀ ಪಂಚದಶೀ ಸತೋಬೃಹತೀ ಷೋಡಶೀ ಪುರಉಷ್ಣಿಕ್ ಶಿಷ್ಟಾ ಗಾಯತ್ರ್ಯಃ । ಚತುರ್ಥ್ಯಾದ್ಯಾಸ್ತ್ರಯೋದಶ್ಯಂತಾ ಆದಿತ್ಯದೇವತಾಶ್ಚತುರ್ದಶ್ಯಾಸ್ತಿಸ್ರಃ ಸೂರ್ಯದೇವತ್ಯಾಃ । ಆದ್ಯಂತ್ಯೌ ತೃಚೌ ಪೂರ್ವವನ್ಮೈತ್ರಾವರುಣ್ಯೌ ॥ ಅಗ್ನಿಹೋತ್ರೋಮೇ ಮಾಧ್ಯಂದಿನಸವನೇ ಮೈತ್ರಾವರುಣಶಸ್ತ್ರ ಆದಿತೋ ನವರ್ಚಃ ಶಸ್ಯಾಃ । ಪ್ರ ಮಿತ್ರಯೋರ್ವರುಣಯೋರಿತಿ ನವ । ಆ ೫-೧೦ । ಇತಿ ಸೂತ್ರಿತತ್ವಾತ್ ॥ ಪೃಷ್ಠ್ಯಾಭಿಪ್ಲವಷಡಹಯೋಃ ಸ್ತೋಮವೃದ್ಧಿನಿಮಿತ್ತಮಾವಾಪಾರ್ಥಾ ಆದ್ಯಾ ಷಡೃಚಃ । ಸೂತ್ರಿತಂ ಚ । ಪ್ರ ಮಿತ್ರಯೋರ್ವರುಣಯೋರಿತಿ ಷಟ್ । ಆ ೭ ೫ । ಇತಿ ॥

ಅನುವಾದವು—ಪ್ರ ಮಿತ್ರಯೋಃ ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು ಇವರಲ್ಲಿ ಹತ್ತೊಂಭತ್ತು ಋಕ್ಕುಗಳಿರುವುವು. ಈ ಸೂಕ್ತಸ್ಯ ವಸಿಷ್ಠನು ಋಷಿಯು, ಅನುಕ್ರಮಣಿಕೆಯಲ್ಲಿ **ಪ್ರ ಮಿತ್ರಯೋರೇಕೋನಾ ಗಾಯತ್ರಂ ದಶಮ್ಯಾದ್ಯಾಸ್ತ್ರಯಃ ಪ್ರಗಾಥಾಃ ಪುರಉಷ್ಣಿಕ್ ಚತುರ್ಥ್ಯಾದ್ಯಾ ದಶಾದಿತ್ಯಾಸ್ತಿಸ್ರಃ ಸೌರ್ಯಃ** ಎಂದು ಹೇಳಿರುವುದು. ಈ ಸೂಕ್ತದ ಹತ್ತನೆಯ ಋಕ್ಕು ಬೃಹತೀ ಛಂದಸ್ಸುವು, ಹನ್ನೊಂದನೆಯದು ಸತೋಬೃಹತೀಛಂದಸ್ಸುವು, ಹನ್ನೆರಡನೆಯದು ಬೃಹತೀ, ಹದಿಮೂರನೆಯದು ಸತೋಬೃಹತೀ, ಹದಿನಾಲ್ಕನೆಯದು ಬೃಹತೀ, ಹದಿನೈದನೆಯದು ಸತೋಬೃಹತೀ, ಹದಿನಾರನೆಯದು ಪುರಉಷ್ಣಿಕ್ ಛಂದಸ್ಸುವು, ಉಳಿದ ಋಕ್ಕುಗಳು ಗಾಯತ್ರೀಛಂದಸ್ಸುವು ನಾಲ್ಕನೆಯ ಋಕ್ಕಿನಿಂದ ಹದಿಮೂರನೆಯ ಋಕ್ಕಿನವರೆಗಿನ (೪-೧೩) ಋಕ್ಕುಗಳಿಗೆ ಆದಿತ್ಯರು ದೇವತೆಯು, ಹದಿನಾಲ್ಕರಿಂದ ಮುಂದಿನ ಮೂರು ಋಕ್ಕುಗಳಿಗೆ (೧೪-೧೬)

ಸೂರ್ಯನು ದೇವತೆಯು, ಈ ಸೂಕ್ತದ ಮೊದಲನೆಯ ಮತ್ತು ಕೊನೆಯ ಋಕ್ಕುಗಳಿಗೆ ಹಿಂದಿನಂತೆ ಮಿತ್ರಾವರುಣರು ದೇವತೆಗಳು ಅಗ್ನಿಷ್ಟೋಮಯಾಗದ ಮಾಧ್ಯಂದಿನಸವನಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ಮೊದಲಿನ ಒಂಭತ್ತು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತ ಸೂತ್ರದ-**ಪ್ರ ಮಿತ್ರಯೋರ್ವರುಣಯೋರಿತಿ ನವ** ಎಂಬ ಸೂತ್ರದಿಂದ (ಆ ೫-೧೦) ವಿನ್ಯತವಾಗಿರುವುದು. ಪೃಷ್ಠ್ಯ ಮತ್ತು ಅಭಿಪ್ಲವಷಡಹಯಾಗಗಳಲ್ಲಿಯೂ ಸ್ತೋಮವೃದ್ಧಿಸಿಮಿತ್ತವಾಗಿ ಆವಾವಾರ್ಧವಾಗಿ ಪಠಿಸುವ ಮಂತ್ರಗಳಿಗಾಗಿ ಈ ಸೂಕ್ತದ ಮೊದಲಿನ ಆರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಪ್ರ ಮಿತ್ರಯೋರ್ವರುಣಯೋರಿತಿ ಷಟ್** ಎಂಬ ಸೂತ್ರದಿಂದ (ಆ. ೭-೫) ವಿನ್ಯತವಾಗಿರುವುದು.

ಸೂಕ್ತ—೬೬

ಮಂಡಲ—೭ ॥ ಅನುವಾಕ—೪ ॥ ಸೂಕ್ತ—೬೬ ॥
ಅಷ್ಟಕ—೫ ॥ ಅಧ್ಯಾಯ—೫ ॥ ವರ್ಗ—೮, ೯, ೧೦, ೧೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೯ ॥
ಋಷಿಃ—ವಸಿಷ್ಠಃ ॥
ದೇವತಾ—೧-೩, ೧೭-೧೯ ಮಿತ್ರಾವರುಣೌ । ೪-೧೩ ಆದಿತ್ಯಾಃ । ೧೪-೧೬ ಸೂರ್ಯಃ ॥
ಛಂದಃ—೧-೯, ೧೭-೧೯ ಗಾಯತ್ರೀ । ೧೦, ೧೨, ೧೪ ಬೃಹತೀ । ೧೧, ೧೩, ೧೫ ಸತೋಬೃಹತೀ । ೧೬ ಪುರಉಷ್ಣಿಕ್ ॥

ಸಂಹಿತಾಪಾಠಃ

ಪ್ರ ಮಿತ್ರಯೋರ್ವರುಣಯೋಃ ಸ್ತೋಮೋ ನ ಏತು ಶೂಷ್ಯಃ ।
ನಮಸ್ವಾನ್ತುವಿಜಾತಯೋಃ ॥ ೧ ॥

ಪದಪಾಠಃ

ಪ್ರ । ಮಿತ್ರಯೋಃ । ವರುಣಯೋಃ । ಸ್ತೋಮಃ । ನಃ । ಏತು । ಶೂಷ್ಯಃ ।
ನಮಸ್ವಾನ್ । ತುವಿಜಾತಯೋಃ ॥ ೧ ॥

ಸಾಯಣಭಾಷ್ಯಂ

ಮಿತ್ರಯೋರ್ವರುಣಯೋಃ । ಮಿತ್ರಾವರುಣಯೋರಿತ್ಯರ್ಥಃ । ಉಭಯತ್ರ ಪ್ರತಿಯೋಗಾಪೇಕ್ಷಯಾ ದ್ವಿವಚನತ್ವಂ । ತುವಿಜಾತಯೋರ್ಬಹುಸ್ತಾದುರ್ಜಾವಯೋರ್ದೇವಯೋರ್ನೋಽಸ್ಮದೀಯಃ ಶೂಷ್ಯಃ ಸುಖಕರೋ ನಮಸ್ವಾನನ್ನವಾನ್ ಹವಿರ್ಭಿರ್ಯುಕ್ತಃ ಸ್ತೋಮಃ ಸ್ತೋತ್ರಂ ಪ್ರೈತು । ಗಚ್ಛತು । ಆಹೋರಾತ್ರಂ ವೈ ಮಿತ್ರಾವರುಣಾವಿತಿ ಶ್ರುತಿಃ । ಅನಯೋರಹೋರಾತ್ರಾಪೇಕ್ಷತ್ವಾತ್ತಯೋಃ ಪುನಃಪುನರಾಗಮನಾದನಯೋಸ್ತುವಿಜಾತತ್ವಂ । ಅಥವಾ ಬಹೂನಾಮುಪಕಾರಾಯಾನಯೋಃ ಪ್ರಾದುರ್ಭಾವಾತ್ತುವಿಜಾತತ್ವಂ ॥

ಪ್ರತಿಪದಾರ್ಥ

ತುವಿಜಾತಯೋಃ—ಬಹುಜನ್ಮವುಳ್ಳ । **ಮಿತ್ರಯೋಃ ವರುಣಯೋಃ**—ಮಿತ್ರಾವರುಣರನ್ನು ಉದ್ದೇಶಿಸಿ ಆರ್ಪಿಸುವ । **ನಃ**—ನಮ್ಮ । **ಶೂಷ್ಯಃ**—ಸುಖಕರವಾದುದೂ । **ನಮಸ್ವಾನ್**—ಹವಿಸ್ಸಿನಿಂದ ಯುಕ್ತವಾದುದೂ ಆದ । **ಸ್ತೋಮಃ**—ಈ ಸ್ತೋತ್ರವು । **ಪ್ರ ಏತು**—ಅವರ ಸಮೀಪಕ್ಕೆ ಹೋಗಿ ಸೇರಲಿ.

ಭಾವಾರ್ಥ

ಅನೇಕ ಜನ್ಮಗಳನ್ನು ಹೊಂದುವ ಮಿತ್ರಾವರುಣರನ್ನುದ್ದೇಶಿಸಿ ನಾವು ಆರ್ಪಿಸುವ ಸುಖಕರವಾದುದೂ, ಹವಿಸ್ಸಿನಿಂದ ಯುಕ್ತವಾದುದೂ ಆದ ಈ ಸ್ತೋತ್ರವು ಅವರ ಬಳಿಗೆ ಹೋಗಿ ಸೇರಲಿ.

English Translation

May this our propitiatory praise, accompanied by oblations, proceed to you, Mitra and Varuna, of reiterated manifestations

ವಿಶೇಷವಿಷಯಗಳು

ತುವಿಜಾತಯೋಃ—**ತುವಿ** ಎಂದರೆ ಬಹು, **ಜಾತ** ಎಂದರೆ ಜನ್ಮ. ಅನೇಕ ಜನ್ಮಗಳು ಎಂದರೆ ಏನು? **ಅಹೋರಾತ್ರೇ ವೈ ಮಿತ್ರಾವರುಣೌ** (ತೈ ಸಂ ೭-೪-೧೦-೧), **ಮೈತ್ರಂ ವಾ ಅಹಃ । ವಾರುಣೀ ರಾತ್ರಿಃ** ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಹಿಂತ್ರನು ಹಗಲಿಗ ಅಧಿಪತಿಯೆಂದೂ ವರುಣನು ರಾತ್ರಿಗೆ ಅಧಿಪತಿಯೆಂದೂ ಹೇಳಿದೆ. ಹಗಲುರಾತ್ರಿಗಳು ಒಂದಾಗುತ್ತಲೊಂದು ಪರಿವರ್ತನಕ್ರಮದಿಂದ ನಿರಂತರವೂ ಪ್ರವಾಹರೂಪವಾಗಿರುವುದರಿಂದ ಅವುಗಳಿಗೆ ಅಭಿಮಾನದೇವತೆಗಳಾದ ಮಿತ್ರಾವರುಣರಿಗೆ ಅನೇಕ ಜನ್ಮಗಳುಂಟೆಂದು ಋಷಿಯು ತನ್ನ ಅಭಿಪ್ರಾಯವನ್ನು ಪ್ರಕಾರಾಂತರವಾಗಿ ಸೂಚಿಸಿದಾನೆ

ಮಿತ್ರಯೋಃ ವರುಣಯೋಃ—**ಮಿತ್ರಾವರುಣಯೋರಿತ್ಯರ್ಥಃ । ಉಭಯತ್ರ ಪ್ರತಿಯೋಗಾಪೇಕ್ಷಯಾ ದ್ವಿವಚನತ್ವಂ ।** ಇಲ್ಲಿ ಮಿತ್ರ ಮತ್ತು ವರುಣ ಎಂಬ ಎರಡು ಪ್ರತ್ಯೇಕ ಶಬ್ದಗಳದ್ದು ಉಭಯ ದೇವತೆಗಳನ್ನೂ ನಿರ್ದೇಶಿಸಿರುವುದರಿಂದಲೂ ಛಂದಸ್ಸಿನ ಅನುಕೂಲಕ್ಕಾಗಿಯೂ ಪ್ರತಿಶಬ್ದಕ್ಕೂ ದ್ವಿವಚನವನ್ನು ಉಪಯೋಗಿಸಲಾಗಿದೆ ಇದೇ ವಿಧವಾದ ಪ್ರಯೋಗವು—

ಉದು ತ್ಯಚ್ಚಕ್ಷುರ್ಮಹಿ ಮಿತ್ರಯೋರ್ವಾಂ ಏತಿ ಪ್ರಿಯಂ ವರುಣಯೋರದಬ್ಧಂ ।

(ಋ ಸಂ ೬-೫೧-೧)

ಎಂಬ ಋಕ್ಕಿನಲ್ಲಿಯೂ ಕಂಡುಬರುವುದು ಇಲ್ಲಿಯೂ **ಮಿತ್ರಯೋಃ ವರುಣಯೋಃ** ಎಂಬ ದ್ವಿವಚನಾಂತ ಪ್ರತ್ಯೇಕ ಶಬ್ದಗಳನ್ನು ಮಿತ್ರಾವರುಣಯೋಃ ಎಂಬ ಶಬ್ದಕ್ಕೆ ಬದಲಾಗಿ ಉಪಯೋಗಿಸಲಾಗಿದೆ. ಇದಲ್ಲದೆ ಅನೇಕ ಸಂದರ್ಭಗಳಲ್ಲಿ ಮಿತ್ರಾವರುಣರಿಬ್ಬರನ್ನೂ ಸೂಚಿಸುವುದಕ್ಕೆ ಮಿತ್ರ ಅಥವಾ ವರುಣ ಎಂಬ ಒಂದೇ ಶಬ್ದದ ದ್ವಿವಚನವನ್ನು ಉಪಯೋಗಿಸುವುದೂ ರೂಢಿಯಾಗಿದೆ—

ಆ ಯದ್ವಾಮಿಯಚ್ಚಕ್ಷಸಾ ಮಿತ್ರ ವಯಂ ಚ ಸೂರಯಃ ।

(ಋ. ಸಂ. ೫-೬೬-೬)

ಎಂಬ ಋಕ್ಕಿನಲ್ಲಿ ಮಿತ್ರಾ ಎಂಬ ದ್ವಿವಚನಾಂತಶಬ್ದವು (ಸಂಹಿತಾಪಾರದಲ್ಲಿ ಮಿತ್ರ ಎಂದು ಹ್ರಸ್ವವಿದೆ) ಮಿತ್ರಾವರುಣರಿಬ್ಬರನ್ನು ಸೂಚಿಸುವುದಕ್ಕಾಗಿ ಉಪಯೋಗಿಸಲಾಗಿದೆ.

ಅಧಾರಯೇತಂ ಪೃಥಿವೀಮುತ ದ್ಯಾಂ ಮಿತ್ರರಾಜಾನಾ ವರುಣಾ ನಮೋಭಿಃ ॥

(ಋ. ಸಂ. ೫-೬೨-೩)

ಎಂಬ ಋಕ್ಕಿನಲ್ಲಿ ದ್ವಿವಚನಾಂತಶಬ್ದವಾದ ವರುಣಾ ಎಂಬ ಪದವು ಮಿತ್ರಾವರುಣರಿಬ್ಬರನ್ನು ಸೂಚಿಸುವುದಕ್ಕಾಗಿ ಉಪಯೋಗಿಸಲಾಗಿದೆ. ಇದರಂತೆ ಇನ್ನೂ ಅನೇಕ ಉದಾಹರಣೆಗಳಿವೆ.

ಸಂಹಿತಾಪಾಠಃ

ಯಾ ಧಾರಯಂತ ದೇವಾಃ ಸುದಕ್ಷಾ ದಕ್ಷಪಿತರಾ ।

ಅಸುರ್ಯಾಯ ಪ್ರಮಹಸಾ ॥ ೨ ॥

ಪದಪಾಠಃ

ಯಾ । ಧಾರಯಂತ । ದೇವಾಃ । ಸುದಕ್ಷಾ । ದಕ್ಷಪಿತರಾ ।

ಅಸುರ್ಯಾಯ । ಪ್ರಮಹಸಾ ॥ ೨ ॥

ಸಾಯಣಭಾಷ್ಯಂ

ಯಾ ಯೌ ಯುವಾಂ ಧಾರಯಂತ । ಕೇ । ದೇವಾ ಆದಿತ್ಯಾರ್ಕೋಽಸುರ್ಯಾಯ ಬಲಕರ-ಣಾಯ । ಕೀದೃಶೌ ಯುವಾಂ । ಸುದಕ್ಷಾ ಶೋಭನಬಲೌ ದಕ್ಷಪಿತರಾ ಬಲಸ್ಯ ಪಾಲಕೌ ಸ್ವಾಮಿನೌ ವಾ। ಬಲಪ್ರದಾವಿತ್ಯರ್ಥಃ । ಪ್ರಮಹಸಾ ಪ್ರಕೃಷ್ಟತೇಜಸ್ಕೌ । ತೌ ಸಾಧಯತಮಿತ್ಯುತ್ತರತ್ರಾನ್ವಯಃ ॥

ಪ್ರತಿಪದಾರ್ಥ

(ಎಲೈ ಮಿತ್ರಾವರುಣರೇ) **ಸುದಕ್ಷಾ**—ಉತ್ತಮಬಲವುಳ್ಳವರೂ । **ದಕ್ಷಪಿತರಾ**—ಶಕ್ತಿಸಾಮರ್ಥ್ಯಗಳಿಗೆ ಒಡೆಯರೂ ಎಂದರೆ ಮಾನವರಿಗೆ ಬಲಪ್ರದರೂ । **ಪ್ರಮಹಸಾ**—ಅತ್ಯಂತ ತೇಜಸ್ವಿಗಳೂ ಆದ । **ಯಾ**—ಯಾವ ನಿಮ್ಮನ್ನು । **ದೇವಾಃ**—ದೇವತೆಗಳು । **ಅಸುರ್ಯಾಯ**—ಎಲ್ಲರಿಗೂ ಬಲವನ್ನುಂಟುಮಾಡುವುದಕ್ಕಾಗಿ । **ಧಾರ-ಯಂತ**—ಸ್ಥಾಪಿಸಿದರೋ [ಅಂತಹ ನೀವು ನಮ್ಮ ಯಾಗಾದಿಕರ್ಮಗಳನ್ನು ಫಲಪ್ರದವಾಗುವಂತೆ ಮಾಡಿರಿ]

ಭಾವಾರ್ಥ

ಎಲೈ ಮಿತ್ರಾವರುಣರೇ, ಉತ್ತಮವಾದ ಬಲವುಳ್ಳವರೂ ಶಕ್ತಿಸಾಮರ್ಥ್ಯಗಳಿಗೆ ಒಡೆಯರೂ ಅತ್ಯಂತ ತೇಜಸ್ವಿಗಳೂ ಆದ ಯಾವ ನಿಮ್ಮನ್ನು ಹಿಂದಿನ ದೇವತೆಗಳು ಎಲ್ಲರಿಗೂ ಬಲವನ್ನುಂಟುಮಾಡಲು ಸ್ಥಾಪಿಸಿದರೋ ಅಂತಹ ನೀವು ನಮ್ಮ ಯಾಗಾದಿಕರ್ಮಗಳನ್ನು ಫಲಪ್ರದವಾಗುವಂತೆ ಮಾಡಿರಿ.

English Translation

You whom the gods uphold for their invigoration, both mighty, masters of strength and of diffusive radiance

ವಿಶೇಷವಿಷಯಗಳು

ಈ ಋಕ್ಕಿನಲ್ಲಿ ಕೇಳಿರುವ ವಿಷಯಗಳು ಮುಂದಿನ ಋಕ್ಕಿನ ಆರ್ಧದೊಡನೆ ಸೇರಿ ಅನ್ವಯವಾಗಬೇಕು ಈ ಋಕ್ಕಿನಲ್ಲಿ ಮಿತ್ರಾವರುಣರ ಗುಣವರ್ಣನೆ ಮಾತ್ರವಿರುವುದು ಮುಖ್ಯವಾದ ಕ್ರಿಯಾಪದವು ಮುಂದಿನ ಋಕ್ಕಿನಲ್ಲಿರುವುದು

ಸಂಹಿತಾಪಾಠಃ

ತಾ ನ॑ಃ ಸ್ತಿ॒ಪಾ ತ॑ನೂ॒ಪಾ ವರು॑ಣ ಜರಿತ್ರ॒ಣಾಂ ।
ಮಿತ್ರ॑ ಸಾಧಯತಂ ಧಿ॒ಯಃ ॥ ೩ ॥

ಪದಪಾಠಃ

ತಾ । **ನ॒ಃ** । **ಸ್ತಿ॒ಪಾ** । **ತ॒ನೂ॒ಪಾ** । **ವರು॑ಣ** । **ಜರಿತ್ರ॒ಣಾಂ** ।
ಮಿತ್ರ॑ । **ಸಾಧಯತಂ** । **ಧಿ॒ಯಃ** ॥ ೩ ॥

ಸಾಯಣಭಾಷ್ಯಂ

ತಾ ತೌ ಸ್ತಿಪಾ । ಸ್ತ್ಯಾಯಂತ ಇತಿ ಸ್ತಯೋ ಗೃಹಾಃ । ತಾನ್ಪಾತ ಇತಿ ಸ್ತಿಪೌ । ತನೂಪಾ ತನ್ವಃ ಪಾತಾರೌ ಹೇ ವರುಣ ಹೇ ಮಿತ್ರ ಉಕ್ತಲಕ್ಷಣೌ ಯುವಾಂ ಜರಿತ್ರ॒ಣಾಂ ನೋಽಸ್ಮಾಕಂ ಧಿಯಃ ಕರ್ಮಾಣಿ ಸ್ತುತಿರೂಪಾಣಿ ಸಾಧಯತಂ । ಸಫಲವಂತಿ ಕುರುತಂ ॥

ಪ್ರತಿಪದಾರ್ಥ

ತಾ—ಆ-ತಪ ಎಂದರೆ ಹಿಂದಿನ ಋಕ್ಕಿನಲ್ಲಿ ಹೇಳಿದ ಗುಣಮಿಶ್ರರಾದವರೂ । **ಸ್ತಿಪಾ**—ಗೃಹಗಳಿಗೆ ರಕ್ಷಕರಾದವರೂ । **ತನೂಪಾ**—ನಮ್ಮ ಶರೀರಾದಿಗಳನ್ನು (ಜಾರಾಯ ಕ್ರೀಡಾಗದಂತೆ) ರಕ್ಷಿಸುವವರೂ ಆದ । **ವರುಣ, ಮಿತ್ರ**—ಎಲೈ ಮಿತ್ರಾವರುಣರೇ, ನೀವು । **ಜರಿತ್ರ॒ಣಾಂ**—ನಿಮ್ಮನ್ನು ಸ್ತುತಿಸುತ್ತಿರುವ । **ನಃ**—ನಮ್ಮ । **ಧಿಯಃ**—ಯಜ್ಞಾದಿಕರ್ಮಗಳನ್ನು ಅಥವಾ ಸ್ತೋತ್ರಗಳನ್ನು । **ಸಾಧಯತಂ**—ಫಲಪ್ರದವಾಗುವಂತೆ ಮಾಡಿರಿ

ಭಾಷಾರ್ಥ

ಪೂರ್ವೋಕ್ತಗುಣಮಿಶ್ರರಾದವರೂ, ಗೃಹಗಳಿಗೂ, ಶರೀರಾದಿಗಳಿಗೂ, ರಕ್ಷಕರಾದವರೂ ಆದ ಎಲೈ ವರುಣನೇ, ನೀವು ನಿನ್ನುನ್ನು ಸ್ತುತಿಸುತ್ತಿರುವ ನಮ್ಮ ಸ್ತುತಿರೂಪವಾದ ಈ ಯಜ್ಞಕರ್ಮವನ್ನು ಫಲಪ್ರದವಾಗುವಂತೆ ಮಾಡಿರಿ

English Translation

Protectors of our dwellings, protectors of our persons, Mitra and Varuna, perfect the rites of your adorers

ವಿಶೇಷವಿಷಯಗಳು

ಸ್ತಿಪಾ—**ಸ್ತ್ಯಾಯಂತ ಇತಿ ಸ್ತಯೋ ಗೃಹಾಃ । ತಾನ್ ಪಾತ ಇತಿ ಸ್ತಿಪೌ ।** ವಾಸಿಸಲು ಅನುಕೂಲವಾಗಿರುವಂತೆ ವಿಸ್ತಾರವಾಗಿರುವುದರಿಂದ **ಸ್ತಯಃ** ಎಂದರೆ ಗೃಹಗಳು. ಅವುಗಳಿಗೆ ಪಾಲಕರಾದ್ದರಿಂದ **ಸ್ತಿಪಾ** ಎಂಬ ವಿಶೇಷಣದಿಂದ ಮಿತ್ರಾವರುಣರನ್ನು ವರ್ಣಿಸಿದೆ

ಸಂಹಿತಾಪಾಠಃ

ಯದದ್ಯ ಸೂರ ಉದಿತೇಽನಾಗಾ ಮಿತ್ರೋ ಅರ್ಯಮಾ ।
ಸುವಾತಿ ಸವಿತಾ ಭಗಃ ॥ ೪ ॥

ಪದಪಾಠಃ

ಯತ್ । ಅದ್ಯ । ಸೂರೇ । ಉತ್ । ಇತೇ । ಅನಾಗಾಃ । ಮಿತ್ರಃ । ಅರ್ಯಮಾ ।
ಸುವಾತಿ । ಸವಿತಾ । ಭಗಃ ॥ ೪ ॥

ಸಾಯಣಭಾಷ್ಯಂ

ಯದ್ಧನಮಸ್ಮಾಕಮಪೇಕ್ಷಿತಂ ತದದ್ಯಾಸ್ಮಿನ್ನಾಹ್ನಿ ಸೂರ ಉದಿತೇ ಸತಿ ಪ್ರಾತಃಸವನೇಽನಾಗಾಃ ಪಾಪಹಂತಾ ಮಿತ್ರೋಽರ್ಯಮಾ ಸವಿತಾ ಭಗಶ್ಚೈತೇ ಪ್ರತ್ಯೇಕಂ ಸುವಾತಿ । ಪ್ರೇರಯೇತ್ । ಅಥವಾ । ಅನಾಗಾ ಮಿತ್ರೋಽರ್ಯಮಾ ದಾತಾ ಭವತು । ತದೀಪ್ಸಿತಂ ಧನಂ ಭಗೋ ಭಜನೀಯಃ ಸವಿತಾ ಸುವಾತಿ । ಪ್ರೇರಯತು ॥

ಪ್ರತಿಪದಾರ್ಥ

ಯತ್—ನಾವು ಅಪೇಕ್ಷಿಸುವ ಯಾವ ಧನವಿದೆಯೋ ಅದನ್ನು । **ಅದ್ಯ**—ಈಗ ಎಂದರೆ ಈ ದಿವಸ । **ಸೂರೇ**—ಸೂರ್ಯನು । **ಉದಿತೇ**—ಉದಯಿಸುತ್ತಿರುವಾಗ ಪ್ರಾತಸ್ಸವನಕಾಲದಲ್ಲಿ । **ಅನಾಗಾಃ**—ಪಾಪಗಳನ್ನು ಪರಿಹರಿಸತಕ್ಕ । **ಮಿತ್ರಃ**—ಮಿತ್ರನೂ । **ಆರ್ಯಮಾ**—ಆರ್ಯಮನೂ । **ಸವಿತಾ**—ಸವಿತೃದೇವನೂ । **ಭಗಃ**—ಭಗನೆಂಬ ದೇವನೂ ಸಹ । **ಸುವಾತಿ**—ನಮಗೆ ಲಭಿಸುವಂತೆ ಪ್ರೇರಿಸಲಿ ಎಂದರೆ ಕೊಡಲಿ.

ಭಾವಾರ್ಥ

ನಾವು ಅಪೇಕ್ಷಿಸುವ ಧನವನ್ನು ಈ ದಿವಸ ಸೂರ್ಯನು ಉದಯಿಸಿರುವಾದ ಪ್ರಾತಃಸವನಕಾಲದಲ್ಲಿ ಪಾಪ ಪರಿಹಾರಕರಾದ, ಮಿತ್ರ, ಆರ್ಯಮಾ, ಸವಿತೃ, ಭಗ ಎಂಬ ದೇವತೆಗಳು ನಮಗೆ ಲಭಿಸುವಂತೆ ಪ್ರೇರಿಸಲಿ ಎಂದರೆ ನಾವು ಅಪೇಕ್ಷಿಸುವ ಧನವನ್ನು ನಮಗೆ ಆ ದೇವತೆಗಳು ಕೊಡಲಿ.

English Translation

May Mitra, the distroyer of sin, Aryaman, Savitri, Bhaga, bestow (upon us), to-day at sunrice (what we pray for).

ಸಂಹಿತಾಪಾಠಃ

ಸುಪ್ರಾವೀರಸ್ತು ಸ ಕ್ಷಯೋ᳡ ಪ್ರ ನು ಯಾವನ್ನು ದಾನವಃ ।

ಯೋ ನೋ ಅಂಹೋ᳡ತಿಪಿಪ್ರತಿ ॥ ೫ ॥

ಪದಪಾಠಃ

ಸುಪ್ರಾವೀರಿತಿ ಸುಪ್ರಾವೀಃ । ಅಸ್ತು । ಸಃ । ಕ್ಷಯೋ᳡ । ಪ್ರ । ನು । ಯಾವನ್ । ನು । ದಾನವಃ ।

ಯೋ । ನಃ । ಅಂಹಃ । ಅತಿ । ಪಿಪ್ರತಿ ॥ ೫ ॥

ಸಾಯಣಭಾಷ್ಯಂ

ಸಃ ಕ್ಷಯೋ᳡ ಸ ನಿವಾಸಃ ಸುಪ್ರಾವೀರಸ್ತು । ಸುಷು ಪ್ರಕರ್ಷೇಣ ರಕ್ಷಿತಾಸ್ತು । ಪ್ರಶಬ್ದ ಆದರಾರ್ಥಃ । ಪ್ರಕರ್ಷೇಣೈವ ನು ಕ್ಷಿಪ್ರಂ ಭವಿಷ್ಯತೀತ್ಯೇವ । ಈದೃಶೀತಿ ಉಚ್ಯತೇ । ಹೇ ಸುದಾನವಃ ಸುದಾನಾಃ ಯುಷ್ಮಾಕಂ ಯಾವನ್ ಯಾವತಿ ಗಮನೇ ಸತಿ । ಕೇನ ಕಾರಣೇನ ಗಮನೇ । ಯೋ ಯೋಯವಾಗಶ್ಚ ನೋ᳡ಽಸ್ಮಾಕಮಂಹಃ ಪಾಪಮತಿಪಿಪ್ರತಿ ಅತಿಪೂರಯತಿ ಸಿಧ್ಯತಿ ತ್ವದ್ಗಮನಂ ಇತಿ ॥

ಪದ ಪದ

ಯೋ—ಯಾವ ನೀವು (ಒಂದು) । ನಃ—ನಮ್ಮ । ಅಂಹಃ—ಪಾಪಗಳನ್ನ । ಅತಿಪಿಪ್ರತಿ—ಪರಿಹರಿಸಿ ನಮ್ಮನ್ನು ಉತ್ತೀರ್ಣರನ್ನಾಗಿ ಮಾಡುವಿರೋ ಅಂತಹ । ಸುದಾನವಃ—ಇಷ್ಟಾರ್ಥಗಳನ್ನು ಅತಿಶಯವಾಗಿ ಕೊಡುವ ಎಲೈ ಮಿತ್ರಾವರುಣಾರ್ಯಮರೇ (ಸಿವ್ಯ) । ಯಾವನ್—ಗಮನಾನಂತರ । ಸಃ ಕ್ಷಯೋ᳡—ಪ್ರಸಿದ್ಧವಾದ ನಮ್ಮ ನಿವಾಸಸ್ಥಾನವು । ನು—ಕ್ಷಿಪ್ರದಲ್ಲಿ । ಸುಪ್ರಾವೀಃ ಅಸ್ತು—ಉತ್ತಮರಕ್ಷಣೆಯುಳ್ಳದ್ದಾಗಿರಲಿ

ಭಾವಾರ್ಥ

ಎಲೈ ಮಿತ್ರಾವರುಣಾರ್ಯಮರೇ, ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ದಾಟಿಸುವ ನೀವು ನಮ್ಮ ಲ್ಲಿಗೆ ಒಂದು ಹೋದನಂತರ ನಾವು ವಾಸಮಾಡುವ ಗೃಹವು ಯಾವ ಭಯವೂ ಇಲ್ಲದ ಸುರಕ್ಷಿತವಾಗಿರುವುದು

English Translation

May this our dwelling be well protected, liberal deities, on your departure, you who purify us from sin

ಸಂಹಿತಾಪಾಠಃ

ಉತ ಸ್ವರಾಜೋ ಅದಿತಿರದಬ್ಧಸ್ಯ ವ್ರತಸ್ಯ ಯೇ ।

ಮಹೋ ರಾಜಾನ ಈಶತೇ ॥ ೬ ॥

ಪದಪಾಠಃ

ಉತ । ಸ್ವ॒ರಾಜ॑ಃ । ಅದಿ॑ತಿಃ । ಆದ॑ಬ್ಧ॒ಸ್ಯ । ವ್ರ॒ತಸ್ಯ॑ । ಯೇ ।

ಮ॒ಹಃ । ರಾ॒ಜಾ॑ನಃ । ಈ॒ಶ॒ತೇ॒ ॥ ೬ ॥

ಸಾಯಣಭಾಷ್ಯಂ

ಉತಾಪಿ ಚ ಯೇ ಮಿತ್ರಾದಯೆಸ್ತ್ರಯಃ ಸ್ವರಾಜಃ ಸರ್ವಸ್ಯ ಸ್ವಾಮಿನೋ॒ಽದಿತಿಸ್ತೇಷಾಂ ಮಾತಾ ಚ ಸಂತಿ ಅದಬ್ಧಸ್ಯಾಹಿಂಸಿತಸ್ಯ ಮಹೋ ಮಹತೋ ವ್ರತಸ್ಯಾಸ್ಯ ಕರ್ಮಣೋ ರಾಜಾನಃ ಸ್ವಾಮಿನಃ ತ ಈಶತೇ । ಸಮರ್ಥಾ ಭವಂತಿ । ಅಭಿಮತಂ ದಾತುಮಿತಿ ಶೇಷಃ । ಅಥವೈವಂ ಯೋಜ್ಯಂ । ಯೇ ಮಿತ್ರಾದಯೋ॒ಽದಿತಿಶ್ಚಾದಬ್ಧಸ್ಯ ವ್ರತಸ್ಯ ಸ್ವರಾಜ ಈಶ್ವರಾಃ ತೇ ಮಹೋ ಮಹತೋ॒ಽಸ್ಮದಭಿಮತಧನಸ್ಯ ರಾಜಾನಃ ಸ್ವಾಮಿನಃ ಸಂತ ಈಶತೇ॒ಽಸ್ಮಭ್ಯಂ ತದ್ದಾತುಂ ॥

ಪ್ರತಿಪದಾರ್ಥ

ಉತ—ಮತ್ತು । **ಯೇ**—ಯಾವ ಮಿತ್ರಾವರುಣಾರ್ಯಮರು । **ಸ್ವರಾಜಃ**—ಸರ್ವರಿಗೂ ಸ್ವಾಮಿಗಳಾಗಿರುವರೋ ಅವರೂ । **ಅದಿತಿಃ**—ಅವರ ಮಾತೆಯಾದ ಅದಿತಿದೇವಿಯೂ ಸಹ । **ಅದಬ್ಧಸ್ಯ**—ಅಹಿಂಸಿತ (ನಿರ್ವಿಘ್ನ) ವಾದುದೂ । **ಮಹಃ**—ಮಹತ್ತಾದುದೂ ಆದ । **ವ್ರತಸ್ಯ**—ಈ ಯಜ್ಞಕರ್ಮಕ್ಕೆ । **ರಾಜಾನಃ**—ಪ್ರಭುಗಳಾಗಿ । **ಈಶತೇ**—ನಮ್ಮ ಅಭಿಮತವನ್ನು ಕೊಡುವವರಾಗಿದ್ದಾರೆ.

ಭಾವಾರ್ಥ

ಸರ್ವರಿಗೂ ಪ್ರಭುಗಳಾದ ಮಿತ್ರಾವರುಣಾರ್ಯಮರೂ, ಅವರ ಮಾತೆಯಾದ ಅದಿತಿದೇವಿಯೂ ಸಹ ನಿರ್ವಿಘ್ನವಾಗಿ ನೆರವೇರುವುದೂ ಮಹತ್ತಾದುದೂ ಆದ ಈ ನಮ್ಮ ಯಜ್ಞಕ್ಕೆ ಒಡೆಯರಾಗಿ ನಮ್ಮ ಇಷ್ಟಾರ್ಥಗಳನ್ನು ಕೊಡುತ್ತಾರೆ

English Translation

And who are sovereign over all, and, with Aditi, preside over this unobstructed and great ceremony

ಸಂಹಿತಾಪಾಠಃ

ಪ್ರತಿ॑ ವಾಂ ಸೂರ॒ ಉದಿ॑ತೇ ಮಿ॒ತ್ರಂ ಗೃ॑ಣೀಷ॒ ವರು॑ಣಂ ।

ಅ॒ರ್ಯ॒ಮಣಂ॑ ರಿ॒ಶಾದ॑ಸಂ ॥ ೭ ॥

ಪದಪಾಠಃ

ಪ್ರತಿ॑ । ವಾ॒ಂ । ಸೂರೇ॑ । ಉತ್ । ಇ॒ತೇ॒ । ಮಿ॒ತ್ರಂ । ಗೃ॒ಣೀ॒ಷೇ॒ । ವರು॑ಣಂ ।

ಅ॒ರ್ಯ॒ಮಣಂ॑ । ರಿ॒ಶಾದ॑ಸಂ ॥ ೭ ॥

ಸಾಯಣಭಾಷ್ಯಂ

ಪ್ರತಿ ವಾಮಿತ್ಯೇಷ ತೃಚಶ್ಚತುರ್ವಿಂಶಿಕೇಽಹನಿ ಪ್ರಾತಃಸವನೇ ಮೈತ್ರಾವರುಣಸ್ಯ ಪರ್ಯಾಸಾರ್ಥಃ । ಸೂತ್ರಿತಂ ಚ । ಪ್ರತಿ ವಾಂ ಸೂರ ಉದಿತೇ ವ್ಯಂತರಿಕ್ಷಮತಿರತ್ । ಆ. ೭ । ೨ । ಇತಿ ॥

ಹೇ ಮಿತ್ರಾವರುಣೌ ಮಿತ್ರಂ ತ್ವಾಂ ವರುಣಂ ಚ ಯುವಾಂ ರಿಶಾದಸಂ ಶತ್ರೂಣಾಮತ್ತಾರಮರ್ಯಮಣಂ ಚ ಪ್ರತಿ ಪ್ರತ್ಯೇಕಂ ಗೃಣೀಷೇ । ಸ್ತುನೇ । ಕದೇತಿ ಉಚ್ಯತೇ । ಸೂರೇ ಸೂರ್ಯೇ ದೇವ ಉದಿತೇ ಸತಿ । ಪ್ರಾತರಿತ್ಯರ್ಥಃ ॥

ಪ್ರತಿಪದಾರ್ಥ

(ಎಲೈ ಮಿತ್ರಾವರುಣರೇ) **ಸೂರೇ**—ಸೂರ್ಯನು । **ಉದಿತೇ**—ಉದಯಿಸುವಾಗ ಎಂದರೆ ಪ್ರಾತಃಕಾಲದಲ್ಲಿ । **ಮಿತ್ರಂ**—ಮಿತ್ರನನ್ನೂ । **ವರುಣಂ**—ವರುಣನನ್ನೂ । **ವಾಂ**—ನಿಮ್ಮಿಬ್ಬರನ್ನೂ । **ರಿಶಾದಸಂ**—ಶತ್ರುನಾಶಕನಾದ । **ಅರ್ಯಮಣಂ**—ಅರ್ಯಮದೇವನನ್ನೂ । **ಪ್ರತಿ**—ಉದ್ದೇಶಿಸಿ । **ಗೃಣೀಷೇ**—ಸ್ತುತಿಸುತ್ತೇನೆ.

ಭಾವಾರ್ಥ

ಎಲೈ ಮಿತ್ರಾವರುಣರೇ, ಸೂರ್ಯನು ಉದಯಿಸುತ್ತಿರುವಾಗ ಈದಿನ ಪ್ರಾತಃಕಾಲದಲ್ಲಿ ಮಿತ್ರ, ವರುಣ, ಶತ್ರುಹಿಂಸಕನಾದ ಅರ್ಯಮ ಎಂಬ ನಿಮ್ಮನ್ನು ದ್ವೇಶಿಸಿ ಪ್ರತ್ಯೇಕವಾಗಿ ಸ್ತೋತ್ರಮಾಡುತ್ತೇನೆ

English Translation

I glorify you, Mitra and Varuna, and Aryaman, the consumer of enemies when the sun has risen.

ವಿಶೇಷವಿಷಯಗಳು

ಯಾಗದ ಚಾತುರ್ವಿಂಶಿಕನೆಂಬ ದಿನದ ಪ್ರಾತಃಸವನಕಾಲದಲ್ಲಿ **ಪ್ರತಿ ವಾಂ** ಎಂದು ಮೊದಲಾಗುವ **ಈ** ತೃಚವನ್ನು (ಮೂರು ಋಕ್ಕುಗಳನ್ನು) ಮೈತ್ರಾವರುಣನೆಂಬ ಋತ್ವಿಜನು ಪರ್ಯಾಸಾರ್ಥವಾಗಿ ಪರಿಭಕ್ಷಣಮಾಡುವುದು **ಆಶ್ವಲಾಯನಶ್ರೌತಸೂತ್ರದ ಪ್ರತಿ ವಾಂ ಸೂರ ಉದಿತೇ ವ್ಯಂತರಿಕ್ಷಮತಿರತ್** ಎಂಬ ಸೂತ್ರದಿಂದ (ಆ ೭-೨) ವಿವೃತವಾಗಿರುವುದು

ಸಂಹಿತಾಪಾಠಃ

ರಾಯಾ ಹಿರಣ್ಯಯಾ ಮತಿರಿಯಮವೃಕಾಯ ಶವಸೇ ।
ಇಯಂ ವಿಪ್ರಾ ಮೇಧಸಾತಯೇ ॥ ೯ ॥

ಪದಪಾಠಃ

ರಾಯಾ । ಹಿರಣ್ಯಯಾ । ಮತಿಃ । ಇಯಂ । ಅವೃಕಾಯ । ಶವಸೇ ।
ಇಯಂ । ವಿಪ್ರಾ । ಮೇಧಸಾತಯೇ ॥ ೯ ॥

ಸಾಯಣಭಾಷ್ಯಂ

ಹಿರಣ್ಯಯೋ ಹಿತಕರಮಣೀಯೇನ ರಾಯೋ ಧನೇನ ಸಹಿತಾಯೋವ್ಯಕಾಯಾಹಿಂಸ್ಯಾಯೈ ಶವಸೇಽಸ್ಮಾಕಂ ಬಲಾಯೇೀಯಮಿದಾನೀಂ ಕ್ರಿಯಮಾಣಾ ಮತಿಃ ಸ್ತುತಿರ್ಭವತ್ವಿತಿ ಶೇಷಃ ॥ ಹಿರಣ್ಯಯೇೀತ್ಯತ್ರ ಸುಪಾಂ ಸುಲುಗಿತಿ ತೃತೀಯೈಕವಚನಸ್ಯ ಯಾಜಾದೇಶಃ ॥ ಕಿಂಚ ಹೇ ವಿಪ್ರಾಃ ಪ್ರಾಜ್ಞಾಃ ಇಯಂ ಮೇ ಚ ಸ್ತುತಿರ್ಮೇಧಸಾತಯೇ ಯಜ್ಞಲಾಭಾಯ ಚ ಭವತು ॥

ಪ್ರತಿಪದಾರ್ಥ

ಹಿರಣ್ಯಯೋ—ಹಿತಕರವೂ ರಮಣೀಯವೂ ಆದ । **ರಾಯೋ**—ಧನದಿಂದ । **ಅವ್ಯಕಾಯೈ**—ಹಿಂಸಾರಹಿತವಾದ । **ಶವಸೇ**—ನಮ್ಮ ಬಲಾಭಿವೃದ್ಧಿಗಾಗಿ । **ಇಯಂ**—ಈಗ ನಾವು ಸರಿಸುತ್ತಿರುವ । **ಮತಿಃ**—ಸ್ತುತಿಯು ಸಾಧನವಾಗಲಿ । **ವಿಪ್ರಾಃ**—ನೆೀಧಾವಿಗಳಾದ ಎಲೈ ದೇವತೆಗಳೇ । **ಇಯಂ**—ಈ ನನ್ನ ಸ್ತುತಿಯು । **ಮೇಧಸಾತಯೇ**—ಯಜ್ಞಲಾಭಾರ್ಥವಾಗಿಯೂ ಆಗಲಿ

ಭಾವಾರ್ಥ

ಎಲೈ ಮೇಧಾವಿಗಳಾದ ದೇವತೆಗಳೇ, ಈಗ ನಾವು ಹಿತ ಪ್ರಶ್ನೆಯೇನಿಸಿ ಪರಿಪೂರ್ಣವಾದ ಸ್ತೋತ್ರವನ್ನು ನಮಗೆ ಧನಸಮೃದ್ಧಿಗೂ, ಬಲಕ್ಕೂ, ಯಜ್ಞಲಾಭಾರ್ಥವಾಗಿಯೂ ಸಾಧನವಾಗಿರಲಿ.

English Translation

May this praise (be effective) for unimpeached strength, along with golden treasure may it (be effective), sages, for the fulfilment of (the objects of) the sacrifice

ಸಂಹಿತಾಪಾಠಃ

ತೇ ಸ್ಯಾಮ ದೇವ ವರುಣ ತೇ ಮಿತ್ರ ಸೂರಿಭಿಃ ಸಹ ।
ಇಷಂ ಸ್ವಶ್ಚ ಧೀಮಹಿ ॥ ೯ ॥

ಪದಪಾಠಃ

ತೇ । ಸ್ಯಾಮ । ದೇವ । ವರುಣ । ತೇ । ಮಿತ್ರ । ಸೂರಿಭಿಃ । ಸಹ ।
ಇಷಂ । ಸ್ವರಿತಿ ಸ್ವಃ । ಚ । ಧೀಮಹಿ ॥ ೯ ॥

ಸಾಯಣಭಾಷ್ಯಂ

ಹೇ ದೇವ ವರುಣ ತೇ ವಯಂ ತವ ಸ್ತೋತಾರಃ ಸ್ಯಾಮ । ಸಮೃದ್ಧಾ ಭವೇಮ । ನ ಕೇವಲಂ ವಯಮೇವ ಯಜಮಾನಾಃ ಕಿಂತು ಸೂರಿಭಿಃ ಸ್ತೋತೃಭಿರ್ಋತ್ವಿಗ್ಭಿಃ ಸಹ । ತಥಾ ಹೇ ಮಿತ್ರ ದೇವ ತೇ ವಯಂ ಸೂರಿಭಿಃ ಸಹ ಸ್ಯಾಮ । ಭವೇಮ । ಕಿಂಚೇಷಮನ್ನಂ ಸ್ವರುದಕಂ ಚ ಧೀಮಹಿ । ಧಾರಯಾಮಹೇ ॥

ಪ್ರತಿಪದಾರ್ಥ

ದೇವ—ಪ್ರಕಾಶಮಾನನಾದ । **ವರುಣ**—ಎಲೈ ವರುಣನೇ, । **ಮಿತ್ರ**—ಎಲೈ ಮಿತ್ರನೇ, । **ತೇ**—ನಿನ್ನನ್ನು ಸ್ತುತಿಸುತ್ತಿರುವ ನಾವು । **ಸೂರಿಭಿಃ**—ಸ್ತೋತ್ರಮಾಡುವ ಋತ್ವಿಗ್ಜನರಿಂದ । **ಸಹ**—ಸಹಿತರಾಗಿ । **ಸ್ಯಾಮ**—ಸಮೃದ್ಧರಾಗಿರುವಂತಾಗಲಿ । **ತೇ**—ನಾವು । **ಇಷಂ**—ಅನ್ನವನ್ನು । **ಸ್ವಃ**—ಉದಕವನ್ನು । **ಧೀಮಹಿ**—ಯಾಚಿಸಿ ಪ್ರಾರ್ಥಿಸುತ್ತೇವೆ

ಭಾವಾರ್ಥ

ಪ್ರಕಾಶಮಾನನಾದ ಎಲೈ ವರುಣನೇ, ಎಲೈ ಮಿತ್ರನೇ, ಸ್ತೋತ್ರಮಾಡುವ ಋತ್ವಿಗ್ಜನರಿಂದ ಸಹಿತರಾಗಿ ಸಮೃದ್ಧರಾಗಿರುವಂತಾಗಲಿ ನಿಮ್ಮನ್ನು ಸ್ತುತಿಸುತ್ತಿರುವ ನಾವು ಅನ್ನಾದ್ಯಾಹಾರಗಳನ್ನೂ, ವೃಷ್ಟಿರೂಪವಾದ ಉದಕವನ್ನೂ ಕೊಡಬೇಕೆಂದು ನಿಮ್ಮನ್ನು ಯಾಚಿಸಿ ಪ್ರಾರ್ಥಿಸುತ್ತೇವೆ

English Translation

May we be yours, divine Varuna may we, along with pious worshippers, be, Mitra, yours may we obtain food and water

ಸಂಹಿತಾಪಾಠಃ

ಬಹವ॒ಃ ಸೂರ॑ಚಕ್ಷಸೋ॒ಽಗ್ನಿಜಿ॒ಹ್ವಾ ಋ॑ತಾ॒ವೃಧ॑ಃ ।

ತ್ರೀಣಿ॒ ಯೇ ಯೇಮು॒ರ್ವಿದಥಾ॑ನಿ ಧೀ॒ತಿಭಿ॒ರ್ವಿಶ್ವಾ॑ನಿ ಪರಿ॑ಭೂತಿಭಿಃ ॥

ಪದಪಾಠಃ

ಬಹವ॑ಃ । ಸೂರ॑ಽಚಕ್ಷಸಃ । ಅ॒ಗ್ನಿ॒ಽಜಿ॒ಹ್ವಾಃ । ಋ॒ತ॒ಽವೃ॒ಧಃ ।

ತ್ರೀಣಿ॑ । ಯೇ । ಯೇಮು॑ಃ । ವಿದಥಾ॑ನಿ । ಧೀ॒ತಿಽಭಿಃ । ವಿಶ್ವಾ॑ನಿ । ಪರಿ॑ಭೂತಿಽಭಿಃ ॥ ೧೦ ॥

ಸಾಯಣಭಾಷ್ಯಂ

ಆಶ್ವಿನಶಸ್ತ್ರೇ ಬಹವಃ ಸೂರಚಕ್ಷಸ ಇತಿ ಪ್ರಗಾಥಃ । ಸೂತ್ರಿತಂ ಚ । ಬಹವಃ ಸೂರಚಕ್ಷಸ ಇತಿ ಪ್ರಗಾಥಾಃ । ಆ ೬-೫ । ಇತಿ ॥ ದಶರಾತ್ರೇ ಪಂಚಮೇಽಹನಿ ಪ್ರಉಗಶಸ್ತ್ರೇಽಸ್ಯಯಂ ಪ್ರಗಾಥಃ । ಸೂತ್ರಿತಂ ಚ । ಬಹವಃ ಸೂರಚಕ್ಷಸ ಇಮಾ ಉ ವಾಂ ದಿವಿಷ್ಟಯಃ । ಆ ೭- ೧೨ । ಇತಿ ॥

ಬಹವೋ ಮಹಾಂತಃ ಸೂರಚಕ್ಷಸಃ ಸೂರ್ಯಸದೃಶಪ್ರಕಾಶಾಃ । ಸೂರಃ ಪ್ರಕಾಶಕೋ ಯೇಷಾಮಿತಿ ವಾ । ಅಗ್ನಿಜಿಹ್ವಾಃ । ಅಗ್ನಿರೇವ ಜಿಹ್ವಾದನಸಾಧನೋ ಯೇಷಾಂ ತಾದೃಶಾಃ । ಋತಾವೃಧೋ ಯಜ್ಞಸ್ಯ ವರ್ಧಯಿತಾರೋ ಮಿತ್ರಾದಯಃ । ಕಿಂಚ ಯೇ ತ್ರೀಣಿ ವಿಶ್ವಾನಿ ವ್ಯಾಪ್ತಾನಿ ವಿದಥಾನಿ ಕ್ಷೇತ್ರಾದಿಸ್ಥಾನಾನಿ ಕ್ಷೇತ್ರಾದೀನಿ ಪರಿಭೂತಿಭಿಃ ಪರಿಭಾವುಕೈರ್ಧೀತಿಭಿಃ ಕರ್ಮಭಿರ್ಯೇಮುಃ ಪ್ರಯಚ್ಛಂತಿ ತೇ

ಕ್ಷತ್ರಮಾಶತೇತ್ಯುತ್ತರತ್ರ ಸಂಬಂಧನೀಯಂ । ಅಥವಾತ್ರೈವ ಯೇ ತ್ರೀಣಿ ಸ್ಥಾನಾನಿ ಪ್ರಯಚ್ಛಂತಿ ತೇ ಬಹುತ್ವಾದಿಗುಣೋಪೇತಾ ಆಗಚ್ಛಂತ್ವಿತ್ಯಧ್ಯಾಹಾರ್ಯಂ ॥

ಪ್ರತಿಪದಾರ್ಥ

ಬಹವಃ — ಮಹತ್ಸ್ವರೂಪವುಳ್ಳವರೂ । **ಸೂರಚಕ್ಷಸಃ** — ಸೂರ್ಯನಿಗೆ ಸಮಾನವಾದ ಕಾಂತಿಯಿಂದ ಬೆಳಗುವವರೂ ಅಥವಾ ಸೂರ್ಯನಿಂದ ಪ್ರಕಾಶಿತರಾದವರೂ । **ಅಗ್ನಿಜಿಹ್ವಾಃ** — ಯಜ್ಞಾದಿಗಳಲ್ಲಿ ಹವಿರಾದಿಗಳನ್ನು ಸ್ವೀಕರಿಸಲು ಅಗ್ನಿಯನ್ನೇ ತಮಗೆ ಜಿಹ್ವೆ ಎಂದರೆ ಸಾಧನವಾಗಿ ಉಳ್ಳವರೂ । **ಋತಾವೃಧಃ**—ಯಜ್ಞವನ್ನು ನಿರ್ವಿಘ್ನವಾಗಿ ನೆರವೇರುವಂತೆ ವೃದ್ಧಿಪಡಿಸುವವರೂ ಆದ । **ಯೇ**—ಯಾವ ಮಿತ್ರಾವರುಣಾದಿಗಳಿರುವರೋ ಅವರು । **ವಿಶ್ವಾನಿ**—ಸಮಸ್ತವನ್ನು ವ್ಯಾಪಿಸಿರುವ । **ತ್ರೀಣಿ ವಿದಥಾನಿ**—ಕ್ಷಿತ್ಯಾದಿ ಮೂರು ಸ್ಥಾನಗಳನ್ನು । **ಪರಿಭೂತಿಭಿಃ**—ನಿನ್ನ ಪ್ರಭಾವದಿಂದ ಕೂಡಿದ । **ಧೀತಿಭಿಃ**—ಕರ್ಮಗಳಿಂದ । **ಯೇಮುಃ**—ಕಾಪಾಡುವರೋ ಆ ಮಿತ್ರಾವರುಣಾದಿಗಳು ಇಲ್ಲಿಗೆ ಬರಲಿ

ಭಾವಾರ್ಥ

ಮಹಸ್ವೀಯರೂ ಸೂರ್ಯಸದೃಶವಾದ ಕಾಂತಿಯಿಂದ ಬೆಳಗುವವರೂ ಅಥವಾ ಸೂರ್ಯನಿಗೆ ಕಾಂತಿಯನ್ನುಂಟುಮಾಡಿ ಬೆಳಗುವಂತೆ ಮಾಡುವವರೂ ಯಜ್ಞಾದಿಗಳಲ್ಲಿ ಅಗ್ನಿಯ ಜಿಹ್ವೆಯಿಂದ ಗ್ರಹಿಸಲ್ಪಡಲಿಕ್ಕೇ ಹವಿರಾದಿಗಳನ್ನು ಸ್ವೀಕರಿಸುವವರೂ, ಯಜ್ಞವರ್ಧಕರೂ ತಮ್ಮ ಪ್ರಭಾವದಿಂದ ಎಲ್ಲ ಕರ್ಮಗಳಿಂದ ಸಮಸ್ತವನ್ನೂ ವ್ಯಾಪಿಸಿರುವ ಕ್ಷಿತ್ಯಾದಿ ಮೂರು ಸ್ಥಾನಗಳನ್ನು ಕೊಡುವವರೂ ಆದ ಯಾವ ಮಿತ್ರಾವರುಣಾದಿರೂಪವಿರುವರೋ ಅವರು ಈ ಯಜ್ಞಭೂಮಿಗೆ ದಯಮಾಡಿಸಲಿ

English Translation

Manifold, radiant as the sun, Agni-tongued augmenters of sacrifice, you who have limited the three universal sacrifices with comprehensive rites

ವಿಶೇಷವಿಷಯಗಳು

ಆಪ್ಲಿನಶಸ್ತ್ರಮಂತ್ರಗಳಲ್ಲಿ **ಬಹವಃ ಸೂರಚಕ್ಷಸಃ** ಎಂಬ ಈ ಋಕ್ಕನ್ನು ಪ್ರಗಾಥಮಂತ್ರವನ್ನಾಗಿ ಸ್ವೀಕರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಬಹವಃ ಸೂರಚಕ್ಷಸಃ** ಇತಿ ಸ್ತೃಗಾಥಃ ಎಂಬ ಸೂತ್ರದಿಂದ (ಅ ೬.೫) ವಿವೃತವಾಗಿರುವುದು ಮತ್ತು ದರಶಾಸ್ತ್ರವೆಂಬ ಯಾಗದ ಐದನೆಯ ದಿನ ಸ್ತೋಮಶಸ್ತ್ರಮಂತ್ರಗಳನ್ನು ಸ್ವೀಕರಿಸಿ ಮಾಡುವಾಗಲೂ ಈ ಋಕ್ಕನ್ನು ಸ್ತೃಗಾಥಮಂತ್ರವನ್ನಾಗಿ ಪರಿಗಣಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಬಹವಃ ಸೂರಚಕ್ಷಸ ಇಮಾ ಉ ವಾಂ ದಿವಿಷ್ಟಯಃ** ಎಂಬ ಸೂತ್ರದಿಂದ (ಅ ೬.೧೬) ವಿವೃತವಾಗಿರುವುದು.

ಸಂಹಿತಾಪಾಠಃ

ವಿ ಯೇ ದಧುಃ ಶರದಂ ಮಾಸಮಾದಹರ್ಯಜ್ಞಮುಕ್ತುಂ ಚಾದೃಚಂ ।
ಅನಾಪ್ಯಂ ವರುಣೋ ಮಿತ್ರೋ ಅರ್ಯಮಾ ಕ್ಷತ್ರಂ ರಾಜಾನ ಆಶತ ॥೧೧॥

ಪದಪಾಠಃ

ವಿ । ಯೇ । ದಧುಃ । ಶರದಂ । ಮಾಸಂ । ಅತ್ । ಅಹಃ । ಯಜ್ಞಂ । ಅಕ್ತುಂ । ಚ । ಅತ್ । ಋಚಂ ।
ಅನಾಪ್ಯಂ । ವರುಣಃ । ಮಿತ್ರಃ । ಅರ್ಯಮಾ । ಕ್ಷತ್ರಂ । ರಾಜಾನಃ । ಆಶತೇ ॥ ೧೧ ॥

ಸಾಯಣಭಾಷ್ಯಂ

ಯೇ ಮಿತ್ರಾದಿಯೇಃ ಶರದಂ ಸಂವತ್ಸರಂ ವಿ ದಧುಃ ಅಕುರ್ವನ್ ಅದನಂತರಮೇವ ಮಾಸಮು-
ನಂತರಮಹರನಂತರಮಹಃಸಾಧ್ಯಂ ಯಜ್ಞಂ ಅದನಂತರಮಕ್ತುಂ ರಾತ್ರಿಂ ಚ ಋಚಂ ಮಂತ್ರಾಂಶ್ಚ ।
ಯದ್ವಾ । ಸರ್ವತ್ರಾದಿತ್ಯಯಮಪೀತ್ಯರ್ಥೇ ವರ್ತತೇ । ತಥಾ ಸತಿ ಕ್ರಮೋಽವಿವಕ್ಷಿತಃ । ತೇ ವರುಣೋ
ಮಿತ್ರೋಽರ್ಯಮಾ ಚ ತ್ರಯೋಽನಾಪ್ಯಮನ್ಯೈರಪ್ರಾಪ್ತಂ ಕ್ಷತ್ರಂ ಬಲಂ ರಾಜಾನೋ ರಾಜಮಾನಾ
ಆಶತೇ । ವ್ಯಾಪ್ನುವಂತಃ ॥

ಪ್ರತಿಪದಾರ್ಥ

ಯೇ—ಯಾವ ಮಿತ್ರಾದಿದೇವತೆಗಳು । ಶರದಂ—ಸಂವತ್ಸರವೆಂಬ ಕಾಲಪರಿಮಿತಿಯನ್ನೂ । ಅತ್—
ಮತ್ತು (ಅಥವಾ ಅನಂತರ) । ಮಾಸಂ—ಮಾಸವನ್ನೂ (ತಿಂಗಳನ್ನೂ) ಎಂದರೆ ಮಾಸಪರಿಮಿತಿಯನ್ನೂ । ಅಹಃ—
ದಿನವನ್ನೂ । ಯಜ್ಞಂ—ಯಜ್ಞಕರ್ಮವನ್ನೂ । ಅಕ್ತುಂ—ರಾತ್ರಿಕಾಲವನ್ನೂ । ಋಚಂ—ಮಂತ್ರಗಳನ್ನೂ ।
ವಿದಧುಃ—ನಿರ್ಮಿಸಿದರೋ ಎಂದರೆ ಸೃಷ್ಟಿಸಿದರೋ ಅಂತಹ । ರಾಜಾನಃ—ಪ್ರಕಾಶಮಾನರಾದ ಅಥವಾ ಸರ್ವ
ರಿಗೂ ಪ್ರಭುಗಳಾದ । ವರುಣಃ—ವರುಣನೂ । ಮಿತ್ರಃ—ಮಿತ್ರನೂ । ಅರ್ಯಮಾ—ಆರ್ಯಮನೆಂಬ ದೇವನೂ
ಈ ಮೂವರೂ । ಅನಾಪ್ಯಂ—ಇತರರಿಂದ ಹೊಂದಲು ಸಾಧ್ಯವಿಲ್ಲದಿರುವ । ಕ್ಷತ್ರಂ—ಶಕ್ತಿಸಾಮರ್ಥ್ಯಗಳನ್ನು ।
ಆಶತೆ—ಪಡೆದಿದ್ದಾರೆ.

ಭಾವಾರ್ಥ

ಈ ಮಿತ್ರಾದಿದೇವತೆಗಳು ಸಂವತ್ಸರ, ಮಾಸ, ಹಗಲು, ರಾತ್ರಿ ಎಂಬ ಕಾಲಪರಿಮಿತಿಗಳನ್ನು ಯಜ್ಞಕರ್ಮ,
ಅವುಗಳಿಗೆ ಅನಶ್ಯಕವಾದ ಮಂತ್ರಗಳು ಇವುಗಳನ್ನೆಲ್ಲಾ ನಿರ್ಮಿಸಿದಾರೆ ಪ್ರಕಾಶಮಾನರಾದ ಮಿತ್ರ, ವರುಣ,
ಆರ್ಯಮಾ ಎಂಬ ಈ ಮೂರು ಮಂದಿ ದೇವತೆಗಳೂ ಇತರರಿಂದ ಹೊಂದಲು ಸಾಧ್ಯವಿಲ್ಲದ ಶಕ್ತಿಸಾಮರ್ಥ್ಯಗಳನ್ನು
ಪಡೆದಿದ್ದಾರೆ.

English Translation

Who have established the year, and then the month and the day, the sacrifice, the night, and the holy text, they the royal deities, Varuna, Mitra Aryaman, enjoy unrivalled might.

ಸಂಹಿತಾಪಾಠಃ

ತದ್ವೋ ಅದ್ಯ ಮನಾಮಹೇ ಸೂಕ್ತೈಃ ಸೂರ ಉದಿತೇ ।
ಯದೋಹತೇ ವರುಣೋ ಮಿತ್ರ ಅರ್ಯಮಾ ಯೂಯಮ್ಮೃತಸ್ಯ ರಥ್ಯಃ ॥

ಪದಪಾಠಃ

ತತ್ । ವಃ । ಅದ್ಯ । ಮನಾಮಹೇ । ಸುಽಉಕ್ತೈಃ । ಸೂರೇ । ಉತ್ऽಇತೇ ।

ಯತ್ । ಓಹತೇ । ವರುಣಃ । ಮಿತ್ರಃ । ಆರ್ಯಮಾ । ಯೂಯಂ । ಋತಸ್ಯ । ರಥ್ಯಃ ॥ ೧೨ ॥

ಸಾಯಣಭಾಷ್ಯಂ

ತತ್ಪ್ರಸಿದ್ಧಮದ್ಯಾಸ್ಮಿನ್ಯಾಗಕಾಲೇ ವೋ ಯುಷ್ಮಾನ್ಮನಾಮಹೇ । ಯಾಚಾಮಹೇ । ಕೈಃ ಸಾಧನೈಃ । ಸೂಕ್ತೈಃ । ಕಸ್ಮಿನ್ಕಾಲೇ । ಸೂರ ಉದಿತೇ । ಪ್ರಾತಃಕಾಲ ಇತ್ಯರ್ಥಃ । ಯದ್ಧನಂ ಹೇ ಋತಸ್ಯೋದಕಸ್ಯ ರಥ್ಯೋ ನೇತಾರಃ ಯೂಯಂ ವರುಣಾದಯ ಓಹತೇ । ಯೂಯಮಿತ್ಯನೇನ ಸಾಮಾನಾಧಿಕರಣ್ಯಾದೋಹತ ಇತ್ಯತ್ರ ಪುರುಷವ್ಯತ್ಯಯಃ । ಓಹಧ್ವ ಇತ್ಯರ್ಥಃ । ತದ್ಧನಂ ಮನಾಮಹ ಇತಿ ॥

ಪ್ರತಿಪದಾರ್ಥ

ಋತಸ್ಯ—ಉದಕದ । **ರಥ್ಯಃ**—ನೇತೃಗಳಾದ ಎಲೈ ಮಿತ್ರಾದಿಗಳೇ । **ಯೂಯಂ**—ನೀವು । **ಸೂರೇ ಉದಿತೇ**—ಸೂರ್ಯನು ಉದಯಿಸುತ್ತಿರುವಾಗ ಎಂದರೆ ಪ್ರಾತಃಕಾಲದಲ್ಲಿ । **ಯತ್**—ಯಾವ ಧನವನ್ನು । **ಓಹತೇ**—ಸ್ತೋತ್ರಜನರಿಗಾಗಿ ವಹಿಸುತ್ತೀರೋ । **ತತ್**—ಪ್ರಸಿದ್ಧವಾದ ಅಂತಹ ಧನವನ್ನು (ನನಗೆ ಕೊಡಬೇಕೆಂದು) **ವಃ**—ನಿಮ್ಮನ್ನು । **ಅದ್ಯ**—ಈ ಯಾಗಕಾಲದಲ್ಲಿ । **ಸೂಕ್ತೈಃ**—ಸ್ತೋತ್ರಾದಿಗಳಿಂದ । **ಮನಾಮಹೇ**—ಯಾಚಿಸುತ್ತೇವೆ.

ಭಾವಾರ್ಥ

ಜನರಿಗೆ ವೃಷ್ಟ್ಯುದಕಗಳನ್ನು ಒದಗಿಸಿಕೊಡುವ ಎಲೈ ಮಿತ್ರಾದಿದೇವತೆಗಳೇ, ಸೂರ್ಯನು ಉದಯಿಸುತ್ತಿರುವಾಗ ನೀವು ಭಕ್ತರಿಗೆ ಕೊಡುವ ಯಾವ ಧನವನ್ನು ಒಯ್ಯುತ್ತಿದ್ದೀರೋ ಅಂತಹ ಧನವನ್ನು ನಮಗೆ ಕೊಡಬೇಕೆಂದು ಈ ಯಾಗಕಾಲದಲ್ಲಿ ಸ್ತೋತ್ರಗಳಿಂದ ನಿಮ್ಮನ್ನು ಸ್ತುತಿಸಿ ಯಾಚಿಸುತ್ತೇವೆ.

English Translation

Therefore to-day at sunrise we solicit you with hymns for (wealth) Varuna, Mitra, Aryaman, bearers of water, you convey.

ಸ್ಕಂಹಿತಾಪಾಠಃ

ಋತಾವಾನ ಋತಜಾತಾ ಋತಾವೃಧೋ ಘೋರಾಸೋ ಅನೃತದ್ವಿಷಃ ।

ತೇಷಾಂ ವಃ ಸುಮ್ನೇ ಸುಚ್ಛರ್ದಿಷ್ಟಮೇ ನರಃ ಸ್ಯಾಮ ಯೇ ಚ ಸೂರಯಃ॥

ಪದಪಾಠಃ

ಋತಽವಾನಃ । ಋತಽಜಾತಾಃ । ಋತಽವೃಧಃ । ಘೋರಾಸಃ । ಅನೃತಽದ್ವಿಷಃ ।

ತೇಷಾಂ । ವಃ । ಸುಮ್ನೇ । ಸುಚ್ಛರ್ದಿಃಽತಮೇ । ನರಃ । ಸ್ಯಾಮ । ಯೇ । ಚ । ಸೂರಯಃ ॥ ೧೩ ॥

ಸಾಯಣಭಾಷ್ಯಂ

ಯೇ ಯೂಯಮೃತಾವಾನ ಋತವಂತೋ ಯಜ್ವಂತ ಉದಕವಂತೋ ವಾ ಋತಜಾತಾಃ। ಉಕ್ತ ಋತಶಬ್ದಾರ್ಥಃ। ತದರ್ಥಮುತ್ಪನ್ನಾಃ। ಅಥವಾ । ಋತಾತ್ಪ್ರಜಾಪತೇಃ ಸಕಾಶಾದುತ್ಪನ್ನಾಃ। ಋತಾವೃಧ ಉಕ್ತಾರ್ಥಸ್ಯೈತಸ್ಯ ವರ್ಧಯಿತಾರೋ ಘೋರಾಸೋ ಘೋರಾ ಅನೃತದ್ವಿಷೋಽಯಮಸ್ಮದ್ದ್ವೇಷ್ಟಾರಃ ತೇಷಾಂ ವೋ ಯುಷ್ಮಾಕಂ ಸುಚ್ಛರ್ದಿಷ್ಟಮೇ ಸುಖತಮೇ ಸುನ್ಮೇ ಧನೇಽತ್ಯಂತರಮಣೀಯೇಗೃಹಯುಕ್ತೇ ಸುಖೇ ನಾ ಯೇ ವಯಂ ಯೇ ಚಾನ್ಯೇ ಸೂರಯಃ ಸ್ತೋತಾರಃ ತೇ ಸರ್ವೇ ಸ್ಯಾಮ। ಭವೇಮ ॥

ಪ್ರತಿಪದಾರ್ಥ

(ಎಲೈ ಮಿತ್ರಾದಿದೇವತೆಗಳೇ, ನೀವು) **ಋತಾವಾನಃ**—ಯಜ್ಞನಿರ್ವಾಹಕರು ಅಥವಾ ಉದಕಪ್ರದರು। **ಋತಜಾತಾಃ**—ಯಜ್ಞಾರ್ಥವಾಗಿ ಅಥವಾ ಉದಕಪ್ರದಾನಕ್ಕಾಗಿ ಉತ್ಪನ್ನರಾದವರು । **ಋತವೃಧಃ**—ಯಜ್ಞವನ್ನು ಅಥವಾ ಉದಕವನ್ನು ವೃದ್ಧಿಪಡಿಸುವವರು । **ಘೋರಾಸಃ**—ಶತ್ರುಗಳ ವಿಷಯದಲ್ಲಿ ಕ್ರೂರವಾಗಿ ವರ್ತಿಸತಕ್ಕವರು। **ಅನೃತದ್ವಿಷಃ**—ಸುಳ್ಳಾಡುವವರನ್ನು ಕಂಡರಾಗದವರು ಅಥವಾ ಯಜ್ಞಮಾಡದಿರುವವರನ್ನು ದ್ವೇಷಿಸುವವರು । **ತೇಷಾಂ ವಃ**—ಇಂತಹ ಗುಣವಿಶಿಷ್ಟರಾದ ನಿಮ್ಮ। **ಸುಚ್ಛರ್ದಿಷ್ಟಮೇ**—ಸುಖಿಕರವಾದ । **ಸುನ್ಮೇ**—ಧನದಾನವಿಷಯದಲ್ಲಿ । **ನರಃ**—ಯಜಮಾನರಾದ ನಾವೂ । **ಯೇ ಚ ಸೂರಯಃ**—ಸ್ತೋತ್ರಮಾಡುವ ಇತರ ಜನರೂ ಸಹ । **ಸ್ಯಾಮ**—ನಿಮ್ಮ ಅನುಗ್ರಹಕ್ಕೆ ಪಾತ್ರರಾಗಿರೋಣ

ಭಾವಾರ್ಥ

ಎಲೈ ಮಿತ್ರಾವರುಣಾದಿದೇವತೆಗಳೇ, ನೀವು ಯಜ್ಞನಿರ್ವಾಹಕರು ಅಥವಾ ವೃಷ್ಟಿರೂಪವಾದ ಉದಕವನ್ನು ಜನರಿಗೆ ಒದಗಿಸಿಕೊಡುವವರು, ಯಜ್ಞಾರ್ಥವಾಗಿ ಅಥವಾ ಉದಕಾರ್ಥವಾಗಿಯೇ ಉತ್ಪನ್ನರಾದವರು. ಯಜ್ಞವನ್ನು ಅಥವಾ ಉದಕವನ್ನು ವೃದ್ಧಿಯಾಗುವಂತೆ ಮಾಡುವವರು ಶತ್ರುಗಳ ವಿಷಯದಲ್ಲಿ ಕ್ರೂರಸ್ವಭಾವವುಳ್ಳವರು, ಅನೃತವಾದಿಗಳನ್ನು ಅಥವಾ ಯಜ್ಞಮಾಡದಿರುವವರನ್ನು ದ್ವೇಷಿಸುವವರು, ಇಂತಹ ನಿಮ್ಮ ಸುಖಿಕರವಾದ ಧನದಾನದ ವಿಷಯದಲ್ಲಿ ಯಜಮಾನರಾದ ನಾವೂ ನಿಮ್ಮನ್ನು ಸ್ತೋತ್ರಮಾಡುವ ಇತರರೂ ನಿಮ್ಮ ಅನುಗ್ರಹಕ್ಕೆ ಪಾತ್ರರಾಗುವಂತಾಗಲಿ

English Translation

Acceptors of rites, generated for rites, augmenters of rites, fierce enemies of the neglector of rites, may we, as well as those men who are your adorers, be in (the enjoyment of) the highest felicity, all confirmed by you

ಸಂಹಿತಾಪಾಠಃ

ಉದು ತ್ಯದ್ದರ್ಶತಂ ವಪುರ್ದಿವ ಏತಿ ಪ್ರತಿಹ್ವರೇ।
ಯದೀಮಾಶುರ್ವಹತಿ ದೇವ ಏತಶೋ ವಿಶ್ವಸ್ಮೈ ಚಕ್ಷಸೇ ಅರಂ ॥ ೧೪ ॥

ಪದಪಾಠಃ

ಉತ್ । ಊಂ ಇತಿ । ತ್ಯತ್ । ದರ್ಶತಂ । ವಪುಃ । ದಿವಃ । ಏತಿ । ಪ್ರತಿ । ಊಂ ಇತಿ । ಪ್ರತಿ । ಊಂ ಇತಿ ।

ಯತ್ । ಈಂ । ಆಶುಃ । ವಹತಿ । ದೇವಃ । ಏತಶಃ । ವಿಶ್ವಸ್ಮೈ । ಚಕ್ಷಸೇ । ಆರಂ ॥ ೧೪ ॥

ಸಾಯಣಭಾಷ್ಯಂ

ಸೋಮಾಶಿರೇಕೇ ಮಾಧ್ಯಂದಿನಸವನೇ ನೈಮಿತ್ತಿಕೇ ಶಸ್ತ್ರ ಉದು ತ್ಯದಿತ್ಯಯಂ ಪ್ರಗಾಥೋಽನುರೂಪಃ । ಸೂತ್ರಿತಂ ಚ । ಬ್ರಾಹ್ಮಣಾ ಅಸಿ ಸೂರ್ಯೋದು ತ್ಯದ್ದರ್ಶತಂ ವಪುರಿತಿ ಪ್ರಗಾಥೌ ಸ್ತೋತ್ರಿಯಾನುರೂಪೌ । ಆ. ೬ ೭ । ಇತಿ ॥ ಚಾತುರ್ವಿಂಶಿಕೇಽಹನಿ ಮಾಧ್ಯಂದಿನಸವನೇಽಯಮೇವ ವೈಕಲ್ಪಿಕಃ ಸ್ತೋತ್ರಿಯಸ್ತೃಚಃ । ಸೂತ್ರಿತಂ ಚ । ಉದು ತ್ಯದ್ದರ್ಶತಂ ವಪುರುದು ತ್ಯೇ ಮಧುಮತ್ತಮಾಃ । ಆ. ೭ ೪ । ಇತಿ ॥

ತ್ಯತ್ತದ್ದರ್ಶತಂ ದರ್ಶನೀಯಂ ವಪುರ್ಮಂಡಲಂ ದಿವೋಽಂತರಿಕ್ಷಸ್ಯ ಪ್ರತಿಹ್ವರೇ ಸಮೀಪ ಉದ್ಯೇತಿ । ಉದೇತಿ । ಉ ಇತಿ ಪೂರಣಃ । ಯದೀಂ ಯದೇತನ್ಮಂಡಲಮಾಶುಃ ಶೀಘ್ರಗಾಮ್ಯೇತಶ ಏತವನೋಽಶ್ವೋ ವಹತಿ ಧಾರಯತಿ । ಕಿಮರ್ಥಂ । ವಿಶ್ವಸ್ಮೈ ಸರ್ವಸ್ಮಾ ಆರಂ ಚಕ್ಷಸೇ ಸಮ್ಯಕ್ಸರ್ವಲೋಕದರ್ಶನಾಯ ॥

ಪ್ರತಿಪದಾರ್ಥ

ತ್ಯತ್—ಪ್ರಸಿದ್ಧವಾದುದೂ । **ದರ್ಶತಂ**—ಎಲ್ಲರಿಗೂ ಕಾಣಿಸುತ್ತಿರುವುದೂ ಅಥವಾ ರಮಣೀಯವಾದುದೂ ಆದ । **ವಪುಃ**—ಸೂರ್ಯಮಂಡಲವು । **ದಿವಃ**—ಅಂತರಿಕ್ಷದ । **ಪ್ರತಿಹ್ವರೇ**—ಸಮೀಪದಲ್ಲಿ ಎಂದರೆ ಅಂಚಿನಲ್ಲಿ । **ಉದು ಏತಿ**—ಉದಯಿಸುತ್ತದೆ । **ಯದೀಂ**—ಇಂತಹ ಯಾವ ಸೂರ್ಯಮಂಡಲವಿರುವುದೋ ಆದನ್ನು । **ಆಶುಃ** ವೇಗವಾಗಿ ಸಂಚರಿಸುವ । **ಏತಶಃ**—ಸೂರ್ಯನ ಅಶ್ವವು । **ವಿಶ್ವಸ್ಮೈ ಆರಂ ಚಕ್ಷಸೇ**—ಸಮಸ್ತಜನರೂ ಚೆನ್ನಾಗಿ ನೋಡುವುದಕ್ಕಾಗಿ । **ವಹತಿ**—ವಹಿಸುತ್ತದೆ (ಒಯ್ಯುತ್ತದೆ)

ಭಾವಾರ್ಥ

ಪ್ರಸಿದ್ಧವಾದುದೂ, ಎಲ್ಲರಿಗೂ ಕಾಣಿಸುತ್ತಿರುವುದೂ ಆದ ಸೂರ್ಯಮಂಡಲವು ಅಂತರಿಕ್ಷದ ಅಂಚಿನಲ್ಲಿ ಈಗತಾನೇ ಉದಯಿಸುತ್ತಿದೆ. ಇಂತಹ ಈ ಸೂರ್ಯಮಂಡಲವನ್ನು ಸಮಸ್ತಜನರೂ ಚೆನ್ನಾಗಿ ನೋಡಲೆಂದು ಶೀಘ್ರಗಾಮಿಯಾದ ಸೂರ್ಯನ ಅಶ್ವವು ಅಂತರಿಕ್ಷಮಾರ್ಗದಲ್ಲಿ ವಹಿಸುತ್ತದೆ.

English Translation

That beautiful orb (of the sun) rises on the near margin of the sky as the swift, divine, white-coloured (steed) bears it along for the beholding of all men.

ವಿಶೇಷನಿಸಂಯಗಳು

ಮಾಧ್ಯಂದಿನಸವನಕಾಲದಲ್ಲಿ ಸೋಮಾಶಿರೇಕವಾದಾಗ ನೈಮಿತ್ತಿಕಶಸ್ತ್ರಮಂತ್ರಗಳನ್ನು ಪರಿಸುವಾಗ **ಉದು ತ್ಯೇ** ಎಂಬ ಈ ಋಕ್ಕನ್ನು ಅನುರೂಪ ಪ್ರಗಾಥಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-

ಬಣ್ಮಹ್ಹಾ ಆಸಿ ಸೂರ್ಯೇದುತ್ಯದ್ದರ್ಶತಂ ವಪುರಿತಿ ಪ್ರಗಾಥೌ ಸ್ತೋತ್ರಿಯಾನುರೂಪೌ ಎಂಬ ಸೂತ್ರದಿಂದ (ಆ. ೬ ೭) ವಿವೃತವಾಗಿರುವುದು. ಮತ್ತು ಯಾಗದ ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನಸವನಕಾಲದಲ್ಲಿ **ಈ** ಋಕ್ಯನ್ನೇ ವೈಕಲ್ಪಿಕಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಉದು ಶ್ಯದ್ದರ್ಶತಂ ವಪುರುದು ತ್ಯೇ ಮಧುಮತ್ತಮಾಃ** ಎಂಬ ಸೂತ್ರದಿಂದ (ಆ ೭-೪) ವಿವೃತವಾಗಿರುವುದು.

ಸಂಹಿತಾಪಾಠಃ

ಶೀಷ್ಣಃಶೀಷ್ಣ್ಯೋ ಜಗತಸ್ತಸ್ಥುಷಸ್ಪತಿಂ ಸಮಯಾ ವಿಶ್ವಮಾ ರಜಃ ।
ಸಪ್ತ ಸ್ವಸಾರಃ ಸುವಿತಾಯ ಸೂರ್ಯಂ ವಹಂತಿ ಹರಿತೋ ರಥೇ ॥ ೧೫ ॥

ಪದಪಾಠಃ

ಶೀಷ್ಣಃ೽ಶೀಷ್ಣಃ । ಜಗತಃ । ತಸ್ಥುಷಃ । ಪತಿಂ । ಸಮಯಾ । ವಿಶ್ವಂ । ಆ । ರಜಃ ।
ಸಪ್ತ । ಸ್ವಸಾರಃ । ಸುವಿತಾಯ । ಸೂರ್ಯಂ । ವಹಂತಿ । ಹರಿತಃ । ರಥೇ ॥ ೧೫ ॥

ಸಾಯಣಭಾಷ್ಯಂ

ಶೀಷ್ಣಃ ಶೀರ್ಷ್ಣಃ ಸರ್ವಸ್ಯಾಪಿ ಶಿರಸಃ । ತೃತೀಯಾರ್ಥೇ ಪಂಚಮೀ । ಸ್ವಸ್ಯಶಿರಸೇತ್ಯರ್ಥಃ । ಸೂರ್ಯಂ ವಹಂತೀತ್ಯನೇನ ಸಂಬಂಧ್ಯತೇ । ಅಥವಾ ಶಿರಃಶಬ್ದೇನ ತದಾಸ್ಪದಾರ್ಥೋ ಲಕ್ಷ್ಯತೇ । ವೀಪ್ಸಯಾ ತಸ್ಯ ಕಾತ್ಸ್ನ್ಯರ್ಮುಚ್ಯತೇ । ಸರ್ವಸ್ಯ ಶ್ರೇಷ್ಠಮಿತ್ಯರ್ಥಃ । ಜಗತೋ ಜಂಗಮಸ್ಯ ತಸ್ಥುಷಃ ಸ್ಥಾವರಸ್ಯ ಪತಿಂ ಸ್ವಾಮಿನಂ ರಥೇ ವರ್ತಮಾನಂ ಸೂರ್ಯಂ ಸುವಿತಾಯ ಕಲ್ಯಾಣಾಯ ವಿಶ್ವಂ ರಜಃ ಸಮಯಾ ಸರ್ವಲೋಕಸ್ಯ ಸಮೀಪೇ ॥ ಅಭಿತಃ ಪರಿತಃ ಸಮಯೇತ್ಯಾದಿನಾ । ಮ ೨-೩-೨-೧ । ಸಮಯಾಶಬ್ದಯೋಗಾತ್ ದ್ವಿತೀಯಾ ॥ ಸಪ್ತ ಸಪ್ತಸಂಖ್ಯಾಕಾಃ ಸ್ವಸಾರೋಽನ್ಯನಿರಪೇಕ್ಷೇಣ ಸ್ವಯಮೇವ ಸರಂತ್ಯೋ ಹರಿತೋ ಹರಿತವರ್ಣಾ ಅಶ್ವಾ ವಹಂತಿ ॥

ಪ್ರತಿಪದಾರ್ಥ

ಶೀಷ್ಣಃಶೀಷ್ಣಃ—ಶಿರಸ್ಸಿನಂತೆ ಅತ್ಯಂತ ಶ್ರೇಷ್ಠವಾದ । **ಜಗತಃ ತಸ್ಥುಷಃ**—ಸ್ಥಾವರಜಂಗಮಾತ್ಮಕವಾದ ಸಮಸ್ತಜಗತ್ತಿಗೂ । **ಪತಿಂ**—ಒಡೆಯನಾದವನೂ । **ರಥೇ**—ರಥದಲ್ಲಿ ಕುಳಿತಿರುವವನೂ ಆದ । **ಸೂರ್ಯಂ**—ಸೂರ್ಯನನ್ನು । **ಸುವಿತಾಯ**—ಲೋಕಕಲ್ಯಾಣಕ್ಕಾಗಿ । **ವಿಶ್ವಂ ರಜಃ**—ಸಮಸ್ತಲೋಕಗಳ । **ಸಮಯಾ**—ಸಮೀಪದಲ್ಲಿ । **ಸ್ವಸಾರಃ**—ಸ್ವತಃಸಂಚರಿಸುವ ಶಕ್ತಿಯುಳ್ಳ । **ಸಪ್ತ ಹರಿತಃ**—ಹರಿತವರ್ಣವುಳ್ಳ ಸೂರ್ಯನ ಏಳು ಕುದುರೆಗಳು । **ವಹಂತಿ**—ನಡೆಸುತ್ತವೆ

ಭಾವಾರ್ಥ

ಚರಾಚರಾತ್ಮಕವಾದ ಸಮಸ್ತ ಜಗತ್ತಿಗೂ ಒಡೆಯನಾದವನೂ, ರಥದಲ್ಲಿ ಕುಳಿತಿರುವವನೂ ಆದ ಸೂರ್ಯನನ್ನು, ಸ್ವತಃ (ಇತರರ ಪ್ರೇರಣೆ ಇಲ್ಲದೆ) ಸಂಚರಿಸುವ ಹರಿದ್ವರ್ಣವುಳ್ಳ ಸೂರ್ಯನ ಏಳು ಕುದುರೆಗಳು ಲೋಕ ಕಲ್ಯಾಣಾರ್ಥವಾಗಿ ಭೂಮ್ಯಾಕಾಶಗಳ ಸಮೀಪದಲ್ಲಿಯೇ ಎಂದರೆ ಎಲ್ಲರಿಗೂ ಕಾಣಿಸುವಂತೆಯೇ ಒಯ್ಯುತ್ತವೆ.

English Translation

The seven gliding steeds convey the sun, the lord of every individual moving of stationary thing, traversing the whole world in his chariot for the good (of all).

ಸಂಹಿತಾಪಾಠಃ

ತಚ್ಚಕ್ಷುರ್ದೇವಹಿತಂ ಶುಕ್ರಮುಚ್ಚರತ್ ।

ಪಶ್ಯೇಮ ಶರದಃ ಶತಂ ಜೀವೇಮ ಶರದಃ ಶತಂ ॥ ೧೬ ॥

ಪದಪಾಠಃ

ತತ್ । ಚಕ್ಷುಃ । ದೇವ್ಯಹಿತಂ । ಶುಕ್ರಂ । ಉತ್ಯಚರತ್ ।

ಪಶ್ಯೇಮ । ಶರದಃ । ಶತಂ । ಜೀವೇಮ । ಶರದಃ । ಶತಂ ॥ ೧೬ ॥

ಸಾಯಣಭಾಷ್ಯಂ

ತತ್ಪ್ರಸಿದ್ಧಂ ಚಕ್ಷುಃ ಸರ್ವಸ್ಯ ಪ್ರಕಾಶಕಂ ದೇವಹಿತಂ ದೇವಾನಾಂ ಹಿತಂ । ತೇಷಾಂ ಹವಿಃಸ್ವೀಕಾರಸ್ಯೈತದಧೀನತ್ವಾತ್ । ಅಥವಾ ದೇವೇನ ಹಿತಂ । ಶುಕ್ರಂ ನಿರ್ಮಲಂ ಸೂರ್ಯಮಂಡಲಮುಚ್ಚರತ್ । ಉದ್ಗಚ್ಛತಿ । ತಚ್ಚರದಃ ಶತಂ ಶತಸಂವತ್ಸರಂ ಪಶ್ಯೇಮ । ಜೀವೇಮ ಶರದಃ ಶತಂ । ಪುನಃ ಶ್ರುತಿರಾದರಾರ್ಥಾ ॥

ಪ್ರತಿಪದಾರ್ಥ

ತತ್—ಪ್ರಸಿದ್ಧವಾದುದೂ । **ಚಕ್ಷುಃ**—ಸಮಸ್ತವಿಶ್ವಕ್ಕೂ ಕಣ್ಣಿನಂತಿರುವುದೂ ಅಥವಾ ಪ್ರಕಾಶವನ್ನು ಬೀರುವುದೂ । **ದೇವಹಿತಂ**—ದೇವತೆಗಳಿಗೆ ಹಿತಕರವಾದುದೂ ಅಥವಾ ದೇವತೆಗಳಿಂದ ಲೋಕಕಲ್ಯಾಣಾರ್ಥವಾಗಿ ಅಂತರಿಕ್ಷದಲ್ಲಿ ಸ್ಥಾಪಿತವಾದುದೂ । **ಶುಕ್ರಂ**—ನಿರ್ಮಲವಾದುದೂ (ಶುಭ್ರವಾದುದೂ) ಆದ ಸೂರ್ಯಮಂಡಲವು । **ಉಚ್ಚರತ್**—ಉದಯಿಸಿ ಸಂಚರಿಸುತ್ತದೆ (ಅಥವಾ ಅಂತರಿಕ್ಷದ ಮೇಲ್ಭಾಗದಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸುತ್ತದೆ) । **ತತ್**—ಅಂತಹ ಸೂರ್ಯಮಂಡಲವನ್ನು । **ಶರದಃ ಶತಂ**—ನೂರು ವರ್ಷಗಳವರೆಗೂ । **ಪಶ್ಯೇಮ**—ನಾವು ನೋಡುವಂತಾಗಲಿ । **ಶರದಃ ಶತಂ**—ನೂರು ವರ್ಷಗಳವರೆಗೂ । **ಜೀವೇಮ**—ನಾವು ಜೀವಿಸಿರುವಂತಾಗಲಿ

ಭಾವಾರ್ಥ

ಸಮಸ್ತಪ್ರಪಂಚಕ್ಕೂ ಕಣ್ಣಿನಂತಿರುವುದೂ ಅಥವಾ ಪ್ರಕಾಶವನ್ನು ಬೀರುತ್ತಿರುವುದೂ ದೇವತೆಗಳಿಗೆ ಹಿತಕರವಾದುದೂ ಅಥವಾ ದೇವತೆಗಳಿಂದ ಲೋಕಹಿತಾರ್ಥವಾಗಿ ಅಂತರಿಕ್ಷದಲ್ಲಿ ಸ್ಥಾಪಿತವಾದುದೂ ಶುಭ್ರವಾಗಿ ಬೆಳಗುತ್ತಿರುವುದೂ ಆದ ಸೂರ್ಯಮಂಡಲವು ಉದಯಾನಂತರ ಅಂತರಿಕ್ಷದಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸುತ್ತದೆ. ಇಂತಹ ಸೂರ್ಯಮಂಡಲವನ್ನು ನಾವು ನೂರು ವರ್ಷಗಳವರೆಗೂ ಜೀವಿಸಿದ್ದು ನೋಡುತ್ತಿರುವಂತಾಗಲಿ ಎಂದರೆ ನಾವು ಒಹು ಕಾಲ ಜೀವಿಸಿರುವಂತಾಗಲಿ.

English Translation

That pure eye (of the universe), beneficial to the gods, rises . may we behold it for a hundred years . may we live a hundred years.

ಸಂಹಿತಾಪಾಠಃ

ಕಾವ್ಯೇಭಿರದಾಭ್ಯಾ ಯಾತಂ ವರುಣ ದ್ಯುಮತ್ ।

ಮಿತ್ರಶ್ಚ ಸೋಮಪೀತಯೇ ॥ ೧೭ ॥

ಪದಪಾಠಃ

ಕಾವ್ಯೇಭಿಃ । ಅದಾಭ್ಯಾ । ಆ । ಯಾತಂ । ವರುಣ । ದ್ಯುಮತ್ ।

ಮಿತ್ರಃ । ಚ । ಸೋಮಪೀತಯೇ ॥ ೧೭ ॥

ಸಾಯಣಭಾಷ್ಯಂ

ಪೃಷ್ಠ್ಯಾಭಿಪ್ಲವಷಡಹಯೋಃ ಸ್ತೋಮನಿಮಿತ್ತ ಆವಾಪೇ ಕಾವ್ಯೇಭಿರದಾಭ್ಯೇತಿ ತೃಚಃ । ಕಾವ್ಯೇಭಿರದಾಭ್ಯೇತಿ ತಿಸ್ರಃ । ಆ ೭-೫ । ಇತಿ ಹಿ ಸೂತ್ರಿತಂ ॥

ಹೇ ಅದಾಭ್ಯಾದಂಭನೀಯೌ ಹೇ ವರುಣ ತ್ವಂ ಮಿತ್ರಶ್ಚ ದ್ಯುಮದ್ವ್ಯುತಿಮಂತೌ ಯುವಾಂ ಕಾವ್ಯೇಭಿರಸ್ಮತ್ಕೃತೈಃ ಸ್ತೋತ್ರೈರಾ ಯಾತಂ । ಕಿಮರ್ಥಂ । ಸೋಮಪೀತಯೇ ಸೋಮಪಾನಾಯ ॥

ಪ್ರತಿಪದಾರ್ಥ

ಅದಾಭ್ಯಾ—ಶತ್ರುಗಳಿಂದ ಹಿಂಸಿಸಲ್ಪಡಲು ಸಾಧ್ಯವಿಲ್ಲದ । **ವರುಣ**—ಎಲೈ ವರುಣನೇ ನೀನೂ । **ಮಿತ್ರಃ ಚ**—ಮಿತ್ರನೂ । **ದ್ಯುಮತ್**—ಪ್ರಕಾಶಯುಕ್ತರಾದ ನೀವಿಬ್ಬರೂ । **ಕಾವ್ಯೇಭಿಃ**—ನಾವು ಮಾಡುವ ಸ್ತೋತ್ರಗಳಿಂದ ಪ್ರಶಂಸಿತರಾಗಿ । **ಸೋಮಪೀತಯೇ**—ಸೋಮಪಾನಾರ್ಥವಾಗಿ । **ಆ ಯಾತಂ**—ಬನ್ನಿರಿ

ಭಾವಾರ್ಥ

ಶತ್ರುಬಾಧಾರಹಿತರಾದ ಎಲೈ ಮಿತ್ರಾವರುಣರೇ, ಪ್ರಕಾಶಯುಕ್ತರಾದ ನೀವು ನಮ್ಮ ಸ್ತೋತ್ರಾದಿಗಳಿಂದ ಪ್ರಶಂಸಿತರಾಗಿ ಸೋಮಪಾನಾರ್ಥವಾಗಿ ಇಲ್ಲಿಗೆ ದಯಮಾಡಿಸಿರಿ.

English Translation

Unconquerable, resplendet Varuna and Mitra, (induced) by our praises, come to drink the soma juice.

ವಿಶೇಷವಿಷಯಗಳು

ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳಲ್ಲಿ ಸ್ತೋಮಗಳ ಆವಾವಾರ್ಥವಾಗಿ **ಕಾವ್ಯೇಭಿರದಾಭ್ಯಾ** ಎಂದು ಪ್ರಾರಂಭವಾಗುವ ಈ ತೃಚವನ್ನು ಎಂದರೆ ಮೂರು ಋಕ್ಕುಗಳನ್ನು ಪರಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದ **ಕಾವ್ಯೇಭಿರದಾಭ್ಯೇತಿ ತಿಸ್ರಃ** ಎಂಬ ಸೂತ್ರದಿಂದ (ಆ. ೭–೫) ವಿನ್ಯತವಾಗಿರುವುದು

ಸಂಹಿತಾಪಾಠಃ

ದಿವೋ ಧಾಮಭಿರ್ವರುಣ ಮಿತ್ರಶ್ಚಾ ಯಾತಮದ್ರುಹಾ ।
ಪಿಬತಂ ಸೋಮಮಾತುಜೀ ॥ ೧೪ ॥

ಪದಪಾಠಃ

ದಿವಃ । ಧಾಮಭಿಃ । ವರುಣ । ಮಿತ್ರಃ । ಚ । ಆ । ಯಾತಂ । ಅದ್ರುಹಾ ।
ಪಿಬತಂ । ಸೋಮಂ । ಆತುಜೀ ಇತ್ಯಾತುಜೀ ॥ ೧೪ ॥

ಸಾಯಣಭಾಷ್ಯಂ

ಹೇ ವರುಣ ತ್ವಂ ಮಿತ್ರಶ್ಚಾದ್ರುಹಾದ್ರೋಗ್ಧಾರೌ ಯುವಾಂ ದಿವೋ ದ್ಯುಲೋಕಸಂಬಂಧಿಭ್ಯೋ ಧಾಮಭಿರ್ಧಾಮಭ್ಯ ಸ್ಥಾನೇಭ್ಯಃ । ಪಂಚಮ್ಯರ್ಥೇ ತೃತೀಯಾ । ಅಥವಾ ಧಾಮಭಿಸ್ತೇಜೋಭಿರ್ವಿಭೂತಿಭಿಃ ಸಾರ್ಧಮಾ ಯಾತಂ । ಅಸ್ಮದ್ಯಜ್ಞಮಾಗಚ್ಛತಂ । ಆಗತ್ಯ ಚಾತುಜೀ ಶತ್ರೂಣಾಂ ಸರ್ವತೋ ಹಿಂಸಕಾವಾದಾತಾರೌ ವಾ ಧನಾನಾಂ ಏವಂ ರೂಪೌ ಸಂತೌ ಸೋಮಂ ಪಿಬತಂ ॥ ತುಜಿ ಪಿಜಿ ಹಿಂಸಾಬಲಾದಾನನಿಕೇತನೇಷು । ಅತ್ರ ಹಿಂಸಾಯಾಮಾದಾನೇ ವಾ ವರ್ತತೇ ।

ಪ್ರತಿಪದಾರ್ಥ

ವರುಣ—ಎಲೈ ವರುಣನೇ, ನೀನೂ । **ಮಿತ್ರಶ್ಚ**—ಮಿತ್ರನೂ । **ಅದ್ರುಹಾ**—ಯಾರಿಗೂ ಕೇಡನ್ನು ಬಯಸದಿರುವ ನೀವಿಬ್ಬರೂ । **ದಿವಃ ಧಾಮಭಿಃ**—ಸ್ವರ್ಗಲೋಕದ ಸ್ಥಾನಗಳಿಂದ ಅಥವಾ ಪ್ರಕಾಶಯುಕ್ತರಾಗಿ । **ಆ ಯಾತಂ**—(ನಮ್ಮ ಯಜ್ಞಾಭಿಮುಖವಾಗಿ) ದಯಮಾಡಿಸಿ (ಅನಂತರ) । **ಆತುಜೀ**—ಎಲ್ಲಕಡೆಯಲ್ಲಿಯೂ ಶತ್ರುಗಳನ್ನು ಹಿಂಸಿಸುವ ಅಥವಾ ಧನಾದಿಗಳನ್ನು ಸ್ತೋತೃಜನರಿಗೆ ಕೊಡುವ ನೀವು । **ಸೋಮಂ**—ಸೋಮರಸವನ್ನು । **ಪಿಬತಂ**—ಪಾನಮಾಡಿರಿ.

ಭಾವಾರ್ಥ

ಯಾರಿಗೂ ದ್ರೋಹವನ್ನು ಮಾಡದಿರುವ ಎಲೈ ಮಿತ್ರಾವರುಣರೇ, ನೀವಿಬ್ಬರೂ ಸ್ವರ್ಗಲೋಕದ ನಿಮ್ಮ ಸ್ಥಾನಗಳಿಂದ ಹೊರಟು ಪ್ರಕಾಶದಿಂದ ಬೆಳಗುತ್ತಾ ನಮ್ಮ ಯಜ್ಞಾಭಿಮುಖವಾಗಿ ದಯಮಾಡಿ. ಅನಂತರ ಶತ್ರು ಹಿಂಸಕರಾದ ಅಥವಾ ಧನಪ್ರದರಾದ ನೀವು ನಮ್ಮ ಯಜ್ಞದಲ್ಲಿ ಸೋಮರಸವನ್ನು ಪಾನಮಾಡಿರಿ.

English Translation

Gentle Mitra and Varuna, destroyers of foes, come from heaven with your glories, and drink the Soma juice.

ಸಂಹಿತಾಪಾಠಃ

ಆ ಯಾತಂ ಮಿತ್ರಾವರುಣಾ ಜುಷಾಣಾವಾಹುತಿಂ ನರಾ ।

ಪಾತಂ ಸೋಮಮೃತಾವೃಧಾ ॥ ೧೯ ॥

ಪದಪಾಠಃ

ಆ । ಯಾತಂ । ಮಿತ್ರಾವರುಣಾ । ಜುಷಾಣೌ । ಆಽಹುತಿಂ । ನರಾ ।

ಪಾತಂ । ಸೋಮಂ । ಋತಾವೃಧಾ ॥ ೧೯ ॥

ಸಾಯಣಭಾಷ್ಯಂ

ಹೇ ಮಿತ್ರಾವರುಣಾ ಮಿತ್ರಾವರುಣೌ ಹೇ ನರಾ ಯಾಗನೇತಾರೌ ಆಹುತಿಂ ಸೋಮಲಕ್ಷಣಾಂ ಜುಷಾಣೌ ಪ್ರಿಯಮಾಣೌ ಸಂತಾವಾ ಯಾತಂ । ಆಗಚ್ಛತಂ ಯಜ್ಞಂ । ಆಗತ್ಯ ಚ ಹೇ ಋತಾವೃಧಾ ಯಜ್ಞಸ್ಯ ವರ್ಧಕೌ ಯುವಾಂ ಸೋಮಂ ಪಾತಂ । ಪಿಬತಂ ॥

ಪ್ರತಿಪದಾರ್ಥ

ನರಾ—ಯಜ್ಞನೇತೃಗಳಾದ । **ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ಆಹುತಿಂ**—ಸೋಮಲಕ್ಷಣವಾದ ಆಹುತಿಯನ್ನು । **ಜುಷಾಣಾ**—ಪ್ರೀತಿಸುವವರಾಗಿ (ಅಥವಾ ಸೇವಿಸುವುದಕ್ಕಾಗಿ) । **ಆ ಯಾತಂ**—ನಮ್ಮ ಯಜ್ಞಭೂಮಿಗೆ ಬನ್ನಿರಿ. (ಆನಂತರ) । **ಋತಾವೃಧಾ**—ಯಜ್ಞವರ್ಧಕರಾದ ನೀವು । **ಸೋಮಂ**—ಸೋಮರಸವನ್ನು । **ಪಾತಂ**—ಪಾನಮಾಡಿರಿ.

ಭಾವಾರ್ಥ

ಯಜ್ಞನಿರ್ವಾಹಕರಾದ ಎಲೈ ಮಿತ್ರಾವರುಣರೇ, ಯಜ್ಞಾಹುತಿರೂಪವಾದ ಸೋಮದಲ್ಲಿ ಆಸಕ್ತಿಯುಳ್ಳ ನೀವು ಅದನ್ನು ಸೇವಿಸುವುದಕ್ಕಾಗಿ ನಮ್ಮ ಯಜ್ಞಭೂಮಿಗೆ ಬನ್ನಿರಿ. ಬಂದನಂತರ ಯಜ್ಞವರ್ಧಕರಾದ ನೀವು ನಮ್ಮ ಯಜ್ಞದಲ್ಲಿ ಸೋಮಪಾನವನ್ನು ಮಾಡಿರಿ.

English Translation.

Come, Mitra and Varuna, leaders of rites, propitiated by the oblation, and drink the Soma, augmenters of the sacred rite.

ಅರವತ್ತೇಳನೆಯ ಸೂಕ್ತವು

ಪೀಠಿಕೆ.

ಈ ಸೂಕ್ತದಲ್ಲಿಯೂ ಮುಂದಿನ ಏಳು ಸೂಕ್ತದಲ್ಲಿಯೂ ಅಶ್ವಿನೀದೇವತೆಗಳನ್ನು ಸ್ತುತಿಸಲಾಗಿದೆ ಅಶ್ವಿನೀ ದೇವತೆಗಳ ವಿಷಯವನ್ನು ನಾವು ಹಿಂದೆ ಅನೇಕಾವರ್ತಿ ವಿವರಿಸಿದ್ದೇವೆ. ಈಗ ಇಲ್ಲಿ ಅವರ ಸೂಕ್ಷ್ಮಪರಿಚಯವನ್ನೂ. ಅವರು ತಮ್ಮನ್ನು ಸ್ತುತಿಸಿದವರಿಗೆ ಮಾಡಿದ ಸಹಾಯದ ವಿವರವನ್ನೂ ಮಾತ್ರ ಸೂಕ್ಷ್ಮವಾಗಿ ಹೇಳುತ್ತೇನೆ

ಅಶ್ವಿನೀದೇವತೆಗಳು ಇಬ್ಬರು ಅವರಲ್ಲಿ ಒಬ್ಬನಿಗೆ ದಸ್ರ ಎಂತಲೂ ಇನ್ನೊಬ್ಬನಿಗೆ ನಾಸತ್ಯ ಎಂತಲೂ ಹೆಸರಿರುವುದಾದರೂ ಇಬ್ಬರನ್ನೂ ಅನೇಕ ಪೇಳೆ ದಸ್ರಾ ಅಥವಾ ನಾಸತ್ಯಾ ಎಂಬ ದ್ವಿವಚನಾಂತಶಬ್ದದಿಂದಲೇ ಕರೆಯ ಲಾಗಿದೆ

ಅಶ್ವಿನೀದೇವತೆಗಳ ಉತ್ಪತ್ತಿ

ಯಾಸ್ಕರು ತಮ್ಮ ನಿರುಕ್ತದಲ್ಲಿ ಅಶ್ವಿನೀದೇವತೆಗಳ ವಿಷಯವಾಗಿ ಈ ರೀತಿ ಹೇಳಿದಾರೆ. ಈ ಅಶ್ವಿನೀ ದೇವತೆಗಳ ವಿಷಯದಲ್ಲಿ ಇನರು ಯಾರು ಎಂಬ ವಿಚಾರದಲ್ಲಿ ಆ ಕಾಲದಲ್ಲಿಯೂ ಮತಭೇದವಿದ್ದಂತೆ ಕಾಣುತ್ತದೆ

ಅಶ್ವಿನೌ ಯಮ್ವೈಶ್ನವಾತೇ ಸರ್ವಂ ರಸೇನಾನ್ಯೋ ಜ್ಯೋತಿಷಾನ್ಯಃ । ಅಶ್ವೈರಶ್ವಿನಾವಿತ್ಯೌರ್ಣವಾಭಃ । ತತ್ಕಾವಶ್ವಿನೌ ದ್ಯಾವಾಪೃಥಿವ್ಯಾವಿತ್ಯೇಕೇ । ಅಹೋರಾತ್ರಾವಿತ್ಯೇಕೇ । ಸೂರ್ಯಾಚಂದ್ರಮಸಾವಿತ್ಯೇಕೇ । ರಾಜಾನೌ ಪುಣ್ಯಕೃತಾವಿತ್ಯೇಕೇ ।

(ನಿ ೧೨-೧)

ಈ ದೇವತೆಗಳಲ್ಲಿ ಒಬ್ಬನು ಉದಕದಿಂದಲೂ ಇನ್ನೊಬ್ಬನು ಪ್ರಕಾಶದಿಂದಲೂ ಸರ್ವತ್ರ ವ್ಯಾಪಿಸಿರುವುದರಿಂದ ಇವರಿಗೆ ಅಶ್ವಿನೀದೇವತೆಗಳೆಂದು ಹೆಸರು ಎಂದು ಒಂದು ಮತ ಅಶ್ವಗಳಿಂದ ಯುಕ್ತರಾದುದರಿಂದ ಇವರಿಗೆ ಅಶ್ವಿನೀದೇವತೆ ಗಳೆಂದು ಹೆಸರು ಎಂದು ಔರ್ಣವಾಭರೆಂಬುವರ ಮತ ಕೆಲವರ ಅಭಿಪ್ರಾಯದಂತೆ ಇವರು ದ್ಯಾವಾಪೃಥಿವಿಗಳು. ಮತ್ತೆ ಕೆಲವರು ಇವರನ್ನು ಅಹೋರಾತ್ರಿಗಳೆಂದು ಹೇಳುವರು ಮತ್ತೆ ಕೆಲವರ ಅಭಿಪ್ರಾಯದಂತೆ ಇವರೇ ಸೂರ್ಯ ಚಂದ್ರರು. ಐತಿಹಾಸಕಾರರ ಮತದಂತೆ ಪುಣ್ಯಕರ್ತರಾದ ಇಬ್ಬರು ರಾಜರುಗಳು ಈ ಪದವಿಯನ್ನು ಪಡೆದು ಅಶ್ವಿನೀ ದೇವತೆಗಳೆಂದು ಪ್ರಸಿದ್ಧರಾಗಿದಾರೆ. ಹೀಗೆ ಯಾಸ್ಕರು ಮತಭೇದಗಳನ್ನು ತಿಳಿಸಿ ಋ ಸಂ. ೧-೧೮೨೧ ಳ ಮತ್ತು ಅನಿರ್ದಿಷ್ಟವಾದ ಇನ್ನೊಂದು ಮಂತ್ರವನ್ನೂ ಉದಾಹರಿಸಿ ಈ ವಿಷಯದಲ್ಲಿರುವ ಸಂಶಯವನ್ನು ವ್ಯಕ್ತಪಡಿಸಿರುವರು.

ವಸಾತಿಷು ಸ್ಮ ಚರಥೋಽಸಿತೌ ಪೇತ್ವಾವಿವ ।
ಕದೇದಮಶ್ವಿನಾ ಯುವಮಭಿ ದೇವಾ ಅಗಚ್ಛತಂ ॥

ಎಂಬ ಮಂತ್ರದಲ್ಲಿ ಹೇಳಿರುವಂತೆ ಇವರಲ್ಲಿ ಒಬ್ಬನು ವಸಾತಿಪುತ್ರನು, ಎಂದರೆ ರಾತ್ರಿಪುತ್ರನು, ಇನ್ನೊಬ್ಬನು ಉಷಃ ಪುತ್ರನು ಎಂದಾಗುತ್ತದೆ. ಋಕ್ಸಂಹಿತಾವಾಕ್ಯಗಳಲ್ಲಿರುವ ವಿವರಣೆಗಳಿಂದ ಅಶ್ವಿನೀದೇವತೆಗಳ ಸ್ವರೂಪವನ್ನು ನಿಷ್ಕರ್ಷಿಸುವುದಾದರೆ ಕೆಳಗೆ ಉದಾಹರಿಸಿರುವ ಋಕ್ಕುಗಳ ಆಧಾರಗಳನ್ನು ವಿಮರ್ಶಿಸಬಹುದು.

ತ್ವಷ್ಟಾ ದುಹಿತ್ರೇ ವಹತುಂ ಕೃಣೋತೀತೀದಂ ವಿಶ್ವಂ ಭುವನಂ ಸಮೇತಿ ।
ಯಮಸ್ಯ ಮಾತಾ ಪರ್ಯುಹ್ಯಮಾನಾ ಮಹೋ ಜಾಯಾ ವಿವಸ್ವತೋ ನನಾಶ ॥

असागूहन्नमृतां मर्तेभ्यः कृत्वी सवर्णामददुर्विवस्वते ।
उताश्विनावभरद्यत्तदासीदजहादु द्वा मिथुना सरण्यूः ॥
(ऋ. सं ८०-८१-५, ३)

त्वष्टृवृ तन्न मगळ विवाहकालदल्लि स्वयंवरवन्नु एर्पडिसि सकल प्रपंचद जनरन्नू अल्लि ऒट्टागि सेरुवंते माडिदनु यमन मातेयू विवस्वंतन पत्नियू आद सरण्यूदेविय विवाहवाद नंतर अदृश्यळादळु एंदरे अमर्त्यराद देवतेगळु ई सरण्यूदेवियु मर्त्यनाद विवस्वंतनन्नु विवाहवाद्दरिंद अदु अनुचितवेंदु भाविसि अवळन्नु यारिगू काणदंते मरेसि इट्टरु आग अवरु अवळन्नु सवर्णळन्नागि माडि विवस्वंतनिगे कॊट्टरु अनंतर अवळु अश्विदेवतेगळन्नु हडेदळु मत्तु पुत्रराद अवरन्नु बिट्टु होदळु एंदु ई ऋक्कुगळ अभिप्रायवु मत्तु

यमा चिदत्र यमसूरसूत जिह्वायाग्रं महदा ह्यस्थात् ।
वपूंषि जाता मिथुना सचेते तनोधना तपुषो बुध्न एता ॥
(ऋ सं ३-३१-३)

एंब ऋक्किनल्लि अश्विदेवतेगळ मातेयु यमळरन्नु (अवळ मक्कळन्नु) हडेदळु आ यमळ रिब्बरू सह सशरीरिगळागि तमस्सिन्नु नाशमाडिदरु एंदु हेळिदे अंदरे सायणरु तम्म भाष्यदल्लि **यमसूः** एंब पदक्के **उषोऽभिमानिनी देवता अत्र उषःकाले असूत** एंदु अश्विदेवतेगळ मातेयु उषोदेवतेयु एंदु हेळिरुवुदु सर्वसम्मतवेंदु अनेकरु ऒप्पुत्तारे अल्लदे त्वष्टृवु तन्न मगळाद सरण्यूदेवियन्नु विवस्वंतनिगे मदुवेमाडिकॊट्टुदू अवरिंद अश्विदेवतेगळु उत्पन्नवादुदू बृहद्देवतेयल्लि ईरीति हेळिदे—

अभवन्मिथुनं त्वष्टुः सरण्यूस्त्रिशिराः सह ।
स वै सरण्यूं प्रायच्छत्स्वयमेव विवस्वते ॥
ततः सरण्यूर्यं जज्ञातेऽयमयमौ विवस्वतः ।
तौ चापृच्छ्यौ यमावेव ज्यायांस्ताभ्यां तु वै यमः ॥
स्वष्टुस्तु भर्तुः परोक्षं तु सरण्यूः सदृशीं स्त्रियं ।
निक्षिप्य मिथुनं तस्यां अश्वा भूत्वापचक्रमे ॥
अविज्ञानाद्विवस्वांस्तु तस्यामजनयन्मनुं ।
राजर्षिरभवत्तोऽपि विवस्वानिव तेजसा ॥
स विज्ञाय त्वपक्रान्तां सरण्यूमश्वरूपिणीं ।
त्वाष्ट्र्यां प्रति जगामाशु वाजी भूत्वा सलक्षणः ॥
सरण्यूश्च विवस्वंतं विदित्वा हयरूपिणं ।
मिथुनायोपचक्रामे तां च तत्रारुरोह सः
ततस्तयोस्तु वेगेन शुक्रं रेतसश्च्युवि ।

ಉಷಾಜಿಘ್ರ್ಯಚ್ಛ ಸಾ ತ್ವಷ್ಟಾ ತಚ್ಛುಕ್ರಂ ಗರ್ಭಕಾಮ್ಯಯಾ ॥
ಆಧ್ಯಾತಮಾತ್ತಾಚ್ಛುಕ್ರಾತ್ತು ಕುಮಾರೌ ಸಂಬಭೂವತುಃ ।
ನಾಸತ್ಯಶ್ಚೈವ ದಸ್ರಶ್ಚ ಯೌ ಸ್ತುತಾವಶ್ವಿನಾವಿತಿ ॥
ಇತಿಹಾಸಮಿಮಂ ಯಾಸ್ಕಃ ಸರಣ್ಯೂದೇವತೇ ದ್ವ್ಯಚೇ ।
ವಿವಸ್ವತಶ್ಚ ತ್ವಷ್ಟುಶ್ಚ ತ್ವಷ್ಟೇತಿ ಸಹ ಮನ್ಯತೇ ॥

(ಬೃ ದೇ ೬-೧೬೨ ರಿಂದ ೭-೬)

ತ್ವಷ್ಟೃವಿಗೆ ಸರಣ್ಯೂ ಎಂಬ ಕನ್ಯೆಯೂ ತ್ರಿಶಿರಸ್ಸೆಂಬ ಪುತ್ರನೂ ಇದ್ದರು ಆವನು ತನ್ನ ಮಗಳಾದ ಸರಣ್ಯೂವನ್ನು ವಿವಸ್ವಂತನಿಗೆ ವಿವಾಹ ಮಾಡಿಕೊಟ್ಟನು ಆನಂತರ ವಿವಸ್ವಂತನಿಗೆ ಪತ್ನಿಯಾದ ಸರಣ್ಯೂವಿನಲ್ಲಿ ಯಮ ಮತ್ತು ಯಮಿ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಇವರಿಬ್ಬರೂ ಒಂದಿಗೆ ಹುಟ್ಟಿದ ಅವಳಿಮಕ್ಕಳು. ಅವರಲ್ಲಿ ಯಮನೇ ಹಿರಿಯವನು ಒಂದುದಿನ ಪತಿಯಾದ ವಿವಸ್ವಂತನು ಇಲ್ಲದಿರುವ ವೇಳೆಯಲ್ಲಿ ಸರಣ್ಯೂವು ತನ್ನನ್ನೇ ಹೋಲುವ ಮತ್ತೋರ್ವ ಸ್ತ್ರೀಯನ್ನು ನಿರ್ಮಿಸಿ ತನ್ನ ಅವಳಿಮಕ್ಕಳನ್ನು ಅವಳ ವಶಕ್ಕೆ ಒಪ್ಪಿಸಿ ತಾನು ಅಶ್ವರೂಪವನ್ನು ಧರಿಸಿ ಆ ಸ್ಥಾನವನ್ನು ಬಿಟ್ಟು ವಿವಸ್ವಂತನಿಗೆ ತಿಳಿಯದಂತೆ ಬೇರೆ ಜಾಗಕ್ಕೆ ಹೋಗಿ ಅದೃಶ್ಯಳಾಗಿದ್ದಳು ಆದರೆ ವಿವಸ್ವಂತನಿಗೆ ಇದರ ಅರಿವು ಇಲ್ಲದೆ ಸರಣ್ಯೂವಿಗೆ ಪ್ರತಿನಿಧಿಯಾಗಿದ್ದ ಆ ಸ್ತ್ರೀಶಕ್ತಿಯೊಂದಿಗೆ ಸಂಸಾರದನು ಆದರ ಫಲವಾಗಿ ಮನುವಿನ ಉತ್ಪತ್ತಿಯಾಯಿತು- ಮನುವೂ ಸಹ ತಂದೆಯಂತೆಯೇ ತೇಜಸ್ವಿಯಾಗಿ ರೂಢ ರಾಜರ್ಷಿಯಾದನು ಇವನ ಕೀರ್ತಿಯು ಸಕಲಲೋಕಗಳಲ್ಲಿಯೂ ಹರಡಿತು. ಕೆಲವುಕಾಲದಮೇಲೆ ವಿವಸ್ವಂತನಿಗೆ ನಿಜವಾದ ಅರಿವುಂಟಾಯಿತು ಸರಣ್ಯೂವು ಅಶ್ವರೂಪದಲ್ಲಿ ಹೊರಟುಹೋಗಿದ್ದಾಳೆಂದು ತಿಳಿದನಂತರ ತಾನೂ ಸಹ ಪುರುಷಾಶ್ವರೂಪವನ್ನು ಹೊಂದಿ ತ್ವಷ್ಟೃವಿನ ಪುತ್ರಿಯು ಹೋದ ಸ್ಥಳಕ್ಕೆ ಅವಳನ್ನು ಹಿಂಬಾಲಿಸಿ ಹೊರಟು ಅವಳನ್ನು ಸೇರಲು ಪ್ರಯತ್ನಿಸಿದನು ತನ್ನನ್ನು ಹಿಂಬಾಲಿಸಿ ವಿವಸ್ವಂತನೂ ಅಶ್ವರೂಪನಾಗಿ ಬಂದುದನ್ನು ತಿಳಿದ ಸರಣ್ಯೂವು ಅವನೊಂದಿಗೆ ಸಂಭೋಗಸುಖವನ್ನಿಚ್ಛಿಸಿದಳು. ಆಗ ವಿವಸ್ವಂತನು ಅವಳ ಇಚ್ಛೆಯನ್ನು ನೆರವೇರಿಸಿದನು. ಆವರ ಪರಸ್ಪರವಾದ ಉತ್ಸಾಹಕಾಲದಲ್ಲಿ ವಿವಸ್ವಂತನ ವೀರ್ಯವು ನೆಲದಮೇಲೆ ಬಿದ್ದಿತು ಆಗ ಸರಣ್ಯೂವು ಗರ್ಭಧಾರಣೇಚ್ಛೆಯಿಂದ ಆದನ್ನು ಆಘ್ರಾಣಿಸಿದಳು ಆ ಶುಕ್ರವನ್ನು (ರೇತಸ್ಸನ್ನು) ಮೂಸಿ ನೋಡಿದೊಡನೆಯೇ ಅವಳಿಗೆ ಗರ್ಭೋತ್ಪತ್ತಿಯುಂಟಾಗಿ ಆದರಿಂದ ನಾಸತ್ಯ, ದಸ್ರ ಎಂಬ ಇಬ್ಬರು ಯುವಕರು ಉತ್ಪನ್ನರಾದರು. ಅನಂತರ ಅವರು ಅಶ್ವಿನೀ ದೇವತೆಗಳು ಎಂಬ ಹೆಸರಿನಿಂದ ಕರೆಯಲ್ಪಟ್ಟು ಇವರ ಮಹಿಮೆಯು ಲೋಕಗಳಲ್ಲೆಲ್ಲಾ ಹರಡಿತು ಎಂದಿದೆ

ಅಶ್ವಿನೀದೇವತೆಗಳ ರಥವರ್ಣನೆ ಇತ್ಯಾದಿ

ಅಶ್ವಿನೀದೇವತೆಗಳ ರಥವು ಸುವರ್ಣಮಯವಾದುದು. ಮತ್ತು ಆದರ ಚಕ್ರ ಆಚ್ಚು ಮೊದಲಾದ ಭಾಗಗಳೆಲ್ಲವೂ ಚಿನ್ನದಿಂದಲೇ ಮಾಡಲ್ಪಟ್ಟಿರುವುದು (ಋ ಸಂ. ೪-೪೪-೪, ೧-೧೪೦ ೧, ೪-೫೫-೯, ೪-೭೨೪ ಇತ್ಯಾದಿ). ಅದು ಒಂದು ವಿಲಕ್ಷಣವಾದ ರಥ. ಅದಕ್ಕೆ ಮೂರು ಚಕ್ರಗಳು, ಮೂರು ನೇಮಿಗಳು ಮತ್ತು ಬೇರೆ ಕೆಲವು ಭಾಗಗಳೂ ಮೂರು ಮೂರು ಇರುವುವು. ಅದು ಮನೋವೇಗವುಳ್ಳದ್ದು ಮೂರು ಚಕ್ರದ ರಥವೆಂದರೆ ಅವರೊಬ್ಬರದೇ. ಇನ್ನಾರಿಗೂ ಆ ವಿಧವಾದ ರಥವಿಲ್ಲ.

ಯದಯಾತಂ ಶುಭಸ್ಪತೀ ವರೇಯಂ ಸೂರ್ಯಾಮುಪ ।
ಕ್ವೈಕಂ ಚಕ್ರಂ ವಾಮಾಸೀತ್ ಕ್ವ ದೇಷ್ಟ್ರಾಯ ತಸ್ಥಥುಃ ॥

(ಋ. ಸಂ. ೧೦-೮೫-೧೫)

ಎಂಬಲ್ಲಿ ಸೂರ್ಯಾದೇವಿಯ ವಿವಾಹಕ್ಕೆ ಹೋದಾಗ ಅವರ ರಥದ ಒಂದು ಚಕ್ರವು ಹಾಳಾಗಿ ಹೋಯಿತೆಂದು ಹೇಳಿದೆ

ಈ ವಿಷಯದಲ್ಲಿ ಐತರೇಯಬ್ರಾಹ್ಮಣದಲ್ಲಿ ಒಂದು ಇತಿಹಾಸವಿದೆ—

ಪ್ರಜಾಪತಿಃ ಸವಿತುಃ ದುಹಿತರಂ ಸೂರ್ಯಾಂ ಸೋಮಾಯ ರಾಜ್ಞೇ ಸ್ರಾಯಚ್ಛತ್ । ಯೇ ತ್ವನ್ಯೇ ದೇವಾಃ ತಾಂ ವರಯಿತುಮಾಗಚ್ಛನ್ । ತೇಭ್ಯೋ ವಿವಾಹಾದನಂತರಮೃಕ್ಷ-ಹಸ್ರಮದದಾತ್ । ಯದೇತದಾಶ್ವಿನಂ ನಾಮ ತಸ್ಮಿನ್ದೇವಾ ವಿವಾದಮಕುರ್ವನ್ । ಮಮೇದ-ಮಸ್ತು ಮನೋದಮಸ್ತ್ವಿತಿ । ತೇಽಬ್ರುವನ್ । ಆಜಿಂ ಧಾವಾಮ । ಯೋ ನೋ ಜೇಷ್ಯತಿ ತಸ್ಯೇದಂ ಭವಿಷ್ಯತೀತಿ । ತೇಽಗ್ನೇರ್ಗೃಹಪತೇರುಪರ್ಯಾದಿತ್ಯಂ ಕಾಷ್ಠಾಂ ಕೃತ್ವಾಽಭಿಧಾ-ವನ್ । ಕಾಷ್ಠಾ ಆಜ್ಯಂತ ಉಚ್ಯತೇ । ಅಶ್ವತರೀರಥೇನಾಗ್ನಿರಾಜಿಮಧಾವತ್ । ಗೌಃಖಿರ-ರುಣೈರುಷಾಃ । ಹರಿರಥೇನೇಂದ್ರಃ । ಗರ್ದಭರಥೇನಾಶ್ವಿನೌ । ತತ್ರಾಶ್ವಿನಾವಜಯತಾಂ ॥

ಬ್ರಹ್ಮನು ಸವಿತೃದೇವನ ಸೂರ್ಯಾ ಎಂಬ ಹಸರುಳ್ಳ ಮಗಳನ್ನು ರಾಜನಾದ ಸೋಮನಿಗ ವಿವಾಹಮಾಡಿಕೊಟ್ಟನು. ಆಗ ಇತರ ದೇವತೆಗಳು ಅವಳನ್ನು ವರಿಸುವುದಕ್ಕಾಗಿ ಬಂದರು ವಿವಾಹವಾದನಂತರ ಅವನು ಅವರಿಗೆ ಒಂದುಸಾವಿರ ಋಕ್ಕುಗಳನ್ನು ಕೊಟ್ಟನು ಈ ಋಕ್ಕುಗಳಿಗೆ ಆಶ್ವಿನಋಕ್ಕುಗಳೆಂಬ ಹಸರು ಪ್ರಸಿದ್ಧವಾಯಿತು ಈ ಋಕ್ಕು ಗಳನ್ನು ಅಲ್ಲಿಗೆ ಬಂದಿದ್ದ ದೇವತೆಗಳು ನನಗೆ ಬೇಕು, ತನಗೆ ಬೇಕು ಎಂದು ಪರಸ್ಪರ ವಿವಾದಮಾಡಿದರು. ಅನಂತರ ಅವರು ಒಂದು ಸ್ಪರ್ಧೆಯನ್ನು ಏರ್ಪಡಿಸಿ ಅದರಲ್ಲಿ ಗೆದ್ದವರು ಈ ಋಕ್ಕುಗಳನ್ನು ಪಡೆಯಬಹುದೆಂದು ತಮ್ಮಲ್ಲಿ ತೀ ರ್ಮಾನಮಾಡಿಕೊಂಡರು ಅನಂತರ ಅವರು ಗೃಹಪತಿಯಾದ ಅಗ್ನಿಯ ಬಳಿಯಿಂದ ಆದಿತ್ಯನವರಗೆ ಹೋಗುವುದೇ ಸ್ಪರ್ಧೆಯೆಂದೂ ಅದರಲ್ಲಿ ಯಾರು ಮೊದಲು ಹೋಗಿ ಸೇರುವರೋ ಅವರೇ ಗೆದ್ದವರೆಂದು ನಿಶ್ಚಯಿಸಿಕೊಳ್ಳುವುದೆಂದು ನಿಶ್ಚಯಿಸಿದರು ಆಗ ಅಗ್ನಿಯು ಹೇಸರಕತ್ತೆಯನ್ನು ಕಟ್ಟಿದ ರಥದಿಂದ ಓಡಲು ಸಿದ್ಧನಾದನು ಉಷೋದೇವಿಯು ಕೆಂಪುಬಣ್ಣದ ಗೋವುಗಳನ್ನು ಕಟ್ಟಿದ ರಥದಲ್ಲಿ ಕುಳಿತು ಬಂದಳು ಇಂದ್ರನು ತನ್ನ ಹರೀ ಎಂಬ ಕುದುರೆಗಳನ್ನು ಕಟ್ಟಿದ ರಥವನ್ನು ಹತ್ತಿ ಅಲ್ಲಿಗೆ ಬಂದರು ಅಶ್ವಿನೀದೇವತೆಗಳು ರಾಸಭಾ ಎಂಬ ಕತ್ತೆಗಳನ್ನು ಕಟ್ಟಿದ ತಮ್ಮ ರಥ ವನ್ನು ಹತ್ತಿ ಅಲ್ಲಿಗೆ ಬಂದರು. ಅನಂತರ ಅವರಲ್ಲರೂ ತಮ್ಮ ತಮ್ಮ ವಾಹನಗಳನ್ನೇರಿ ನಿರ್ದಿಷ್ಟಸ್ಥಳವನ್ನು ಸೇರು ವುದಕ್ಕಾಗಿ ಓಡುವಾಗ ಅಶ್ವಿನೀದೇವತೆಗಳಿಗೆ ಜಯವು ಲಭಿಸಿತು ಕಾರಣವಾದ ಒಂದುಸಾವಿರ ಋಕ್ಕುಗಳು ಅವರಿಗೆ ದೊರೆತವು ಆದ್ದರಿಂದಲೇ ಆ ಋಕ್ಕುಗಳಿಗೆ ಆಶ್ವಿನಋಕ್ಕುಗಳೆಂಬ ಹಸರು ಪ್ರಸಿದ್ಧವಾಯಿತು ಎಂಬ ಇತಿಹಾಸದಲ್ಲಿ ಆಶ್ವಿನೀದೇವತೆಗಳ ರಥದ ಶ್ರೇಷ್ಠತೆಯು ಉಕ್ತವಾಗಿದೆ. **ಅಶ್ವಿನೌ** ಎಂಬ ಪದಕ್ಕೆ ಅಶ್ವ (ಕುದುರ)ವುಳ್ಳವರು ಎಂದರ್ಥ ವಾದರೂ ಅವರು ಅಶ್ವಾರೋಹಿಗಳಾದುದರಿಂದ ಆ ಹೆಸರು ಅವರಿಗೆ ಬಂದಿದ ಎಂದು ಎಲ್ಲೆಯೂ ಹೇಳಿಲ್ಲ. ಅವರ ರಥವನ್ನು ಎಳೆಯುವ ಅಶ್ವಗಳು (ಋ. ಸಂ. ೧ ೧೧೭-೨) ಪಕ್ಷಿಗಳು (೬ ೬೩-೬) ಹಂಸಗಳು (೪-೪೫-೪) ಗರುಡಪಕ್ಷಿ ಗಳು (೧ ೧೧೮-೪) ಶ್ಯೇನರೂಪವಾದ ಅಶ್ವಗಳು (೮ ೫-೭) ಎಂದು ಹೇಳಿದೆ. ಆದರೆ ಅವರ ಮುಖ್ಯವಾಹನವು ಯಾಸ್ಕರು ಹೇಳಿರುವಂತೆ ರಾಸಭಾವಶ್ವಿನೋಃ (ನಿ ೨-೫೮) ಅಶ್ವಿನೀದೇವತೆಗಳ ವಾಹನಗಳು ಕತ್ತೆಗಳು ಎಂದು

ಕದಾ ಯೋಗೋ ವಾಜಿನೋ ರಾಸಭಸ್ಯ ಯೇನ ಯಜ್ಞಂ ನಾಸತ್ಯೋಪಯಾಥಃ

(ಋ. ಸಂ. ೧-೩೪-೯)

ತದ್ರಾಸಭೋ ನಾಸತ್ಯಾ ಸಹಸ್ರಮಾಜಾ ಯಮಸ್ಯ ಪ್ರಧನೇ ಜಿಗಾಯ ॥

(ಋ. ಸಂ. ೧ ೧೧೬-೫)

ಇತ್ಯಾದಿ ಋಕ್ಕುಗಳಲ್ಲಿ ರಾಸಭವೇ (ಕತ್ತೆಯೇ) ಅಶ್ವಿನಿದೇವತೆಗಳ ವಾಹನವೆಂದು ಸ್ಪಷ್ಟವಾಗಿ ಹೇಳಿದೆ.

ಆವರನ್ನು ಯಾವಾಗಲೂ ಯಜ್ಞಮಾಡುವವರು ಪ್ರಾತಃಕಾಲಗಳಲ್ಲಿಯೇ ಆಹ್ವಾನಮಾಡುತ್ತಾರೆ ಸೂರ್ಯ ಪುತ್ರಿಯೊಡನೆ ಇವರಿಗೆ ಸಂಬಂಧವಿದೆ ಸೂರ್ಯೆಯೇ ಅವರನ್ನು ವರಿಸಿದಳು (ಋ. ಸಂ. ೭-೬೯-೪) ಅವರಿಬ್ಬರೂ ಅವಳ ಪತಿಯರು (೪-೪೩-೬) ಸೂರ್ಯೆಯು ಅವರ ರಥವನ್ನು ಏರಿದಳು (ಋ. ಸಂ ೫ ೬೩-೫, ೮-೮-೧೦) ಸೂರ್ಯನ ಪುತ್ರಿಯು ಅವರ ರಥವನ್ನು ಏರುತ್ತಾಳೆ(ಋ ಸಂ ೧-೩೪-೫, ೧-೧೧೬-೧೭, ೧-೧೮೮-೫, ೬-೬೩-೫) ಅವರು ಸೂರ್ಯೆಯನ್ನು ತಮ್ಮವಳೆಂದು ಭಾವಿಸುತ್ತಾರೆ (೭-೬೮ ೩) ಮತ್ತು ಅವಳು ರಥದಲ್ಲಿ ಅವರ ಜತೆಯಲ್ಲಿ ಹೋಗುತ್ತಾಳೆ (೮-೮೯-೮) ಇತ್ಯಾದಿ ವರ್ಣನೆಗಳಿವೆ

ಅಶ್ವಿನೀದೇವತೆಗಳು ಮಾಡಿದ ಸಹಾಯಗಳು

ಆವರು ಜನರಿಗೆ ಕಷ್ಟದಲ್ಲಿ ನೆರವಾಗುತ್ತಾರೆ ಎಂಬುದಕ್ಕೆ ಅನೇಕ ಆಖ್ಯಾಯಿಕೆಗಳಿವೆ ಇವುಗಳನ್ನು ಆಯಾ ಸಂದರ್ಭದಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ ಆದರೆ, ಅವುಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ **ವಿವರಿಸಿದೇವೆ—**

ಜುಜುರುಷೋ ನಾಸತ್ಯೋತ ವವ್ರಿಂ ಪ್ರಾಮುಂಚತಂ ದ್ರಾಪಿಮಿವ ಚ್ಯವಾನಾತ್ ।
ಪ್ರಾತಿರತಂ ಜಹಿತಸ್ಯಾಯುರ್ದಸ್ರಾದಿತ್ಪತಿಮಕೃಣುತಂ ಕನೀನಾಂ ॥

(ಋ. ಸಂ ೧-೧೧೬-೧೦)

ಚ್ಯವನನೆಂಬ ಋಷಿಯು ಬಹಳ ವೃದ್ಧನಾಗಿ ದೇಹವು ಶಿಥಿಲವಾಗಿ ಶಕ್ತಿಯಿಲ್ಲದಿರುವಾಗ ಅವನ ಜನರು ಅವನನ್ನು ತ್ಯಜಿಸಿದರು. ಈ ಋಷಿಯು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವರು ಬಂದು ಇವನ ಶಿಥಿಲವಾದ ದೇಹವನ್ನು ಕಳೆದು ಯುವಕನನ್ನಾಗಿ ಮಾಡಿ ಇವನ ಪತ್ನಿಗೆ ಪ್ರಿಯನನ್ನಾಗಿ ಮಾಡಿದರು ಮತ್ತು ಅವನ ಆಯುಸ್ಸನ್ನು ಹೆಚ್ಚಿಸಿದರು ಎಂದಿದೆ. ಇನ್ನಲ್ಲದೆ—

ಯುವಂ ಚ್ಯವನಮಶ್ವಿನಾ ಜರಂತಂ ಪುನರ್ಯುವಾನಂ ಚಕ್ರಥುಃ ಶಚೀಭಿಃ ।

(ಋ ಸಂ. ೧-೧೧೭ ೧೩)

ನಿಷ್ಟೌಗ್ರ್ಯಂ ಪಾರಯಥಃ ಸಮುದ್ರಾತ್ಪುನಶ್ಚ್ಯವಾನಂ ಚಕ್ರಥುರ್ಯುವಾನಂ ।

(ಋ. ಸಂ ೧-೧೧೮-೬)

ಪ್ರ ಚ್ಯವಾನಾಜ್ಜುಜುರುಷೋ ವವ್ರಿಮತ್ಕಂ ನ ಮುಂಚಥಃ ।
ಯುವಾ ಯದೀ ಕೃಥಃ ಪುನರಾ ಕಾಮಮೃಣ್ವೇ ವಧ್ವಃ ॥

(ಋ ಸಂ. ೫-೭೪-೫)

ಉತ ತ್ಯದ್ವಾಂ ಜುರತೇ ಅಶ್ವಿನಾ ಭೂಚ್ಚ್ಯವಾನಾಯ ಪ್ರತೀತ್ಯಂ ಹವಿರ್ದೇ ।

(ಋ. ಸಂ ೭-೬೮ ೬)

ಯುವಂ ಚ್ಯವಾನಂ ಜರಸೋಽಮುಮುಕ್ತಂ ನಿ ಸೇದವ ಊಹಥುರಾಶುಮಶ್ವಂ ।

(ಋ. ಸಂ ೭ ೭೧-೫)

युवं च्यवानं सनयं यथा रथं पुनर्युवानं चरथाय तक्षथुः ।

(ಋ ಸಂ ೧೦-೩೯-೪)

ಈ ಋಕ್ಕುಗಳಲ್ಲಿಯೂ ವೃದ್ಧನಾದ ಚ್ಯವನಋಷಿಯನ್ನು ಯುವಕನನ್ನಾಗಿ ಮಾಡಿದ ವಿಷಯದ ವರ್ಣನೆ ಇದೆ ಶತ ಪಥಬ್ರಾಹ್ಮಣದಲ್ಲಿಯೂ ಈ ವಿಷಯಕವಾದ ವಿಸ್ತಾರವಾದ ಇತಿಹಾಸವಿದೆ ಆದರಂತೆಯೇ.

युवं विश्पलायै धिष्णया मुषीतं भिषजा पुनः कृणुतं युवद्वयुः ।

(ಋ ಸಂ ೧೦೩೯-೬)

ಎಂಬ ಋಕ್ಕಿನಲ್ಲಿ ಕಲಿ ಎಂಬುವನ ಮುಷ್ಪನ್ನು ಹೋಗಲಾಡಿಸಿ ಅವನನ್ನು ಯುವಜನನ್ನಾಗಿ ಮಾಡಿದ ವಿಷಯದ ಪ್ರಸ್ತಾಪವಿದೆ

योभिर्वय्यं विपिपानमुपस्तुतं कलिं योभिर्वित्तजानिं दुवस्यथः ॥

(ಋ. ಸಂ ೧-೧೧೭-೧೫)

ಎಂಬಲ್ಲಿ ಮೇಲೆ ಹೇಳಿದ ಕಲಿ ಎಂಬುವನು ಪತ್ನಿಯನ್ನು ಪರಿಗ್ರಹಿಸಿ ಮದುವೆಯಾದಾಗ ಒಬಸಿಗ ತಮ್ಮ ನೆರವನ್ನು ನೀಡಿ ಅನೇಕ ಸಹಾಯಗಳನ್ನು ಮಾಡಿದರೆಂದು ಹೇಳಿದೆ.

ಮತ್ತು ಅವರು ವಿಮದನ ಪತ್ನಿಯಾದ ಯುವತಿಯರಿಗೋಸ್ಕರ ಒಂದು ರಥವನ್ನೂ (೧-೧೧೭-೧೯)ಅಥವಾ ಅವಸಿಗೆ ಓರ್ವ ಪತ್ನಿಯನ್ನೂ (೧-೧೧೭-೧) ಅನುಗ್ರಹಿಸಿದರು ಆವಳು ಪುರುಮಿತ್ರನ ಪುತ್ರಿಯಾಗಿದ್ದಳೆಂದು ತೋರುತ್ತದ (ಋ ಸಂ ೧-೧೧೭ ೨೦, ೧೦-೫೯ ೬) ಮತ್ತು ಅವಳ ಹೆಸರು ಕಮಧ್ಯ (೧೦ ೬೫-೧೩)

ಕೃಷ್ಣ ಎಂಬುವನ ಮಗನಾದ ವಿಷ್ಣಕಸಿಗೆ ಕಳೆದುಹೋಗಿದ್ದ ಅವನ ಮಗನನ್ನು ತಂದು ಒಪ್ಪಿಸಿದರು (ಋ. ಸಂ. ೧-೧೧೬-೨೫, ೧೦-೬೫-೧೩) ಮತ್ತು ಋ. ಸಂ ೮-೬೫ ೧೩ರಲ್ಲಿಯ ಋಕ್ಕುಗಳಲ್ಲಿ ವಿಷ್ಣಿಕ ಮತ್ತು ವಿಷ್ಣಾಪುಗಳ ಹೆಸರುಗಳು ಸೂಚಿತವಾಗಿವೆ

ಭುಜ್ಯುನಿನ ಕಥೆಯು ಸರ್ವರಿಗೂ ಹೇಳಲ್ಪಟ್ಟಿದೆ ಭುಜ್ಯುವು ತುಗ್ರ ಎಂಬ ರಾಜನ ಪುತ್ರನು ಇವನು ಸಮುದ್ರಯಾನಮಾಡುತ್ತಿರುವಾಗ ಮುಳುಗಿಹೋಗುತ್ತಿರಲು ಆಲೆಗಳ ಮಧ್ಯದಲ್ಲಿ ಭುಜ್ಯುವು ಒಂದು ಮರದ ತುಂಡನ್ನು ಹಿಡಿದುಕೊಂಡು ತೇಲಾಡುತ್ತಿದ್ದನು ಆಗ ಅವನು ಅಶ್ವಿನೀದೇವತೆಗಳನ್ನ ಕರೆದುಕ್ಕನು ಆಗವೇ ತೀರದ ಮಹಾಸಾಗರದಲ್ಲಿ ನೂರು ಹುಟ್ಟುಗಳಿಂದ ಕೂಡಿದ ನೌಕೆಯಲ್ಲಿ ಅವರನ್ನ ಕೂರಿಸಿಕೊಂಡು ಅಶ್ವಿನೀದೇವತೆಗಳು ಆವನ ಮನೆಗೆ ಕರೆದುಕೊಂಡು ಹೋದರು ಆಕಾಶದಲ್ಲಿ ಹಾರುವಂತೆ ತೋರುತ್ತಿದ್ದ, ಒಡಕುಗಳಿಲ್ಲದ ಹದಿನಾಲ್ಕಿ ಅಥವಾ ಏಳ್ಕೆಗಳುಳ್ಳ ನಾಲ್ಕು ದೋಣಿಗಳಲ್ಲಿ, ಅಥವಾ ನೂರು ಪಾದಗಳು ಮತ್ತು ಆರು ಕುದುರೆಗಳುಳ್ಳ ಹಾರುವ ಮೂರು ರಥಗಳಲ್ಲಿ ಅಥವಾ ಮನೋವೇಗವುಳ್ಳ ತಮ್ಮ ರಥದಲ್ಲಿ ವೇಗದಾಲಿಗಳಾಗಿ ಹಾರಿಹೋಗುವ ತಮ್ಮ ಅಶ್ವಗಳ ಸಹಾಯದಿಂದ ಭುಜ್ಯುವನ್ನು ಕುಳ್ಳಿರಿಸಿಕೊಂಡು ಒದು ಅವನ ಮನೆಗೆ ತೀರಿಸಿದರು. (೧-೧೧೬-೩,೪,೫, ೧-೧೧೭-೧೪,೧೫ , ೧-೧೮೨-೫,೬,೭ , ೭-೬೮-೭ ; ೧ ೧೧೭ ೬,೭೦ , ೧ ೧೧೪-೬ , ೧ ೧೧೯-೪ , ೧ ೧೫೪-೩ , ೬-೬೩-೬ ; ೭-೬೯-೭ ೪-೫-೩೨ , ೧೦-೫೯-೪ , ೧೦ ೪೭-೭ , ೧೦-೬೫ ೧೨ , ೧೦ ೧೪೩-೫)

ಯದ್ಧದಲ್ಲಿ **ವಿಶ್ಪಲಾ** ಎಂಬ ಸ್ತ್ರೀಯ ಕಾಲು ಕತ್ತರಿಸಿಹೋಗಲು ಅವಳು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿದಾಗ ಅವರು ಬಂದು ಅವಳಿಗೆ ಕಬ್ಬಿಣದ ಕಾಲನ್ನು ಒದಗಿಸಿಕೊಟ್ಟು ಕಾಪಾಡಿದರೆಂದು ಋ. ಸಂ ೧-೧೧೭-೧೦, ೧-೧೧೬ ೧೫; ೧ ೧೧೭-೧೧ , ೧-೧೧೪-೮ , ೧೦ ೬೯-೮ ಎಂಬ ಋಕ್ಕುಗಳಲ್ಲಿ ಹೇಳಿದೆ.

ಅಶ್ವಿನೀದೇವತೆಗಳ ವಾಹನವಾದ ರಾಸಭವು ಕೋಳಿನ ರೂಪದಲ್ಲಿದ್ದಾಗ ಋಜ್ರಾಶ್ವ ಎಂಬುವನು ತಾನು ಕಾಯುತ್ತಿದ್ದ ಕುರಿಗಳ ಮಂದೆಯಲ್ಲಿ ಒಂದುನೂರು ಕುರಿಗಳನ್ನು ಕತ್ತರಿಸಿ ಆ ತೋಳಕ್ಕೆ ಆಹಾರವಾಗಿ ಕೊಟ್ಟನು. ಆವರಿಂದ ಅವನ ತಂದೆಗೆ ಕೋಪಬಂದು ಋಜ್ರಾಶ್ವನ ಕಣ್ಣನ್ನು ಕೀಳಿಸಿ ಕುರುಡನನ್ನಾಗಿ ಮಾಡಿದನು. ಆಗ ತೋಳವು ಅಶ್ವಿನೀದೇವತೆಗಳನ್ನು ಸ್ತುತಿಸಿತು. ಆವರು ತುಷ್ಟರಾಗಿ ಋಜ್ರಾಶ್ವನಿಗೆ ಕಣ್ಣನ್ನು ಕೊಟ್ಟರು. (ಋ. ಸಂ. ೧-೧೧೬-೧೬, ೧-೧೧೭-೧೭,೧೮) ಋ. ಸಂ. ೧-೧೦೦ ೧೭ನೆಯ ಋಕ್ಕಿನಲ್ಲಿ ಋಜ್ರಾಶ್ವನೆಂಬುವನು ಇಂದ್ರನನ್ನು ಸ್ತೋತ್ರ ಮಾಡಿದ ವಿಷಯವಿದೆ.

ಪಾರಾವೃಜನೆಂಬುವನು ಕುರುಡನೂ ಕುಂಟನೂ ಆಗಿದ್ದನು ಮತ್ತು ಅವನು ಜಾತಿಯಲ್ಲಿ ಸೇರಿಸಲ್ಪಟ್ಟರ ಲಿಲ್ಲ. ಆವನಿಗೆ ಅಶ್ವಿನೀದೇವತೆಗಳು ನೋಡುವ ದೃಷ್ಟಿಯನ್ನೂ, ನಡೆಯುವ ಶಕ್ತಿಯನ್ನೂ ಕೊಟ್ಟರು ಎಂದರೆ ಕಣ್ಣುಗಳನ್ನೂ ಕಾಲುಗಳನ್ನೂ ಕೊಟ್ಟು ಅನುಗ್ರಹಿಸಿದರು (ಋ. ಸಂ. ೧-೧೧೭-೮) ಪಾರಾವೃಜನೆಂಬುವನ ಹೆಸರು ಇಂದ್ರನ ವಿಷಯದಲ್ಲಿ ಪ್ರಸ್ತಾಪಬಂದಾಗ ಋ ಸಂ. ೩-೧೩-೧೨, ೩ ೧೫-೭ ಎಂಬ ಋಕ್ಕುಗಳಲ್ಲಿ ಸೂಚಿತ ವಾಗಿರುವುದು.

ರೇಭನೆಂಬ ಋಷಿಯನ್ನು ದುಷ್ಟರು ಕೈಕಾಲು ಕಟ್ಟಿಹಾಕಿ ಒಂದು ಪಾಳುಭಾವಿಯಲ್ಲಿ ಹಾಕಿದ್ದರು ಒಂಭತ್ತು ಹಗಲು ಹತ್ತು ರಾತ್ರಿಗಳ ಪರ್ಯಂತರ ಅವನು ಅಲ್ಲಿಯೇ ಬಿದ್ದಿದ್ದು ಸಾಯುವ ಸ್ಥಿತಿಯಲ್ಲಿದ್ದನು. ಅವನನ್ನು ಅಶ್ವಿನೀದೇವತೆಗಳು ಸೋಮಯಸವನ್ನು ಸೌಟಿನಿಂದ ಎತ್ತುವಂತೆ ಭಾವಿಯಿಂದ ಮೇಲಕ್ಕೆತ್ತಿ ಜೀವದಾನ ಮಾಡಿದರು (ಋ. ಸಂ ೧-೧೧೨-೫, ೧-೧೧೬-೨೪, ೧-೧೧೭ ೧೨, ೧-೧೧೭-೪, ೧೦-೩೯-೯)

ವಂದನ ಎಂಬುವನೂ ಇದೇರೀತಿ ದುಷ್ಟರಿಂದ ಅಪಹರಿಸಲ್ಪಟ್ಟು ಕತ್ತಲೆಯಪ್ರದೇಶದಲ್ಲಿ (ಹಳ್ಳದಲ್ಲಿ) ಹಾಕಿ ದ್ದಾಗ ಅವನನ್ನು ಅಶ್ವಿನೀದೇವತೆಗಳು ಅಪಾಯದಿಂದ ಪಾರುಮಾಡಿ ಅವನನ್ನು ಬೆಳಕಿಗೆ ತಂದರು. (ಋ ಸಂ. ೧-೧೧೨-೫, ೧-೧೧೬ ೧೧, ೧-೧೧೭-೫, ೧-೧೧೮-೬, ೧೦-೩೯-೮, ೧-೧೧೯-೬,೭)

ಪಜ್ರವಂಶೀಯನಾದ **ಕಕ್ಷೀವಂತ**ನಿಗೆ ಯಥೇಚ್ಛವಾಗಿ ವರಗಳನ್ನು ಕೊಟ್ಟು ನೂರಾರು ಜಾಡಿತುಂಬ ಮದ್ಯ ಅಥವಾ ಮಧುವನ್ನು ಜರಡಿಯಿಂದ ಸುರಿಯುವಂತೆ ಕುದುರೆಯ ಕಾಲು ಗೊರಸಿನಿಂದ ಸುರಿಸಿದರು (ಋ ಸಂ. ೧-೧೧೬ -೭, ೧-೧೧೭-೬)

ಅತ್ರಿ ಎಂಬ ಋಷಿಯು ದ್ವೇಷಾಸೂಯೆಯಿಂದ ಅಂಧಕಾರಾವೃತವಾದ, ಮತ್ತು ಬೆಂಕಿಯಿಂದ ಉರಿಯುತ್ತಿ ರುವ ದೊಡ್ಡ ಕಮರಿಯಲ್ಲಿ ಹಾಕಲ್ಪಟ್ಟು ತೊಂದರೆಪಡುತ್ತಿರುವಾಗ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವರುಬಂದು ಬೆಂಕಿಯನ್ನು ಹಿಮುದಿಂದ ಶಮನಮಾಡಿ ಆಹಾರಾದಿಗಳನ್ನು ಕೊಟ್ಟು ಸಂತೈಸಿ ಅವನನ್ನು ಆ ಅವಸ್ಥೆಯಿಂದ ಪಾರು ಮಾಡಿದರು (ಋ. ಸಂ. ೧-೧೧೭-೭; ೧-೧೧೬-೮, ೧-೧೧೭-೩, ೧-೧೧೮-೭, ೫-೭೮-೫, ೫, ೬, ೭-೭೧ ೫: ೮-೬೫- ೩, ೭, ೮, ೯, ೧೦-೩೯-೯) ಋ. ಸಂ. ೧೦-೮೦-೩ನೆಯ ಋಕ್ಕಿನಲ್ಲಿ ಅತ್ರಿಯನ್ನು ಅಗ್ನಿಯು ರಕ್ಷಿಸಿದನೆಂದು ಸೂಚಿತವಾಗಿದೆ.

ವಧ್ರಿಮತೀ ಎಂಬುವಳು ತನಗೆ ಮಕ್ಕಳಿಲ್ಲದೆ ಬಂಜೆಯಾಗಿದ್ದುದರಿಂದ ಅಶ್ವಿನೀದೇವತೆಗಳನ್ನು ಪ್ರಾರ್ಥಿ ಸಲು ಅವರು ಅವಳಿಗೆ ಹಿರಣ್ಯಹಸ್ತನೆಂಬ ಓರ್ವ ಪುತ್ರನನ್ನು ಅನುಗ್ರಹಿಸಿದರು. (ಋ. ಸಂ. ೧-೧೧೬-೧೫, ೧-೧೧೭-೩೪, ೬-೬೩-೭, ೧೦-೩೯-೭)

ಘೋಷಾ ಎಂಬ ಸ್ತ್ರೀಯು ಮದುವೆಯಾಗದೆ ತನ್ನ ತಂದೆಯ ಮನೆಯಲ್ಲಿಯೇ ಇದ್ದುದರಿಂದ ಅವಳ ಪ್ರಾರ್ಥನೆಯಂತೆ ಅಶ್ವಿನೀದೇವತೆಗಳು ಅವಳಿಗೆ ಯೋಗ್ಯನಾದ ಪತಿಯನ್ನು ಅನುಗ್ರಹಿಸಿದರು. (ಋ ಸಂ. ೧-೧೧೭-೭ ೧೦-೩೯-೩,೬, ೧೦ ೪೦-೫). ಋ. ಸಂ. ೧-೧೧೭ ೭ನೇ ಋಕ್ಕಿನ ಭಾಷ್ಯದಲ್ಲಿ ಈ ಘೋಷಾ ಎಂಬ ಸ್ತ್ರೀಯು ಕುಷ್ಠರೋಗದಿಂದ ನರಳುತ್ತಿದ್ದಳೆಂದೂ ಆ ರೋಗವನ್ನು ಅಶ್ವಿನೀದೇವತೆಗಳು ವಾಸಿಮಾಡಿದರೆಂದೂ ಸಾಯಣರು ಹೇಳಿದ್ದಾರೆ ೧೦ನೆಯ ಮಂಡಲದಲ್ಲಿ ಈ ಘೋಷಾ ಎಂಬ ಸ್ತ್ರೀಯಿಂದ ದೃಷ್ಟವಾದ ಎರಡು ಸೂಕ್ತಗಳನ್ನೆ (೩೯,೪೦ ಸೂಕ್ತಗಳು)

ಶಯು ಎಂಬುವನ ಹಸುವು ಮುದಿಯಾಗಿ ಕರುವನ್ನು ಹಾಕದಿರುವಾಗ ಅಶ್ವಿನೀದೇವತೆಗಳು ಅದಕ್ಕೆ ಹಾಲುಕೊಡುವ ಶಕ್ತಿಯನ್ನುಂಟುಮಾಡಿದರು (ಋ. ಸಂ ೧-೧೧೬-೨೨, ೧-೧೧೭ ೨೦, ೧ ೧೧೮-೮, ೧-೧೧೯-೬, ೧-೩೯-೧೩)

ಪೇದು ವೆಂಬ ರಾಜನಿಗೆ ಅಶ್ವಿನೀದೇವತೆಗಳು ಇಂದ್ರನಂತೆ ಅತಿಬಲಶಾಲಿಯಾದ ಒಂದು ಬೀಜಕುದುರೆಯನ್ನು ಕೊಟ್ಟರೆಂದೂ, ಅದರಿಂದ ಅವನು ತನ್ನ ಶತ್ರುಗಳನ್ನು ಗೆದ್ದು ಒಹಳವಾದ ವಸ್ತುವಾಹನಾದಿಗಳನ್ನು ಪಡೆದನೆಂದೂ ಹೇಳಿದೆ (ಋ ಸಂ ೧ ೧೧೬-೬, ೧-೧೧೭-೯, ೧-೧೧೮-೯, ೧-೧೧೯ ೧೦, ೬-೬೩-೫, ೧೦-೩೯-೧೦)

ಇದಲ್ಲದೆ ಒಂದನೇ ಮಂಡಲದ ೩,೧೧೬,೧೧೭,೧೧೮,೧೧೯ನೆಯ ಸೂಕ್ತಗಳಲ್ಲಿ ಹೇಳಿರುವಂತೆ ಈ ಅಶ್ವಿನೀದೇವತೆಗಳು ಅನೇಕ ಮನುಷ್ಯರಿಗೆ ಸಹಾಯವನ್ನು ಮಾಡಿರುವುದಲ್ಲದೆ ಪಶುಪಕ್ಷಿಗಳಿಗೂ ಉಪಕಾರ ಮಾಡಿರುವರೆಂದು ಹೇಳಿದೆ ಈ ಸಂದರ್ಭದಲ್ಲಿ–ಒಂದು ತೋಳವು ಒಂದು ಗುಬ್ಬಚ್ಚಿಯನ್ನು ಕಚ್ಚಿಕೊಂಡು ಹೋಗುತ್ತಿರುವಾಗ ಆ ಗುಬ್ಬಚ್ಚಿಯ ಪ್ರಾರ್ಥನೆಯಂತೆ ಅದನ್ನು ಆ ತೋಳನ ಬಾಯಿಂದ ಬಿಡಿಸಿ ಕಾಪಾಡಿದರೆಂದು ಋ ಸಂ ೧-೧೧೬ ೧೪, ೧-೧೧೭-೧೬, ೧-೧೧೮-೮, ೧೦-೩೯-೧೩ ಎಂಬ ಋಕ್ಕುಗಳಲ್ಲಿ ಹೇಳಿದೆ ಈ ವಿಷಯಗಳಲ್ಲದೆ ಅಶ್ವಿನೀದೇವತೆಗಳ ಸಂಬಂಧವಾದ ಇನ್ನೂ ಅನೇಕ ವಿಷಯಗಳಿರುವವು ಅವುಗಳನ್ನು ಆಯಾ ಸಂದರ್ಭಗಳಲ್ಲಿ ವಿವರಿಸಲಾಗುವುದು

ಸಾಯಣಭಾಷ್ಯಂ

ಪ್ರತಿ ವಾಂ ರಥಮಿತಿ ದಶರ್ಚಂ ದ್ವಾದಶಂ ಸೂಕ್ತಂ । ಪ್ರತಿ ವಾಂ ದಶಾಶ್ವಿನಂ ತು ತಚ್ಚತ್ಯನುಕ್ರಮಣಿಕಾ । ಋಷಿರ್ವಸಿಷ್ಠಃ । ಛಂದಸ್ತ್ರಿಷ್ಟುಪ್ । ತುಹ್ಯಾದಿಪರಿಭಾಷಯೈತದಾದೀನ್ಯಷ್ಟ ಸೂಕ್ತಾನ್ಯಶ್ವಿದೇವತ್ಯಾನಿ । ಪ್ರಾತರನುವಾಕ ಆಶ್ವಿನೇ ಕ್ರತೌ ಶ್ರೌಷ್ಟುಭೇ ಛಂದಸ್ಯೇತದಾದಿಸೂಕ್ತಸಪ್ತಕಂ ದ್ವಿತೀಯವರ್ಜಂ ಶಂಸ್ಯಂ । ತಥಾ ಚ ಸೂತ್ರಂ । ಪ್ರತಿ ವಾಂ ರಥಮಿತಿ ಸಪ್ತಾನಾಂ ದ್ವಿತೀಯಮುದ್ಧರೇತ್ । ಆ-೪-೧೫ ॥ ಇತಿ ॥

ಅನುವಾದವು—ಪ್ರತಿ ವಾಂ ರಥಂ—ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ **ಪ್ರತಿ ವಾಂ ದಶಾಶ್ವಿನಂ ತು** ಎಂದು ಹೇಳಿರುವುದು. ಈ ಸೂಕ್ತಕ್ಕೆ ವಸಿಷ್ಠನು ಋಷಿಯು, ತ್ರಿಷ್ಟುಪ್ ಛಂದಸ್ಸು. ಈ ಸೂಕ್ತದಿಂದ ಮುಂದಿನ ಎಂಟು ಸೂಕ್ತಗಳಿಗೆ ಆಶ್ವಿನೀದೇವತೆಗಳೇ ದೇವತೆಯು. ಪ್ರಾತರನುವಾಕಮಂತ್ರಪರನಕಾಲದಲ್ಲಿ ಆಶ್ವಿನಕ್ರತು ಸಂಬಂಧವಾದ ತ್ರಿಷ್ಟುಪ್ ಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದಿಂದ ಮುಂದಿನ ಏಳುಸೂಕ್ತಗಳ—ಎರಡನೆಯ ಸೂಕ್ತವನ್ನು ಬಿಟ್ಟು-ವಿಧಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಪ್ರತಿ ವಾಂ ರಥಮಿತಿ ಸಪ್ತಾನಾಂ ದ್ವಿತೀಯಮುದ್ಧರೇತ್** ಎಂಬ ಸೂತ್ರದಿಂದ (ಆ ೪-೧೫) ವಿವೃತವಾಗಿರುವುದು.

ಸೂಕ್ತ—೬೪

ಮಂಡಲ—೭ ॥ ಅನುವಾಕ—೪ ॥ ಸೂಕ್ತ—೬೭ ॥
ಅಷ್ಟಕ—೫ ॥ ಅಧ್ಯಾಯ—೫ ॥ ವರ್ಗ—೧೨, ೧೩ ॥
ಸೂಕ್ತದಲ್ಲಿರುವ ಮಕ್ಷಂಖ್ಯೆ—೧೦ ॥
ಋಷಿಃ—ವಸಿಷ್ಠಃ ॥
ದೇವತಾ—ಅಶ್ವಿನೌ ॥
ಛಂದಃ—ತ್ರಿಷ್ಟುಪ್ ॥

ಸಂಹಿತಾಪಾಠಃ

ಪ್ರತಿ ವಾಂ ರಥಂ ನೃಪತೀ ಜರಧ್ಯೈ ಹವಿಷ್ಮತಾ ಮನಸಾ ಯಜ್ಞಿಯೇನ ।
ಯೋ ವಾಂ ದೂತೋ ನ ಧಿಷ್ಣ್ಯಾವಜೀಗರಚ್ಛಾ ಸೂನುರ್ನ ಪಿತರಾ ವಿವಕ್ಮಿ ।

ಪದಪಾಠಃ

ಪ್ರತಿ । ವಾಂ । ರಥಂ । ನೃಪತೀ ಇತಿ ನೃ-ಪತೀ । ಜರಧ್ಯೈ । ಹವಿಷ್ಮತಾ । ಮನಸಾ । ಯಜ್ಞಿಯೇನ ।
ಯಃ । ವಾಂ । ದೂತಃ । ನ । ಧಿಷ್ಣ್ಯಾ । ಅಜೀಗರಃ । ಅಚ್ಛ । ಸೂನುಃ । ನ । ಪಿತರಾ । ವಿವಕ್ಮಿ ॥ ೧ ॥

ಸಾಯಣಭಾಷ್ಯಂ

ಹೇ ನೃಪತೀ ನೃಣಾಮೃತ್ವಿಗ್ಯಜಮಾನಾನಾಂ ಸ್ವಾಮಿನಾವಶ್ವಿನೌ ವಾಂ ಯುವಯೋ ರಥಂ ಜರಧ್ಯೈ । ಜರಾ ಸ್ತುತಿಃ । ಸ್ತೋತುಂ ಪ್ರತಿ ಗಚ್ಛಾಮೀತಿ ಶೇಷಃ । ಕೇನ ಸಾಧನೇನೇತಿ ತದುಚ್ಯತೇ । ಹವಿಷ್ಮತಾ ಹವಿರ್ಯುಕ್ತೇನ ಯಜ್ಞಿಯೇನ ಯಜ್ಞಾರ್ಹೇಣ ಮನಸಾ ಸ್ತೋತ್ರೇಣ । ಯೋ ರಥೋ ವಾಂ ಹೇ ಧಿಷ್ಣ್ಯಾ ಧಿಷಣಾರ್ಹೌ । ಧಿಷಣಾ ಸ್ತುತಿಃ । ವಾಂ ಯುವಾಂ ದೂತೋ ನ ದೂತ ಇವಾಜೀಗರಃ ಜಾಗರಯತಿ ಪ್ರಬೋಧಯತಿ ಅಸ್ಮಾನ್ಪ್ರತಿ ಗಂತುಂ ತಂ ರಥಮುಚ್ಛಾ ವಿವಕ್ಮಿ । ಆವಚ್ಮಿ । ಪ್ರಬೋಧನೇ ದೃಷ್ಟಾಂತಃ । ಸೂನುರ್ನ ಪಿತರಾ ಪುತ್ರೋ ಮಾತಾಪಿತರಾವಿವ । ಅಥವಾತ್ರ ಯೋ ರಥೋ ಯುವಾಮಜೀಗರಃ ತೇನ ರಥೇನ ಗಂತುಂ ಬುಧ್ಯಮಾನೌ ಯುವಾಮುಚ್ಛಾ ವಿವಕ್ಮೀತಿ ವಾ ಯೋಜ್ಯಂ ॥

ಪ್ರತಿಪದಾರ್ಥ

ನೃಪತೀ—ಋತ್ವಿಗ್ಯಜಮಾನಾದಿ ಮಾನವರಿಗೆ ಸ್ವಾಮಿಗಳಾದ ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮ್ಮ । **ರಥಂ**—ರಥವನ್ನು । **ಯಜ್ಞಿಯೇನ**—ಯಜ್ಞಾರ್ಹವಾದುದೂ । **ಹವಿಷ್ಮತಾ**—ಹವಿಸ್ಸಿನಿಂದ ಯುಕ್ತವಾದುದೂ ಆದ । **ಮನಸಾ**—ಸ್ತೋತ್ರದಿಂದ । **ಜರಧ್ಯೈ**—ಸ್ತುತಿಸುವುದಕ್ಕಾಗಿ । **ಪ್ರತಿ**—ಸಮಿಾಪಿಸುತ್ತೇನೆ । **ಧಿಷ್ಣ್ಯಾ**—ನಮ್ಮ ಸ್ತುತಿಗೆ ಪಾತ್ರರಾದ ಎಲೈ ಅಶ್ವಿನೀದೇವತೆಗಳೇ । **ಯಃ**—ಯಾವ ನಿಮ್ಮ ರಥವು । **ಸೂನುಃ**—ಪುತ್ರನು । **ಪಿತರಾ**—ತನ್ನ ತಂದೆತಾಯಿಗಳನ್ನು ಆದರದಿಂದ ಎಬ್ಬಿಸುವಂತೆ । **ವಾಂ**—ನಿಮ್ಮನ್ನು । **ದೂತೋ ನ**—ದೂತನಂತೆ । **ಅಜೀಗರಃ**—ಎಬ್ಬಿಸುವುದೋ । (**ತಂ**—ಅಂತಹ ನಿಮ್ಮ ರಥವನ್ನು) **ಅಚ್ಛಾ ವಿವಕ್ಮಿ**—ಸ್ತುತಿಸುತ್ತೇನೆ.

ಭಾವಾರ್ಥ

ಋತ್ವಿಗ್ಯಜಮಾನರಾದಿಯಾಗಿ ಸಕಲ ಮಾನವರಿಗೂ ಪ್ರಭುಗಳಾದ ಎಲೈ ಅಶ್ವಿನೀದೇವತೆಗಳೇ, ನಾನು ಹವಿಸ್ಸನ್ನು ಸಿದ್ಧಪಡಿಸಿಕೊಂಡು ಯಜ್ಞಾದಿ ಕರ್ಮಗಳಲ್ಲಿ ಪರಿಸಲುಯೋಗ್ಯವಾದ ಸ್ತೋತ್ರದಿಂದ ನಿಮ್ಮ ರಥವನ್ನು ಸ್ತುತಿಸುವುದಕ್ಕಾಗಿ ಸಮೀಪಿಸುತ್ತೇನೆ ನನ್ನ ಸ್ತುತಿಗೆ ಪಾತ್ರರಾದ ಎಲೈ ಅಶ್ವಿನೀದೇವತೆಗಳೇ ಪುತ್ರನು ತನ್ನ ತಂದೆ ತಾಯಿಗಳನ್ನು ಆದರದಿಂದ ಎಬ್ಬಿಸುವಂತೆ ಯಾವ ನಿಮ್ಮ ರಥವು ನಿಮ್ಮನ್ನು ದೂತನಂತೆ ಎಬ್ಬಿಸುವುದೋ ಅಂತಹ ರಥವನ್ನು ನಾನು ಸ್ತುತಿಸುತ್ತೇನೆ.

English Translation

Lords of men, (I approach) to adore your chariot with devout praise and oblation, I address it as if it were a messenger to awaken you, adorable deities, as a son (addresses) his parents.

ಸಂಹಿತಾಪಾಠಃ

अशोच्यग्निः समिधानो अस्मे उषो अदृश्रन्तमसश्चिदन्ताः ।
अचेति केतुरुषसः पुरस्ताच्छ्रियो दिवो दुहितुर्जायमानः ॥ ೨ ॥

ಪದಪಾಠಃ

अशोचि । अग्निः । सम्ऽइधानः । अस्मे इति । उषो इति । अदृश्रन् । तमसः । चित् । अन्ताः ।
अचेति । केतुः । उषसः । पुरस्तात् । श्रियै । दिवः । दुहितुः । जायमानः ॥ ೨ ॥

ಸಾಯಣಭಾಷ್ಯಂ

अस्मे अस्माभिः समिधानः समिध्यमानः सन्नग्निरशोचि । दीप्यते । तमसश्चित्तमसोऽप्यन्ताः पर्यन्ताः प्रदेशा उषो अदृश्रन् । उषदृश्यन्ते सर्वैः । केतुः सर्वस्य प्रज्ञापकः सूर्यो दिवो दुहितुरुषसः पुरस्ताच्छ्रेष्ठं पूर्वस्यां दिशि श्रियै शोभायै जायमानः सन्न चेति । ज्ञायते । यस्मादेवं तस्माद्युवयोरागमनसमयः । अत आगच्छतमिति शेषः ॥

ಪ್ರತಿಪದಾರ್ಥ

अस्मे—ನಮ್ಮಿಂದ । समिधानः—ಚೆನ್ನಾಗಿ ಹೊತ್ತಿಸಲ್ಪಟ್ಟ । अग्निः—ಅಗ್ನಿಯು । अशोचि—ಪ್ರಕಾಶಿಸುತ್ತಿದ್ದಾನೆ । तमसश्चित्—ಅಂಧಕಾರದಿಂದ ಆವೃತವಾದ । अन्ताः—ಆಕಾಶದ ಅಂಚುಗಳೂ ಸಹ ।

उषो अदृश्रन्—समीपदल्लिरुव जनरिंद **काणल्पडुत्तवे**। **केतुः**—सकल जगत्तिगू प्रज्ञापक नाद सूर्यनु। **दिवः दुहितुः**—स्वर्गद अथवा अंतरिक्षद पुत्रियेसिसिद। **उषसः**—उषोदेवियु। **पुरस्तात्**—पूर्वभागदल्लि एंदरे पूर्वदिक्किनल्लि। **श्रियै**—प्रकाशिसुवुदक्काग। **जायमानः**—उदयसिदवनागि। **अचेति**—सर्वरिंदलू तिळियल्पडुत्तानॆ.

भावार्थ

ईदिन प्रातःकालदल्लि यज्ञार्थवागि नम्मिंद हॊत्तिसल्पट्ट अग्नियु जाज्वल्यमानवागि बॆळगुत्तिदानॆ. इदुवरॆगू (रात्रियल्लि) अंधकार (कत्तलिनिंद) आवृतवागिद्द आकाशद सुत्तलू बॆळकु हरियुत्तिरुवुदरिंद सकललोकगळ प्रज्ञापकनाद सूर्यनु, स्वर्गपुत्रियाद उषादेवियन्नु हिंबालिसुत्ता पूर्वदिक्किनल्लि उदयिसुत्तिरुवुदन्नु सकलजनरू नोडुत्तारॆ.

English Translation

Kindled by us, Agni blazes, the extremities of the darkness are seen nigh at hand, the banner (of the sun) is perceived rising with the glory on the east of the dawn, the daughter of heaven.

संहितापाठः

अभि वां नूनमश्विना सुहोता स्तोमैर्ऋषक्ति नासत्या विवक्वान् ।

पूर्वीभिर्यातं पथ्याभिरर्वाक्स्वर्विदा वसुमता रथेन ॥ ५ ॥

पदपाठः

अभि । वां । नूनं । अश्विना । सुऽहोता । स्तोमैः । ऋषक्ति । नासत्या । विवक्वान् ।

पूर्वीभिः । यातं । पथ्याभिः । अर्वाक् । स्वःऽविदा । वसुऽमता । रथेन ॥ ५ ॥

सायणभाष्यं

हे अश्विना वां युवां सुहोता सुष्ठु देवानां स्तोता विवक्वान् स्तुतीनां वक्ताहं हे नासत्या सत्यभूतौ । इदमश्विनावित्यत्र योज्यं । स्तोमैः सिषक्ति । सेवते । अतोऽर्वागस्मदभिमुखं पूर्वीभिः सङ्ख्याभिः पूर्वाभिश्च ऋग्भिर्गीर्भिः स्वर्विदा स्वर्गमुदकं वा ज्ञानेन स्वरणवता वा वसुमता धनवता वा रथेन यातं । गच्छतं ॥

ಪ್ರತಿಪದಾರ್ಥ

ನಾಸತ್ಯಾ — ಸತ್ಯಸ್ವರೂಪರಾದ । **ಅಶ್ವಿನಾ** — ಎಲೈ ಅಶ್ವಿನೀದೇವತೆಗಳೇ । **ವಾಂ** — ನಿಮ್ಮನ್ನು । **ಸುಹೋತಾ**—ದೇವತೆಗಳನ್ನು ಆಹ್ವಾನಮಾಡಿ ಸ್ತುತಿಸುತ್ತಿರುವವನೂ । **ವಿವಕ್ವಾನ್**—ಸ್ತೋತ್ರಗಳನ್ನು ಪಠಿಸುತ್ತಿರುವವನೂ ಆದ ನಾನು । **ಸ್ತೋಮೈಃ**—ಸ್ತೋತ್ರಗಳಿಂದ । **ಸಿಷಕ್ತಿ**—ಸೇವಿಸುತ್ತೇನೆ. (ಆದ್ದರಿಂದ ನೀವು) **ಅರ್ವಾಕ್**—ನಮಗಭಿಮುಖವಾಗಿ । **ಪೂರ್ವೀಭಿಃ**—ಹಿಂದಿನಕಾಲದಿಂದಲೂ ಪ್ರಸಿದ್ಧವಾದ। **ಪಥ್ಯಾಭಿಃ**—ಮಾರ್ಗಗಳಿಂದ ಹೊರಟು । **ಸ್ವರ್ವಿದಾ**—ವೃಷ್ಟಿಪ್ರದವಾದುದೂ । **ವಸುಮತಾ**—ಧನಯುಕ್ತವಾದುದೂ ಆದ । **ರಥೇನ**—ರಥದಿಂದ । **ಯಾತಂ**—ಹೊರಟುಬನ್ನಿರಿ.

ಭಾವಾರ್ಥ

ಸತ್ಯಸ್ವರೂಪರಾದ ಎಲೈ ಅಶ್ವಿನೀದೇವತೆಗಳೇ, ದೇವತೆಗಳಾದ ನಿಮ್ಮನ್ನು ಆಹ್ವಾನಮಾಡುತ್ತಿರುವ ನಾನು ನಿಮ್ಮನ್ನು ಸ್ತೋತ್ರಗಳಿಂದ ಸ್ತುತಿಸಿ ಸೇವಿಸುತ್ತೇನೆ. ಆದ್ದರಿಂದ ನೀವು ನಮಗಭಿಮುಖವಾಗಿ ಎಂದರೆ ನಮ್ಮ ಯಜ್ಞ, ಭೂಮಿಗಭಿಮುಖವಾಗಿ ಪುರಾತನವಾದ ಮಾರ್ಗಗಳಿಂದ ಹೊರಟು ವೃಷ್ಟಿಪ್ರದವಾದುದೂ ಧನಯುಕ್ತವಾದುದೂ ಆದ ನಿಮ್ಮ ರಥದಲ್ಲಿ ಕುಳಿತು ಹೊರಟುಬನ್ನಿರಿ

English Translation

Verily, Aswins, the pious priest repeating (your praises) glorifies you, Nasatyas, with hymns come therefore by formerly-trodden paths to our presence with your chariot, familiar with heaven, laden with treasure.

ಸಂಹಿತಾಪಾಠಃ

ಅವೋವಾಂ ನೂನಮಶ್ವಿನಾ ಯುವಾಕುರ್ಹುವೇ ಯದ್ವಾಂ ಸುತೇ ಮಾಧ್ವೀ ವಸೂಯುಃ ।
ಆ ವಾಂ ವಹಂತು ಸ್ಥವಿರಾಸೋ ಅಶ್ವಾಃ ಪಿಬಾಥೋ ಅಸ್ಮೇ ಸುಷುತಾ ಮಧೂನಿ ॥ ೪ ॥

ಪದಪಾಠಃ

ಅವೋಃ । ವಾಂ । ನೂನಂ । ಅಶ್ವಿನಾ । ಯುವಾಕುಃ । ಹುವೇ । ಯತ್ । ವಾಂ । ಸುತೇ । ಮಾಧ್ವೀ ಇತಿ । ವಸೂಯುಃ ।
ಆ । ವಾಂ । ವಹಂತು । ಸ್ಥವಿರಾಸಃ । ಅಶ್ವಾಃ । ಪಿಬಾಥಃ । ಅಸ್ಮೇ ಇತಿ । ಸುಷುತಾ । ಮಧೂನಿ ॥ ೪ ॥

ಸಾಯಣಭಾಷ್ಯಂ

ಹೇ ಅಶ್ವಿನಾಶ್ವಿನೌ ಅವೋ ರಕ್ಷಿತ್ರೋರ್ಯುವಾಭ್ಯಾಂ ಯುವಾಕುರ್ಯುವಾಂ ಕಾಮಯಮಾನೋಽಹಂ ನೂನಮದ್ಯ ಸ್ವಭೂತೋ ಭವಾಮೀತಿ ಶೇಷಃ । ಯದ್ಯಸ್ಮಾತ್ ಹೇ ಮಾಧ್ವೀ ಮಧುರಸ್ಯ ಸೋಮಸ್ಯಾರ್ಹೌ ಮಧುವಿದ್ಯಾಸಂಬಂಧಿನೌ ವಾ ವಾಂ ಯುವಾಂ ಸುತೇಽಭಿಷುತೇ ಸೋಮೇ ವಸೂಯುರ್ವಸುಕಾಮೋ ಹುವೇ ಸ್ತೌಮಿ ಅತೋ ವಾಂ ಸ್ವಭೂತಃ । ವಾಂ ಯುವಾಮಾ ವಹಂತು । ಕೇ । ಸ್ಥವಿರಾಸಃ ಸ್ಥೂಲಾಃ ಪ್ರವೃದ್ಧಾ ಅಶ್ವಾಃ । ಏತಯೋರತಿಪ್ರವೃದ್ಧತ್ವಾಚ್ಛೀಘ್ರಗತಿಕೇರಪೇಕ್ಷಿತತ್ವಾಚ್ಚ ಸ್ಥವಿರೈರೇವ ಭಾವ್ಯಂ । ಆಗಮನಾನಂತರಮಸ್ಮೇ ಅಸ್ಮಾಭಿಃ ಸುಷುತಾ ಸುಷ್ವಭಿಷುತಾನಿ ಮಧೂನಿ ಮಧುರರಸಾನ್ ಪಿಬಾಥಃ । ಪಿಬತಂ ॥

ಪ್ರತಿಪದಾರ್ಥ

ಅಶ್ವಿನಾ—ಎಲೈ ಅಶ್ವಿದೇವತೆಗಳೇ । **ಅವೋಃ**—ರಕ್ಷಣೆಯನ್ನು ನೀಡುವ ನಿಮ್ಮ। **ಯುವಾಕುಃ**—ರಕ್ಷಣೆಯನ್ನು ಬಯಸುವ ನಾನು । **ನೂನಂ**—ಈಗ ನಿಮ್ಮವನಾಗಿದ್ದೇನೆ । **ಯತ್**—ಏತಕ್ಕಾಗಿ । **ಮಾಧ್ವೀ**—ಮಧುರವಾದ ಸೋಮರಸದ ಪಾನಕ್ಕೆ ಅರ್ಹರಾದ ಅಥವಾ ಮಧುವಿದ್ಯೆಯನ್ನರಿತಿರುವ ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮ್ಮನ್ನು । **ಸುತೇ**—ಸೋಮವು ಹಿಂಡಲ್ಪಟ್ಟಿರುವ ಈ ಸಮಯದಲ್ಲಿ । **ವಸೂಯುಃ**—ಧನಾಪೇಕ್ಷಿಯಾದ ನಾನು । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ । **ಸ್ಥವಿರಾಸಃ**—ಸ್ಥೂಲಾಕಾರವುಳ್ಳ (ಧಸ್ಟಪುಷ್ಟವಾದ) । **ಅಶ್ವಾಃ**—ನಿಮ್ಮ ಕುದುರೆಗಳು । **ವಾಂ**—ನಿಮ್ಮನ್ನು । **ಆವಹಂತು**—(ನಮ್ಮಲ್ಲಿಗೆ) ಕರೆತರಲಿ (ಅನಂತರ ನೀವು) । **ಅಸ್ಮೇ**—ನಮ್ಮಿಂದ । **ಸುಷುತಾ**— ಚೆನ್ನಾಗಿ ಹಿಂಡಲ್ಪಟ್ಟ । **ಮಧೂನಿ**— ಮಧುರೋಪೇತವಾದ ಸೋಮರಸಗಳನ್ನು **ಪಿಬಾಥಃ**— ಪಾನಮಾಡಿರಿ.

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ನಿಮ್ಮ ರಕ್ಷಣೆಯನ್ನು ಬಯಸುತ್ತಿರುವ ನಾನು ಸಕಲರಿಗೂ ರಕ್ಷಣೆಯನ್ನು ನೀಡುವ ನಿಮ್ಮವನಾಗಿದ್ದೇನೆ. ಆದ್ದರಿಂದಲೇ ಮಧುರವಾದ ಸೋಮರಸದ ಪಾನಕ್ಕೆ ಅರ್ಹರಾದ ಅಥವಾ ಮಧುವಿದ್ಯೆಯನ್ನರಿತ ಎಲೈ ಅಶ್ವಿನೀದೇವತೆಗಳೇ, ಧನಾಪೇಕ್ಷಿಯಾದ ನಾನು ಸೋಮರಸವು ಹಿಂಡಲ್ಪಟ್ಟಿರುವ ಈ ಸಮಯದಲ್ಲಿ ನಿಮ್ಮನ್ನು ಪ್ರಾರ್ಥಿಸಿ ಕರೆಯುತ್ತೇನೆ. ಸ್ಥೂಲಾಕಾರವುಳ್ಳವೂ, ಶೀಘ್ರಗಾಮಿಗಳೂ ಆದ ನಿಮ್ಮ ಕುದುರೆಗಳು ನಿಮ್ಮನ್ನು ನಮ್ಮ ಈ ಯಜ್ಞಭೂಮಿಗೆ ಕರೆತರಲಿ. ಅನಂತರ ನೀವು ನಮ್ಮಿಂದ ವಿಧ್ಯುಕ್ತವಾಗಿ ಹಿಂಡಲ್ಪಟ್ಟ ಈ ಮಧುರವಾದ ಸೋಮರಸವನ್ನು ಪಾನಮಾಡಿ.

English Translation

Relying on you, Aswins, as protectors, desirous of wealth, Madhwas, I invoke you when the Soma is effused : may your stout horse bring you (hither) : drink the sweet juice poured out by us.

ಸಂಹಿತಾಪಾಠಃ

ಪ್ರಾಚೀಮು ದೇವಾಶ್ವಿನಾ ಧಿಯಂ ಮೇಮ್ಯಾಂ ಸಾತಯೇ ಕೃತಂ ವಸೂಯುಂ ।

ವಿಶ್ವಾ ಅವಿಷ್ಟಂ ವಾಜ ಆ ಪುರಂಧೀಸ್ತಾ ನಃ ಶಕ್ತಂ ಶಚೀಪತೀ ಶಚೇಭಿಃ ॥

ಪದಪಾಠಃ

ಪ್ರಾಚೀಂ । ಊಂ ಇತಿ । ದೇವಾ । ಅಶ್ವಿನಾ । ಧಿಯಂ । ಮೇ । ಅಮೃಧ್ರಾಂ । ಸಾತಯೇ । ಕೃತಂ । ವಸ್ಯಯುಂ ।

ವಿಶ್ವಾಃ । ಅವಿಷ್ಟಂ । ವಾಜೇ । ಆ । ಪುರಂಽಧೀಃ । ತಾ । ನಃ । ಶಕ್ತಂ । ಶಚೀಪತೀ ಇತಿ ಶಚೀಽಪತೀ । ಶಚೇಭಿಃ ॥ ೫ ॥

ಸಾಯಣಭಾಷ್ಯಂ

ಹೇ ಅಶ್ವಿನಾಶ್ವಿನೌ ದೇವಾ ದೇವೌ ಯುವಾಂ ಪ್ರಾಚೀಮೃಜ್ವೀಮಮೃಧ್ರಾಮಹಿಂಸಿತಾಂ ವಸೂಯುಂ ಧನಮಿಚ್ಛಂತೀಂ ಮೇ ಮಮ ಧಿಯಂ ಬುದ್ಧಿಂ ಸ್ತುತಿಂ ಕರ್ಮ ವಾ ಸಾತಯೇ ಲಾಭಾಯೋಚಿತಾಂ ಕೃತಂ । ಕುರುತಂ । ಕಿಂಚ ವಾಜ ಆ ಸಂಗ್ರಾಮೇಽಪಿ ವಿಶ್ವಾಃ ಪುರಂಧೀರಸ್ಮದೀಯಾ ಬುದ್ಧೀರವಿಷ್ಟಂ । ರಕ್ಷತಂ । ಹೇ ಶಚೀಪತೀ । ಶಚೀತಿ ಕರ್ಮನಾಮ । ಕರ್ಮಣಾಂ ಪಾಲಕೌ ತಾ ತೌ ಯುವಾಂ ಶಚೀಭಿರಸ್ಮದೀಯೈಃ ಸ್ತುತ್ಯಾದಿರೂಪೈಃ ಕರ್ಮಭಿರ್ನೋಽಸ್ಮಾಭ್ಯಕ್ತಂ । ಪ್ರಯಚ್ಛತಂ ಧನಮಿತಿ ಶೇಷಃ॥

ಪ್ರತಿಪದಾರ್ಥ

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ದೇವಾ—ದೇವತಾತ್ಮರಾದ ನೀವು । ಪ್ರಾಚೀಂ—ಸತ್ಯಾತ್ಮಕವಾದುದೂ ಎಂದರೆ ಭಕ್ತಿಯಿಂದ ಅರ್ಪಿತವಾದುದೂ । ಅಮೃಧ್ರಾಂ—ಅಹಿಂಸಿತವಾದುದೂ । ವಸೂಯುಂ—ಧನವನ್ನು ಅಪೇಕ್ಷಿಸುವುದೂ ಆದ । ಮೇ ಧಿಯಂ—ಈ ಸ್ತೋತ್ರವನ್ನು ಅಥವಾ ಕರ್ಮವನ್ನು । ಸಾತಯೇ—ಫಲಪ್ರದವನ್ನಾಗಿ । ಕೃತಂ—ಮಾಡಿರಿ (ಮತ್ತು) । ವಾಜೇ ಆ—ಯುದ್ಧದಲ್ಲಿಯೂ ಕೂಡ । ವಿಶ್ವಾ—ಸಮಸ್ತವಾದ ಪುರಂಧೀಃ—ನಮ್ಮ ಬುದ್ಧಿಗಳನ್ನು । ಅವಿಷ್ಟಂ—ರಕ್ಷಿಸಿರಿ । ಶಚೀಪತೀ—ಯಜ್ಞಾದಿ ಕರ್ಮಗಳಿಗೆ ಪಾಲಕರಾದ । ತಾ—ಆ ನೀವು । ಶಚೀಭಿಃ—ನಾವು ಮಾಡುವ ಸ್ತುತ್ಯಾದಿರೂಪವಾದ ಕರ್ಮಗಳಿಂದ । ನಃ—ನಮ್ಮನ್ನು । ಶಕ್ತಂ—ಧನಯುಕ್ತರಾಗುವಂತೆ ಮಾಡಿರಿ.

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ದೇವತಾತ್ಮರಾದ ನೀವು ಸತ್ಯಾತ್ಮಕವಾದುದೂ ವಿಘ್ನರಹಿತವಾದುದೂ ಧನವನ್ನು ಅಪೇಕ್ಷಿಸುವುದೂ ಆದ ಈ ನಮ್ಮ ಸ್ತೋತ್ರವನ್ನು ಫಲಪ್ರದವನ್ನಾಗಿ ಮಾಡಿರಿ, ಮತ್ತು ಯುದ್ಧದಲ್ಲಿಯೂ ಸಹ ನಮ್ಮ ಬುದ್ಧಿಯು ನಮಗೆ ಸಹಾಯಕವಾಗಿರುವಂತೆ ಮಾಡಿ ನಮ್ಮನ್ನು ರಕ್ಷಿಸಿರಿ ಯಜ್ಞಾದಿ ಕರ್ಮಗಳಿಗೆ ಪಾಲಕರಾದ ನೀವು ನಮ್ಮ ಸ್ತುತಿರೂಪವಾದ ಕರ್ಮಗಳಿಂದ ಸಂತುಷ್ಟರಾಗಿ ನಮಗೆ ಧನಾದಿಗಳನ್ನು ಕೊಡಿರಿ.

English Translation

Divine Ashwins, render my sincere and undisturbed adoration, offered for the sake of riches, (efficacious) for their acquisition : preserve all my

faculties in (the time of) battle : protectors of pious acts, (influenced) by our acts, bestow upon us (wealth).

ಸಂಹಿತಾಪಾಠಃ

ಅವಿಷ್ಟಂ ಧೀಷ್ವಶ್ವಿನಾ ನ ಆಸು ಪ್ರಜಾವದ್ರೇತೋ ಅಹ್ರಯಂ ನೋ ಅಸ್ತು ।
ಆ ವಾಂ ತೋಕೇ ತನಯೇ ತೂತುಜಾನಾಃ ಸುರತ್ನಾಸೋ ದೇವವೀತಿಂ
ಗಮೇಮ ॥ ೬ ॥

ಪದಪಾಠಃ

ಅವಿಷ್ಟಂ । ಧೀಷು । ಅಶ್ವಿನಾ । ನಃ । ಆಸು । ಪ್ರಜಾಽವತ್ । ರೇತಃ । ಅಹ್ರಯಂ । ನಃ । ಅಸ್ತು ।
ಆ । ವಾಂ । ತೋಕೇ । ತನಯೇ । ತೂತುಜಾನಾಃ । ಸುಽರತ್ನಾಸಃ । ದೇವಽವೀತಿಂ । ಗಮೇಮ ॥ ೬ ॥

ಸಾಯಣಭಾಷ್ಯಂ

ಹೇ ಅಶ್ವಿನಾಶ್ವಿನೌ ನೋಽಸ್ಮಾನಾಸು ಧೀಷ್ವೀಷು ಕರ್ಮಸ್ವವಿಷ್ಟಂ । ರಕ್ಷತಂ । ನೋಽಸ್ಮಭ್ಯ-ಮಹ್ರಯಮಕ್ಷೀಣಂ ಪ್ರಜಾವತ್ಪುತ್ರಾದ್ಯುಪೇತಂ ಪುತ್ರೋತ್ಪಾದನಸಮರ್ಥಂ ರೇತೋಽಸ್ತು । ವಾಂ ಯುವಯೋರನುಗ್ರಹಾಲ್ಲಬ್ಧೇ ತೋಕೇ ಪುತ್ರೇ ತನಯೇ ತತ್ಪುತ್ರಾದೌ ಚ ತೂತುಜಾನಾ ಅಭಿಮತಂ ಧನಂ ಪ್ರಯಚ್ಛಂತಃ ಸುರತ್ನಾಸಃ ಶೋಭನಧನಾಶ್ಚ ಸಂತೋ ದೇವವೀತಿಂ ದೇವಾನಾಂ ವೀತಿಃ ಪ್ರೀತಿರ್ಯಸ್ಮಿಂಸ್ತಾದೃಶಂ ಯಜ್ಞಮಾ ಗಮೇಮ । ಆಗಚ್ಛೇಮ ॥

ಪ್ರತಿಪದಾರ್ಥ

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ನಃ—ನಮ್ಮನ್ನು । ಆಸು ಧೀಷು—ಈ ಕರ್ಮಕಾಲಗಳಲ್ಲಿ । ಅವಿಷ್ಟಂ—ರಕ್ಷಿಸಿರಿ. । ನಃ—ನಮಗೆ । ಅಹ್ರಯಂ—ನಾಶರಹಿತವೂ । ಪ್ರಜಾವತ್—ಪುತ್ರಾದಿಗಳಿಂದ ಕೂಡಿದುದೂ ಆದ । ರೇತಃ—ಸೆಂಪತ್ತು । ಅಸ್ತು—ಒದಗಲಿ. । ವಾಂ—ನಮ್ಮ ಅನುಗ್ರಹದಿಂದ ಪ್ರಾಪ್ತವಾದ । ತೋಕೇ—ಪುತ್ರರಿಗೂ । ತನಯೇ—ಪೌತ್ರರಿಗೂ । ತೂತುಜಾನಾಃ—ಅಪೇಕ್ಷಿತವಾದ ಧನಗಳನ್ನು ಹಂಚುತ್ತಲೂ । ಸುರತ್ನಾಸಃ—ಉತ್ತಮವಾದ ಧನವುಳ್ಳವರಾಗಿಯೂ । ದೇವವೀತಿಂ—ದೇವಪೂಜಾಕಾರ್ಯವಾದ ಯಜ್ಞವನ್ನು । ಆ ಗಮೇಮ—ನಾವು ನೆರವೇರಿಸುವಂತಾಗಲಿ.

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ನಮ್ಮನ್ನು ಈ ಕರ್ಮಕಾಲದಲ್ಲಿ ರಕ್ಷಿಸಿರಿ. ನಮಗೆ ನಾಶರಹಿತವೂ, ಪುತ್ರಾದಿಗಳಿಂದ ಕೂಡಿದುದೂ ಆದ ಸಂಪತ್ತು ಒದಗಲಿ. ನಿಮ್ಮ ಅನುಗ್ರಹದಿಂದ ಪ್ರಾಪ್ತರಾದ ನಮ್ಮ ಪುತ್ರರಿಗೂ ಪೌತ್ರಾದಿಗಳಿಗೂ ಧನವನ್ನು ಹಂಚುತ್ತಲೂ, ಉತ್ತಮವಾದ ಧನವುಳ್ಳವರಾಗಿಯೂ ಸಹ ದೇವಪೂಜಾಕಾರ್ಯವಾದ ಯಜ್ಞವನ್ನು ನಾವು ನೆರವೇರಿಸುವಂತಾಗಲಿ.

English Translation

Protect us, Aswins, in these pious acts, may our procreative pôwer fail not but (through your favour) possessing sons and grandsons, distributing desired riches and enjoying ample wealth, may we accomplish the worship of the gods

ಸಂಹಿತಾಪಾಠಃ

ಏಷ ಸ್ಯ ವಾಂ ಪೂರ್ವಗತ್ವೇವ ಸಖ್ಯೇ ನಿಧಿರ್ಹಿತೋ ಮಾಧ್ವೀ ರಾತೋ ಅಸ್ಮೇ ।

ಅಹೇಳತಾ ಮನಸಾ ಯಾತಮರ್ವಾಗಶ್ನಂತಾ ಹವ್ಯಂ ಮಾನುಷೀಷು ವಿಕ್ಷು॥

ಪದಪಾಠಃ

ಏಷಃ । ಸ್ಯಃ । ವಾಂ । ಪೂರ್ವಗತ್ವಾಽಇವ । ಸಖ್ಯೇ । ನಿಽಧಿಃ । ಹಿತಃ । ಮಾಧ್ವೀ ಇತಿ । ರಾತಃ । ಅಸ್ಮೇ ಇತಿ ।

ಅಹೇಳತಾ । ಮನಸಾ । ಆ । ಯಾತಂ । ಅರ್ವಾಕ್ । ಅಶ್ನಂತಾ । ಹವ್ಯಂ । ಮಾನುಷೀಷು । ವಿಕ್ಷು ॥೭॥

ಸಾಯಣಭಾಷ್ಯಂ

ಏಷ ಪುರತೋ ದೀಯಮಾನಃ ಸ್ಯ ಸ ಯುವಯೋಃ ಪ್ರಿಯತ್ವೇನ ಪ್ರಸಿದ್ಧಃ ಸೋಽಯೋ ಹೇ ಮಾಧ್ವೀ ಮಧುಪ್ರಿಯಾವಶ್ವಿನೌ ವಾಂ ಯುವಯೋಃ ಪುರತೋ ನಿಧಿರ್ನಿಧಿಸ್ಥಾನೀಯೋ ಹಿತಃ ಸ್ಥಾಪಿತೋಽಸ್ಮೇ ಅಸ್ಮಾಭೀ ರಾತೋ ದತ್ತಃ ಸಂಕಲ್ಪಿತಃ ಸಂನಿಹಿತಃ । ಕಿಮಿವ । ಸಖ್ಯೇ ಸಖ್ಯುರ್ಧರ್ಮಂ ಪ್ರೂರ್ವಗತ್ವೇವ ಪುರತೋ ಗಂತಾ ದೂತ ಇವ । ಸ ಯಥಾ ಪ್ರಿಯಂ ಜನಯೆನ್ ಸ್ವಾಮಿನಃ ಪುರತೋ ವರ್ತತ ತದ್ವದಿತ್ಯರ್ಥಃ । ಯಸ್ಮಾದೇವಂ ತಸ್ಮಾದಹೇಳತಾಕ್ರುಧ್ಯತಾ ಮನಸಾನುಗ್ರಹಯುಕ್ತೇನ ಚೇತಸಾರ್ವಾಗಸ್ಮದಭಿಮುಖಮಾ ಯಾತಂ । ಆಗಚ್ಛತಂ । ಅಶ್ನಂತಾ ಹವ್ಯಂ ಹವಿಃ ಸೋಮಾದಿಕಮಶ್ನಂತಾವಭ್ಯವಹರಂತೌ । ಕುತ್ರ । ಮಾನುಷೀಷು ವಿಕ್ಷು ಮನುಷ್ಯರೂಪಾಸು ಪ್ರಜಾಸು ವರ್ತಮಾನಂ ॥

ಪ್ರತಿಪದಾರ್ಥ

ಮಾಧ್ವೀ—ಮಧುರವಾದ ಸೋಮವನ್ನು ಅಪೇಕ್ಷಿಸುವ ಎಲೈ ಅಶ್ವಿನೀದೇವತೆಗಳೇ । **ಸ್ಯಃ**—ಪ್ರಸಿದ್ಧವಾದ । **ಏಷಃ**—ಈ ಸೋಮವು । **ಅಸ್ಮೇ**—ನಮ್ಮಿಂದ । **ರಾತಃ**—ಅರ್ಪಿತವಾಗಿ । **ಸಖ್ಯೇ**—ಸ್ನೇಹವನ್ನು ಸಂಪಾದಿಸಲು । **ಪೂರ್ವಗತ್ವೇವ**—ರಾಜನ ಮುಂಭಾಗದಲ್ಲಿ ದೂತನು ಅರ್ಪಿಸುವ ನಿಧಿಯಂತೆ । **ವಾಂ**—ನಿಮ್ಮ ಮುಂದೆ । **ನಿಧಿಃ**—ನಿಧಿರೂಪದಲ್ಲಿ । **ಹಿತಃ**—ಅರ್ಪಿತವಾಗಿದೆ । **ಮಾನುಷೀಷು**—ಮಾನವರಾದ । **ವಿಕ್ಷು**—ಯಜಮಾನರ ನಡುವೆ ।

हव्यं—ಹವಿಸ್ಸನ್ನು । **अश्नंता**—ಸ್ವೀಕರಿಸುತ್ತ । **अहेळता**—ಕೋಪಗೊಳ್ಳದಿರುವ । **मनसा**—ಮನಸ್ಸಿನೊಡನೆ । **अर्वाक्**—ನಮಗಭಿಮುಖವಾಗಿ । **आ यातं**—ಬನ್ನಿರಿ.

ಭಾವಾರ್ಥ

ಮಧುರವಾದ ಸೋಮವನ್ನು ಆಪೇಕ್ಷಿಸುವ ಎಲೈ ಅಶ್ವಿನೀದೇವತೆಗಳೇ, ಪ್ರಸಿದ್ಧವಾದ ಈ ಸೋಮವು ನಮ್ಮಿಂದ ಆರ್ಪಿತವಾಗಿ, ಸ್ನೇಹವನ್ನು ಸಂಪಾದಿಸಲು ರಾಜನ ಮುಂಭಾಗದಲ್ಲಿ ದೂತನು ಆರ್ಪಿಸುವ ನಿಧಿಯಂತೆ ನಿಮ್ಮ ಮುಂದೆ ಹವಿಸ್ಸಿನ ರೂಪದಲ್ಲಿ ಅರ್ಪಿತವಾಗಿದೆ. ಮಾನವರಾದ ಯಜಮಾನರ ಹವಿಸ್ಸನ್ನು ಸ್ವೀಕರಿಸುತ್ತ ಕೋಪಗೊಳ್ಳದಿರುವ ಮನಸ್ಸಿನಿಂದ ನಮಗಭಿಮುಖವಾಗಿ ಬನ್ನಿರಿ

English Translation

This treasure given by us has been placed, Madhwis, before you, like (an envoy) who has come to the presence (of a prince) for (acquiring his) friendship come to our presence with benevolent thoughts, accepting the oblations offered amongst human beings.

संहितापारः

एकस्मिन्योगे भुरणा समानेऽपरि वां सप्त स्रवतो रथो गात् ।
न वायंति सुभ्वो देवयुक्ता ये वां धूर्षु तरणयो वहंति ॥ ६ ॥

पदपारः

एकस्मिन् । योगे । भुरणा । समाने । परि । वां । सप्त । स्रवतः । रथः । गात् ।
न । वायंति । सुऽभ्वः । देवऽयुक्ताः । ये । वां । धूःऽसु । तरणयः । वहंति ॥

सायणभाष्यं

हे भुरणा सर्वस्य भर्तारौ युवयोरेकस्मिन् समान उभयसाधारणे योगेऽस्मद्विषये सति वां युवयोः रथः सप्त स्रवतः सर्पणस्वभावाः सप्तसंख्याका वा गंगाद्याः परि गात् । परिगच्छति । शीघ्रमागच्छतीत्यर्थः । तद्प्रधानुकूलाः सुभ्वः सुभवना देवयुक्ता देवाभ्यां युवाभ्यां युक्ता अश्वाः शीघ्रगमने न वायंति । न श्राम्यंति । न शाम्यंतेः । ये ऽश्वा वां धूर्षु रथस्य तरणयस्तारकाः शीघ्रगंतारो वहंति युवां ते न वायंतीति ॥

ಪ್ರತಿಪದಾರ್ಥ

ಭುರಣಾ—ಲೋಕಗಳನ್ನೆಲ್ಲಾ ಭರಿಸುವ ಎಲೈ ಅಶ್ವಿನೀದೇವತೆಗಳೇ। **ಏಕಸ್ಮಿನ್ ಸಮಾನೇ**—ಒಂದೇ ಕಾರ್ಯದಲ್ಲಿ ನಿರತರಾಗಿ। **ಯೋಗೇ**—ಒಟ್ಟುಗೂಡಿರುವಾಗ। **ವಾಂ**—ನಿಮ್ಮ। **ರಥಂ**—ರಥವು। **ಸ್ರವತಃ ಸಪ್ತ**—ಗಂಗಾದಿ ಏಳು ನದಿಗಳನ್ನೂ। **ಸರಿ ಗಾತ್**—ದಾಟಿಸಿ ಕರೆತರುತ್ತದೆ। **ವಾಂ**—ನಿಮ್ಮನ್ನು। **ಧೂರ್ಷು**—ರಥಗಳಲ್ಲಿ। **ತರಣಯಃ**—ಶೀಘ್ರಗಾಮಿಗಳಾದ। **ಯೇ**—ಯಾವ ಅಶ್ವಗಳು। **ವಹಂತಿ**—ವಹಿಸುವವೋ ಅಂತಹ। **ಸುಭ್ವಃ**—ಶ್ರೇಷ್ಠವೂ। **ದೇವಯುಕ್ತಾಃ**—ದೇವತಾತ್ಮರಾದ ನಿಮ್ಮನ್ನು ವಹಿಸುವವೂ ಆದ ಅಶ್ವಗಳು। **ನ ವಾಯಂತಿ**—ಆಯಾಸಗೊಳ್ಳುವುದಿಲ್ಲ.

ಭಾವಾರ್ಥ

ಲೋಕಗಳನ್ನೆಲ್ಲ ಭರಿಸುವ ಎಲೈ ಅಶ್ವಿನೀದೇವತೆಗಳೇ, ಒಂದೇ ಕಾರ್ಯದಲ್ಲಿ ನಿರತರಾಗಿ ಒಟ್ಟುಗೂಡಿರುವಾಗ ನಿಮ್ಮನ್ನು ನಿಮ್ಮ ರಥವು ಗಂಗಾದಿ ಸಪ್ತನದಿಗಳನ್ನೂ ದಾಟಿಸಿ ಕರೆತರುತ್ತದೆ. ಶೀಘ್ರಗಾಮಿಗಳಾದ ಯಾವ ಅಶ್ವಗಳು ನಿಮ್ಮನ್ನು ರಥಗಳಲ್ಲಿ ವಹಿಸುವುವೋ ಅಂತಹ ಶ್ರೇಷ್ಠವೂ, ದೇವತಾತ್ಮರಾದ ನಿಮ್ಮನ್ನು ವಹಿಸುವುವೂ ಆದ ಆ ಅಶ್ವಗಳು ಆಯಾಸಗೊಳ್ಳುವುದಿಲ್ಲ.

English Translation.

Nourishers of all, the chariot of you two who are associated in a common purpose, traverses the seven flowing (streams) the excellent horses harnessed by the gods, who bear you rapidly, careering in the car, are never wearied

ಸಂಹಿತಾಪಾಠಃ

ಅಸಶ್ಚತಾ ಮಘವದ್ಭ್ಯೋ ಹಿ ಭೂತಂ ಯೇ ರಾಯಾ ಮಘದೇಯಂ ಜುನಂತಿ।

ಪ್ರ ಯೇ ಬಂಧುಂ ಸೂನೃತಾಭಿಸ್ತಿರಂತೇ ಗವ್ಯಾ ಪ್ಯಂಚಂತೋ ಅಶ್ವ್ಯಾ ಮಘಾನಿ ॥ ೯ ॥

ಪದಪಾಠಃ

ಅಸಶ್ಚತಾ । ಮಘವದ್ಭ್ಯಃ । ಹಿ । ಭೂತಂ । ಯೇ । ರಾಯಾ । ಮಘದೇಯಂ । ಜುನಂತಿ ।

ಪ್ರ । ಯೇ । ಬಂಧುಂ । ಸೂನೃತಾಭಿಃ । ತಿರಂತೇ । ಗವ್ಯಾ । ಪ್ಯಂಚಂತಃ । ಅಶ್ವ್ಯಾ । ಮಘಾನಿ ॥ ೯ ॥

ಸಾಯಣಭಾಷ್ಯಂ

ಅಸಶ್ಚತಾ ಕುತ್ರಾಪ್ಯಸಜ್ಯಮಾನೌ ಯುವಾಂ ಮಘವದ್ಭ್ಯೋ ಧನವದ್ಭ್ಯೋ ಹವಿಷ್ಮದ್ಭ್ಯೋ ಯಜಮಾನೇಭ್ಯಸ್ತೇಷಾಮರ್ಥಾಯ ಭೂತಂ ಹಿ। ಭವತಂ। ತೇಭ್ಯ ಏವಾನುರಕ್ತೌ ಭವತಂ। ಅನು-

ಗ್ರಾಹ್ಯಾ ಏವ ವಿಶೇಷ್ಯಂತೇ । ಯೇ ರಾಯಾ ಧನೇನ ನಿಮಿತ್ತೇನ ರಾಯಾ ಯುಕ್ತಾ ವಾ ಮಘದೇಯಂ ದಾತವ್ಯಂ ಮಘಂ ಧನಂ ಹವಿರ್ಲಕ್ಷಣಂ ವಾ ಜುನಂತಿ ಪ್ರೇರಯಂತಿ ಯಚ್ಛಂತಿ । ಯೇ ಚ ಬಂಧುಂ । ಸ್ನೇಹೇನ ಬಧ್ನಾತೀತಿ ಬಂಧುಃ । ತಂ ಸ್ವಸಂಬಂಧಿನಂ । ಅಥವಾ ಫಲೇನ ಬಧ್ನಾತೀತಿ ಬಂಧುರಧ್ವರ್ಯ್ವಾದಿಃ । ತಂ ಸೂನೃತಾಭಿಃ ಪ್ರಿಯಸತ್ಯಾತ್ಮಿಕಾಭಿರ್ವಾಗ್ಭಿಃ ಪ್ರ ತಿರಂತೇ ಪ್ರವರ್ಧಯಂತಿ । ಪ್ರಪೂರ್ವಸ್ತಿರತಿರ್ವರ್ಧನಾರ್ಥಃ । ಕಿಂ ಕುರ್ವಂತಃ । ಗವ್ಯಾ ಗೋರೂಪಾಣ್ಯಶ್ವ್ಯಾಶ್ವರೂಪಾಣಿ ಚ ಮಘಾನಿ ಧನಾನಿ ಪೃಂಚಂತೋಽರ್ಥಿಭ್ಯಃ ಪ್ರಯಚ್ಛಂತಃ । ತೇಭ್ಯೋ ಮಘವದ್ಭ್ಯೋ ಭೂತಮಿತಿ ॥

ಪ್ರತಿಪದಾರ್ಥ

(ಎಲೈ ಅಶ್ವಿನೀದೇವತೆಗಳೇ) **ಯೇ**—ಯಾರು । **ರಾಯಾ**—ಧನಯುಕ್ತರಾಗಿ । **ಮಘದೇಯಂ**—ಅರ್ಪಣೆಗೆ ಯೋಗ್ಯವಾದಹವಿಸ್ಸನ್ನು । **ಜುನಂತಿ**—ಅರ್ಪಿಸುವರೋ । **ಯೇ**—ಯಾರು । **ಗವ್ಯಾ**—ಗೋಯುಕ್ತವೂ । **ಅಶ್ವ್ಯಾ**—ಅಶ್ವಯುಕ್ತವೂ ಆದ । **ಮಘಾನಿ**—ಧನಗಳನ್ನು । **ಪೃಂಚಂತಃ**—ಹಂಚುತ್ತಾ । **ಬಂಧುಂ**—ತಮಗೆ ಸೇರಿದ ಪರಿವಾರವನ್ನು । **ಸೂನೃತಾಭಿಃ**—ಉತ್ತಮವಾದ ವಾಕ್ಯಗಳಿಂದ । **ಪ್ರ ತಿರಂತೇ**—ಪುಷ್ಟಿಗೊಳಿಸುವರೋ ಅಂತಹ । **ಮಘವದ್ಭ್ಯಃ**—ಹವಿರ್ಯುಕ್ತರಾದ ಯಜಮಾನರಿಗಾಗಿ । **ಅಸಶ್ಚತಾ**—ಆಲಸ್ಯವಿಲ್ಲದ ಮನಸ್ಸಿನಿಂದ ಕೂಡಿ । **ಭೂತಂ ಹಿ**—ಅವರ ರಕ್ಷಕರಾಗಿರಿ

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ಧನಯುಕ್ತರಾದ ಯಾರು ಅರ್ಪಣೆಗೆ ಯೋಗ್ಯವಾದ ಹವಿಸ್ಸನ್ನು ನಿಮಗೆ ಅರ್ಪಿಸುವರೋ, ಯಾರು ಗೋಯುಕ್ತವೂ ಅಶ್ವಯುಕ್ತವೂ ಆದ ಧನಗಳನ್ನು ಹಂಚುತ್ತ ತಮಗೆ ಸೇರಿದ ಬಂಧುವರ್ಗವನ್ನು ಉತ್ತಮವಾದ ಆದರವಾಕ್ಯಗಳನ್ನು ಹೇಳಿ ಪುಷ್ಟಿಗೊಳಿಸುವರೋ ಅಂತಹ ಹವಿರ್ಯುಕ್ತರಾದ ಯಜಮಾನರಿಗೆ ಆಲಸ್ಯವಿಲ್ಲದ ಮನಸ್ಸಿನಿಂದಕೂಡಿ ಅವರ ರಕ್ಷಕರಾಗಿರಿ

English Translation

Be propitious to those who are affluent (in oblations), who offer the wealth that is to be offered for the sake of riches they who encourage a kinsman with kind commendations, distributing wealth of cattle and of horses

ಸಂಹಿತಾಪಾಠಃ

ನೂ ನೋ ಹವನಮಾ ಶೃಣುತಂ ಯುವಾನಾ ಯಾಸಿಷ್ಟಂ ವರ್ತಿರಶ್ವಿನಾವಿರಾವತ್ ।
ಧತ್ತಂ ರತ್ನಾನಿ ಜರತಂ ಚ ಸೂರೀನ್ಪ್ಯಾಯಂ ಪಾತ ಸ್ವಸ್ತಿಭಿಃ ಸದಾ ನಃ ॥

ಪದಪಾಠಃ

ನು । ಮೇ । ಹವಂ । ಆ । ಶೃಣುತಂ । ಯುವಾನಾ । ಯೋಸಿಷ್ಟಂ । ವರ್ತಿಃ । ಅಶ್ವಿನೌ । ಇರಾವತ್ ।

ಧತ್ತಂ । ರತ್ನಾನಿ । ಜರತಂ । ಚ । ಸೂರೀನ್ । ಯೂಯಂ । ಪಾತ । ಸ್ವಸ್ತಿಭಿಃ । ಸದಾ । ನಃ ॥ ೧೦ ॥

ಸಾಯಣಭಾಷ್ಯಂ

ಹೇ ಯುವಾನಾ ನಿತ್ಯಯೌವನೌ ನ್ವದ್ಯ ಯುವಾಂ ಮೇ ಹವಮಸ್ಮದೀಯಾಂ ಸ್ತುತಿಮಾ ಶೃಣುತಂ । ಶ್ರುತ್ವಾ ಚ ಹೇ ಅಶ್ವಿನೌ ಇರಾವದ್ಧನಿರ್ಯುಕ್ತಂ ವರ್ತಿರ್ಗೃಹಂ ಯೋಸಿಷ್ಟಂ । ಆಗಚ್ಛತಂ । ಆಗತ್ಯ ಚ ರತ್ನಾನಿ ರಮಣೀಯಾನಿ ಧನಾನಿ ದತ್ತಂ । ಧತ್ತಂ । ಸೂರೀನ್ ಸ್ತೋತೄನ್ಜ್ಞರತಂ । ವರ್ಧಯತಂ ॥ ಧಾತೂನಾಮನೇಕಾರ್ಥತ್ವಾತ್ ॥ ಶಿಷ್ಟಂ ಸ್ಪಷ್ಟಂ ॥

ಪ್ರತಿಪದಾರ್ಥ

ಯುವಾನಾ—ನಿತ್ಯತರುಣರಾದ । ಅಶ್ವಿನೌ—ಎಲೈ ಅಶ್ವಿನೀದೇವತೆಗಳೇ । ನು—ಈಗ । ಮೇ—ನನ್ನ ಹವಂ—ಸ್ತುತಿಯನ್ನು । ಆ ಶೃಣುತಂ—ಕೇಳಿರಿ । ಇರಾವತ್—ಹವಿಸ್ಸಿನಿಂದ ಕೂಡಿದ । ವರ್ತಿಃ—ನಮ್ಮ ಗೃಹವನ್ನು । ಯೋಸಿಷ್ಟಂ—ಪ್ರಯತ್ನಿಸಿರಿ । ರತ್ನಾನಿ—ರಮಣೀಯವಾದ ಧನಗಳನ್ನ । ಧತ್ತಂ—ಕೊಡಿರಿ । ಸೂರೀನ್—ಸ್ತುತಿಕರ್ತರನ್ನು । ಜರತಂ—ಪುಷ್ಟಿಗೊಳಿಸಿರಿ । ಯೂಯಂ—ನೀವು । ನಃ—ನಮ್ಮನ್ನು । ಸದಾ—ಯಾವಾಗಲೂ । ಸ್ವಸ್ತಿಭಿಃ—ಮಂಗಳ ಕಾರಣಗಳಿಂದ । ಪಾತ—ರಕ್ಷಿಸಿರಿ.

ಭಾವಾರ್ಥ

ನಿತ್ಯತರುಣರಾದ ಎಲೈ ಅಶ್ವಿನೀದೇವತೆಗಳೇ, ನನ್ನ ಸ್ತುತಿಯನ್ನ ಈಗ ಕೇಳಿರಿ. ಹವಿಸ್ಸಿನಿಂದ ಕೂಡಿದ ನಮ್ಮ ಗೃಹವನ್ನು ಪ್ರಯತ್ನಿಸಿರಿ ನನಗೆ ರಮಣೀಯವಾದ ಧನಗಳನ್ನು ಕೊಡಿರಿ ಸ್ತುತಿಕರ್ತರನ್ನು ಪುಷ್ಟಿಗೊಳಿಸಿರಿ. ನೀವು ನಮ್ಮನ್ನು ಯಾವಾಗಲೂ ಕಲ್ಯಾಣಗಳಿಂದ ರಕ್ಷಿಸಿರಿ

English Translation

Ever youthful Aswins, hear to-day my invocation come Ashwins, to the dwelling where the oblation is prepared grant wealth (to the officer), elevate the worshipper and do you ever cherish us with blessings

———

ಅರವತ್ತೆಂಟನೆಯ ಸೂಕ್ತವು

ಸಾಯಣಭಾಷ್ಯಂ

ಆ ಶುಭ್ರಾ ಯಾತಮಿತಿ ನವರ್ಚಂ ತ್ರಯೋದಶಂ ಸೂಕ್ತಂ ವಸಿಷ್ಠಸ್ಯಾರ್ಷಮಾಶ್ವಿನಂ । ಆದಿತಃ ಸಪ್ತ ವಿರಾಜೋಽಷ್ಟಮೀನವಮ್ಯೌ ತ್ರಿಷ್ಟುಭೌ । ಅನುಕ್ರಮ್ಯತೇ ಚ । ಆ ಶುಭ್ರಾ ನವ ಸಸ್ತಾದ್ಯಾ ವಿರಾಜ ಇತಿ । ಸೂಕ್ತವಿನಿಯೋಗೋ ಲೈಂಗಿಕಃ ॥

ಅನುವಾದವು—**ಆ ಶುಭ್ರಾ ಯಾತಂ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವುವು. ಈ ಸೂಕ್ತಕ್ಕೆ ವಸಿಷ್ಠನು ಋಷಿಯು, ಆಶ್ವಿನೀದೇವತೆಗಳು ದೇವತೆಯು, ಈ ಸೂಕ್ತದ ಮೊದಲಿನ ಏಳು ಋಕ್ಕುಗಳು ವಿರಾಟ್‌ಛಂದಸ್ಕವು, ಎಂಟು ಮತ್ತು ಒಂಭತ್ತನೆಯ ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು ಅನುಕ್ರಮಣಿಕೆಯಲ್ಲಿ—**ಆ ಶುಭ್ರಾ ನವ ಸಸ್ತಾದ್ಯಾ ವಿರಾಜಃ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು

ಸೂಕ್ತ—೬೮

ಮಂಡಲ—೭ ॥ ಅನುವಾಕ—೪ ॥ ಸೂಕ್ತ—೬೮ ॥
ಅಷ್ಟಕ—೫ ॥ ಅಧ್ಯಾಯ—೫ ॥ ವರ್ಗ—೧೪, ೧೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ವಸಿಷ್ಠಃ ॥
ದೇವತಾ—ಆಶ್ವಿನೌ ॥
ಛಂದಃ—೧-೭, ವಿರಾಟ್ । ೮, ೯ ತ್ರಿಷ್ಟುಪ್ ।

ಸಂಹಿತಾಪಾಠಃ

ಆ ಶುಭ್ರಾ ಯಾತಮಶ್ವಿನಾ ಸ್ವಶ್ವಾ ಗಿರೋ ದಸ್ರಾ ಜುಜುಷ್ಟಾಣಾ ಯುವಾಕೋಃ ।
ಹವ್ಯಾನಿ ಚ ಪ್ರತಿಭೃತಾ ವೀತಂ ನಃ ॥ ೧ ॥

ಪದಪಾಠಃ

ಆ । ಶುಭ್ರಾ । ಯಾತಂ । ಅಶ್ವಿನಾ । ಸು॒ಅಶ್ವಾ । ಗಿರಃ । ದಸ್ರಾ । ಜುಜುಷ್ಟಾಣಾ । ಯುವಾಕೋಃ ।
ಹವ್ಯಾನಿ । ಚ । ಪ್ರತಿ॒ಭೃತಾ । ವೀತಂ । ನಃ ॥ ೧ ॥

ಸಾಯಣಭಾಷ್ಯಂ

ಹೇ ಶುಭ್ರಾ ದೀಪ್ತೌ ಸ್ವಶ್ವಾ ಶೋಭನಾಶ್ವೌ ಹೇ ಅಶ್ವಿನಾಶ್ವಿನೌ ಆ ಯಾತಂ । ಅಸ್ಮದ್ಯಜ್ಞಮಾಗಚ್ಛೇತಂ । ದಸ್ರಾ ಶತ್ರೂಣಾಮುಪಕ್ಷಪಯಿತಾರೌ ಯುವಾಂ ಯುವಾಕೋರ್ಯುವಾಂ ಕಾಮಯಮಾನಸ್ಯ ಮಮ ಗಿರಃ ಸ್ತುತೀರ್ಜುಷಾಣಾ ಸೇವಮಾನೌ ಭವತಮಿತಿ ಶೇಷಃ । ನ ಕೇವಲಂ ಸ್ತುತಿಂ ಕಿಂತು ನೋಽಸ್ಮದೀಯಾನಿ ಪ್ರತಿಭೃತಾ ಸಂಭೃತಾನಿ ಹವ್ಯಾನಿ ಹವೀಂಷಿ ಚ ವೀತಂ ಭಕ್ಷಯತಂ ॥

प्रतिपदार्थ

शुभ्रा—प्रकाशमानरू। **सुशस्ता**—उत्तमवाद अश्ववुळ्ळवरू आद। **अश्विना**—ऎलॆ अश्विनीदेवतॆगळे। **आयातं**—नम्मल्लिगॆ बन्निरि। **दस्रा**—शत्रुनाशकराद नीवु। **युवाकोः**—निम्म सेवॆयन्नपेक्षिसुव नन्न। **गिरः**—स्तुतिगळन्नु। **जुजुषाणा**—सेविसुत्त। **नः**—नम्मिंद **प्रतिभृता**—संपादितवाद। **हव्यानि च**—हविस्सुगळन्नू। **वीतं**—भक्षिसिरि

भावार्थ

प्रकाशमानरू, उत्तमवाद अश्ववुळ्ळवरू आद जलॆ अश्विनीदेवतॆगळे, नम्मल्लिगॆ बन्निरि. शत्रुनाशकराद नीवु निम्म सेवॆयन्नपेक्षिसुव नन्न स्तुतिगळन्नु सेविसुत्त नम्मिंद संपादितवाद हविस्सुगळन्नु भक्षिसिरि

English Translation

Illustrious Aswins, lords of handsome horses, come hither, propitiated, Dasras, by the praises of your adorer, and partake of our consecrated oblations.

संहितापारः

प्र वामंधांसि मद्यान्यस्थुरधं गंतं हविषो वीतयॆ मे।
तिरो अर्यो हवनानि श्रुतं नः ॥ ३ ॥

पदपारः

प्र । वां । अंधांसि । मद्यानि । अस्थुः । अधं । गंतं । हविषः । वीतयॆ । मे ।
तिरः । अर्यः । हवनानि । श्रुतं । नः ॥ ३ ॥

सायणभाष्यं

प्र वामंधांसीत्यॆषाश्विनशस्त्रॆ याज्या। सूश्रितं च। प्र वामंधांसि मद्यान्यस्थुरुभा पिबतमश्विना। अ-६ ४६। इति ॥

हॆ अश्विनौ वां युवाभ्यां मद्यानि मदजनकान्यंधांसि सोममलक्षणान्यन्नानि प्रास्थुः। प्रास्थिषत। गृहीतानीत्यर्थः। अतॊ युवां मे मम हविषॊ वीतयॆ पानायाधरमर्थं शीघ्रं गंतं। आगच्छतं। अर्यॊ ऽरॆरस्मद्विरॊधिनॊ हवनानि तिरस्तिरश्चीनं यथा भवति तथा नः। अस्मदाह्वानमित्यर्थः। तच्छ्रुतं। शृणुतं॥ श्रुतमित्यस्य काव्यादित्वादनिघातः॥

ಪ್ರತಿಪದಾರ್ಥ

(ಎಲೈ ಅಶ್ವಿನೀದೇವತೆಗಳೇ) **ವಾಂ**—ನಿಮಗಾಗಿ । **ಮದ್ಯಾನಿ**—ಹರ್ಷಕಾರಕಗಳಾದ । **ಅಂಧಾಂಸಿ**—ಸೋಮರೂಪವಾದ ಅನ್ನಗಳು । **ಪ್ರ ಅಸ್ಥುಃ**—ಸ್ಥಾಪಿತವಾಗಿವೆ. । **ಮೇ**—ನನ್ನ । **ಹವಿಷಃ**—ಹವಿಸ್ಸುಗಳನ್ನು । **ವೀತಯೇ**—ಪಾನಮಾಡುವುದಕ್ಕಾಗಿ । **ಅರಂ**—ಶೀಘ್ರವಾಗಿ । **ಗಂತಂ**—ಒನ್ನಿರಿ. । **ಆರ್ಯಃ**—ನಮ್ಮ ಶತ್ರುವಿನ । **ಹವನಾನಿ**—ಆಹ್ವಾನಗಳನ್ನು । **ತಿರಃ**—ತಿರಸ್ಕರಿಸಿರಿ । **ನಃ**—ನಮ್ಮ ಆಹ್ವಾನವನ್ನು । **ಶ್ರುತಂ**—ಕೇಳಿರಿ.

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ನಿಮಗಾಗಿ ಹರ್ಷಕಾರಕವಾದ ಸೋಮವು ಸ್ಥಾಪಿತವಾಗಿದೆ. ನನ್ನ ಹವಿಸ್ಸುಗಳನ್ನು (ಸೋಮರಸಗಳನ್ನು) ಪಾನಮಾಡುವುದಕ್ಕಾಗಿ ಶೀಘ್ರವಾಗಿ ಬನ್ನಿರಿ ನಿಮ್ಮ ಶತ್ರುವಿನ ಆಹ್ವಾನಗಳನ್ನು ತಿರಸ್ಕರಿಸಿರಿ. ನಮ್ಮ ಆಹ್ವಾನವನ್ನು ಮಾತ್ರ ಕೇಳಿರಿ

English Translation

The exhilarating viands have been prepared for you come quickly to partake of my oblation disregarding the invocations of an adversary, listen to ours

ವಿಶೇಷವಿಷಯಗಳು

ಪ್ರ ವಾಮಂಧಾಂಸಿ ಎಂಬ ಈ ಋಕ್ಕನ್ನು ಆಶ್ವಿನಶಸ್ತ್ರಮಂತ್ರಗಳಲ್ಲಿ ಯಾಜ್ಯಾನುವಾಕ್ಯಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಪ್ರ ವಾಮಂಧಾಂಸಿ ಮದ್ಯಾನ್ಯಸ್ಥುರುಭಾ ಪಿಬತಮಶ್ವಿನಾ** ಎಂಬ ಸೂತ್ರದಿಂದ (ಅ ೬-೫) ವಿವೃತವಾಗಿರುವುದು

ಸಂಹಿತಾಪಾಠಃ

ಪ್ರ ವಾಂ ರಥೋ ಮನೋಜವಾ ಇಯರ್ತಿ ತಿರೋ ರಜಾಂಸ್ಯಶ್ವಿನಾ ಶತೋತಿಃ।
ಅಸ್ಮಭ್ಯಂ ಸೂರ್ಯಾವಸೂ ಇಯಾನಃ ॥ ೩ ॥

ಪದಪಾಠಃ

ಪ್ರ । **ವಾಂ** । **ರಥಃ** । **ಮನಃಜವಾಃ** । **ಇಯರ್ತಿ** । **ತಿರಃ** । **ರಜಾಂಸಿ** । **ಅಶ್ವಿನಾ** । **ಶತಃಊತಿಃ** ।
ಅಸ್ಮಭ್ಯಂ । **ಸೂರ್ಯಾವಸೂ ಇತಿ** । **ಇಯಾನಃ** ॥ ೩ ॥

ಸಾಯಣಭಾಷ್ಯಂ

ಹೇ ಸೂರ್ಯಾವಸೂ ಸೂರ್ಯಾಯಾಃ ಸಹ ರಥೇ ವಸಂತೌ ವಾಂ ಯುವಯೋ ರಥೋಽಸ್ಮ-ಭ್ಯಮಸ್ಮದರ್ಥಮಿಯಾನೋ ಯಾಚ್ಯಮಾನಃ ಸನ್ನಿಯರ್ತಿ। ಆಗಚ್ಛತ್ಯಸ್ಮದ್ಯಜ್ಞಂ। ಅಥವಾ ವಾಂ

ಪ್ರೇರಯೇತಿ ಗಮನಾಯ । ಕೀದೃಶೋ ರಥಃ । ಮನೋಜವಾ ಮನೋವೇಗಃ ಶತೋತಿರಪರಿಮಿತಾಸ್ಮ-ದ್ವಿಷಯರಕ್ಷಣಃ । ಕಿಂ ಕುರ್ವನ್ । ರಜಾಂಸಿ ಲೋಕಾಂಸ್ತಿರಸ್ತಿರಸ್ಕೃತ್ಯಾತಿಕ್ರಮ್ಯೇಯೇರ್ತೀತಿ ॥

ಪ್ರತಿಪದಾರ್ಥ

ಸೂರ್ಯಾವಸೂ—ಸೂರ್ಯೆಯೊಂದಿಗೆ ರಥದಲ್ಲಿ ಕುಳಿತಿರುವ । **ಆಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮ್ಮ । **ಮನೋಜವಾಃ**—ಮನೋವೇಗವುಳ್ಳದ್ದೂ । **ಶತೋತಿಃ**—ಅನೇಕ ವಿಧವಾದ ರಕ್ಷಣೆಯುಳ್ಳದ್ದೂ ಆದ । **ರಥಃ**—ರಥವು । **ರಜಾಂಸಿ**—ಲೋಕಗಳನ್ನೆಲ್ಲಾ । **ತಿರಃ**—ದಾಟಿಕೊಂಡು । **ಅಸ್ಮಭ್ಯಂ**—ನಮಗಾಗಿ । **ಇಯಾನಃ**—ಪ್ರಾರ್ಥಿಸಲ್ಪಟ್ಟು । **ಪ್ರ ಇಯರ್ತಿ**—ಬರುತ್ತಿದೆ (ನಿಮ್ಮನ್ನು ಕರೆತರುತ್ತದೆ)

ಭಾವಾರ್ಥ

ಸೂರ್ಯೆಯೊಂದಿಗೆ ರಥದಲ್ಲಿ ಕುಳಿತಿರುವ ಎಲೈ ಅಶ್ವಿನೀದೇವತೆಗಳೇ, ಮನೋವೇಗವುಳ್ಳದ್ದೂ, ಅನೇಕವಿಧವಾದ ರಕ್ಷಣೆಯುಳ್ಳದ್ದೂ ಆದ ನಿಮ್ಮ ರಥವು ಲೋಕಗಳನ್ನೆಲ್ಲ ದಾಟಿಕೊಂಡು ನಮಗಾಗಿ ಪ್ರಾರ್ಥಿಸಲ್ಪಟ್ಟು ಬರುತ್ತದೆ. ನಿಮ್ಮನ್ನು ಕರೆತರುತ್ತದೆ

English Translation

Your chariot, Ashwins, in which you ride with Surya, hastens towards us at our solicitation, traversing the regions as swift as thought, and laden with a hundred blessings

ಸಂಹಿತಾಪಾಠಃ

ಅಯಂ ಹ ಯದ್ವಾಂ ದೇವಯಾ ಉ ಅದ್ರಿರೂರ್ಧ್ವೋ ವಿವಕ್ತಿ ಸೋಮ-ಸುದ್ಯುವಭ್ಯಾಂ ।
ಆ ವಲ್ಗೂ ವಿಪ್ರೋ ವವೃತೀತ ಹವ್ಯೈಃ ॥ ೪ ॥

ಪದಪಾಠಃ

ಅಯಂ । ಹ । ಯತ್ । ವಾಂ । ದೇವ್ಯಯಾಃ । ಊಂ ಇತಿ । ಅದ್ರಿಃ । ಊರ್ಧ್ವಃ । ವಿವಕ್ತಿ । ಸೋಮ-ಸುತ್ । ಯುವಭ್ಯಾಂ ।
ಆ । ವಲ್ಗೂ ಇತಿ । ವಿಪ್ರಃ । ವವೃತೀತ । ಹವ್ಯೈಃ ॥ ೪ ॥

ಸಾಯಣಭಾಷ್ಯಂ

ಯದ್ಯದಾ ವಾಂ ಯುವಾಂ ಪ್ರತಿ ದೇವಯಾ ದೇವೌ ಯುವಾಂ ಕಾಮಯಮಾನಃ । ಉ ಇತಿ ಪೂರಣಃ । ಆಯಮದ್ರಿರಭಿಷವಗ್ರಾವಾ ಸೋಮಸುತ್ ಸೋಮಮಭಿಷುಣ್ವನ್ ಯುವಭ್ಯಾಂ । ಯುವಾಭ್ಯಾಮರ್ಥಾಯಾಭಿಷುಣ್ವನ್ನಿತಿ ಸಂಬಂಧಃ । ಏವಂ ಕುರ್ವನ್ನೂರ್ಧ್ವ ಉನ್ನತಃ ಸನ್ ವಿವಕ್ತಿ ಉಚ್ಚೈಃ ಶಬ್ದಯತಿ ತದಾನೀಂ ವಲ್ಗೂ ಸುಂದರೌ ಯುವಾಂ ವಿಪ್ರೋ ಮೇಧಾವೀ ಯಜಮಾನೋ ಹವ್ಯೈರ್ಹವಿರ್ಭಿರಾ ವವೃತೀತ । ಆವರ್ತಯತಿ ॥

ಪ್ರತಿಪದಾರ್ಥ

(ಎಲೈ ಅಶ್ವಿನೀದೇವತೆಗಳೇ) **ಯತ್**—ಯಾವಾಗ । **ವಾಂ**—ನಿಮ್ಮನ್ನುದ್ದೇಶಿಸಿ । **ದೇವಯಾಃ**—ದೇವತೆಗಳಾದ ನಿಮ್ಮನ್ನಪೇಕ್ಷಿಸುವ। **ಅಯಂ ಅದ್ರಿಃ**—ಈ ಹಿಂಡುವ ಕಲ್ಲು । **ಯುವಭ್ಯಾಂ**—ನಿಮಗಾಗಿ । **ಸೋಮಸುತ್**—ಸೋಮನನ್ನು ಹಿಂಡುತ್ತ । **ಊರ್ಧ್ವಃ**—ಮೇಲಕ್ಕೆದ್ದು । **ವಿವಕ್ತಿ**—ಶಬ್ದಮಾಡುವುದೋ ಆಗ । **ವಲ್ಗೂ**—ಸುಂದರ ರೂಪರಾದ ನಿಮ್ಮನ್ನು । **ವಿಪ್ರಃ**—ಮೇಧಾವಿಯಾದ ಯಜಮಾನನು । **ಹವ್ಯೈಃ**—ಹವಿಸ್ಸುಗಳಿಂದ । **ಆ ವವೃತೀತ**—ಹಿಂತಿರುಗುವಂತೆ ಮಾಡುತ್ತಾನೆ

ಭಾವಾರ್ಥ

ಎಲೈ ಅಶ್ವಿನೀದೇವತೆಗಳೇ, ಯಾವಾಗ ನಿಮ್ಮನ್ನುದ್ದೇಶಿಸಿ ದೇವತೆಗಳಾದ ನಿಮ್ಮನ್ನಪೇಕ್ಷಿಸುವ ಈ ಹಿಂಡುವ ಕಲ್ಲು ನಿಮಗಾಗಿ ಸೋಮನವನ್ನು ಹಿಂಡುತ್ತ ಮೇಲಕ್ಕೆದ್ದು ಶಬ್ದಮಾಡುವುದೋ ಆಗ ಸುಂದರರೂಪವಾದ ನಿಮ್ಮನ್ನು ಮೇಧಾವಿಯಾದ ಯಜಮಾನನು ಹವಿಸ್ಸುಗಳಿಂದ ಹಿಂತಿರುಗುವಂತೆ ಮಾಡುತ್ತಾನೆ

English Translation

When the stone, seeking to propitiate you two divinities, is raised aloft and loudly sounds, expressing for you the Soma juice, then the pious worshipper brings you back, beautiful divinities, by his oblations.

ಸಂಹಿತಾಪಾಠಃ

ಚಿತ್ರಂ ಹ॒ ಯದ್ವಾಂ ಭೋ॑ಜ॒ನಂ ನ್ವ॑ಸ್ತಿ ನ॑ತ್ರ॒ಯೇ ಮ॑ಹಿ॒ಷ್ಟಂತಂ ಯು-
ಯೋ॑ತಂ ।
ಯೋ ವಾ॑ಮೋ॒ಮಾನಂ॒ ದಧ॑ತೇ ಪ್ರಿ॒ಯಃ ಸನ್ ॥ ೫ ॥

ಪದಪಾಠಃ

ಚಿತ್ರಂ । ಹ॒ । ಯತ್ । ವಾಂ । ಭೋ॒ಜ॒ನಂ । ನು । ಅ॒ಸ್ತಿ॒ । ನ । ನ॒ತ್ರ॒ಯೇ । ಮ॒ಹಿ॒ಷ್ಟಂತಂ । ಯು-
ಯೋ॒ತಂ ।

यः । वाम् । ओमानम् । दधते । प्रियः । सन् ॥ ४ ॥

सायणभाष्यं

